

ಶ್ರೀಮದ್ಭಾಗವತ
ಭಾರತ ದರ್ಶನ ಪ್ರಕಾಶನ
೪-೫ನೆಯ ಸ್ಕಂಧಗಳು
ಸಂಪುಟ - ೩

ಭಾರತ ದರ್ಶನ ಪ್ರಕಾಶನ

ಶ್ರೀಮದ್ಭಾಗವತ

(ಮೂಲದೊಡನೆ ಸರಳ ಕನ್ನಡಾನುವಾದ)

ಜನ್ಮಾದ್ಯಸ್ಯ ಯತೋಽನ್ವಯಾದಿತರತ-
ಶ್ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮ ಹೃದಾ ಯ ಆದಿಕವಯೇ
ಮುಹ್ಯನ್ತಿ ಯತ್ಸೂರಯಃ ।
ತೇಜೋವಾರಿಮೃದಾಂ ಯಥಾ ವಿನಿಮಯೋ
ಯತ್ರ ತ್ರಿಸರ್ಗೋಽಮೃಷಾ
ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ
ಸತ್ಯಂ ಪರಂ ಧೀಮಹಿ ॥

ಸಂಪುಟ 3

ಮುದ್ರಕರು:
ಭಾರತ ದರ್ಶನ ಮುದ್ರಣಾಲಯ
163, ಮಂಜುನಾಥ ರಸ್ತೆ, 2ನೇ ಬ್ಲಾಕ್, ತ್ಯಾಗರಾಜನಗರ,
ಬೆಂಗಳೂರು – 560 028
ದೂರವಾಣಿ: 080-26765381

ಪ್ರಥಮ ಇ-ಮುದ್ರಣ ಜನವರಿ ೨೦೧೪

ವಿನಮ್ರವಚನಗಳು

ಪರಮಕಾರುಣಿಕನಾದ ಪರಮಾತ್ಮನ ದಯೆಯಿಂದಲೂ, ಪರಮ ದಯಾಳುವಾದ ಮಹಾಗುರುವಿನ ದಿವ್ಯಾಶೀರ್ವಾದಗಳಿಂದಲೂ, ಪರಮ ಹಿತೈಷಿಗಳಾದ ಸತ್ಪುರುಷರ ಸಹಕಾರ-ಸದಾಶಯಗಳಿಂದಲೂ ಭಾಗವತದ ಮೂರನೆಯ ಕುಸುಮವು ಸಿದ್ಧವಾಗಿದೆ. ಈ ದಿವ್ಯ ಕುಸುಮವನ್ನು ಪರಮಾತ್ಮನ ದಿವ್ಯಪಾದಾರವಿಂದಗಳಲ್ಲರ್ಪಿಸಿ, ಪ್ರಸಾದರೂಪವಾದ ಮತ್ತು ಪರಮಪವಿತ್ರವಾದ ಈ ಸಂಪುಟಕುಸುಮವನ್ನು ಪ್ರಿಯಗ್ರಾಹಕರ ಅಂಜಲಿ ಪುಟಗಳಲ್ಲಿ ಇಡುತ್ತಿದ್ದೇವೆ.

ಜನವರಿಯಲ್ಲಿಯೇ ಹೊರತರಬೇಕಾಗಿದ್ದ ಈ ಸಂಪುಟವನ್ನು ಎರಡು ತಿಂಗಳು ತಡವಾಗಿ ಹೊರತರುತ್ತಿದ್ದೇವೆ. ನಾಲ್ಕು ತಿಂಗಳಿಗೆ ಒಂದರಂತೆ ಸಂಪುಟಗಳನ್ನು ಹೊರತರಬೇಕೆನ್ನುವ ಸತ್ಸಂಕಲ್ಪವೇನೋ ಇದೆ. ನಮ್ಮ ಸಂಕಲ್ಪಕ್ಕೆ ಪರಮಾತ್ಮನು 'ಅಸ್ತು'–ಎನ್ನಬೇಕು. ಆಗಲೇ ಸಂಕಲ್ಪಿಸಿದಂತೆ ಕಾರ್ಯಗಳು ನಡೆಯುತ್ತವೆ.

ಭಾಗವತದ ಎರಡನೆಯ ಸಂಪುಟದ ಪ್ರಕಾಶನವಾದ ನಂತರ ಮಹಾ ಭಾರತದ 16 ಮತ್ತು 19ನೆಯ ಸಂಪುಟಗಳೂ, ರಾಮಾಯಣದ 5ನೆಯ ಸಂಪುಟವೂ ಪುನರ್ಮುದ್ರಣಗೊಂಡಿವೆ. 3ನೆಯ ಸಂಪುಟದ ಪ್ರಕಾಶನದ ವೇಳೆಗೆ ಮಹಾಭಾರತದಲ್ಲಿ ಹೊಸಗ್ರಾಹಕರಿಗೆ 22 ಸಂಪುಟಗಳು ಮಾತ್ರ ಸಿಕ್ಕುತ್ತವೆ. ಒಂದು ಸಂಪುಟವು ಪುನರ್ಮುದ್ರಣವಾಗುವ ವೇಳೆಗೆ ಎರಡು ಸಂಪುಟಗಳು ಮುಗಿದಿರುತ್ತವೆ. ಎಲ್ಲ ಸಂಪುಟಗಳನ್ನೂ ಗ್ರಾಹಕರಿಗೆ ಕೊಡುವ ಅದೃಷ್ಟವು ಇಲ್ಲವೆಂದೇ ತೋರುತ್ತದೆ. ಮಧ್ಯ-ಮಧ್ಯದಲ್ಲಿ ಸಂಪುಟ ಗಳು ಇಲ್ಲದೇ ಇರುವುದು ಓದುಗರಿಗೂ ಬೇಸರಿಕೆಯಾಗುತ್ತದೆ ; ನಿಜ. ಆದರೆ ಈ ವಿಷಯದಲ್ಲಿ ನಾವು ಏನು ಮಾಡುವುದಕ್ಕೂ ಆಗದವರಾಗಿದ್ದೇವೆ. ಹಲವಾರು ವೃದ್ಧರು 'ಸಂಪುಟಗಳನ್ನು ಬೇಗ ಬೇಗ ಕೊಡಿ, ಒಮ್ಮೆಯಾದರೂ ಓದಿ ಉದ್ಧಾರವಾಗುತ್ತೇವೆ'–ಎಂದು ಚಡಪಡಿಸುತ್ತಾರೆ. ಅವರ ಮಾತನ್ನು ಕೇಳಿದಾಗ ಮನಸ್ಸಿಗೆ ಬಹಳ ವೇದನೆಯಾಗುತ್ತದೆ. ಪರಮಾತ್ಮನು ಅಂತಹ ಸಾಮರ್ಥ್ಯವನ್ನು ನಮಗೆ ಕೊಡಲಿಲ್ಲವಲ್ಲಾ–ಎಂದೆನಿಸುತ್ತದೆ. ನಮ್ಮ ಮಿತವಾದ ಆರ್ಥಿಕವ್ಯವಸ್ಥೆಯ ಚೌಕಟ್ಟಿನಲ್ಲಿಯೇ ಕಾರ್ಯವನ್ನು ನಡೆಸ

ಬೇಕಾಗಿದೆ. ಪರಮಾತ್ಮನ ದಯೆಯಿಂದ ಕಾರ್ಯವು ನಿಲ್ಲದೇ ನಡೆಯುತ್ತಿದೆ ಯೆಂಬುದೊಂದೇ ಸಮಾಧಾನ. ಸಂಪುಟಗಳು ಹೊರಬರುವುದು ನಿಧಾನ ವಾಗುತ್ತಿದ್ದರೂ 'ಸಂಪುಟಗಳು ಬರುವುದಿಲ್ಲ'–ಎಂಬ ಸ್ಥಿತಿಯುಂಟಾಗಿಲ್ಲ. ಎಲ್ಲ ಸಂಪುಟಗಳನ್ನೂ ಒಮ್ಮೆಲೇ ಹೊರತರಬೇಕಾದರೆ ಲಕ್ಷಾಂತರ ರೂಪಾಯಿಗಳು ಬೇಕು. ಪೂರ್ಣಮಾಲೆಯ 32 ಸಂಪುಟಗಳೂ ಸಿದ್ಧವಾದರೆ ಮನೆ-ಮನೆಗೆ ಹೋಗಿ ಲಕ್ಷ-ಲಕ್ಷ ಕನ್ನಡಿಗರಿಗೂ ಹಂಚಲೂ ಸಾಧ್ಯ. ಆದರೆ ಇದು ಕೇವಲ ಕನಸು ಮಾತ್ರ. ಗ್ರಾಹಕರು ಕೊಡುವ ಚಂದಾಹಣವೇ ನಮ್ಮ ಬಂಡವಾಳ. ಆಗೊಮ್ಮೆ ಈಗೊಮ್ಮೆ ಉದಾರಿಗಳಾದ ದಾನಿಗಳಿಂದ ಸ್ವಲ್ಪ ದೇಣಿಗೆಯೂ ಬರಬಹುದು. 'ಲಾಭವೂ ಇಲ್ಲ ; ನಷ್ಟವೂ ಇಲ್ಲ'–ಎಂಬ ರೀತಿಯಲ್ಲಿ ಬೆಲೆ ಇಡುವ ಧ್ಯೇಯ. ಈಚೆಗಂತೂ ಸ್ವಲ್ಪ ನಷ್ಟದಲ್ಲೇ ಮುಂದುವರಿಯುತ್ತಿದೆ. ಹೀಗಿರುವಾಗ ಲಕ್ಷಾಂತರ ರೂಪಾಯಿಗಳನ್ನು ಇದಕ್ಕೆ ತೊಡಗಿಸುವ ಸಾಮರ್ಥ್ಯವೆಲ್ಲಿ ಬಂತು ?

ಏಪ್ರಿಲ್ ತಿಂಗಳಿನಿಂದ ಮಹಾಭಾರತದ ಪೂರ್ಣಮಾಲೆಯ ಗ್ರಾಹಕತ್ವ ವನ್ನು ನಿಲ್ಲಿಸಲಾಗುವುದು. ಪುನರ್ಮುದ್ರಣ ಮಾಡಿ ಹಿಂದಿನ ಸಂಪುಟಗಳನ್ನು ಕೊಡುವ ಭರವಸೆಯಿದ್ದರೂ ಆ ಸಂಪುಟಗಳಿಗಾಗಿ ಮುಂಗಡ ಹಣವನ್ನು ತೆಗೆದುಕೊಳ್ಳದಿರಲು ನಿಶ್ಚಯಿಸಲಾಗಿದೆ.

ರಾಮಾಯಣದ 5ನೆಯ ಸಂಪುಟವು ಪುನರ್ಮುದ್ರಣವಾದನಂತರ ಸುಮಾರು 10 ಸಾವಿರ ಜನರಿಗೆ ಪೂರ್ಣಮಾಲೆಯನ್ನು ಕೊಟ್ಟ ಸಮಾಧಾನ ವಾಯಿತು. ಆ ವೇಳೆಗೆ ಸರಿಯಾಗಿ 2ನೆಯ ಸಂಪುಟವು ಮುಗಿಯಿತು. ಈಗ ಅದರ ಪುನರ್ಮುದ್ರಣವಾಗುತ್ತಿದೆ. ಅದು ಸಿದ್ಧವಾದರೆ ರಾಮಾಯಣ ವಿಭಾಗದಲ್ಲಿ ಸುಮಾರು ಒಂದು ವರ್ಷದವರೆಗೆ ಪುನರ್ಮುದ್ರಣ ಮಾಡಬೇಕಾಗಿಲ್ಲ.

ಭಾಗವತದ ಗ್ರಾಹಕರ ಸಂಖ್ಯೆ 1,820 ಮಾತ್ರ ಆಗಿದೆ. 2ನೆಯ ಸಂಪುಟವು ಪ್ರಕಾಶನವಾದಾಗಿನಿಂದ 300 ಮಂದಿ ಹೊಸ ಗ್ರಾಹಕರಾಗಿರು ತ್ತಾರೆ. ಇದರಿಂದ ಸ್ವಲ್ಪ ನಿರಾಶೆಯೇ ಆಗಿದೆ. ನಮ್ಮ ಗ್ರಾಹಕರೂ ಮತ್ತು ಗೌ॥ ಪ್ರತಿನಿಧಿಗಳೂ ಪ್ರಯತ್ನಿಸಿ ನಾಲ್ಕನೆಯ ಸಂಪುಟದ ಪ್ರಕಾಶನದ

ವೇಳೆಗೆ ಒಂದು ಸಾವಿರ ಗ್ರಾಹಕರನ್ನಾದರೂ ಮಾಡಿಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇವೆ.

ದಿನಾಂಕ 22-8-1992ನೇ ಶನಿವಾರದಂದು ಸಂಜೆ ಮಲ್ಲೇಶ್ವರದ ಶ್ರೀರಾಮಭಜನಸಭಾ ಸಭಾಂಗಣದಲ್ಲಿ ಶ್ರೀಮದ್ಭಾಗವತದ ದ್ವಿತೀಯ ಸಂಪುಟದ ಪ್ರಕಾಶಸಮಾರಂಭವನ್ನು ಏರ್ಪಡಿಸಲಾಗಿತ್ತು.

ಯೋಗಾಯೋಗವಾಗಿ ಅದೇ ದಿನದಂದು ಶ್ರೀಕೃಷ್ಣ ಜಯಂತಿ ಹಾಗೂ ಆಂಗಿರಸಸಂವತ್ಸರದ ಶ್ರಾವಣಮಾಸದ ನಾಲ್ಕನೆಯ ಶನಿವಾರವೂ ಸಮ್ಮಿಳಿತ ಗೊಂಡಿದ್ದುವು. ಎಲ್ಲ ಗಣ್ಯರನ್ನೂ ಪೂರ್ಣಕುಂಭಸ್ವಾಗತದೊಂದಿಗೆ ಬರ ಮಾಡಿಕೊಳ್ಳಲಾಯಿತು.

ವೇದಘೋಷ ಹಾಗೂ ವಿದ್ವಾನ್ ಆರ್. ಗಣೇಶ್‌ರವರು ರಚಿಸಿದ್ದ ಸ್ವಾಗತ ಪದ್ಯಮಾಲಿಕೆಯನ್ನು ಕುಮಾರೀ ಉಮಾ ವಾಚನಮಾಡಿದ ಬಳಿಕ ಭಾರತ ದರ್ಶನದ ಗೌ|| ಪ್ರತಿನಿಧಿಗಳಾದ ಶ್ರೀ ಟಿ. ಎನ್. ಪ್ರಭಾಕರ್ ಅವರು ಎಲ್ಲರನ್ನೂ ಸ್ವಾಗತಿಸಿ ಸಂಸ್ಥೆಯ ಇತ್ತೀಚಿನ ಸಾಧನೆಗಳ ಬಗೆಗೆ ತಿಳಿಸಿದರು.

ಜ್ಞಾನಯಜ್ಞದಲ್ಲಿ ಹವಿಸ್ಸು

ರಾಮಾಯಣ-ಮಹಾಭಾರತ ಸಂಪುಟಗಳ ಪುನರ್ಮುದ್ರಣವು ವಾರ್ಷಿಕ ಕಾರ್ಯಯೋಜನೆಗೆ ಅನುಗುಣವಾಗಿ ಸಮರ್ಪಕವಾಗಿ ನಡೆಯು ತ್ತಿದ್ದರೂ ಹೊಸ ಗ್ರಾಹಕರ ಸಂಖ್ಯೆಯು ನಗಣ್ಯವೆನಿಸುವಷ್ಟು ದುರ್ಬಲ ವಾಗಿದೆ. ಹೀಗಾಗಿ ಸಂಸ್ಥೆಯ ಆರ್ಥಿಕವ್ಯವಸ್ಥೆಯಲ್ಲಿ ಏರು-ಪೇರಾಗಿದೆ. ಈ ಹಿನ್ನೆಲೆಯಲ್ಲಿ ಜನಾರ್ದನ ಸ್ವರೂಪಿಗಳಾದ ಜನರು ತಮ್ಮ ಪರಿವಾರದ ಬಂಧು-ಮಿತ್ರರನ್ನು ಗ್ರಾಹಕರನ್ನಾಗಿಸಲು ವಿಶೇಷವಾಗಿ ಶ್ರಮಿಸಿ ಹಿಂದೂ ಪುನರುತ್ಥಾನದ ಈ ಜ್ಞಾನಯಜ್ಞದಲ್ಲಿ ತಮ್ಮ ಹವಿಸ್ಸನ್ನೂ ಅರ್ಪಿಸಬೇಕೆಂದು ಕಳಕಳಿಯಿಂದ ಮನವಿ ಮಾಡಿದರು.

ಕರ್ನಾಟಕದ ಸೌಭಾಗ್ಯ

ವಿಖ್ಯಾತ ನೇತ್ರಚಿಕಿತ್ಸಾತಜ್ಞ ಡಾ|| ಹೆಚ್. ಕೃಷ್ಣಮೂರ್ತಿಯವರು (ಪ್ರಭಾ ನೇತ್ರಚಿಕಿತ್ಸಾಲಯ, ಬೆಂಗಳೂರು) ವೇದಘೋಷ ಹಾಗೂ ನಾಗಸ್ವರದ ಸ್ವರವಿನ್ಯಾಸಗಳ ಮಧ್ಯೆ ಶ್ರೀಮದ್ಭಾಗವತ ಸರಸ್ವತಿಗೆ ಪೂಜೆ

ಯನ್ನು ಸಲ್ಲಿಸಿ ಭಾಗವತದ ಎರಡನೆಯ ಸಂಪುಟವನ್ನು ಪ್ರಕಾಶನಗೊಳಿಸಿದರು. ಸಂಪುಟದ ಕೆಲವು ಆಯ್ದಶ್ಲೋಕಗಳನ್ನು ಶ್ರೀಮತೀ ಕನಕಾಸ್ವಾಮಿಯವರು ಹಾಡಿದ ನಂತರ ಸಭೆಯನ್ನು ಕುರಿತು ಮಾತನಾಡಿದ ಡಾ॥ ಕೃಷ್ಣಮೂರ್ತಿಗಳು–"ಕನ್ನಡ-ಸಂಸ್ಕೃತಭಾಷೆಗಳಲ್ಲಿ ಸಂಪೂರ್ಣವೈದುಷ್ಯವನ್ನು ಹೊಂದಿರುವ ಪಂಡಿತರ ಬಳಗವೇ ಭಾರತ ದರ್ಶನದ ಹಿನ್ನೆಲೆಯಲ್ಲಿದೆ. ಸೇವಾಮನೋಭಾವ ಭೂಮಿಕೆಯನ್ನೇ ಮೈಗೂಡಿಸಿಕೊಂಡ ಗೌ॥ ಪ್ರಚಾರ ಕರ ಸಮೂಹವಿದೆ. ಹೀಗಾಗಿ ಭಾರತ ದರ್ಶನವು ಅತ್ಯಂತ ಕಡಿಮೆ ದರದಲ್ಲಿ ನಮ್ಮ ರಾಷ್ಟ್ರೀಯ ಮಹಾಕಾವ್ಯಗಳನ್ನು ಸಂಸ್ಕೃತ ಭಾಷೆಯಿಂದ ಕನ್ನಡಕ್ಕೆ ತಂದಿರುವುದು ಕರ್ನಾಟಕದ ಸೌಭಾಗ್ಯ. ಮನುಷ್ಯನು ಜೀವನದಲ್ಲಿ ನೆಮ್ಮದಿ ಪಡೆಯಲು ದೇವರಲ್ಲಿ ವಿಶ್ವಾಸವನ್ನು ಹೊಂದಬೇಕು. ತಮ್ಮ ಕರ್ತವ್ಯಗಳನ್ನು ಸಮರ್ಪಕವಾಗಿ ಮಾಡಬೇಕು. ಉತ್ತಮ ಜೀವನಮೌಲ್ಯಗಳನ್ನು ಹೊಂದಿದ ಜನರು ಮಾತ್ರವೇ ನಮ್ಮ ದೇಶಕ್ಕೆ ಕೀರ್ತಿಯನ್ನು ತರಬಲ್ಲರು"–ಎಂದು ತಿಳಿಸಿದರು.

ಅನುಗ್ರಹಭಾಷಣವನ್ನು ಮಾಡಿ ಸಂಪುಟವನ್ನು ಪರಿಚಯಿಸಿದ ಪರಮಪೂಜ್ಯ ಶ್ರೀ ಶ್ರೀ ರಂಗಪ್ರಿಯಮಹಾದೇಶಿಕಸ್ವಾಮೀಜೀಯವರು. "ಮಾನವನ ಒಳಗಣ್ಣಿನ ದರ್ಶನಕ್ಕಾಗಿ ಭಾಗವತದಂತಹ ದಿವ್ಯಗ್ರಂಥಗಳ ಸ್ವಲ್ಪಮಟ್ಟಿನ ಅಧ್ಯಯನವಾದರೂ ಪ್ರತಿದಿನವೂ ಪ್ರತಿಮನೆಯಲ್ಲೂ ನಡೆಯಬೇಕು. ಕೇವಲ ತನ್ನ ಉದ್ಧಾರಕ್ಕಷ್ಟೇ ಸೀಮಿತನಾಗದ ಮನುಷ್ಯನ ಇತರರ ಕಲ್ಯಾಣಕ್ಕೂ ಶ್ರಮಿಸಬೇಕೆಂಬ ಸಂದೇಶವನ್ನು ಮಹರ್ಷೀ ವೇದ ವ್ಯಾಸರ ಭಾಗವತಗ್ರಂಥವು ನೀಡುತ್ತಾ ಬಂದಿದೆ. ದ್ವಿತೀಯಸಂಪುಟದಲ್ಲಿ ಬರುವ ಉದ್ಧವ-ವಿದುರರ ಸಂವಾದ, ವಿದುರ-ಮೈತ್ರೇಯರ ಸಂವಾದ ಮೊದಲಾದ ಪ್ರಕರಣಗಳಲ್ಲಿ ಜ್ಞಾನಪ್ರಾಪ್ತಿಯ ಬಗೆಗೆ ವಿಶೇಷ ವೈಚಾರಿಕ ಮೀಮಾಂಸೆ ಇದೆ.

ಮನೆ-ಮನೆಗಳಲ್ಲೂ ಭೂಷಿತವಾಗಲಿ

ವರಾಹಾವತಾರ, ಕಪಿಲಾವತಾರ ಹಾಗೂ ದಕ್ಷಯಜ್ಞಗಳ ಬಗೆಗೂ ಈ ಸಂಪುಟದಲ್ಲಿ ವಿವರಣೆಯಿದ್ದು ಅನೇಕ ಸಾರ್ವಕಾಲಿಕಮೌಲ್ಯಗಳುಳ್ಳ ಈ ಸಂಪುಟವು ಕನ್ನಡಿಗರೆಲ್ಲರ ಮನೆ-ಮನೆಗಳಲ್ಲೂ, ಮನ-ಮನಗಳಲ್ಲೂ ಭೂಷಿತವಾಗಲಿ"–ಎಂದು ಹಾರೈಸಿದರು.

ತೀರ್ಥಹಳ್ಳಿಯ ಶ್ರೀರಾಮಚಂದ್ರಾಪುರಮಠದ ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ಶ್ರೀ ಶ್ರೀಮದ್ರಾಘವೇಂದ್ರಭಾರತೀ ಸ್ವಾಮಿಗಳು ಕಳುಹಿಸಿಕೊಟ್ಟಿದ್ದ ಸುವರ್ಣಮಂತ್ರಾಕ್ಷತೆಯನ್ನು ಶ್ರೀ ಶ್ರೀ ರಂಗಪ್ರಿಯ ಮಹಾದೇಶಿಕಸ್ವಾಮಿಗಳು ಸಂಪಾದಕಮಂಡಲಿಯ ವಿದ್ವಾಂಸರಿಗೆ ಅನುಗ್ರಹಿಸಿದರು.

ಭಾರತ ದರ್ಶನದ ಸಂಪಾದಕರಾದ ಶ್ರೀ ಕೆ. ಸು. ಕೌಶಿಕರು ಕಾರ್ಯಕ್ರಮದ ಸಂಚಾಲಕರಾಗಿದ್ದರು. ಸಾಮೂಹಿಕ ಶಾಂತಿಪಾಠದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

ವಿದ್ವನ್ಮಣಿಗಳಾದ ಡಾ|| ಎಂ. ಕೆ. ಭಾರತೀರಮಣಾಚಾರ್ಯರು ಈ ಸಂಪುಟಕ್ಕೆ ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿರುತ್ತಾರೆ. ಇವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು.

ಸಂಪಾದಕಮಂಡಲಿಯ ವಿದ್ವಾಂಸರು ಹಿಂದಿನಂತೆಯೇ ಶ್ರದ್ಧಾ-ಭಕ್ತಿಗಳಿಂದ ಸಂಪುಟವನ್ನು ಸಂಪಾದಿಸಿಕೊಟ್ಟು ಮಹೋಪಕಾರವನ್ನು ಮಾಡುತ್ತಿದ್ದಾರೆ. ಪರಮಪೂಜ್ಯರಾದ ಶ್ರೀ ಶ್ರೀ ರಂಗಪ್ರಿಯಮಹಾದೇಶಿಕಸ್ವಾಮಿಗಳವರು ಶ್ರಮವಹಿಸಿ ಅನುವಾದವನ್ನು ಮಾಡಿಕೊಡುತ್ತಿದ್ದಾರೆ. ಅವರು ಬಿಡುವಿಲ್ಲದ ಅನೇಕ ಕಾರ್ಯಗಳ ಮಧ್ಯದಲ್ಲಿ ಈ ಅನುವಾದಕಾರ್ಯವನ್ನೂ ಮಾಡುವುದು ಹೆಚ್ಚು ಶ್ರಮವೇನೋ ನಿಜ. ಆದರೆ ಭಾಗವತದ ಅನುವಾದವನ್ನು ಪರಮಭಾಗವತರೇ ಮಾಡಬೇಕು. ಆತ್ಮಜ್ಞಾನಿಗಳೇ ಮಾಡಬೇಕು. ಭಾಗವತದ ತತ್ತ್ವವು ಅಂತಹವರಿಗೆ ಮಾತ್ರ ಅಂಗೈಯಲ್ಲಿರುವ ನೆಲ್ಲಿಕಾಯಿಯಂತೆ ಸ್ಪಷ್ಟವಾಗಿ ಕಾಣಿಸುತ್ತದೆ. ಆದುದರಿಂದ ಪೂಜ್ಯ ಸ್ವಾಮೀಜೀಯವರು ಈ ಅನುವಾದಕಾರ್ಯವನ್ನು ಸಮಗ್ರವಾಗಿ ಮುಗಿಸಿಕೊಟ್ಟು ಅನುಗ್ರಹಿಸಬೇಕಾಗಿ ಪ್ರಾರ್ಥಿಸುತ್ತೇವೆ. ನಿಃಸ್ಪೃಹತೆಯಿಂದ ಶ್ರಮವಹಿಸಿ ಈ ಪವಿತ್ರ ಕಾರ್ಯಕ್ಕೆ ಸಹಕಾರ ನೀಡುತ್ತಿರುವ ಸಂಪಾದಕ ಮಂಡಲಿಯ ವಿದ್ವಾಂಸರೆಲ್ಲರಿಗೂ ಅನಂತಾನಂತ ವಂದನೆಗಳು.

ಮಹಾಭಾರತ-ಭಾಗವತ-ರಾಮಾಯಣಗಳ ಪ್ರಚಾರಕ್ಕಾಗಿ ಹಲವಾರು ಮಂದಿ ಕಾರ್ಯಕರ್ತರು ಶ್ರಮವಹಿಸಿ ಕಾರ್ಯಮಾಡುತ್ತಿದ್ದಾರೆ. ಅವರೆಲ್ಲರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ಪರಮಕಾರುಣಿಕನಾದ ಪರಮಾತ್ಮನು ಸಮಸ್ತರಿಗೂ ಸುಖ-ಶಾಂತಿ ಗಳನ್ನು ದಯಪಾಲಿಸಲೆಂಬ ಹೃತ್ಪೂರ್ವಕವಾದ ಪ್ರಾರ್ಥನೆಯೊಡನೆ ವಿರಮಿಸುವೆವು.

ಸರ್ವೇ ಜನಾಃ ಸುಖಿನೋ ಭವನ್ತು. ಸಮಸ್ತಸನ್ಮಙ್ಗಲಾನಿ ಭವನ್ತು

◆ ◆ ◆

ಪತ್ರಿಕಾಪ್ರತಿನಿಧಿಗಳಾದ ಬೈರುಂಬೆ ಶ್ರೀ ಪರಮಾನಂದ ಹೆಗಡೆಯವರು ಸಿರ್ಸಿಯಲ್ಲಿ ನಮ್ಮ ಗೌರವ ಪ್ರತಿನಿಧಿಗಳಾಗಿದ್ದಾರೆ. ಸಿರ್ಸಿ ತಾಲ್ಲೂಕಿನಲ್ಲಿರುವ ಎಲ್ಲ ಪ್ರೌಢಶಾಲೆಗಳಿಗೂ ಮಹಾಭಾರತ-ರಾಮಾಯಣ-ಭಾಗವತಗಳನ್ನು ದಾನ ಕೊಡಿಸುವುದಾಗಿ ಸತ್ಯಪ್ರತಿಜ್ಞೆ ಮಾಡಿ ಬಹುಮಟ್ಟಿಗೆ ಯಶಸ್ವಿಗಳಾಗಿ ದ್ದಾರೆ. ಹಾಗೆಯೇ ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಇತರ ತಾಲ್ಲೂಕುಗಳ ಪ್ರೌಢಶಾಲೆಗಳಿಗೂ ದಾನಿಗಳನ್ನು ಹುಡುಕಿ ಮಹಾಭಾರತ ರಾಮಾಯಣ - ಭಾಗವತಗಳನ್ನು ಮುಟ್ಟಿಸುವುದಾಗಿ ಆಶ್ವಾಸನೆಕೊಟ್ಟಿರುತ್ತಾರೆ. ನಮ್ಮ ದೇಶ ದಲ್ಲಿ ದಾನಿಗಳಿಗೆ ಕೊರತೆಯಿಲ್ಲ. ಆದರೆ ಯೋಜಕರು ಒಬ್ಬರು ಬೇಕು. ಶ್ರೀ ಪರಮಾನಂದ ಹೆಗಡೆಯವರಂತಹ ಹತ್ತಾರು ಜನರಿದ್ದರೆ ಕರ್ಣಾಟಕದ ನಾಲ್ಕು ಸಾವಿರ ಶಾಲೆಗಳಿಗೂ ಮಹಾಭಾರತ-ರಾಮಾಯಣ- ಭಾಗವತ ಗಳನ್ನು ಮುಟ್ಟಿಸಬೇಕೆನ್ನುವ ನಮ್ಮ ಕನಸು-ನನಸಾದೀತು. ಶ್ರೀ ಪರಮಾ ನಂದಹೆಗಡೆಯವರು ಇನ್ನೂ ಹೆಚ್ಚಿನ ಉತ್ಸಾಹದಿಂದ ಇಂತಹ ಪ್ರಚಾರ ಕಾರ್ಯವನ್ನು ನಡೆಸಲೆಂದು ಆಶಿಸುತ್ತೇವೆ.

ಮಹಾಗ್ರಂಥಗಳನ್ನು ಶಾಲೆಗಳಿಗೆ-ಸಂಸ್ಥೆಗಳಿಗೆ ದಾನವಾಗಿ ಕೊಟ್ಟ ಸಮಸ್ತರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

—ಪ್ರಕಾಶಕರು.

॥ ಶ್ರೀಗುರುಭ್ಯೋ ನಮಃ ॥

ಮುನ್ನುಡಿ

ಸೃಷ್ಟಿಸ್ಥಿತ್ಯಪ್ಯಯೇಹಾನಿಯತಿದೃತಿತಮೋ
ಬಂಧಮೋಕ್ಷಾಶ್ಚ ಯಸ್ಮಾತ್
ಅಸ್ಯ ಶ್ರೀ ಬ್ರಹ್ಮರುದ್ರಪ್ರಭೃತಿ
ಸುರನರದ್ವ್ಯೇಶಶತ್ತ್ವಾತ್ಮಕಸ್ಯ ।
ವಿಷ್ಣೋರ್ವ್ಯಸ್ತಾಃ ಸಮಸ್ತಾಃ
ಸಕಲಗುಣನಿಧಿಃ ಸರ್ವದೋಷವ್ಯಪೇತಃ
ಪೂರ್ಣಾನಂದೋಽವ್ಯಯೋ ಯೋ ಗುರುರಪಿ ಪರಮ–
ಶ್ಚಿನ್ತಯೇ ತಂ ಮಹಾನ್ತಮ್ ॥

ಇದು ಭಾಗವತತಾತ್ಪರ್ಯಗ್ರಂಥವನ್ನು ರಚಿಸಲು ಸಂಕಲ್ಪಿಸಿ ಶಿಷ್ಯ ಶಿಕ್ಷಣಾರ್ಥವಾಗಿ ತಮಗೆ ಯಾವ ವಿಘ್ನಾದಿಗಳಿಲ್ಲದಿದ್ದರೂ, ಸದಾ ಭಗವ ದುಪಾಸನೆಯಲ್ಲಿಯೇ ಸರ್ವೇಂದ್ರಿಯ ಪ್ರವೃತ್ತಿಯುಳ್ಳ ಶ್ರೀಮದಾಚಾರ್ಯರು ಭಾಗವತದ ಆದಿಶ್ಲೋಕಕ್ಕೆ ಅಂದರೆ : 'ಜನ್ಮಾದ್ಯಸ್ಯ ಯತೋ' ಎಂದು ಆರಂಭವಾಗುವ ಶ್ಲೋಕಕ್ಕೆ ವ್ಯಾಖ್ಯಾನರೂಪವಾಗಿಯೂ, ಸಂಕಲ್ಪಿತಗ್ರಂಥ ರಚನೆಗೆ ಮಂಗಳರೂಪವಾಗಿಯೂ ರಚಿಸಿದ ಶ್ಲೋಕ 'ಸೃಷ್ಟಿಸ್ಥಿತ್ಯಪ್ಯ–ಯೇಹಾ' ಎಂಬುದು.

ಶ್ರೀಮದಾಚಾರ್ಯರು ವೇದಾಂತಸಾಮ್ರಾಜ್ಯದಲ್ಲಿ ಆಚಾರ್ಯ ರೆನ್ನಿಸಿಕೊಳ್ಳಲು ಅನಿವಾರ್ಯವೆಂದು ಭಾವಿಸಲಾಗಿರುವ ಪ್ರಸ್ಥಾನತ್ರಯೀ ಅಂದರೆ–ಸೂತ್ರಪ್ರಸ್ಥಾನ, ಉಪನಿಷತ್‌ಪ್ರಸ್ಥಾನ ಹಾಗೂ ಶ್ರೀಮದ್ಗೀತಾ ಪ್ರಸ್ಥಾನಗಳಿಗೆ ಭಾಷ್ಯವನ್ನು ವಿರಚಿಸಿರುವುದರ ಜೊತೆಯಲ್ಲಿ ವೇದಪ್ರಸ್ಥಾನ–ಪುರಾಣೇತಿಹಾಸಪ್ರಸ್ಥಾನಗಳನ್ನರಿಯಬೇಕಾದುದು ಜಿಜ್ಞಾಸುಗಳಿಗೂ ಮುಮುಕ್ಷುಗಳಿಗೂ ಅಗತ್ಯವೆಂದು ಮನಗಂಡು, ವ್ಯಾಖ್ಯಾನವನ್ನೂ–ತಾತ್ಪರ್ಯವನ್ನೂ ರಚಿಸಿ ಮಹೋಪಕಾರವನ್ನು ಮಾಡಿರುವರು. ನಮ್ಮ ಜ್ಞಾನದ ನೆಲೆ ವೇದೋಪನಿಷತ್ತುಗಳು. ವೇದಗಳಿಗೆ ಸರಿಯಾದ ಅರ್ಥ ವನ್ನರಿಯಲು ಸಹಾಯಕವಾಗುವಂತೆ ವೇದವ್ಯಾಸರು ಬ್ರಹ್ಮಸೂತ್ರಗಳನ್ನು ರಚಿಸಿದರು. ವೇದಾಧಿಕಾರವಿಲ್ಲದ ಸ್ತ್ರೀ-ಶೂದ್ರ-ದ್ವಿಜ ಬಂಧುಗಳ ಉದ್ಧಾರ

ಕ್ಕಾಗಿ ಪುರಾಣೇತಿಹಾಸಗಳನ್ನು ರಚಿಸಿದರು. ವೇದಗಳ ಸರಿಯಾದ ಅರ್ಥವನ್ನು ತಿಳಿಯಲು ಈ ಪುರಾಣೇತಿಹಾಸಗಳ ಜ್ಞಾನವು ಅನಿವಾರ್ಯವೆಂಬುದು ನಮ್ಮವರ ನಂಬಿಕೆ. '**ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್**' ಎಂದಿದ್ದಾರೆ. ಇತಿಹಾಸವೆಂದರೆ ಮಹಾಭಾರತ. ಪುರಾಣಗಳು ಹದಿನೆಂಟು. ಇವುಗಳ ಜ್ಞಾನವಿಲ್ಲದೇ ವೇದಗಳಿಗೆ ಅರ್ಥೈಸಲು ಹೊರಟ ಪಂಡಿತನನ್ನು ಕಂಡರೆ ಅಲ್ಪಶ್ರುತನಾದ ಈತನು ನನ್ನನ್ನು ನಾಶಪಡಿಸುತ್ತಾನೆಂದು ವೇದವು ಥರ-ಥರ ನಡುಗುವುದಂತೆ– '**ಬಿಭೇತ್ಯಲ್ಪಶ್ರುತಾತ್ ವೇದಃ ಮಾಮಯಂ ಪ್ರಹರಿಷ್ಯತಿ**' ಎಂದು. ಆದುದರಿಂದಲೇ ಇತಿಹಾಸ-ಪುರಾಣಗಳ ಅಧ್ಯಯನವನ್ನು ಸರಿಯಾಗಿ ಮಾಡಬೇಕಾದುದು ಅಗತ್ಯ. ಆದರೆ ಅದೇನೂ ಅಷ್ಟು ಸುಲಭವಲ್ಲ. ವೇದ ವ್ಯಾಸರು ಪುರಾಣಸಾಹಿತ್ಯವನ್ನು ರಚಿಸುವಾಗ ಸಮಾಧಿ, ಗುಹ್ಯ ಮತ್ತು ದರ್ಶನಗಳೆಂಬ ಮೂರು ಭಾಷೆಗಳನ್ನೂ, ಸಪ್ತ ಭಂಗಿಗಳನ್ನೂ, ನೂರೆಂಟು ರೀತಿಗಳನ್ನೂ ಬಳಸಿರುವರು. ಈ ಎಲ್ಲದರ ಜ್ಞಾನವಿಲ್ಲದವನ ಪಾಲಿಗೆ ಅವುಗಳ ಮುಖ್ಯ ತಾತ್ಪರ್ಯವನ್ನರಿಯುವುದು ಸಾಧ್ಯವಿಲ್ಲದೇ ಹೋಗುತ್ತದೆ. ಈ ಭಾಷಾತ್ರೈವಿಧ್ಯಶೈಲಿಯಲ್ಲಿ ಹದಿನೇಳು ಪುರಾಣಗಳನ್ನು ರಚಿಸಿದ ಮೇಲೂ ವೇದವ್ಯಾಸರಿಗೆ ತೃಪ್ತಿ ಇರಲಿಲ್ಲ ; ಏನೋ ಕೊರತೆ ಕಾಣಿಸುತ್ತಿತ್ತು. ಅತ್ತ ಭಕ್ತಿತರುಣಿ ಖಿನ್ನಮನಸ್ಕಳಾಗಿಯೇ ಇದ್ದಳು. ಅವಳ ಇಕ್ಕೆಲಗಳಲ್ಲಿ ಇಬ್ಬರು ವೃದ್ಧರು ಉಸಿರೆಳೆದುಕೊಳ್ಳುತ್ತಾ ಕಷ್ಟಪಡುತ್ತಿದ್ದರು. ಎಚ್ಚರವಿಲ್ಲವೋ ಎನ್ನುವ ಸ್ಥಿತಿ ಅವರದಾಗಿತ್ತು. ನೂರಾರು ಮಹಿಳೆಯರು ಸುತ್ತ ನಿಂತು ಗಾಳಿ ಬೀಸುತ್ತಿದ್ದರೂ, ಸೇವೆಗೈಯುತ್ತಿದ್ದರೂ, ಸಾಂತ್ವನದ ಮಾತುಗಳನ್ನು ಹೇಳುತ್ತಿದ್ದರೂ–ಆ ತರುಣಿಯ ಅಳು ನಿಂತಿರಲಿಲ್ಲ. ಅವಳ ಪಕ್ಕದಲ್ಲಿ ಮಲಗಿದ್ದ ವೃದ್ಧರು ಅವಳ ಮಕ್ಕಳು. ಜ್ಞಾನ ಮತ್ತು ವೈರಾಗ್ಯಗಳು. ಸುತ್ತಲೂ ಸೇವಿಸುತ್ತಿರುವವರು ತೀರ್ಥಾಭಿಮಾನಿ, ದೇವತೆಗಳು. ಹೀಗೊಂದು ರೂಪಕ ವನ್ನು ರಚಿಸಿ ಸ್ವತಃ ವೇದವ್ಯಾಸರೇ ಜ್ಞಾನ-ವೈರಾಗ್ಯಗಳತ್ತ ಗಮನಕೊಡದೇ, ಕೇವಲ ತೀರ್ಥಾಟನಾದಿ ಕರ್ಮಕಾಂಡವನ್ನನುಸರಿಸಿದರಾಗಲೀ, ಕೇವಲ ಭಕ್ತಿ ಯನ್ನು ಸಾಧಿಸಲು ಹೊರಟರಾಗಲೀ ಪ್ರಯೋಜನವಾಗಲಾರದೆಂಬುದನ್ನು ತಿಳಿಸಿದ್ದಾರೆ. ಜ್ಞಾನ-ವೈರಾಗ್ಯಗಳನ್ನು ಪಡೆಯುವುದು ಸುಲಭಸಾಧ್ಯವಾಗಿರ ಲಿಲ್ಲ. ಅದನ್ನೊದಗಿಸಬೇಕೆಂಬ ಚಿಂತೆ ವೇದವ್ಯಾಸರಿಗೆ. ಅದನ್ನು ಪಡೆಯ

ಬೇಕೆಂಬ ಆಕಾಂಕ್ಷೆ ನಾರದರಿಗೆ. ಆ ಸುಸಂಧಿಯಲ್ಲಿ ನಾರದರಿಂದ ಪ್ರಾರ್ಥಿತರಾಗಿ ವೇದವ್ಯಾಸರು ರಚಿಸಿ ಅನುಗ್ರಹಿಸಿದ ಪುರಾಣವೇ ಭಾಗವತ.

ಈ ಭಾಗವತದಲ್ಲಿ ಅನ್ಯಪುರಾಣಗಳಲ್ಲಿರುವಂತೆ ಭಾಷಾತ್ರೈವಿಧ್ಯದ ಗೊಂದಲವಿಲ್ಲ. ಇದು ಸಮಾಧಿಭಾಷೆಯಲ್ಲಿ ರಚಿತವಾಗಿರುವುದು. ಶ್ರೀಹರಿಯ ಸರ್ವೋತ್ತಮತ್ವಜ್ಞಾನವನ್ನೂ, ಮಹಾಮಹಿಮೆಗಳನ್ನೂ ಝುಟಿತಿ ತಿಳಿಸಿಕೊಡುವುದು. ಲೌಕಿಕ-ವೈದಿಕ ಸಾಹಿತ್ಯಗಳೆಲ್ಲದರ ಮಹಾ ತಾತ್ಪರ್ಯ–ಶ್ರೀಹರಿಯ ಮಹಿಮೆಗಳನ್ನು ತಿಳಿಸುವುದೇ ಆಗಿದೆ ಸುಲಭವಾಗಿ ಹಾಗೂ ಸಂಶಯಕ್ಕೆ ಎಡೆಗೊಡದೇ ವಿಷ್ಣುವಿನ ಸರ್ವೋತ್ತಮತ್ವವನ್ನು ತಿಳಿಸುವುದರಲ್ಲಿ ಅವು ಸಮರ್ಥವಾಗಿಲ್ಲ.

ಈ ಕಾರಣದಿಂದಲೇ ಪುರಾಣಗಳ ರಾಜ ಎಂದು ಭಾಗವತವನ್ನು ಪ್ರಶಂಸಿಸುತ್ತಾರೆ. ಇದಂತೂ ವ್ಯಾಸರ ಮೇರುಕೃತಿ. ಜ್ಞಾನ-ಭಕ್ತಿ- ವೈರಾಗ್ಯಗಳ ತ್ರಿವೇಣೀಸಂಗಮ ಇಲ್ಲಿ. ತೀರ್ಥರಾಜ ಶ್ರೀಮದಾಚಾರ್ಯರು ಈ ಪುರಾಣದ ಬಗೆಗೆ ಅತ್ಯಂತ ಆದರವನ್ನು ಹೊಂದಿದ್ದರು. ಅವರು ಈ ಪುರಾಣದಲ್ಲಿ ಬ್ರಹ್ಮಸೂತ್ರಗಳ ಅರ್ಥವನ್ನು ಕಂಡರು. ಭಾರತದಲ್ಲಿ ಗೊಂದಲಕ್ಕೆಡೆಗೊಡುವ ಪ್ರಸಂಗಗಳಿಗೆ ಸುಲಭವಾಗಿ ತಾತ್ಪರ್ಯ ತಿಳಿಸುವ ನಿರ್ಣಾಯಕನಿರೂಪಣೆಯು ಇಲ್ಲಿ ಅಂದರೆ–ಈ ಭಾಗವತ ಪುರಾಣದಲ್ಲಿದೆ– ಎಂದು ಅರಿತರು. ದ್ವಿಜತ್ವಪ್ರದವಾದ ಗಾಯತ್ರೀಮಂತ್ರಕ್ಕೆ ಭಾಷ್ಯರೂಪ ವಾದುದೆಂದು ಮನಗಂಡರು. ಇದರಲ್ಲಿ ಸರ್ವತ್ರ ವೇದಾರ್ಥ ತುಂಬಿ ತುಳುಕುತ್ತಿರುವುದೆಂದು ತಿಳಿದರು.

ಅರ್ಥೋಽಯಂ ಬ್ರಹ್ಮಸೂತ್ರಾಣಾಂ ಭಾರತಾರ್ಥವಿನಿರ್ಣಯಃ ।
ಗಾಯತ್ರೀಭಾಷ್ಯರೂಪೋಽಸೌ ವೇದಾರ್ಥಪರಿಬೃಂಹಿತಮ್ ॥

ಇದು ಗರುಡಪುರಾಣದ ವಚನವೆಂದು ಆಚಾರ್ಯರು ವೇದವ್ಯಾಸರ ಋಣವನ್ನೊಪ್ಪಿಕೊಂಡಿದ್ದಾರೆ.

ಆದುದರಿಂದಲೇ ಈ ಪುರಾಣಕ್ಕೆ ಆಚಾರ್ಯರು ಬಹುಮಹತ್ತ್ವದ ಸ್ಥಾನವನ್ನು ಕೊಟ್ಟರು.

ಸಮಾಧಿಭಾಷೆಯಲ್ಲಿ ರಚಿತವಾಗಿದ್ದರೂ ಈ ಪುರಾಣದಲ್ಲಿ ಕೆಲವೆಡೆ ವಿರೋಧಾಭಾಸಗಳು ಕಂಡುಬರುತ್ತವೆ. ಅದನ್ನು ನಿವಾರಿಸುವುದು ಅಗತ್ಯ

ವೆನಿಸಿತು. ಆ ಕಾರಣದಿಂದಾಗಿ ಶ್ರೀಮನ್ ಮಧ್ವಾಚಾರ್ಯರು ಭಾಗವತ ತಾತ್ಪರ್ಯವೆಂಬ ಗ್ರಂಥವನ್ನು ರಚಿಸಿದರು.

ಇತರ ಆಚಾರ್ಯರು ಸ್ವತಃ ಈ ಗ್ರಂಥಗಳಿಗೆ ವ್ಯಾಖ್ಯೆ ಬರೆಯದಿದ್ದರೂ ಅವರ ಅನುಯಾಯಿಗಳು ವ್ಯಾಖ್ಯೆಯನ್ನು ಬರೆದು ಅದರ ಮಹತ್ತ್ವವನ್ನು ಮೆರೆಸಿದ್ದಾರೆ. ಇದಕ್ಕೆ ಶ್ರೀಧರೀಯ–ವೀರರಾಘವೀಯವ್ಯಾಖ್ಯಾನಗಳೇ ಸಾಕ್ಷಿ. ಶ್ರೀಮನ್ಮಧ್ವಾಚಾರ್ಯರ ಪರಂಪರೆಯಲ್ಲಿ ಶ್ರೀವಿಜಯಧ್ವಜರು 'ವಿಜಯಧ್ವಜೀಯ'ವನ್ನೂ, ಶ್ರೀಸತ್ಯಾಭಿನವತೀರ್ಥರು 'ದುರ್ಘಟಭಾವ ದೀಪಿಕಾ' ವನ್ನೂ, ಶ್ರೀನಿವಾಸತೀರ್ಥರು 'ತಾತ್ಪರ್ಯಪ್ರಕಾಶಿಕೆ'ಯನ್ನೂ, ಛಲಾರೀ ಆಚಾರ್ಯರು 'ತಾತ್ಪರ್ಯಪ್ರಬೋಧಿನೀ'ಯನ್ನೂ, ಯಾದ ವಾರ್ಯರು 'ಯಾದುಪತ್ಯ'ವನ್ನೂ, ಪಾಂಫ್ರೀ ಆಚಾರ್ಯರು 'ವಿರೋಧೋದ್ಧಾರ' ವನ್ನೂ ಭಾಗವತಕ್ಕೆ ವ್ಯಾಖ್ಯಾನರೂಪವಾಗಿ ಬರೆದಿ ದ್ದಾರೆ. ಈ ಎಲ್ಲ ಉಪಲಬ್ಧ ಭಾಗವತಾಧಾರಿತ ಗ್ರಂಥಗಳನ್ನು ಪರಿಶೀಲಿಸಿ ಭಾರತದರ್ಶನದವರು ಶ್ರೀಧರೀಯ, ವೀರರಾಘವೀಯ ಹಾಗೂ ವಿಜಯ ಧ್ವಜೀಯವ್ಯಾಖ್ಯಾನಗಳನ್ನು ಮಥಿಸಿ, ಸಾರಸಂಗ್ರಹಮಾಡಿ ಕನ್ನಡ ಜನಸ್ತೋಮಕ್ಕೆ ಒದಗಿಸಿರುತ್ತಾರೆ. ಎಲ್ಲಿ ಭಿನ್ನಾಭಿಪ್ರಾಯ ಅನಿವಾರ್ಯವಾಗಿ ತೋರಿದೆಯೋ–ಅಲ್ಲಿ ಅಡಿಟಿಪ್ಪಣಿಗಳಲ್ಲಿ ಆಯಾ ಆಚಾರ್ಯರ ಅಭಿಪ್ರಾಯ ವನ್ನೇ ಯಥಾವತ್ತಾಗಿ ಕೊಟ್ಟಿದ್ದಾರೆ.

ಉದಾಹರಣೆಗೆ :

ಚತುರ್ಥಸ್ಕಂಧದ ಇಪ್ಪತ್ತೆಂಟನೆಯ ಅಧ್ಯಾಯದ ನಲವತ್ತನೆಯ ಶ್ಲೋಕ:

ಸ ವ್ಯಾಪಕತಯಾತ್ಮಾನಂ ವ್ಯತಿರಿಕ್ತತಯಾತ್ಮನಿ ।
ವಿದ್ವಾನ್ಸ್ವಪ್ನ ಇವಾಮರ್ಶಸಾಕ್ಷಿಣಂ ವಿರರಾಮ ಹ ॥

ಇದಕ್ಕೆ ಸರಳ ಕನ್ನಡ ಅನುವಾದ ಹೀಗಿದೆ :

'ಪರಮಾತ್ಮನು ಎಲ್ಲವನ್ನೂ ವ್ಯಾಪಿಸಿಕೊಂಡಿದ್ದಾನೆ. ಅವನು ಎಲ್ಲಕ್ಕಿಂತಲೂ ಬೇರೆಯಾಗಿ ವಿಲಕ್ಷಣನಾಗಿದ್ದಾನೆ. ಎಲ್ಲಕ್ಕೂ ಸಾಕ್ಷಿಯಾಗಿ ದ್ದಾನೆ' ಎಂಬುದನ್ನು ಆ ಮಲಯಧ್ವಜಮಹಾರಾಜನು–ಕನಸಿನಲ್ಲಿ ಹೇಗೋ ಹಾಗೆ–ತನ್ನೊಳಗೆ ಕಂಡುಕೊಂಡು ವಿಶ್ರಾಂತಿಪಡೆದನು.

ಅಡಿಟಿಪ್ಪಣಿಯಲ್ಲಿ ಮೊದಲು ಅನುವಾದಕರು ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಲು ಈ ರೀತಿ ವಿವರಣೆಯನ್ನು ನೀಡಿರುವರು :

'ಪರಮಾತ್ಮನು ಸರ್ವವ್ಯಾಪಕನು. ಸರ್ವವಿಲಕ್ಷಣ ಮತ್ತು ಸರ್ವ ಸಾಕ್ಷಿ–ಎಂಬುದನ್ನು ಕನಸಿನಲ್ಲಿ ಹೇಗೋ ಹಾಗೆ ತನ್ನೊಳಗೆ ಸಾಕ್ಷಾತ್ಕರಿಸಿ ಕೊಂಡನು.' ಶ್ರೀಭಗವಂತನ ಸಾಕ್ಷಾತ್ಕಾರದ ಸ್ಥಿತಿಯನ್ನು ಅಂದರೆ : ಸಮಾಧಿ ಯನ್ನು ಮನುಧರ್ಮಶಾಸ್ತ್ರವು ಕನಸಿಗೆ ಹೋಲಿಸುತ್ತದೆ. '**ರುಕ್ಮಾಭಂ ಸ್ವಪ್ನ ಧೀಗಮ್ಯಂ**'–ಮನುಷ್ಯರು ಕನಸಿನಲ್ಲಿ ಬಾಹ್ಯಪ್ರಪಂಚವನ್ನು ಮರೆತು ಬೇರೆ ಪ್ರಪಂಚದಲ್ಲಿರುವಂತೆ–ಸಮಾಧಿಯಲ್ಲಿಯೂ ಯೋಗಿಯು ಬಾಹ್ಯ ಪ್ರಪಂಚ ವನ್ನು ಮರೆತು ತುರೀಯಾವಸ್ಥೆಯ ಅನುಭವದ ಪ್ರಪಂಚದಲ್ಲಿರು ತ್ತಾನೆ–ಎಂಬುದು ಇಲ್ಲಿಯ ಹೋಲಿಕೆಯ ಭಾಗ. ಸಮಾಧಿಯ ಅನುಭವವು ಕನಸ್ಸಿನ ಅನುಭವದಂತೆಯೇ ಅನಿತ್ಯ ಮುಂತಾದ ಅರ್ಥಗಳನ್ನು ಇಲ್ಲಿ ತೆಗೆದುಕೊಳ್ಳಬಹುದು. ನಂತರ ಇತರ ವ್ಯಾಖ್ಯಾನಕಾರರು ಹೇಳಿರುವ ಅಭಿಪ್ರಾಯಗಳನ್ನು ಹೀಗೆ ಸಂಕ್ಷೇಪಿಸಬಹುದು'–ಎಂದು ಅಡಿ ಟಿಪ್ಪಣಿಯಲ್ಲಿ ಕೊಟ್ಟಿರುವರು.

'ಆ ರಾಜನು ಪರಮಾತ್ಮನನ್ನು ತನ್ನಲ್ಲಿಯೇ (ಸ್ವಾತ್ಮಾಭೇದದಿಂದ) ಕಂಡುಕೊಂಡು ಉಳಿದಿದ್ದರಿಂದ ವಿಶ್ರಾಂತನಾದನು. ತನ್ನಲ್ಲಿ ಹೇಗೆ ಕಂಡು ಕೊಂಡನು? ಎಂದರೆ : ಆತನು ವ್ಯಾಪಕನು ; ದೇಹಾದಿಗಳಿಗೆಲ್ಲಾ ಪ್ರಕಾಶಕನು; ವ್ಯತಿರಿಕ್ತನು–ದೇಹಾದಿವ್ಯತಿರಿಕ್ತನಾದವನು. ಅಮರ್ಶಕ್ಕೆ ಎಂದರೆ: ಅಂತಃಕರಣವೃತ್ತಿಗೆ ಸಾಕ್ಷಿಯು ಎಂಬುದಾಗಿ ಕಂಡುಕೊಂಡನು. ಕನಸ್ಸಿನಲ್ಲಿ ಹೇಗೋ ಹಾಗೆ ಕಂಡುಕೊಂಡನು ಎಂದರೆ : ಕನಸ್ಸಿನಲ್ಲಿ ತನ್ನ ತಲೆಯು ಕತ್ತರಿಸಿಹೋದಂತೆ ತಾನೇ ನೋಡುವುದುಂಟು. ಇದು ಮಿಥ್ಯಾನುಭವ. ಆತ್ಮನು ನಿಜವಾಗಿಯೂ ಕತ್ತರಿಸಲ್ಪಡುವುದಿಲ್ಲ. ಅವನು ಇದಕ್ಕಿಂತಲೂ ವ್ಯತಿರಿಕ್ತನಾದವನು. '**ಯಥಾ ಸ್ವಪ್ನೇ ಮಮೇದಂ ಶಿರಶ್ಛಿನ್ನಮಿತ್ಯಾದಿ ಪ್ರತೀತೌ ತದ್ವ್ಯರಿಕ್ತಮಾತ್ಮಾನಾಂ ವೇತ್ತಿತದ್ವತ್**'

(ಶ್ರೀಧರೀಯ)

ಸಾಕ್ಷಿಯಾಗಿರುವ ಅಂದರೆ : ಸಾಕ್ಷಾತ್ತಾಗಿ ನೋಡುತ್ತಿರುವ ಪರಮಾತ್ಮನು ಜೀವಾತ್ಮನಲ್ಲಿ ವ್ಯಾಪಿಸಿ ಅವನಿಗಿಂತಲೂ ವಿಲಕ್ಷಣನಾಗಿರುವು

ದನ್ನು ಕಂಡುಕೊಂಡು, ದೇಹವೃತ್ತಾಂತವು ಕನಸ್ಸಿನಂತೆ ಅನಿತ್ಯವಾದುದು ಎಂದರಿತು, ಅದರಿಂದ ವಿಶ್ರಾಂತನಾದನು ಅಂದರೆ : ಕೇವಲ ಪರಮಾತ್ಮನು ಸಂಧಾನಪರನಾದನು. 'ಸ್ವಪ್ನ ಇವ ಅನಿತ್ಯಂ ದೇಹವೃತ್ತಾನ್ತಮಾಮೃತ್ಯ ತಸ್ಮಾದ್ವಿರರಾಮ । ಕೇವಲಪರಮಾತ್ಮಾನುಸಂಧಾನ ಪರೋಽಭೂತ್ ಇತ್ಯರ್ಥಃ॥' (ವೀರರಾಘವೀಯ)

"ಆ ರಾಜನು ಚೆನ್ನಾಗಿ ವಿಚಾರ ಮಾಡಿ, ಜೀವನಲ್ಲಿ ಅಂತರ್ಯಾಮಿಯಾಗಿ ಸಾಕ್ಷತ್ತಾಗಿ ದ್ರಷ್ಟವಾಗಿರುವ ಪರಮಾತ್ಮನನ್ನು ಸ್ವಪ್ನದಲ್ಲಿ ಹೇಗೋ ಹಾಗೆ–ಎಂದರೆ ಸ್ವಪ್ನದಲ್ಲಿ ಜೀವನನ್ನು ಪರತಂತ್ರನನ್ನಾಗಿ ನೋಡುವಂತೆ ಉಳಿದ ಸಮಯಗಳಲ್ಲಿಯೂ ಪರತಂತ್ರನನ್ನಾಗಿಯೇ ನೋಡುತ್ತಾನೆ–ಎಂದೂ, ಸರ್ವವ್ಯಾಪಿಯಾಗಿ ಚೇತನಾಚೇತನಾತ್ಮಕವಾದ ಜಗತ್ತಿಗಿಂತಲೂ ವ್ಯತಿರಿಕ್ತನಾಗಿದ್ದಾನೆ–ಎಂದೂ ತಿಳಿದು ಸಂಸಾರದಿಂದ ವಿರಕ್ತನಾಗಿ ಜೀವನ್ಮುಕ್ತನಾದನು. ಅಥವಾ ಪರಮಾತ್ಮನು ವ್ಯಾಪಕನಾಗಿ ಜೀವನದಲ್ಲಿ ವ್ಯತಿರಿಕ್ತನಾಗಿದ್ದಾನೆ ; ಸ್ವಪ್ನದಲ್ಲಿ ಹೇಗೋ ಹಾಗೆ ಸ್ವತಂತ್ರನಾಗಿ ಸಾಕ್ಷಿಯಾಗಿದ್ದಾನೆ ; ಜೀವನು ಪರತಂತ್ರನಾಗಿದ್ದಾನೆ–ಎಂದು ನಿಶ್ಚಯಿಸಿ ವಿರಕ್ತನಾದನು. ಜೀವನು ಸದಾ ಅಸ್ವತಂತ್ರನು. ಶ್ರೀಹರಿಯು ಆತನಿಂದ ವ್ಯತಿರಿಕ್ತನಾದವನು. 'ಯತಃ ಸ್ವಪ್ನೋ ನ ಸ್ವತನ್ತ್ರಃ ತತಸ್ತದ್ದರ್ಶಕಃ ಪರಃ । ಜೀವಾದನ್ಯಸ್ತು ವಿಜ್ಞೇಯಃ ಸ ವಿಷ್ಣುರವಧಾರ್ಯತಾಮ್ ॥' (ವಿಜಯಧ್ವಜೀಯ)

ಈ ಶ್ಲೋಕದ ಮೇಲೆ ಮಾತ್ರ ಶ್ರೀಮದಾಚಾರ್ಯರು ತಾತ್ಪರ್ಯ ವನ್ನು ಬರೆದಿದ್ದಾರೆ.

'ಸ್ವಪ್ನ ಇವೇತಿ ದೃಷ್ಟಾಂತತ್ವೇನೋಚ್ಯತೇ। ಸ್ವಪ್ನೇ ಹಿ ಜೀವಸ್ಯಾಸ್ವಾತಂತ್ರ್ಯಂ ಪ್ರಸಿದ್ಧಮ್। ಅತಃ ತತ್ರ ಪರಮೇಶ್ವರಾಧೀ ನತ್ವಂ ಪ್ರಸಿದ್ಧಮೇವ । ಅತೋ ಜೀವವ್ಯತಿರಿಕ್ತ ಈಶ್ವರಃ ಸಿದ್ಧಃ। ಸ್ವಪ್ನೋ ಯತೋ ನ ಸ್ವತಂತ್ರಃ ತತ್ರ ತದ್ದರ್ಶಕಃ ಪರಃ । ಜೀವಾದನ್ಯಸ್ತು ವಿಜ್ಞೇಯಃ ಸ ವಿಷ್ಣುರವಧಾರ್ಯತಾಮ್। ಇತಿ ವಾರಾಹೇ ॥'

ಶ್ರೀವಿಜಯಧ್ವಜರು ಆಚಾರ್ಯರ ಅಭಿಪ್ರಾಯವನ್ನು ವಿವರಿಸಿದ್ದಾರೆ. ಆಚಾರ್ಯರು ಪ್ರಮಾಣತ್ವೇನ ಉದಾಹರಿಸಿರುವ ಶ್ಲೋಕವನ್ನು ಉದಾಹರಿಸಿದ್ದಾರೆ. ಅದನ್ನು ವರಾಹಪುರಾಣದಿಂದ ತೆಗೆದುಕೊಂಡಿರುವುದಾಗಿ ಆಚಾರ್ಯರು ಸೂಚಿಸಿರುತ್ತಾರೆ.

ಹೀಗೆ ತತ್ತ್ವಜ್ಞಾನಕ್ಷೇತ್ರದಲ್ಲಿ ಪ್ರಸಿದ್ಧವಾದ ಅದ್ವೈತ, ವಿಶಿಷ್ಟಾದ್ವೈತ ಹಾಗೂ ದ್ವೈತಮತಾಚಾರ್ಯರ ಅಭಿಪ್ರಾಯಗಳನ್ನು ಉಲ್ಲೇಖಿಸಿರುವರೇ ಹೊರತು ಯಾವುದು ಸರಿ, ಯಾವುದು ತಪ್ಪು–ಎಂದು ವಿಮರ್ಶಿಸಲು ಹೋಗಿಲ್ಲ. ಅವರವರ ಬುದ್ಧಿಗೆ ಅನುಗುಣವಾಗಿ ಓದುಗರು ವಿಮರ್ಶೆ ಮಾಡಿಕೊಳ್ಳಲೆಂದು ಬಿಟ್ಟಿರುವುದು ಯೋಗ್ಯವಾಗಿದೆ. ಅಡಿ ಟಿಪ್ಪಣಿಗಳ ಮಹತ್ತ್ವವನ್ನು ತಿಳಿಸಲು ಇನ್ನೊಂದು ದೃಷ್ಟಾಂತ.

ಇತಿ ವ್ಯವಸಿತಾ ವಿಪ್ರಾಸ್ತಸ್ಯ ರಾಜ್ಞಃ ಪ್ರಜಾತಯೇ ।
ಪುರೋಡಾಶಂ ನಿರವಪನ್ ಶಿಪಿವಿಷ್ಟಾಯ ವಿಷ್ಣವೇ ॥

ಇದು ಚತುರ್ಥಸ್ಕಂಧದ ೧೩ನೆಯ ಅಧ್ಯಾಯದ ೩೫ನೆಯ ಶ್ಲೋಕ.

ಇಲ್ಲಿ ಶಿಪಿವಿಷ್ಟಾಯ ವಿಷ್ಣವೇ ಎಂಬ ಪ್ರಯೋಗದಿಂದ ಶಿಪಿವಿಷ್ಟಃಎಂಬ ಶಬ್ದಕ್ಕೆ ವಿಷ್ಣು ಎಂದು ಅರ್ಥವಾದರೂ–ಓದುಗರಲ್ಲಿ ಶಿಪಿವಿಷ್ಟ ಎಂಬುದು ಹೇಗೆ ವಿಷ್ಣು ಎಂಬ ಅರ್ಥವನ್ನು ಕೊಡುವುದೆಂಬ ಜಿಜ್ಞಾಸೆ ಮೂಡದಿರದು. ಅಡಿಟಿಪ್ಪಣಿ ಆ ಜಿಜ್ಞಾಸೆಯನ್ನು ಸಮಾಧಾನಪಡಿಸುತ್ತದೆ. 'ಶಿಪಿವಿಷ್ಟಃ' ಎಂದರೆ ವಿಷ್ಣು. ಶಿಪಿಗಳಲ್ಲಿ ಎಂದರೆ ಪಶುಗಳಲ್ಲಿ ಯಜ್ಞ ಪುರುಷರೂಪದಲ್ಲಿ ಪ್ರವೇಶಮಾಡಿರುವುದರಿಂದ ಮಹಾವಿಷ್ಣುವಿಗೆ ಶಿಪಿವಿಷ್ಟ ಎಂದು ಹೆಸರು. ಇಷ್ಟು ಹೇಳಿ ಪ್ರಮಾಣವನ್ನು ಉದಾಹರಿಸಿದ್ದಾರೆ :– **ಯಜ್ಞೋ ವೈ ವಿಷ್ಣುಃ ಪಶವಃ ಶಿಪಿಃ । ಯಜ್ಞ ಏವ ಪಶುಷು ಪ್ರತಿತಿಷ್ಠತಿ ।** ಅಲ್ಲಿಯೇ ಅಡಿಟಿಪ್ಪಣಿಯಲ್ಲಿ ಇನ್ನೊಂದು ವಿಷಯವನ್ನೂ ಚರ್ಚಿಸಿದ್ದಾರೆ. ಅಂಗಮಹಾರಾಜನು ಪುತ್ರಕಾಮನೆಯಿಂದ ಯಜ್ಞವನ್ನು ಮಾಡಿದ್ದೇಕೆ? **'ಅಪುತ್ರಸ್ಯ ಗತಿರ್ನಾಸ್ತಿ'** ಎಂಬುದಕ್ಕೆ ಪುತ್ರಹೀನನಾದವನಿಗೆ ಸದ್ಗತಿಯು ಇಲ್ಲ–ಎಂಬುದು ಪ್ರಸಿದ್ಧವಾದ ಅರ್ಥ. ಇದಕ್ಕೆ ಕೆಲವರು ಅಪುತ್ರನಾದವನಿಗೆ (ಆತನು ಧರ್ಮಿಷ್ಠನಾಗಿದ್ದರೆ **'ನಾ ಗತಿಃ ಅಸ್ತಿ'** = ಪುರುಷೋತ್ತಮನಾದ ನಾರಾಯಣನೇ ದಿಕ್ಕಾಗಿ ಇರುತ್ತಾನೆ–ಎಂದು ಅರ್ಥ ಮಾಡುತ್ತಾರೆ ಎಂದು **'ಸದ್ಧರ್ಮವತೋ ಧರ್ಮಬಲಾಲ್ಲೋಕೋ ಭವತ್ಯೇವ'** ಎಂಬುದು ವಿಜಯಧ್ವಜರ ಅಭಿಪ್ರಾಯವೂ ಆಗಿದೆ (ಪುಟ 849) ಎಂದು ಉತ್ತರಿಸಿದ್ದಾರೆ.

ಕೆಲವೆಡೆ ಹೆಚ್ಚು ಪ್ರಚಲಿತವಲ್ಲದ ಶಬ್ದಗಳಿಗೆ ಅಡಿಟಿಪ್ಪಣಿಯಲ್ಲಿ ವಿವರವಾಗಿ ಅರ್ಥವನ್ನು ಕೊಟ್ಟಿದ್ದಾರೆ :

'ಚರಮೇಣಾಶ್ವಮೇಧೇನ ಯಜಮಾನೇ ಯಜುಷ್ಪತಿಮ್' (೪-೧೯-೧೧) ಇಲ್ಲಿ **'ಯಜುಷ್ಪತಿಂ'** ಎಂಬ ಶಬ್ದಕ್ಕೆ ವಿಷ್ಣು ಎಂದು ಅರ್ಥವೇನೋ ಆಗುತ್ತದೆ. ಆದರೆ ಶ್ರೀಭಗವಂತನು ಎಲ್ಲ ವೇದಗಳಿಗೂ ಅಧಿಪತಿಯಾಗಿದ್ದರೂ ಆತನನ್ನು ಇಲ್ಲಿ 'ಯಜುಷ್ಪತಿ' ಎಂದು ಏಕೆ ಕರೆದಿದೆ? ಎಂದರೆ : ಅಶ್ವಮೇಧಯಜ್ಞವು ಯಜುರ್ವೇದದಲ್ಲಿ ಹೇಳಲ್ಪಟ್ಟಿರುವುದರಿಂದ–ಎಂದು ತಿಳಿಸಿದ್ದಾರೆ. ಹೀಗೆಯೇ ಯೂಪ ಮತ್ತು ಚಷಾಲ ಎಂಬ ಶಬ್ದಗಳಿಗೂ ಸಹ ಯಜ್ಞಮಂಟಪದಲ್ಲಿ ಪಶುವನ್ನು ಕಟ್ಟುವ ಕಂಬಕ್ಕೆ 'ಯೂಪ'ವೆಂದೂ ಅರ್ಥೈಸಿದ್ದಾರೆ. ಅದರ ಮುಂದೆ ಇಟ್ಟಿರುವ ಬಳೆಯ ಆಕಾರದ ಕಾಷ್ಠಕ್ಕೆ ಚಷಾಲವೆಂದೂ ಅರ್ಥವಿವರಣೆಯನ್ನು ನೀಡಿದ್ದಾರೆ.

'ಸ್ನಾತ್ವಾನುಸವನಂ ತಸ್ಮಿನ್ಕಾಲಿನ್ದ್ಯಾಃ ಸಲಿಲೇ ಶಿವೇ । ಕೃತ್ವೋಚಿತಾನಿ ನಿವಸನ್ನಾತ್ಮನಃಕಲ್ಪಿತಾಸನಃ ॥' (೪-೮-೪೩) ನಾರದರು ಧ್ರುವಕುಮಾರನಿಗೆ ಅಷ್ಟಾಂಗಯೋಗವನ್ನು ಕ್ರಮವಾಗಿ ಹೇಳಿದ್ದಾರೆಂದು ತಾತ್ಪರ್ಯಗ್ರಹಣ ಮಾಡಬೇಕೆಂಬುದು ವೀರರಾಘವೀಯದ ಅಭಿಪ್ರಾಯ. ಅದನ್ನು ಅಡಿಟಿಪ್ಪಣಿಯಲ್ಲಿ ಸ್ಪಷ್ಟಪಡಿಸಲಾಗಿದೆ.

ಉಚಿತಾನಿ ಕೃತ್ವಾ–ಎಂಬುದರಿಂದ ಯಮ-ನಿಯಮಗಳೂ **ಕಲ್ಪಿತಾಸನಃ** ಎಂಬುದರಿಂದ ಆಸನವೆಂಬ ಯೋಗಾಂಗವೂ, **'ಮಲಂ ವ್ಯದಸ್ಯ'** ಎಂಬುದರಿಂದ ಪ್ರಾಣಾಯಾಮ ಮತ್ತು ಪ್ರತ್ಯಾಹಾರಗಳೂ, **'ಅಭಿಧ್ಯಾಯೇತ್'** ಎಂಬುದರಿಂದ ಧಾರಣ-ಧ್ಯಾನಗಳೂ ಉಪದೇಶ ಮಾಡಲ್ಪಟ್ಟಿವೆ. (ಇವುಗಳಿಂದ ನಿಷ್ಪನ್ನವಾಗುವುದೇ ಕೊನೆಯ ಸೋಪಾನವಾದ ಸಮಾಧಿ. ಸವಿಕಲ್ಪಕಸಮಾಧಿಯು ಯೋಗದ ಎಂಟನೆಯ ಹಾಗೂ ಕೊನೆಯ ಮೆಟ್ಟಲು. ನಿರ್ವಿಕಲ್ಪಕವು ಯೋಗದ ಲಕ್ಷ್ಯ.)

'ಅಗಸ್ತ್ಯಃ ಪ್ರಾಗ್ದುಹಿತರಮುಪಯೇಮೇ ಧೃತವ್ರತಾಮ್' ಎಂಬ ಶ್ಲೋಕದಲ್ಲಿ (೪.೨ ೨೮.೩೨) ಅಗಸ್ತ್ಯಶಬ್ದಕ್ಕೆ ನಿರ್ವಚನಮಾಡುತ್ತಾ ಅಗಸ್ತ್ಯಶಬ್ದವು ಮನಸ್ಸನ್ನು ಅಥವಾ ಮುಮುಕ್ಷುವಾದ ಭಕ್ತನಾದ ಶುದ್ಧ ಚೇತನನನ್ನು ರೂಪಿಸುವುದು. **ಅಗಂ** = ನಿಷ್ಕ್ರಿಯವಾದ ಶರೀರವನ್ನು, **ಸ್ತ್ಯಾಯತಿ** = ಜೊತೆಗೂಡಿಸುವುದು ಅಥವಾ ನಡೆಯಿಸುವುದು–ಮನಸ್ಸು, ಅಂತಃಕರಣ ಎಂದು ಶ್ರೀಧರೀಯ. ಮುಮುಕ್ಷುವಾದ ಶುದ್ಧಾತ್ಮನು ಎಂದು

ವೀರರಾಘವೀಯ ಅಗಂ =ಶ್ರೀಭಗವಂತನನ್ನು. ಸ್ತ್ಯಾಯತಿ =ಸ್ತುತಿಸು ವವನು. ಭಕ್ತನು ಎಂದು ವಿಜಯಧ್ವಜೀಯಗಳಿಂದ ಸಂಗ್ರಹಿಸಿಕೊಟ್ಟಿದ್ದಾರೆ. (ಪುಟ 988-89)

'ಶಿವಾಃ ಸಚಿವ್ಯಃ' (೫-೨-೧೬) ಎಂಬ ಮೂಲಶ್ಲೋಕದ ಘಟಕ ಪದ ಶಿವಾಃ ಎಂಬುದಕ್ಕೆ ಹೆಣ್ಣುನರಿಗಳೆಂದು ಅರ್ಥಮಾಡುವುದುಂಟು. ಆ ಶಬ್ದಕ್ಕೆ ಹೆಣ್ಣುನರಿ ಎಂದು ಅರ್ಥವಾಗುತ್ತದೆ. ಆದರೆ ಈ ಅರ್ಥವು ಇಲ್ಲಿ ಸರಿಯಾಗಿ ಹೊಂದುವುದಿಲ್ಲ ಎಂದು ಹೇಳಿ ಭಾಷಾಂತರದಲ್ಲಿ 'ಮಂಗಳ ಮಯವಾದ ಸಖಿಯರು'–ಎಂದು ಅರ್ಥಮಾಡಿರುವುದು ಗಮನಾರ್ಹವೂ ಮನನೀಯವೂ ಆಗಿದೆ.

ಗ್ರಂಥಪ್ರಕಾಶಕರು ಗೀತಾಪ್ರೆಸ್ ಗೋರಖಪುರದವರು ಪ್ರಕಟಿಸಿರುವ ಪಾಠವನ್ನು ಆಧಾರವನ್ನಾಗಿಟ್ಟುಕೊಡು ಕನ್ನಡಲಿಪಿಯಲ್ಲಿ ಸಂಸ್ಕೃತದಲ್ಲಿ ಸಂಹಿತೆಯನ್ನು ಮೊದಲು ಕೊಟ್ಟು ಅನಂತರ ಅದರ ಅನುವಾದವನ್ನು ತಿಳಿಗನ್ನಡದಲ್ಲಿ ಕೊಟ್ಟಿರುವರಾದರೂ ಇತರೇ ಭಾಗವತ ಪ್ರಕಟಣೆಗಳನ್ನೂ ಗಮನಿಸಿದ್ದಾರೆ. ಹಾಗೂ ಹೆಚ್ಚುವರಿ ಶ್ಲೋಕಗಳು ಬೇರಾವುದಾದರೂ ಸಂಸ್ಕರಣಗಳಲ್ಲಿ ಕಂಡುಬಂದರೆ ಅದನ್ನೂ ಅರ್ಥಸಹಿತವಾಗಿ ಅಡಿ ಟಿಪ್ಪಣಿಯಲ್ಲಿ ಉಲ್ಲೇಖಿಸಿದ್ದಾರೆ. (ಪು. 798)

ಈ ತೃತೀಯಸಂಪುಟದಲ್ಲಿ ಶ್ರೀಮದ್ಭಾಗವತದ ಚತುರ್ಥಸ್ಕಂಧದ ಎಂಟನೆಯ ಅಧ್ಯಾಯದಿಂದ ಪಂಚಮಸ್ಕಂಧದ ಹತ್ತೊಂಬತ್ತನೆಯ ಅಧ್ಯಾಯದ ಪೂರ್ತಿಯಾಗಿ ಸಂಗ್ರಹವಾಗಿದೆ.

ಧ್ರುವೋಪಾಖ್ಯಾನದಿಂದ ಆರಂಭವಾಗುತ್ತದೆ. ಧ್ರುವಚರಿತ್ರೆ ಬಹು ಪ್ರಸಿದ್ಧವಾದುದು. ಮಲತಾಯಿಯ ಮೂದಲಿಕೆಯಿಂದ ಆಹತಾಂತಃಕರಣ ನಾದ ಬಾಲಕ ಧ್ರುವನು ವನಕ್ಕೆ ಹೋಗಿ ತಪಸ್ಸುಮಾಡಿ ಭಗವತ್ ಸಾಕ್ಷಾ ತ್ಕಾರ ಪಡೆಯಲು ಹೊರಟದ್ದು, ಅಲ್ಲಿ ನಾರದರ ಉಪದೇಶದಿಂದ ಭಗವದುಪಾಸನೆ ಮಾಡಿದುದು, ಭಗವಂತನ ಸಾಕ್ಷಾತ್ಕಾರ ಪಡೆದುದು, ಶ್ರೀಭಗವಂತನನ್ನು ಸ್ತುತಿಸಿದುದು, ವರವನ್ನು ಪಡೆದುದು, ಪುರಪ್ರವೇಶ ಮಾಡಿದುದು ಮತ್ತು ರಾಜ್ಯದಲ್ಲಿ ಅಭಿಷಿಕ್ತನಾದುದು ಇವನ್ನು ಎಂಟು ಮತ್ತು ಒಂಬತ್ತನೆಯ ಅಧ್ಯಾಯಗಳಲ್ಲಿ ಹೇಳಲಾಗಿದೆ. ಈ ಸದ್ವೈಷ್ಣವಮಹಾ

ಪುರಾಣವು ವಿಷ್ಣುವಿನ ಪಾರಮ್ಯವನ್ನು ಹೇಳಲು ಪ್ರವೃತ್ತವಾಗಿದೆ. ಆಖ್ಯಾಯಿಕೆಗಳು ಅದರ ಸ್ಪಷ್ಟೀಕರಣಕ್ಕಾಗಿ ಹಾಗೂ ರೋಚಕವಾಗಿ ತಿಳಿಸುವುದಕ್ಕಾಗಿ ಗ್ರಥಿತವಾದವು. ಈ ಧ್ರುವೋಪಾಖ್ಯಾನದಲ್ಲಿ– **ಧರ್ಮಾರ್ಥಕಾಮ ಮೋಕ್ಷಾಖ್ಯಂ ಯ ಇಚ್ಛೇಚ್ಛ್ರೇಯ ಆತ್ಮನಃ । ಏಕಮೇವ ಹರೇ ಸ್ತತ್ರ ಕಾರಣಂ ಪಾದಸೇವನಮ್ ॥**' (೪-೮-೪೧) ಎಂಬುದು ಮುಖ್ಯಪ್ರಮೇಯ. ಚತುರ್ವಿಧಪುರುಷಾರ್ಥಗಳನ್ನು ಶ್ರೀಹರಿಯ ಅನುಗ್ರಹದಿಂದ ಪಡೆಯಬಹುದು. ಅವನೇ ಸರ್ವಾರ್ಥಪ್ರದನು. ವರದೇಶ-ವರವನ್ನು ಕೊಡುವ ಬ್ರಹ್ಮ-ರುದ್ರಾದಿಗಳಿಗೂ ನಿಯಾಮಕನಾಗಿರುವವನು. '**ಏಕಮೇವ ಕಾರಣಂ**' ಅನ್ನುವುದರಿಂದ ಭಾಗವತವು ಆ ವಿಷ್ಣುವಿನ ಮಹಾಮಹಿಮೆಯನ್ನು ತಿಳಿಸಿದೆ. '**ಏಷ ಉ ಏವ ಶುಭಾಶುಭೈಃ ಕರ್ಮ ಫಲೈರೇನಂ ಸಂಯೋಜಯತಿ**' ಅಂದರೆ ಶ್ರೀಭಗವಂತನೇ ಜೀವರಿಗೆ ಶುಭಾಶುಭಫಲಗಳನ್ನು ಕೊಡುತ್ತಾನೆ ಎಂದು ಪೈಂಗೀಶ್ರುತಿಯು ಹೇಳುತ್ತದೆ. ಭಾಗವತವು ವೇದಾರ್ಥಪರಿಬೃಂಹಿತವಾದುದಲ್ಲವೇ ?

ಸರ್ವೇ ವೇದಾ ಯತ್ಪದಮಾಮನನ್ತಿ (ಕಠ) = ಎಲ್ಲ ವೇದಗಳೂ ಆ ಪರಮಾತ್ಮನ ಸ್ವರೂಪವನ್ನೇ ತಿಳಿಸಿಕೊಡುತ್ತವೆ. ಪೈಂಗೀಶ್ರುತಿಯು '**ಸರ್ವೇ ವೇದಾ ಯುಕ್ತಯಃ ಸುಪ್ರಮಾಣಾ ಬ್ರಾಹ್ಮಂ ಜ್ಞಾನಂ ಪರಮಂ ತ್ವೇಕಮೇವ । ಪ್ರಕಾಶಯನ್ತೇ ನ ವಿರೋಧಃ ಕುತಶ್ಚಿತ್ ವೇದೇಷು ತಥೇತಿಹಾಸೇ ॥**' ಅಂದರೆ ಎಲ್ಲ ವೇದಗಳೂ ವೇದಾನುಗೃಹೀತವಾದ ಯುಕ್ತಿಗಳೂ 'ಶ್ರೀವಿಷ್ಣುವೇ ಸರ್ವೋತ್ತಮ' ಎಂಬ ಏಕವಿಧವಾದ ಬ್ರಹ್ಮಜ್ಞಾನವನ್ನು ಪ್ರಕಾಶಗೊಳಿಸುತ್ತವೆ. ಆದುದರಿಂದ ಎಲ್ಲಿಯೂ-ವೇದ ವಚನಗಳಲ್ಲಿಯೂ ಇತಿಹಾಸ-ಪುರಾಣಗಳಲ್ಲಿಯೂ–ಪರಸ್ಪರ ವಿರೋಧವಿಲ್ಲ. ಅದನ್ನೇ ಪುಷ್ಟೀಕರಿಸುತ್ತದೆ. ಭಗವದ್ವಾಣಿ–**ವೇದೈಶ್ಚ ಸರ್ವೈರಹ ಮೇವ ವೇದ್ಯಃ** = ಎಲ್ಲ ವೇದಗಳಿಂದಲೂ ನಾನೇ ಮುಖ್ಯಪ್ರತಿಪಾದ್ಯ. (ಗೀ. ೧೫-೧೬) ವಿಷ್ಣುವಿನ ಸರ್ವೋತ್ತಮತ್ವವನ್ನು ಸಮಾಧಿಭಾಷೆಯಲ್ಲಿ ತಿಳಿಸಲು ಹೊರಟ ಪರಮಸಾತ್ತ್ವಿಕಪುರಾಣ ಶ್ರೀಮದ್ಭಾಗವತ. ಧ್ರುವೋಪಾಖ್ಯಾನದಲ್ಲಿ ಇದನ್ನು ಎತ್ತಿ ಹಿಡಿಯಲಾಗಿದೆ.

ಈ ಪ್ರಮೇಯದಷ್ಟೇ ಪ್ರಮುಖವಾದುದು ಜೀವನ ಅಸ್ವಾತಂತ್ರ್ಯ. ಅದೂ ಸಹ ಧ್ರುವೋಪಾಖ್ಯಾನದಿಂದ ಸ್ಪಷ್ಟವಾಗುತ್ತದೆ. ಪರಮಾತ್ಮನೊಬ್ಬನೇ

ಸ್ವತಂತ್ರ. ಉಳಿದ ಜಡ-ಚೇತನಾತ್ಮಕಪ್ರಪಂಚವು ಅವನ ಅಧೀನ. ಅವನು ಈ ಪ್ರಪಂಚದಲ್ಲಿ ಕ್ರೀಡೆಗೋಸುಗ ಏನೂ ಮಾಡಬಲ್ಲ. **ಕರ್ತುಂ ಅಕರ್ತುಂ ಅನ್ಯಥಾ ಕರ್ತುಂ** ಸಮರ್ಥನಾದವನು. ಎಲ್ಲಿ ಐದು ವರ್ಷದ ಧ್ರುವ? ಎಲ್ಲಿ ಅವನು ಕೈಗೊಂಡ ಘೋರ ತಪಸ್ಸು? ಧ್ರುವನು ತನ್ನ ಇಂದ್ರಿಯ ದ್ವಾರಗಳನ್ನೂ, ಪ್ರಾಣಗಳನ್ನೂ ಸ್ತಂಭಿಸಿ ಅನನ್ಯಬುದ್ಧಿಯಿಂದ ವಿಶ್ವಾತ್ಮನಾದ ವಿಷ್ಣುವನ್ನು ಧ್ಯಾನಿಸತೊಡಗಿದಾಗ ಸರ್ವಲೋಕಗಳಿಗೂ ಉಸಿರುಕಟ್ಟಿ ಹೋಯಿತು. **'ಲೋಕಾ ನಿರುಚ್ಛ್ವಾಸನಿಪೀಡಿತಾ ಭೃಶಂ'** ಇದು ಹೇಗೆ ಸಾಧ್ಯ? ಧ್ರುವನಲ್ಲಿ ಅಂತಹ ಶಕ್ತಿಯು ಎಲ್ಲಿಂದ ಬಂದಿತು? ಲೋಕವೆಲ್ಲಾ ಉಸಿರುಕಟ್ಟುವಂತಾಗಲು ಕಾರಣನಾಗುವಷ್ಟು ಸಾಮರ್ಥ್ಯವೇ ಅವನದು? ಈ ಜಿಜ್ಞಾಸೆಗೆ ಒಂದೇ ಉತ್ತರ ; ಅದೇ ಪರಮಾತ್ಮನ ಸಂಕಲ್ಪ. ಅವನು ಧ್ರುವನಿಗೆ ಕೀರ್ತಿಯನ್ನು ತಂದುಕೊಡಲು ಸಂಕಲ್ಪಿಸಿದ್ದಾನೆ. ಅವನ ಹೃದಯದಲ್ಲಿದ್ದು ಆ ಶಕ್ತಿಯನ್ನು ಅವನಲ್ಲಿ ಜಾಗ್ರತಗೊಳಿಸಿದ್ದಾನೆ. ದೇವತೆಗಳೆಲ್ಲರೂ ಅದರಿಂದ ತತ್ತರಿಸುವಂತೆ ಮಾಡಿದ್ದಾನೆ. ಆದ್ದರಿಂದಲೇ ಲೋಕಪಾಲಕರೆಲ್ಲರೂ ಅವಶರಾಗಿ ಗಾಬರಿಗೊಂಡು ಶ್ರೀಹರಿಯನ್ನು ಶರಣುಹೊಂದಬೇಕಾಯಿತು. ಅವರು ಒಕ್ಕೊರಲಿನಿಂದ ದೇವದೇವನಲ್ಲಿ ನಿವೇದಿಸುತ್ತಾರೆ.

ನೈವಂ ವಿದಾಮೋ ಭಗವನ್ಪ್ರಾಣರೋಧಂ ಚರಾಚರಸ್ಯಾಖಿಲ ಸತ್ತ್ವಧಾಮ್ನಃ । ವಿಧೇಹಿ ತನ್ನೋ ವೃಜಿನಾದ್ವಿಮೋಕ್ಷಂ ಪ್ರಾಪ್ತಾವಯಂ ತ್ವಾಂ ಶರಣಂ ಶರಣ್ಯಮ್ ॥ (೪-೮-೮೧) 'ಭಗವಂತನೇ! ಸಮಸ್ತಸ್ಥಾವರ-ಜಂಗಮಪ್ರಾಣಿಗಳ ಪ್ರಾಣವಾಯುವು ಏಕಕಾಲದಲ್ಲಿ ಸ್ತಬ್ಧವಾಗಿಬಿಟ್ಟಿದೆ. ಇಂತಹ ಅನುಭವವು ನಮಗೆ ಹಿಂದೆಂದೂ ಆಗಿರಲಿಲ್ಲ. ಶರಣಾಗತರಕ್ಷಕನು ನೀನು. ನಿನ್ನಲ್ಲಿ ಶರಣು ಬಂದಿದ್ದೇವೆ. ನಮ್ಮನ್ನು ಈ ದುಃಖದಿಂದ ಪಾರು ಮಾಡು, ಪ್ರಭೋ!'—ಎಂದು ಮೊರೆ ಇಟ್ಟರು.

ಹೀಗೆ ಮೊರೆ ಇಡಲು ಬರುವುದಕ್ಕೆ ಮುಂಚೆ ಆ ದೇವತೆಗಳು ಧ್ರುವನನ್ನು ತಪಸ್ಸು ಬಿಟ್ಟು ಓಡಿಹೋಗುವಂತೆ ಮಾಡಲು ತಮ್ಮ ಶಕ್ತಿ ಇದ್ದಷ್ಟು ಪ್ರಯತ್ನಿಸಿದ್ದರು.

ದೇವಾಶ್ಚಕ್ರುಸ್ತತೋ ವಿಘ್ನಂ ತ್ರಾಸಯನ್ತಃ ಸ್ವಮಾಯಯಾ । ಸರ್ಪೇಭಸಿಂಹಕೂಷ್ಮಾಣ್ಡೈಃ ತಾನ್ನಾಪಶ್ಯತ್ಪರಂ ಗತಃ ॥ ಅಂದರೆ ದೇವತೆಗಳು ತಮ್ಮ ಇಚ್ಛಾಶಕ್ತಿಯಿಂದ (ಮಾಯೆಯಿಂದ) ಸರ್ಪಗಳು, ಆನೆಗಳು, ಸಿಂಹ

ಗಳು, ಪಿಶಾಚಿಗಳು ಮುಂತಾದುವನ್ನು ಸೃಷ್ಟಿಸಿ ಧ್ರುವನ ತಪೋವಿಘ್ನಕ್ಕಾಗಿ ಕಳುಹಿಸಿದರು. ಆದರೆ ಸಮಾಧಿನಿಷ್ಠನಾಗಿದ್ದ ಆ ಮಹಾತ್ಮನಿಗೆ ಯಾವುದೂ ಕಾಣಲೇ ಇಲ್ಲ. ಈ ಶ್ಲೋಕ ವಿಜಯಧ್ವಜೀಯ ಪಾಠದಲ್ಲಿ ಬಂದಿದೆ. ವಿಷ್ಣುಪುರಾಣದಲ್ಲಿ ತಪಸ್ಸಿನಿಂದ ಧ್ರುವನನ್ನು ಕದಲಿಸುವುದಕ್ಕಾಗಿ ನಾನಾ ಪ್ರಲೋಭನಗಳನ್ನೂ, ಬಿಭೀಷಿಕೆಗಳನ್ನೂ ತಂದೊಡ್ಡಿ ಹತಪ್ರಭರಾದರೆಂಬ ಉಲ್ಲೇಖವಿದೆ.

ಇದರಿಂದ ದೇವತೆಗಳ ಅಸ್ವಾತಂತ್ರ್ಯವು ಹೇಗೆ ಸ್ಪಷ್ಟವಾಗುತ್ತದೆಯೋ–ಹಾಗೆಯೇ ಶ್ರೀಹರಿಯ ಪ್ರಭುತ್ವಶಕ್ತಿಯೂ ಧ್ವನಿತವಾಗುತ್ತದೆ. ಧ್ರುವನಿಗೆ ಕೀರ್ತಿಯನ್ನು ಕೊಡುವುದು ಅವನ ಚಿತ್ತಕ್ಕೆ ಬಂದಿದೆ. ಆದ್ದರಿಂದ ಅವರು ಅಸಮರ್ಥರಾಗಿಬಿಟ್ಟಿದ್ದಾರೆ. ಹಾಗಿಲ್ಲದಿದ್ದರೆ–ಸತ್ಯಸಂಕಲ್ಪರು, ಚಿತ್ತಾಭಿಮಾನಿಗಳು, ಸಾಮಾನ್ಯರಲ್ಲ. ಅವರು ಅಸಮರ್ಥರಾಗಿ ಶ್ರೀಹರಿಯನ್ನು ಶರಣುಹೊಂದಿದರು ಎಂದರೆ ಅದು ಭಗವದಿಚ್ಛೆಯಿಂದಲೇ ಎಂದರಿಯಬೇಕು.

ಇಲ್ಲಿ ಒಂದು ಜಿಜ್ಞಾಸೆ. ಆ ದೇವತೆಗಳಾದರೂ ತಪಸ್ಸಿಗೆ ವಿಘ್ನವನ್ನುಂಟುಮಾಡಲು ಯತ್ನಿಸಿದ್ದೇಕೆ? ಶ್ರೀಹರಿಯು ಹಾಗೆ ಮಾಡಲು ಅವರನ್ನು ಪ್ರೇರಣೆಮಾಡಿದ್ದೇಕೆ? ಇದಕ್ಕೆ ಉತ್ತರ– ಶ್ರೀಹರಿಯ ಸಂಕಲ್ಪಕ್ಕೆ ಆ ಭಾಗವತೋತ್ತಮನ ಕೀರ್ತಿಯನ್ನು ಹೆಚ್ಚಿಸಬೇಕೆಂದು ಬಂದಿದೆ. ಅದಕ್ಕಾಗಿಯೇ ಹೊರತು ತಪಸ್ಸನ್ನು ಹಾಳುಮಾಡುವುದಕ್ಕಲ್ಲ 'ನ ಮೇ ಭಕ್ತಃ ಪ್ರಣಶ್ಯತಿ' ಎಂಬುದು ಶ್ರೀಭಗವಂತನ ಅಭಯವಚನವಲ್ಲವೇ! ಆದ್ದರಿಂದಲೇ–**ಯತ್ರ ದೇವೈಃ ಕೃತೇ ವಿಘ್ನೇ ಖಂಡಿತೋ ನ ಪುಮಾನ್ ಭವೇತ್ । ತತ್ರ ತದ್ಯಶಸೇ ಕುರ್ಯುಃ ನ ತು ತಸ್ಯ ವಿಘಾತಯೇ ॥** ಹಾಗಾದರೆ ಕೆಲವೆಡೆ ವಿಶ್ವಾಮಿತ್ರಾದಿಗಳ ತಪಸ್ಸು ವಿಘ್ನಕ್ಕೊಳಗಾದುದನ್ನು ಕಾಣುತ್ತೇವೆ ಅಂದರೆ–'**ಯತ್ರ ಖಂಡಿತತಾ ತತ್ರ ಖಂಡನಾಯೈವ ಕೇವಲಮ್ । ಸತ್ಯಕಾಮಾ ಯತೋ ದೇವಾಃ ತೇ ಚಿತ್ತಾದ್ಯಭಿಮಾನಿನಃ ॥** ಹೀಗೆ ಮಾಡುವುದೂ ಸಹಸೋದ್ದೇಶವಾಗಿಯೇ. ಆದ್ದರಿಂದ ಅನಧಿಕಾರಿಗಳು ವಿಮೋಹಿತರಾಗಬೇಕು–'**ಅತೋ ವಿಮೋಹನಾಯೈವ ಪ್ರಾಪ್ನುಯುಸ್ತೇ ಪರಾಜಯಮ್ । ತೇಷಾಮಶಕ್ತಿತೋಕ್ತಿಶ್ಚ ವಿಮೋಹಾಯ ಸುರದ್ವಿಷಾಮ್॥**'–ಎಂದು ತಾತ್ಪರ್ಯದಲ್ಲಿ ವಿವರಿಸಲಾಗಿದೆ.

ಒಟ್ಟಿನಲ್ಲಿ ಪರಮಾತ್ಮನ ಸ್ವಾತಂತ್ರ್ಯ–ಪಾರಮ್ಯಾದಿಗಳಂತೆ ಚೇತನಾ ಚೇತನಾತ್ಮಕ ಜಗತ್ತಿನ ಅಸ್ವಾತಂತ್ರ್ಯವೂ, ಪರಮಾತ್ಮನ ನಿಯಮ್ಯತ್ವವೂ ಸ್ಪಷ್ಟವಾಗುತ್ತದೆ.

ಇದಕ್ಕೆ ಈ ಧ್ರುವೋಪಾಖ್ಯಾನದಲ್ಲೇ ಬಂದಿರುವ ಈ ಸಂದರ್ಭವನ್ನು ಗಮನಿಸಬೇಕು.

ವಾಸುದೇವ ಭಗವಂತನು ಧ್ರುವನೆದುರಿನಲ್ಲಿ ನಿಂತಿದ್ದಾನೆ. ಧ್ರುವನಿಗೆ ಪರಮಾತ್ಮನನ್ನು ಸ್ತುತಿಸಬೇಕೆಂಬ ಇಚ್ಛೆ. ಆದರೆ ಏನೂ ಹೊಳೆಯುತ್ತಿಲ್ಲ. ಆಗ ಸರ್ವಾಂತರ್ಯಾಮಿಯಾದ ಶ್ರೀಹರಿಯು ಪ್ರಣವಮಯವಾದ ಶಂಖವನ್ನು ಆತನ ಕೆನ್ನೆಗೆ ಮುಟ್ಟಿಸಿದನು–**'ಕೃತಾಞ್ಜಲಿಂ ಬ್ರಹ್ಮಮಯೇನ ಕಮ್ಬುನಾ ಪಸ್ಪರ್ಶ ಬಾಲಂ ಕೃಪಯಾ ಕಪೋಲೇ ॥'** (೪-೯-೪) ತಕ್ಷಣ ಅವನು ಭಕ್ತಿಭಾವದಿಂದ ಸ್ತುತಿಸತೊಡಗಿದನು. ಧ್ರುವಕೃತವಾದ ಈ ಸ್ತೋತ್ರವು ಗಾಯತ್ರಿಗೆ ಭಾಷ್ಯರೂಪದಲ್ಲಿದೆ. ಸರ್ವೇಂದ್ರಿಯಪ್ರೇರಕತ್ವವೂ, ಸರ್ವೇಂದ್ರಿಯಾಭಿಮಾನಿಗಳಿಂದಾಗುವ ಸಕಲವ್ಯಾಪಾರವೂ ಭಗವದಧೀನ. ಆದ್ದರಿಂದಲೇ ಆ ಸರ್ವಶಕ್ತನಲ್ಲಿ **'ಧಿಯೋ ಯೋ ನಃ ಪ್ರಚೋದಯಾತ್'** ಎಂದು ಪ್ರಾರ್ಥಿಸಿಕೊಳ್ಳುತ್ತಿರಬೇಕು.

ಈ ಸ್ತುತಿಯಲ್ಲಿ ಪರಮಾತ್ಮನ **'ಜನ್ಮಾದ್ಯಸ್ಯ ಯತಃ'** ಎಂಬ ಬ್ರಹ್ಮಮೀಮಾಂಸಾಸೂತ್ರದಿಂದ ಸೂಚ್ಯವಾದ ಸೃಷ್ಟಿ, ಸ್ಥಿತಿ, ಲಯ, ನಿಯಮನ, ಜ್ಞಾನ, ಅಜ್ಞಾನ, ಬಂಧ ಮತ್ತು ಮೋಕ್ಷ–ಇವುಗಳೆಲ್ಲವೂ ಆತನ ಇಚ್ಛಾಶಕ್ತ್ಯಧೀನವೆಂದು ತಿಳಿಸುತ್ತದೆ. ಇದು ಶ್ರೀವಿಷ್ಣುವಿನ ಜೀವ ವೈಲಕ್ಷಣ್ಯವನ್ನೂ, ನಿತ್ಯಮುಕ್ತನೆಂಬುದನ್ನೂ, ಪರಿಶುದ್ಧಜ್ಞಾನಾನಂದ ವಿಗ್ರಹ ನೆಂಬುದನ್ನೂ, ನಿರತಿಶಯಗುಣಮಹಿಮೆಯುಳ್ಳವನೆಂದೂ–ಹೀಗೆಯೇ ಅನೇಕ ಪ್ರಮೇಯಪುಂಜಗಳನ್ನು ತೆರೆದಿಡುತ್ತದೆ. ಪರಮಾತ್ಮನು ಧ್ರುವನಿಗೆ ಇಹದ ರಾಜ್ಯ-ಸುಖ-ಸಂಪತ್ತುಗಳಿರಲಿ ; ಪರದಲ್ಲಿ ಅವನಿಗಾಗಿ ಸೃಜಿಸಿಕೊಟ್ಟ ಶಾಶ್ವತಲೋಕ-ಧ್ರುವಲೋಕ ಎಂತಹುದು? ಅಲ್ಲಿಗೆ ಹೋದವರು ಮರಳಿ ಬರುವಂತಹವರಲ್ಲ. ಇಂತಹ ಧ್ರುವೋಪಾಖ್ಯಾನದ ಫಲ-ಮನನಮಾಡು ವವರಿಗೆ ಶ್ರೀಭಗವಂತನಲ್ಲಿ ಭಕ್ತಿಯುಂಟಾಗುವುದಾಗಿದೆ.

ಭಾಗವತದಲ್ಲಿ 'ಭಿನ್ನಜೀವ, ಭಿನ್ನ ಕರ್ಮ' ಎಂಬುದನ್ನು ಎತ್ತಿತೋರಿ ಸುವ ಆಖ್ಯಾಯಿಕೆ ಎಂದರೆ ಅಂಗಮಹಾರಾಜನದು.

ಅಂಗಮಹಾರಾಜನು ಧ್ರುವನ ವಂಶದಲ್ಲಿಯೇ ಹುಟ್ಟಿದವನು. ಶೀಲ ನಿಧಿ, ಸಾಧು, ಮಹಾತ್ಮಾ, ದ್ವಿಜಪ್ರಿಯ. ಪುತ್ರನನ್ನು ಪಡೆಯುವುದಕ್ಕಾಗಿ ಯಜ್ಞಮಾಡಿದವನು. ಆದರೆ ಅವನಿಗೆ ಹುಟ್ಟಿದ ಮಗ ವೇನ ಕ್ರೂರಿ, ಅಧಾರ್ಮಿಕ, ದುಷ್ಟ. ತನ್ನೊಡನಾಡುವ ಮಕ್ಕಳನ್ನು ಬಲಾತ್ಕಾರದಿಂದ ಹಿಡಿದು ಪಶುಗಳಂತೆ ಪೀಡಿಸಿ ಸಾಯಿಸುತ್ತಿದ್ದನು. ಆತನನ್ನು ದಾರಿಗೆ ತರಲು ಏನೆಲ್ಲ ಪ್ರಯತ್ನಿಸಿದರೂ ಸಾಧ್ಯವಾಗದೇ ಹೋಗಲು ಆತನು ತಡೆಯಲಾರದ ಸಂಕಟಪಟ್ಟು 'ಪುತ್ರಹೀನರೇ ಪುಣ್ಯಶಾಲಿಗಳು. ಅವರು ಹಿಂದಿನ ಜನ್ಮದಲ್ಲಿ ಶ್ರೀಹರಿಯನ್ನು ಆರಾಧನೆಮಾಡಿರಬೇಕು. ಅದರಿಂದಲೇ ಅವರಿಗೆ ಕುಪುತ್ರನು ಮಾಡುವ ಕುಕರ್ಮಗಳಿಂದುಂಟಾಗುವ ತಡೆಯಲಾರದ ಕಷ್ಟವನ್ನು ಅನುಭವಿಸಿದ ಸಂದರ್ಭ ಬರಲಿಲ್ಲ'–ಎಂದು ಮನಸ್ಸಿನಲ್ಲಿ ವಿಚಾರ ಮಾಡತೊಡಗಿದನು. ಒಮ್ಮೆ ಅರ್ಧರಾತ್ರಿಯಲ್ಲಿ ವೇನನನ್ನೂ, ವೇನನ ತಾಯಿನ್ನೂ, ರಾಜ್ಯ-ಕೋಶಗಳನ್ನೂ ತೊರೆದು ವಿರಕ್ತನಾಗಿ ಯಾರಿಗೂ ಸುಳಿವು ಕೊಡದೇ ಅರಣ್ಯಕ್ಕೆ ಹೊರಟುಬಿಟ್ಟನು.

ಅಂಗರಾಜನ ಈ ಕಥೆಯನ್ನು ಕೇಳಿದವರಿಗೆ ತಂದೆಯ ಗುಣ-ಶೀಲ ಗಳನ್ನು ಪಡೆಯದೇ ವೇನನು ಹೇಗೆ ತಾನೇ ದುಷ್ಕರ್ಮಿಯೂ-ದುಷ್ಟನೂ ಆದನೆಂಬ ಜಿಜ್ಞಾಸೆ ಮೂಡದಿರದು. ಅದಕ್ಕೆ ಅವನ ತಾಯಿಯ ವಂಶವೇ ಕಾರಣ. ವೇನನ ತಾಯಿ ಸುನೀಥಾದೇವೀ ಮೃತ್ಯುವಿನ ಪುತ್ರಿ. ಅಧರ್ಮ ವಂಶದಲ್ಲಿ ಜನಿಸಿದವನು ಮೃತ್ಯು. ಬಾಲ್ಯದಿಂದಲೂ ಅವನನ್ನೇ ಅನುಸರಿಸಿ ಬೆಳೆದವನು ವೇನ. ಅಜ್ಜನ ಗುಣವು ಅವನಲ್ಲಿ ಬಂದಿತೆಂದು ಮೇಲು ನೋಟಕ್ಕೆ ತೋರುವ ಕಾರಣ. ಮನನಮಾಡಿದರೆ ಇಲ್ಲಿಯೂ ಸಹ ಅನೇಕ ಪ್ರಮೇಯಗಳು ಸ್ಪಷ್ಟವಾಗುತ್ತವೆ. **'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ'** ಎಂದು ಭಗವದ್ವಚನವಿದ್ದಾಗ್ಯೂ ಕರ್ಮಫಲವನ್ನು ಬಯಸಿ ಯಜ್ಞದಲ್ಲಿ ಪ್ರವೃತ್ತನಾದನೇ ಹೊರತು ನಿಷ್ಕಾಮಭಾವದಿಂದ ಶ್ರೀಭಗವಂತನ ಆರಾಧನಾರೂಪವಾಗಿ ಯಜ್ಞವನ್ನು ಮಾಡಲು ಪ್ರವೃತ್ತನಾಗಲಿಲ್ಲ. ಅಂತಹ ಕರ್ಮ **'ಶ್ರಮ ಏವ ಹಿ ಕೇವಲಂ'**–ಅಷ್ಟೇ ಅಲ್ಲ ; ಅನಿಷ್ಟಫಲಪ್ರದವೂ ಆಗಿಬಿಡಬಹುದೆಂಬ ಎಚ್ಚರ ಈ ಆಖ್ಯಾಯಿಕೆಯಿಂದ ಅರಿಯಬೇಕಾದದ್ದು. ವೇನ ರಾಜನಾದ. ಅದನ್ನು ಹದಿನಾಲ್ಕನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ. ಅಧಿಕಾರವಿಲ್ಲದಿದ್ದಾಗಲೇ ಹುಟ್ಟುಗುಣದಿಂದ ದುಷ್ಟನಾದವನಿಗೆ ಅಧಿಕಾರವು

ಸಿಕ್ಕಮೇಲೆ ಕೇಳಬೇಕೆ? ದುರಭಿಮಾನಿಯಾದ ಅವನು ತಾನೇ ಸರ್ವಶ್ರೇಷ್ಠನೆಂದು ಭಾವಿಸಿಕೊಂಡು ಮಹಾಪುರುಷರನ್ನು ಅವಮಾನಿಸತೊಡಗಿದನು. ಇನ್ನು ಮೇಲೆ ಯಾರೂ ಯಜ್ಞಮಾಡಬಾರದು ; (ನ ಯಷ್ಟವ್ಯಂ) ದಾನ ಮಾಡಬಾರದು ; (ನ ದಾತವ್ಯಂ) ಹವನವನ್ನು ಮಾಡಬಾರದು (ನ ಹೋತವ್ಯಂ)–ಎಂದು ಡಂಗುರಹೊಡೆಸಿದ. ಆತನಿಗೆ ಸದ್ಬುದ್ಧಿಯನ್ನು ಹೇಳಲು ಬಂದ ಮುನಿಗಳಿಗೆ 'ನೀವು ಬಾಲಿಶರು, ಮೂಢರು. ಪ್ರತ್ಯಕ್ಷ ದೇವನಾಗಿದ್ದು ನಿಮಗೆ ವೃತ್ತಿಯನ್ನು ಕೊಡುತ್ತಿರುವ ನನ್ನನ್ನು ಬಿಟ್ಟು ಬೇರೆ ಜಾರನನ್ನು ಉಪಾಸನೆ ಮಾಡುತ್ತಿರುವಿರಲ್ಲ. ಸರ್ವದೇವಮಯನಾದವನು ರಾಜ. ಆದ್ದರಿಂದ ಇನ್ನು ಮುಂದೆ ನನ್ನನ್ನು ಪೂಜಿಸಿ (ಮಾಂ ಯಜಧ್ವಂ) ಕಪ್ಪ-ಕಾಣಿಕೆರೂಪವಾದ ಬಲಿಯನ್ನು ನನಗೇ ಸಮರ್ಪಿಸಿ (ಬಲಿಂ ಚ ಮಹ್ಯಂ ಹರತ) ಅಗ್ರಪೂಜೆಯನ್ನು ಸೇವಿಸುವ ಯೋಗ್ಯತೆ ಮತ್ತು ಅಧಿಕಾರ ನನಗಲ್ಲದೇ–ಬೇರೆ ಯಾರಿಗೆ ತಾನೇ ಇದೆ?" (ಮತ್ತೋऽನ್ಯಃ ಕೋऽಗ್ರಭಾಕ್ ಪುಮಾನ್) ಹೀಗೆ ಧರ್ಮವನ್ನೂ, ಧಾರ್ಮಿಕರನ್ನೂ ಬದಿಗೊತ್ತಿ ಸ್ವೇಚ್ಛಾಚಾರಿಯಾದ ಆ ದುರ್ಮತಿಗೆ ಬುದ್ಧಿ ಹೇಳುವಷ್ಟು ಹೇಳಿ ಸೋತು ಕೊನೆಗೆ ದಯಾಪರರಾದ ಆ ಮುನಿಗಳು 'ಹುಂ' ಕಾರದಿಂದಲೇ ಆ ವೇನನನ್ನು ಸಂಹರಿಸಿಬಿಟ್ಟರು.

ಇದು ಇಂದಿಗೂ ತಾನಾಶಾಹಿಯಾಗಿ (Dictatorship) ವರ್ತಿಸುವವರಿಗೆ ಎಚ್ಚರವನ್ನುಂಟುಮಾಡುವುದಲ್ಲವೇ? ತನ್ನ ಕರ್ತವ್ಯಪಾಲನೆಯನ್ನು ಮಾಡದ ಹರಿವಿಮುಖರಿಗೆ ದುರ್ಗತಿ ಕಟ್ಟಿಟ್ಟದ್ದೆಂದು ಬೋಧಿಸುತ್ತದೆ.

ವೇನನ ತೊಡೆಯನ್ನು ಮಥಿಸಿದಾಗ ಹುಟ್ಟಿದವರು ನಿಷಾದರು. ಕ್ರೂರ ಕರ್ಮಿಗಳು. ಅಂದರೆ ವೇನನಂತಹ ಧರ್ಮದ್ವೇಷಿ-ದುರಹಂಕಾರಿಗಳಿಗೆ ಆಧಾರಭೂತವಾಗಿರುವವರು, ಹಿಂಸೆ, ಲೂಟಿ, ದರೋಡೆ (ಈಗಿನ ಪರಿಸರದ ಪ್ರಕಾರ–ಲಂಚ, ರುಷುವತ್ತು) ಮುಂತಾದ ಪಾಪಕರ್ಮಗಳಲ್ಲಿಯೇ ಆಸಕ್ತಿಯುಳ್ಳವರಾಗಿರುತ್ತಾರೆ.

ಅನಂತರ ಆ ನಿಷಾದರನ್ನು ಕಾಡಿಗೆ ಅಟ್ಟಿ ಮತ್ತೆ ವೇನನ ಬಾಹು ಗಳನ್ನು ಮಥಿಸಿದರು. ಅವುಗಳಿಂದ ಒಂದು ಗಂಡು ಮಗು ಒಂದು ಹೆಣ್ಣು ಮಗುವಿನ ಜೋಡಿ ಜನಿಸಿತು. ಬ್ರಹ್ಮವಾದಿಗಳು ಆ ಅವಳೀಸಂತಾನದ

ಸ್ವರೂಪವನ್ನರಿತುಬಿಟ್ಟರು. **'ಏಷ ಸಾಕ್ಷಾದ್ಧರೇರಂಶೋ ಜಾತೋ ಲೋಕರಿರಕ್ಷಯಾ । ಇಯಂ ಚ ತತ್ಪರಾ ಹಿ ಶ್ರೀಃ ಅನುಜಜ್ಞೇಟಿನ-ಪಾಯಿನೀ ॥** (೪-೧೫-೬)

ಅಂದರೆ ಸಾಕ್ಷಾತ್ ಶ್ರೀಮನ್ನಾರಾಯಣನ ಅಂಶವೇ ಲೋಕರಕ್ಷಣೆಗಾಗಿ ಜನಿಸಿದೆ ಪೃಥುವಿನ ರೂಪದಲ್ಲಿ. ಅಂತೆಯೇ ಅರ್ಚಿಯ ರೂಪದಲ್ಲಿ ನಿರಂತರವಾಗಿ ಶ್ರೀಹರಿಯ ಸೇವೆಯಲ್ಲಿ ಸದಾ ನಿರತಳಾಗಿ ಆತನ ನಿತ್ಯಸಹ ಚಾರಿಣಿಯಾಗಿರುವ ಶ್ರೀಲಕ್ಷ್ಮೀದೇವಿಯೇ ಆವಿರ್ಭವಿಸಿದ್ದಾಳೆ.

ಒಟ್ಟಿನಲ್ಲಿ ವೇನನ ಶರೀರದಲ್ಲಿ ಮೂರು ಗುಣಗಳು, ಮೂರು ಮೂರ್ತಿಗಳಾಗಿ ಆಶ್ರಯಿಸಿಕೊಂಡಿದ್ದುವು. ತಮೋಗುಣಭೂಯಿಷ್ಠವಾದ ವೇನನೆಂಬ ಅಂಶ ವಿಪ್ರಶಾಪದಿಂದ ಹರಿವಿಮುಖನಾಗಿದ್ದ ಕಾರಣ ತಮಸ್ಸಿಗೆ ಹೋಯಿತು. ರಜೋಗುಣದ ಅಂಶ 'ನಿಷಾದ' ಜಾತಿಯಾಗಿ ಮುಂದು ವರೆದರೂ ಕಾಡನ್ನು ಸೇರಿತು. ಸಾತ್ವಿಕಾಂಶವು ದೇವೀಶಕ್ತಿಯಾಗಿ ರಾರಾಜಿಸಿತೆಂದು ಭಾವ.

ಹೊಗಳುವ ವಂದಿ-ಮಾಗಧರನ್ನು ಕುರಿತು ಪೃಥುಚಕ್ರವರ್ತಿಯು ಆಡಿರುವ ಮಾತುಗಳು ಇಂದಿಗೂ ಉಪಾದೇಯವಾಗಿವೆ.

'ಪ್ರೀತಿಯ ಸೂತರೇ! ಹೊಗಳಿಕೆಗೆ ಯೋಗ್ಯವಾದ ಯಾವ ಕರ್ಮ ವನ್ನೂ ನಾವು ಮಾಡಿಲ್ಲ. ಹೀಗಿರುವಾಗ ಬಾಲಕರಂತೆ ನಿಮ್ಮಿಂದ ಹೇಗೆ ಹೊಗಳಿಕೆಯ ಹಾಡನ್ನು ಹಾಡಿಸಿಕೊಳ್ಳೋಣ?' (೪-೧೫-೨೬)

ಅಲ್ಲಿಂದ ಮುಂದೆ ಪೃಥ್ವಿಯು ಅಪೇಕ್ಷಿತವಸ್ತುಗಳನ್ನು ಕೊಡುವಂತೆ ಮಾಡಿದ್ದು (ಗೋದೋಹನ), ದಿಗ್ವಿಜಯ, ಅಶ್ವಮೇಧ. ಆಗ ವಿಘ್ನವನ್ನುಂಟು ಮಾಡುತ್ತಿದ್ದ ಇಂದ್ರನನ್ನೇ ಸಂಹರಿಸಬೇಕೆಂಬ ಸಂಕಲ್ಪಹೊಂದಿದ್ದರೂ ಬ್ರಹ್ಮದೇವರ ಸಮಾಧಾನಕರವಾದ ಮಾತುಗಳಿಂದ ಶಾಂತನಾದದ್ದು, ಯಜ್ಞವನ್ನೇ ಕೈಬಿಟ್ಟದ್ದು, ತನ್ನ ಪ್ರಜಾಪರಿಷತ್ತಿನಲ್ಲಿ ಪೃಥುಮಹಾರಾಜನು ಪ್ರಜೆಗಳಿಗೆ ಜ್ಞಾನೋಪದೇಶಮಾಡಿದ್ದೂ–ವರ್ಣಿತವಾಗಿವೆ. **ಭಕ್ತ್ಯರ್ಥಂ ಭಗವನ್ಮಹಿಮೋಕ್ತಿಃ**–ಎಂಬಂತೆ ಭಗವಂತನ ಮಹಿಮಾತಿಶಯವನ್ನು ಪೃಥು ಮಹಾರಾಜನು ವರ್ಣಿಸಿದ್ದಾನೆ.

ಇಪ್ಪತ್ತೆರಡನೆಯ ಅಧ್ಯಾಯದಲ್ಲಿ ಸನತ್ಕುಮಾರರು ಪೃಥುವಿಗೆ ಮಾಡಿದ ಜ್ಞಾನೋಪದೇಶವು ಸಂಗೃಹೀತವಾಗಿದೆ. ಮುಂದಿನ ಅಧ್ಯಾಯದಲ್ಲಿ ಪೃಥುವಿನ ಮತ್ತು ಅರ್ಚಿಯ ವೈಕುಂಠಗಮನದ ವರ್ಣನೆ ಬಂದಿದೆ. ಪೃಥುವಂಶದ ವರ್ಣನೆ, ರುದ್ರ-ಪ್ರಚೇತಸರ ಸಮಾಗಮ, ಆ ಸಂದರ್ಭದಲ್ಲಿ 'ಜಿತಂ ತ ಆತ್ಮವಿದ್ಧುರ್ಯಸ್ವಸ್ತಯೇ ಸ್ವಸ್ತಿರಸ್ತು ಮೇ' ಎಂದು ಆರಂಭವಾಗುವ ರುದ್ರಗೀತೆ ಬಂದಿದೆ. ಇದರಲ್ಲಿ '**ಅಂಶೋ ನಾನಾವ್ಯಪದೇಶಾತ್**' '**ಗುಹಾಂ ಪ್ರವಿಷ್ಟೌ ಆತ್ಮಾನೌ ತದ್ದರ್ಶನಾತ್**' ಎಂಬ ಸೂತ್ರಗಳ ವ್ಯಾಖ್ಯೆಯನ್ನು ಕಾಣಬಹುದು. ದ್ವಾಸುಪರ್ಣಾದಿ ಶ್ರುತಿಗಳಿಗೆ ವ್ಯಾಖ್ಯಾನ ಮಾಡುತ್ತಿರುವುದನ್ನೂ ಕಾಣಬಹುದು.

ಇಲ್ಲಿ ಪುರಂಜನೋಪಾಖ್ಯಾನವು ಬಹಳ ಸ್ವಾರಸ್ಯವಾಗಿದೆ. ಪ್ರಾಚೀನ ಬರ್ಹಿಯು ಕರ್ಮಕಾಂಡೈಕತತ್ಪರನಾಗಿರುವುದನ್ನು ಕಂಡು ಅವನಿಗೆ ಜ್ಞಾನ-ಭಕ್ತಿಗಳ ಮಹತ್ತ್ವವನ್ನು ತಿಳಿಸಲು ಹೊರಟ ಆಖ್ಯಾಯಿಕೆ ಈ ಪುರಂಜನೋಪಾಖ್ಯಾನ. ಹಿಂಸಾಮೂಲವಾದ ಯಜ್ಞವು ನಿಂದನೀಯ. ಅದನ್ನು ಮಾಡಬಾರದೆಂದು ತಿಳಿಸಲು ಹೊರಟಿರುವುದು ಪುರಂಜನೋಪಾ ಖ್ಯಾನ. ಇದನ್ನು ನಾರದರು ಹೇಳುತ್ತಾರೆ. ಸುಮಾರು ನಾಲ್ಕು ಅಧ್ಯಾಯ ಗಳಲ್ಲಿ ಕಥೆಯನ್ನು ಹೇಳಿ ಅನಂತರ ಅವರೇ ಪುರಂಜನನು ಜೀವನೆಂದೂ, ಅವಿಜ್ಞಾತಮಿತ್ರನೇ ಪರಮಾತ್ಮನೆಂದೂ ಮುಂತಾಗಿ ವಿವರಿಸಿ, ಭಕ್ತಿಯಿಂದ ಮಾತ್ರ ಮುಕ್ತಿಯನ್ನು ಪಡೆಯಲು ಸಾಧ್ಯವೆಂದು ಬೋಧಿಸುತ್ತಾರೆ. ನಾರದರ ಉಪದೇಶದಿಂದ ಪ್ರಾಚೀನಬರ್ಹಿಯು ಮುಕ್ತನಾಗುತ್ತಾನೆ. 'ಭಜ ಸರ್ವಾತ್ಮನಾ ಹರಿಂ'

ಮೂವತ್ತನೆಯ ಅಧ್ಯಾಯವು ಪ್ರಚೇತಸರಿಗೆ ಮಹಾವಿಷ್ಣುವಿನಿಂದ ವರ ದೊರೆತದ್ದನ್ನು ವರ್ಣಿಸುತ್ತದೆ. ಹೀಗೆ ವರ ಪಡೆಯುವ ಅರ್ಹತೆ ಅವರಿಗೆ ರುದ್ರನಿಂದ ಭಗವತ್ತತ್ತ್ವದ ಉಪದೇಶ ಪಡೆದು ಹತ್ತು ಸಾವಿರ ವರ್ಷಗಳ ಕಾಲ ನೀರಿನಲ್ಲಿ ನಿಂತು ಶ್ರೀಮನ್ನಾರಾಯಣನನ್ನು ಕುರಿತು ತಪಶ್ಚರಣ ಮಾಡಿದುದರಿಂದ ಬಂದಿತು. ಪ್ರಚೇತಸರು ಮಾಡಿರುವ ಭಗವಂತನ ಸ್ತುತಿಯಂತೂ ಪ್ರಮೇಯಪುಂಜವಾಗಿದೆ. ಪ್ರಚೇತಸರು ಬ್ರಹ್ಮದೇವರ ಆಣತಿ ಯಂತೆ ಗೃಹಸ್ಥಾಶ್ರಮಿಗಳಾಗಿ ಮಾರಿಷೆಯನ್ನು ವಿವಾಹಮಾಡಿಕೊಂಡರು. ಅವಳ ಹೊಟ್ಟೆಯಲ್ಲಿ ಮತ್ತೆ ದಕ್ಷನು ಹುಟ್ಟಿದನು. ಕರ್ಮಾಚರಣೆಯಲ್ಲಿ

ದಕ್ಷನಾಗಿದ್ದ ಅವನಿಗೆ ದಕ್ಷನೆಂದೇ ಹೆಸರಾಯಿತು. ಅವನು ಪ್ರಜಾಪತಿಯಾಗಿ ಬ್ರಹ್ಮದೇವರಿಂದ ಪಟ್ಟಾಭಿಷಿಕ್ತನಾಗಿ ಈ ಸೃಷ್ಟಿಯನ್ನು ಮುಂದುವರಿಸಿದನು.

ನಾರದರ ಉಪದೇಶದಿಂದ ಪ್ರಚೇತಸರಿಗೆ ಪರಮಪದಪ್ರಾಪ್ತಿಯಾದುದರ ವರ್ಣನೆ ಮೂವತ್ತೊಂದನೆಯ ಅಧ್ಯಾಯದಲ್ಲಿದೆ. ನಾರದರ ಉಪದೇಶದ ಸಾರವನ್ನು **'ಹರ್ಯರ್ಪಿತಾತ್ಮ'** ರಾಗಿ ಎಂಬ ಮಾತಿನಿಂದ ಸಂಗ್ರಹಿಸಬಹುದು.

ಪಂಚಮಸ್ಕಂಧವು ಆರಂಭವಾಗುವುದೇ ಪ್ರಿಯವ್ರತರಾಜನು ಆಧ್ಯಾತ್ಮವಿದ್ಯೆಯನ್ನು ಪಡೆದನಂತರ ಚಕ್ರವರ್ತಿಯಾಗಿ ಭೂಮಂಡಲವನ್ನಾಳುತ್ತಿದ್ದು ಕಡೆಗೆ ವೈರಾಗ್ಯಹೊಂದಿ ಮುಕ್ತಿಯನ್ನು ಪಡೆದನೆಂಬ ದಿವ್ಯ ಚರಿತ್ರೆಯನ್ನು ತಿಳಿಸುವುದಕ್ಕಾಗಿ. ಮುಕ್ತಿಗೆ ಕಾರಣವಾದುದು ಭಕ್ತಿ. ಶ್ರೀಕೃಷ್ಣನಲ್ಲಿ ಆತನಿಗೆ ಹೇಗೆ ಭಕ್ತಿ ಮೂಡಿಬಂದಿತೆಂಬ ಈ ಪ್ರಶ್ನೆಯಿಂದ ಧ್ವನಿತವಾಗುವ ವಿಚಾರವೆಂದರೆ : ನಿಜವಾದ ಭಕ್ತಿ ಇದ್ದರೆ ವಿರಕ್ತಿ ಇರುತ್ತದೆ. ವಿರಕ್ತಿ ಎಂಬುದು ನಿವೃತ್ತಿಧರ್ಮ. ರಾಜ್ಯವಾಳುವುದೆಂದರೆ ಪ್ರವೃತ್ತಿಧರ್ಮ. ನಿವೃತ್ತಿಧರ್ಮ-ಪ್ರವೃತ್ತಿಧರ್ಮಗಳೆರಡೂ ಪರಸ್ಪರವಿರೋಧಿಗಳು. ಎರಡೂ ಒಂದೆಡೆ ಇರುವುದು ಹೇಗೆ ಸಾಧ್ಯ?

ಸ್ವಾಯಂಭುವಮನುವಿಗೆ ತನ್ನ ಮಗನ ಯೋಗ್ಯತೆಯ ಅರಿವಿತ್ತು. ಆದ್ದರಿಂದ ಅವನು 'ನೀನು ರಾಜನಾಗಿ ರಾಜ್ಯವನ್ನಾಳಬೇಕು'–ಎಂದು ಮಗನಿಗೆ ಆದೇಶವನ್ನಿತ್ತನು. ಪ್ರಿಯವ್ರತನು ಸಂಸಾರದ ಭಯದಿಂದ ರಾಜ್ಯಭಾರವನ್ನು ಮಾಡಲು ನಿರಾಕರಿಸಿದ್ದರು. ಇದನ್ನರಿತೇ ಹಿರಣ್ಯಗರ್ಭನು ಪ್ರಿಯ ವ್ರತನ ಬಳಿಗೆ ಸತ್ಯಲೋಕದಿಂದ ಇಳಿದು ಬಂದು ಪ್ರಿಯವ್ರತನನ್ನು ಸಂಬೋಧಿಸಿ ಎಲ್ಲರೂ ಭಗವದಧೀನರೆಂದು ಮುಖ್ಯಪ್ರಮೇಯವನ್ನು ಉಪದೇಶಿಸಿದನು ಮತ್ತು ಶ್ರೀಭಗವಂತನ ಅನುಗ್ರಹವನ್ನು ಸಂಪಾದಿಸಲು **'ವಿಮುಕ್ತಸಂಗಃ ಪ್ರಕೃತಿಂ ಭಜಸ್ವ'** ಅಂದರೆ : ಅಸಂಗಶಸ್ತ್ರದಿಂದ ಭವಪಾಶವನ್ನು ಕತ್ತರಿಸಿ ಸಹಜವಾದ ಕರ್ಮವನ್ನು ಮಾಡಬೇಕೆಂಬುದು, **'ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ'** ಎಂಬುದು ಆ ಉಪದೇಶದ ತಿರುಳು. ಇಲ್ಲಿ ಸಾರಾರ್ಥಬೋಧಿನೀವ್ಯಾಖ್ಯಾನದಿಂದ ಅಗತ್ಯವಾದ ವಿಚಾರವನ್ನು ಅಡಿಟಿಪ್ಪಣಿಯಲ್ಲಿ ಸಂಗ್ರಹಿಸಿದ್ದಾರೆ. (ಪುಟ ೧೦೪೭)

ಪ್ರಿಯವ್ರತನ ಸಾಧನೆ ಸಾಮಾನ್ಯವಾದುದಲ್ಲ. ಸರ್ವಶಕ್ತನಾದ ಶ್ರೀಭಗವಂತನನ್ನು ಬಿಟ್ಟರೆ ಬೇರೆ ಯಾರಿಂದಲೂ ಸಾಧಿಸಲಾರದುದನ್ನು ಸಾಧಿಸಿದ. ರಾತ್ರಿಯ ಹೇಳ ಹೆಸರೇ ಇಲ್ಲದಂತೆ ಸೂರ್ಯನಷ್ಟು ಪ್ರಕಾಶ ಮಾನವಾದ ರಥವನ್ನೇರಿ ಏಳು ಬಾರಿ ಮೇರುವನ್ನು ಪ್ರದಕ್ಷಿಣೆ ಮಾಡಿದ. ಸಪ್ತಸಮುದ್ರಗಳನ್ನೂ, ಸಪ್ತದ್ವೀಪಗಳನ್ನೂ ನಿರ್ಮಿಸಿದ. 'ಭೌಮಂ ದಿವ್ಯಂ ಮಾನುಷಂ ಚ ಮಹಿತ್ವಂ ಕರ್ಮ ಯೋಗಜಂ' ಅಂದರೆ : ಪಾತಾಳಲೋಕ, ಸ್ವರ್ಗಲೋಕ ಹಾಗೂ ಭೂಲೋಕಗಳ ಐಶ್ವರ್ಯವನ್ನು ಕರ್ಮಾನುಷ್ಠಾನಗಳಿಂದಲೂ, ಯೋಗಗಳಿಂದಲೂ ಸಂಪಾದಿಸಿದ ಐಶ್ವರ್ಯ ವನ್ನು ನರಕಸದೃಶವೆಂದು ಭಾವಿಸಿ ತ್ಯಜಿಸಿಬಿಟ್ಟನು. ವೈರಾಗ್ಯಚಕ್ರವರ್ತಿ ಯಾದ. ಇವನು ತನ್ನ ಏಳು ಜನ ಮಕ್ಕಳಿಗೆ ಏಳು ದ್ವೀಪಗಳ ಆಧಿಪತ್ಯವನ್ನು ವಹಿಸಿಕೊಟ್ಟವನಾಗಿ ಆತ್ಮೋದ್ಧಾರದ ಮಾರ್ಗವನ್ನನುಸರಿಸಿದನು.

ಪಂಚಮಸ್ಕಂಧದ ಎರಡನೆಯ ಅಧ್ಯಾಯ ಆಗ್ನೀಧ್ರನ ಚರಿತ್ರೆಗೆ ಮೀಸಲು. ಅವನು ಪೂರ್ವಚಿತ್ತಿಯಲ್ಲಿ ಒಂಬತ್ತು ಮಕ್ಕಳನ್ನು ಪಡೆದನು. ಅವರೇ ನಾಭಿ, ಕಿಂಪುರುಷ, ಹರಿವರ್ಷ, ಇಲಾವೃತ, ರಮ್ಯಕ, ಹಿರಣ್ಮಯ, ಕುರು, ಭದ್ರಾಶ್ವ ಮತ್ತು ಕೇತುಮಾಲರೆಂಬ ಒಂಬತ್ತು ಮಂದಿ. (೫-೨-೧೯ ಅವರಿಗೆ ಜಂಬೂದ್ವೀಪವನ್ನು ಒಂಬತ್ತು ಭಾಗ (ವರ್ಷ) ಗಳನ್ನಾಗಿ ಮಾಡಿ ಅವರವರ ಹೆಸರನ್ನಿಟ್ಟು ಕೊಟ್ಟನು.

ನಾಭಿಯ ಚರಿತ್ರೆಯನ್ನು ಮೂರನೆಯ ಅಧ್ಯಾಯದಲ್ಲಿ ಹೇಳಿದ್ದಾರೆ. ಅವನು ಪ್ರಜಾಕಾಮನೆಯಿಂದ ಮೇರುದೇವಿಯನ್ನು ಸ್ವೀಕರಿಸಿ ಶ್ರೀಭಗವಂತ ನಾದ ಯಜ್ಞಪುರುಷನನ್ನು ಆರಾಧಿಸಿದನು.

ಪರಮಾತ್ಮನು ಅವ್ಯಕ್ತಸ್ವರೂಪಿಯಾದರೂ ಭಕ್ತರಿಗಾಗಿ ದಿವ್ಯಸುಂದರ ಮಂಗಳಮೂರ್ತಿಯಾಗಿ ದರ್ಶನವನ್ನು ಕೊಟ್ಟು ಅನುಗ್ರಹಿಸುತ್ತಾನೆಂಬುವ ಮುಖ್ಯಪ್ರಮೇಯವನ್ನಿಲ್ಲಿ ಕಾಣಬಹುದು. ಅಂತೆಯೇ ಪರಮಾತ್ಮನ ಸಂತೃಪ್ತಿಯು–ಯಜ್ಞವಿಧಿಯಿಂದಾಗಲೀ, ದ್ರವ್ಯಗಳಿಂದಾಗಲೀ ಆಗದು. ಭಕ್ತಿಯೊಂದೇ ಮುಖ್ಯವಾದುದು. ಈ ಭಾಗವು 'ಭಕ್ತ್ಯೈವ ತುಷ್ಟಿಮಭ್ಯೇತಿ ವಿಷ್ಣುರ್ನಾನ್ಯೇನ ಕೇನಚಿತ್' ಎಂಬ ಶ್ರುತಿಯನ್ನೇ ವ್ಯಾಖ್ಯಾನಿಸುತ್ತದೆ. ನಾಭಿರಾಜನ ಪರವಾಗಿ ಋತ್ವಿಜರು ಮಾಡಿರುವ ಶ್ರೀಭಗವಂತನ ಸ್ತುತಿಯು

ಅತ್ಯಂತಮನನೀಯವಾಗಿದೆ. ಋತ್ವಿಜರು 'ಸ್ವಾಮಿ ಭಗವಂತ! ನಿನ್ನಂಥ ಮಕ್ಕಳನ್ನು ನಾಭಿಗೆ ಅನುಗ್ರಹಿಸು'–ಎಂದು ಬೇಡಿಕೊಂಡಿದ್ದನ್ನು ಉಲ್ಲೇಖಿಸಿ **'ಮಮಾಹಮೇವಾಭಿರೂಪಃ ಕೈವಲ್ಯಾತ್'**–ನನಗೆ ನಾನೇ ಸದೃಶ. ಆದ್ದರಿಂದ ನಾನೇ **'ಅವತರಿಷ್ಯಾಮಿ'** = ಅವತರಿಸುತ್ತೇನೆ. **'ಆತ್ಮತುಲ್ಯ-ಮನುಪಲಬ್ಧಮಾನಃ'** (೪-೩-೧೮) ಎಂದು ಹೇಳುತ್ತಿರುವುದು ಪರಮಾತ್ಮ ಅಸದೃಶ, ಭಕ್ತವತ್ಸಲ–ಮುಂತಾದ ಅನೇಕ ಪ್ರಮೇಯಗಳನ್ನು ದೃಢೀಕರಿಸುತ್ತದೆ.

ಇಷ್ಟು ಪೂರ್ವಸಿದ್ಧತೆಗಳನ್ನು ಮಾಡಿಕೊಂಡು ಭಗವಂತನು ನಾಭಿ ರಾಜನ ಮಗನಾಗಿ, ವೃಷಭದೇವನೆಂಬ ಹೆಸರಿನಿಂದ ಅವತರಿಸಿದನು ಮತ್ತು ಲೋಕೋತ್ತರಲೀಲೆಯನ್ನು ತೋರಿದನು. ಇದೇ ನಾಲ್ಕನೇ ಅಧ್ಯಾಯದಲ್ಲಿ ನಿರೂಪಿತವಾಗಿರುವುದು. ಗುರುಕುಲವಾಸ, ಗೃಹಸ್ಥಾಶ್ರಮಸ್ವೀಕಾರ, ಜಯಂತೀದೇವಿಯೊಡನೆ ಆದರ್ಶದಾಂಪತ್ಯ, ನೂರು ಮಂದಿ ಸ್ವಸದೃಶ ಸಂತಾನವನ್ನು ಪಡೆದುದು–ಮುಂತಾದ ಲೋಕಸಂಗ್ರಹಾರ್ಥವಾಗಿ ನಡೆಸಿದ ಋಷಭದೇವನ ಲೀಲೆಗಳನ್ನು ವಿವರಿಸಲಾಗಿದೆ.

ಋಷಭದೇವನು ಪುತ್ರರಿಗೆ ಮಾಡಿದ ಉಪದೇಶ ಹಾಗೂ ಋಷಭ ದೇವನು ಅವಧೂತನಾದುದು ಐದನೆಯ ಅಧ್ಯಾಯದ ವಸ್ತು. 'ಈ ದೇಹ ಕೇವಲ ಐಹಿಕಸುಖಭೋಗಕ್ಕಲ್ಲ. ಇರುವುದು ತಪಸ್ಸನ್ನಾಚರಿಸಲಿಕ್ಕಾಗಿ, ತನ್ಮೂಲಕ ಅನಂತವಾದ ಬ್ರಹ್ಮಾನಂದ ದೊರೆಯುವುದು–ಮುಂತಾಗಿ ಉಪದೇಶಿಸುವಾಗ ಸತ್ಸಂಗ ಅಥವಾ ಮಹತ್ಸೇವೆಯ ಮಹತ್ವವನ್ನು ತಿಳಿಸಿ ಮಹಾತ್ಮರ ಲಕ್ಷಣವನ್ನು ತಿಳಿಸಲಾಗಿದೆ :

'ಮಹಾಂತಸ್ತೇ ಸಮಚಿತ್ತಾಃ ಪ್ರಶಾಂತಾಃ ವಿಮನ್ಯವಃ ಸುಹೃದಃ ಸಾಧವೋ ಯೇ ।' ಅಂದರೆ ಸಮಚಿತ್ತರೂ, ಪ್ರಶಾಂತರೂ, ಕ್ರೋಧ ರಹಿತರೂ, ಸರ್ವರಿಗೂ ಹಿತವನ್ನು ಚಿಂತಿಸುವವರೂ, ಸದಾಚಾರ ಸಂಪನ್ನರೂ ಆದ ಸಾಧುಗಳೇ ಮಹಾಪುರುಷರು ಎನ್ನಲಾಗಿದೆ. ಧರ್ಮೋಪದೇಶಕ್ಕಾಗಿಯೇ ಮೀಸಲಾದ ಅವತಾರ ಋಷಭಾವತಾರ. ಕೊನೆಯಲ್ಲಿ ಋಷಭದೇವ ಅವಧೂತನಾಗಿ ಮನೆ-ಮಠಗಳನ್ನು ತೊರೆದು ಹೊರಟಿದ್ದರ ವರ್ಣನೆ ಈ ಅಧ್ಯಾಯದಲ್ಲಿ ಬಂದಿದೆ.

ಇಲ್ಲಿಯೇ ಋಷಭದೇವನ ಜ್ಯೇಷ್ಠಪುತ್ರನೂ ಶ್ರೇಷ್ಠನೂ ಆದ 'ಭರತ' ನ ವರ್ಣನೆ ಇದೆ. ಇವನು ಪರಮಾತ್ಮನ ಪರಮಭಕ್ತ. ರಾಜ್ಯಾಡಳಿತದಲ್ಲಿ ದಕ್ಷ. ಇವನಿಂದಾಗಿ ನಮ್ಮ ನಾಡಿಗೆ ಭಾರತ ಎಂದು ಖ್ಯಾತಿ ಬಂದಿತು.

ಅಧ್ಯಾಯದ ಕೊನೆಯಲ್ಲಿ ಋಷಭದೇವನ 'ಅಜಗರವೃತ್ತಿ' ಯ ನಿರೂಪಣೆ ಇದೆ. ಆರನೆಯ ಅಧ್ಯಾಯದಲ್ಲಿ ಋಷಭದೇವನ ದೇಹತ್ಯಾಗ ಅಂದರೆ : ಅಂತರ್ಧಾನನಾದುದರ ಪ್ರತಿಪಾದನೆ ಇದೆ. ಈ ಲೀಲೆಯ ಉದ್ದೇಶ ವಾದರೂ ಯೋಗಿಗಳಿಗೆ ದೇಹತ್ಯಾಗಮಾಡುವ ವಿಧಿಯನ್ನು ತಿಳಿಸುವು ದಾಗಿತ್ತು. ಏಳನೆಯ ಅಧ್ಯಾಯದಿಂದ ಭರತೋಪಾಖ್ಯಾನ ನಿರೂಪಿತವಿದೆ. ಭರತನು ಮಹಾಭಾಗವತನೇ. ಆದರೆ ತಂದೆಯ ಆಜ್ಞೆಯನ್ನು ಶಿರಸಾವಹಿಸಿ ರಾಜ್ಯಭಾರವನ್ನು ಮಾಡತೊಡಗಿದನು. ಅವನ ರಾಣಿ ಪಂಚಜನೀ. ವಿಶ್ವರೂಪನ ಪುತ್ರಿ. ಅವಳೊಂದಿಗೆ ತನ್ನ ರಾಜ ಭೋಗ ಪ್ರಾರಬ್ಧವು ನೀಗುವವರೆಗೆ ಅಂದರೆ ಒಂದು ಕೋಟಿ ವರ್ಷಗಳು ರಾಜ್ಯವನ್ನಾಳಿದ. ನಂತರ ತನ್ನ ಮಕ್ಕಳಿಗೆ ರಾಜ್ಯವಹಿಸಿಕೊಟ್ಟು ಶ್ರೀಭಗವಂತನ ಅನುಗ್ರಹಶಕ್ತಿಗೆ ಪಾತ್ರನಾಗಲು ಪುಲಹಾಶ್ರಮಕ್ಕೆ ಹೊರಟುಹೋದನು.

ಭರತನು ಎಷ್ಟೇ ಜಿತೇಂದ್ರಿಯನಾಗಿದ್ದರೂ ಪ್ರಾರಬ್ಧಕರ್ಮಶೇಷದಿಂದ ಜಿಂಕೆಯ ಮೋಹಕ್ಕೆ ಸಿಲುಕಿ ಜಿಂಕೆಯ ಯೋನಿಯಲ್ಲಿ ಜನ್ಮ ತಾಳಿದುದು– ಎಂಟನೆಯ ಅಧ್ಯಾಯದ ವಿಷಯ. ಇದರಿಂದ ಸಂಗದೋಷ ನಮಗರಿವಿಲ್ಲ ದಂತೆ ಶ್ರೀಭಗವಂತನ ಸ್ಮರಣೆಯನ್ನು ತಪ್ಪಿಸಿ ಎಂತಹ ಅನರ್ಥವನ್ನುಂಟು ಮಾಡುತ್ತದೆ?–ಎಂಬುದು ಈ ಅಧ್ಯಾಯದಲ್ಲಿ ಅರಿಯಬೇಕಾದ ತತ್ತ್ವ.

ಭರತನು ಗಂಡಕೀ ಶಾಲಾಗ್ರಾಮಕ್ಷೇತ್ರದಲ್ಲಿ ದೇಹತ್ಯಾಗಮಾಡಿದ ಮೇಲೆ ಬ್ರಾಹ್ಮಣಕುಲದಲ್ಲಿ ಹುಟ್ಟಿದನು. ಯೋಗಭ್ರಷ್ಟರು ಉತ್ತಮ ಕುಲದಲ್ಲಿ ಹುಟ್ಟಿ ತಮ್ಮ ಸಾಧನೆಯನ್ನು ಮುಂದುವರಿಸುವರು–ಎಂಬ ಗೀತಾವಚನಕ್ಕೆ ನಿದರ್ಶನವಾಗಿದೆ ಭರತನ ಕಥೆ. ಅವನು ಅಲ್ಲಿ ಬೇಕೆಂತಲೇ ಜಡಭರತನಾಗಿದ್ದುಬಿಟ್ಟನು. ಭದ್ರಕಾಳಿಗೆ ಬಲಿಕೊಡಲು ಕರೆತಂದಿರುವ ರೆಂದರಿತಾಗ್ಯೂ ನಿರ್ವಿಕಾರಚಿತ್ತನಾಗಿದ್ದುದು ಅವನ ಹಿರಿಮೆ. ದೇವಿಯೇ ಮೃತ್ಯುಮುಖದಿಂದ ಪಾರುಮಾಡಿಸಿದಳು. ಭಗವದ್ಭಕ್ತರ ಮೇಲೆ ಶ್ರೀಭಗವಂತನ ಅಸದೃಶವಾತ್ಸಲ್ಯಕ್ಕೆ ಒಂದು ನಿದರ್ಶನರೂಪವಾಗಿದೆ–ಈ ಕಥೆ.

ಇಲ್ಲಿ ವೇದವ್ಯಾಸರು ಒಂದು ಎಚ್ಚರವನ್ನು ಮಾನವಕೋಟಿಯ ಹಿತದೃಷ್ಟಿಯಿಂದ ಹೇಳಿದ್ದಾರೆ. '**ಏವಮೇವ ಖಲು ಮಹದಭಿಚಾರಾತಿ ಕ್ರಮಃ ಕಾರ್ತ್ಸ್ನ್ಯೇನಾತ್ಮನೇ ಫಲತಿ** ' ಅಂದರೆ : (ಜಡಭರತನನ್ನು ಬಲಿ ಕೊಡಲು ಯತ್ನಿಸಿದ ವಾಮಮಾರ್ಗಾವಲಂಬಿಗಳನ್ನು ದೇವಿಯೇ ಕೊಂದು ಅವರ ತಲೆಬುರುಡೆಗಳನ್ನು ಹೇಗೆ ಚೆಂಡಾಡಿದಳೋ) ಹಾಗೆ ಮಹಾಪುರುಷರಿಗೆ (ತಿಳಿದು ಅಥವಾ ತಿಳಿಯದೆ) ಅತ್ಯಾಚಾರದ ಅಪಾಚರವನ್ನೆಸಗಿದರೆ ಅದು ಮಾಡಿದವರ ಮೇಲೆ ಬಂದೆರಗುವುದು. ಇದು ಸತ್ಯ–ಎಂದು.

ಮುಂದಿನ ಅಧ್ಯಾಯದಲ್ಲಿ ಜಡಭರತನಂತಹ ಮಹಾತ್ಮರ ಮಹಿಮೆ ಯನ್ನರಿಯದೇ ಅಪಚಾರವನ್ನೆಸಗಿದವನಾದರೂ–ಭಗವದ್ಭಕ್ತನೂ ವಿವೇಕಿಯೂ ಆಗಿದ್ದ ಕಾರಣ ರಹೂಗಣನ ಉದ್ಧಾರವಾದ ಕಥೆಯನ್ನು ನಿರೂಪಿಸಲಾಗಿದೆ. ರಹೂಗಣನಿಗೆ ದೇಹಾತ್ಮವಿವೇಕಪುರಸ್ಸರವಾಗಿ ನೀಡಿರುವ ಉಪದೇಶವು ಮನನೀಯ.

ಈ ಉಪದೇಶವು ಹನ್ನೊಂದನೆಯ ಅಧ್ಯಾಯ ಮೊದಲುಗೊಂಡು ನಾಲ್ಕು ಅಧ್ಯಾಯಗಳಷ್ಟು ವಿಸ್ತಾರವಾಗಿದೆ. ಈ ಉಪದೇಶದಲ್ಲಿ ಜೀವ, ಜಡ ಹಾಗೂ ಪರಮಾತ್ಮವಿಷಯಕವಾದ ತತ್ತ್ವಜ್ಞಾನವು ಮೂಡಿ ಬಂದಿರುತ್ತದೆ. ಭವಾಟವಿಯ ವರ್ಣನೆಯೊಂದಿಗೆ ಅದರಿಂದ ಪಾರಾಗಲು ನಿಷ್ಕಾಮ ಕರ್ಮಯೋಗವನ್ನೂ ಸೂಚಿಸಲಾಗಿದೆ.

ಹದಿನೈದನೆಯ ಅಧ್ಯಾಯದಲ್ಲಿ ಭರತವಂಶದಲ್ಲಿಯ ಮಹಾನು ಭಾವರ ಉಲ್ಲೇಖವಿದೆ. ಪ್ರಿಯವ್ರತನಿಂದ ಹಿಡಿದು ವಿರಜನವರೆಗೂ ಆ ವಂಶವನ್ನು ಉಲ್ಲೇಖಿಸಿ, ಸಾಕಪ್ಪ (ಇತ್ಯಲಂ) ಎಂದು ಆ ಪುಣ್ಯಶ್ಲೋಕರ ಉಲ್ಲೇಖ ಇಲ್ಲಿಗೆ ಸಾಕೆಂದು ಕೈ ಬಿಟ್ಟಿದ್ದಾರೆ.

ಮುಂದೆ ಭೂಗೋಲ-ಖಗೋಲಗಳ ವರ್ಣನೆ ಬರುತ್ತದೆ.

ಭಾರತ ದರ್ಶನದವರ ಉಪಕಾರ ಆಚಂದ್ರಾರ್ಕ ನೆನೆಯಬೇಕಾದುದು. ಅನೇಕ ಸಂಪುಟಗಳಲ್ಲಿ ಮೂಲಸಂಹಿತೆಯನ್ನೂ ಮತ್ತು ಮೂಲಾನು ಸಾರಿಯಾದ ಕನ್ನಡ ತಾತ್ಪರ್ಯವನ್ನೂ ಪ್ರಕಟಿಸುತ್ತಿರುವುದು ಯಶಸ್ವಿ ಯಾಗಲೆಂದು ಹಾರೈಸಬೇಕಾದುದು ನಮ್ಮ ನಿಮ್ಮ ಕರ್ತವ್ಯ. ಗ್ರಂಥವನ್ನು ಕೊಂಡು ಓದುವ ಮೂಲಕ ನಾವು ನಮ್ಮ ಕರ್ತವ್ಯವನ್ನು ನಿರ್ವಹಿಸಬೇಕು.

ರಾಮಾಯಣ, ಮಹಾಭಾರತ ಹಾಗೂ ಭಾಗವತಾದಿ ಗ್ರಂಥಗಳು ಒಂದು ಕೋಮಿಗೆ ಅಥವಾ ಒಂದು ಧರ್ಮದವರಿಗೆ ಮಾತ್ರ ಮೀಸಲಾದ ಗ್ರಂಥಗಳಲ್ಲ. ಈ ಗ್ರಂಥಗಳಲ್ಲಿ ಮಾನವಮಾತ್ರನ ಉದ್ಧಾರದ ತತ್ತ್ವಗಳು ಅಡಕವಾಗಿವೆ. ಇಂದು ತಾಂಡವವಾಡುತ್ತಿರುವ ಭ್ರಷ್ಟಾಚಾರ-ಹಿಂಸಾಚಾರಾದಿ ಗಳನ್ನು ಕಾನೂನಿನ ಬಲದಿಂದ ತೊಡೆದು ಹಾಕಲು ಎಂದೆಂದಿಗೂ ಸಾಧ್ಯ ವಿಲ್ಲ. ಪ್ರಜೆಗಳು ಸುಸಂಸ್ಕೃತರಾದಾಗ ಮಾತ್ರ ಸಮಾಜದಲ್ಲಿ, ರಾಷ್ಟ್ರದಲ್ಲಿ ಅಂತೆಯೇ ಅಂತಾರಾಷ್ಟ್ರೀಯಕ್ಷೇತ್ರದಲ್ಲಿ ಶಾಂತಿ-ಸಮಾಧಾನಗಳು ನೆಲೆಸಲು ಸಾಧ್ಯ. ಅಂತಹ ಸುಸಂಸ್ಕಾರವನ್ನೊದಗಿಸುವ ಸಾಮರ್ಥ್ಯ ಈ ಗ್ರಂಥಗಳಿಗಿದೆ.

ಸಂಸ್ಕೃತವಾಙ್ಮಯದಲ್ಲಿ ಅನುಪಮರತ್ನವೆನಿಸುವ ಕೃತಿ ಶ್ರೀಮದ್ಭಾಗ ವತ. ಭಕ್ತಿಶಾಸ್ತ್ರದ ಸರ್ವಸ್ವ. ಅಪ್ರತಿಮ ಇತಿಹಾಸಕಾರ ವೇದವ್ಯಾಸರ ಮೇರುಕೃತಿ. ಭಾಗವತಧರ್ಮ ಸರ್ವಾನುಷ್ಠೇಯವಾದುದು. ಆ ನಿಷ್ಕಪಟವಾದ ಧರ್ಮವನ್ನು ಇದು ತಿಳಿಸುವುದು. ಜಿಜ್ಞಾಸುಗಳಿಗೆ ತತ್ತ್ವ ರಹಸ್ಯವನ್ನು ತಿಳಿಸುವ, ಅಜ್ಞರಿಗೆ ಭಕ್ತಿರಸಾಯನವನ್ನುಣಿಸುವ ಸಮಾಧಿಯಲ್ಲಿ ರಚಿಸಲಾದ ಈ ಕೃತಿ ಸಾತ್ತ್ವಿಕಪುರಾಣಾವತಂಸ.

ಇದನ್ನು ಅನೇಕ ವ್ಯಾಖ್ಯಾನಗಳ ಬೆಳಕಿನಲ್ಲಿ ಪರಿಶೀಲಿಸಿ ಸರ್ವರಿಗೂ ಅರ್ಥವಾಗುವಂತೆ ಗಂಗಾಪ್ರವಾಹದಂತೆ ಸಾಗುವ ತಿಳಿಗನ್ನಡದಲ್ಲಿ ರಸವತ್ತಾಗಿ ತಾತ್ಪರ್ಯವನ್ನು ಬರೆದು ಕೊಟ್ಟಿರುವ ಶ್ರೀ ಶ್ರೀ ರಂಗಪ್ರಿಯಮಹಾದೇಶಿಕ ಸ್ವಾಮಿಗಳವರ ಪರಮಕಾರುಣ್ಯವನ್ನು ಕನ್ನಡ ಜನಸ್ತೋಮ ಕೃತಜ್ಞತಾ ಪೂರ್ವಕ ಸ್ಮರಿಸಿ ಅವರ ಅಡಿದಾವರೆಗಳಲ್ಲಿ ಶ್ರದ್ಧಾ-ಭಕ್ತಿಗಳ ನಮನವನ್ನು ಸಲ್ಲಿಸುತ್ತದೆ. ಸಂಪಾದಕಮಂಡಲಿಯವರಿಗೂ ಮತ್ತು ಪ್ರಕಾಶಕರಾದ ಭಾರತ ದರ್ಶನದವರಿಗೂ ಕೃತಜ್ಞತಾಪೂರ್ವಕ ವಂದನೆಗಳು.

ಈ ಸಂಪುಟಕ್ಕೆ ಮುನ್ನುಡಿ ಬರೆಯುವ ಅರ್ಹತೆ ನನಗಿದೆ ಎಂದು ನಾನಂದುಕೊಂಡಿಲ್ಲ. ಹಿರಿಯರು ಒಂದು ಕಾರ್ಯವನ್ನು ವಹಿಸಿದಾಗ ಭಗವತ್ಸೇವಾ—ಎಂದು ಭಾವಿಸಿ ಕರ್ತವ್ಯವನ್ನು ಮಾಡುವುದನ್ನು ಮಾತ್ರ ಬಲ್ಲೆ. ಇದನ್ನು ಯಥಾಮತಿ ನಿರ್ವಹಿಸಿದ್ದೇನೆ.

ಕೊನೆಯದಾಗಿ ಒಂದು ಅರಿಕೆ : ಶಿವಶರಣರೂ ಹರಿದಾಸರೂ—ತತ್ತ್ವ ಜ್ಞಾನವನ್ನೂ ಹರಿಭಕ್ತಿಯನ್ನೂ ಮನೆ-ಮನೆಗೆ ಮನ-ಮನಕ್ಕೆ ಮುಟ್ಟಿಸಿದ

ಕಾಲವನ್ನು ಈ ಕರ್ನಾಟಕ ಕಂಡಿದೆ. ಆಗ ಈ ನಾಡು ಸ್ವರ್ಣಯುಗವನ್ನು ಕಂಡಿತ್ತು. ಇತಿಹಾಸದಲ್ಲಿ ಮರೆಯಲಾಗದ ವೈಭವದಿಂದ ಮೆರೆದಿತ್ತು. ಈಗ ಪುನಃ ನಾವು ಉನ್ನತಸ್ಥಿತಿಯನ್ನು ಬಯಸುವುದಾದರೆ ಇಂತಹ ಗ್ರಂಥಗಳನ್ನು ಓದಬೇಕು. ಸಾಧ್ಯವಿದ್ದಷ್ಟೂ ಆ ತತ್ತ್ವಬೋಧೆಯನ್ನು ಅನುಷ್ಠಾನದಲ್ಲಿಟ್ಟು ಕೊಳ್ಳಬೇಕು. ಐಹಿಕ-ಆಮುಷ್ಮಿಕಗಳೆರಡನ್ನೂ ಸಾಧಿಸಿದಾಗಲೇ ಪೂರ್ಣತೆ ಬರುವುದು. ಸ್ವಾರ್ಥಾಂಧಕಾರದಲ್ಲಿ ಮುಳುಗಿರುವ ನಾವು ದಾರಿಗಾಣದೇ ತತ್ತರಿಸುತ್ತಿದ್ದೇವೆ. ಇಂಥ ಸದ್ಗ್ರಂಥದೀವಿಗೆಯನ್ನು ಹಿಡಿದು ಸನ್ಮಾರ್ಗದಲ್ಲಿ ನಡೆಯೋಣ. ಅಂತಹ ಸದ್ಬುದ್ಧಿಯನ್ನು ಸರ್ವೇಂದ್ರಿಯಪ್ರೇರಕನಾದ ಶ್ರೀಹರಿಯು ಸರ್ವರಿಗೂ ಕೊಡಲಿ—ಎಂದು ಕಳಕಳಿಯ ಪ್ರಾರ್ಥನೆ ಯೊಂದಿಗೆ ಈ ನುಡಿಪುಷ್ಪವನ್ನು ಗ್ರಂಥಪ್ರತಿಪಾದ್ಯನಾದ ಭಗವಂತನ ಅಡಿದಾವರೆಗಳಲ್ಲೂ, ಭಗವದ್‌ಭಕ್ತಿಗಾಗಿ ಹಾತೊರೆಯುವ ಸಜ್ಜನರ ಕರಕಮಲಗಳಲ್ಲೂ ಸಮರ್ಪಿಸಿ ವಿನಮ್ರನಾಗಿ ವಿರಮಿಸುತ್ತೇನೆ.

ಆಂಗೀರಸ ಶಿವರಾತ್ರಿ — ಇತಿ ಸುಜನವಿಧೇಯ
19-2-1993 — ಎಂ. ಕೆ. ಭಾರತೀರಮಣಾಚಾರ್ಯ

ವಿದ್ಯಾಭೂಷಣ
ಡಾ|| ಎಂ. ಕೆ. ಭಾರತೀರಮಣಾಚಾರ್ಯ,
266/8, ಮೂರನೇ ಮುಖ್ಯರಸ್ತೆ,
ಹನುಮಂತನಗರ, ಬೆಂಗಳೂರು 560 019

ದ್ವಿತೀಯ ಮುದ್ರಣದ ಪ್ರಸ್ತಾವನೆ

ದಯಾಮಯನಾದ ಪರಮಾತ್ಮನ ದಯೆಯಿಂದ ಶ್ರೀಮದ್ಭಾಗವತದ ಮಹಾಮಂಗಳದನಂತರ ಭಾಗವತದ 3ನೆಯ ಸಂಪುಟದ ಪುನರ್ಮುದ್ರಣ ವನ್ನು ಮುಗಿಸುತ್ತಿದ್ದೇವೆ. ಭಾಗವತದಲ್ಲಿ ಇನ್ನೂ 4 ಸಂಪುಟಗಳ ಪುನರ್ಮು ದ್ರಣವಾಗಬೇಕಾಗಿದೆ. ರಾಮಾಯಣ ವಿಭಾಗದಲ್ಲಿ 1-3-4-6-9-10 ಈ 6 ಸಂಪುಟಗಳು ಮತ್ತು ಮಹಾಭಾರತದ ವಿಭಾಗದಲ್ಲಿ 22 ಸಂಪುಟಗಳು ಪುನರ್ಮುದ್ರಣವಾಗಬೇಕಾಗಿದೆ. ಮುಂದೆ ಪುನರ್ಮುದ್ರಣದ ಕಾರ್ಯವು ಸತತವಾಗಿ ನಡೆಯಲಿರುವುದರಿಂದ ಭಾಗವತದಿಂದ ಪ್ರಾರಂಭಿಸಿ ಪುನರ್ಮುದ್ರಣವನ್ನು ಮುಗಿಸುವ ಆಶಯವಿದೆ.

ಭಾಗವತದ ಪೂರ್ಣಮಾಲೆಗೆ ಪ್ರಸಕ್ತ ಇರುವ ಬೆಲೆಯಂತೆ ಗ್ರಾಹಕರಿಂದ ಮುಂಗಡವಾಗಿ ಹಣ ಪಡೆದುಕೊಳ್ಳಲು ನಿಶ್ಚಯಿಸಲಾಗಿದೆ. ಭಾಗವತದ 9 ಸಾಧಾರಣ ಪ್ರತಿಗಳಿಗೆ 234/- ರೂ.ಗಳು. ಕ್ಯಾಲಿಕೋ ಪ್ರತಿಗಳಿಗೆ 270/- ರೂ. ಗಳು. ಪ್ಲಾಸ್ಟಿಕ್ ಹೊದ್ದಿಕೆಯೊಡನೆ ಅನುಕ್ರಮವಾಗಿ 270/- ರೂ. ಮತ್ತು 306/- ರೂ. ಗಳಾಗುತ್ತವೆ. ಇರುವ ಬೆಲೆಯು ಪರಿಷ್ಕಾರವಾಗುವ ಮುನ್ನ ಕನ್ನಡ ಬಂಧುಗಳು ಇದರ ಸೌಲಭ್ಯವನ್ನು ಪಡೆದುಕೊಳ್ಳುವರೆಂದು ಆಶಿಸಲಾಗಿದೆ. ನಮ್ಮ ಈ ಪುನರ್ಮುದ್ರಣಕಾರ್ಯವು ನಿರ್ವಿಘ್ನವಾಗಿ ನೆರವೇರಲೆಂಬ ಭಗತ್ಪ್ರಾರ್ಥನೆಯೊಡನೆ ವಿರಮಿಸುವೆವು.

—ಪ್ರಕಾಶಕರು.

ತೃತೀಯ ಮುದ್ರಣದ ಪ್ರಸ್ತಾವನೆ

ದಯಾಮಯನಾದ ಪರಮಾತ್ಮನ ಕರುಣೆಯಿಂದಲೂ ಗುರು ಭಗವಂತನ ದಿವ್ಯಾಶೀರ್ವಾದಗಳಿಂದಲೂ ಸತ್ಪುರುಷರ ಸಹಕಾರದಿಂದಲೂ 3ನೇ ಸಂಪುಟದ 3ನೆಯ ಪುನರ್ಮುದ್ರಣವನ್ನು ಮುಗಿಸುತ್ತಿದ್ದೇವೆ. ಇದರ ಮುದ್ರಣದಿಂದಾಗಿ ರಾಮಾಯಣ, ಭಾಗವತಗಳ ವಿಭಾಗದಲ್ಲಿ ಒಂದು ವರ್ಷ ಕಾಲವಾದರೂ ಪುನರ್ಮುದ್ರಣ ಮಾಡಬೇಕಾಗಿಲ್ಲ. ಇದೊಂದು ಸಂತಸದ ವಿಷಯ. ಈ ಒಂದು ವರ್ಷದ ಅವಧಿಯಲ್ಲಿ ಮಹಾಭಾರತದ 9 ಸಂಪುಟಗಳನ್ನು ಪುನರ್ಮುದ್ರಣ ಮಾಡಲು ಸಂಕಲ್ಪಿಸಲಾಗಿದೆ. ದಯಾಮಯನಾದ ಭಗವಂತನು ಇದನ್ನು ಆಗುಮಾಡಿಸಿಕೊಡಬೇಕು. ಸಾರ್ವಜನಿಕ ವಿದ್ಯಾ ಇಲಾಖೆಯಿಂದ ಈ ಮೂರು ಗ್ರಂಥಗಳನ್ನು ಹೈಸ್ಕೂಲ್ ಮತ್ತು ಅಪ್ಪರ್ ಪ್ರೈಮರಿ ಸ್ಕೂಲ್‌ಗಳ ಪುಸ್ತಕ ಭಂಡಾರಕ್ಕೆ ತೆಗೆದುಕೊಳ್ಳಬಹುದೆಂಬ ಸುತ್ತೋಲೆಯು ಹೊರಟಿದೆ. ನಮ್ಮ ಗ್ರಾಹಕರೆಲ್ಲರೂ ಶ್ರಮವಹಿಸಿ ಅವರವರ ಪರಿಸರದಲ್ಲಿರುವ ಶಾಲೆಗಳಿಗೆ ಮುಟ್ಟಿಸಲು ಪ್ರಯತ್ನಿಸಬೇಕಾಗಿ ವಿನಂತಿಸುತ್ತೇವೆ. ಪರಮಾತ್ಮನ ದಯೆಯಿಂದ ಸಮಸ್ತರಿಗೂ ಸುಖ-ಶಾಂತಿಗಳು ಲಭಿಸಲೆಂದು ಪ್ರಾರ್ಥಿಸುತ್ತೇವೆ.

—ಪ್ರಕಾಶಕರು.

ಶ್ರೀಮದ್ಭಾಗವತ-ಮೂರನೆಯ ಸಂಪುಟ

ಅಧ್ಯಾಯಾನುಕ್ರಮಣಿಕೆ ಮತ್ತು ವಿಷಯಾನುಕ್ರಮಣಿಕೆ

(ವಿ. ಸೂ. ಮೊದಲನೆಯದು : ಮೂಲ ಶ್ಲೋಕಗಳ ಅಧ್ಯಾಯಗಳ ಪುಟಸಂಖ್ಯೆ-
ಎರಡನೆಯದು : ಅನುವಾದದಲ್ಲಿರುವ ವಿಷಯಗಳ ಪುಟಸಂಖ್ಯೆ)

ಚತುರ್ಥಸ್ಕಂಧ

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಶ್ರೀಮಜ್ಜಗದ್ಗುರು ಶಂಕರಾಚಾರ್ಯ
ಶ್ರೀಮದ್ರಾಮಚಂದ್ರಾಪುರಮಠಸ್ಥ



ಶ್ರೀಮದ್ರಾಘವೇಂದ್ರಭಾರತೀ ಸ್ವಾಮಿಭಿಃ

ಅಸ್ಮದತ್ಯಂತ ಪ್ರಿಯಶಿಷ್ಯ ಶ್ರೀಯುತ ಕೇಶವ ಸುಬ್ರಹ್ಮಣ್ಯ ಕೌಶಿಕರು,
ಸಂಪಾದಕರು, ಭಾರತ ದರ್ಶನ ಪ್ರಕಾಶನ, ತ್ಯಾಗರಾಜನಗರ
ಬೆಂಗಳೂರು - 28 ಇವರಿಗೆ

ಶ್ರೀಮನ್ನಾರಾಯಣಸ್ಮರಣಪುರಸ್ಸರಂ ಸಂದಿಷ್ಟೋಽಯಂ ಸಂದೇಶಃ

ಅದಾಗಿ – ಶ್ರೀಸವಾರಿಯು ಆರಾಧ್ಯ ಶ್ರೀ ಸೀತಾರಾಮಚಂದ್ರ, ಚಂದ್ರಮೌಳೀಶ್ವರ, ಶ್ರೀರಾಜರಾಜೇಶ್ವರೀ, ಶ್ರೀದೇವತಾ ದಿವ್ಯಸನ್ನಿಧಿಯಲ್ಲಿ ಸಮಸ್ತಜನತೆಯ ಯೋಗ-ಕ್ಷೇಮಗಳನ್ನು ಸಂಪ್ರಾರ್ಥಿಸುತ್ತಾ ಸದ್ಯಃ ಈ ಮುಕ್ಕಾಮಿನಲ್ಲಿ ಕ್ಷೇಮದಿಂದ ವಸತಿಮಾಡಿದೆ.

ಶ್ರೀಮದ್ಭಾಗವತಮಹಾಪುರಾಣವು ಮಾನವರ ಉದ್ಧಾರಕ್ಕೆ ಭೂಲೋಕದ ಕಾಮಧೇನು-ಕಲ್ಪವೃಕ್ಷಗಳೆಂದೂ, ಇದರ ಮಹತಿಯನ್ನು ಸರಿಯಾಗಿ ತಿಳಿಸಿದಂತಾಗಲಾರದು.

ಶ್ರೀದತ್ತೋ ನಾರದೋ ವ್ಯಾಸಃ ಶುಕಶ್ಚ ಪವನಾತ್ಮಜಃ ।
ಕಾರ್ತವೀರ್ಯಶ್ಚ ಗೋರಕ್ಷಃ ಸಪ್ತೈತೇ ಸ್ಮೃತಿಗಾಮಿನಃ ॥ –ಎಂಬಂತೆ

ಸ್ಮರಣಮಾತ್ರದಿಂದ ಭಗವದ್ಭಕ್ತರಿಗೆ ಮಾರ್ಗದರ್ಶನವನ್ನಿತ್ತು ಉದ್ಧರಿಸುವವರ ಸಾಲಿನಲ್ಲಿ ಸೇರಿದ ಅವಧೂತಶ್ರೇಷ್ಠರಾದ ಭಗವಾನ್ ಶುಕ ಮುಖೋದ್ಗತವಾದ ಈ ಗ್ರಂಥವನ್ನು ಸಂಪುಟ-ಸಂಪುಟವಾಗಿ, ಪ್ರಕಾಶ ಪಡಿಸುವ ನೀವು–ಇದೀಗ ಮೂರನೆಯ ಸಂಪುಟವನ್ನು ಹೊರತಂದು ಸದ್ಯ ದಲ್ಲೇ ಪ್ರಕಾಶಿಸಲಿರುವ ಸಂಗತಿ ತಿಳಿದು ಬಹುಸಂತೋಷವಾಯಿತು. ಈಗ ಪ್ರತ್ಯಕ್ಷವಾಗಿ ಆಕಾಶದಲ್ಲಿ ಧ್ರುವಮಂಡಲವನ್ನು ಕಾಣುತ್ತೇವೆ. ಭಕ್ತಿಯಿಂದ ಪರಮಾತ್ಮಾನುಗ್ರಹವನ್ನು ಬಾಲ್ಯದಲ್ಲೇ ಪಡೆದ ಧ್ರುವನ ಚರಿತ್ರೆ, ಮನುಷ್ಯ ದೇಹವನ್ನೇ ಉದ್ದೇಶಿಸಿರುವ ಪುರಂಜನೋಪಾಖ್ಯಾನ, ಹಾಗೂ ದಕ್ಷಿಣ ಕರ್ನಾಟಕ ಕುಟಚಾದ್ರಿ ತಪ್ಪಲುಪ್ರದೇಶ ಪ್ರಸ್ತಾಪವಿರುವ ಋಷಭದೇವ ಚರಿತ್ರೆ, ಭರತ-ರಹೂಗಣರ ಸಂವಾದ–ಇತ್ಯಾದಿ ಭಕ್ತಿ, ವೈರಾಗ್ಯ, ಪರಮಾತ್ಮಜ್ಞಾನ, ಶ್ರೀದೇವತಾಸ್ತೋತ್ರ–ಇತ್ಯಾದಿಗಳಿಂದ ತುಂಬಿ, ಪರಮಹಂಸಪುರಾಣವೆಂದು ಪ್ರಥಿತವಾದ ಶ್ರೀಮದ್ಭಾಗವತದ ಈ ಸಂಪುಟದ ಬಿಡುಗಡೆ ಸಮಾರಂಭವು ಸರಾಗ ಸಾಗಲೆಂದೂ, ನಿಮ್ಮ ಮುಂದಿನ ಸಂಪುಟಪ್ರಕಾಶನ ಕಾರ್ಯವೂ ಸಹ ಇದರಂತೆ ಉತ್ತಮರೀತಿ ಸಾಗುವಂತಾಗಲೆಂದೂ, ಇದರಲ್ಲಿ ಭಾಗವಹಿಸಿ ದವರಿಗೆಲ್ಲರಿಗೂ ದೈವಾನುಗ್ರಹವುಂಟಾಗಲೆಂದೂ–ಸುವರ್ಣಮಂತ್ರಾಕ್ಷತೆ ಯೊಂದಿಗೆ ಹಾರೈಸುತ್ತೇವೆ.

ಇತಿ ಶ್ರೀಮನ್ನಾರಾಯಣಸ್ಮೃತಯಃ

ಮಿತಿ : ಶ್ರೀ ಆಂಗೀರಸ ಸಂವತ್ಸರ ಮಾಘ ಬಹುಳ, ಅಮಾವಾಸ್ಯೆಯು
(ತಾ॥ 21-2-93) ರವಿವಾಸರೇ

ವಸತಿ : ಶ್ರೀ ತುಂಗಾತೀರಸ್ಥ ಶ್ರೀತೀರ್ಥರಾಜಪುರವಿರಾಜಿತ,
ಶ್ರೀರಾಮಚಂದ್ರಾಪುರಮಠೇ ತೀರ್ಥಹಳ್ಳಿ.

ಶ್ರೀಮಹಾಗಣಪತಯೇ ನಮಃ ಶ್ರೀಮಹಾಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ತೃತೀಯ ಸಂಪುಟಃ

ಶ್ರೀಮದ್ಭಾಗವತೇ-ಚತುರ್ಥಸ್ಕನ್ಧಃ

ಅಥಾಷ್ಟಮೋಽಧ್ಯಾಯಃ

ಜನ್ಮಾದ್ಯಸ್ಯ ಯತೋಽನ್ವಯಾದಿತರತ-
ಶ್ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮ ಹೃದಾ ಯ ಆದಿಕವಯೇ
ಮುಹ್ಯನ್ತಿ ಯತ್ಸೂರಯಃ ।
ತೇಜೋವಾರಿಮೃದಾಂ ಯಥಾ ವಿನಿಮಯೋ
ಯತ್ರ ತ್ರಿಸರ್ಗೋಽಮೃಷಾ
ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ
ಸತ್ಯಂ ಪರಂ ಧೀಮಹಿ ॥

ಮೈತ್ರೇಯ ಉವಾಚ :

ಸನಕಾದ್ಯಾ ನಾರದಶ್ಚ ಋಭುರ್ಹಂಸೋಽರುಣಿರ್ಯತಿಃ ।
ನೈತೇ ಗೃಹಾನ್ಬ್ರಹ್ಮಸುತಾ ಹ್ಯಾವಸನ್ನೂರ್ಧ್ವರೇತಸಃ ॥೧॥

ಮೃಷಾಧರ್ಮಸ್ಯ ಭಾರ್ಯಾಸೀದ್ದಮ್ಭಂ ಮಾಯಾಂ ಚ ಶತ್ರುಹನ್ ।
ಅಸೂತ ಮಿಥುನಂ ತತ್ತು ನಿರ್ಋತಿರ್ಜಗೃಹೇಽಪ್ರಜಃ ॥೨॥

ತಯೋಃ ಸಮಭವಲ್ಲೋಭೋ ನಿಕೃತಿಶ್ಚ ಮಹಾಮತೇ ।
ತಾಭ್ಯಾಂ ಕ್ರೋಧಶ್ಚ ಹಿಂಸಾ ಚ ಯದ್ದುರುಕ್ತಿಃ ಸ್ವಸಾ ಕಲಿಃ ॥೩॥

ದುರುಕ್ತೌ ಕಲಿರಾಧತ್ತ ಭಯಂ ಮೃತ್ಯುಂ ಚ ಸತ್ತಮ ।
ತಯೋಶ್ಚ ಮಿಥುನಂ ಜಜ್ಞೇ ಯಾತನಾ ನಿರಯಸ್ತಥಾ ॥೪॥

ಸಂಗ್ರಹೇಣ ಮಯಾಖ್ಯಾತಃ ಪ್ರತಿಸರ್ಗಸ್ತವಾನಘ ।
ತ್ರಿಃಶ್ರುತ್ವೈತತ್ಪುಮಾನ್ಪುಣ್ಯಂ ವಿಧುನೋತ್ಯಾತ್ಮನೋ ಮಲಮ್ ॥೫॥

ಅಥಾತಃ ಕೀರ್ತಯೇ ವಂಶಂ ಪುಣ್ಯಕೀರ್ತೇಃ ಕುರೂದ್ವಹ ।
ಸ್ವಾಯಮ್ಭುವಸ್ಯಾಪಿ ಮನೋರ್ಹರೇರಂಶಾಂಶಜನ್ಮನಃ ॥೬॥

ಪ್ರಿಯವ್ರತೋತ್ತಾನಪಾದೌ ಶತರೂಪಾಪತೇಃ ಸುತೌ ।
ವಾಸುದೇವಸ್ಯ ಕಲಯಾ ರಕ್ಷಾಯಾಂ ಜಗತಃ ಸ್ಥಿತೌ ॥೭॥

ಜಾಯೇ ಉತ್ತಾನಪಾದಸ್ಯ ಸುನೀತಿಃ ಸುರುಚಿಸ್ತಯೋಃ ।
ಸುರುಚಿಃ ಪ್ರೇಯಸೀ ಪತ್ಯುರ್ನೇತರಾ ಯತ್ಸುತೋ ಧ್ರುವಃ ॥೮॥

ಏಕದಾ ಸುರುಚೇಃ ಪುತ್ರಮಙ್ಕಮಾರೋಪ್ಯ ಲಾಲಯನ್ ।
ಉತ್ತಮಂ ನಾರುರುಕ್ಷನ್ತಂ ಧ್ರುವಂ ರಾಜಾಭ್ಯನನ್ದತ ॥೯॥

ತಥಾ ಚಿಕೀರ್ಷಮಾಣಂ ತಂ ಸಪತ್ನ್ಯಾಸ್ತನಯಂ ಧ್ರುವಮ್ ।
ಸುರುಚಿಃ ಶೃಣ್ವತೋ ರಾಜ್ಞಃ ಸೇರ್ಷ್ಯಮಾಹಾತಿಗರ್ವಿತಾ ॥೧೦॥

ನ ವತ್ಸ ನೃಪತೇರ್ಧಿಷ್ಣ್ಯಂ ಭವಾನಾರೋಢುಮರ್ಹತಿ ।
ನ ಗೃಹೀತೋ ಮಯಾ ಯತ್ತ್ವಂ ಕುಕ್ಷಾವಪಿ ನೃಪಾತ್ಮಜಃ ॥೧೧॥

ಬಾಲೋಽಸಿ ಬತ ನಾತ್ಮಾನಮನ್ಯಸ್ತ್ರೀಗರ್ಭಸಮ್ಭೃತಮ್ ।
ನೂನಂ ವೇದ ಭವಾನ್ಯಸ್ಯ ದುರ್ಲಭೇಽರ್ಥೇ ಮನೋರಥಃ ॥೧೨॥

ತಪಸಾರಾಧ್ಯ ಪುರುಷಂ ತಸ್ಯೈವಾನುಗ್ರಹೇಣ ಮೇ ।
ಗರ್ಭೇ ತ್ವಂ ಸಾಧಯಾತ್ಮಾನಂ ಯದೀಚ್ಛಸಿ ನೃಪಾಸನಮ್ ॥೧೩॥

ಮೈತ್ರೇಯ ಉವಾಚ :

ಮಾತುಃ ಸಪತ್ನ್ಯಾಃ ಸ ದುರುಕ್ತಿವಿದ್ಧಃ
ಶ್ವಸನ್ರುಷಾ ದಣ್ಡಹತೋ ಯಥಾಹಿಃ ।
ಹಿತ್ವಾ ಮಿಷನ್ತಂ ಪಿತರಂ ಸನ್ನವಾಚಂ
ಜಗಾಮ ಮಾತುಃ ಪ್ರರುದನ್ಸಕಾಶಮ್ ॥೧೪॥

ತಂ ನಿಃಶ್ವಸನ್ತಂ ಸ್ಫುರಿತಾಧರೋಷ್ಠಂ
ಸುನೀತಿರುತ್ಸಙ್ಗ ಉದೂಹ್ಯ ಬಾಲಮ್ ।
ನಿಶಮ್ಯ ತತ್ಪೌರಮುಖಾನ್ನಿತಾನ್ತಂ
ಸಾ ವಿವ್ಯಥೇ ಯದ್ಗದಿತಂ ಸಪತ್ನ್ಯಾಃ ॥೧೫॥

ಸೋತ್ಸೃಜ್ಯ ಧೈರ್ಯಂ ವಿಲಲಾಪ ಶೋಕ-
ದಾವಾಗ್ನಿನಾ ದಾವಲತೇವ ಬಾಲಾ ।
ವಾಕ್ಯಂ ಸಪತ್ನ್ಯಾಃ ಸ್ಮರತೀ ಸರೋಜ
ಶ್ರಿಯಾ ದೃಶಾ ಬಾಷ್ಪಕಲಾಮುವಾಹ ॥೧೬॥

ದೀರ್ಘಂ ಶ್ವಸನ್ತೀ ವೃಜಿನಸ್ಯ ಪಾರ-
ಮಪಶ್ಯತೀ ಬಾಲಕಮಾಹ ಬಾಲಾ ।
ಮಾಮಙ್ಗಲಂ ತಾತ ಪರೇಷು ಮಂಸ್ಥಾ
ಭುಙ್ಕ್ತೇ ಜನೋ ಯತ್ಪರದುಃಖದಸ್ತತ್ ॥೧೭॥

ಸತ್ಯಂ ಸುರುಚ್ಯಾಭಿಹಿತಂ ಭವಾನ್ಮೇ
ಯದ್ದುರ್ಭಗಾಯಾ ಉದರೇ ಗೃಹೀತಃ ।
ಸ್ತನ್ಯೇನ ವೃದ್ಧಶ್ಚ ವಿಲಜ್ಜತೇ ಯಾಂ
ಭಾರ್ಯೇತಿ ವಾ ವೋಢುಮಿಡಸ್ಪತಿರ್ಮಾಮ್ ॥೧೮॥

ಆತಿಷ್ಠ ತತ್ತಾತ ವಿಮತ್ಸರಸ್ತ್ವ-
ಮುಕ್ತಂ ಸಮಾತ್ರಾಪಿ ಯದವ್ಯಲೀಕಮ್ ।
ಆರಾಧಯಾಧೋಕ್ಷಜಪಾದಪದ್ಮಂ
ಯದೀಚ್ಛಸೇಽಧ್ಯಾಸನಮುತ್ತಮೋ ಯಥಾ ॥೧೯॥

ಯಸ್ಯಾಙ್ಘ್ರಿಪದ್ಮಂ ಪರಿಚರ್ಯ ವಿಶ್ವ-
ವಿಭಾವನಾಯಾತ್ತಗುಣಾಭಿಪತ್ತೇಃ ।
ಅಜೋಽಧ್ಯತಿಷ್ಠತ್ಖಲು ಪಾರಮೇಷ್ಠ್ಯಂ
ಪದಂ ಜಿತಾತ್ಮಶ್ವಸನಾಭಿವನ್ದ್ಯಮ್ ॥೨೦॥

ತಥಾ ಮನುರ್ವೋ ಭಗವಾನ್ಪಿತಾಮಹೋ
ಯಮೇಕಮತ್ಯಾ ಪುರುದಕ್ಷಿಣೈರ್ಮಖೈಃ ।
ಇಷ್ಟ್ವಾಭಿಪೇದೇ ದುರವಾಪಮನ್ಯತೋ
ಭೌಮಂ ಸುಖಂ ದಿವ್ಯಮಥಾಪವರ್ಗ್ಯಮ್ ॥೨೧॥

ತಮೇವ ವತ್ಸಾಶ್ರಯ ಭೃತ್ಯವತ್ಸಲಂ
ಮುಮುಕ್ಷುಭಿರ್ಮೃಗ್ಯಪದಾಬ್ಜಪದ್ಧತಿಮ್ ।
ಅನನ್ಯಭಾವೇ ನಿಜಧರ್ಮಭಾವಿತೇ
ಮನಸ್ಯವಸ್ಥಾಪ್ಯ ಭಜಸ್ವ ಪೂರುಷಮ್ ॥೨೨॥

ನಾನ್ಯಂ ತತಃ ಪದ್ಮಪಲಾಶಲೋಚನಾ-
ದ್ದುಃಖಚ್ಛಿದಂ ತೇ ಮೃಗಯಾಮಿ ಕಂಚನ ।
ಯೋ ಮೃಗ್ಯತೇ ಹಸ್ತಗೃಹೀತಪದ್ಮಯಾ
ಶ್ರಿಯೇತರೈರಙ್ಗ ವಿಮೃಗ್ಯಮಾಣಯಾ ॥೨೩॥

ಮೈತ್ರೇಯ ಉವಾಚ :

ಏವಂ ಸಂಜಲ್ಪಿತಂ ಮಾತುರಾಕರ್ಣ್ಯಾರ್ಥಾಗಮಂ ವಚಃ ।
ಸಂನಿಯಮ್ಯಾತ್ಮನಾತ್ಮಾನಂ ನಿಶ್ಚಕ್ರಾಮ ಪಿತುಃ ಪುರಾತ್ ॥೨೪॥

ನಾರದಸ್ತದುಪಾಕರ್ಣ್ಯ ಜ್ಞಾತ್ವಾ ತಸ್ಯ ಚಿಕೀರ್ಷಿತಮ್ ।
ಸ್ಪೃಷ್ಟ್ವಾ ಮೂರ್ಧನ್ಯಘಘ್ನೇನ ಪಾಣಿನಾ ಪ್ರಾಹ ವಿಸ್ಮಿತಃ ॥೨೫॥

ಅಹೋ ತೇಜಃ ಕ್ಷತ್ರಿಯಾಣಾಂ ಮಾನಭಙ್ಗಮಮೃಷ್ಯತಾಮ್ ।
ಬಾಲೋಽಪ್ಯಯಂ ಹೃದಾ ಧತ್ತೇ ಯತ್ಸಮಾತುರಸದ್ವಚಃ ॥೨೬॥

ನಾರದ ಉವಾಚ :

ನಾಧುನಾಪ್ಯವಮಾನಂ ತೇ ಸಮ್ಮಾನಂ ವಾಪಿ ಪುತ್ರಕ ।
ಲಕ್ಷಯಾಮಃ ಕುಮಾರಸ್ಯ ಸಕ್ತಸ್ಯ ಕ್ರೀಡನಾದಿಷು ॥೨೭॥

ವಿಕಲ್ಪೇ ವಿದ್ಯಮಾನೇಽಪಿ ನ ಹ್ಯಸಂತೋಷಹೇತವಃ ।
ಪುಂಸೋ ಮೋಹಮೃತೇ ಭಿನ್ನಾ ಯಲ್ಲೋಕೇ ನಿಜಕರ್ಮಭಿಃ ॥೨೮॥

ಪರಿತುಷ್ಯೇತ್ತತಸ್ತಾತ ತಾವನ್ಮಾತ್ರೇಣ ಪೂರುಷಃ ।
ದೈವೋಪಪಾದಿತಂ ಯಾವದ್ವೀಕ್ಷ್ಯೇಶ್ವರಗತಿಂ ಬುಧಃ ॥೨೯॥

ಅಥಮಾತ್ರೋಪದಿಷ್ಟೇನ ಯೋಗೇನಾವರುತ್ಸಸಿ ।
ಯತ್ಪ್ರಸಾದಂ ಸ ವೈ ಪುಂಸಾಂ ದುರಾರಾಧ್ಯೋ ಮತೋ ಮಮ ॥೩೦॥

ಮುನಯಃ ಪದವೀಂ ಯಸ್ಯ ನಿಃಸಙ್ಗೇನೋರುಜನ್ಮಭಿಃ ।
ನ ವಿದುರ್ಮೃಗಯನ್ತೋಽಪಿ ತೀವ್ರಯೋಗಸಮಾಧಿನಾ ॥೩೧॥

ಅತೋ ನಿವರ್ತತಾಮೇಷ ನಿರ್ಬನ್ಧಸ್ತವ ನಿಷ್ಫಲಃ ।
ಯತಿಷ್ಯತಿ ಭವಾನ್ಕಾಲೇ ಶ್ರೇಯಸಾಂ ಸಮುಪಸ್ಥಿತೇ ॥೩೨॥

ಯಸ್ಯ ಯದ್ದೈವವಿಹಿತಂ ಸ ತೇನ ಸುಖ ದುಃಖಯೋಃ ।
ಆತ್ಮಾನಾಂ ತೋಷಯನ್ದೇಹೀ ತಮಸಃ ಪಾರಮೃಚ್ಛತಿ ॥೩೩॥

ಗುಣಾಧಿಕಾನ್ಮುದಂ ಲಿಪ್ಸೇದನುಕ್ರೋಶಂ ಗುಣಾಧಮಾತ್ ।
ಮೈತ್ರೀಂ ಸಮಾನಾದನ್ವಿಚ್ಛೇನ್ನ ತಾಪೈರಭಿಭೂಯತೇ ॥೩೪॥

ಧ್ರುವ ಉವಾಚ :

ಸೋಽಯಂ ಶಮೋ ಭಗವತಾ ಸುಖದುಃಖಹತಾತ್ಮನಾಮ್ ।
ದರ್ಶಿತಃ ಕೃಪಯಾ ಪುಂಸಾಂ ದುರ್ದರ್ಶೋಽಸ್ಮದ್ವಿಧೈಸ್ತು ಯಃ ॥೩೫॥

ಅಥಾಪಿ ಮೇಽವಿನೀತಸ್ಯ ಕ್ಷಾತ್ರಂ ಘೋರಮುಪೇಯುಷಃ ।
ಸುರುಚ್ಯಾ ದುರ್ವಚೋಬಾಣೈರ್ನ ಭಿನ್ನೇ ಶ್ರಯತೇ ಹೃದಿ ॥೩೬॥

ಪದಂ ತ್ರಿಭುವನೋತ್ಕೃಷ್ಟಂ ಜಿಗೀಷೋಃ ಸಾಧು ವರ್ತ್ಮ ಮೇ ।
ಬ್ರೂಹ್ಯಸ್ಮತ್ಪಿತೃಭಿರ್ಬ್ರಹ್ಮನ್ನನ್ಯೈರಪ್ಯನಧಿಷ್ಠಿತಮ್ ॥೩೭॥

ನೂನಂ ಭವಾನ್ಭಗವತೋ ಯೋಽಙ್ಗಜಃ ಪರಮೇಷ್ಠಿನಃ ।
ವಿತುದನ್ನಟತೇ ವೀಣಾಂ ಹಿತಾರ್ಥಂ ಜಗತೋಽರ್ಕವತ್ ॥೩೮॥

ಮೈತ್ರೇಯ ಉವಾಚ:

ಇತ್ಯುದಾಹೃತಮಾಕರ್ಣ್ಯ ಭಗವಾನ್ನಾರದಸ್ತದಾ ।
ಪ್ರೀತಃ ಪ್ರತ್ಯಾಹ ತಂ ಬಾಲಂ ಸದ್ವಾಕ್ಯಮನುಕಮ್ಪಯಾ ||೩೯||

ನಾರದ ಉವಾಚ:

ಜನನ್ಯಾಭಿಹಿತಃ ಪನ್ಥಾಃ ಸ ವೈ ನಿಃಶ್ರೇಯಸಸ್ಯ ತೇ ।
ಭಗವಾನ್ವಾಸುದೇವಸ್ತಂ ಭಜ ತತ್ಪ್ರವಣಾತ್ಮನಾ ||೪೦||

ಧರ್ಮಾರ್ಥಕಾಮಮೋಕ್ಷಾಖ್ಯಂ ಯ ಇಚ್ಛೇಚ್ಛ್ರೇಯ ಆತ್ಮನಃ ।
ಏಕಮೇವ ಹರೇಸ್ತತ್ರ ಕಾರಣಂ ಪಾದಸೇವನಮ್ ||೪೧||

ತತ್ತಾತ ಗಚ್ಛ ಭದ್ರಂ ತೇ ಯಮುನಾಯಾಸ್ತಟಂ ಶುಚಿ ।
ಪುಣ್ಯಂ ಮಧುವನಂ ಯತ್ರ ಸಾಂನಿಧ್ಯಂ ನಿತ್ಯ ದಾ ಹರೇಃ ||೪೨||

ಸ್ನಾತ್ವಾನುಸವನಂ ತಸ್ಮಿನ್ಕಾಲಿನ್ದ್ಯಾಃ ಸಲಿಲೇ ಶಿವೇ ।
ಕೃತ್ವೋಚಿತಾನಿ ನಿವಸನ್ನಾತ್ಮನಃ ಕಲ್ಪಿತಾಸನಃ ||೪೩||

ಪ್ರಾಣಾಯಾಮೇನ ತ್ರಿವೃತಾ ಪ್ರಾಣೇನ್ದ್ರಿಯಮನೋಮಲಮ್ ।
ಶನೈರ್ವ್ಯುದಸ್ಯಾಭಿಧ್ಯಾಯೇನ್ಮನಸಾ ಗುರುಣಾ ಗುರುಮ್ ||೪೪||

ಪ್ರಸಾದಾಭಿಮುಖಂ ಶಶ್ವತ್ಪ್ರಸನ್ನವದನೇಕ್ಷಣಮ್ ।
ಸುನಾಸಂ ಸುಭ್ರುವಂ ಚಾರುಕಪೋಲಂ ಸುರಸುನ್ದರಮ್ ||೪೫||

ತರುಣಂ ರಮಣೀಯಾಙ್ಗಮರುಣೋಷ್ಠೇಕ್ಷಣಾಧರಮ್ ।
ಪ್ರಣತಾಶ್ರಯಣಂ ನೃಮ್ಣಂ ಶರಣ್ಯಂ ಕರುಣಾರ್ಣವಮ್ ||೪೬||

ಶ್ರೀವತ್ಸಾಙ್ಕಂ ಘನಶ್ಯಾಮಂ ಪುರುಷಂ ವನಮಾಲಿನಮ್ ।
ಶಙ್ಖಚಕ್ರಗದಾಪದ್ಮೈರಭಿವ್ಯಕ್ತಚತುರ್ಭುಜಮ್ ||೪೭||

ಕಿರೀಟಿನಂ ಕುಣ್ಡಲಿನಂ ಕೇಯೂರವಲಯಾನ್ವಿತಮ್ ।
ಕೌಸ್ತುಭಾಭರಣಗ್ರೀವಂ ಪೀತಕೌಶೇಯವಾಸಸಮ್ ||೪೮||

ಕಾಞ್ಚೀಕಲಾಪಪರ್ಯಸ್ತಂ ಲಸತ್ಕಾಞ್ಚನನೂಪುರಮ್ ।
ದರ್ಶನೀಯತಮಂ ಶಾನ್ತಂ ಮನೋನಯನವರ್ಧನಮ್ ॥೪೯॥

ಪದ್ಭ್ಯಾಂ ನಖಮಣಿಶ್ರೇಣ್ಯಾ ವಿಲಸದ್ಭ್ಯಾಂ ಸಮರ್ಚತಾಮ್ ।
ಹೃತ್ಪದ್ಮಕರ್ಣಿಕಾಧಿಷ್ಣ್ಯಮಾಕ್ರಮ್ಯಾತ್ಮನ್ಯವಸ್ಥಿತಮ್ ॥೫೦॥

ಸ್ಮಯಮಾನಮಭಿಧ್ಯಾಯೇತ್ಸಾನುರಾಗಾವಲೋಕನಮ್ ।
ನಿಯತೇನೈಕಭೂತೇನ ಮನಸಾ ವರದರ್ಷಭಮ್ ॥೫೧॥

ಏವಂ ಭಗವತೋ ರೂಪಂ ಸುಭದ್ರಂ ಧ್ಯಾಯತೋ ಮನಃ ।
ನಿರ್ವೃತ್ಯಾ ಪರಯಾ ತೂರ್ಣಂ ಸಮ್ಪನ್ನಂ ನ ನಿವರ್ತತೇ ॥೫೨॥

ಜಪಶ್ಚ ಪರಮೋ ಗುಹ್ಯಃ ಶ್ರೂಯತಾಂ ಮೇ ನೃಪಾತ್ಮಜ ।
ಯಂ ಸಪ್ತರಾತ್ರಂ ಪ್ರಪಠನ್ಪುಮಾನ್ಪಶ್ಯತಿ ಖೇಚರಾನ್ ॥೫೩॥

"ಓಂ ನಮೋ ಭಗವತೇ ವಾಸುದೇವಾಯ!"

ಮನ್ತ್ರೇಣಾನೇನ ದೇವಸ್ಯ ಕುರ್ಯಾದ್ದ್ರವ್ಯಮಯೀಂ ಬುಧಃ ।
ಸಪರ್ಯಾಂ ವಿವಿಧೈರ್ದ್ರವ್ಯೈರ್ದೇಶಕಾಲವಿಭಾಗವಿತ್ ॥೫೪॥

ಸಲಿಲೈಃ ಶುಚಿಭಿರ್ಮಾಲ್ಯೈರ್ವನ್ಯೈರ್ಮೂಲಫಲಾದಿಭಿಃ ।
ಶಸ್ತಾಙ್ಕುರಾಂಶುಕೈಶ್ಚಾರ್ಚೇತ್ತುಲಸ್ಯಾ ಪ್ರಿಯಯಾ ಪ್ರಭುಮ್ ॥೫೫॥

ಲಬ್ಧ್ವಾ ದ್ರವ್ಯಮಯೀಮರ್ಚಾಂ ಕ್ಷಿತ್ಯಮ್ಬ್ವಾದಿಷು ವಾರ್ಚಯೇತ್ ।
ಆಭೃತಾತ್ಮಾ ಮುನಿಃ ಶಾನ್ತೋ ಯತವಾಙ್ಮಿತವನ್ಯಭುಕ್ ॥೫೬॥

ಸ್ವೇಚ್ಛಾವತಾರಚರಿತೈರಚಿನ್ತ್ಯನಿಜಮಾಯಯಾ ।
ಕರಿಷ್ಯತ್ಯುತ್ತಮಶ್ಲೋಕಸ್ತದ್ಧ್ಯಾಯೇದ್ಧೃದಯಙ್ಗಮಮ್ ॥೫೭॥

ಪರಿಚರ್ಯಾ ಭಗವತೋ ಯಾವತ್ಯಃ ಪೂರ್ವಸೇವಿತಾಃ ।
ತಾ ಮನ್ತ್ರಹೃದಯೇನೈವ ಪ್ರಯುಞ್ಜ್ಯಾನ್ಮನ್ತ್ರಮೂರ್ತಯೇ ॥೫೮॥

ಏವಂ ಕಾಯೇನ ಮನಸಾ ವಚಸಾ ಚ ಮನೋಗತಮ್ ।
ಪರಿಚರ್ಯಮಾಣೋ ಭಗವಾನ್ಭಕ್ತಿಮತ್ಪರಿಚರ್ಯಯಾ ॥೫೯॥

ಪುಂಸಾಮಮಾಯಿನಾಂ ಸಮ್ಯಗ್ಭಜತಾಂ ಭಾವವರ್ಧನಃ ।
ಶ್ರೇಯೋ ದಿಶತ್ಯಭಿಮತಂ ಯದ್ಧರ್ಮಾದಿಷು ದೇಹಿನಾಮ್ ॥೬೦॥

ವಿರಕ್ತಶ್ಚೇನ್ದ್ರಿಯರತೌ ಭಕ್ತಿಯೋಗೇನ ಭೂಯಸಾ ।
ತಂ ನಿರನ್ತರಭಾವೇನ ಭಜೇತಾದ್ಧಾ ವಿಮುಕ್ತಯೇ ॥೬೧॥

ಇತ್ಯುಕ್ತಸ್ತಂ ಪರಿಕ್ರಮ್ಯ ಪ್ರಣಮ್ಯ ಚ ನೃಪಾರ್ಭಕಃ ।
ಯಯೌ ಮಧುವನಂ ಪುಣ್ಯಂ ಹರೇಶ್ಚರಣಚರ್ಚಿತಮ್ ॥೬೨॥

ತಪೋವನಂ ಗತೇ ತಸ್ಮಿನ್ಪ್ರವಿಷ್ಟೋಽನ್ತಃಪುರಂ ಮುನಿಃ ।
ಅರ್ಹಿತಾರ್ಹಣಕೋ ರಾಜ್ಞಾ ಸುಖಾಸೀನ ಉವಾಚ ತಮ್ ॥೬೩॥

ನಾರದ ಉವಾಚ :

ರಾಜನ್ಕಿಂ ಧ್ಯಾಯಸೇ ದೀರ್ಘಂ ಮುಖೇನ ಪರಿಶುಷ್ಯತಾ ।
ಕಿಂ ವಾ ನ ರಿಷ್ಯತೇ ಕಾಮೋ ಧರ್ಮೋ ವಾರ್ಥೇನ ಸಂಯುತಃ ॥೬೪॥

ರಾಜೋವಾಚ :

ಸುತೋ ಮೇ ಬಾಲಕೋ ಬ್ರಹ್ಮನ್ ಸ್ತ್ರೈಣೇನಾಕರುಣಾತ್ಮನಾ ।
ನಿರ್ವಾಸಿತಃ ಪಞ್ಚವರ್ಷಃ ಸಹ ಮಾತ್ರಾ ಮಹಾನ್ಕವಿಃ ॥೬೫॥

ಅಪ್ಯನಾಥಂ ವನೇ ಬ್ರಹ್ಮನ್ಮಾಸ್ಮಾದನ್ತ್ಯರ್ಭಕಂ ವೃಕಾಃ ।
ಶ್ರಾನ್ತಂ ಶಯಾನಂ ಕ್ಷುಧಿತಂ ಪರಿಮ್ಲಾನಮುಖಾಮ್ಬುಜಮ್ ॥೬೬॥

ಅಹೋ ಮೇ ಬತ ದೌರಾತ್ಮ್ಯಂ ಸ್ತ್ರೀಜಿತಸ್ಯೋಪಧಾರಯ ।
ಯೋಽಙ್ಕಂ ಪ್ರೇಮ್ಣಾರುರುಕ್ಷನ್ತಂ ನಾಭ್ಯನನ್ದಮಸತ್ತಮಃ ॥೬೭॥

ನಾರದ ಉವಾಚ :

ಮಾ ಮಾ ಶುಚಃ ಸ್ವತನಯಂ ದೇವಗುಪ್ತಂ ವಿಶಾಮ್ಪತೇ ।
ತತ್ಪ್ರಭಾವಮವಿಜ್ಞಾಯ ಪ್ರಾವೃಙ್ಕ್ತೇ ಯದ್ಯಶೋ ಜಗತ್ ॥೬೮॥

ಸುದುಷ್ಕರಂ ಕರ್ಮ ಕೃತ್ವಾ ಲೋಕಪಾಲೈರಪಿ ಪ್ರಭುಃ ।
ಏಷ್ಯತ್ಯಚಿರತೋ ರಾಜನ್ಯಶೋ ವಿಪುಲಯಂಸ್ತವ ॥೬೯॥

ಮೈತ್ರೇಯ ಉವಾಚ :

ಇತಿ ದೇವರ್ಷಿಣಾ ಪ್ರೋಕ್ತಂ ವಿಶ್ರುತ್ಯ ಜಗತೀಪತಿಃ ।
ರಾಜಲಕ್ಷ್ಮೀಮನಾದೃತ್ಯ ಪುತ್ರಮೇವಾನ್ವಚಿನ್ತಯತ್ ॥೭೦॥

ತತ್ರಾಭಿಷಿಕ್ತಃ ಪ್ರಯತಸ್ತಾಮುಪೋಷ್ಯ ವಿಭಾವರೀಮ್ ।
ಸಮಾಹಿತಃ ಪರ್ಯಚರದೃಷ್ಯಾದೇಶೇನ ಪೂರುಷಮ್ ॥೭೧॥

ತ್ರಿರಾತ್ರಾನ್ತೇ ತ್ರಿರಾತ್ರಾನ್ತೇ ಕಪಿತ್ಥಬದರಾಶನಃ ।
ಆತ್ಮವೃತ್ತ್ಯನುಸಾರೇಣ ಮಾಸಂ ನಿನ್ಯೇಽರ್ಚಯನ್ಹರಿಮ್ ॥೭೨॥

ಎಲೈ ದೀನಬಂಧುವೇ! ಬ್ರಹ್ಮದೇವರೂ ಕೂಡ ನಿನ್ನಲ್ಲಿ ಶರಣಾಗತರಾಗಿ ಸೃಷ್ಟಿಯ ಪ್ರಾರಂಭದಲ್ಲಿ ನೀನು ದಯಪಾಲಿಸಿದ ಜ್ಞಾನದ ಪ್ರಭಾವದಿಂದಲೇ ಈ ಜಗತ್ತನ್ನು ನಿದ್ರೆಯಿಂದ ಎಚ್ಚೆತ್ತ ಪುರುಷನಂತೆ ಕಂಡರು. ಮುಕ್ತಪುರುಷರಿಗೂ ಆಶ್ರಯವನ್ನು ನೀಡುವ ನಿನ್ನ ಅಂತಹ ಪಾದಮೂಲವನ್ನು ಕೃತಜ್ಞನಾದ ಯಾವನು ತಾನೇ ಮರೆಯಲು ಸಾಧ್ಯ?

ನೂನಂ ವಿಮುಷ್ಟಮತಯಸ್ತವ ಮಾಯಯಾ ತೇ
ಯೇ ತ್ವಾಂ ಭವಾಪ್ಯಯವಿಮೋಕ್ಷಣಮನ್ಯಹೇತೋಃ ।
ಅರ್ಚನ್ತಿ ಕಲ್ಪಕತರುಂ ಕುಣಪೋಪಭೋಗ್ಯ-
ಮಿಚ್ಛನ್ತಿ ಯತ್ಸ್ಪರ್ಶಜಂ ನಿರಯೇಽಪಿ ನೃಣಾಮ್ ॥೯॥

ಪ್ರಭುವೇ! ಶವಕ್ಕೆ ಸಮನಾದ ಈ ಶರೀರಗಳ ಮೂಲಕ ಅನುಭವಿಸಲ್ಪಡುವ, ಇಂದ್ರಿಯಗಳ ಮತ್ತು ಅವುಗಳ ವಿಷಯಗಳ ಸಂಸರ್ಗದಿಂದ ಉಂಟಾಗುವ ಯಾವ ಸುಖವುಂಟೋ–ಅದು ಮನುಷ್ಯರಿಗೆ ನರಕದಲ್ಲಿಯೂ ಸಿಕ್ಕುವುದು. ಯಾರು ಇಂತಹ ವಿಷಯಸುಖಗಳಿಗಾಗಿ ಹಾತೊರೆಯು

ತ್ತಾರೆಯೋ ಮತ್ತು ಹುಟ್ಟು-ಸಾವುಗಳ ಕಟ್ಟಿನಿಂದ ಬಿಡುಗಡೆಮಾಡುವ ಕಲ್ಪತರುವಿನಂತಿರುವ ನಿನ್ನ ಉಪಾಸನೆಯನ್ನೂ, ನಿನ್ನ ಪ್ರಾಪ್ತಿಯನ್ನೂ, ಕರ್ಮಗಳನ್ನೂ ಬಿಟ್ಟು ಇತರ ಉದ್ದೇಶಗಳಿಗಾಗಿ ಮಾಡುತ್ತಾರೆಯೋ– ಅಂತಹವರ ಬುದ್ಧಿಯು ನಿಜವಾಗಿಯೂ ನಿನ್ನ ಮಾಯೆಯಿಂದ ಮೋಸ ಗೊಳಿಸಲ್ಪಟ್ಟಿದೆಯೆಂದು ತಿಳಿಯಬೇಕು.

> ಯಾ ನಿರ್ವೃತಿಸ್ತನುಭೃತಾಂ ತವ ಪಾದಪದ್ಮ-
> ಧ್ಯಾನಾದ್ಭವಜ್ಜನಕಥಾಶ್ರವಣೇನ ವಾ ಸ್ಯಾತ್ ।
> ಸಾ ಬ್ರಹ್ಮಣಿ ಸ್ವಮಹಿಮನ್ಯಪಿ ನಾಥ ಮಾ ಭೂ-
> ತ್ಕಿಂ ತ್ವನ್ತಕಾಸಿಲುಲಿತಾತ್ಪತತಾಂ ವಿಮಾನಾತ್ ॥೧೦॥

ಸ್ವಾಮಿಯೇ! ನಿನ್ನ ಚರಣಕಮಲಗಳ ಧ್ಯಾನದಿಂದ ಮತ್ತು ನಿನ್ನ ಭಕ್ತರ ಪವಿತ್ರವಾದ ಚರಿತ್ರೆಗಳನ್ನು ಕೇಳುವುದರಿಂದ ಪ್ರಾಣಿಗಳಿಗೆ ಯಾವ ಆನಂದವು ದೊರೆಯುವುದೋ–ಆ ಆನಂದವು ನಿಜಾನಂದಸ್ವರೂಪವಾದ ಬ್ರಹ್ಮದಲ್ಲಿಯೂ ಸಿಕ್ಕುವುದಿಲ್ಲ. ಹೀಗಿರುವಾಗ ಕಾಲದ ಕತ್ತಿಯಿಂದ ಕತ್ತರಿಸಲ್ಪಡುವಂತಹ, ಸ್ವರ್ಗದ ವಿಮಾನಗಳಿಂದ ಕೆಳಗೆ ಬೀಳುವಂತಹ ಜನರಿಗೆ ಆ ಸುಖವು ಹೇಗೆ ತಾನೇ ಸಿಕ್ಕೀತು?

> ಭಕ್ತಿಂ ಮುಹುಃ ಪ್ರವಹತಾಂ ತ್ವಯಿ ಮೇ ಪ್ರಸಙ್ಗೋ
> ಭೂಯಾದನನ್ತ ಮಹತಾಮಮಲಾಶಯಾನಾಮ್ ।
> ಯೇನಾಞ್ಜಸೋಲ್ಬಣಮುರುವ್ಯಸನಂ ಭವಾಬ್ಧಿಂ
> ನೇಷ್ಯೇ ಭವದ್ಗುಣಕಥಾಮೃತಪಾನಮತ್ತಃ ॥೧೧॥

ಓ ಅನಂತನೇ! ನಿನ್ನಲ್ಲಿ ಅವಿಚ್ಛಿನ್ನವಾದ ಭಕ್ತಿಪ್ರವಾಹವನ್ನು ಹರಿಯಿಸುತ್ತಿರುವ, ಶುದ್ಧಹೃದಯರಾದ, ಮಹಾತ್ಮರಾದ ಭಕ್ತರ ಸಂಗವನ್ನು ನನಗೆ ಅನುಗ್ರಹಿಸು. ಅವರ ಸಹವಾಸದಲ್ಲಿದ್ದು ನಾನು ನಿನ್ನ ಗುಣ ಮತ್ತು ಕಥೆಗಳು ಎಂಬ ಅಮೃತವನ್ನು ಪಾನಮಾಡಿ ಮತ್ತನಾಗಿ ಮತ್ತು ಸಂಸಾರ ಸಾಗರದ ಆಚೆಯ ದಡವನ್ನೂ ಸೇರಿಕೊಳ್ಳುವೆನು.

> ತೇ ನ ಸ್ಮರನ್ತ್ಯತಿತರಾಂ ಪ್ರಿಯಮೀಶ ಮರ್ತ್ಯಂ
> ಯೇ ಚಾನ್ವದಃ ಸುತಸುಹೃದ್ಗೃಹವಿತ್ತದಾರಾಃ ।

ಯೇ ತ್ವಬ್ಧನಾಭ ಭವದೀಯಪದಾರವಿನ್ದ-
ಸೌಗನ್ಧಲುಬ್ಧಹೃದಯೇಷು ಕೃತಪ್ರಸಙ್ಗಾಃ ॥೧೨॥

ಎಲೈ ಪದ್ಮನಾಭಪ್ರಭುವೇ! ನಿನ್ನ ಪಾದಾರವಿಂದಗಳ ಸುಗಂಧ ದಲ್ಲಿಯೇ ಆಸೆಗೊಂಡು ಮನಸ್ಸನ್ನು ಇಟ್ಟಿರುವ ಆ ಮಹಾನುಭಾವರಾದ ಭಕ್ತರ ಸಹವಾಸದಲ್ಲಿರುವವರು ತಮಗೆ ಅತ್ಯಂತಪ್ರಿಯವಾಗಿರುವ ದೇಹವನ್ನೂ ಮತ್ತು ದೇಹಸಂಬಂಧಿಗಳಾದ ಪುತ್ರ-ಮಿತ್ರ-ಮನೆ-ಮಡದಿ– ಮುಂತಾದುವುಗಳನ್ನೂ ಮರೆತುಬಿಡುವರು. ಅಂತಹ ದೇಹಸಂಬಂಧಿಗಳನ್ನು ಮರೆಯುವಂತೆ ಮಾಡುವ ನಿನ್ನ ಆ ದಿವ್ಯಚರಿತಾಮೃತದಲ್ಲಿ ಎಂತಹ ಆಕರ್ಷಣೆ, ಎಂತಹ ಮಾದಕತೆ ಇರಬೇಕು!

ತಿರ್ಯಙ್ನಗದ್ವಿಜಸರೀಸೃಪದೇವದೈತ್ಯ-
ಮರ್ತ್ಯಾದಿಭಿಃ ಪರಿಚಿತಂ ಸದಸದ್ವಿಶೇಷಮ್ ।
ರೂಪಂ ಸ್ಥವಿಷ್ಠಮಜ ತೇ ಮಹದಾದ್ಯನೇಕಂ
ನಾತಃ ಪರಂ ಪರಮ ವೇದ್ಮಿ ನ ಯತ್ರ ವಾದಃ ॥೧೩॥

ಜನ್ಮ ರಹಿತನಾದ ಜಗತ್ಪತಿಯೇ! ನಿನ್ನ ದಿವ್ಯಸ್ವರೂಪವನ್ನು ತಿಳಿಯು ವುದು ಅತಿ ಕಷ್ಟ. ನನಗೂ–ಪಶು, ವೃಕ್ಷ, ಪರ್ವತ, ಪಕ್ಷಿ, ಸರ್ಪ, ದೇವತೆ, ದೈತ್ಯ ಮತ್ತು ಮನುಷ್ಯರೇ ಮುಂತಾದವರಿಂದ ತುಂಬಿ, ಮಹತ್ತೇ ಮುಂತಾದ ಕಾರಣಗಳಿಂದ ಉಂಟಾಗಿರುವ ನಿನ್ನ ಸದಸದಾತ್ಮಕವಾದ, ಸ್ಥೂಲವಾದ ವಿಶ್ವವಿರಾಡ್ರೂಪವು ತಿಳಿದಿದೆಯೇ ಹೊರತು ಮಾತುಮುಟ್ಟಲಾಗದೇ ಇರುವ ಆ ನಿನ್ನ ದಿವ್ಯಸ್ವರೂಪವು ತಿಳಿದಿಲ್ಲವಪ್ಪಾ!

ಕಲ್ಪಾನ್ತ ಏತದಖಿಲಂ ಜಠರೇಣ ಗೃಹ್ಣನ್
ಶೇತೇ ಪುಮಾನ್ಸ್ವದೃಗನನ್ತಸಖಸ್ತದಙ್ಕೇ ।
ಯನ್ನಾಭಿಸಿನ್ಧುರುಹಕಾಞ್ಚನಲೋಕಪದ್ಮ-
ಗರ್ಭೇ ದ್ಯುಮಾನ್ಭಗವತೇ ಪ್ರಣತೋಽಸ್ಮಿ ತಸ್ಮೈ ॥೧೪॥

ಪ್ರಳಯದ ಕಡೆಯಲ್ಲಿ ಪರಮಪುರುಷನಾದ ನೀನು ಯೋಗನಿದ್ರೆ ಯಲ್ಲಿದ್ದು ಇಡೀ ವಿಶ್ವವನ್ನು ಉದರದಲ್ಲಿ ಅಡಗಿಸಿಕೊಂಡು ಆದಿಶೇಷ ನೊಡನೆ ಆ ಶೇಷದೇವರ ಮಡಿಲಿನಲ್ಲಿ ಮಲಗುತ್ತೀಯೆ. ಆಗ ನಿನ್ನ ನಾಭಿ

ಸಮುದ್ರದಿಂದ ಪ್ರಕಟವಾದ, ಸರ್ವಲೋಕಮಯವಾದ, ಚಿನ್ನದ ಬಣ್ಣದ ಕಮಲದಿಂದ ಪರಮತೇಜೋರೂಪಿಯಾದ ಬ್ರಹ್ಮದೇವರು ಉತ್ಪನ್ನರಾಗುವರು. ಇಂತಹ ಮಹಾಮಹಿಮನಾದ ನಿನಗೆ ನಮೋ ನಮಃ.

ತ್ವಂ ನಿತ್ಯಮುಕ್ತಪರಿಶುದ್ಧವಿಬುದ್ಧ ಆತ್ಮಾ
ಕೂಟಸ್ಥ ಆದಿಪುರುಷೋ ಭಗವಾಂಸ್ತ್ರ್ಯಧೀಶಃ ।
ಯದ್ಬುದ್ಧ್ಯವಸ್ಥಿತಿಮಖಣ್ಡಿತಯಾ ಸ್ವದೃಷ್ಟ್ಯಾ
ದ್ರಷ್ಟಾ ಸ್ಥಿತಾವಧಿಮಖೋ ವ್ಯತಿರಿಕ್ತ ಆಸ್ಸೇ ॥೧೫॥

ಸ್ವಾಮಿ! ನೀನು ಜೀವನಂತೆಯೇ ಇದ್ದರೂ ಜೀವನಿಗಿಂತಲೂ ವಿಲಕ್ಷಣನಾಗಿರುವೆ. ಏಕೆಂದರೆ : ನೀನು ನಿತ್ಯಮುಕ್ತನು, ಪರಿಶುದ್ಧನು, ಸರ್ವಜ್ಞನು, ನಿರ್ವಿಕಾರನು, ಕೂಟಸ್ಥನು, ಆದಿಪುರುಷನು, ನಿರತಿಶಯಗುಣ ಮತ್ತು ಮಹಿಮೆಗಳುಳ್ಳ ಭಗವಂತನು. ನೀನು ತ್ರಿಗುಣಗಳಿಗೆ ಅಧಿಪತಿಯಾದವನು. ಹಾಗೂ ಅಖಂಡವೂ-ಚಿನ್ಮಯವೂ ಆದ ದೃಷ್ಟಿಯಿಂದ ಬುದ್ಧಿಗೆ ಎಲ್ಲ ಅವಸ್ಥೆಗಳಲ್ಲಿಯೂ ಸಾಕ್ಷಿಯಾಗಿರುವೆ. ಜಗತ್ತಿನ ಸ್ಥಿತಿಗೋಸ್ಕರ ಯಜ್ಞಕ್ಕೆ ಅಧಿಷ್ಠಾನದೇವತೆಯಾದ ವಿಷ್ಣುರೂಪದಿಂದ ವಿರಾಜಿಸುತ್ತೀಯೆ. (ಜೀವನಾದರೋ ನಿನ್ನ ಅನುಗ್ರಹದಿಂದ ಮುಕ್ತಿಪಡೆಯುವನು. ಸಂಸಾರಿಯಾದ್ದರಿಂದ ಮಲಿನನಾಗಿದ್ದಾನೆ. ಅಲ್ಪಜ್ಞಾನಿಯು ಪ್ರಕೃತಿಸಂಬಂಧದಿಂದ ವಿಕಾರವನ್ನು ಹೊಂದುತ್ತಾನೆ. ಕ್ಷರಪ್ರಕೃತಿಯೊಡನೆ ಸೇರುವುದುಂಟು. ಜನ್ಮವುಳ್ಳವನು ಅಲ್ಪವಾದ ಗುಣ ಮತ್ತು ಐಶ್ವರ್ಯಗಳುಳ್ಳವನು. ತ್ರಿಗುಣಗಳಿಗೆ ವಶನಾಗುವ ಸಂಸಾರಿಯು) .

ಯಸ್ಮಿನ್ವಿರುದ್ಧಗತಯೋ ಹ್ಯನಿಶಂ ಪತನ್ತಿ
ವಿದ್ಯಾದಯೋ ವಿವಿಧಶಕ್ತಯ ಆನುಪೂರ್ವ್ಯಾತ್ ।
ತದ್ಬ್ರಹ್ಮ ವಿಶ್ವಭವಮೇಕಮನನ್ತಮಾದ್ಯ-
ಮಾನನ್ದಮಾತ್ರಮವಿಕಾರಮಹಂ ಪ್ರಪದ್ಯೇ ॥೧೬॥

ಎಲೈ ಪರಬ್ರಹ್ಮಪರಮಾತ್ಮನೇ! ವಿದ್ಯೆ-ಅವಿದ್ಯೆ, ಸೃಷ್ಟಿ-ಸಂಹಾರ ಮುಂತಾದ ಅನೇಕ ಶಕ್ತಿಗಳು ಪರಸ್ಪರವಾಗಿ ವಿರುದ್ಧವಾದ ಗತಿಗಳನ್ನು ಹೊಂದಿದ್ದರೂ ಅಖಿಲಶಕ್ತಿಧರನಾದ ನಿನ್ನಿಂದಲೇ ನಿರಂತರಪ್ರವಾಹರೂಪ

ದಲ್ಲಿ ಪ್ರಕಟಗೊಳ್ಳುತ್ತವೆ. ಅಂತಹ ಜಗತ್ಕಾರಣನೂ, ಅಖಂಡನೂ, ಆದ್ಯಂತ ರಹಿತನೂ, ಆನಂದಮಯನೂ ಆಗಿರುವ ನಿನ್ನನ್ನು ಶರಣುಹೊಂದುತ್ತೇನೆ.

ಸತ್ಯಾಶಿಷೋ ಹಿ ಭಗವಂತಸ್ತವ ಪಾದಪದ್ಮ-
ಮಾಶೀಸ್ತಥಾನುಭಜತಃ ಪುರುಷಾರ್ಥಮೂರ್ತೇಃ ।
ಅಪ್ಯೇವಮಾರ್ಯ ಭಗವಾನ್ಪರಿಪಾತಿ ದೀನಾ-
ನ್ವಾಶ್ರೇವ ವತ್ಸಕಮನುಗ್ರಹಕಾತರೋऽಸ್ಮಾನ್ ॥೧೭॥

ಎಲೈ ಸರ್ವಪುರುಷಾರ್ಥಪ್ರದನೇ! ನಿನ್ನನ್ನು ಯಾರು ಪರಮ ಪುರುಷಾರ್ಥಮೂರ್ತಿ, ಪರಮಾನಂದಮೂರ್ತಿ—ಎಂದು ತಿಳಿದು ನಿಷ್ಕಾಮ ಭಾವದಿಂದ ನಿರಂತರವಾಗಿ ಭಜಿಸುತ್ತಾರೆಯೋ—ಅವರಿಗೆ ರಾಜ್ಯವೇ ಮುಂತಾದ ಭೋಗಗಳಿಗಿಂತಲೂ ನಿನ್ನ ಚರಣಕಮಲಗಳನ್ನು ಹೊಂದು ವುದೇ ಭಜನೆಯ ಸತ್ಯವಾದ ಫಲವಾಗಿರುತ್ತದೆ. ಹಾಗಿದ್ದರೂ—ಆಕಳು ಆಗ ತಾನೇ ಹುಟ್ಟಿದ ಕರುವಿಗೆ ಹಾಲು ಕುಡಿಸಿ ರಕ್ಷಿಸುವಂತೆ—ನೀನು ಭಕ್ತರ ರಕ್ಷಣೆಯಲ್ಲಿ ಸದಾ ಕಾತರನಾಗಿದ್ದು ದೀನರಾಗಿರುವ ನಮ್ಮಂತಹ ಸಕಾಮ ಭಕ್ತರ ಇಷ್ಟಾರ್ಥಗಳನ್ನೂ ಈಡೇರಿಸಿ ಅವರನ್ನು ಸಂಸಾರಭಯದಿಂದ ಸಂರಕ್ಷಿಸುತ್ತಿರುವೆ."

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ವಿದುರ! ಶುಭಸಂಕಲ್ಪದಿಂದ ಕೂಡಿದ ಧೀಮಂತನಾದ ಧ್ರುವ ಕುಮಾರನು ಸ್ವಾಮಿಯನ್ನು ಹೀಗೆ ಸ್ತೋತ್ರಮಾಡಲು ಭಕ್ತವತ್ಸಲನಾದ ಶ್ರೀಭಗವಂತನು ಸಂತೋಷವನ್ನು ವ್ಯಕ್ತಪಡಿಸುತ್ತಾ ಹೀಗೆಂದನು :

"ಉತ್ತಮವ್ರತನಿಷ್ಠೆಯುಳ್ಳ ರಾಜಕುಮಾರನೇ! ನಿನ್ನ ಮನಸ್ಸಿ ನಲ್ಲಿರುವ ಕೋರಿಕೆಯೇನೆಂಬುದನ್ನು ನಾನು ಬಲ್ಲೆನು. ಅದು ಪಡೆಯಲು ತುಂಬಾ ಕಷ್ಟಕರವಾಗಿರುವ ಪರಮೋನ್ನತಸ್ಥಾನ. ಆದರೂ ನಾನು ನಿನಗೆ ಅದನ್ನು ಕೊಡುತ್ತೇನೆ. ನಿನಗೆ ಮಂಗಳವಾಗಲಿ.

ಎಲೈ ಮಂಗಳಮತಿಯೇ! ಯಾವ ಅವಿನಾಶಿಯಾದ ಸ್ಥಾನವನ್ನು ಇಲ್ಲಿಯವರೆಗೆ ಯಾರು ಪಡೆದಿಲ್ಲವೋ, ಯಾವುದು ಗ್ರಹ-ನಕ್ಷತ್ರ ಮತ್ತು

ತಾರಾಗಣಗಳಿಗೆ ಮೇಟೀಕಂಭದಂತೆ* ಮೇರುವಾಗಿದೆಯೋ, ಅವಾಂತರ ಪ್ರಳಯದವರೆಗೆ ಮಾತ್ರ ಇರುವ ಇತರ ಲೋಕಗಳು ನಾಶಹೊಂದಿದರೂ ಯಾವುದು ಸ್ಥಿರವಾಗಿರುತ್ತದೆಯೋ ಮತ್ತು ಯಾವುದನ್ನು ತಾರಾಗಣಗಳೊಡನೆ ಕೂಡಿದ ಧರ್ಮ, ಅಗ್ನಿ, ಕಶ್ಯಪ, ಶುಕ್ರರೇ ಮುಂತಾದ ಗ್ರಹ-ನಕ್ಷತ್ರಗಳು ಪ್ರದಕ್ಷಿಣೆಮಾಡುತ್ತಿವೆಯೋ–ಅಂತಹ ದಿವ್ಯವಾದ ಧ್ರುವನಕ್ಷತ್ರ ಪದವನ್ನು ನಾನು ನಿನಗೆ ಅನುಗ್ರಹಿಸುತ್ತಿದ್ದೇನೆ. ನೀನು ಈ ಲೋಕದಲ್ಲೂ ಸುಖವನ್ನನುಭವಿಸುವೆ. ನಿನ್ನ ತಂದೆಯು ನಿನಗೆ ರಾಜ್ಯಸಿಂಹಾಸನವನ್ನು ಕೊಟ್ಟು ಅರಣ್ಯಕ್ಕೆ ತೆರಳಿದನಂತರ ನೀನು ಮೂವತ್ತಾರು ಸಾವಿರ ವರ್ಷಗಳ ಕಾಲ ಧರ್ಮದಿಂದ ಭೂಮಂಡಲವನ್ನು ಆಳುವೆ. ಆಗಲೂ ನಿನ್ನ ಇಂದ್ರಿಯಶಕ್ತಿಗಳು ಕುಂಠಿತವಾಗದೇ ಹಿಂದಿನಂತೆಯೇ ಇರುತ್ತವೆ. ಮುಂದೆ ಒಂದು ದಿನ ನಿನ್ನ ತಮ್ಮನಾದ ಉತ್ತಮನು ಭೇಟೆಯಾಡುವುದಕ್ಕಾಗಿ ಅರಣ್ಯಕ್ಕೆ ಹೋದಾಗ ಅಲ್ಲಿ ಸಾವಿಗೆ ಈಡಾಗುವನು. ಆಗ ಆತನ ತಾಯಿ ಸುರುಚಿಯು ಪುತ್ರಪ್ರೇಮದಿಂದ ಹುಚ್ಚೇರಿ ಆತನನ್ನು ಅರಣ್ಯದಲ್ಲಿ ಹುಡುಕುತ್ತಾ ಕಾಳ್ಗಿಚ್ಚಿನೊಳಗೆ ಪ್ರವೇಶಿಸಿಬಿಡುವಳು. ನೀನು ಯಜ್ಞಗಳ ಮೂಲಕ ಬಹುಕಾಲ ನನ್ನನ್ನು ಆರಾಧಿಸಬೇಕು. ಏಕೆಂದರೆ : ನಾನು ಯಜ್ಞಹೃದಯನು. ಯಜ್ಞವೆಂಬುದು ನನಗೆ ಪ್ರಿಯವಾದ ಮೂರ್ತಿಯು. ಆದುದರಿಂದ ನೀನು ಬಹುದಕ್ಷಿಣೆಗಳಿಂದ ಕೂಡಿದ ಅನೇಕ ಯಜ್ಞಗಳಿಂದ ನನ್ನನ್ನು ಪೂಜಿಸಿ, ಈ ಲೋಕದಲ್ಲಿ ಉತ್ತಮವಾದ ಭೋಗಗಳನ್ನು ಅನುಭವಿಸಿ, ಕೊನೆಗೆ ಸಮಸ್ತಲೋಕಗಳಿಗೂ ವಂದನೀಯನಾಗಿ, ಸಪ್ತರ್ಷಿ ಗಳಿಗಿಂತಲೂ ಮೇಲಿರುವ ನನ್ನ ನಿಜಧಾಮಕ್ಕೆ ಬಂದು ಸೇರುವೆ. ಯಾವು ದನ್ನು ತಲುಪಿದ ಬಳಿಕ ಸಂಸಾರಕ್ಕೆ ಮರಳುವಿಕೆ ಇರುವುದಿಲ್ಲವೋ–ಅಂತಹ ದಿವ್ಯಸ್ಥಾನವನ್ನೇ ನೀನು ಪಡೆಯುವೆ, ವತ್ಸ!"

ಮೈತ್ರೇಯರು ಹೇಳುತ್ತಾರೆ :

" ಹೀಗೆ ಬಾಲಕ ಧ್ರುವನಿಂದ ಪೂಜಿತನಾಗಿ ಆತನಿಗೆ ತನ್ನ ಪದವಿ

---

* ಮೇಟೀಕಂಭ :– ಕುಯ್ಲು ಮಾಡಿದ ಭತ್ತ , ರಾಗಿ, ಗೋಧಿ–ಮುಂತಾದ ಫಸಲನ್ನು ತುಳಿಯುವುದಕ್ಕಾಗಿ ಎತ್ತುಗಳನ್ನು ಕಟ್ಟಿ ಸುತ್ತಿಸಲು ನೆಟ್ಟಿರುವ ಕಂಭ.

ಯನ್ನು ಅನುಗ್ರಹಿಸಿ ಆತನು ನೋಡುತ್ತಿರುವಂತೆಯೇ ಶ್ರೀಗರುಢಧ್ವಜನು ತನ್ನ ಲೋಕಕ್ಕೆ ಹೊರಟುಹೋದನು. ವಿಷ್ಣುವಿನ ಪಾದಸೇವನೆಯಿಂದ ಧ್ರುವನಿಗೆ ಆತನು ಸಂಕಲ್ಪಿಸಿದ್ದ ಇಷ್ಟವೇನೋ ಈಡೇರಿತು. ಆದರೆ ಆತನ ಚಿತ್ತಕ್ಕೆ ವಿಶೇಷವಾದ ಸಂತೋಷ-ಸಂತೃಪ್ತಿಗಳು ಉಂಟಾಗಲಿಲ್ಲ. ಹಾಗೆಯೇ ಆತನು ತನ್ನ ನಗರಿಗೆ ಹಿಂದಿರುಗಿದನು.

ಮೈತ್ರೇಯರ ಹೇಳಿಕೆಯನ್ನು ಕೇಳಿ ವಿದುರನು ಅವರನ್ನು ಪ್ರಶ್ನಿಸುತ್ತಾನೆ:

"ಋಷಿಶ್ರೇಷ್ಠರೇ! ಧ್ರುವಕುಮಾರನ ಚಿತ್ತಕ್ಕೆ ಏಕೆ ವಿಶೇಷವಾದ ಸಂತೃಪ್ತಿಯುಂಟಾಗಲಿಲ್ಲ? ಮಾಯಾವಿಯಾದ ಶ್ರೀಹರಿಯ ಪರಮಪದವು ಅತ್ಯಂತದುರ್ಲಭವಾದುದು. ಆತನ ಚರಣಕಮಲಗಳ ಉಪಾಸನೆಯಿಂದಲೇ ಬರತಕ್ಕುದ್ದು. ಅಂತಹ ದುರ್ಲಭವಾದ ಪದವನ್ನು ಗಳಿಸಿದ್ದರೂ ವಿವೇಕಿಯಾದ ಧ್ರುವಕುಮಾರನು ತನ್ನನ್ನು ಏತಕ್ಕೆ ಕೃತಕೃತ್ಯನನ್ನಾಗಿ ಭಾವಿಸಿಕೊಳ್ಳಲಿಲ್ಲ?"*

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

"ವತ್ಸ, ವಿದುರ! ಬಲತಾಯಿಯ ಮಾತಿನ ಬಾಣಗಳು ಆತನ ಹೃದಯವನ್ನು ಚುಚ್ಚಿ ಗಾಯಮಾಡಿದ್ದುವು. ಭಗವಂತನು ವರಪ್ರದಾನಕ್ಕೆ

---

* ಧ್ರುವಕುಮಾರನಿಗೆ ಶ್ರೀಭಗವಂತನು ಕೊಟ್ಟ ಪದವಿಯು ಪರಮಪದವಲ್ಲ ; ಪರಮವೈಕುಂಠವಲ್ಲ ; ಮುಕ್ತಿಧಾಮವಲ್ಲ ; ಆದರೂ ಅದು ಸಪ್ತರ್ಷಿಗಳ ಸ್ಥಾನಕ್ಕಿಂತಲೂ ಉನ್ನತವಾದ ಸ್ಥಾನ ; ದಿವ್ಯಸುಖಸ್ಥಾನ. ಅಲ್ಲಿಗೆ ಹೋದವರು ಸಂಸಾರಕ್ಕೆ ಮರಳುವುದಿಲ್ಲ. ಭಗವಂತನ ಧ್ಯಾನ-ಉಪಾಸನೆಗಳನ್ನು ಮಾಡುತ್ತಾ ಅಲ್ಲಿಂದಲೇ ಪರಮಪದಕ್ಕೆ ಆರೋಹಣ ಮಾಡುತ್ತಾರೆ. ಇಂದ್ರಿಯಗಳನ್ನು ಕೆರಳಿಸದೇ ನೆಮ್ಮದಿಯಾಗಿಟ್ಟು ಸಂತೋಷವನ್ನು ತುಂಬಿ, ಹಾಗೆಯೇ ಪರಿಪೂರ್ಣಶಾಂತಿಸಮೃದ್ಧವೂ, ಅಮೃತವೂ, ಆನಂದಮಯವೂ ಆದ ಬ್ರಹ್ಮಕ್ಕೆ ಹೊಂದಿಸಲು ತಕ್ಕ ಸನ್ನಿವೇಶವನ್ನು ಹೊಂದಿರುವ ಯೋಗಭೂಮಿಯಾಗಿರುವುದರಿಂದ ಅದನ್ನು ಗೌಣವಾದ ಅರ್ಥದಲ್ಲಿ 'ಹರಿಯ ಪದ' ಎಂದು ಕರೆದಿದೆ. ಹರಿಪದಕ್ಕೆ ಅತ್ಯಂತ ಹತ್ತಿರವಾಗಿ, ಹರಿಪದಕ್ಕೆ ಹತ್ತಿಸುವ ಪುಣ್ಯತಮವಾದ ಸ್ಥಾನವಾದ್ದರಿಂದ ಅದು ಹರಿಯ ಪದ.

ಸಿದ್ಧನಾಗಿ ಬಂದಿದ್ದನು. ಆಗ ಧ್ರುವಕುಮಾರನಿಗೆ ಆ ವಾಗ್ಬಾಣಗಳು ಸ್ಮರಣೆಗೆ ಬಂದಿದ್ದರಿಂದ, ಆತನು ಮುಕ್ತಿಯನ್ನು ಕೊಡುವುದಕ್ಕೆ ಸಮರ್ಥನಾಗಿರುವ ಮುಕ್ತಿಪತಿಯಾದ ಮುಕುಂದನಲ್ಲಿ ಮುಕ್ತಿಯ ವರವನ್ನು ಬೇಡಲಿಲ್ಲ. ಅದಕ್ಕಾಗಿ ಆತನಿಗೆ ಪಶ್ಚಾತ್ತಾಪವುಂಟಾಯಿತು. ತಾನು ಕೃತಕೃತ್ಯನಲ್ಲ ಎಂಬ ಭಾವನೆಯುಂಟಾಯಿತು.” (ಶ್ಲೋಕ 18-29)

ಧ್ರುವಕುಮಾರನು ಮನಸ್ಸಿನಲ್ಲಿ ಹೀಗೆ ಅಂದುಕೊಂಡನು :

“ಅಯ್ಯೋ! ಸನಕರೇ ಮುಂತಾದ ಊರ್ಧ್ವರೇತ (ನೈಷ್ಠಿಕ) ರಾದ ಸಿದ್ಧರೂ ಕೂಡ ಯಾವುದನ್ನು ಸಮಾಧಿಯ ಮೂಲಕ ಅನೇಕಜನ್ಮಗಳ ನಂತರ ಪಡೆಯುವರೋ–ಆ ಭಗವತ್ಪಾದಗಳ ನೆರಳನ್ನು ನಾನು ಆರೇ ತಿಂಗಳುಗಳಲ್ಲಿ ಪಡೆದನು. ಆದರೆ ಆಗಲೂ ಚಿತ್ತದಲ್ಲಿ ಬೇರೆ ವಾಸನೆಯು ಇದ್ದುದರಿಂದ ನಾನು ಆ ಪಾದಗಳಿಂದ ದೂರನಾದೆನಲ್ಲಾ! ಅಕಟಾ! ನಾನು ಎಂತಹ ಮೂರ್ಖತನದ ಕೆಲಸಮಾಡಿದೆನು? ಮಂದಭಾಗ್ಯನಾದ ನನ್ನ ಅವಿವೇಕವನ್ನು ನೋಡಿರಿ! ಭವ (ಸಂಸಾರ) ನಾಶಕನ ಪಾದಪದ್ಮವನ್ನು ತಲುಪಿಯೂ ನಾನು ಆ ಅವಿನಾಶಿಯಾದ ಪದವನ್ನು ಪ್ರಾರ್ಥಿಸದೇ ವಿನಾಶಿ ಯಾದುದನ್ನೇ ಕೇಳಿದೆನಲ್ಲಾ! ಪುಣ್ಯವು ಕ್ಷಯಿಸಿದನಂತರ ತಾವು ಸಂಸಾರಕ್ಕೆ ಬಿದ್ದುಬಿಡುವುದರಿಂದ, ನಾನು ಪರಮಶ್ರೇಯಸ್ಸಿನ ಮುಕ್ತಿಯನ್ನು ಪಡೆ ಯುವುದನ್ನು ಸಹಿಸಲಾರದೇ, ದೇವತೆಗಳು ನನ್ನ ಮನಸ್ಸನ್ನು ಕೆಡಿಸಿಬಿಟ್ಟರು. ಅದಕ್ಕೋಸ್ಕರವೇ ಅತ್ಯಂತ ಅಸತ್ಪುರುಷನಾದ ನಾನು ನಾರದರು ಹೇಳಿದ ಯಥಾರ್ಥವಾದ ಮಾತನ್ನು ಕೇಳದೇ ಹೋದೆನು. ಕನಸಿನಲ್ಲಿ ತನ್ನನ್ನು ಬಿಟ್ಟು ಬೇರೆ ಏನೂ ಇಲ್ಲದಿದ್ದರೂ–ಮನುಷ್ಯನು ತಾನೇ ಕಲ್ಪಿಸಿಕೊಂಡ ಹುಲಿ, ಹಾವು ಮುಂತಾದುವುಗಳಿಗೆ ಹೆದರುವುದಿಲ್ಲವೇ! ಹಾಗೆಯೇ ಜಗತ್ತಿನಲ್ಲಿ ವಾಸುದೇವನನ್ನು ಬಿಟ್ಟು ಬೇರಾವುದೂ ಇಲ್ಲದಿದ್ದರೂ, ಎಲ್ಲವೂ ವಾಸುದೇವಮಯವಾಗಿದ್ದರೂ ಶ್ರೀಭಗವಂತನ ಮಾಯೆಗೆ ಮರುಳಾಗಿ ನಾನು ಒಡಹುಟ್ಟಿದವನನ್ನೇ ವೈರಿಯೆಂದು ಭಾವಿಸಿ ದ್ವೇಷರೂಪವಾದ ಮನೋರೋಗದಿಂದ ಸಂತಪ್ತನಾಗಿಬಿಟ್ಟೆನಲ್ಲಾ. (ಶ್ಲೋಕ 30-33)

ಮಯ್ಯೈತತ್ಪ್ರಾರ್ಥಿತಂ ವ್ಯರ್ಥಂ ಚಿಕಿತ್ಸೇವ ಗತಾಯುಷಿ ।

ಪ್ರಸಾದ್ಯ ಜಗದಾತ್ಮಾನಂ ತಪಸಾ ದುಷ್ಪ್ರಸಾದನಮ್ ।
ಭವಚ್ಛಿದಮಯಾಚೇಽಹಂ ಭವಂ ಭಾಗ್ಯವಿವರ್ಜಿತಃ ॥೨೪॥

ಆಯುಸ್ಸು ತೀರಿದವನು ಚಿಕಿತ್ಸೆಮಾಡಿಸಿಕೊಳ್ಳುವುದರಿಂದ ಏನೂ ಪ್ರಯೋಜನವಿಲ್ಲ. ಅದು ಕೇವಲ ವ್ಯರ್ಥ. ಹಾಗೆಯೇ ಯಾವನನ್ನು ಪ್ರಸನ್ನಗೊಳಿಸುವುದು ಅತ್ಯಂತಕಠಿನವೋ–ಅಂತಹ ವಿಶ್ವಾತ್ಮನಾದ ವಿಷ್ಣುವನ್ನು ತಪಸ್ಸಿನಿಂದ ಮೆಚ್ಚಿಸಿ ನಾನು ಆತನಿಂದ ಏನನ್ನು ಕೇಳಿಕೊಂಡೆನೋ ಅದು ವ್ಯರ್ಥವೇ ಆಯಿತು. ಅಕಟಾ! ನಾನು ಎಂತಹ ಭಾಗ್ಯಹೀನನು? ಸಂಸಾರಬಂಧನವನ್ನು ಬಿಡಿಸುವ ಪ್ರಭುವಿನಿಂದ ನಾನು ಪುನಃ ಸಂಸಾರವನ್ನೇ ಕೇಳಿ ಪಡೆದೆನಲ್ಲಾ!

ಸ್ವಾರಾಜ್ಯಂ ಯಚ್ಛತೋ ಮೌಢ್ಯಾನ್ಮಾನೋ ಮೇ ಭಿಕ್ಷಿತೋ ಬತ ।
ಈಶ್ವರಾತ್ಕ್ಷೀಣಪುಣ್ಯೇನ ಫಲೀಕಾರಾನಿವಾಧನಃ ॥೨೫॥

ಸಾರ್ವಭೌಮನು ಪ್ರಸನ್ನನಾಗಿರುವಾಗ ದುರದೃಷ್ಟಶಾಲಿಯಾದ ದರಿದ್ರನು ಬುದ್ಧಿಹೀನನಾಗಿ ಆತನಿಂದ ಹೊಟ್ಟುಸಹಿತವಾದ ಅಕ್ಕಿಯನ್ನು ಬೇಡುವಂತೆ–ದುರದೃಷ್ಟಶಾಲಿಯಾದ ನಾನು ಬುದ್ಧಿಹೀನನಾಗಿ ಸ್ವಾರಾಜ್ಯ (ಮೋಕ್ಷ) ವನ್ನು ಕೊಡುವ ಸ್ವಾಮಿ ಶ್ರೀಹರಿಯಿಂದ ಅಭಿಮಾನವನ್ನು ಬೆಳೆಸುವ ಪದವಿಯನ್ನು ಕೇಳಿಕೊಂಡೆನು.”

ಮೈತ್ರೇಯಮಹರ್ಷಿಗಳು ವಿದುರನಿಗೆ ಹೇಳುತ್ತಾರೆ :

ಭಾಗವತೋತ್ತಮನಾದ ವಿದುರನೇ! ಶ್ರೀಮುಕುಂದನ ಪಾದಾರವಿಂದಗಳ ಮಕರಂದವನ್ನು ಪಾನಮಾಡುವ ದುಂಬಿಯಂತಿರುವ ನಿಮ್ಮಂತಹವರು ಪ್ರಭುವಿನ ಪಾದಧೂಳಿಯನ್ನು ಮಾತ್ರವೇ ಸೇವಿಸುವರು. ತಾನಾ ಗಿಯೇ ಎಷ್ಟು ದೊರಕುವುದೋ ಅಷ್ಟರಲ್ಲೇ ಸಂತೋಷಪಟ್ಟುಕೊಳ್ಳುವ ಮನಸ್ಸಿನ ಶ್ರೀಮಂತಿಕೆಯುಳ್ಳ ಅವರು ಶ್ರೀಭಗವಂತನಿಂದ ಆತನ ಸೇವೆಯ ಭಾಗ್ಯವನ್ನಲ್ಲದೇ ಬೇರೆ ಏನನ್ನೂ ಬೇಡುವುದಿಲ್ಲ. ಧ್ರುವಕುಮಾರನ ಚರಿತ್ರೆಯನ್ನು ಮುಂದುವರಿಸುತ್ತೇನೆ ; ಕೇಳು :

ಇತ್ತಕಡೆ ಉತ್ತಾನಪಾದರಾಜನಿಗೆ ತನ್ನ ಪುತ್ರನಾದ ಧ್ರುವಕುಮಾರನು ಮನೆಗೆ ಹಿಂದಿರುಗುತ್ತಿರುವನೆಂಬ ಸಮಾಚಾರ ಕೇಳಿಬರಲು, ಆತನು

ಅದನ್ನು ಮೊದಲು ನಂಬಲೇ ಇಲ್ಲ. ಸತ್ತುಹೋದವನು ಯಮಲೋಕದಿಂದ ಹಿಂದಿರುಗಿ ಬಂದ–ಎಂಬ ಸಮಾಚಾರದಂತೆ ಅದು–ಎಂದು ಆತನು ಭಾವಿಸಿ ದನು. 'ನನ್ನಂತಹ ಭಾಗ್ಯಹೀನನಿಗೆ ಇಂತಹ ಭಾಗ್ಯ ಹೇಗೆ ಬಂದೀತು?' ಎಂದು ಆತನು ಚಿಂತಿಸಿದನು. ಆದರೆ ದೇವರ್ಷಿನಾರದರು ಹೇಳಿದ್ದ ಮಾತು ನೆನಪಿಗೆ ಬಂದು ಆತನಿಗೆ ಅದರಲ್ಲಿ ನಂಬಿಕೆಬಂದಿತು. ಪರಮಾನಂದ ಪ್ರವಾಹದ ವೇಗವು ಆತನನ್ನು ಪರವಶಗೊಳಿಸಿತು. ಅತ್ಯಂತಪ್ರಸನ್ನನಾಗಿ ಆತನು ಆ ಶುಭಸಮಾಚಾರವನ್ನು ತಂದವನಿಗೆ ಒಂದು ಅಮೂಲ್ಯವಾದ ಹಾರವನ್ನು ಕೊಟ್ಟನು. ಪುತ್ರನ ಮುಖವನ್ನು ನೋಡಲು ಉತ್ಸುಕನಾಗಿ ಬಹಳ ಮಂದಿ ಬ್ರಾಹ್ಮಣರನ್ನೂ, ಕುಲವೃದ್ಧರನ್ನೂ, ಮಂತ್ರಿಗಳನ್ನೂ, ನೆಂಟರಿಷ್ಟರನ್ನೂ ಜೊತೆಯಲ್ಲಿ ಕರೆದುಕೊಂಡು, ಉತ್ತಮವಾದ ಅಶ್ವಗಳಿಂದ ಹೂಡಲ್ಪಟ್ಟಿದ್ದ ಒಂದು ಸುವರ್ಣಖಚಿತವಾದ ರಥದಲ್ಲಿ ಕುಳಿತು ಸಂಭ್ರಮ ಪೂರ್ವಕವಾಗಿ ನಗರದಿಂದ ಹೊರಬಂದನು. ಅವರ ಮುಂದೆ ಶುಭವಾದ ವೇದಪಾರಾಯಣದ ಘೋಷವು ಕೇಳಿಬರುತ್ತಿತ್ತು. ಶಂಖ-ದುಂದುಭಿ-ಕೊಳಲು–ಮುಂತಾದ ಮಂಗಳವಾದ್ಯಗಳು ಮೊಳಗುತ್ತಿದ್ದುವು. ರಾಣಿಯ ರಾದ ಸುನೀತಿ ಮತ್ತು ಸುರುಚಿಯರಿಬ್ಬರೂ ಸುವರ್ಣಾಭರಣಗಳಿಂದ ಅಲಂಕೃತರಾಗಿ ರಾಜಕುಮಾರನಾದ ಉತ್ತಮನೊಡನೆ ಪಲ್ಲಕ್ಕಿಯಲ್ಲಿ ಕುಳಿತು ಬರುತ್ತಿದ್ದರು. ಧ್ರುವಕುಮಾರನು ಉಪವನದ ಬಳಿಗೆ ಬಂದೊಡನೆಯೇ ಮಹಾರಾಜನು ರಥದಿಂದ ಧಿಗ್ಗನೆ ಕೆಳಗಿಳಿದನು. ಮಗನ ಮುಖವನ್ನು ನೋಡಲು ಎಷ್ಟೋ ದಿವಸಗಳಿಂದ ಹಂಬಲಿಸುತ್ತಿದ್ದ ಆ ತಂದೆಯು ರಭಸದಿಂದ ಮುನ್ನುಗ್ಗಿ ಪ್ರೇಮಾತುರನಾಗಿ ನಿಟ್ಟುಸಿರುಬಿಡುತ್ತಾ, ಪುತ್ರನನ್ನು ಭುಜಗಳಿಂದ ಬಾಚಿ ತಬ್ಬಿಕೊಂಡನು. ಈಗ ಬಂದಿದ್ದವನು ಹಿಂದಿನ ಧ್ರುವನಲ್ಲ. ಪರಮಾತ್ಮನ ಪವಿತ್ರವಾದ ಪಾದಪದ್ಮಗಳ ಸಾಕ್ಷಾತ್ತಾದ ಸ್ಪರ್ಶದಿಂದ ಸಮಸ್ತಪಾಪಗಳ ಕಟ್ಟನ್ನೂ ಕಳೆದುಕೊಂಡಿದ್ದ ಪುಣ್ಯಮೂರ್ತಿ, ಶುಭಕೀರ್ತಿ, ಧನ್ಯ-ಮಾನ್ಯನಾಗಿದ್ದ ಧ್ರುವಕುಮಾರ. ರಾಜನು ಬಹುದಿನಗಳಿಂದಲೂ ಆಶಿಸಿದ್ದ ದೊಡ್ಡ ಇಷ್ಟ ಈಡೇರಿತು. ಆತನು ಬಾರಿ-ಬಾರಿಗೂ ಮಗನ ತಲೆಯನ್ನು ಸವರುತ್ತಾ ತಂಪಾದ ಆನಂದಾಶ್ರುಗಳಿಂದ ಆತನಿಗೆ ಸ್ನಾನಮಾಡಿಸಿದನು. ಆ ಸಜ್ಜನಶಿರೋಮಣಿ

ಯಾದ ಕುಮಾರನು ತಂದೆಯ ಪಾದಗಳಿಗೆ ನಮಸ್ಕರಿಸಿ ಆತನ ಆಶೀರ್ವಾದಗಳನ್ನು ಪಡೆದು, ಕುಶಲಪ್ರಶ್ನೆ ಮುಂತಾದುವುಗಳಿಂದ ಸತ್ಕೃತನಾಗಿ ಇಬ್ಬರು ತಾಯಂದಿರ ಪಾದಗಳಿಗೂ ತಲೆಮುಟ್ಟಿಸಿ ನಮಸ್ಕಾರಮಾಡಿದನು. ಹಾಗೆ ಪಾದಗಳಲ್ಲಿ ಬಗ್ಗಿನಿಂತಿದ್ದ ಆ ಮಗುವನ್ನು ಸುರುಚಿಯು ಎಬ್ಬಿಸಿ ಆಲಿಂಗಿಸಿಕೊಂಡು 'ಚಿರಂಜೀವಿಯಾಗು ಮಗು!'–ಎಂದು ಕಂಬನಿಯಿಂದ ಗದ್ಗದವಾದ ವಾಣಿಯಿಂದ ಆಶೀರ್ವಾದಮಾಡಿದಳು. ನೀರು ತಾನಾಗಿಯೇ ಹಳ್ಳದಕಡೆಗೆ ಹರಿದುಬರುವಂತೆ–ಮೈತ್ರೀ, ಕರುಣೆ–ಮುಂತಾದ ಆತ್ಮಗುಣಗಳಿಂದ ಪರಮಾತ್ಮನ ಪ್ರಸನ್ನತೆಗೆ ಪಾತ್ರನಾಗಿರುವ ಸುಕೃತಿಯ ಮುಂದೆ ಎಲ್ಲ ಜೀವಿಗಳೂ ತಲೆಬಾಗುತ್ತವೆ. ಇತ್ತಕಡೆ ಉತ್ತಮನೂ ಮತ್ತು ಧ್ರುವಕುಮಾರನೂ ಪ್ರೇಮದಿಂದ ವ್ಯಾಕುಲರಾಗಿ ಒಬ್ಬರನ್ನೊಬ್ಬರು ಆಲಿಂಗಿಸಿಕೊಂಡರು. ಪರಸ್ಪರವಾದ ಅಂಗಸ್ಪರ್ಶದಿಂದ ಆನಂದಪುಳಕಿತರಾದ ಅವರಿಬ್ಬರ ಕಣ್ಣುಗಳಿಂದಲೂ ಕಂಬನಿಯ ಧಾರೆ ಹರಿಯತೊಡಗಿತು. ತಾಯಿ ಸುನೀತಿಯು ತನ್ನ ಪ್ರಾಣಕ್ಕಿಂತಲೂ ಪ್ರಿಯಕರನಾದ ಪುತ್ರನನ್ನು ಆಲಿಂಗಿಸಿಕೊಂಡು ಆ ಆನಂದದಲ್ಲಿ ತನ್ನ ಎಲ್ಲ ಮನೋವ್ಯಾಧಿಯನ್ನೂ ಕಳೆದುಕೊಂಡಳು. ಆತನ ಸುಕುಮಾರವಾದ ಅಂಗಗಳ ಸ್ಪರ್ಶದಿಂದ ಆಕೆಯು ಮೇರೆಮೀರಿದ ಆನಂದದಲ್ಲಿ ಮುಳುಗಿದಳು. ವೀರವರನಾದ ವಿದುರನೇ! ಆ ವೀರಮಾತೆಯಾದ ಸುನೀತಿಯ ಸ್ತನಗಳು ಕಂಗಳಿಂದ ಹರಿದುಬರುತ್ತಿದ್ದ ಮಂಗಳಮಯವಾದ ಅಶ್ರುಧಾರೆಗಳಿಂದ ನೆನೆದು ಅವುಗಳಿಂದ ಮತ್ತೆ-ಮತ್ತೆ ಹಾಲು ಸುರಿಯತೊಡಗಿತು. ಆಗ ಪುರಜನರು ಸುನೀತಿಯನ್ನು ಕುರಿತು, 'ಮಹಾರಾಣಿಯವರೇ! ಬಹುದಿನಗಳಿಂದ ಕಳೆದುಹೋಗಿದ್ದ ನಿಮ್ಮ ಕಣ್ಮಣಿಯಾದ ಕಂದನು ಹಿಂದಿರುಗಿ ಬಂದನು. ಎಂತಹ ಮಹಾಭಾಗ್ಯ! ಈತನು ನಮ್ಮೆಲ್ಲರ ದುಃಖವನ್ನೂ ದೂರಮಾಡುವನು. ಬಹಳ ಕಾಲ ಭೂಮಂಡಲವನ್ನು ರಕ್ಷಿಸುವನು. ನೀವು ನಿಜವಾಗಿಯೂ ಶರಣಾಗತರ ಭಯವನ್ನು ಭಂಜಿಸುವ ಭಗವಂತನಾದ ಶ್ರೀಹರಿಯನ್ನು ಚೆನ್ನಾಗಿ ಆರಾಧಿಸಿದ್ದೀರಿ. ಆತನನ್ನು ನಿರಂತರವಾಗಿ ಧ್ಯಾನಿಸುವ ಧೀರಪುರುಷರು ಪರಮದುರ್ಜಯವಾದ ಮೃತ್ಯುವನ್ನೂ ಗೆದ್ದುಬಿಡುವರಮ್ಮಾ"–ಎಂದು ಹೇಳಿ ಅಭಿನಂದನೆ ಮಾಡಿದರು. (ಶ್ಲೋಕ 36-52)

ಹೀಗೆ ಎಲ್ಲ ಜನರೂ ಧ್ರುವಕುಮಾರನನ್ನು ಮುದ್ದಿಸುತ್ತಿರಲು ಉತ್ತಾನಪಾದನು ಆತನನ್ನೂ ಮತ್ತು ಆತನ ತಮ್ಮನಾದ ಉತ್ತಮನನ್ನೂ ಒಂದು ಹೆಣ್ಣಾನೆಯ ಮೇಲೆ ಹತ್ತಿಸಿ ಎಲ್ಲರಿಂದಲೂ ಹೊಗಳಿಸಿಕೊಳ್ಳುತ್ತಾ ಪರಮಹರ್ಷದಿಂದ ಪುರವನ್ನು ಪ್ರವೇಶಿಸಿದನು. ನಗರದಲ್ಲಿ ಕುಮಾರನನ್ನು ಸ್ವಾಗತಿಸಲು ಜನರು ಅಲ್ಲಲ್ಲಿ ಮಕರಾಕಾರದ ಸುಂದರವಾದ ದ್ವಾರತೋರಣ ಗಳನ್ನು ರಚಿಸಿದ್ದರು. ಹೂವು-ಹಣ್ಣುಗಳ ಗೊಂಚಲುಗಳಿಂದಲೂ–ಗೊನೆ ಗಳಿಂದ ಕೂಡಿದ ಬಾಳೆಯ ಕಂಬಗಳಿಂದಲೂ, ಎಳೆಯ ಅಡಿಕೆಯ ಸಸಿ ಗಳಿಂದಲೂ ಸಿಂಗಾರಮಾಡಿದ್ದರು. ಪ್ರತಿಯೊಂದು ಮನೆಯ ಬಾಗಿಲುಗಳ ಲ್ಲಿಯೂ ಜಲಕಲಶಗಳನ್ನಿಟ್ಟು ದೀಪಗಳನ್ನು ಬೆಳಗಿಸಿದ್ದರು. ಮಾವಿನ ಚಿಗುರುಗಳನ್ನೂ, ವಸ್ತ್ರಗಳನ್ನೂ, ಮಾಲೆಗಳನ್ನೂ, ಮುತ್ತಿನ ಹಾರಗಳನ್ನೂ ಕಟ್ಟಿ ಅಲಂಕಾರಮಾಡಿದ್ದರು. ನಗರದ ಪ್ರಾಕಾರಗಳೂ, ಹೆಬ್ಬಾಗಿಲುಗಳೂ ಮತ್ತು ಭವ್ಯಭವನಗಳೂ ಚಿನ್ನದ ಕೆತ್ತನೆಗಳಿಂದ ಎಲ್ಲೆಡೆಯಲ್ಲೂ ಬಗೆ-ಬಗೆ ಯಾಗಿ ಅಲಂಕರಿಸಲ್ಪಟ್ಟಿರಲು ಅವುಗಳ ಶಿಖರಗಳು ವಿಮಾನಗಳ ಶಿಖರ ಗಳಂತೆ ಒಪ್ಪುತ್ತಿದ್ದುವು. ನಗರದ ರಸ್ತೆಗಳನ್ನೂ, ಚೌಕಗಳನ್ನೂ, ಅಟ್ಟ ಗಳನ್ನೂ ಗುಡಿಸಿ-ಸಾರಿಸಿ ಅವುಗಳ ಮೇಲೆ ಗಂಧೋದಕವನ್ನು ಚಿಮುಕಿಸ ಲಾಗಿತ್ತು. ಅರಳು-ಅಕ್ಷತೆಗಳೂ, ಅಕ್ಕಿ-ಹೂವು, ಹಣ್ಣುಗಳೇ ಮುಂತಾದ ಮಂಗಳೋಪಹಾರಗಳೂ ಅಳವಡಿಸಲ್ಪಟ್ಟಿದ್ದುವು. ಕುಮಾರನು ರಾಜ ಮಾರ್ಗದಲ್ಲಿ ಮೆರವಣಿಗೆ ಹೋಗುತ್ತಿರುವಾಗ ಅಲ್ಲಲ್ಲಿ ನಗರದ ಸುಂದರಿ-ಸುಮಂಗಲಿಯರು ಆತನ ದರ್ಶನಪಡೆಯಲು ನೆರೆದಿದ್ದರು. ಅವರು ವಾತ್ಸಲ್ಯದಿಂದ ಶುಭಾಶೀರ್ವಾದಗಳನ್ನು ಮಾಡುತ್ತಾ ಆತನ ಮೇಲೆ ಬಿಳಿ ಸಾಸುವೆ, ಅಕ್ಷತೆ, ಮೊಸರು, ತೀರ್ಥೋದಕ, ಗರಿಕೆ ಮತ್ತು ಹೂವು-ಹಣ್ಣು ಗಳ ಮಳೆಗರೆಯುತ್ತಿದ್ದರು. ಹೀಗೆ ಅವರ ಇಂಪಾದ ಗೀತವನ್ನು ಕೇಳುತ್ತಾ ಧ್ರುವನು ತನ್ನ ತಂದೆಯ ಅರಮನೆಯನ್ನು ಪ್ರವೇಶಿಸಿದನು. ಆ ಭವ್ಯಭವ ನವು ಬಹುಮೂಲ್ಯವಾದ ವಿವಿಧರತ್ನಗಳಿಂದ ಖಚಿತವಾಗಿ ಕಂಗೊಳಿಸು ತ್ತಿತ್ತು. ಅಲ್ಲಿ ತಂದೆಯ ವಾತ್ಸಲ್ಯದ ಸುಖವನ್ನು ಅನುಭವಿಸುತ್ತಾ ಧ್ರುವ ಕುಮಾರನು ಸ್ವರ್ಗದಲ್ಲಿ ದೇವತೆಗಳು ಹೇಗೋ ಹಾಗೆ–ಪರಮಾನಂದದಿಂದ ಇರುತ್ತಿದ್ದನು. ಅಲ್ಲಿ ಹಾಲಿನ ನೊರೆಯಂತೆ ಬೆಳ್ಳಗಿದ್ದ ಮೃದುವಾದ ಹಂಸ

ತೂಲಿಕಾತಲ್ಪಗಳೂ, ಆನೆಯ ದಂತದ ಮಂಚಗಳೂ, ಚಿನ್ನದ ಕುಸುರಿ ಕೆಲಸ ದಿಂದ ಕೂಡಿದ ಪರದೆಗಳೂ, ಬಹುಮೂಲ್ಯವಾದ ಪೀಠಗಳೂ, ಹೇರಳ ವಾದ ಚಿನ್ನದ ಸಲಕರಣೆಗಳೂ ಇದ್ದುವು. ಸ್ಫಟಿಕದಿಂದಲೂ, ಮರಕತಮಣಿ ಗಳಿಂದಲೂ ರಚಿತವಾಗಿದ್ದ ಗೋಡೆಗಳಲ್ಲಿ ಕೆತ್ತಲ್ಪಟ್ಟಿದ್ದ ರತ್ನಖಚಿತವಾಗಿದ್ದ ಹೆಣ್ಣುಬೊಂಬೆಗಳ ಕೈಗಳಲ್ಲಿ ನೂರಾರು ಮಣಿದೀಪಗಳು ಜಗಮಗಿಸುತ್ತಿ ದ್ದುವು. ಅರಮನೆಯ ಸುತ್ತಲೂ ನಾನಾಜಾತಿಯ ದಿವ್ಯವೃಕ್ಷಗಳಿಂದ ಕಣ್ಮನ ಗಳನ್ನು ಸೆಳೆಯುತ್ತಾ ಗಂಡು ಮತ್ತು ಹೆಣ್ಣುಹಕ್ಕಿಗಳ ಕಲರವಗಳಿಂದಲೂ ದುಂಬಿಗಳ ಝೇಂಕಾರಗಳಿಂದಲೂ ಕೂಡಿ ಕಿವಿಗಳನ್ನು ತಣಿಸುತ್ತಿದ್ದ ಉದ್ಯಾನವನಗಳು ವಿರಾಜಿಸುತ್ತಿದ್ದುವು. ಆ ಹೂದೋಟಗಳಲ್ಲಿ ಶೋಭಿಸುತ್ತಿದ್ದ ವೈಡೂರ್ಯಮಣಿಗಳ ಸೋಪಾನಗಳಿಂದ ರಚಿತವಾಗಿದ್ದ ತಿಳಿನೀರು ಕೊಳಗಳು ಕೆಂಪು, ನೀಲಿ ಮತ್ತು ಬಿಳಿಯ ಬಣ್ಣಗಳ ಅರಳಿದ ಕಮಲಗಳಿಂದಲೂ ಆಟವಾಡುತ್ತಿದ್ದ ಹಂಸ, ಕಾರಂಡವ, ಚಕ್ರವಾಕ ಮತ್ತು ಸಾರಸಗಳೇ ಮುಂತಾದ ನೀರುಹಕ್ಕಿಗಳಿಂದಲೂ ಕಂಗೊಳಿಸುತ್ತಿದ್ದುವು.

(ಶ್ಲೋಕ 53-64)

ರಾಜರ್ಷಿಯಾದ ಉತ್ತಾನಪಾದನು ಪುತ್ರನ ಅತ್ಯಂತ ಅದ್ಭುತವಾದ ಪ್ರಭಾವವನ್ನು ದೇವರ್ಷಿನಾರದರಿಂದ ಹಿಂದೆ ಕೇಳಿದ್ದನು. ಈಗ ಅದನ್ನು ಪ್ರತ್ಯಕ್ಷವಾಗಿಯೇ ನೋಡಿ ಆತನಿಗೆ ತುಂಬಾ ಅಚ್ಚರಿಯಾಯಿತು.

ಅನಂತರ ಆತನು ಧ್ರುವನು ವಿವಾಹದ ವಯಸ್ಸಿಗೆ ಬಂದುದನ್ನೂ, ಅಮಾತ್ಯವರ್ಗವು ಆತನ ಅಭಿಪ್ರಾಯಗಳನ್ನು ಸಮ್ಮತಿಸಿ ಆದರದ ದೃಷ್ಟಿಯಿಂದ ನೋಡುತ್ತಿರುವುದನ್ನೂ ಮತ್ತು ಹಾಗೆಯೇ ಪ್ರಜೆಗಳು ಆತನಲ್ಲಿ ಅನುರಕ್ತರಾಗಿರುವುದನ್ನೂ ಗಮನಿಸಿ ಆತನಿಗೆ ಅಖಿಲಭೂಮಂಡಲದ ಆಧಿ ಪತ್ಯದ ಪಟ್ಟಾಭಿಷೇಕವನ್ನು ಮಾಡಿದನು ಮತ್ತು ತನಗೆ ಮುಪ್ಪುಬಂದಿರುವು ದನ್ನು ತಿಳಿದು ಆತ್ಮೋದ್ಧಾರದ ಗತಿಯನ್ನು ಚಿಂತಿಸುತ್ತಾ ಸಂಸಾರದಲ್ಲಿ ವಿರಕ್ತನಾಗಿ ಅರಣ್ಯಕ್ಕೆ ಹೊರಟುಹೋದನು." (ಶ್ಲೋಕ 65-67)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಚತುರ್ಥಸ್ಕಂಧದ ೯ನೆಯ ಅಧ್ಯಾಯವು ಮುಗಿಯಿತು.

ಯಕ್ಷನಿಂದ ಉತ್ತಮನ ವಧೆ : ಧ್ರುವನು ಯಕ್ಷರೊಡನೆ ಯುದ್ಧಮಾಡಿದುದು

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ಪ್ರಜಾಪತೇರ್ದುಹಿತರಂ ಶಿಶುಮಾರಸ್ಯ ಧ್ರುವಃ ।
ಉಪಯೇಮೇ ಭ್ರಮಿಂ ನಾಮ ತತ್ಸುತೌ ಕಲ್ಪವತ್ಸರೌ ॥೧॥

"ಎಲೈ ವಿದುರನೇ! ಧ್ರುವನು ಶಿಶುಮಾರನೆಂಬ ಪ್ರಜಾಪತಿಯ ಪುತ್ರಿಯಾದ ಭ್ರಮಿ ಎಂಬುವಳನ್ನು ವಿವಾಹಮಾಡಿಕೊಂಡು ಆಕೆಯಲ್ಲಿ ಕಲ್ಪ ಮತ್ತು ವತ್ಸರ ಎಂಬ ಇಬ್ಬರು ಪುತ್ರರನ್ನು ಪಡೆದನು.

ಹಾಗೆಯೇ ಆ ಮಹಾಬಲಿಯಾದ ಧ್ರುವನು ತನ್ನ ಮತ್ತೊಬ್ಬಳು ಭಾರ್ಯೆಯಾಗಿದ್ದ, ವಾಯುಪುತ್ರಿಯಾದ ಇಳಾದೇವಿಯಲ್ಲಿ ಉತ್ಕಲನೆಂಬ ಪುತ್ರನನ್ನೂ ಮತ್ತು ಒಂದು ಕನ್ಯಾರತ್ನವನ್ನೂ ಪಡೆದನು. ಉತ್ತಮ ಕುಮಾರನು ವಿವಾಹವಾಗುವುದಕ್ಕೆ ಮೊದಲೇ ಒಮ್ಮೆ ಬೇಟೆಯಾಡುತ್ತಿದ್ದಾಗ ಹಿಮಾಲಯಪರ್ವತದ ಮೇಲೆ ಒಬ್ಬ ಮಹಾಬಲಶಾಲಿಯಾದ ಯಕ್ಷನು ಆತನನ್ನು ಕೊಂದುಹಾಕಿದನು. ಆತನ ತಾಯಿಯಾದ ಸುರುಚಿಯೂ ಮರಣದಲ್ಲಿ ಆತನನ್ನು ಹಿಂಬಾಲಿಸಿದಳು.

ತನ್ನ ತಮ್ಮನು ಯಕ್ಷನಿಂದ ಸಾಯಿಸಲ್ಪಟ್ಟನೆಂಬ ಸಮಾಚಾರವನ್ನು ಕೇಳಿದೊಡನೆಯೇ ಧ್ರುವನಿಗೆ ಸಹಿಸಲಾರದ ಕ್ರೋಧವೂ, ಶೋಕವೂ, ಆತುರವೂ ಉಕ್ಕೇರಿಬಂದುವು. ಆತನು ವಿಜಯರಥವನ್ನು ಏರಿ ಯಕ್ಷರ ನೆಲೆಯಾದ ಅಲಕಾವತಿಗೆ ಪ್ರಯಾಣಬೆಳೆಸಿದನು. ಉತ್ತರದಿಕ್ಕಿಗೆ ಹೋಗಿ ಆತನು ಹಿಮಾಲಯದ ತಪ್ಪಲಿನಲ್ಲಿ ಯಕ್ಷರಿಂದ ತುಂಬಿದ್ದ ಕುಬೇರನ ರಾಜಧಾನಿಯನ್ನು ಕಂಡನು. ಅಲ್ಲಿ ರುದ್ರದೇವರ ಅನುಚರರಾದ ಅನೇಕ ಭೂತ-ಪ್ರೇತ-ಪಿಶಾಚಿಗಳೂ ವಾಸವಾಗಿದ್ದುವು. ಅಲ್ಲಿಗೆ ತಲುಪಿ ಆ ಮಹಾ ಬಾಹುವಾದ ಧ್ರುವನು ಹತ್ತು ದಿಕ್ಕುಗಳಲ್ಲಿಯೂ ತುಂಬಿ ಮೊಳಗುವಂತೆ ಶಂಖಘೋಷವನ್ನು ಮಾಡಿದನು. ಆ ಧ್ವನಿಯನ್ನು ಕೇಳಿ ಯಕ್ಷಪುತ್ರಿಯರಿಗೆ ಮಿತಿಮೀರಿದ ಗಾಬರಿಯುಂಟಾಗಿ ಅವರ ಕಣ್ಣುಗಳು ಭಯದಿಂದ

ಕಾತರಗೊಂಡುವು. ಮಹಾಬಲಶಾಲಿಗಳಾದ ಯಕ್ಷವೀರರು ಆ ಶಂಖನಾದವನ್ನು ಸಹಿಸಲಾರದೇ ಕ್ರೋಧೋದ್ದೀಪಿತರಾಗಿ ಬಗೆ-ಬಗೆಯ ಅಸ್ತ್ರ-ಶಸ್ತ್ರಗಳನ್ನು ಹಿಡಿದುಕೊಂಡು ನಗರಿಯಿಂದ ಹೊರಗೆ ಬಂದು ಧ್ರುವನನ್ನು ಮುತ್ತಿದರು. ಮಹಾರಥಿಯಾದ ಧ್ರುವನು ಶ್ರೇಷ್ಠತಮನಾದ ಬಿಲ್ಗಾರನಾಗಿದ್ದನು. ಆತನು ಒಟ್ಟಿಗೇ ಬಾಣಪ್ರಯೋಗಮಾಡಿ ಆ ಯಕ್ಷರಲ್ಲಿ ಒಬ್ಬೊಬ್ಬನನ್ನೂ ಮೂರು ಮೂರು ಬಾಣಗಳಿಂದ ಹೊಡೆದನು. ತಮ್ಮಲ್ಲಿ ಪ್ರತಿಯೊಬ್ಬರ ತಲೆಯ ಮೇಲೂ ಮೂರು ಮೂರು ಬಾಣಗಳು ನೆಟ್ಟುಕೊಂಡಿರುವುದನ್ನು ಕಂಡು ತಾವು ಖಂಡಿತವಾಗಿಯೂ ಸೋತುಹೋಗುವುದಾಗಿ ದೃಢಪಟ್ಟು ಅವರೆಲ್ಲರೂ ಧ್ರುವನ ಅದ್ಭುತವಾದ ಪರಾಕ್ರಮವನ್ನು ಪ್ರಶಂಸೆಮಾಡತೊಡಗಿದರು. ಅನಂತರ–ಸರ್ಪವು ಮತ್ತೊಬ್ಬರು ತನ್ನನ್ನು ತುಳಿದರೆ ಸಹಿಸದೇ ಕೆರಳುವಂತೆ–ಅವರೂ ಧ್ರುವನ ಪರಾಕ್ರಮವನ್ನು ಸಹಿಸಲಾರದೇ ಕೋಪದಿಂದ ಕೆರಳಿ ಅವನ ಬಾಣಗಳಿಗೆ ಉತ್ತರವಾಗಿ ಆತನು ಬಿಟ್ಟುದಕ್ಕೆ ಎರಡರಷ್ಟು ಬಾಣಗಳನ್ನು ಒಟ್ಟಿಗೇ ಪ್ರಯೋಗಿಸಿಬಿಟ್ಟರು. ಅಲ್ಲಿದ್ದ ಒಂದು ಲಕ್ಷದ ಮೂವತ್ತು ಸಾವಿರ ಮಂದಿಯೂ ಒಟ್ಟಿಗೇ ಬಾಣಪ್ರಯೋಗಮಾಡಿದರು. ಧ್ರುವನ ಮೇಲೆ ಸೇಡುತೀರಿಸಿಕೊಳ್ಳಲು ಅವರು ಅತ್ಯಂತ ಕ್ರುದ್ಧರಾಗಿ ರಥ ಮತ್ತು ಸಾರಥಿ ಸಮೇತನಾದ ಆತನ ಮೇಲೆ ಪರಿಘ, ಖಡ್ಗ, ಪ್ರಾಸ, ತ್ರಿಶೂಲ, ಪರಶು, ಶಕ್ತಿ, ಋಷ್ಟಿ, ಭುಶುಂಡಿ ಮತ್ತು ಚಿತ್ರ-ವಿಚಿತ್ರವಾದ ಹದ್ದಿನ ರೆಕ್ಕೆಗಳುಳ್ಳ ಬಾಣಗಳ ಮಳೆಯನ್ನೇ ಕರೆದರು. ಭಯಂಕರವಾದ ಬಾಣಗಳ ಮಳೆಯಲ್ಲಿ ಧ್ರುವನು ಪೂರ್ಣವಾಗಿ ಮುಚ್ಚಿಹೋದನು. ದೊಡ್ಡದಾಗಿ ಮಳೆಬಿದ್ದಾಗ ಪರ್ವತವು ಕಾಣಿಸದೇ ಹೋಗುವಂತೆ–ಆ ಬಾಣವರ್ಷದ ಫಲವಾಗಿ ಧ್ರುವನೂ ಕಣ್ಣಿಗೇ ಕಾಣದಾದನು. ಆಗ ಆಕಾಶದಲ್ಲಿದ್ದು ಆ ದೃಶ್ಯವನ್ನು ನೋಡುತ್ತಿದ್ದ ಸಿದ್ಧಗಣಗಳೆಲ್ಲರೂ 'ಹಾ! ಹಾ! ಈ ಮನುವಂಶದ ಸೂರ್ಯನು ಯಕ್ಷಸೇನೆಯೆಂಬ ಸಮುದ್ರದಲ್ಲಿ ಮುಳುಗಿ ಅಸ್ತಂಗತನಾಗಿಬಿಟ್ಟನಲ್ಲಾ!'–ಎಂದು ಗೋಳಾಡತೊಡಗಿದರು. ಯಕ್ಷರು ತಮ್ಮ ವಿಜಯವನ್ನು ಘೋಷಿಸುತ್ತಾ ಯುದ್ಧಕ್ಷೇತ್ರದಲ್ಲಿ ಸಿಂಹದಂತೆ

ಗರ್ಜಿಸತೊಡಗಿದರು. ಆದರೆ ಈ ನಡುವೆ ಸೂರ್ಯಭಗವಂತನು ಮಂಜನ್ನು ಭೇದಿಸಿಕೊಂಡು ಹೊರಬರುವಂತೆ–ಧ್ರುವನ ರಥವು ಇದ್ದಕ್ಕಿದ್ದಂತೆ ಹೊರಗೆ ಪ್ರಕಟವಾಗಿಬಿಟ್ಟಿತು. (ಶ್ಲೋಕ 2-15)

ಆ ಧ್ರುವಕುಮಾರನು ತನ್ನ ದಿವ್ಯವಾದ ಧನುಸ್ಸನ್ನು ಟಂಕಾರಮಾಡಿ ಶತ್ರುಗಳ ಹೃದಯವನ್ನು ನಡುಗಿಸಿಬಿಟ್ಟನು ಮತ್ತು ಪ್ರಚಂಡವಾದ ಬಾಣಗಳ ಮಳೆಯನ್ನೇ ಕರೆದು–ಬಿರುಗಾಳಿಯು ಮೋಡಗಳನ್ನು ಚದುರಿಸಿಬಿಡುವಂತೆ–ಅವರ ಅಸ್ತ್ರ-ಶಸ್ತ್ರಗಳನ್ನು ಚದುರಿಸಿಬಿಟ್ಟನು. ಆತನ ಧನುಸ್ಸಿನಿಂದ ಹೊರಬಂದ ತೀಕ್ಷ್ಣವಾದ ಬಾಣಗಳು ಯಕ್ಷ-ರಾಕ್ಷಸರ ಕವಚಗಳನ್ನು ಭೇದಿಸಿ–ಇಂದ್ರನು ಪ್ರಯೋಗಿಸಿದ ವಜ್ರಗಳು ಪರ್ವತಗಳೊಳಗೆ ನುಗ್ಗುವಂತೆ–ಅವರೊಳಗೆ ನುಗ್ಗಿದುವು. ಧ್ರುವನ ಬಾಣಗಳಿಂದ ಕತ್ತರಿಸಿಹಾಕಲ್ಪಟ್ಟ ಸುಂದರವಾದ ಕುಂಡಲಸಹಿತವಾದ ತಲೆಗಳಿಂದಲೂ, ಸುವರ್ಣವರ್ಣವಾದ ತಾಳೆಮರಕ್ಕೆ ಸದೃಶವಾದ ಮೊಣಕಾಲುಗಳಿಂದಲೂ, ಬಳೆಗಳಿಂದ ಭೂಷಿತವಾದ ಬಾಹುಗಳಿಂದಲೂ, ಹಾರಗಳು-ತೋಳುಬಂದಿಗಳು, ಕಿರೀಟಗಳು ಮತ್ತು ಬಹುಮೂಲ್ಯವಾದ ರುಮಾಲುಗಳಿಂದಲೂ ನಿಬಿಡವಾಗಿ, ವೀರರಿಗೆ ರಮಣೀಯವಾದ ಆ ಯುದ್ಧಭೂಮಿಯು ಅತ್ಯಂತರಮಣೀಯವಾಗಿ ಕಾಣುತ್ತಿತ್ತು. ಅಳಿದುಳಿದ ಯಕ್ಷರು, ಕ್ಷತ್ರಿಯಶ್ರೇಷ್ಠನಾದ ಧ್ರುವನ ಬಾಣ ಗಳಿಂದ ಸಾಮಾನ್ಯವಾಗಿ ತಮ್ಮ ಅಂಗಗಳೆಲ್ಲಾ ಛಿನ್ನ-ಭಿನ್ನವಾಗಿಬಿಟ್ಟಿದ್ದ ರಿಂದ–ಸಿಂಹದೊಡನೆ ಸೆಣಸಿ ಸೋತ ಗಜರಾಜನಂತೆ–ಭಯಗ್ರಸ್ತರಾಗಿ ಯುದ್ಧರಂಗದಿಂದ ಪಲಾಯನಮಾಡಿಬಿಟ್ಟರು. ಆ ವಿಸ್ತಾರವಾದ ರಣ ಭೂಮಿಯಲ್ಲಿ ಅಸ್ತ್ರ-ಶಸ್ತ್ರಗಳನ್ನು ಹಿಡಿದಿದ್ದ ಶತ್ರುಗಳಲ್ಲಿ ಒಂದು ಪಿಳ್ಳೆಯೂ ಕಾಣದಿರಲು ನರಶ್ರೇಷ್ಠನಾದ ಧ್ರುವನಿಗೆ ಅಲಕಾಪುರಿಯನ್ನು ನೋಡಬೇಕೆಂಬ ಇಷ್ಟವೇನೋ ಉಂಟಾಯಿತು. ಆದರೆ ಆತನು ಪುರದ ಒಳಕ್ಕೆ ಹೋಗಲಿಲ್ಲ. 'ಈ ಮಾಯಾವಿಗಳು ಏನು ಮಾಡಬಯಸುತ್ತಾರೋ? ಎಂಬುದು ಮನುಷ್ಯರಿಗೆ ತಿಳಿಯುವುದಿಲ್ಲ'–ಎಂದು ಸಾರಥಿಗೆ ಹೇಳಿ ಆತನು ಆ ವಿಚಿತ್ರವಾದ ರಥದಲ್ಲಿಯೇ ಕುಳಿತುಕೊಂಡು, ಶತ್ರುಗಳು ಹೊಸದಾಗಿ ಆಕ್ರಮಣಮಾಡಬಹುದು–ಎಂಬ ಅಶಂಕೆಯಿಂದ ಸಾವಧಾನವಾಗಿಯೇ ಇದ್ದನು. ಅಷ್ಟರಲ್ಲಿಯೇ ಆತನಿಗೆ ಸಮುದ್ರದ ಭೋರ್ಗರೆತವನ್ನು ಹೋಲುವ

ಭಯಂಕರವಾದ ಶಬ್ದವು ಕೇಳಿಬರತೊಡಗಿತು. ಎಲ್ಲ ದಿಕ್ಕುಗಳಲ್ಲಿಯೂ ಬಿರುಗಾಳಿಯು ಬೀಸತೊಡಗಿ ಧೂಳು ತುಂಬಿಕೊಂಡಿತು. (ಶ್ಲೋಕ 16-22)

ಎಲೈ ಅನಘನಾದ ವಿದುರನೇ! ಕ್ಷಣಕಾಲದಲ್ಲಿಯೇ ಇಡೀ ಆಕಾಶದಲ್ಲಿ ಮೋಡಗಳ ಸಾಲುಗಳು ತುಂಬಿಕೊಂಡವು. ಎಲ್ಲೆಡೆಗಳಲ್ಲಿಯೂ ಭಯಂಕರವಾದ ಬರಸಿಡಿಲುಗಳೊಡನೆ ಮಿಂಚುಗಳು ಥಳ-ಥಳಿಸತೊಡಗಿದುವು. ಮೋಡಗಳಿಂದ ರಕ್ತ, ಮಾಂಸ, ಕೀವು, ಮಲ-ಮೂತ್ರ ಕೊಬ್ಬುಗಳು ಮಳೆಯಂತೆ ಸುರಿಯತೊಡಗಿದುವು. ತಲೆಯಿಲ್ಲದ ದೇಹಗಳು ಮುಗಿಲಿ ನಿಂದ ತೊಪ-ತೊಪನೆ ಬೀಳತೊಡಗಿದುವು. ಮತ್ತೆ ಆಕಾಶದಲ್ಲಿ ಒಂದು ಪರ್ವತವು ಕಾಣಿಸಿಕೊಂಡು ಎಲ್ಲ ದಿಕ್ಕುಗಳಿಂದಲೂ ಕಲ್ಲು-ಕವಣೆಗಳ ಮಳೆ ಸುರಿಯತೊಡಗಿತು. ಗದೆಗಳೂ, ಪರಿಘಗಳೂ, ಕತ್ತಿಗಳೂ, ಒನಕೆಗಳೇ ಮುಂತಾದ ಆಯುಧಗಳೂ ಬೀಳತೊಡಗಿದುವು. ಸಾವಿರಾರು ಸರ್ಪಗಳು ಸಿಡಿಲಿನಂತೆ ನಿಟ್ಟುಸಿರುಬಿಡುತ್ತಾ–ಬುಸುಗುಟ್ಟುತ್ತಾ–ರೋಷಪೂರ್ಣವಾದ ಕಣ್ಣುಗಳಿಂದ ಕೆಂಡಗಳನ್ನು ಕಾರುತ್ತಿರುವುದು ಕಾಣಿಸಿತು. ಮದಿಸಿದ ಆನೆಗಳೂ, ಸಿಂಹಗಳೂ, ಹುಲಿಗಳೂ ಹಿಂಡು-ಹಿಂಡಾಗಿ ಓಡೋಡಿ ಬರುತ್ತಿರುವುದು ಗೋಚರಿಸಿತು. ಸಮುದ್ರಗಳು ಪ್ರಳಯಕಾಲದಲ್ಲಿ ಹೇಗೋ ಹಾಗೆ–ಭೀಕರವಾಗಿ ಭೋರ್ಗರೆಯುತ್ತಾ ಮುಗಿಲೆತ್ತರದ ಅಲೆಗಳಿಂದ ಎಲ್ಲ ಕಡೆಗಳಿಂದಲೂ ಭೂಮಿಯನ್ನು ಮುಳುಗಿಸುತ್ತಾ ಬರುತ್ತಿರುವುದು ಕಾಣಿಸಿತು. ಕ್ರೂರಿಗಳಾದ ಅಸುರರು ತಮ್ಮ ಮಾಯೆಯಿಂದ ಹೇಡಿಗಳನ್ನು ಹೆದರಿಕೆಯಿಂದ ನಡುಗಿಸುವಂತಹ ಇನ್ನೂ ಹಲವಾರು ಉತ್ಪಾತಗಳನ್ನು ತೋರಿದರು. ಧ್ರುವನ ಮೇಲೆ ಅಸುರರು ದುಸ್ತರವಾದ ಮಾಯೆಯನ್ನು ಸೃಷ್ಟಿಸುತ್ತಿದ್ದಾರೆ–ಎಂಬುದನ್ನು ಕೇಳಿ ಮುನಿ-ಮಹರ್ಷಿಗಳು ಅಲ್ಲಿಗೆ ಬಂದು ಆತನಿಗೆ ಮಂಗಳವನ್ನು ಹಾರೈಸುತ್ತಾ : (ಶ್ಲೋಕ 23-29)

ಔತ್ತಾನಪಾದೇ ಭಗವಾಂಸ್ತವ ಶಾರ್ಙ್ಗಧನ್ವಾ
ದೇವಃ ಕ್ಷಿಣೋತ್ವವನತಾರ್ತಿಹರೋ ವಿಪಕ್ಷಾನ್ ।
ಯನ್ನಾಮಧೇಯಮಭಿಧಾಯ ನಿಶಮ್ಯ ಚಾದ್ಧಾ
ಲೋಕೋಽಞ್ಜಸಾ ತರತಿ ದುಸ್ತರಮಙ್ಗ ಮೃತ್ಯುಮ್ ॥

“ಉತ್ತಾನಪಾದನ ಸುಪುತ್ರನೇ! ಧ್ರುವಸಾರ್ವಭೌಮ! ಹೆದರಬೇಡ.

ಶರಣಾಗತರ ಭಯವನ್ನು ಭಂಜಿಸುವ (ಹೋಗಲಾಡಿಸುವ) ಭಗವಂತನಾದ ನಾರಾಯಣನು ನಿನ್ನ ಶತ್ರುವನ್ನು ಸಂಹರಿಸಿಬಿಡುವನು. ನಿನಗೆ ಜಯವನ್ನು ದೊರಕಿಸಿಕೊಡುವನು. ಶ್ರೀಭಗವಂತನ ದಿವ್ಯನಾಮಧೇಯವನ್ನು ಕೇಳಿದರೂ ಸಾಕು, ಕೀರ್ತನೆಮಾಡಿದರೂ ಸಾಕು–ಮನುಷ್ಯನು ದಾಟಲು ಕಷ್ಟವಾದ ಮೃತ್ಯುವನ್ನೂ ಶೀಘ್ರವಾಗಿ ಆಯಾಸವಿಲ್ಲದೇ ದಾಟಿಬಿಡುವನು"–ಎಂದು ಆಶೀರ್ವಾದಮಾಡಿದರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಚತುರ್ಥಸ್ಕಂಧದ ೧೦ನೆಯ ಅಧ್ಯಾಯವು ಮುಗಿಯಿತು.

ಚತುರ್ಥಸ್ಕಂಧ ೧೧ನೆಯ ಅಧ್ಯಾಯ

ಸ್ವಾಯಂಭುವಮನುವು ಯುದ್ಧವನ್ನು ನಿಲ್ಲಿಸುವಂತೆ ಧ್ರುವನಿಗೆ ಆದೇಶ ನೀಡಿದುದು

ನಿಶಮ್ಯ ಗದತಾಮೇವಮೃಷೀಣಾಂ ಧನುಷಿ ಧ್ರುವಃ ।
ಸಂದಧೇಽಸ್ತ್ರಮುಪಸ್ಪೃಶ್ಯ ಯನ್ನಾರಾಯಣನಿರ್ಮಿತಮ್ ॥೧॥

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ಋಷಿಗಳು ಹೀಗೆ ಹೇಳುತ್ತಿರುವುದನ್ನು ಕೇಳಿ ಧ್ರುವಸಾರ್ವಭೌಮನು ಶುದ್ಧಾಚಮನಮಾಡಿ ಶ್ರೀಮನ್ನಾರಾಯಣನು ನಿರ್ಮಿಸಿದ ನಾರಾಯಣಶಾಸ್ತ್ರವೆಂಬ ಅಸ್ತ್ರವನ್ನು ಬಿಲ್ಲಿಗೆ ಏರಿಸಿದನು.

ನಾರಾಯಣಾಸ್ತ್ರವನ್ನು ಸಂಧಾನಮಾಡಿದೊಡನೆಯೇ–ಜ್ಞಾನೋದಯವಾದಾಗ ಅವಿದ್ಯೆಯೇ ಮುಂತಾದ ಎಲ್ಲ ಕ್ಲೇಶಗಳೂ ನಾಶಹೊಂದುವಂತೆ–ಯಕ್ಷರು ಹೂಡಿದ್ದ ಬಗೆ-ಬಗೆಯ ಮಾಯೆಗಳೆಲ್ಲವೂ ನಾಶಹೊಂದಿ ಬಿಟ್ಟುವು. ಆತನು ಹಾಗೆ ನಾರಾಯಣಮಹರ್ಷಿಯಿಂದ ಆವಿಷ್ಕೃತವಾದ ಆ ಅಸ್ತ್ರವನ್ನು ಧನುಸ್ಸಿನಲ್ಲಿ ಸಂಧಾನಮಾಡಿದೊಡನೆಯೇ ಅದರಿಂದ ಚಿನ್ನದ ಗರಿಗಳಿಂದಲೂ, ರಾಜಹಂಸದ ಪಕ್ಷಿಗಳಿಂದಲೂ ಕೂಡಿದ ತೀಕ್ಷ್ಣವಾದ ಬಾಣಗಳು ಹೊರಬಂದು–ನವಿಲುಗಳು ಕೇಕೆಹಾಕುತ್ತಾ ಅರಣ್ಯಕ್ಕೆ ನುಗ್ಗುವಂತೆ–ಭಯಂಕರವಾಗಿ ಶಬ್ದ ಮಾಡುತ್ತಾ ಶತ್ರುಸೇನೆಯ ಒಳಗೆ ನುಗ್ಗಿದುವು.

ತೀಕ್ಷ್ಣವಾದ ಧಾರೆಗಳಿಂದ ಕೂಡಿದ್ದ ಆ ಬಾಣಗಳು ಶತ್ರುಗಳನ್ನು ತುಂಬಾ ಉಪದ್ರವಗೊಳಿಸಿದುವು. ಆಗ ರಣಾಂಗಣದಲ್ಲಿದ್ದ ಬಹುಮಂದಿ ಯಕ್ಷರು ಕುಪಿತರಾಗಿ ಅಸ್ತ್ರ-ಶಸ್ತ್ರಗಳನ್ನು ಸಿದ್ಧಪಡಿಸಿಕೊಂಡು–ಗರುಡನು ಕೆಣಕಿದಾಗ ದೊಡ್ಡ-ದೊಡ್ಡ ಸರ್ಪಗಳು ಹೆಡೆಗಳನ್ನು ಎತ್ತಿಕೊಂಡು ಅದರ ಕಡೆಗೆ ಓಡು ವಂತೆ ನಾನಾಕಡೆಗಳಿಂದ ಧ್ರುವಮಹಾರಾರಾಜನ ಮೇಲೆ ಮುತ್ತಿಗೆಹಾಕಲು ಬಂದರು. ಹಾಗೆ ಮುತ್ತಿಗೆಹಾಕಲು ಬರುತ್ತಿರುವುದನ್ನು ಕಂಡು ಧ್ರುವನು ತನ್ನ ಬಾಣಗಳಿಂದ ಅವರ ಭುಜಗಳನ್ನೂ, ಮೊಣಕಾಲುಗಳನ್ನೂ, ಹೆಗಲು, ಹೊಟ್ಟೆಗಳೇ ಮುಂತಾದ ಅಂಗೋಪಾಂಗಗಳನ್ನೂ ಕತ್ತರಿಸಿ–ಊರ್ಧ್ವರೇತಸ್ಕ ರಾದ ಮುನಿಗಳು ಸೂರ್ಯಮಂಡಲವನ್ನು ಭೇದಿಸಿಕೊಂಡು ಹೋಗು ವಂತೆ–ಅವರೆಲ್ಲರನ್ನೂ ಸರ್ವಶ್ರೇಷ್ಠವಾದ ಲೋಕಕ್ಕೆ ಹೋಗುವಂತೆ ಮಾಡಿ ದನು. ವಿಚಿತ್ರವಾದ ರಥವನ್ನು ಏರಿದ್ದ ಧ್ರುವನು ನಿರಪರಾಧಿಗಳಾದ ಅನೇಕ ಯಕ್ಷರನ್ನು ಸಂಹರಿಸುತ್ತಿರುವುದನ್ನು ಕಂಡು ಆತನ ಪಿತಾಮಹನಾದ ಸ್ವಾಯುಂಭುವಮನುವಿಗೆ ಅವರ ಮೇಲೆ ಕನಿಕರವುಂಟಾಯಿತು. ಆತನು ಅನೇಕ ಮಹರ್ಷಿಗಳೊಡನೆ ಅಲ್ಲಿಗೆ ಬಂದು ತನ್ನ ಮೊಮ್ಮಗನಿಗೆ ಹೀಗೆ ತಿಳಿವಳಿಕೆ ನೀಡಿದನು :

"ಮಗು ಧ್ರುವ! ಸಾಕು-ಸಾಕು. ಹೀಗೆ ಅಧಿಕವಾದ ಕೋಪವನ್ನು ತೋರಿಸುವುದು ತರವಲ್ಲ. ಕೋಪವೆಂಬ ಪಾಪಿಯು ನರಕಕ್ಕೆ ಬಾಗಿಲಾಗಿದೆ. ಅದಕ್ಕೆ ವಶನಾಗಿ ನೀನು ಈ ನಿರಪರಾಧಿಗಳಾದ ಯಕ್ಷರನ್ನು ಸಂಹರಿ ಸಿದ್ದೀಯೆ. ವತ್ಸ! ನೀನು ಯಾವ ಅಪರಾಧವನ್ನೂ ಮಾಡದೇ ಇರುವ ಯಕ್ಷ ರನ್ನು ಸಂಹರಿಸಲು ತೊಡಗಿರುವುದು ನಮ್ಮ ವಂಶಕ್ಕೆ ತಕ್ಕುದಾದ ಕರ್ಮ ವಲ್ಲ. ಸಾಧುಗಳು ಇದನ್ನು ತೆಗಳುತ್ತಾರೆ. ನಿನಗೆ ತಮ್ಮನ ಮೇಲೆ ಅತಿಶಯ ವಾದ ಪ್ರೀತಿಯಿರುವುದೇನೋ ಸರಿಯೇ. ಆದರೆ ಆತನ ವಧೆಯಿಂದ ಸಂತಾಪಗೊಂಡ ನೀನು, ಯಾವನೋ ಒಬ್ಬ ಯಕ್ಷನು ಮಾಡಿದ ಅಪರಾಧ ಕ್ಕಾಗಿ ಬಹುಮಂದಿ ಯಕ್ಷರನ್ನು ಸಂಹರಿಸಿರುವೆಯಲ್ಲಾ! ಈ ಜಡವಾದ ದೇಹವನ್ನೇ ಆತ್ಮವೆಂದು ತಿಳಿದು ಇದಕ್ಕೋಸ್ಕರ ಪಶುಗಳಂತೆ ಪ್ರಾಣಿಗಳನ್ನು ಹಿಂಸೆಮಾಡುವುದು ಭಗವದ್ಭಕ್ತರಾದ ಸಾಧುಗಳು ಹಿಡಿಯುವ ಮಾರ್ಗ ವಲ್ಲ. ಶ್ರೀಭಗವಂತನ ಆರಾಧನೆಮಾಡಿ ಆತನನ್ನು ಒಲಿಸಿಕೊಳ್ಳುವುದು

ತುಂಬಾ ಕಠಿಣವಾದ ಕೆಲಸ. ಆದರೆ ನೀನು ಬಾಲ್ಯದಲ್ಲಿಯೇ ಸಮಸ್ತಭೂತ ಗಳಿಗೂ ಆಶ್ರಯನಾಗಿರುವ ಆ ಶ್ರೀಹರಿಯನ್ನು ಸರ್ವಭೂತಾತ್ಮನೆಂಬ ಭಾವನೆಯಿಂದ ಆರಾಧನೆಮಾಡಿ ಪರಮಪದವನ್ನೂ ಗಳಿಸಿದ್ದೀಯೆ. ಆ ಮಹಾಪ್ರಭುವೂ ನಿನ್ನನ್ನು ತನ್ನ ಪ್ರಿಯಭಕ್ತನೆಂದು ತಿಳಿದುಕೊಂಡಿದ್ದಾನೆ. ಅದಕ್ಕಾಗಿ ನಿನ್ನನ್ನು ಪ್ರಭುವಿನ ಭಕ್ತರೂ ಆದರಿಸುತ್ತಾರೆ. ನೀನು ಸಾಧುಗಳಿಗೆಲ್ಲಾ ಮಾರ್ಗದರ್ಶಕನೂ ಆಗಿದ್ದೀಯೆ. ಹೀಗಿದ್ದರೂ ನೀನು ಏಕೆ ಇಂತಹ ನಿಂದ್ಯವಾದ ಕರ್ಮವನ್ನು ಮಾಡುತ್ತಿರುವೆ? ಸರ್ವಾತ್ಮನಾದ ಆ ಶ್ರೀಹರಿಯು–ತನಗಿಂತಲೂ ದೊಡ್ಡವರಲ್ಲಿ ಸಹನೆತೋರುವುದು, ಚಿಕ್ಕವರಲ್ಲಿ ದಯೆತೋರುವುದು, ಸರಿಸಮಾನರಲ್ಲಿ ಸ್ನೇಹವನ್ನು ಬೆಳೆಸುವುದು ಮತ್ತು ಸಮಸ್ತಜೀವಿಗಳ ವಿಷಯದಲ್ಲಿಯೂ ಸಮತ್ವವನ್ನು ತೋರಿಸುವುದು–ಎಂಬ ಈ ವರ್ತನೆಯಿಂದಲೇ ಪ್ರಸನ್ನನಾಗುವನು ಮತ್ತು ಹಾಗೆ ಪ್ರಭುವನ್ನು ಪ್ರಸನ್ನಗೊಳಿಸುವ ಪುರುಷನು ಅದರಿಂದ ಪ್ರಾಕೃತಗುಣಗಳನ್ನೂ ಮತ್ತು ಅವುಗಳ ಕಾರ್ಯರೂಪವಾದ ಲಿಂಗಶರೀರವನ್ನೂ ಬಿಟ್ಟು ಪರಮಾ ನಂದಸ್ವರೂಪನಾದ ಬ್ರಹ್ಮಪದವನ್ನು ಹೊಂದುತ್ತಾನೆ. (ಶ್ಲೋಕ 2-14)

ಮಗು, ಧ್ರುವ! ದೇಹವೇ ಮುಂತಾದ ರೂಪದಲ್ಲಿ ಪರಿಣಾಮ ಹೊಂದಿರುವ ಪಂಚಭೂತಗಳಿಂದಲೇ ಸ್ತ್ರೀ-ಪುರುಷರು ಹುಟ್ಟುತ್ತಾರೆ ಮತ್ತು ಅವರ ಪರಸ್ಪರಸೇರುವಿಕೆಯಿಂದ ಇತರ ಸ್ತ್ರೀ-ಪುರುಷರು ಉತ್ಪನ್ನರಾಗುತ್ತಾರೆ. ಹೀಗೆ ಶ್ರೀಭಗವಂತನ ಮಾಯೆಯಿಂದ ಸತ್ತ್ವಾದಿಗುಣಗಳ ವೈಷಮ್ಯದಿಂದಲೇ ಭೂತಗಳಿಂದ ಶರೀರಗಳ ರಚನೆಯು ಆಗುವಂತೆ– ಅವುಗಳ ಸ್ಥಿತಿ ಮತ್ತು ಲಯಗಳೂ ಆಗುತ್ತವೆ. ಎಲೈ ಪುರುಷಶ್ರೇಷ್ಠನೇ! ಗುಣಾತೀತನಾಗಿರುವ ಪರಮಾತ್ಮನಾದರೋ ಇದರಲ್ಲಿ ಕೇವಲ ನಿಮಿತ್ತವಾಗಿದ್ದಾನೆ. ಆತನ ಆಶ್ರಯದಲ್ಲೇ ಈ ಕಾರ್ಯ-ಕಾರಣಾತ್ಮಕವಾದ ಜಗತ್ತು–ಸೂಜಿಗಲ್ಲಿನ ಆಶ್ರಯದಿಂದ ಕಬ್ಬಿಣವು ಹೇಗೋ ಹಾಗೆ–ಸುತ್ತುತ್ತಿರುವುದು. ಕಾಲ ಶಕ್ತಿಯ ಮೂಲಕ ಕ್ರಮವಾಗಿ ಸತ್ತ್ವಾದಿಗುಣಗಳಲ್ಲಿ ಕ್ಷೋಭೆಯುಂಟಾದರೆ ಲೀಲಾಮಯನಾದ ಶ್ರೀಭಗವಂತನ ಶಕ್ತಿಯೂ ಸೃಷ್ಟಿಯೇ ಮುಂತಾದ ರೂಪಗಳಲ್ಲಿ ವಿಭಜನೆಹೊಂದುತ್ತದೆ. ಆದ್ದರಿಂದ ಶ್ರೀಭಗವಂತನು ವಾಸ್ತವವಾಗಿ ಅಕರ್ತೃವಾಗಿದ್ದರೂ ಜಗತ್ತನ್ನು ರಚನೆಮಾಡುತ್ತಾನೆ.

ಸಂಹಾರಕನಲ್ಲದಿದ್ದರೂ ಸಂಹಾರಮಾಡುತ್ತಾನೆ. ನಿಜವಾಗಿಯೂ ಅನಂತನಾದ ಆ ಭಗವಂತನ ಲೀಲೆಯೂ ಅತ್ಯಂತ ಅಚಿಂತನೀಯವಾದುದೇ ಸರಿ. ವತ್ಸ, ಧ್ರುವ! ಕಾಲಸ್ವರೂಪಿಯಾದ, ಅವ್ಯಯನಾದ ಆ ಪರಮಾತ್ಮನು ತಾನು ಅಂತರಹಿತನಾಗಿದ್ದರೂ ಜಗತ್ತಿಗೆ ಅಂತವನ್ನು ತರುತ್ತಾನೆ ಮತ್ತು ಅನಾದಿಯಾಗಿದ್ದರೂ ಜಗತ್ತಿನ ಆದಿಕರ್ತೃವಾಗಿದ್ದಾನೆ. ಆತನೇ ಒಂದು ಜೀವದಿಂದ ಮತ್ತೊಂದು ಜೀವನನ್ನು ಹುಟ್ಟಿಸಿ ಜಗತ್ತಿನ ಸೃಷ್ಟಿಯನ್ನು ಮಾಡುತ್ತಾನೆ. ತನಗೆ ಅಧೀನವಾಗಿರುವ ಮತ್ತು ಮೃತ್ಯುವಿನ ಮೂಲಕ ಸಾಯಿಸುವವರನ್ನೂ ಸಂಹರಿಸುತ್ತಾನೆ. ಆ ಕಾಲರೂಪಿಯಾದ ಭಗವಂತನು ಇಡೀ ಸೃಷ್ಟಿಯನ್ನು ಸಮಾನರೂಪದಿಂದ ಒಳಹೊಕ್ಕಿದ್ದಾನೆ. ಆತನಿಗೆ ಸ್ವಪಕ್ಷವೂ ಇಲ್ಲ ; ಶತ್ರುಪಕ್ಷವೂ ಇಲ್ಲ. ಗಾಳಿಯು ಬೀಸಿದಾಗ ಧೂಳು ಗಾಳಿಗೆ ಅಧೀನವಾಗಿ ಅದರ ಜೊತೆ-ಜೊತೆಯಲ್ಲಿ ಎದ್ದು ಹೋಗುವಂತೆ– ಸಮಸ್ತಜೀವಿಗಳೂ ತಮ್ಮ-ತಮ್ಮ ಕರ್ಮಗಳಿಗೆ ಅಧೀನವಾಗಿ ಸುಖ-ದುಃಖಾದಿ ಫಲಗಳನ್ನು ಅನುಭವಿಸುತ್ತವೆ. ಪ್ರಭುವಾದ ಶ್ರೀಹರಿಯು ಕರ್ಮಗಳ ಕಟ್ಟಿಗೆ ಸಿಲುಕಿರುವ ಜೀವಗಳ ಆಯುಸ್ಸಿನ ವೃದ್ಧಿಯನ್ನೂ ಮತ್ತು ಕ್ಷಯವನ್ನೂ ವಿಧಾನಮಾಡುತ್ತಾ ತಾನು ಇವೆರಡರಿಂದಲೂ ರಹಿತನಾಗಿ ಸ್ವಸ್ವರೂಪದಲ್ಲಿ ನೆಲೆಗೊಂಡಿದ್ದಾನೆ. ಈ ಪರಮಾತ್ಮನನ್ನೇ ಮೀಮಾಂಸಕರು ಕರ್ಮವೆಂದೂ, ಚಾರ್ವಾಕರು ಸ್ವಭಾವವೆಂದೂ, ವೈಶೇಷಿಕಮತದವರು ಕಾಲವೆಂದೂ, ಜ್ಯೋತಿಷ್ಕರು ಅದೃಷ್ಟ (ದೈವ)ವೆಂದೂ ಮತ್ತು ಕಾಮ ಶಾಸ್ತ್ರದವರು ಕಾಮವೆಂದೂ ಕರೆಯುತ್ತಾರೆ. ಆತನು ಯಾವುದೇ ಇಂದ್ರಿಯಕ್ಕೂ, ಯಾವುದೇ ಪ್ರಮಾಣಕ್ಕೂ ವಿಷಯನಾಗುವುದಿಲ್ಲ. ಮಹತ್ತೇ ಮುಂತಾದ ಶಕ್ತಿಗಳೂ ಕೂಡ ಆತನಿಂದಲೇ ಪ್ರಕಟಗೊಳ್ಳುತ್ತವೆ. ಆತನು ಏನು ಮಾಡಬಯಸುತ್ತಾನೆ– ಎಂಬುದನ್ನೂ ಜಗತ್ತಿನಲ್ಲಿ ಯಾರೂ ಅರಿಯರು. ಹೀಗಿರುವಾಗ ಎಲ್ಲಕ್ಕೂ ಮೂಲಕಾರಣವಾಗಿರುವ ಆ ಪ್ರಭುವನ್ನು ತಿಳಿಯುವುದಕ್ಕೆ ಯಾರಿಗೆ ತಾನೇ ಶಕ್ಯವಿದೆ? (ಶ್ಲೋಕ 15-23)

ಮಗು! ವಾಸ್ತವವಾಗಿ ಈ ಕುಬೇರನ ಅನುಚರರು ನಿನ್ನ ಒಡಹುಟ್ಟಿದವನನ್ನು ಕೊಂದವರಲ್ಲ. ಏಕೆಂದರೆ : ಮನುಷ್ಯನ ಹುಟ್ಟು-ಸಾವುಗಳಿಗೆ ನಿಜವಾಗಿಯೂ ಈಶ್ವರನೇ ಕಾರಣನು. ಆತನೇ ವಿಶ್ವವನ್ನು

ಸೃಷ್ಟಿಸುತ್ತಾ ; ಪೊರೆಯುತ್ತಾನೆ ಮತ್ತು ಸಂಹರಿಸುತ್ತಾನೆ. ಆದರೆ ಆತನು ಅಭಿಮಾನರಹಿತನಾಗಿರುವುದರಿಂದ ಇದರ ಗುಣ-ಕರ್ಮಗಳು ಆತನಿಗೆ ಅಂಟುವುದಿಲ್ಲ. ಆತನು ಸದಾ ನಿರ್ಲಿಪ್ತನಾಗಿಯೇ ಇರುತ್ತಾನೆ. ಭೂತಗಳಿಗೆಲ್ಲಾ ಅಂತರಾತ್ಮನೂ, ನಿಯಾಮಕನೂ ಮತ್ತು ರಕ್ಷಕನೂ ಆಗಿರುವ ಆ ಪ್ರಭುವೇ ತನ್ನ ಮಾಯಾಶಕ್ತಿಯಿಂದ ಕೂಡಿ ಸಮಸ್ತಜೀವಗಳ ಸೃಷ್ಟಿ, ಸ್ಥಿತಿ ಮತ್ತು ಸಂಹಾರಗಳನ್ನು ಮಾಡುತ್ತಾನೆ. ಮೂಗುದಾರ ಹಾಕಿಸಿಕೊಂಡಿರುವ ಎತ್ತುಗಳು ತನ್ನ ಯಜಮಾನನ ಹೊರೆಯನ್ನು ಹೊರುವಂತೆ–ಜಗತ್ತನ್ನು ಸೃಷ್ಟಿಮಾಡುವ ಬ್ರಹ್ಮಾದಿದೇವತೆಗಳೂ ಕೂಡ ನಾಮ-ರೂಪಗಳೆಂಬ ಮೂಗುದಾರದಿಂದ ಕಟ್ಟಲ್ಪಟ್ಟವರಾಗಿರುವುದರಿಂದ ಆತನ ಆಜ್ಞೆಯನ್ನೇ ಪಾಲಿಸುತ್ತಾರೆ. ಭಕ್ತರಲ್ಲದವರಿಗೆ ಮೃತ್ಯುರೂಪನೂ, ಭಕ್ತರಾದವರಿಗೆ ಅಮೃತರೂಪನೂ ಮತ್ತು ಇಡೀ ಜಗತ್ತಿಗೇ ಏಕಮಾತ್ರ ಆಶ್ರಯನೂ ಆತನೇ ಆಗಿರುವನು. ಆದುದರಿಂದ, ಮಗು! ನೀನು ಎಲ್ಲ ಪ್ರಕಾರಗಳಿಂದಲೂ ಆ ಪರಮಾತ್ಮನನ್ನೇ ಶರಣುಹೊಂದು. ನೀನು ಐದನೆಯ ವಯಸ್ಸಿನಲ್ಲಿದ್ದಾಗಲೇ ಬಲತಾಯಿಯ ಮಾತಿನ ಬಾಣಗಳಿಂದ ಮನ ನೊಂದು, ತಾಯಿಯ ತೊಡೆಯನ್ನೂ ಬಿಟ್ಟು ಅರಣ್ಯಕ್ಕೆ ಹೊರಟುಬಂದೆ. ಅಲ್ಲಿ ಯಾವ ಹೃಷೀಕೇಶನಾದ ಸ್ವಾಮಿಯನ್ನು ತಪಸ್ಸಿನ ಮೂಲಕ ಆರಾಧಿಸಿ ಮೂರು ಲೋಕಗಳಿಗೂ ಮೇಲಿರುವ ಧ್ರುವಪದವನ್ನು ಪಡೆದೆಯೋ ಮತ್ತು ಯಾವನು ವೈರಭಾವರಹಿತವಾದ ನಿನ್ನ ಸರಳವಾದ ಹೃದಯದಲ್ಲಿ ವಾತ್ಸಲ್ಯ ದಿಂದ ವಿಶೇಷವಾಗಿ ವಿರಾಜಿಸುತ್ತಿದ್ದಾನೆಯೋ–ಅಂತಹ ಗುಣಾತೀತನೂ, ಅದ್ವಿತೀಯನೂ, ಅಳಿವಿಲ್ಲದವನೂ, ನಿತ್ಯಮುಕ್ತನೂ ಆಗಿರುವ ಪರಮಾತ್ಮ ನನ್ನು ಆಧ್ಯಾತ್ಮದೃಷ್ಟಿಯಿಂದ ನಿನ್ನ ಅಂತಃಕರಣದಲ್ಲಿ ಹುಡುಕುವವನಾಗು. ಆತನಲ್ಲಿಯೇ ಈ ಭೇದರೂಪವಾದ ಪ್ರಪಂಚವು ತೋರಿಬರುತ್ತಿದೆ. ಹೀಗೆ ಮಾಡಿದರೆ ಸರ್ವಶಕ್ತಿಸಂಪನ್ನನೂ, ಪರಮಾನಂದಸ್ವರೂಪನೂ, ಸರ್ವಾಂತರ್ಯಾಮಿಯೂ ಆಗಿರುವ ಶ್ರೀಭಗವಂತನಾದ ಅನಂತನಲ್ಲಿ ನಿನಗೆ ದೃಢವಾದ ಭಕ್ತಿಯುಂಟಾಗುವುದು ಮತ್ತು ಅದರ ಪ್ರಭಾವದಿಂದಾಗಿ ನೀನು ಅಹಂಕಾರ-ಮಮಕಾರರೂಪವಾಗಿ ದೃಢವಾಗಿರುವ ಅವಿದ್ಯೆಯ ಗಂಟನ್ನು ಕತ್ತರಿಸಿಕೊಳ್ಳುವೆ.

ರಾಜನೇ! ಔಷಧಗಳಿಂದ ರೋಗವನ್ನು ಶಮನಗೊಳಿಸಿಕೊಳ್ಳು ವಂತೆ–ನಾನು ಮಾಡಿರುವ ಈ ಉಪದೇಶವನ್ನು ವಿಚಾರಮಾಡಿ ಅದರಿಂದ ನೀನು ನಿನ್ನ ಕ್ರೋಧವನ್ನು ಶಾಂತಿಗೊಳಿಸಿಕೊಳ್ಳುವವನಾಗು. ಕ್ರೋಧವೆನ್ನು ವುದು ಎಲ್ಲ ಶ್ರೇಯಸ್ಸುಗಳಿಗೂ ವಿರೋಧಕರವಾದುದು. ಶ್ರೀಭಗವಂತನು ನಿನಗೆ ಮಂಗಳವನ್ನುಂಟುಮಾಡಲಿ. ಕ್ರೋಧವಶನಾಗಿರುವ ಮನುಷ್ಯನನ್ನು ಕಂಡರೆ ಎಲ್ಲರಿಗೂ ಭಯವುಂಟಾಗುವುದು. ಆದುದರಿಂದ–'ತನ್ನಿಂದ ಯಾವ ಪ್ರಾಣಿಗೂ ಭಯವುಂಟಾಗಬಾರದು'–ಎಂದು ಬಯಸುವ ಮನುಷ್ಯನು ಎಂದಿಗೂ ಕೋಪಕ್ಕೆ ವಶನಾಗಬಾರದು. 'ಇವರು ನನ್ನ ತಮ್ಮನನ್ನು ಕೊಂದುಹಾಕಿದವರು'–ಎಂದು ತಿಳಿದು ಇಷ್ಟೆಲ್ಲಾ ಯಕ್ಷರನ್ನು ನೀನು ಸಂಹಾರಮಾಡಿರುವುದರಿಂದ ಭಗವಂತನಾದ ಶಂಕರನಿಗೆ ಮಿತ್ರನಾಗಿ ರುವ ಕುಬೇರನಲ್ಲಿ ಅಪರಾಧಮಾಡಿದಂತಾಗಿದೆ. ಆದುದರಿಂದ, ಮಗು! ಮಹಾಪುರುಷರ ತೇಜಸ್ಸು ನಮ್ಮ ಕುಲವನ್ನು ಆಕ್ರಮಿಸಿಕೊಳ್ಳುವುದಕ್ಕೆ ಮೊದಲೇ ನೀನು ವಿನಯಪೂರ್ವಕವಾದ ಮಾತು ಮತ್ತು ವರ್ತನೆಗಳಿಂದ ಶೀಘ್ರವಾಗಿಯೇ ಆ ಕುಬೇರದೇವನನ್ನು ಪ್ರಸನ್ನಗೊಳಿಸು. ಇಲ್ಲದಿದ್ದರೆ ಶೀಘ್ರದಲ್ಲಿಯೇ ನಮ್ಮ ಕುಲವು ಧ್ವಂಸಹೊಂದುವುದು."

ಹೀಗೆ ಸ್ವಾಯಂಭುವಮನುವು ತನ್ನ ಮೊಮ್ಮಗನಾದ ಧ್ರುವನಿಗೆ ತಿಳಿವಳಿಕೆ ನೀಡಿದನು. ಆಗ ಧ್ರುವನು ಆತನಿಗೆ ನಮಸ್ಕರಿಸಿ ಆತನ ಆದೇಶ ದಂತೆ ನಡೆದುಕೊಳ್ಳುವುದಾಗಿ ಹೇಳಲು, ಸ್ವಾಯಂಭುವಮನುವು ಮಹರ್ಷಿ ಗಳೊಡನೆ ತನ್ನ ಲೋಕಕ್ಕೆ ಹೊರಟುಹೋದನು. (ಶ್ಲೋಕ 24-35)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಚತುರ್ಥಸ್ಕಂಧದ ೧೧ನೆಯ ಅಧ್ಯಾಯವು ಮುಗಿಯಿತು.

ಧ್ರುವಮಹಾರಾಜನಿಗೆ ಕುಬೇರನಿಂದ ವರಪ್ರಧಾನ : ಧ್ರುವನು ವಿಷ್ಣುಲೋಕವನ್ನು ಸೇರಿದುದು

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ಧ್ರುವಂ ನಿವೃತ್ತಂ ಪ್ರತಿಬುದ್ಧ್ಯ ವೈಶಸಾ-
ದಪೇತಮನ್ಯುಂ ಭಗವಾನ್ಧನೇಶ್ವರಃ ।
ತತ್ರಾಗತಶ್ಚಾರಣಯಕ್ಷಕಿನ್ನರೈಃ
ಸಂಸ್ತೂಯಮಾನೋಽಭ್ಯವದತ್ಕೃತಾಞ್ಜಲಿಮ್ ॥೧॥

"ಎಲೈ ವಿದುರನೇ! ಕೇಳು. ಧ್ರುವನು ಕೋಪವನ್ನು ತೊರೆದು ಯಕ್ಷವಧೆಯನ್ನು ನಿಲ್ಲಿಸಿದುದನ್ನು ತಿಳಿದು ಭಗವಂತನಾದ ಕುಬೇರನು ಅಲ್ಲಿಗೆ ಬಂದನು. ಆಗ ಯಕ್ಷರೂ ಚಾರಣರೂ ಮತ್ತು ಕಿನ್ನರರೂ ಆ ವೈಶ್ರವಣದೇವನನ್ನು ಸ್ತೋತ್ರಮಾಡುತ್ತಿದ್ದರು. ಆ ದೇವನನ್ನು ಕಂಡೊಡನೆಯೇ ಧ್ರುವನು ಕೈಮುಗಿದುಕೊಂಡು ಮೇಲೆದ್ದು ನಿಲ್ಲಲು–ಪ್ರಸನ್ನನಾದ ಯಕ್ಷಾಧಿಪತಿಯು ಆತನಿಗೆ ಹೀಗೆಂದನು :

"ಎಲೈ ಶುದ್ಧಾತ್ಮನಾದ ಕ್ಷತ್ರಿಯಶ್ರೇಷ್ಠನೇ! ವೈರವನ್ನು ಬಿಟ್ಟುಬಿಡುವುದು ತುಂಬಾ ಕಷ್ಟವಾಗಿದ್ದರೂ ನೀನು ನಿನ್ನ ತಾತನ ಉಪದೇಶದಿಂದಾಗಿ ಅದನ್ನು ತೊರೆದಿದ್ದೀಯೆ. ಆದುದರಿಂದ ನಾನು ನಿನ್ನಲ್ಲಿ ತುಂಬಾ ಪ್ರಸನ್ನನಾಗಿದ್ದೇನೆ. ಯಕ್ಷರು ನಿನ್ನ ತಮ್ಮನನ್ನು ಕೊಂದುಹಾಕಿದರು ಮತ್ತು ಯಕ್ಷರನ್ನು ನೀನು ಸಂಹಾರಮಾಡಿದೆ–ಎಂದು ತೋರಿದರೂ, ವಾಸ್ತವವಾಗಿ ನಿನ್ನ ತಮ್ಮನನ್ನು ಯಕ್ಷರು ಸಂಹರಿಸಿಯೂ ಇಲ್ಲ; ನೀನು ಯಕ್ಷರನ್ನು ಕೊಂದೂ ಇಲ್ಲ. ಏಕೆಂದರೆ : ಸಮಸ್ತಜೀವಿಗಳ ಉತ್ಪತ್ತಿ ಮತ್ತು ವಿನಾಶಗಳಿಗೆ ಕಾರಣವು ಕಾಲವೊಂದೇ. ಹಾಗಾದರೆ ಈ ನಾನು, ನನ್ನದು ಎಂಬ ಸುಳ್ಳುಬುದ್ಧಿಯು ಜೀವನಿಗೆ ಏಕೆ ಬಂದಿತು? ಎಂದರೆ : ಅಜ್ಞಾನದಿಂದ. ಅಜ್ಞಾನವಶನಾಗಿ ಜೀವನು ಕನಸಿನಲ್ಲಿ ಹೇಗೋ–ಹಾಗೆ ಶರೀರವೇ ಮುಂತಾದುವುಗಳನ್ನು ಆತ್ಮವೆಂದು ತಿಳಿದುಕೊಳ್ಳುವುದರಿಂದ ಆ ಬುದ್ಧಿಯು ಉಂಟಾಗುತ್ತದೆ. ಇದರಿಂದಲೇ ಮನುಷ್ಯನಿಗೆ ಬಂಧನ ಮತ್ತು ದುಃಖಗಳೇ

ಮುಂತಾದ ವಿಪರೀತವಾದ ಅವಸ್ಥೆಗಳೂ ಉಂಟಾಗುವುವು. ಧ್ರುವ! ನೀನಿನ್ನು ಹೋಗು. ಭಗವಂತನು ನಿನಗೆ ಮಂಗಳವನ್ನುಂಟುಮಾಡಲಿ. ಸಂಸಾರಬಂಧನದಿಂದ ಬಿಡುಗಡೆಹೊಂದುವುದಕ್ಕಾಗಿ ನೀನು ಸರ್ವಜೀವಿಗಳಲ್ಲಿಯೂ ಸಮದೃಷ್ಟಿಯನ್ನಿಟ್ಟು ಸರ್ವಭೂತಾತ್ಮನಾದ ಭಗವಂತನಾದ ಶ್ರೀಹರಿಯನ್ನು ಭಜಿಸುವವನಾಗು. ಆತನೇ ಭವದ ಬಂಧನವನ್ನು ಕತ್ತರಿಸುವವನು. ಆತನು ಸಂಸಾರದ ಉತ್ಪತ್ತಿಯೇ ಮುಂತಾದುವುಗಳಿಗಾಗಿ ತನ್ನ ತ್ರಿಗುಣಾತ್ಮವಾದ ಮಾಯಾಶಕ್ತಿಯಿಂದ ಕೂಡಿದ್ದರೂ ವಾಸ್ತವವಾಗಿ ಸಂಸಾರರಹಿತನೇ ಆಗಿದ್ದಾನೆ. ಆತನ ಚರಣಕಮಲಗಳೇ ಸರ್ವರಿಗೂ ಭಜಿಸಲು ಯೋಗ್ಯವಾದುವು. ಪ್ರಿಯನೃಪಾಲನೇ! ನೀನು ಸದಾ ಭಗವಂತನಾದ ಪದ್ಮನಾಭನ ಪಾದಾರವಿಂದಗಳ ಬಳಿಯೇ ಇರುವವನೆಂದು ನಾವು ಕೇಳಿದ್ದೇವೆ. ಆದ್ದರಿಂದ ನೀನು ಈಗ ಅವಶ್ಯವಾಗಿಯೂ ವರವನ್ನು ಪಡೆಯಲು ಅರ್ಹನು. ಯಾವ ಸಂಕೋಚವೂ ಇಲ್ಲದೇ, ಶಂಕೆಯೂ ಇಲ್ಲದೇ ನಿನ್ನ ಮನಸ್ಸಿಗೆ ಇಷ್ಟವಾದ ವರವನ್ನು ಕೇಳುವವನಾಗು."

(ಶ್ಲೋಕ 2-7)

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ಸ ರಾಜರಾಜೇನ ವರಾಯ ಚೋದಿತೋ
ಧ್ರುವೋ ಮಹಾಭಾಗವತೋ ಮಹಾಮತಿಃ ।
ಹರೌ ಸ ವವ್ರೇಽಚಲಿತಾಂ ಸ್ಮೃತಿಂ ಯಯಾ
ತರತ್ಯಯತ್ನೇನ ದುರತ್ಯಂ ತಮಃ ॥೮॥

ರಾಜರಾಜನಾದ ಕುಬೇರದೇವನು ವರವನ್ನು ಕೇಳುವಂತೆ ಧ್ರುವನನ್ನು ಒತ್ತಾಯಿಸಲು ಮಹಾಭಾಗವತೋತ್ತಮನೂ–ಮಹಾಬುದ್ಧಿಶಾಲಿಯೂ ಆದ ಧ್ರುವನು–'ಶ್ರೀಹರಿಯ ಸ್ಮರಣೆಯು ನನಗೆ ಸದಾ ಸ್ಥಿರವಾಗಿರಲಿ'– ಎಂಬ ವರವನ್ನು ಯಾಚಿಸಿದನು. ಆ ದಿವ್ಯಸ್ಮರಣೆಯಿಂದಲೇ ಅಲ್ಲವೇ ಜನರು ದಾಟಲು ಕಷ್ಟವಾಗಿರುವ ಭವಸಾಗರವನ್ನು ಅನಾಯಾಸವಾಗಿ ದಾಟಲು ಸಾಧ್ಯವಾಗುವುದು!

ಇಡವಿಡಾದೇವಿಯ ಪುತ್ರನಾದ ಕುಬೇರದೇವನಿಗೆ ಧ್ರುವನ ಈ

ಮಾತು ತುಂಬಾ ಸಂತೋಷವನ್ನುಂಟುಮಾಡಿತು. ಆ ದೇವನು ಪ್ರಸನ್ನವಾದ ಮನಸ್ಸಿನಿಂದ ಧ್ರುವನಿಗೆ ಆತನು ಬೇಡಿದ್ದ ವರವನ್ನು ಅನುಗ್ರಹಿಸಿ ಆತನು ನೋಡುತ್ತಿರುವಂತೆಯೇ ಅಂತರ್ಧಾನಹೊಂದಿದನು. ಅನಂತರ ಧ್ರುವನೂ ತನ್ನ ರಾಜಧಾನಿಗೆ ಹಿಂದಿರುಗಿದನು. ತನ್ನ ನಗರಿಯಲ್ಲಿರುತ್ತಾ ಧ್ರುವ ಸಾರ್ವಭೌಮನು ಬಹುದಕ್ಷಿಣೆಗಳುಳ್ಳ ಅನೇಕಯಜ್ಞಗಳಿಂದ ಭಗವಂತನಾದ ಯಜ್ಞಪುರುಷನನ್ನು ಆರಾಧಿಸಿದನು. ಆ ಯಜ್ಞದ್ರವ್ಯಗಳು, ಯಜ್ಞಕ್ರಿಯೆ ಗಳು, ಯಜ್ಞದೇವತಾಸಂಬಂಧವಾದ ಕರ್ಮಗಳು, ಯಜ್ಞಫಲ ಮತ್ತು ಯಜ್ಞಫಲವನ್ನು ದಯಪಾಲಿಸುವವನು–ಎಲ್ಲವೂ ಶ್ರೀಭಗವಂತನೇ ಅಲ್ಲವೇ! ಸರ್ವಾತ್ಮನೂ–ಸರ್ವೋಪಾಧಿರಹಿತನೂ ಆದ ಅಚ್ಯುತನಲ್ಲಿ ತೀವ್ರವಾಗಿ ಪ್ರವಹಿಸುವ ಭಕ್ತಿಯನ್ನಿಟ್ಟು ಆ ಭಕ್ತಶ್ರೇಷ್ಠನು ತನ್ನಲ್ಲಿಯೂ ಮತ್ತು ಸಮಸ್ತಪ್ರಾಣಿಗಳಲ್ಲಿಯೂ ಸರ್ವವ್ಯಾಪಕನಾದ ಆ ಶ್ರೀಹರಿಯೇ ಬೆಳಗುತ್ತಿರುವುದನ್ನು ನೋಡತೊಡಗಿದನು. ಧ್ರುವಸಾರ್ವಭೌಮನು ಅತ್ಯಂತ ವಿನಯಶೀಲನೂ, ಬ್ರಾಹ್ಮಣಭಕ್ತನೂ, ದೀನವತ್ಸಲನೂ ಮತ್ತು ಧರ್ಮಮರ್ಯಾದೆಯ ಸಂರಕ್ಷನೂ ಆಗಿದ್ದನು. ಪ್ರಜೆಗಳು ಆತನನ್ನು ಸಾಕ್ಷಾತ್ ತಮ್ಮ ತಂದೆಯೆಂದೇ ಭಾವಿಸುತ್ತಿದ್ದರು. ಆ ಮಹಾತ್ಮನು ಬಗೆ-ಬಗೆಯ ಐಶ್ವರ್ಯಗಳ ಭೋಗಗಳಿಂದ ಪುಣ್ಯವನ್ನೂ ಮತ್ತು ಫಲತ್ಯಾಗ ಪೂರ್ವಕವಾದ ಯಜ್ಞಾದಿ ಕರ್ಮಗಳನ್ನು ಅನುಷ್ಠಾನಮಾಡುತ್ತಿದ್ದುದರಿಂದ ಪಾಪವನ್ನು ಕಳೆದುಕೊಳ್ಳುತ್ತಾ ಮೂವತ್ತಾರು ಸಾವಿರ ವರ್ಷಗಳ ಕಾಲ ಭೂಮಂಡಲವನ್ನು ಆಳಿದನು. ಜಿತೇಂದ್ರಿಯನಾದ ಆ ಮಹಾಪುರುಷನು ಇದೇ ರೀತಿಯಲ್ಲಿ ಧರ್ಮ, ಅರ್ಥ ಮತ್ತು ಕಾಮಗಳ ಸಂಗ್ರಹದಲ್ಲಿ ಬಹಳ ವರ್ಷಗಳನ್ನು ಕಳೆದ ಬಳಿಕ ತನ್ನ ಪುತ್ರನಾದ ಉತ್ಕಲನಿಗೆ ರಾಜಸಿಂಹಾಸನ ವನ್ನು ಒಪ್ಪಿಸಿದನು. 'ಈ ವಿಶ್ವವೆಲ್ಲವೂ ಶ್ರೀಭಗವಂತನ ಮಾಯೆಯಿಂದ ರಚಿತವಾದುದು'–ಎಂದು ಭಾವಿಸಿಕೊಂಡನು. ಈ ದೇಹ, ಹೆಂಡಿರು, ಮಕ್ಕಳು, ಗೆಳೆಯರು, ಸೈನ್ಯ, ಸಂಪತ್ತು ತುಂಬಿದ ಖಜಾನೆ, ಅಂತಃಪುರ, ರಮಣೀಯವಾದ ಕ್ರೀಡಾಪ್ರದೇಶಗಳು ಮತ್ತು ಸಮುದ್ರಪರ್ಯಂತವಾದ ಭೂಮಂಡಲದ ಸಾಮ್ರಾಜ್ಯ–ಇವೆಲ್ಲವೂ ಕಾಲದ ದವಡೆಯಲ್ಲಿ ಸಿಕ್ಕಿಹಾಕಿ

ಕೊಂಡಿವೆ–ಎಂಬುದಾಗಿಯೂ ಭಾವಿಸಿಕೊಂಡು ಆತನು ಎಲ್ಲವನ್ನೂ ತ್ಯಜಿಸಿ ಬದರಿಕಾಶ್ರಮಕ್ಕೆ ಹೊರಟುಹೋದನು.

ಅಲ್ಲಿ ಆತನು ಶುದ್ಧವಾದ ಜಲದಲ್ಲಿ ಸ್ನಾನಮಾಡಿ ಇಂದ್ರಿಯಗಳನ್ನು ಪರಿಶುದ್ಧಿಗೊಳಿಸಿಕೊಂಡನು. ಸ್ಥಿರಸುಖವಾದ ಆಸನಸಿದ್ಧಿಯನ್ನು ಪಡೆದು ಪ್ರಾಣಾಯಾಮಗಳ ಮೂಲಕ ವಾಯುವನ್ನು ವಶಪಡಿಸಿಕೊಂಡನು. ಅನಂತರ ಮನಸ್ಸಿನಿಂದ ಇಂದ್ರಿಯಗಳನ್ನು ಹೊರಗಿನ ವಿಷಯಗಳ ಕಡೆ ಯಿಂದ ಸೆಳೆದುಕೊಂಡು ಆ ಮನಸ್ಸನ್ನು ಭಗವಂತನ ಸ್ಥೂಲರೂಪದಲ್ಲಿ ಸ್ಥಿರಗೊಳಿಸಿದನು. ಆ ಸ್ಥೂಲರೂಪವನ್ನೇ ಚಿಂತನೆಮಾಡುತ್ತಾ ಸಮಾಧಿ ಸಿದ್ಧಿಯನ್ನು ಪಡೆಯಲು ಆಗ ಆ ಸ್ಥೂಲರೂಪವೂ ಚಿಂತನೆಯಿಂದ ಬಿಟ್ಟು ಹೋಯಿತು. (ಶ್ಲೋಕ 9-17)

ಭಕ್ತಿಂ ಹರೌ ಭಗವತಿ ಪ್ರವಹನ್ನಜಸ್ರ–
ಮಾನನ್ದಬಾಷ್ಪಕಲಯಾ ಮುಹುರರ್ದ್ಯಮಾನಃ ।
ವಿಕ್ಲಿದ್ಯಮಾನಹೃದಯಃ ಪುಲಕಾಚಿತಾಙ್ಗೋ
ನಾತ್ಮಾನಮಸ್ಮರದಸಾವಿತಿ ಮುಕ್ತಲಿಙ್ಗಃ ॥೧೮॥

ಹೀಗೆ ಆತನೊಳಗೆ ಭಗವಂತನಾದ ಶ್ರೀಹರಿಯ ನಿರಂತರವಾದ ಭಕ್ತಿಪ್ರವಾಹವು ಹರಿಯುತ್ತಿದ್ದುದರಿಂದ ಆತನ ಕಣ್ಣುಗಳಿಂದ ಮತ್ತೆ-ಮತ್ತೆ ಆನಂದಬಾಷ್ಪಗಳು ಧಾರೆ-ಧಾರೆಯಾಗಿ ಸುರಿಯತೊಡಗಿದುವು. ಅದರಿಂದ ಆತನ ಹೃದಯವು ಕರಗಿ ಶರೀರದಲ್ಲಿ ರೋಮಾಂಚನವುಂಟಾಯಿತು. ದೇಹಾಭಿಮಾನವು ಪೂರ್ಣವಾಗಿ ಕರಗಿಹೋದುದರಿಂದ ಆತನಿಗೆ ತಾನು ಇಂತಹವನು (ತಾನು ಧ್ರುವ) ಎನ್ನುವ ನೆನಪೂ ತೊರೆದುಹೋಯಿತು.

ಅದೇ ಸಮಯದಲ್ಲಿ ಆಕಾಶದಿಂದ ಒಂದು ಅತಿಸುಂದರವಾದ ವಿಮಾನವು ಇಳಿದುಬರುತ್ತಿರುವುದನ್ನು ಆತನು ಕಂಡನು. ಅದು ಹುಣ್ಣಿಮೆಯ ಚಂದ್ರನು ಆಗ ತಾನೇ ಉದಯಿಸಿದ್ದಾನೆಯೋ ಎಂಬಂತೆ– ತನ್ನ ಪ್ರಕಾಶದಿಂದ ಹತ್ತು ದಿಕ್ಕುಗಳನ್ನೂ ಬೆಳಗಿಸುತ್ತಿತ್ತು. ಅದರಲ್ಲಿ ಶ್ರೀಭಗವಂತನ ಪಾರ್ಷದಶ್ರೇಷ್ಠರಿಬ್ಬರು ಗದೆಗಳನ್ನು ಊರಿಕೊಂಡು ಕುಳಿತಿದ್ದರು. ತರುಣಾವಸ್ಥೆಯಲ್ಲಿದ್ದ ಮತ್ತು ಶ್ಯಾಮಲವಾದ ಕಾಂತಿಯಿಂದ

ಬೆಳಗುತ್ತಿದ್ದ ಅವರ ಸುಂದರದೇಹಗಳಲ್ಲಿ ಸುಂದರವಾದ ನಾಲ್ಕು ಭುಜಗಳು ಕಂಗೊಳಿಸುತ್ತಿದ್ದುವು. ಕಣ್ಣುಗಳು ಕೆಂದಾವರೆಯಂತೆ ಹೊಳೆಯುತ್ತಿದ್ದುವು. ಅವರು ಸುಂದರವಾದ ವಸ್ತ್ರಗಳನ್ನು ಉಟ್ಟುಕೊಂಡು ಕಿರೀಟ, ಹಾರ, ತೋಳ್ಬಳೆಗಳಿಂದ ಅಲಂಕೃತರಾಗಿದ್ದರು. ಅತಿಮನೋಹರವಾದ ಕುಂಡಲ ಗಳನ್ನೂ ಧರಿಸಿದ್ದರು. ಅವರನ್ನು–ಪುಣ್ಯಶ್ಲೋಕರಾದ ಶ್ರೀಹರಿಯ ಸೇವಕರು ಎಂದರಿತ ಧ್ರುವನು ಒಡನೆಯೇ ಎದ್ದುನಿಂತು, ಅವರಿಗೆ ಸಲ್ಲಿಸಬೇಕಾಗಿದ್ದ ಪೂಜೆ ಮುಂತಾದುವುಗಳನ್ನು ಆ ಸಂಭ್ರಮದಲ್ಲಿ ಮರೆತುಬಿಟ್ಟನು. ಅವರು ಶ್ರೀಭಗವಂತನ ಪಾರ್ಷದರಲ್ಲಿ ಮುಖ್ಯರಾದವರು–ಎಂಬ ತಿಳಿವಳಿಕೆಯಿಂದ ಅವರ ಮುಂದೆ ಸ್ವಾಮಿಯಾದ ಶ್ರೀಮಧುಸೂದನನ ದಿವ್ಯನಾಮಗಳನ್ನು ಸಂಕೀರ್ತನೆಮಾಡುತ್ತಾ ಕೈಜೋಡಿಸಿ ನಮಸ್ಕಾರಮಾಡಿದನು. ಮನಸ್ಸು ಶ್ರೀಭಗವಂತನ ಪಾದಾರವಿಂದಗಳಲ್ಲಿ ತಲ್ಲೀನವಾಗಿಬಿಟ್ಟಿರಲು, ಆತನು ಅವರ ಮುಂದೆ ಕೈಜೋಡಿಸಿಕೊಂಡು, ವಿನಯದಿಂದ ತಲೆಬಾಗಿಸಿಕೊಂಡು ಸುಮ್ಮನೆ ನಿಂತುಕೊಂಡುಬಿಟ್ಟನು. ಆಗ ಶ್ರೀಹರಿಯ ಪ್ರಿಯಪಾರ್ಷದರಾದ ಸುನಂದ ಮತ್ತು ನಂದರು ಆತನ ಬಳಿಗೆ ಬಂದು ಮುಗುಳ್ನಗೆ ಬೀರುತ್ತಾ ಹೀಗೆಂದರು :

"ಎಲೈ ರಾಜನೇ! ನಿನಗೆ ಮಂಗಳವಾಗಲಿ. ನಮ್ಮ ಮಾತನ್ನು ಆಲಿಸಿ ಕೇಳು. ನೀನು ಐದು ವರ್ಷದವನಾಗಿದ್ದಾಗಲೇ ತಪಸ್ಸನ್ನಾಚರಿಸಿ ಯಾವ ಸರ್ವೇಶ್ವರನಾದ ಶ್ರೀಭಗವಂತನನ್ನು ಆರಾಧಿಸಿದೆಯೋ–ಅದೇ ಸರ್ವ ಲೋಕನಿಯಾಮಕನಾದ ಶಾರ್ಙ್ಗಪಾಣಿಯಾದ ಶ್ರೀಮನ್ನಾರಾಯಣನ ಸೇವಕರು ನಾವು. ನಿನ್ನನ್ನು ಆ ಶ್ರೀಭಗವಂತನ ಧಾಮಕ್ಕೆ ಕರೆದೊಯ್ಯಲು ಬಂದಿದ್ದೇವೆ. ನಿನ್ನ ಭಕ್ತಿಯ ಪ್ರಭಾವದಿಂದ ನೀನು ಇತರರಿಗೆ ಅತಿದುರ್ಲಭ ವಾದ ಯಾವ ವಿಷ್ಣುಲೋಕವುಂಟೋ–ಅದನ್ನು ಗಳಿಸಿದ್ದೀಯೆ. ನೀನು ಅದಕ್ಕೆ ಅಧಿಕಾರಿಯಾಗಿದ್ದೀಯೆ. ಪರಮಜ್ಞಾನಿಗಳಾದ ಸಪ್ತರ್ಷಿಗಳೂ ಅಲ್ಲಿಯವರೆಗೆ ತಲುಪಲಾರದೇ ಅದನ್ನು ಕೆಳಗಡೆಯಿಂದಲೇ ನೋಡು ತ್ತಿದ್ದಾರೆ. ಸೂರ್ಯ-ಚಂದ್ರರೂ, ಇತರ ಗ್ರಹ-ನಕ್ಷತ್ರ-ತಾರಾಗಣಗಳೂ ಪ್ರದ ಕ್ಷಿಣೆಮಾಡುತ್ತಿರುವ ಉನ್ನತಸ್ಥಾನವದು. ಅಂತಹ ವಿಷ್ಣುವಿನ ಧಾಮದಲ್ಲಿ ನೀನು ವಾಸಮಾಡುವೆಯಂತೆ! ಪ್ರಿಯತಮನೇ! ಇಲ್ಲಿಯವರೆಗೂ ನಿನ್ನ

ಪೂರ್ವಿಕರಾಗಲೀ ಅಥವಾ ಇತರ ಯಾರೇ ಆಗಲೀ ಆ ಪದವನ್ನು ತಲುಪಲು ಸಾಧ್ಯವಾಗಿಲ್ಲ. ನೀನು, ಸಮಸ್ತಲೋಕಗಳಿಗೂ ವಂದನೀಯವಾಗಿರುವ ಆ ವಿಷ್ಣುವಿನ ಪರಮಧಾಮಕ್ಕೆ ಬಂದು ಅಲ್ಲಿ ಬೆಳಗುವೆಯಂತೆ. ಆಯುಷ್ಮಂತನೇ! ಈ ಶ್ರೇಷ್ಠವಾದ ವಿಮಾನವನ್ನು ಪುಣ್ಯಶ್ಲೋಕರಿಗೆ ಶಿಖಾಮಣಿಯಾಗಿರುವ ಶ್ರೀಹರಿಯು ನಿನಗೋಸ್ಕರವೇ ಕಳುಹಿಸಿಕೊಟ್ಟಿ ರುವನು. ನೀನು ಇದನ್ನು ಹತ್ತುವವನಾಗು. ಈ ಯೋಗ್ಯತೆಯು ನಿನಗೆ ಮಾತ್ರವೇ ಇದೆಯಪ್ಪಾ!"

(ಶ್ಲೋಕ 19-27)

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ನಿಶಮ್ಯ ವೈಕುಣ್ಠನಿಯೋಜ್ಯಮುಖ್ಯಯೋ-
ರ್ಮಧುಚ್ಯುತಂ ವಾಚಮುರುಕ್ರಮಪ್ರಿಯಃ ।
ಕೃತಾಭಿಷೇಕಃ ಕೃತನಿತ್ಯಮಙ್ಗಲೋ
ಮುನೀನ್ಪ್ರಣಮ್ಯಾಶಿಷಮಭ್ಯವಾದಯತ್ ॥೨೮॥

"ವೈಕುಂಠಪತಿಯ ಶ್ರೇಷ್ಠರಾದ ಆ ಪಾರ್ಷದರು ನುಡಿದ ಅಮೃತ ಮಯವಾದ ಮಾತನ್ನು ಕೇಳಿ, ಪ್ರಭು ತ್ರಿವಿಕ್ರಮನಿಗೆ ಪ್ರಿಯತಮನಾದ ಪರಮಭಾಗವತೋತ್ತಮನಾದ ಧ್ರುವನು ಸ್ನಾನಾದಿಗಳನ್ನು ಮಾಡಿ, ನಿತ್ಯ ಕರ್ಮಗಳನ್ನೂ ಮಂಗಳಕಾರ್ಯಗಳನ್ನೂ ನೆರವೇರಿಸಿ, ಬದರಿಕಾಶ್ರಮದಲ್ಲಿ ವಾಸಮಾಡುತ್ತಿದ್ದ ಮುನಿಗಳಿಗೆ ನಮಸ್ಕಾರಮಾಡಿ ಅವರಿಂದ ಆಶೀರ್ವಾದ ಮಾಡಿಸಿಕೊಂಡನು.

ಅನಂತರ ಆ ವಿಮಾನರತ್ನಕ್ಕೆ ಪ್ರದಕ್ಷಿಣೆಮಾಡಿ, ಪೂಜೆಗಳನ್ನು ಅರ್ಪಿಸಿ, ಶ್ರೀವಿಷ್ಣುವಿನ ಪಾರ್ಷದರಿಗೆ ಪ್ರಣಾಮಮಾಡಿ ಚಿನ್ನದಂತೆ ಥಳ-ಥಳಿಸುತ್ತಿದ್ದ ದಿವ್ಯರೂಪವನ್ನು ತಾಳಿ ಅದನ್ನು ಹತ್ತಲು ಸಿದ್ಧನಾದನು. ಆಗ ಅಲ್ಲಿಗೆ ಮೃತ್ಯುದೇವನು ಬರಲು ಉತ್ತಾನಪಾದನ ಪುತ್ರನು ಆತನ ತಲೆಯ ಮೇಲೆ ಕಾಲನ್ನಿಟ್ಟು ಆ ಅದ್ಭುತವಾದ ವಿಮಾನವನ್ನು ಏರಿದನು. ಆಗ ಆಕಾಶದಲ್ಲಿ ದುಂದುಭಿ, ಮೃದಂಗ, ಮದ್ದಲೆಗಳೇ ಮುಂತಾದ ವಾದ್ಯಗಳು ಮೊಳಗಿದುವು. ಗಂಧರ್ವಶ್ರೇಷ್ಠರು ಗಾನಮಾಡತೊಡಗಿದರು ಮತ್ತು ಪುಷ್ಪಗಳ ಮಳೆಯು ಸುರಿಯತೊಡಗಿತು.

ಹಾಗೆ ವಿಮಾನದಲ್ಲಿ ಕುಳಿತು ಶ್ರೀಭಗವಂತನ ಧಾಮಕ್ಕೆ ಹೋಗಲು

ಸಿದ್ಧನಾಗುತ್ತಿದ್ದಾಗ–ಧ್ರುವನಿಗೆ ಇದ್ದಕ್ಕಿದ್ದಂತೆ ತನ್ನ ತಾಯಿಯಾದ ಸುನೀತಿಯ ನೆನಪು ಬಂದಿತು. 'ದೀನಳಾಗಿರುವ ನನ್ನ ತಾಯಿಯನ್ನು ಬಿಟ್ಟು ನಾನೊಬ್ಬನೇ ದುರ್ಲಭವಾದ ವಿಷ್ಣುಧಾಮಕ್ಕೆ ಹೇಗೆ ಹೋಗಲಿ?' ಎಂದು ಚಿಂತೆಗೊಳಗಾದನು. ಆತನ ಮನಸ್ಸಿನಲ್ಲಿ ಉಂಟಾಗಿದ್ದ ಭಾವವನ್ನು ಗ್ರಹಿಸಿದ ನಂದ-ಸುನಂದರು ಆತನಿಗೆ 'ಅದೋ ನೋಡು! ನಿನ್ನ ತಾಯಿ ಸುನೀತಿದೇವಿಯು ಬೇರೊಂದು ವಿಮಾನದಲ್ಲಿ ಕುಳಿತು ಮುಂದೆ-ಮುಂದೆ ಹೋಗುತ್ತಿದ್ದಾಳೆ'–ಎಂದು ಆ ವಿಮಾನವನ್ನು ತೋರಿಸಿದರು. ಅದರಿಂದ ಸಂತೃಪ್ತನಾಗಿ ಆತನು–ದಾರಿಯಲ್ಲಿ ವಿಮಾನಗಳಲ್ಲಿ ಕುಳಿತಿದ್ದ ದೇವತೆಗಳು ಮಾಡುತ್ತಿದ್ದ ಪ್ರಶಂಸೆಗಳನ್ನು ಕೇಳುತ್ತಾ, ಅವರು ಸುರಿಸುತ್ತಿದ್ದ ಹೂಮಳೆಗಳನ್ನು ಸ್ವೀಕರಿಸುತ್ತಾ, ಗ್ರಹಗಳನ್ನು ಕ್ರಮವಾಗಿ ದಾಟುತ್ತಾ ಮುಂದುವರಿದನು. ಆ ದಿವ್ಯವಿಮಾನದಲ್ಲಿ ಕುಳಿತು ಧ್ರುವನು ಮೂರು ಲೋಕಗಳನ್ನೂ ದಾಟಿ ಸಪ್ತರ್ಷಿಮಂಡಲಕ್ಕೂ ಮೇಲಿರುವ ಭಗವಂತನಾದ ವಿಷ್ಣುವಿನ ಧ್ರುವವಾದ ಧಾಮವನ್ನು ತಲುಪಿ, ಸ್ಥಿರವಾದ ಗತಿಯನ್ನು ಪಡೆದನು. ಆ ದಿವ್ಯಧಾಮದ ಮಹಿಮೆಯನ್ನು ಕೇಳಬೇಕೇ? ಅದು ತನ್ನ ಪ್ರಕಾಶದಿಂದಲೇ ಬೆಳಗುತ್ತಿರುವುದು. ಆದರೆ ಮೂರು ಲೋಕಗಳೂ ಅದರ ಪ್ರಕಾಶದಿಂದ ಬೆಳಗುತ್ತಿವೆ. ಪ್ರಾಣಿಗಳಲ್ಲಿ ದಯಾರಹಿತರಾದ ಜನರು ತಲುಪಲಾರದ ಪುಣ್ಯತಮವಾದ ಪದವಾಗಿದೆ ಅದು. ಪ್ರತಿದಿನವೂ ಪ್ರಾಣಿಗಳ ಕಲ್ಯಾಣಕ್ಕಾಗಿ ಶುಭಕರ್ಮವನ್ನು ಯಾರು ಮಾಡುತ್ತಿರುವರೋ–ಅಂತಹ ಸುಕೃತಿಗಳು ಮಾತ್ರವೇ ಅಲ್ಲಿಗೆ ಹೋಗಲು ಸಾಧ್ಯ. ಶಾಂತರಾಗಿ, ಸಮದರ್ಶಿಗಳಾಗಿ, ಶುದ್ಧರಾಗಿ, ಎಲ್ಲ ಪ್ರಾಣಿಗಳನ್ನೂ ಪ್ರಸನ್ನಗೊಳಿಸುವವರಾದ, ಭಗವದ್ಭಕ್ತರನ್ನು ಮಾತ್ರವೇ ತಮ್ಮ ಬಂಧು-ಮಿತ್ರರನ್ನಾಗಿ ತಿಳಿಯುವಂತಹ ಮಹಾತ್ಮರು ತಾನೇ ಸುದುರ್ಲಭವಾಗಿರುವಂತೆ ಆ ಭಗವದ್ಧಾಮವನ್ನು ಗಳಿಸುವರು!

ಈ ರೀತಿಯಲ್ಲಿ ಭಾಗವತೋತ್ತಮನಾದ ಉತ್ತಾನಪಾದಪುತ್ರನು ಮೂರು ಲೋಕಗಳಿಗೂ ಮೇಲೆ ಅವುಗಳ ಶುದ್ಧವಾದ ಶಿರೋಭೂಷಣವಾಗಿ ವಿರಾಜಿಸತೊಡಗಿದನು. ಕುರುಕುಲಮಣಿಯಾದ ವಿದುರನೇ! ಮೇಟಿಯ ಕಂಭವನ್ನು ಎತ್ತುಗಳು ನಾಲ್ಕು ಕಡೆಗಳಲ್ಲೂ ಸುತ್ತುವಂತೆ–

ಗಂಭೀರವಾದ ವೇಗವುಳ್ಳ ಜ್ಯೋತಿಗಳ ಚಕ್ರವು ಆ ಅವಿನಾಶಿಯಾದ ಧ್ರುವಧಾಮವನ್ನೇ ಆಶ್ರಯಿಸಿ ಅದನ್ನು ಸದಾ ಸುತ್ತುತ್ತಿರುತ್ತದೆ. ಧ್ರುವನ ಆ ಮಹಿಮೆಯನ್ನು ಕಂಡು ಸಂತುಷ್ಟರಾದ ದೇವರ್ಷಿಗಳಾದ ನಾರದರು ಪ್ರಚೇತಸರ ಯಜ್ಞಶಾಲೆಯಲ್ಲಿ ತಮ್ಮ ವೀಣಾವಾದ್ಯವನ್ನು ನುಡಿಸುತ್ತಾ ಈ ಮೂರು ಶ್ಲೋಕಗಳನ್ನು ಹಾಡಿದರು : (ಶ್ಲೋಕ 29-40)

ನೂನಂ ಸುನೀತೇಃ ಪತಿದೇವತಾಯಾ-
ಸ್ತಪಃಪ್ರಭಾವಸ್ಯ ಸುತಸ್ಯ ತಾಂ ಗತಿಮ್ ।
ದೃಷ್ಟ್ವಾಭ್ಯುಪಾಯಾನಪಿ ವೇದವಾದಿನೋ
ನೈವಾಧಿಗನ್ತುಂ ಪ್ರಭವನ್ತಿ ಕಿಂ ನೃಪಾಃ ॥೪೧॥

"ಪತಿವ್ರತಾಶಿರೋಮಣಿಯಾದ ಸುನೀತಿಯ ಸುಪುತ್ರನಾದ ಧ್ರುವನು ತಪಸ್ಸನ್ನಾಚರಿಸಿ ಅದರ ಪ್ರಭಾವದಿಂದ ಯಾವ ಅದ್ಭುತವಾದ ಗತಿಯನ್ನು ಗಳಿಸಿದ್ದಾನೆಯೋ–ಅದನ್ನು ಪುರುಷಾರ್ಥಗಳ ಉಪಾಯಗಳನ್ನರಿತ ವೇದ ವಾದಿಗಳಾದ ಮುನಿಗಳು ಕೂಡ ನಿಜವಾಗಿಯೂ ಪಡೆಯಲಾರರು. ಹೀಗಿರುವಾಗ ಸಾಧಾರಣರಾದ ಉಳಿದ ರಾಜರ ಪಾಡೇನು!

ಯಃ ಪಞ್ಚವರ್ಷೋ ಗುರುದಾರವಾಕ್ಶರೈ-
ರ್ಭಿನ್ನೇನ ಯಾತೋ ಹೃದಯೇನ ದೂಯತಾ ।
ವನಂ ಮದಾದೇಶಕರೋಽಜಿತಂ ಪ್ರಭುಂ
ಜಿಗಾಯ ತದ್ಭಕ್ತಗುಣೈಃ ಪರಾಜಿತಮ್ ॥೪೨॥

ಕೇವಲ ಐದು ವರ್ಷದ ಬಾಲಕನಾಗಿರುವಾಗಲೇ ಈತನು ಬಲ ತಾಯಿಯ ಮಾತಿನ ಬಾಣಗಳಿಂದ ಬಿರಿದು, ನೊಂದಹೃದಯದಿಂದ ಕೂಡಿ ನನ್ನ ಉಪದೇಶಕ್ಕೆ ತಕ್ಕಂತೆಯೇ ಆಚರಣೆಮಾಡಿ ಭಕ್ತರ ಗುಣಗಳಿಂದ ಮಾತ್ರವೇ ವಶೀಭೂತನಾಗುವ ಮತ್ತು 'ಅಜಿತ' (ಯಾರಿಂದಲೂ ಜಯಿಸಲ್ಪಡದವನು)–ಎಂದು ಹೆಸರಾಂತ ಶ್ರೀಹರಿಯನ್ನು ಜಯಿಸಿ ಬಿಟ್ಟನಲ್ಲವೇ!

ಯಃ ಕ್ಷತ್ರಬನ್ಧುರ್ಭುವಿ ತಸ್ಯಾಧಿರೂಢ-
ಮನ್ವಾರುರುಕ್ಷೇದಪಿ ವರ್ಷಪೂಗೈಃ ।
ಷಟ್ಪಞ್ಚವರ್ಷೋ ಯದಹೋಭಿರಲ್ಪೈಃ
ಪ್ರಸಾದ್ಯ ವೈಕುಣ್ಠಮವಾಪ ತತ್ಪದಮ್ ॥೪೩॥

ನಮ್ಮ ಈ ಧ್ರುವಸಾರ್ವಭೌಮನು ಐದಾರು ವರ್ಷ ವಯಸ್ಸಿನವನಾಗಿರುವಾಗಲೇ ಕೆಲವೇ ದಿನಗಳ ತಪಸ್ಸಿನಿಂದ ಶ್ರೀಭಗವಂತನನ್ನು ಪ್ರಸನ್ನಗೊಳಿಸಿ ಆತನ ಪರಮಪದವನ್ನು ಗಳಿಸಿಬಿಟ್ಟನು. ಆತನು ಗಳಿಸಿದ ಆ ಸ್ಥಾನವನ್ನು ಭೂಮಂಡಲದಲ್ಲಿ ಬೇರಾವನಾದರೂ ಕ್ಷತ್ರಿಯನು ಅನೇಕ ವರ್ಷಗಳ ಕಾಲ ತಪಶ್ಚರಣೆಮಾಡಿದರೂ ಪಡೆಯಲಾಗುವುದೇ?"

ಮೈತ್ರೇಯರು ಹೇಳುತ್ತಾರೆ :

ವತ್ಸ, ವಿದುರ! ನಿನ್ನ ಕೇಳಿಕೆಗೆ ತಕ್ಕಂತೆ ನಾನು ಉದಾರಕೀರ್ತಿಯುಳ್ಳ ಧ್ರುವನ ಚರಿತ್ರೆಯನ್ನು ಪೂರ್ಣವಾಗಿ ತಿಳಿಸಿರುವೆನು. ಸಾಧು-ಸಜ್ಜನರು ತುಂಬಿದ ಮನಸ್ಸಿನಿಂದ ಕೊಂಡಾಡುವ ಪವಿತ್ರವಾದ ಕಥೆಯಿದು. ಇದು ಸಂಪತ್ತನ್ನೂ, ಯಶಸ್ಸನ್ನೂ, ಆಯುಸ್ಸನ್ನೂ ವೃದ್ಧಿಪಡಿಸುವ ಪರಮ ಪವಿತ್ರವೂ–ಮಂಗಲಕರವೂ ಆಗಿರುವ ಕಥೆ. ಸ್ವರ್ಗವನ್ನೂ ಕೊಡುವುದು. ಧ್ರುವಪದವಿಯನ್ನೂ ದಯಪಾಲಿಸುವುದು. ದೇವತ್ವವನ್ನೂ ನೀಡುವುದು. ಸಮಸ್ತಪಾಪಗಳನ್ನೂ ನಾಶಪಡಿಸುವುದು. ಇದು ಅತ್ಯಂತ ಪ್ರಶಂಸನೀಯವಾದ ಚರಿತ್ರೆಯಾಗಿದೆ. ಭಗವದ್ಭಕ್ತಶಿರೋಮಣಿಯಾದ ಧ್ರುವನ ಈ ಪವಿತ್ರವಾದ ಚರಿತ್ರೆಯನ್ನು ಶ್ರದ್ಧೆಯೊಡನೆ ಯಾರು ಬಾರಿ-ಬಾರಿಗೂ ಕೇಳುವರೋ–ಅವರಿಗೆ ಭಗವದ್ಭಕ್ತಿಯು ತುಂಬಿಬಂದು ಸರ್ವದುಃಖಗಳೂ ಪರಿಹಾರಹೊಂದುವುವು. ಇದನ್ನು ಕೇಳುವವನಿಗೆ ಶೀಲವೇ ಮುಂತಾದ ಗುಣಗಳು ದೊರೆಯುವುವು ; ಮಹತ್ತ್ವವನ್ನು ಬಯಸುವವರಿಗೆ ಅತಿ ಮಹತ್ತಿನ ಸ್ಥಾನವು ಸಿಕ್ಕುವುದು ; ತೇಜಸ್ಸನ್ನು ಕೋರುವವರಿಗೆ ತೇಜಸ್ಸು ದೊರೆಯುವುದು ಮತ್ತು ಮಾನವನ್ನು ಅಪೇಕ್ಷಿಸುವ ಮನಸ್ವಿಗಳಿಗೆ ಒಳ್ಳೆಯ ಮಾನವು ಲಭಿಸುವುದು. ಪವಿತ್ರವಾದ ಕೀರ್ತಿಯುಳ್ಳ ಧ್ರುವ ಕುಮಾರನ ಈ ಮಹಾಚರಿತ್ರೆಯನ್ನು ಪ್ರಾತಃಕಾಲ ಮತ್ತು ಸಾಯಂಕಾಲಗಳಲ್ಲಿ

ಸತ್ಪುರುಷರ ಸಭೆ-ಸಮಾಜಗಳಲ್ಲಿ ಏಕಾಗ್ರವಾದ ಮನಸ್ಸಿನಿಂದ ಕೀರ್ತನೆ ಮಾಡಬೇಕು. ಶ್ರೀಭಗವಂತನ ಪವಿತ್ರವಾದ ಪಾದಾರವಿಂದಗಳನ್ನು ಆಶ್ರಯಿಸಿರುವ ಯಾವ ಭಕ್ತನು ಇದನ್ನು ನಿಷ್ಕಾಮಭಾವದಿಂದ ಪೂರ್ಣಿಮೆ, ಚತುರ್ದಶಿಯೊಡನೆ ಸೇರಿದ ಅಥವಾ ಚಂದ್ರನ ಒಂದು ಕಲೆಯಿಂದ ಕೂಡಿದ ಅಮಾವಾಸ್ಯೆ, ದ್ವಾದಶೀ, ಶ್ರವಣನಕ್ಷತ್ರ, ತಿಥಿಕ್ಷಯ, ವ್ಯತೀಪಾತ, ಸಂಕ್ರಾಂತಿ ಅಥವಾ ಭಾನುವಾರಗಳಂದು ಶ್ರದ್ಧಾಳುಗಳಾದ ಸಜ್ಜನರಿಗೆ ಶ್ರವಣ ಮಾಡಿಸುವನೋ—ಅಂತಹವನಿಗೆ ತನ್ನ ಆತ್ಮದಲ್ಲೇ ಸರ್ವಸಂತೋಷವನ್ನು ಅನುಭವಿಸುವ ಕೃತಕೃತ್ಯತೆಯು ಸಿದ್ಧಿಸುವುದು. ತತ್ತ್ವವನ್ನರಿಯದ ಅಜ್ಞಾನಿಗೆ ಈ ಜ್ಞಾನಾಮೃತವನ್ನು ದಾನಮಾಡುವಂತಹ ಕರುಣಾಳುವೂ— ದೀನವತ್ಸಲನೂ ಆದ ಸುಕೃತಿಯ ಮೇಲೆ ದೇವತೆಗಳು ಅನುಗ್ರಹವನ್ನು ತೋರುವರು.

(ಶ್ಲೋಕ 44-51)

ಇದಂ ಮಯಾ ತೇಽಭಿಹಿತಂ ಕುರೂದ್ವಹ
ಧ್ರುವಸ್ಯ ವಿಖ್ಯಾತವಿಶುದ್ಧಕರ್ಮಣಃ ।
ಹಿತ್ವಾರ್ಭಕಃ ಕ್ರೀಡನಕಾನಿ ಮಾತು-
ರ್ಗೃಹಂ ಚ ವಿಷ್ಣುಂ ಶರಣಂ ಯೋ ಜಗಾಮ ॥೫೨॥

ಕುರುಶಿರೋಮಣಿಯಾದ, ಮಹಾತ್ಮನಾದ ವಿದುರನೇ! ಧ್ರುವನು ಮಾಡಿದ ಪರಮಪರಿಶುದ್ಧವಾದ ಕರ್ಮವು ಎಲ್ಲೆಲ್ಲಿಯೂ ಪ್ರಸಿದ್ಧವಾಗಿದೆ. ಅತಿಬಾಲ್ಯದಲ್ಲಿಯೇ ತಾಯಿ, ಮನೆ ಮತ್ತು ಆಟದ ಸಾಮಾನುಗಳ ಮೋಹ ವನ್ನೂ ತೊರೆದು ಮಹಾವಿಷ್ಣುವನ್ನು ಶರಣುಹೊಂದಿದ ಧನ್ಯತಮನಲ್ಲವೇ ಆತನು? ಇಂತಹ ಮಹಾತ್ಮನ ಪವಿತ್ರವಾದ ಚರಿತ್ರೆಯನ್ನು ನಾನು ನಿನಗೆ ತಿಳಿಸಿರುವೆನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಚತುರ್ಥಸ್ಕಂಧದ ೧೨ನೆಯ ಅಧ್ಯಾಯವು ಮುಗಿಯಿತು.

ಧ್ರುವನ ವಂಶದ ವರ್ಣನೆ: ಅಂಗಮಹಾರಾಜನ ಚರಿತ್ರೆ

ಸೂತಪುರಾಣಿಕರು ಶೌನಕಾದಿಮಹರ್ಷಿಗಳಿಗೆ ಹೇಳುತ್ತಾರೆ :

ನಿಶಮ್ಯ ಕೌಷಾರವಿಣೋಪವರ್ಣಿತಂ
ಧ್ರುವಸ್ಯ ವೈಕುಣ್ಠಪದಾಧಿರೋಹಣಮ್ ।
ಪರೂಢಭಾವೋ ಭಗವತ್ಯಧೋಕ್ಷಜೇ
ಪ್ರಷ್ಟುಂ ಪುನಸ್ತಂ ವಿದುರಃ ಪ್ರಚಕ್ರಮೇ ॥೧॥

ಮಹರ್ಷಿಗಳೇ! ಪರಮಭಾಗವತೋತ್ತಮನಾದ ಧ್ರುವನು ವಿಷ್ಣು ಪದಕ್ಕೆ ಏರಿದ ವೃತ್ತಾಂತವನ್ನು ಮೈತ್ರೇಯಮಹರ್ಷಿಗಳ ವದನಾರವಿಂದ ದಿಂದ ಕೇಳಿ ಮಹಾತ್ಮನಾದ ವಿದುರನ ಹೃದಯದಲ್ಲಿ ಭಗವಂತನಾದ ಮಹಾ ವಿಷ್ಣುವಿನ ವಿಷಯದಲ್ಲಿ ಭಕ್ತಿಭಾವವು ಬೇರೂರಿತು. ಅಂತಹ ಭಾವಪೂರ್ಣ ವಾದ ಹೃದಯದಿಂದ ಆತನು ಮೈತ್ರೇಯರನ್ನು ಮತ್ತೆ ಹೀಗೆ ಪ್ರಶ್ನೆಮಾಡ ತೊಡಗಿದನು :

"ಭಗವತ್ಪರಾಯಣರಾದ ಮುನಿಶ್ರೇಷ್ಠರೇ! ನೀವು ಈಗ ಹೆಸರಿಸಿದ ಆ ಪ್ರಚೇತಸರೆಂಬುವರು ಯಾರು? ಅವರು ಯಾರ ಪುತ್ರರು? ಯಾರ ವಂಶವನ್ನು ಅಲಂಕರಿಸಿ ಪ್ರಸಿದ್ಧರಾಗಿದ್ದಾರೆ? ಅವರು ಯಜ್ಞವನ್ನು ಯಾವ ಸ್ಥಳದಲ್ಲಿ ಆಚರಿಸಿದರು? ಎಲ್ಲವನ್ನೂ ವರ್ಣಿಸಿರಿ. ಶ್ರೀಹರಿಯ ಆರಾಧನೆಯ ವಿಧಿಯಾಗಿರುವ ಕ್ರಿಯಾಯೋಗವನ್ನು ಪಾಂಚರಾತ್ರಾಗಮದ ಮೂಲಕ ಉಪದೇಶಮಾಡಿದ ದೇವರ್ಷಿನಾರದರು ದೇವದೇವನ ದರ್ಶನದಿಂದ ಕೃತಾರ್ಥರಾದ ಮಹಾಭಾಗವತಶ್ರೇಷ್ಠರು. ಅವರ ದರ್ಶನವು ದೇವರ ದರ್ಶನಕ್ಕೆ ಎಣೆಯಾದುದೆಂದು ಭಾವಿಸುತ್ತೇನೆ. ಪ್ರಚೇತಸರೆಂಬುವರು ಸ್ವಧರ್ಮವನ್ನು ಆಚರಿಸುತ್ತಾ ಭಗವಂತನಾದ ಯಜ್ಞಪುರುಷನನ್ನು ಆರಾಧನೆ ಮಾಡುತ್ತಿದ್ದ ಸಮಯದಲ್ಲಿ ಭಕ್ತವರೇಣ್ಯರಾದ ನಾರದರು ಧ್ರುವನ ಗುಣಗಳನ್ನು ಗಾನಮಾಡಿದರೆಂದು ಹೇಳಿದಿರಲ್ಲವೇ! ಆ ದೇವರ್ಷಿಗಳು ಅಲ್ಲಿ ಆಗ ಯಾವ ಯಾವ ಭಗವತ್ಕಥೆಯನ್ನು ವರ್ಣಿಸಿದರು–ಎಂಬುದನ್ನು

ನನಗೆ ಪೂರ್ಣವಾಗಿ ತಿಳಿಸಿರಿ. ಅವುಗಳನ್ನು ಕೇಳಬೇಕೆಂಬ ಇಚ್ಛೆಯು ನನಗೆ ಉತ್ಕಟವಾಗಿದೆ." (ಶ್ಲೋಕ 2-5)

ವಿದುರನ ಪ್ರಶ್ನೆಗೆ ಮೈತ್ರೇಯರು ಹೀಗೆ ಉತ್ತರಿಸಿದರು :

"ವಿದುರ! ತಂದೆಯಾದ ಧ್ರುವನು ಅರಣ್ಯಕ್ಕೆ ತೆರಳಲು–ಉತ್ಕಲನು ತನಗೆ ಕೊಟ್ಟ ಸಾರ್ವಭೌಮಸಂಪತ್ತನ್ನೂ–ರಾಜ್ಯಸಿಂಹಾಸನವನ್ನೂ ಸ್ವೀಕರಿಸಲು ಬಯಸಲಿಲ್ಲ. ಏಕೆಂದರೆ : ಆತನು ಹುಟ್ಟಿನಿಂದಲೇ ಪ್ರಶಾಂತಸ್ವಭಾವದವನೂ, ಸಂಸಾರದಲ್ಲಿ ಆಸಕ್ತಿಯಿಲ್ಲದವನೂ, ಸಮದರ್ಶಿಯೂ ಆಗಿದ್ದು, ಇಡೀ ಜಗತ್ತನ್ನು ಆತ್ಮದಲ್ಲಿಯೂ, ಇಡೀ ಜಗತ್ತಿನಲ್ಲಿ ಆತ್ಮವನ್ನೂ ಕಾಣುತ್ತಿದ್ದ ವೈರಾಗ್ಯಚಕ್ರವರ್ತಿಯಾಗಿದ್ದನು. ನಿರಂತರವಾದ ಪರಮಾತ್ಮಧ್ಯಾನ ರೂಪವಾದ ಯೋಗಾಗ್ನಿಯಿಂದ ಆತನ ಮನಸ್ಸಿನಲ್ಲಿದ್ದ ಕರ್ಮವಾಸನೆಗಳೆಲ್ಲವೂ ಸುಟ್ಟುಹೋಗಿದ್ದುವು. ಪ್ರಶಾಂತನೂ, ಭೇದರಹಿತನೂ, ಜ್ಞಾನಾನಂದಸ್ವರೂಪನೂ ಆದ ಪರಮಾತ್ಮನಲ್ಲಿ ತಾದಾತ್ಮ್ಯವನ್ನು ಅನುಭವಿಸುತ್ತಾ ಆ ಆತ್ಮನನ್ನು ಬಿಟ್ಟು ಬೇರಾವುದೂ ಇಲ್ಲವೆಂಬುದನ್ನು ಆತನು ಕಂಡುಕೊಂಡಿದ್ದನು. ಪೂರ್ಣಜ್ಞಾನಿಯಾಗಿದ್ದರೂ ಬೀದಿಗಳಲ್ಲಿ ಅಜ್ಞಾನಿಗಳಿಗೂ–ಬಾಲಕರಿಗೂ ಮೂರ್ಖನಂತೆಯೂ, ಕುರುಡನಂತೆಯೂ, ಕಿವುಡನಂತೆಯೂ, ಹುಚ್ಚನಂತೆಯೂ, ಮೂಗನಂತೆಯೂ ತೋರಿಬರುತ್ತಿದ್ದನು.*

---

* ಉತ್ಕಲನು ಸಾಮ್ರಾಜ್ಯವನ್ನು ಏಕೆ ಬಯಸಲಿಲ್ಲ? ಎಂದರೆ : ಬಹಳ ಜನ್ಮಗಳಲ್ಲಿ ಸಾಧನೆಮಾಡಿ ಪಡೆದ ಯೋಗಮಹಾತ್ಮ್ಯಬಲದಿಂದ ಆತನು ಆತ್ಮ ಯಾಥಾತ್ಮ್ಯಜ್ಞಾನವನ್ನು ಸ್ವಾನುಭವದಿಂದ ಪಡೆದು ಆ ಅನುಭವದಿಂದಲೇ ಸಂತೃಪ್ತ ನಾಗಿದ್ದನು. ಬೇರೆ ಯಾವ ಪುರುಷಾರ್ಥವೂ ಆತನಿಗೆ ರುಚಿಸಲಿಲ್ಲ.

"ಬಹುಜನ್ಮಸಿದ್ಧಿಯೋಗಮಾಹಾತ್ಮ್ಯಪ್ರತ್ಯಕ್ಷಿತಸ್ವಾತ್ಮಯಾಥಾತ್ಮ್ಯಾನುಭವ ತೃಪ್ತತ್ವಾತ್ ಅನ್ಯತ್ ಪುರುಷಾರ್ಥಭೂತಂ ನೈಚ್ಛತ್ ।"

ಪರಮಾತ್ಮನು ಸರ್ವವ್ಯಾಪಿ. ಆತನ ಶರೀರವು ಸರ್ವಲೋಕವ್ಯಾಪಕವಾಗಿದೆ. ಆತನಲ್ಲಿ ಉತ್ಕಲನು ಲೋಕವನ್ನು ಕಂಡನು–ಎಂದರೆ : ಆ ಪರಮಾತ್ಮನೇ ಲೋಕಕ್ಕೆ ಧಾರಕನೆಂಬುದನ್ನು ಅರಿತಿದ್ದನು ಎಂದರ್ಥ. (ವೀರರಾಘವೀಯ)

ಉತ್ಕಲನು ಸಮಸ್ತಪ್ರಾಣಿಗಳಲ್ಲೂ ಒಳಗೂ-ಹೊರಗೂ ಭೇದವಿಲ್ಲದಂತೆ ವ್ಯಾಪ್ತನಾಗಿ, ಅನಂತಕಲ್ಯಾಣಗುಣಪರಿಪೂರ್ಣನಾಗಿ, ಪ್ರಾಕೃತ-ವೈಕೃತರೂಪವಿಲ್ಲದವನಾಗಿ,

ಆದ್ದರಿಂದ ರಾಜಕುಲದ ಹಿರಿಯರೂ ಮತ್ತು ಮಂತ್ರಿಗಳೂ ಆತನನ್ನು ಮೂರ್ಖನೆಂದೂ, ಹುಚ್ಚನೆಂದೂ ಭಾವಿಸಿ ಆತನ ತಮ್ಮನಾದ ವತ್ಸರನನ್ನು ರಾಜನನ್ನಾಗಿ ಮಾಡಿದರು. (ಶ್ಲೋಕ 6-11)

ಮಹಾರಾಜ ವತ್ಸರನಿಗೆ ಸ್ವರ್ವೀಥಿಯೆಂಬ ಪತ್ನಿಯ ಗರ್ಭದಲ್ಲಿ ಪುಷ್ಪಾರ್ಣ, ತಿಗ್ಮಕೇತು, ಇಷ, ಊರ್ಜ, ವಸು ಮತ್ತು ಜಯ–ಎಂಬ ಆರು ಮಂದಿ ಪುತ್ರರು ಜನಿಸಿದರು. ಅವರಲ್ಲಿ ಪುಷ್ಪಾರ್ಣನಿಗೆ ಪ್ರಭಾ ಮತ್ತು ದೋಷಾ ಎಂಬ ಇಬ್ಬರು ಭಾರ್ಯೆಯರಿದ್ದರು. ಆ ಭಾರ್ಯೆಯರಲ್ಲಿ ಆತನು ಪ್ರಭಾ ಎಂಬಾಕೆಯಲ್ಲಿ ಪ್ರಾತಃ, ಮಧ್ಯಂದಿನ ಮತ್ತು ಸಾಯಂ–ಎಂಬ ಮೂವರು ಪುತ್ರರನ್ನೂ, ದೋಷಾ ಎಂಬಾಕೆಯಲ್ಲಿ ಪ್ರದೋಷ, ನಿಶೀಥ ಮತ್ತು ವ್ಯುಷ್ಟ–ಎಂಬ ಮೂವರು ಪುತ್ರರನ್ನೂ ಪಡೆದನು. ವ್ಯುಷ್ಟನು ತನ್ನ ಭಾರ್ಯೆಯಾದ ಪುಷ್ಕರಿಣಿಯಲ್ಲಿ ಸರ್ವತೇಜಸನೆಂಬ ಪುತ್ರನನ್ನು ಪಡೆದನು. ಆತನ ಪತ್ನಿಯಾದ ಆಕೂತಿಗೆ ಚಕ್ಷುವೆಂಬ ಪುತ್ರನು ಹುಟ್ಟಿದನು. ಚಾಕ್ಷುಷವೆಂಬ ಮನ್ವಂತರದಲ್ಲಿ ಮನುಪದವಿಯನ್ನು ಪಡೆದವನು ಈ ಪುತ್ರನೇ. ಆ ಮನುವಿಗೆ ಆತನ ಪತ್ನಿಯಾದ ನಡ್ವಲಾದೇವಿಯಲ್ಲಿ ಪುರು, ಕುತ್ಸ, ತ್ರಿತ, ದ್ಯುಮ್ನ, ಸತ್ಯವಾನ್, ಋತ, ವ್ರತ, ಅಗ್ನಿಷ್ಟೋಮ, ಅತಿರಾತ್ರ, ಪ್ರದ್ಯುಮ್ನ, ಶಿಬಿ ಮತ್ತು ಉಲ್ಮುಕ–ಎಂಬ ಹನ್ನೆರಡು ಮಂದಿ ಸತ್ವಗುಣಶಾಲಿಗಳಾದ ಪುತ್ರರು ಜನಿಸಿದರು. ಅವರಲ್ಲಿ ಕಿರಿಯವನಾದ ಉಲ್ಮುಕನು ತನ್ನ ಪತ್ನಿಯಾದ ಪುಷ್ಕರಿಣಿಯಿಂದ ಅಂಗ, ಸುಮನಸ, ಖ್ಯಾತಿ, ಕ್ರತು, ಅಂಗಿರಸ ಮತ್ತು ಗಯ–ಎಂಬ ಶ್ರೇಷ್ಠರಾದ ಆರು ಮಂದಿ ಪುತ್ರರನ್ನು ಪಡೆದನು. ಆ ಪುತ್ರರಲ್ಲಿ ಅಂಗಮಹಾರಾಜನಿಗೆ ತನ್ನ ಪತ್ನಿಯಾದ ಸುನೀಥಾದೇವಿಯಲ್ಲಿ ವೇನನೆಂಬ ಅತಿದುಷ್ಟನಾದ ಪುತ್ರನು ಜನಿಸಿದನು. ಆ ಕುಪುತ್ರನ ದುಷ್ಟವಾದ ಶೀಲವನ್ನು ಸಹಿಸಲಾರದೇ ರಾಜರ್ಷಿಯಾದ ಅಂಗನು ಕಳವಳದಿಂದ ನಗರವನ್ನೇ ಬಿಟ್ಟು ಹೊರಟುಹೋದನು.

ಶರೀರಾದಿಕಾರಣವಾದ ದುಃಖರಹಿತನಾಗಿ (ಜೀವನಿಗೆ ಈ ದುಃಖಗಳುಂಟು) ಬೆಳಗುತ್ತಾ, ಬಿಂಬರೂಪನಾಗಿರುವ ಶ್ರೀವಿಷ್ಣುವೇ ಲೋಕಗಳಲ್ಲಿ ವ್ಯಾಪ್ತನಾಗಿರುವುದನ್ನೂ ಮತ್ತು ಲೋಕಗಳಿಗೆ ಆಧಾರವಾಗಿರುವುದನ್ನೂ ಕಂಡನು. (ವಿಜಯಧ್ವಜೀಯ) (ಶ್ಲೋಕ ೭)

ಶಾಂತಸ್ವಭಾವದವರಾದ ಮುನಿಗಳಿಗೂ ಈತನ ಉಪದ್ರವವನ್ನು ಸಹಿಸಲಾಗಲಿಲ್ಲ. ವಜ್ರಕ್ಕೆ ಸಮನಾದ ಅಮೋಘವಾದ ವಾಕ್‌ಶಕ್ತಿಯನ್ನು ಹೊಂದಿದ್ದ ಆ ಮಹಾತ್ಮರು ಕುಪಿತರಾಗಿ ಆತನಿಗೆ ಶಾಪವನ್ನು ಕೊಟ್ಟುಬಿಟ್ಟರು. ಅದರಿಂದ ಆತನು ಮರಣಹೊಂದಲು ದೇಶದಲ್ಲಿ ಅರಾಜಕತೆಯುಂಟಾಗಿ ಕಳ್ಳ-ಕಾಕರೂ, ದರೋಡೆಗಾರರೂ ಪ್ರಜೆಗಳನ್ನು ಪೀಡಿಸತೊಡಗಿದರು. ಅದನ್ನು ಕಂಡ ಮಹರ್ಷಿಗಳು ದೇಶಕ್ಕೆ ತಕ್ಕ ರಾಜನನ್ನು ಒದಗಿಸುವುದಕ್ಕಾಗಿ ಮೃತನಾಗಿದ್ದ ಆ ವೇನನ ಬಲಗೈಯನ್ನು ಕಡೆದರು. ಆಗ ಅದರಿಂದ ಭಗವಂತನಾದ ಮಹಾವಿಷ್ಣುವಿನ ಅಂಶಾವತಾರನಾದ ಆದಿ ಚಕ್ರವರ್ತಿ ಪೃಥುಮಹಾರಾಜನು ಪ್ರಕಟಗೊಂಡನು.” (ಶ್ಲೋಕ 12-20)

ಈ ವಿಚಿತ್ರವಾದ ವೃತ್ತಾಂತವನ್ನು ಕೇಳಿ ಮಹಾತ್ಮನಾದ ವಿದುರನು ಮೈತ್ರೇಯಮಹರ್ಷಿಗಳನ್ನು ಪ್ರಶ್ನಿಸಿದನು :

“ಮಹರ್ಷಿಗಳೇ! ಅಂಗಮಹಾರಾಜನಾದರೋ ಶೀಲದ ನಿಧಿಯೇ ಆಗಿದ್ದವನು. ಸಾಧುವು. ಬ್ರಾಹ್ಮಣಭಕ್ತನಾದ ಮಹಾತ್ಮನು. ಅಂತಹ ಮಹಾತ್ಮನಿಗೆ–ಕಾಟವನ್ನು ಕೊಟ್ಟು ಆತನು ದುಃಖದಿಂದ ಅರಣ್ಯಕ್ಕೆ ಹೊರಟುಹೋಗುವಂತೆ ಮಾಡಿದ–ಅಂತಹ ದುಷ್ಟಪುತ್ರನು ಹೇಗೆ ಹುಟ್ಟಿ ದನು? ತಪ್ಪಿತಸ್ಥರಿಗೆ ಶಿಕ್ಷೆಯನ್ನು ಕೊಡುವ ಅಧಿಕಾರದಲ್ಲಿದ್ದ ದಂಡಧಾರಿ ಯಾದ ವೇನನಾದರೂ ಧರ್ಮಜ್ಞರಾದ, ಮುನಿಶ್ರೇಷ್ಠರಿಂದ ಶಾಪರೂಪ ವಾದ ಬ್ರಹ್ಮದಂಡವನ್ನು ಪಡೆಯುವಂತಹ ಯಾವ ಪಾಪವನ್ನು ಆಚರಿಸಿ ದನು? ಇದನ್ನು ಏತಕ್ಕೆ ಕೇಳುತ್ತಿದ್ದೇನೆಂದರೆ : (ಶ್ಲೋಕ 21-22)

ನಾವಧ್ಯೇಯಃ ಪ್ರಜಾಪಾಲಃ ಪ್ರಜಾಭಿರಘವಾನಪಿ ।
ಯದಸೌ ಲೋಕಪಾಲಾನಾಂ ಬಿಭರ್ತ್ಯೋಜಃ ಸ್ವತೇಜಸಾ ॥೨೩॥

ರಾಜನು ಅತ್ಯಂತಪೂಜ್ಯನಾದವನು. ಪ್ರಜಾಪಾಲಕನಾದ ಆತನು ಒಂದು ಪಕ್ಷ ಯಾವುದಾದರೂ ಪಾಪವನ್ನು ಮಾಡಿದರೂ ಪ್ರಜೆಗಳು ಆತನನ್ನು ತಿರಸ್ಕರಿಸಬಾರದು. ಏಕೆಂದರೆ : ರಾಜನು ತನ್ನ ಪ್ರಭಾವದಿಂದ ಅಷ್ಟದಿಕ್ಪಾಲಕರ ತೇಜಸ್ಸನ್ನೇ ಧರಿಸಿರುತ್ತಾನೆ.

ಆದ್ದರಿಂದ ತತ್ತ್ವಜ್ಞಾನಿಗಳಲ್ಲಿ ಶ್ರೇಷ್ಠರಾದ ತಾವು ಭಕ್ತನೂ– ಶ್ರದ್ಧಾಳುವೂ ಆಗಿರುವ ನನಗೆ ಆ ವೇನನು ಮಾಡಿದ ಅಕಾರ್ಯಗಳೆಲ್ಲವನ್ನೂ ತಿಳಿಸಬೇಕು."

ವಿದುರನ ಪ್ರಾರ್ಥನೆಗೆ ಮೈತ್ರೇಯರು ಹೀಗೆ ಉತ್ತರಿಸಿದರು :

ಮಹಾತ್ಮನೇ! ಕೇಳು. ಒಂದು ದಾರಿ ಆ ರಾಜರ್ಷಿಯಾದ ಅಂಗ ಮಹಾರಾಜನು ಅಶ್ವಮೇಧಮಹಾಯಜ್ಞವನ್ನು ಆಚರಿಸಿದನು. ಅದರಲ್ಲಿ ವೇದವಾದಿಗಳಾದ ಬ್ರಾಹ್ಮಣೋತ್ತಮರೇ ದೇವತೆಗಳನ್ನು ಆಹ್ವಾನಮಾಡಿದರು. ಆದರೂ ದೇವತೆಗಳು ಅಲ್ಲಿಗೆ ತಮ್ಮ ಹವಿರ್ಭಾಗವನ್ನು ಸ್ವೀಕರಿಸಲು ಬರಲಿಲ್ಲ. ಆಗ ಋತ್ವಿಕ್ಕುಗಳು ಆಶ್ಚರ್ಯಚಕಿತರಾಗಿ ಯಜಮಾನನಾದ ಅಂಗಮಹಾರಾಜನನ್ನು ಕುರಿತು–"ಮಹಾರಾಜ! ನಾವು ಆಹುತಿಗಳ ರೂಪದಲ್ಲಿ ಹೋಮಮಾಡುತ್ತಿರುವ ತುಪ್ಪವೇ ಮುಂತಾದ ನಿನ್ನ ಪದಾರ್ಥಗಳನ್ನು ದೇವತೆಗಳು ಸ್ವೀಕಾರಮಾಡುತ್ತಿಲ್ಲ. ನಿನ್ನ ಹೋಮಸಾಮಗ್ರಿಗಳಲ್ಲಿ ಯಾವುದೂ ದೂಷಿತವಾಗಿಲ್ಲ. ಅವುಗಳ ಸಂಗ್ರಹವನ್ನೂ ನೀನು ಶ್ರದ್ಧೆಯಿಂದಲೇ ಮಾಡಿದ್ದೀಯೆ. ಋತ್ವಿಜರು ವ್ರತನಿಯಮಗಳನ್ನು ನಿಷ್ಠೆಯಿಂದ ಪಾಲನೆಮಾಡುತ್ತಿರುವುದರಿಂದ ಅವರು ಪಠಿಸುವ ವೇದಮಂತ್ರಗಳೂ ಬಲಹೀನವಾಗಿಲ್ಲ. ಯಜ್ಞದಲ್ಲಿ ದೇವತೆಗಳಿಗೆ ನಾವು ಎಳ್ಳಿನಷ್ಟೂ ತಿರಸ್ಕಾರವನ್ನು ಮಾಡಿರುವುದು ತಿಳಿದುಬಂದಿಲ್ಲ. ಆದರೂ ಈ ಕರ್ಮಗಳಿಗೆ ಸಾಕ್ಷಿಗಳಾಗಿರುವ ದೇವತೆಗಳು ಏಕೆ ತಮ್ಮ-ತಮ್ಮ ಭಾಗವನ್ನು ತೆಗೆದುಕೊಳ್ಳುತ್ತಿಲ್ಲವೋ ತಿಳಿಯದಾಗಿದೆ"–ಎಂದು ವಿಜ್ಞಾಪಿಸಿದರು.

ಋತ್ವಿಜರ ಮಾತುಗಳನ್ನು ಕೇಳಿ ಅಂಗರಾಜನ ಮನಸ್ಸಿಗೆ ತುಂಬಾ ನೋವಾಯಿತು. ಆಗ ಆತನು ಯಾಜಕರ ಅನುಮತಿಯನ್ನು ಪಡೆದು ಮೌನವನ್ನು ಪಡೆದು "ಎಲೈ ಸದಸ್ಸಿನ ನಾಯಕರೇ! ನಾವು ಆವಾಹನೆಮಾಡಿದರೂ ದೇವತೆಗಳು ಯಜ್ಞಕ್ಕೆ ಏಕೆ ಬರುತ್ತಿಲ್ಲ? ತಮ್ಮ ಸೋಮಪಾತ್ರೆಗಳನ್ನು ಏಕೆ ತೆಗೆದುಕೊಳ್ಳುತ್ತಿಲ್ಲ? ನಾನು ಮಾಡಿರುವ ಅಂತಹ ಅಪರಾಧವಾದರೂ ಏನು? ತಿಳಿಸಿರಿ"–ಎಂದು ಸದಸ್ಯರನ್ನು ಪ್ರಶ್ನೆಮಾಡಿದನು. ಆಗ ಅವರು ಆತನಿಗೆ ಹೀಗೆಂದರು : "ರಾಜರ್ಷಿಯೇ! ಈ ಜನ್ಮದಲ್ಲೇನೋ ನೀನು

ಯಾವ ಪಾಪವನ್ನೂ ಮಾಡಿಲ್ಲ. ಆದರೆ ಹಿಂದಿನ ಜನ್ಮದಲ್ಲಿ ನೀನು ಒಂದು ಪಾತಕವನ್ನು ಮಾಡಿರುವುದರಿಂದ ನೀನು ಇಷ್ಟೆಲ್ಲಾ ಗುಣಶಾಲಿಯಾಗಿದ್ದರೂ ಸಂತಾನರಹಿತನಾಗಿದ್ದೀಯೆ. ಅದಕ್ಕಾಗಿ ಚಿಂತಿಸಬೇಡ. ನಿನಗೆ ಮಂಗಳ ವಾಗಲಿ. ಮೊದಲು ನೀನು ಸತ್ಪುತ್ರನನ್ನು ಪಡೆಯುವುದಕ್ಕೆ ತಕ್ಕ ಉಪಾಯವನ್ನಾಚರಿಸು. ಪುತ್ರಕಾಮನೆಯಿಂದ ನೀನು ಯಜ್ಞವನ್ನು ಆಚರಿಸಿದರೆ ಭಗವಂತನಾದ ಯಜ್ಞೇಶ್ವರನು ನಿನಗೆ ಅವಶ್ಯವಾಗಿಯೂ ಪುತ್ರನನ್ನು ಅನುಗ್ರಹಿಸುವನು. ಸಂತಾನಪ್ರಾಪ್ತಿಗಾಗಿ ಪ್ರಾರ್ಥಿಸುತ್ತಾ ಸಾಕ್ಷಾತ್ ಯಜ್ಞಪುರುಷನಾಗಿರುವ ಶ್ರೀಹರಿಯನ್ನು ಆವಾಹನೆಮಾಡಿದರೆ ಆಗ ದೇವತೆಗಳು ತಾವಾಗಿಯೇ ತಮ್ಮ-ತಮ್ಮ ಯಜ್ಞಭಾಗಗಳನ್ನು ಸ್ವೀಕಾರ ಮಾಡುವರು.* (ಶ್ಲೋಕ 24-33)

ತಾಂಸ್ತಾನ್ಕಾಮಾನ್ಹರಿರ್ದದ್ಯಾದ್ಯಾನ್ಯಾನ್ಕಾಮಯತೇ ಜನಃ ।
ಆರಾಧಿತೋ ಯಥೈವೈಷ ತಥಾ ಪುಂಸಾಂ ಫಲೋದಯಃ ॥೩೪॥

ಭಕ್ತರು ಯಾವ ಯಾವ ಇಷ್ಟಾರ್ಥಗಳನ್ನು ಬಯಸುತ್ತಾರೆಯೋ– ಅವುಗಳನ್ನೇ ಶ್ರೀಹರಿಯು ಅವರಿಗೆ ದಯಪಾಲಿಸುವನು. ಉಪಾಸಕನು ಆತನನ್ನು ಯಾವ ರೀತಿಯಲ್ಲಿ ಆರಾಧಿಸುತ್ತಾನೆಯೋ ಅದಕ್ಕೆ ತಕ್ಕ ಫಲವನ್ನೇ ಆತನು ಪಡೆಯುವನು.”

---

* ದೇವತೆಗಳೆಲ್ಲರೂ ಶ್ರೀಹರಿಯ ಶರೀರದಿಂದ ಉತ್ಪನ್ನರಾದವರು. ಆತನನ್ನು ಆಶ್ರಯಿಸಿರುವವರು. ಆತನಲ್ಲಿ ನೆಟ್ಟಮನಸ್ಸುಳ್ಳವರು. ಆತನು ಸಂತುಷ್ಟನಾದರೆ ಅದರಿಂದ ತಾವೂ ಸಂತುಷ್ಟರಾಗುವರು. ಆತನು ಹವಿಸ್ಸನ್ನು ಪರಿಗ್ರಹಿಸಿದರೆ ತಾವೂ ಪರಿಗ್ರಹಿಸುವರು. ಆತನ ಇಚ್ಛೆಗಿಂತ ಬೇರೆಯಾಗುವುದಿಲ್ಲ ಅವರ ಇಚ್ಛೆ.

ಅಪುತ್ರನಿಗೆ ಉತ್ತಮಲೋಕವಿಲ್ಲ–ಎಂಬುದು ಸಾಮಾನ್ಯವಾದ ಮಾತು. ಏಕೆಂದರೆ : ಧರ್ಮವಂತನಾಗಿದ್ದರೆ ಧರ್ಮದ ಬಲದಿಂದ ಆತನಿಗೂ ಸದ್ಗತಿಯು ದೊರತೇ ದೊರೆಯುವುದು.

‘ಸದ್ಧರ್ಮವತೋ ಧರ್ಮಬಲಾಲ್ಲೋಕೋ ಭವತ್ಯೇವ’ ಪ್ರಕೃತ ಅಂಗರಾಜನ ಯಜ್ಞದಲ್ಲಿ ದೇವತೆಗಳು ಮೊದಲು ಏಕೆ ಹವಿಸ್ಸನ್ನು ಸ್ವೀಕರಿಸಲಿಲ್ಲ? ಎಂದರೆ : ಶ್ರೀಹರಿಯ ಇಚ್ಛೆಯಿಂದ ಶ್ರೇಷ್ಠನಾದ ಪುತ್ರನು ಮುಂದೆ ಹುಟ್ಟುವನೆಂಬ ಕಾರಣ ದಿಂದ. **“ಅನಪತ್ಯೋಽಪಿ ಸದ್ಧರ್ಮಾ ಲೋಕಜಿನ್ನಾತ್ರ ಸಂಶಯಃ । ದೇವೈಸ್ತು**

ಹೀಗೆ ಅಂಗಮಹಾರಾಜನಿಗೆ ಪುತ್ರನನ್ನು ದೊರಕಿಸಿಕೊಡಲು ನಿಶ್ಚಯಮಾಡಿ ಋತ್ವಿಜರು ಪಶುಗಳಲ್ಲಿ ಯಜ್ಞರೂಪದಲ್ಲಿ ನೆಲೆಗೊಂಡಿರುವ ಶಿಪಿವಿಷ್ಟನಾದ* ಶ್ರೀಮಹಾವಿಷ್ಣುವಿನ ತೃಪ್ತಿಗಾಗಿ–ಪುರೋಡಾಶವೆಂಬ ಚರುವನ್ನು ಸಮರ್ಪಣೆಮಾಡಿದರು. ಹಾಗೆ ಅಗ್ನಿಯಲ್ಲಿ ಚರುವನ್ನು ಸಮರ್ಪಿಸಿದೊಡನೆಯೇ ಅಗ್ನಿಕುಂಡದಿಂದ ಸುವರ್ಣದ ಹಾರಗಳಿಂದಲೂ, ಶುಭ್ರವಾದ ವಸ್ತ್ರಗಳಿಂದಲೂ ಅಲಂಕೃತನಾಗಿದ್ದ ಒಬ್ಬ ದಿವ್ಯಪುರುಷನು ಆವಿರ್ಭವಿಸಿದನು. ಆತನು ಸಿದ್ಧವಾದ ಪಾಯಸವನ್ನು ಚಿನ್ನದ ಪಾತ್ರೆಯಲ್ಲಿ ಹಿಡಿದುಕೊಂಡಿದ್ದನು. ಉದಾರಬುದ್ಧಿಯುಳ್ಳ ಅಂಗಮಹಾರಾಜನು ಯಾಜಕರ ಅನುಮತಿಯಂತೆ ಆ ಪಾಯಸಾನ್ನವನ್ನು ತನ್ನ ಅಂಜಲಿಯಲ್ಲಿ ತೆಗೆದುಕೊಂಡು ಸಂತೋಷದಿಂದ ಮೂಸಿನೋಡಿ ಅನಂತರ ತನ್ನ ಪತ್ನಿಗೆ ಅದನ್ನು ಕೊಟ್ಟನು. ಪುತ್ರಹೀನೆಯಾಗಿದ್ದ ಮಹಾರಾಣಿಯು ಆ ಪುತ್ರಪ್ರದಾಯಕವಾದ ಪಾಯಸಾನ್ನವನ್ನು ಸೇವಿಸಿ ಪತಿಯ ಸಮಾಗಮದಿಂದ ಗರ್ಭವನ್ನು ಧರಿಸಿದಳು. ಸಕಾಲದಲ್ಲಿ ಆಕೆಗೆ ಒಬ್ಬ ಪುತ್ರನೂ ಹುಟ್ಟಿದನು. ಆದರೆ ಆ ಬಾಲಕನು ಅಧರ್ಮನ ವಂಶದಲ್ಲಿ ಜನಿಸಿದ್ದ ತನ್ನ ಅಜ್ಜನಾದ ಮೃತ್ಯುವನ್ನೇ ಬಾಲ್ಯದಿಂದಲೂ ಅನುಸರಿಸಿದ್ದರಿಂದ ತಾನೂ ಅಧಾರ್ಮಿಕನಾಗಿಯೇ ಬೆಳೆದನು.[1] ಆ ದುಷ್ಟಬಾಲಕನು ಯಾವಾಗಲೂ ಕೈಯಲ್ಲಿ ಬಿಲ್ಲು-ಬಾಣಗಳನ್ನು ಹಿಡಿದು

ಪೃಥುಜನಾರ್ತೇ ಹವಿರಜಸ್ಯ ನೋ ಹೃತಮ್ ॥ " ಎಂದು ವಿಜಯಧ್ವಜೀಯದಲ್ಲಿ ಹೇಳಿದೆ.

'ಅಪುತ್ರಸ್ಯ ಗತಿರ್ನಾಸ್ತಿ' ಎಂಬುದಕ್ಕೆ ಪುತ್ರಹೀನನಾದವನಿಗೆ ಸದ್ಗತಿಯು ಇಲ್ಲ ಎಂಬುದು ಪ್ರಸಿದ್ಧವಾದ ಅರ್ಥ. ಇದಕ್ಕೆ ಕೆಲವರು ಅಪುತ್ರನಾದವನಿಗೆ (ಆತನು ಧರ್ಮಿಷ್ಠನಾಗಿದ್ದರೆ) ನಾ ಗತಿಃ ಅಸ್ತಿ = ಪುರುಷೋತ್ತಮನಾದ ನಾರಾಯಣನೇ ದಿಕ್ಕಾಗಿ ಇರುತ್ತಾನೆ–ಎಂದು ಅರ್ಥಮಾಡುತ್ತಾರೆ. (ಶ್ಲೋಕ ೩೩)

* ಶಿಪಿವಿಷ್ಟಃ–ಎಂದರೆ ; ವಿಷ್ಣು. ಶಿಪಿಗಳಲ್ಲಿ ಎಂದರೆ–ಪಶುಗಳಲ್ಲಿ ಯಜ್ಞಪುರುಷ ರೂಪದಲ್ಲಿ ಪ್ರವೇಶಮಾಡಿರುವುದರಿಂದ ಮಹಾವಿಷ್ಣುವಿಗೆ ಶಿಪಿವಿಷ್ಟ ಎಂದು ಹೆಸರು. **ಯಜ್ಞೋ ವೈ ವಿಷ್ಣುಃ ಪಶವಃ ಶಿಪಿಃ । ಯಜ್ಞ ಏವ ಪಶುಷು ಪ್ರತಿತಿಷ್ಠತಿ ॥**

(ಶ್ಲೋಕ ೩೫)

1 ಸುನೀಥಾದೇವಿಯು ಮೃತ್ಯುವಿನ ಪುತ್ರಿಯೇ ಆಗಿದ್ದಳು–ಎಂಬುದನ್ನು ಸ್ಮರಿಸಬೇಕು. (ಶ್ಲೋಕ ೩೯)

ಅರಣ್ಯದಲ್ಲಿ ತಿರುಗಾಡುತ್ತಾ ಬೇಡನಂತೆ ಅಲ್ಲಿದ್ದ ಸಾಧುಪ್ರಾಣಿಗಳಾದ ಬಡಪಾಯಿ ಜಿಂಕೆಗಳನ್ನು ಕೊಂದುಹಾಕುತ್ತಿದ್ದನು. ಆತನನ್ನು ಕಂಡೊಡನೆಯೇ ಪುರನಿವಾಸಿಗಳು 'ಇದೋ ವೇನನು ಬಂದ! ವೇನನು ಬಂದ!'– ಎಂದು ಕೂಗಿಕೊಳ್ಳುತ್ತಿದ್ದರು. ಆತನು ಎಷ್ಟು ಕ್ರೂರಿಯೂ–ನಿರ್ದಯನೂ ಆಗಿದ್ದನೆಂದರೆ ತನ್ನ ಜೊತೆಯಲ್ಲಿ ಆಟವಾಡುತ್ತಿದ್ದ ಸಮವಯಸ್ಸಿನ ಗೆಳೆಯರಾದ ಹುಡುಗರನ್ನು ಹಿಡಿದುಕೊಂಡು ಬಲಾತ್ಕಾರದಿಂದ ಪಶುಗಳಂತೆ ಪೀಡಿಸಿ ಸಾಯಿಸುತ್ತಿದ್ದನು. ತನ್ನ ಪುತ್ರನ ಆ ದುಷ್ಟಸ್ವಭಾವವನ್ನು ಕಂಡು ಅಂಗಮಹಾರಾಜನು ಆತನನ್ನು ಸರಿಯಾದ ದಾರಿಗೆ ತರಲು ಬಗೆ-ಬಗೆಯಲ್ಲಿ ಪ್ರಯತ್ನಿಸಿದನು. ಆದರೂ ಆತನನ್ನು ಹತೋಟಿಗೆ ತರಲು ಸಾಧ್ಯವಾಗದಿದ್ದುದನ್ನು ನೋಡಿ ಆತನಿಗೆ ತಡೆಯಲಾರದ ಸಂಕಟವಾಯಿತು.

(ಶ್ಲೋಕ 35-12)

ಅವನು ಮನಸ್ಸಿನಲ್ಲಿ ಹೀಗೆ ಅಂದುಕೊಂಡನು :

ಪ್ರಾಯೇಣಾಭ್ಯರ್ಚಿತೋ ದೇವೋ ಯೇಽಪ್ರಜಾ ಗೃಹಮೇಧಿನಃ ।
ಕದಪತ್ಯಭೃತಂ ದುಃಖಂ ಯೇ ನ ವಿನ್ದನ್ತಿ ದುರ್ಭರಮ್ ॥೪೩॥

"ಪುತ್ರಹೀನರಾದ ಗೃಹಸ್ಥರೇ ಬಹುಶಃ ಪುಣ್ಯಶಾಲಿಗಳು. ಅವರು ಹಿಂದಿನ ಜನ್ಮದಲ್ಲಿ ಶ್ರೀಹರಿಯನ್ನು ಆರಾಧನೆಮಾಡಿರಬೇಕು. ಅದರಿಂದಲೇ ಅವರಿಗೆ ಕುಪುತ್ರನು ಮಾಡುವ ಕುಕರ್ಮಗಳಿಂದುಂಟಾಗುವ ತಡೆಯಲಾರದ ಕಷ್ಟವನ್ನು ಅನುಭವಿಸುವ ಸಂದರ್ಭ ಬರಲಿಲ್ಲ.

ಯತಃ ಪಾಪೀಯಸೀ ಕೀರ್ತಿರಧರ್ಮಶ್ಚ ಮಹಾನ್ನೃಣಾಮ್ ।
ಯತೋ ವಿರೋಧಃ ಸರ್ವೇಷಾಂ ಯತ ಆಧಿರನನ್ತಕಃ ॥೪೪॥

ಕಸ್ತಂ ಪ್ರಜಾಪದೇಶಂ ವೈ ಮೋಹಬನ್ಧನಮಾತ್ಮನಃ ।
ಪಣ್ಡಿತೋ ಬಹು ಮನ್ಯೇತ ಯದರ್ಥಾಃ ಕ್ಲೇಶದಾ ಗೃಹಾಃ ॥೪೫॥

ಕದಪತ್ಯಂ ವರಂ ಮನ್ಯೇ ಸದಪತ್ಯಾಚ್ಛುಚಾಂ ಪದಾತ್ ।
ನಿರ್ವಿದ್ಯೇತ ಗೃಹಾನ್ಮರ್ತ್ಯೋ ಯತ್ಕ್ಲೇಶನಿವಹಾ ಗೃಹಾಃ ॥೪೬॥

ಯಾವನು ಮಾಡುವ ಕುಕರ್ಮಗಳಿಂದ ತಂದೆ-ತಾಯಿಗಳ ಕೀರ್ತಿ

ಯೆಲ್ಲವೂ ಮಣ್ಣುಪಾಲಾಗಿ ಅಪಕೀರ್ತಿಯೂ ಉಂಟಾಗಿ, ಮಹತ್ತಾದ ಅಧರ್ಮಕ್ಕೆ ಗುರಿಯಾಗಿ, ಎಲ್ಲರೊಡನೆಯೂ ವಿರೋಧವುಂಟಾಗಿ, ಎಂದಿಗೂ ತೊಲಗದಿರುವ ಮನೋವ್ಯಾಧಿಗೆ ತುತ್ತಾಗಿ, ಮನೆಯೆಲ್ಲಾ ದುಃಖದಿಂದ ತುಂಬಿಹೋಗುವುದೋ–ಅಂತಹ ನಾಮಮಾತ್ರದ ಸಂತಾನವನ್ನು ಪಡೆಯಬೇಕೆಂದು ಯಾವ ವಿವೇಕಿಯು ತಾನೇ ಹಂಬಲಿಸಿಯಾನು? ಅಂತಹ ಕುಪುತ್ರನು ಆತ್ಮನನ್ನು ಕಟ್ಟಿಹಾಕುವ ಮೋಹದ ಸರಪಣಿಯೆಂದು ಮಾತ್ರವೇ ತಿಳಿಯಬೇಕು. ಆದರೆ ಮತ್ತೊಂದು ದೃಷ್ಟಿಯಿಂದ ನೋಡಿದಾಗ ಸುಪುತ್ರನಿಗಿಂತಲೂ ಕುಪುತ್ರನೇ ವಾಸಿಯೆಂದು ಅನ್ನಿಸುತ್ತದೆ. ಏಕೆಂದರೆ : ಪುತ್ರನು ಸತ್ಪುತ್ರನೇ ಆಗಿದ್ದರೆ ಆತನನ್ನು ತೊರೆದುಹೋಗುವುದು ಕಷ್ಟ. ಮನೆ-ಮಕ್ಕಳ ವ್ಯಾಮೋಹವು ಹೆಚ್ಚುತ್ತದೆ. ಆತನೇನಾದರೂ ಕುಪುತ್ರನಾಗಿ ಹುಟ್ಟಿದರೆ ಮನೆಯನ್ನು ನರಕವನ್ನಾಗಿಸಿ ಅದರಲ್ಲಿ ಜುಗುಪ್ಸೆಯನ್ನುಂಟು ಮಾಡಿ ಸಂಸಾರವನ್ನು ತೊರೆದುಹೋಗಲು ಕಾರಣನಾಗುತ್ತಾನೆ.”

ಈ ರೀತಿಯಲ್ಲಿ ಚಿಂತೆಯಿಂದ ಆಕ್ರಾಂತನಾದ ಅಂಗಮಹಾರಾಜನಿಗೆ ರಾತ್ರಿಯಲ್ಲಿ ನಿದ್ರೆ ಹತ್ತಲಿಲ್ಲ. ಆತನಿಗೆ ಗೃಹಸ್ಥಜೀವನದಲ್ಲೇ ಬೇಸರವುಂಟಾಯಿತು. ಅರ್ಧರಾತ್ರಿಯಲ್ಲಿ ವೇನನ ತಾಯಿಯು ನಿದ್ರೆಯಲ್ಲಿ ಮುಳುಗಿದ್ದಾಗ ಆತನು ಹಾಸಿಗೆಯಿಂದ ಎದ್ದು ವೈರಾಗ್ಯದಿಂದ ಎಲ್ಲ ಮೋಹಪಾಶಗಳನ್ನೂ ಕಿತ್ತುಹಾಕಿ, ಯಾರಿಗೂ ಸುಳಿವು ಕೊಡದೇ, ಸುಮ್ಮನೆ ಆ ಅರಮನೆಯನ್ನು ತೊರೆದು ಅರಣ್ಯಕ್ಕೆ ಹೊರಟುಬಿಟ್ಟನು. ತಮ್ಮ ಮಹಾರಾಜನು ವಿರಕ್ತನಾಗಿ ಮನೆಯಿಂದ ಹೊರಟುಹೋದನೆಂದು ತಿಳಿದು ಎಲ್ಲ ಪ್ರಜೆಗಳೂ, ಪುರೋಹಿತರೂ, ಮಂತ್ರಿಗಳೂ, ಸ್ನೇಹಿತರೂ–ಎಲ್ಲರೂ ತುಂಬಾ ಕಳವಳಗೊಂಡು ಆತನನ್ನು ಭೂಮಿಯಲ್ಲೆಲ್ಲಾ ಹುಡುಕತೊಡಗಿದರು. ಯೋಗದ ಪರಮಾರ್ಥವನ್ನು ತಿಳಿಯದೇ ಇರುವ ಕುಯೋಗಿಗಳು ತಮ್ಮ ಹೃದಯದಲ್ಲಿ ಅಡಗಿರುವ ಪರಮಾತ್ಮನನ್ನು ಹೊರಗೆಲ್ಲಾ ಹುಡುಕಿ ವಿಫಲರಾಗುವಂತೆ–ಅವರು ತಮ್ಮ ರಾಜನನ್ನು ಪತ್ತೆಮಾಡುವ ವಿಷಯದಲ್ಲಿ ನಿಷ್ಫಲರಾದರು. ತಮ್ಮ ಪ್ರಭುವಿನ ಸುಳಿವು ಎಲ್ಲಿಯೂ ಸಿಕ್ಕದಿರಲು ಅವರು ನಿರಾಶರಾಗಿ ನಗರಿಗೆ ಹಿಂದಿರುಗಿ ಅಲ್ಲಿ ನೆರೆದಿದ್ದ ಮುನಿಗಳಿಗೆ ನಮಸ್ಕಾರಮಾಡಿ

ಕಣ್ಣೀರಿನ ಕೋಡಿಯನ್ನು ಹರಿಸುತ್ತಾ 'ಮಹಾತ್ಮರೇ! ಮಹಾರಾಜನನ್ನು ಕಳೆದುಕೊಂಡುಬಿಟ್ಟೆವು'–ಎಂದು ವಿಜ್ಞಾಪಿಸಿದರು. (ಶ್ಲೋಕ 47-49)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಚತುರ್ಥಸ್ಕಂಧದ ೧೩ನೆಯ ಅಧ್ಯಾಯವು ಮುಗಿಯಿತು.

ಚತುರ್ಥಸ್ಕಂಧ ೧೪ನೆಯ ಅಧ್ಯಾಯ

ವೇನರಾಜನ ಚರಿತ್ರೆ

ಮೈತ್ರೇಯರು ವಿದುರನಿಗೆ ಹೇಳುತ್ತಾರೆ :

ಭೃಗ್ವಾದಯಸ್ತೇ ಮುನಯೋ ಲೋಕಾನಾಂ ಕ್ಷೇಮದರ್ಶಿನಃ ।
ಗೋಪ್ತರ್ಯಸತಿ ವೈ ನೄಣಾಂ ಪಶ್ಯನ್ತಃ ಪಶುಸಾಮ್ಯತಾಮ್ ॥೧॥

ವೀರಮಾತರಮಾಹೂಯ ಸುನೀಥಾಂ ಬ್ರಹ್ಮವಾದಿನಃ ।
ಪ್ರಕೃತ್ಯಸಮ್ಮತಂ ವೇನಮಭ್ಯಷಿಞ್ಚನ್ಪತಿಂ ಭುವಃ ॥೨॥

ವಿದುರ! ಅಲ್ಲಿ ನೆರೆದಿದ್ದ ಭೃಗುವೇ ಮುಂತಾದ ಮಹರ್ಷಿಗಳು ಎಲ್ಲ ಲೋಕಗಳೂ ಕ್ಷೇಮವಾಗಿರಬೇಕಾದರೆ ಏನು ಮಾಡಬೇಕೆಂಬುದನ್ನೇ ಚಿಂತಿಸುತ್ತಾ ಅದಕ್ಕೆ ತಕ್ಕ ದಾರಿಯನ್ನು ನೋಡುತ್ತಿದ್ದರು. ದೇಶದಲ್ಲಿ ಪ್ರಜಾಪಾಲಕನಾದ ರಾಜನಿಲ್ಲದಿದ್ದರೆ ಎಲ್ಲರೂ ಪಶುಗಳಂತೆ ಸ್ವೇಚ್ಛಾಚಾರಿಗಳಾಗಿ ನಾಶಹೊಂದುವರು–ಎಂದು ಯೋಚಿಸಿದ ಆ ವೇದವಾದಿಗಳಾದ ಮಹಾತ್ಮರು ವೀರನಾದ ರಾಜಪುತ್ರನ ತಾಯಿಯಾದ ಸುನೀಥಾದೇವಿಯನ್ನು ಕರೆದು ಆಕೆಯ ಸಮ್ಮತಿಯಂತೆ ವೇನನಿಗೆ ಭೂಮಂಡಲದ ಆಧಿಪತ್ಯದಲ್ಲಿ ಪಟ್ಟಾಭಿಷೇಕಮಾಡಿದರು. ಪ್ರಜೆಗಳಿಗೆ ಒಪ್ಪಿಗೆಯಿಲ್ಲದಿದ್ದರೂ ಬೇರೆ ದಾರಿಯನ್ನು ಕಾಣದೇ ಅವರು ಆತನನ್ನೇ ಚಕ್ರವರ್ತಿಯನ್ನಾಗಿ ಮಾಡಿದರು.

ಉಗ್ರಶಾಸಕನಾಗಿ ಕಠೋರವಾದ ದಂಡನೆಯನ್ನು ವಿಧಿಸುವ ವೇನನು ಸಿಂಹಾಸನಾಧಿಪತಿಯಾಗಿದ್ದಾನೆಂಬುದನ್ನು ಕೇಳಿದೊಡನೆಯೇ ಕಳ್ಳ-ಕಾಕರು ಹಾವಿಗೆ ಹೆದರಿದ ಇಲಿಗಳಂತೆ–ಒಡನೆಯೇ ಅಲ್ಲಲ್ಲಿ ಅಡಗಿಕೊಂಡರು. ರಾಜಪೀಠದ ಆಧಿಪತ್ಯವನ್ನು ಪಡೆದ ವೇನನಿಗೂ ದುರಹಂಕಾರದಿಂದ ತಲೆ ತಿರುಗಿತು. ಎಂಟು ಮಂದಿ ಲೋಕಪಾಲಕರ ಶಕ್ತಿಯ ಕಲೆಗಳನ್ನೂ ಪಡೆದ,

ಅಧಿಕಾರದ ಮದದಿಂದ ಕೊಬ್ಬಿದ ಆತನು ದುರಭಿಮಾನದಿಂದ ತನ್ನನ್ನೇ ಸರ್ವಶ್ರೇಷ್ಠನೆಂದು ಭಾವಿಸಿಕೊಂಡು ಮಹಾಪುರುಷರನ್ನು ಅವಮಾನಿಸ ತೊಡಗಿದನು. ಅಧಿಕಾರ-ಐಶ್ವರ್ಯಗಳ ಅಮಲಿನಿಂದ ಕುರುಡನಾದ ಆತನು ಸೊಕ್ಕಿದ ಸಲಗದಂತೆ ಭೂಮಿ-ಆಕಾಶಗಳನ್ನು ನಡುಗಿಸುತ್ತಾ ರಥವನ್ನೇರಿ ಎಲ್ಲೆಲ್ಲೂ ಸಂಚರಿಸತೊಡಗಿದನು. 'ಇನ್ನು ಮುಂದೆ ಯಾವ ದ್ವಿಜರೂ ಯಾವುದೇ ರೀತಿಯ ಯಜ್ಞವನ್ನಾಗಲೀ, ದಾನವನ್ನಾಗಲೀ, ಹವನವನ್ನಾಗಲೀ ಮಾಡಕೂಡದು'—ಎಂದು ರಾಜ್ಯದಲ್ಲಿ ಡಂಗೂರಹೊಡೆಸಿದನು. ಎಲ್ಲ ಕಡೆಗಳಲ್ಲೂ ಎಲ್ಲ ಧರ್ಮ-ಕರ್ಮಗಳನ್ನೂ ತಡೆದು ನಿಲ್ಲಿಸಿಬಿಟ್ಟನು. ದುಷ್ಟ ವಾದ ಶೀಲವುಳ್ಳ ವೇನನ ಇಂತಹ ದುರಾಚಾರಗಳನ್ನು ಕಂಡು ಸತ್ರಯಾಗ ದಲ್ಲಿ ಭಾಗವಹಿಸಿದ್ದ ಮುನಿಗಳಿಗೆ ತುಂಬಾ ಚಿಂತೆಯುಂಟಾಯಿತು. ಲೋಕಕ್ಕೆ ಮಹಾಸಂಕಟವು ಬಂದೊದಗಿದುದನ್ನು ಕಂಡು ಕನಿಕರದಿಂದ ಕೂಡಿದ ಅವರು ಹೀಗೆ ಮಾತನಾಡಿಕೊಳ್ಳತೊಡಗಿದರು : (ಶ್ಲೋಕ 3-7)

ಅಹೋ ಉಭಯತಃ ಪ್ರಾಪ್ತಂ ಲೋಕಸ್ಯ ವ್ಯಸನಂ ಮಹತ್ ।
ದಾರುಣ್ಯುಭಯತೋ ದೀಪ್ತೇ ಇವ ತಸ್ಕರಪಾಲಯೋಃ ॥೮॥

"ಅಯ್ಯೋ! ಎಂತಹ ಅನ್ಯಾಯವಾಯಿತು? ಯಾವುದಾದರೂ ಮರವು ಎರಡು ಕಡೆಗಳಲ್ಲೂ ಹತ್ತಿ ಉರಿಯುತ್ತಿದ್ದರೆ ಅವುಗಳ ನಡುವೆ ಸಿಕ್ಕಿ ಸಂಕಟಪಡುವ ಪ್ರಾಣಿಗಳಂತೆ—ಈಗ ಪ್ರಜೆಗಳು ಎರಡೂ ಕಡೆಗಳಿಂದಲೂ ಸಂಕಟಕ್ಕೆ ಒಳಗಾಗಿದ್ದಾರಲ್ಲಾ! ಒಂದು ಕಡೆ ಈ ರಾಜನ ಅತ್ಯಾಚಾರಗಳಿಂದ ಉಂಟಾಗಿರುವ ವಿಪತ್ತು ; ಮತ್ತೊಂದು ಕಡೆ ಕಳ್ಳ-ಕಾಕರಿಂದ ಒದಗಬಹುದಾದ ವಿಪತ್ತು.

ಈ ವೇನನು ಅಯೋಗ್ಯನೆಂದು ತಿಳಿದಿದ್ದರೂ ಅರಾಜಕತೆಯು ಉಂಟಾಗದಿರಲೆಂದು ನಾವು ಆತನನ್ನು ರಾಜನನ್ನಾಗಿ ಮಾಡಿದೆವು. ಆದರೆ ಈಗ ಈ ರಾಜನಿಂದಲೇ ಪ್ರಜೆಗಳಿಗೆ ಭಯವುಂಟಾಗಿಬಿಟ್ಟಿದೆ. ಇಂತಹ ಸ್ಥಿತಿಯಲ್ಲಿ ಪ್ರಜೆಗಳಿಗೆ ಹೇಗೆ ತಾನೇ ಸುಖ-ಶಾಂತಿಗಳು ದೊರಕುವುವು? ಸುನೀಥಿಯ ಗರ್ಭದಲ್ಲಿ ಹುಟ್ಟಿರುವ ಈ ವೇನನು ಸ್ವಭಾವದಿಂದಲೇ ದುಷ್ಟನು. ಈತನನ್ನು ನಾವು ರಕ್ಷಿಸಿದುದು—ಹಾವಿಗೆ ಹಾಲೆರೆದಂತೆ—

ಅನರ್ಥಕ್ಕೇ ಕಾರಣವಾಯಿತು. ಪ್ರಜೆಗಳನ್ನು ರಕ್ಷಿಸುವ ಸಲುವಾಗಿ ನಾವು ಈತನನ್ನು ನೇಮಕಮಾಡಿದೆವು. ಆದರೆ ಈತನು ಪ್ರಜೆಗಳನ್ನು ನಾಶಮಾಡುವುದಕ್ಕೆ ಬಯಸುತ್ತಿದ್ದಾನೆ. ಆದರೂ ನಾವು ಈತನಿಗೆ ಸಮಾಧಾನದಿಂದ ತಿಳಿವಳಿಕೆ ನೀಡೋಣ. ಹೀಗೆ ಮಾಡಿದರೆ ನಮಗೆ ಈತನು ಮಾಡಿದ ಪಾಪಗಳು ಅಂಟುವುದಿಲ್ಲ. ನಾವು ತಿಳಿದೂ ತಿಳಿದೂ ಈ ದುರಾಚಾರಿಯನ್ನು ರಾಜನನ್ನಾಗಿ ಮಾಡಿದೆವು. ಆದರೆ ತಿಳಿವಳಿಕೆ ನೀಡಿದರೂ ಈತನು ನಮ್ಮ ಮಾತನ್ನು ಕೇಳದೇ ಹೋದರೆ, ನಾವು ಲೋಕದ ಧಿಕ್ಕಾರದಿಂದ ಈಗಾಗಲೇ ಸುಟ್ಟುಹೋಗಿರುವ ಇವನನ್ನು ನಮ್ಮ ತೇಜಸ್ಸಿನಿಂದ ಸುಟ್ಟುಹಾಕಿಬಿಡೋಣ." ಹೀಗೆ ವಿಚಾರಮಾಡಿದ ಮಹರ್ಷಿಗಳು ವೇನನ ಬಳಿಗೆ ಹೋಗಿ ತಮ್ಮ ಕೋಪವನ್ನು ಪ್ರಕಟಪಡಿಸದೇ ಅಡಗಿಸಿಕೊಂಡು ಆತನನ್ನು ಸವಿನುಡಿಗಳಿಂದ ಸಂತೈಸುತ್ತಾ ಹೀಗೆ ಹೇಳಿದರು : (ಶ್ಲೋಕ 9-13)

"ರಾಜಶ್ರೇಷ್ಠನೇ! ನಾವು ವಿಜ್ಞಾಪಿಸುವ ಈ ಮಾತುಗಳನ್ನು ಸಾವಧಾನಚಿತ್ತನಾಗಿ ಲಾಲಿಸು. ಇದರಿಂದ ನಿನ್ನ ಆಯುಸ್ಸು, ಸಂಪತ್ತು, ಬಲ ಮತ್ತು ಕೀರ್ತಿಗಳು ವೃದ್ಧಿಹೊಂದುವುವು. ಮನುಷ್ಯನು–ಮನಸ್ಸು, ಮಾತು, ದೇಹ ಮತ್ತು ಬುದ್ಧಿಗಳಿಂದ ಧರ್ಮವನ್ನು ಆಚರಿಸಿದ ಪಕ್ಷದಲ್ಲಿ ಆತನಿಗೆ ಸ್ವರ್ಗವೇ ಮುಂತಾದ ಶೋಕರಹಿತವಾದ ಲೋಕಗಳು ದೊರೆಯುವುವು. ಅದನ್ನೇ ಆತನು ನಿಷ್ಕಾಮಭಾವದಿಂದ ಆಚರಿಸಿದರೆ–ಆ ಧರ್ಮವು ಆತನನ್ನು ಮೋಕ್ಷಪದಕ್ಕೆ ಒಯ್ಯುವುದು. ಆದುದರಿಂದ ಎಲೈ ವೀರವರನೇ! ಪ್ರಜೆಗಳ ಕಲ್ಯಾಣರೂಪವಾದ ಈ ಧರ್ಮವು ನಿನ್ನ ಕಾರಣದಿಂದ ನಷ್ಟಹೊಂದಬಾರದು. ಧರ್ಮವು ನಷ್ಟವಾದದ್ದೇ ಆದರೆ ಅದರಿಂದ ರಾಜನೂ ಐಶ್ವರ್ಯದಿಂದ ಭ್ರಷ್ಟನಾಗುವನು. (ಶ್ಲೋಕ 14-16)

ರಾಜನ್ನಸಾಧ್ವಮಾತ್ಯೇಭ್ಯಶ್ಚೋರಾದಿಭ್ಯಃ ಪ್ರಜಾ ನೃಪಃ ।
ರಕ್ಷನ್ಯಥಾ ಬಲಿಂ ಗೃಹ್ಣನ್ನಿಹ ಪ್ರೇತ್ಯ ಚ ಮೋದತೇ ॥೧೭॥

ದುಷ್ಟರಾದ ಮಂತ್ರಿಗಳು ಮತ್ತು ಕಳ್ಳ-ಕಾಕರು ಮುಂತಾದವರ ದೆಸೆಯಿಂದ ತನ್ನ ಪ್ರಜೆಗಳನ್ನು ರಕ್ಷಿಸುತ್ತಾ ನ್ಯಾಯಕ್ಕೆ ಅನುಗುಣವಾದ

ರೀತಿಯಲ್ಲಿ ಕಂದಾಯ-ಕಪ್ಪ-ಕಾಣಿಕೆಗಳನ್ನು ಪ್ರಜೆಗಳಿಂದ ಸ್ವೀಕರಿಸುವ ರಾಜನು ಇಹಲೋಕ ಮತ್ತು ಪರಲೋಕಗಳೆರಡರಲ್ಲೂ ಸುಖವನ್ನು ಪಡೆಯುವನು.

ಎಲೈ ಮಹಾಭಾಗನೇ! ಯಾವ ರಾಜನ ರಾಜ್ಯದಲ್ಲಿ ಅಥವಾ ನಗರ ದಲ್ಲಿ ಜನರು ವರ್ಣಾಶ್ರಮಧರ್ಮಗಳನ್ನು ಪಾಲಿಸುತ್ತಾ ಸ್ವಧರ್ಮದ ರಕ್ಷಣೆಯ ಮೂಲಕ ಭಗವಂತನಾದ ಯಜ್ಞಪುರುಷನನ್ನು ಆರಾಧಿಸುತ್ತಾ ರೆಯೋ–ಅಂತಹ ತನ್ನ ಆಜ್ಞೆಯನ್ನು ಪಾಲಿಸುವ ರಾಜನ ವಿಷಯದಲ್ಲಿ ಶ್ರೀಭಗವಂತನು ಪ್ರಸನ್ನನಾಗುತ್ತಾನೆ. ಏಕೆಂದರೆ : ಆ ಶ್ರೀಭಗವಂತನೇ ಇಡೀ ವಿಶ್ವಕ್ಕೆ ಆತ್ಮಸ್ವರೂಪನಾಗಿ ಸಮಸ್ತಭೂತಗಳನ್ನೂ ಸಂರಕ್ಷಿಸುವವನು. ಆ ಶ್ರೀಭಗವಂತನು ಬ್ರಹ್ಮದೇವರೇ ಮುಂತಾದ ಜಗದೀಶ್ವರರಿಗೂ ಈಶ್ವರನಾಗಿದ್ದಾನೆ. ಆತನ ಪ್ರಸನ್ನತೆಯನ್ನು ಸಂಪಾದಿಸಿದರೆ ಯಾವ ವಸ್ತುವೂ ದುರ್ಲಭವಾಗುವುದಿಲ್ಲ. ಅದಕ್ಕೋಸ್ಕರವೇ ಇಂದ್ರನೇ ಮುಂತಾದ ಲೋಕ ಪಾಲಕರಿಂದೊಡಗೂಡಿದ ಸಮಸ್ತಲೋಕಗಳೂ ಆತನಿಗೆ ಅತ್ಯಂತ ಆದರದಿಂದ ಪೂಜೆ-ಉಪಹಾರಗಳನ್ನು ಸಮರ್ಪಿಸುತ್ತವೆ. ಎಲೈ ರಾಜನೇ! ಭಗವಂತನಾದ ಶ್ರೀಹರಿಯು ಸಮಸ್ತಲೋಕಗಳಿಗೂ, ಲೋಕಪಾಲಕರಿಗೂ ಮತ್ತು ಯಜ್ಞಗಳಿಗೂ ನಿಯಾಮಕನಾಗಿದ್ದಾನೆ. ವೇದತ್ರಯರೂಪನೂ, ದ್ರವ್ಯರೂಪನೂ ಮತ್ತು ತಪೋರೂಪನೂ ಆಗಿದ್ದಾನೆ. ಆದುದರಿಂದ ನಿನ್ನ ದೇಶದಲ್ಲಿ ವಾಸಮಾಡುವ ಜನರು ನಿನ್ನ ಏಳಿಗೆಗಾಗಿ ಹಲವಾರು ಬಗೆಯ ಯಜ್ಞಗಳ ಮೂಲಕ ಶ್ರೀಭಗವಂತನ ಆರಾಧನೆಯನ್ನು ಮಾಡಿದಾಗ ನೀನು ಅದಕ್ಕೆ ಅನುಗುಣವಾಗಿಯೇ ವರ್ತಿಸಬೇಕು. ನಿನ್ನ ರಾಜ್ಯದಲ್ಲಿ ಬ್ರಾಹ್ಮಣರು ಯಜ್ಞಗಳನ್ನು ಆಚರಿಸಿದರೆ–ಶ್ರೀಭಗವಂತನ ಅಂಶರೂಪವೇ ಆಗಿರುವ ದೇವತೆಗಳು ಅವರ ಆ ಪೂಜೆಯಿಂದ ಪ್ರಸನ್ನರಾಗಿ ನಿನ್ನ ಮನಸ್ಸಿಗೆ ಇಷ್ಟವಾದ ಫಲವನ್ನು ಅನುಗ್ರಹಿಸುವರು. ಆದುದರಿಂದ–ಎಲೈ ವೀರನೇ! ನೀನು ಯಜ್ಞವೇ ಮುಂತಾದ ಧರ್ಮಾನುಷ್ಠಾನಗಳನ್ನು ನಿಲ್ಲುವಂತೆ ಮಾಡಿ ದೇವತೆಗಳನ್ನು ತಿರಸ್ಕಾರಮಾಡುವುದು ಉಚಿತವಲ್ಲ!” (ಶ್ಲೋಕ 18-22)

ಆ ಮುನಿಶ್ರೇಷ್ಠರ ಮಾತಿಗೆ ವೇನನು ಹೇಳುತ್ತಾನೆ :

"ಮುನಿಜನರೇ! ಎಂತಹ ಮೂರ್ಖರು ನೀವು! ಅಧರ್ಮವನ್ನು ಧರ್ಮವೆಂಬ ಬುದ್ಧಿಯಿಂದ ನೋಡುತ್ತಿದ್ದೀರಲ್ಲಾ! ನಿಮಗೆ ಜೀವನವೃತ್ತಿಯನ್ನು ಕೊಟ್ಟು ಸಾಕ್ಷಾತ್ತಾಗಿ ಪತಿಯಾಗಿರುವ ನನ್ನನ್ನು ಬಿಟ್ಟು ಬೇರೆ ಯಾವನೋ ಜಾರನಾದ ಪತಿಯನ್ನು ಉಪಾಸನೆಮಾಡುತ್ತಿದ್ದೀರಲ್ಲಾ! ರಾಜನ ರೂಪದಲ್ಲಿರುವ ಈಶ್ವರನನ್ನು ಮೂರ್ಖತನದಿಂದಾಗಿ ಅನಾದರದಿಂದ ನೋಡುವ ಜನರಿಗೆ ಈ ಲೋಕದಲ್ಲೂ ಸುಖವಿಲ್ಲ ; ಪರಲೋಕದಲ್ಲೂ ಸುಖವು ದೊರೆಯುವುದಿಲ್ಲ. ನೀವು ಇಷ್ಟೆಲ್ಲಾ ಭಕ್ತಿಯನ್ನು ಯಾವನಲ್ಲಿ ತೋರಿಸುತ್ತಿದ್ದೀರೋ–ಆ ಯಜ್ಞಪುರುಷನೆಂಬುವನು ಎಲ್ಲಿದ್ದಾನೆ? ಹೇಳಿರಿ. ಕೈಹಿಡಿದ ಗಂಡನಲ್ಲಿ ಪ್ರೀತಿಯನ್ನು ತೋರದೇ ಮಿಂಡನಲ್ಲಿ ಆಸಕ್ತನಾಗಿರುವ ದುಷ್ಟಹೆಂಗಸರಂತೆ ಮಾತನಾಡುತ್ತಿದ್ದೀರಲ್ಲಾ! ವಿಷ್ಣು-ಬ್ರಹ್ಮ-ಶಿವ ಇಂದ್ರ-ವಾಯು-ಯಮ-ಸೂರ್ಯ-ಪರ್ಜನ್ಯ-ಕುಬೇರ-ಚಂದ್ರ-ಪೃಥ್ವೀ ಮತ್ತು ವರುಣದೇವರಾಗಲೀ ಅಥವಾ ವರವನ್ನೂ, ಶಾಪವನ್ನೂ ಕೊಡುವ ಸಾಮರ್ಥ್ಯವುಳ್ಳ ಇತರ ದೇವತೆಗಳಾಗಲೀ ಯಾರುಂಟೋ–ಅವರೆಲ್ಲರೂ ರಾಜನ ಶರೀರದಲ್ಲಿ ವಾಸಮಾಡುತ್ತಿರುವುದರಿಂದ ರಾಜನೇ ಸರ್ವದೇವಮಯನು. ಎಲ್ಲ ದೇವತೆಗಳೂ ಆತನ ಅಂಶಗಳು ಮಾತ್ರ ಆಗಿದ್ದಾರೆ. ಆದುದರಿಂದ, ಎಲೈ ಬ್ರಾಹ್ಮಣರೇ! ನೀವು ಮಾತ್ಸರ್ಯವನ್ನು ಬಿಟ್ಟು ನಿಮ್ಮ ಎಲ್ಲ ಕರ್ಮಗಳ ಮೂಲಕವೂ ನನ್ನನ್ನೇ ಪೂಜಿಸಿರಿ. ನನಗೇ ಕಪ್ಪ-ಕಾಣಿಕೆಗಳನ್ನು ಸಮರ್ಪಿಸಿರಿ. ಅಗ್ರಪೂಜೆಯನ್ನು ಸೇವಿಸುವ ಯೋಗ್ಯತೆ ಮತ್ತು ಅಧಿಕಾರ ನನಗಲ್ಲದೇ ಬೇರೆ ಯಾರಿಗೆ ತಾನೇ ಉಂಟು?" (ಶ್ಲೋಕ 23-28)

ಮೈತ್ರೇಯರು ವಿದುರನಿಗೆ ಹೇಳುತ್ತಾರೆ :

ಎಲೈ ಮಹಾತ್ಮನೇ! ಕೇಳು. ಈ ರೀತಿಯಲ್ಲಿ ವಿರುದ್ಧವಾದ ಬುದ್ಧಿಯಿಂದ ಕೂಡಿ, ಕಡುಪಾಪಿಯಾಗಿ, ದುರ್ಮಾರ್ಗವನ್ನು ಹಿಡಿದಿದ್ದ ವೇನನಿಗೆ ಪುಣ್ಯವು ಕ್ಷೀಣಿಸಿದ್ದರಿಂದ ಆತನು ಮುನಿಗಳ ವಿನಯಪೂರ್ವಕವಾದ ವಿಜ್ಞಾಪನೆಗೂ ಕಿವಿಗೊಡಲಿಲ್ಲ. ದುರಹಂಕಾರದಿಂದ ತನ್ನನ್ನೇ ಅತ್ಯಂತ

ಬುದ್ಧಿಶಾಲಿಯೆಂದು ತಿಳಿದುಕೊಂಡು ವೇನನು ಹೀಗೆ ಮುನಿಗಳಿಗೆ ಅಪಮಾನಮಾಡಿದನು. ತಮ್ಮ ಬೇಡಿಕೆಯು ವ್ಯರ್ಥವಾದುದನ್ನು ಕಂಡು ಅವರಿಗೆ ಮಿತಿಮೀರಿದ ಕೋಪವುಂಟಾಯಿತು. "ಸ್ವಭಾವದಿಂದಲೇ ಕಟುಕನಾಗಿರುವ ಈ ಪಾಪಿಯನ್ನು ಸಾಯಿಸಿಬಿಡಬೇಕು. ಕೊಂದುಹಾಕಬೇಕು. ಈತನೇನಾದರೂ ಬದುಕಿದ್ದರೆ ಕೆಲವೇ ದಿನಗಳಲ್ಲಿ ನಿಜವಾಗಿಯೂ ಜಗತ್ತನ್ನೇ ಸುಟ್ಟು ಬೂದಿಮಾಡಿಬಿಡುವನು. ನಾಚಿಕೆಯಿಲ್ಲದೇ ಯಜ್ಞಪತಿ ಯಾದ ಸಾಕ್ಷಾತ್ ಮಹಾವಿಷ್ಣುವನ್ನೇ ನಿಂದನೆಮಾಡುತ್ತಿರುವ ಈ ದುರಾಚಾರಿಯು ರಾಜಸಿಂಹಾಸನಕ್ಕೆ ನಿಜವಾಗಿಯೂ ಯೋಗ್ಯನಾಗಿಲ್ಲ. ಯಾವನ ಅನುಗ್ರಹದಿಂದ ಇಷ್ಟೆಲ್ಲಾ ಐಶ್ವರ್ಯವು ದೊರೆತಿದೆಯೋ–ಅಂತಹ ಶ್ರೀಹರಿಯನ್ನು, ಅಶುಭಸ್ವಭಾವದವನಾದ ಈ ವೇನನನ್ನು ಬಿಟ್ಟು ಬೇರೆ ಯಾರು ತಾನೇ ನಿಂದಿಸಿಯಾರು?" (ಶ್ಲೋಕ 29-33)

ತಾವು ಅಡಗಿಸಿಕೊಂಡಿದ್ದ ಕೋಪವನ್ನು ಹೀಗೆ ಪ್ರಕಟಪಡಿಸಿದ ಆ ಮಹರ್ಷಿಗಳು ಆತನನ್ನು ಸಂಹರಿಸಿಬಿಡಲು ನಿಶ್ಚಯಿಸಿದನು. ಶ್ರೀಭಗವಂತನನ್ನು ನಿಂದೆಮಾಡಿದ್ದರಿಂದ ಆತನು ಆಗಲೇ ಮೃತ್ಯುವಾಗಿದ್ದನು. ಆದುದರಿಂದ ಅವರು ತಮ್ಮ ಹುಂಕಾರಮಾತ್ರದಿಂದಲೇ ಆತನ ಕತೆಯನ್ನು ಮುಗಿಸಿಬಿಟ್ಟರು. ಮುನಿಗಳು ಹೀಗೆ ಆತನನ್ನು ಸಂಹರಿಸಿ ತಮ್ಮ-ತಮ್ಮ ಆಶ್ರಮಗಳಿಗೆ ಹೊರಟುಹೋಗಲಾಗಿ, ದುಃಖಾಕ್ರಾಂತಳಾದ ಸುನೀಥೆಯು ಮಾತ್ರ ಮಂತ್ರವೇ ಮುಂತಾದುವುಗಳ ಬಲದಿಂದ ತನ್ನ ಪುತ್ರನ ಕಳೇಬರ ವನ್ನು ಕೆಡದಂತೆ ರಕ್ಷಿಸುತ್ತಿದ್ದಳು. ಅತ್ತ ಕಡೆ ಆ ಮಹರ್ಷಿಗಳು ಸರಸ್ವತೀ ನದಿಯ ಪವಿತ್ರವಾದ ತೀರ್ಥದಲ್ಲಿ ಸ್ನಾನಮಾಡಿ ಅಗ್ನಿಹೋತ್ರವನ್ನು ಮುಗಿಸಿ ಕೊಂಡು ನದೀತೀರದಲ್ಲಿ ಕುಳಿತು ಶ್ರೀಭಗವಂತನ ಕಥೆಗಳನ್ನು ಕೀರ್ತನೆ ಮಾಡುತ್ತಿದ್ದಾಗ ಲೋಕಗಳಲ್ಲೆಲ್ಲಾ ಆತಂಕವನ್ನು ಹರಡುವ ಉಪದ್ರವಗಳು ಆಗುತ್ತಿರುವುದು ಅವರ ಗಮನಕ್ಕೆ ಬಂದಿತು. 'ಅಯ್ಯೋ! ಈಗ ರಕ್ಷಣೆ ಮಾಡುವವರು ಯಾರೂ ಇಲ್ಲವಾದುದರಿಂದ ಕಳ್ಳ-ಕಾಕರು ಮುಂತಾದವರಿಂದ ಇಡೀ ಭೂಮಿಗೆ ಕೇಡು ಉಂಟಾದರೆ ಏನು ಗತಿ?'–ಎಂದು ಅವರು ವಿಚಾರಮಾಡುತ್ತಿರುವಾಗಲೇ ಎಲ್ಲ ದಿಕ್ಕುಗಳಲ್ಲಿಯೂ ದಾಳಿಮಾಡಲು ಬರುತ್ತಿದ್ದ ಕಳ್ಳ-ಕಾಕರ ಮತ್ತು ದರೋಡೆಗಾರರ ಕಡೆಯಿಂದ ಧೂಳಿನ

ರಾಶಿಯು ಏಳುತ್ತಿದ್ದುದು ಅವರಿಗೆ ಕಾಣಿಸಿತು. 'ಮಹಾರಾಜನಾದ ವೇನನು ಮೃತನಾದುದರಿಂದ ದೇಶದಲ್ಲಿ ಅರಾಜಕತೆಯು ಹರಡಿದೆ. ರಾಜ್ಯವು ಶಕ್ತಿಹೀನವಾಗಿಬಿಟ್ಟಿದೆ. ಕಳ್ಳ-ಕಾಕರ ಸಂಖ್ಯೆ ಹೆಚ್ಚಿದೆ. ಹಣವನ್ನು ಲೂಟಿ ಮಾಡುವ ಮತ್ತು ಒಬ್ಬರನ್ನೊಬ್ಬರು ತಿಂದುಹಾಕುವ ದರೋಡೆಗಾರರಿಂದಲೂ, ಕೊಲೆಗಡುಕರಿಂದಲೂ ಈ ಹಾವಳಿಯು ಉಂಟಾಗಿದೆ'–ಎಂಬುದು ಅವರಿಗೆ ತಿಳಿಯಿತು. ತಮ್ಮ ತೇಜಸ್ಸಿನಿಂದಾಗಲೀ–ತಪೋಬಲದಿಂದಾಗಲೀ ಜನರ ಆ ಕುತ್ಸಿತವಾದ ಪ್ರವೃತ್ತಿಯನ್ನು ತಡೆಗಟ್ಟುವ ಸಾಮರ್ಥ್ಯವು ಮಹರ್ಷಿಗಳಿಗೆ ಇದ್ದಿತು. ಆದರೂ ಹಾಗೆ ಮಾಡುವುದರಲ್ಲಿ ದೋಷವಿದ್ದುದರಿಂದ ತಮ್ಮ 'ತಪೋಧನವನ್ನು ಅದಕ್ಕಾಗಿ ವೆಚ್ಚಮಾಡಬಾರದು'–ಎಂದು ತಿಳಿದು ಅವರು ಅದನ್ನು ನಿವಾರಣೆಮಾಡಲಿಲ್ಲ. ಮತ್ತೆ ಅವರು ಹೀಗೆ ಯೋಚಿಸಿದರು : "ನಮ್ಮ ತಪೋಬಲವನ್ನು ಇದಕ್ಕಾಗಿ ವ್ಯಯ ಮಾಡುವುದು ಸರಿಯಲ್ಲ. ಆದರೂ ನಾವು ಈಗ ಉಪೇಕ್ಷೆಮಾಡಬಾರದು. ಏಕೆಂದರೆ : (ಶ್ಲೋಕ 34-40)

ಬ್ರಾಹ್ಮಣಃ ಸಮದೃಕ್ಶಾನ್ತೋ ದೀನಾನಾಂ ಸಮುಪೇಕ್ಷಕಃ ।
ಸ್ರವತೇ ಬ್ರಹ್ಮ ತಸ್ಯಾಪಿ ಭಿನ್ನಭಾಣ್ಡಾತ್ಪಯೋ ಯಥಾ ॥೪೧॥

ಬ್ರಾಹ್ಮಣನು ಸಮದರ್ಶಿಯಾಗಿ ಶಾಂತಾತ್ಮನಾಗಿದ್ದರೂ ದೀನರ ವಿಷಯದಲ್ಲಿ ಉದಾಸೀನನಾಗಿರಬಾರದು. ಹಾಗೆ ಅವರನ್ನು ಉಪೇಕ್ಷೆ ಮಾಡಿದ್ದೇ ಆದರೆ ಒಡೆದುಹೋದ ಮಡಕೆಯಿಂದ ನೀರು ಸೋರಿಹೋಗುವಂತೆ–ಆ ಬ್ರಾಹ್ಮಣನ ತಪಸ್ಸೂ ನಷ್ಟವಾಗಿಬಿಡುವುದು.

ಇದಲ್ಲದೇ ರಾಜರ್ಷಿಯಾದ ಅಂಗಮಹಾರಾಜನ ವಂಶಪರಂಪರೆಯು ನಿಂತುಹೋಗಲು ಬಿಡಬಾರದು. ಅದು ಅತಿಪವಿತ್ರವಾದ ವಂಶ. ಅನೇಕ ಮಂದಿ ಅಮೋಘವಾದ ಪರಾಕ್ರಮವುಳ್ಳವರೂ–ಭಗವದ್ಭಕ್ತರೂ ಆದ ರಾಜರು ಅದರಲ್ಲಿ ಜನಿಸಿದ್ದಾರೆ." ಹೀಗೆ ನಿಶ್ಚಯಮಾಡಿದ ಆ ಮುನಿಗಳು ಮೃತನಾಗಿದ್ದ ವೇನರಾಜನ ಶರೀರವನ್ನು ತರಿಸಿ ಅವನ ತೊಡೆಯನ್ನು ಬಲವಾಗಿ ಕಡೆದರು. ಆಗ ಅದರಿಂದ ಕುಬ್ಜವಾದ ಆಕಾರವನ್ನು ಹೊಂದಿದ್ದ ಒಬ್ಬ ಮನುಷ್ಯನು ಆವಿರ್ಭವಿಸಿದನು. ಆತನು ಕಾಗೆಯಂತೆ ಕಪ್ಪಾಗಿದ್ದನು.

ಆತನ ಎಲ್ಲ ಅವಯವಗಳೂ ಮತ್ತು ವಿಶೇಷವಾಗಿ ತೋಳುಗಳೂ ತುಂಬಾ ಮೋಟಾಗಿದ್ದುವು. ಗಲ್ಲವು ಮಾತ್ರ ಉದ್ದವಾಗಿದ್ದಿತು. ಅತಿ ಚಿಕ್ಕ ಕಾಲುಗಳು, ಹಳ್ಳವಾದ ಮೂಗುಗಳು, ಕೆಂಪು ಕಣ್ಣುಗಳು ಮತ್ತು ತಾಮ್ರದಂತೆ ಕಡುಕೆಂಪಾದ ತಲೆಕೂದಲುಗಳಿಂದ ಕೂಡಿದ್ದ ಆ ವಿಕೃತಾಕಾರದ ಮನುಷ್ಯನು ತುಂಬಾ ದೈನ್ಯದಿಂದಲೂ, ವಿನಯದಿಂದಲೂ ಮಹರ್ಷಿಗಳನ್ನು 'ನನಗೆ ಏನಪ್ಪಣೆ?'–ಎಂದು ಕೇಳಿಕೊಳ್ಳಲು ಅವರು 'ನಿಷೀದ' 'ಕುಳಿತುಕೋ'–ಎಂದು ಆತನಿಗೆ ಆಜ್ಞಾಪಿಸಿದರು. ಅದರಿಂದ ಆತನಿಗೆ 'ನಿಷಾದ' ಎಂದು ಹೆಸರಾಯಿತು. ಆತನು ಹುಟ್ಟುವಾಗಲೇ ವೇನನ ಭಯಂಕರವಾದ ಪಾಪಗಳನ್ನು ಹೊತ್ತು ಬಂದಿದ್ದರಿಂದ ಆತನ ವಂಶದಲ್ಲಿ ಹುಟ್ಟಿದವರೂ ಹಿಂಸೆ, ಲೂಟಿ, ದರೋಡೆಗಳೇ–ಮುಂತಾದ ಪಾಪಕರ್ಮಗಳಲ್ಲಿ ನಿರತರಾದರು. ಬೆಟ್ಟಗಾಡುಗಳು ಅವರ ವಾಸಭೂಮಿಗಳಾದುವು. (ಶ್ಲೋಕ 42-46)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಚತುರ್ಥಸ್ಕಂಧದ ೧೪ನೆಯ ಅಧ್ಯಾಯವು ಮುಗಿಯಿತು.

ಚತುರ್ಥಸ್ಕಂಧ ೧೫ನೆಯ ಅಧ್ಯಾಯ

ಪೃಥುಚಕ್ರವರ್ತಿಯ ಜನನ ಮತ್ತು ಪಟ್ಟಾಭಿಷೇಕಮಹೋತ್ಸವ

ಮೈತ್ರೇಯರು ಹೇಳುತ್ತಾರೆ :

ಅಥ ತಸ್ಯ ಪುನರ್ವಿಪ್ರೈರಪುತ್ರಸ್ಯ ಮಹೀಪತೇಃ ।
ಬಾಹುಭ್ಯಾಂ ಮಥ್ಯಮಾನಾಭ್ಯಾಂ ಮಿಥುನಂ ಸಮಪದ್ಯತ ॥೧॥

ಅನಂತರ ಆ ಮಹರ್ಷಿಗಳು ಪುತ್ರಹೀನನಾಗಿದ್ದ ಆ ವೇನರಾಜನ ತೋಳುಗಳನ್ನು ಕಡೆದರು. ಆಗ ಅವುಗಳಿಂದ ಒಂದು ಗಂಡುಮಗು ಒಂದು ಹೆಣ್ಣುಮಗುವಿನ ಜೋಡಿಯು ಜನಿಸಿತು.

ಆ ಅವಳೀಸಂತಾನವನ್ನು ನೋಡಿ ಬ್ರಹ್ಮವಾದಿಗಳಾದ ಮಹರ್ಷಿಗಳು 'ಇದು ಭಗವಂತನ ಕಲೆ, ಅಂಶಾವತಾರ'–ಎಂದು ತಿಳಿದು ಅತ್ಯಂತ ಸಂತುಷ್ಟರಾಗಿ ಹೀಗೆಂದರು :

ಏಷ ವಿಷ್ಣೋರ್ಭಗವತಃ ಕಲಾ ಭುವನಪಾಲಿನೀ ।
ಇಯಂ ಚ ಲಕ್ಷ್ಮ್ಯಾಃ ಸಮ್ಭೂತಿಃ ಪುರುಷಸ್ಯಾನಪಾಯಿನೀ ॥೩॥

ಅಯಂ ತು ಪ್ರಥಮೋ ರಾಜ್ಞಾಂ ಪುಮಾನ್ಪ್ರಥಯಿತಾ ಯಶಃ ।
ಪೃಥುರ್ನಾಮ ಮಹಾರಾಜೋ ಭವಿಷ್ಯತಿ ಪೃಥುಶ್ರವಾಃ ॥೪॥

ಇಯಂ ಚ ಸುದತೀ ದೇವೀ ಗುಣಭೂಷಣಭೂಷಣಾ ।
ಅರ್ಚಿರ್ನಾಮ ವರಾರೋಹಾ ಪೃಥುಮೇವಾವರುನ್ಧತೀ ॥೫॥

ಏಷ ಸಾಕ್ಷಾದ್ಧರೇರಂಶೋ ಜಾತೋ ಲೋಕರಿರಕ್ಷಯಾ ।
ಇಯಂ ಚ ತತ್ಪರಾ ಹಿ ಶ್ರೀರನುಜಜ್ಞೇಽನಪಾಯಿನೀ ॥೬॥

"ಈ ಗಂಡುಮಗುವು ಭಗವಂತನಾದ ಶ್ರೀಮಹಾವಿಷ್ಣುವಿನ ಕಲೆಯಿಂದ (ಅಂಶದಿಂದ) ಪ್ರಕಟವಾಗಿದೆ. ಹಾಗೆಯೇ ಈ ಹೆಣ್ಣುಮಗುವು ಆತನನ್ನು ಎಂದಿಗೂ ಅಗಲದೇ ಇರುವ ಪತ್ನಿಯಾದ ಶ್ರೀಲಕ್ಷ್ಮೀದೇವಿಯ ಅಂಶಾವತಾರವಾಗಿದೆ. ಈ ಪುರುಷಶಿಶುವು ರಾಜರಿಗೆಲ್ಲಾ ಮೊದಲಿಗನಾಗಿ ತನ್ನ ಸುಕೀರ್ತಿಯನ್ನು ಎಲ್ಲೆಲ್ಲಿಯೂ ಪ್ರಥನ (ವಿಸ್ತಾರ)ಪಡಿಸುವುದರಿಂದ 'ಪೃಥು' ಎಂಬ ಸುನಾಮಧೇಯದಿಂದ ಅತ್ಯಂತ ಪ್ರಖ್ಯಾತನಾಗುವನು. ಅಂತೆಯೇ ಸುಂದರವಾದ ಹಲ್ಲುಗಳಿಂದ ಕೂಡಿ, ಸದ್ಗುಣಗಳಿಂದ ಭೂಷಿತೆ ಯಾಗಿ, ದಿವ್ಯಪ್ರಕಾಶದಿಂದ ಬೆಳಗುತ್ತಿರುವ ಈ ಹೆಣ್ಣುಮಗುವು 'ಅರ್ಚಿ' (ಪ್ರಕಾಶ) ಎಂಬ ಹೆಸರಿನಿಂದ ಪ್ರಸಿದ್ಧಳಾಗಿ ಈ ಪೃಥುಚಕ್ರವರ್ತಿಯನ್ನೇ ಅನುಸರಿಸುತ್ತಾ ಈತನ ಪಟ್ಟಮಹಿಷಿಯಾಗುವಳು. ಪೃಥುವಿನ ರೂಪದಲ್ಲಿ ಸಾಕ್ಷಾತ್ ಶ್ರೀಮನ್ನಾರಾಯಣನ ಅಂಶವೇ ಲೋಕರಕ್ಷಣೆಗಾಗಿ ಜನಿಸಿದೆ. ಹಾಗೆಯೇ ಅರ್ಚಿಯು ರೂಪದಲ್ಲಿ ನಿರಂತರವಾಗಿ ಶ್ರೀಹರಿಯ ಸೇವೆಯಲ್ಲಿ ಸದಾ ನಿರತಳಾಗಿ, ಆತನ ನಿತ್ಯಸಹಚರಿಯಾಗಿರುವ ಶ್ರೀಲಕ್ಷ್ಮೀದೇವಿಯೇ ಆವಿರ್ಭವಿಸಿದ್ದಾಳೆ."

ಮೈತ್ರೇಯರು ಪೃಥುಮಹಾರಾಜನ ಕಥೆಯನ್ನು ಮುಂದುವರಿಸುತ್ತಾ ಹೇಳುತ್ತಾರೆ :

"ಎಲೈ ವಿದುರನೇ! ಆಗ ಬ್ರಾಹ್ಮಣಶ್ರೇಷ್ಠರು ಪೃಥುವನ್ನು ಸ್ತುತಿಸ ತೊಡಗಿದರು. ಗಂಧರ್ವಶ್ರೇಷ್ಠರು ಆತನ ಗುಣಗಾನಮಾಡಿದರು. ಸಿದ್ಧರು

ಹೂಮಳೆಗರೆದರು. ಅಪ್ಸರೆಯರು ಆನಂದದಿಂದ ನರ್ತನಮಾಡಿದರು. ಆಕಾಶದಲ್ಲಿ ಶಂಖ, ತೂರ್ಯ, ಮೃದಂಗ ಮತ್ತು ದುಂದುಭಿವಾದ್ಯಗಳು ಮೊಳಗಿದುವು. ಸಮಸ್ತದೇವತೆಗಳೂ, ಋಷಿಗಳೂ ಮತ್ತು ಪಿತೃದೇವತೆಗಳೂ ತಮ್ಮ-ತಮ್ಮ ಲೋಕಗಳಿಂದ ಅಲ್ಲಿಗೆ ಆಗಮಿಸಿದರು. ಜಗತ್ತಿಗೆ ಗುರುವಾದ ಬ್ರಹ್ಮದೇವರೂ ದೇವತೆಗಳಿಂದಲೂ–ದೇವಾಧಿಪತಿಗಳಿಂದಲೂ ಒಡಗೂಡಿ ಅಲ್ಲಿಗೆ ದಯಮಾಡಿಸಿದರು. (ಶ್ಲೋಕ 7-9)

ವೈನ್ಯಸ್ಯ ದಕ್ಷಿಣೇ ಹಸ್ತೇ ದೃಷ್ಟ್ವಾ ಚಿಹ್ನಂ ಗದಾಭೃತಃ ।
ಪಾದಯೋರರವಿನ್ದಂ ಚ ತಂ ವೈ ಮೇನೇ ಹರೇಃ ಕಲಾಮ್ ।
ಯಸ್ಯಾಪ್ರತಿಹತಂ ಚಕ್ರಮಂಶಃ ಸ ಪರಮೇಷ್ಠಿನಃ ॥೧೦॥

ಅವರು ಆ ವೇನಪುತ್ರನ ಬಲಗೈಯಲ್ಲಿ ಭಗವಂತನಾದ ವಿಷ್ಣುವಿನ ಕೈಗುರುತುಗಳನ್ನೂ ಮತ್ತು ಕಾಲುಗಳಲ್ಲಿ ಕಮಲದ ಗುರುತನ್ನೂ ಗಮನಿಸಿ ಆತನು ಶ್ರೀಹರಿಯ ಅಂಶಾವತಾರವೆಂದು ತಿಳಿದರು. ಯಾವಾತನ ಕೈಯಲ್ಲಿ ಇತರ ರೇಖೆಗಳ ಮಿಶ್ರಣವಿಲ್ಲದೇ ಚಕ್ರದ ಚಿಹ್ನೆಯು ಬೆಳಗುತ್ತದೆಯೋ– ಆತನು ಭಗವಂತನ ಅಂಶವೇ ಆಗಿರುತ್ತಾನಲ್ಲವೇ!

ಬ್ರಹ್ಮವಾದಿಗಳಾದ ಬ್ರಾಹ್ಮಣಶ್ರೇಷ್ಠರು ಆ ಶ್ರೀಸಂಪನ್ನನಾದ ಪೃಥುವಿಗೆ ಪಟ್ಟಾಭಿಷೇಕಮಾಡಬೇಕೆಂದು ಪ್ರಯತ್ನಿಸಲು–ಎಲ್ಲ ಜನರೂ ಅದಕ್ಕಾಗಿ ಸಾಮಗ್ರಿಗಳನ್ನು ಸಂಗ್ರಹಿಸತೊಡಗಿದರು. ಆಗ ನದಿಗಳು, ಸಮುದ್ರಗಳು, ಪರ್ವತಗಳು, ಸರ್ಪಗಳು, ಗೋವುಗಳು, ಪಕ್ಷಿಗಳು ಮತ್ತು ಮೃಗಗಳು, ಸ್ವರ್ಗಲೋಕ-ಭೂಲೋಕಗಳು ಮತ್ತು ಇತರ ಎಲ್ಲ ಪ್ರಾಣಿಗಳೂ ಆ ರಾಜನಿಗೆ ಕಾಣಿಕೆಗಳನ್ನು ಸಮರ್ಪಣೆಮಾಡಿದುವು. ಸುಂದರವಾದ ಉಡುಗೆ-ತೊಡುಗೆಗಳಿಂದ ಅಲಂಕೃತನಾಗಿದ್ದ ಪೃಥುಮಹಾರಾಜನಿಗೆ ವಿಧಿ ಪೂರ್ವಕವಾಗಿ ಪಟ್ಟಾಭಿಷೇಕಮಹೋತ್ಸವವು ಸಂಪನ್ನವಾಯಿತು. ಆಗ ದಿವ್ಯ ವಸ್ತ್ರಾಭರಣಗಳಿಂದ ಅಲಂಕೃತೆಯಾಗಿದ್ದ ಮಹಾರಾಣಿ ಅರ್ಚಿ ಯಿಂದೊಡಗೂಡಿದ ಪೃಥುವು ಮತ್ತೊಬ್ಬ ಅಗ್ನಿದೇವನಂತೆ ತೊಳ-ತೊಳಗಿ ಬೆಳಗುತ್ತಿದ್ದನು. (ಶ್ಲೋಕ 11-13)

ಆಗ ಕುಬೇರದೇವನು ಆತನಿಗೆ ಅತಿಸುಂದರವಾದ ಸ್ವರ್ಣಸಿಂಹಾಸನ

ವನ್ನು ಸಮರ್ಪಿಸಿದನು. ವರುಣದೇವನು ತಂಪಿನ ನೀರಿನ ಹನಿಗಳನ್ನು ತೊಟ್ಟಿಕ್ಕುತ್ತಾ ಚಂದ್ರಮಂಡಲದಂತೆ ಬೆಳ್ಳಗೆ ಬೆಳಗುತ್ತಿದ್ದ ಬೆಳ್ಗೊಡೆಯನ್ನು ಅರ್ಪಣೆಮಾಡಿದನು. ವಾಯುದೇವನು ಎರಡು ದಿವ್ಯವಾದ ಚಾಮರಗಳನ್ನು ಅರ್ಪಿಸಿದನು. ಧರ್ಮದೇವತೆಯು ಕೀರ್ತಿಮಯಿಯಾದ ಮಾಲೆಯನ್ನೂ, ಚಂದ್ರದೇವನು ಉತ್ಕೃಷ್ಟವಾದ ಕಿರೀಟವನ್ನೂ, ಯಮದೇವನು ದುಷ್ಟರನ್ನು ದಮನಮಾಡುವ ದಂಡವನ್ನೂ, ಬ್ರಹ್ಮದೇವರು ವೇದಮಯವಾದ ಕವಚ ವನ್ನೂ, ಸರಸ್ವತೀದೇವಿಯು ಸುಂದರವಾದ ಹಾರವನ್ನೂ, ಭಗವಂತನಾದ ಮಹಾವಿಷ್ಣುವು ಸುದರ್ಶನಚಕ್ರವನ್ನೂ, ಆತನ ಮನದನ್ನೆಯಾದ ಶ್ರೀದೇವಿಯು ಶಾಶ್ವತವಾದ ಐಶ್ವರ್ಯವನ್ನೂ ಬಹುಮಾನವಾಗಿ ಕೊಟ್ಟರು. ರುದ್ರದೇವರು ಹತ್ತು ಚಂದ್ರಾಕಾರದ ಚಿಹ್ನೆಗಳಿಂದ ಬೆಳಗುತ್ತಿದ್ದ ಒರೆಸಹಿತ ವಾದ ಖಡ್ಗವೊಂದನ್ನೂ, ಅಂಬಿಕಾದೇವಿಯು ನೂರು ಚಂದ್ರಾಕಾರವಾದ ಚಿಹ್ನೆಗಳಿಂದ ಶೋಭಿಸುತ್ತಿದ್ದ ಗುರಾಣಿಯನ್ನೂ, ಚಂದ್ರನು ಅಮೃತಮಯ ವಾದ ಅಶ್ವಗಳನ್ನೂ, ವಿಶ್ವಕರ್ಮನು ಸುಂದರವಾದ ರಥವನ್ನೂ, ಅಗ್ನಿ ದೇವನು ಆಡು ಮತ್ತು ಎತ್ತುಗಳ ಕೊಂಬುಗಳಿಂದ ರಚಿತವಾದ ದೃಢವಾದ ಧನುಸ್ಸುಗಳನ್ನೂ ಸೂರ್ಯದೇವನು ತೇಜೋಮಯವಾದ ಬಾಣಗಳನ್ನೂ, ಭೂದೇವಿಯು ಇಷ್ಟಬಂದ ಜಾಗಕ್ಕೆ ಕೊಂಡೊಯ್ಯುವ ಯೋಗಶಕ್ತಿಯಿಂದ ಕೂಡಿದ ಪಾದುಕೆಗಳನ್ನೂ, ಸ್ವರ್ಗಾಭಿಮಾನಿಯಾದ ದ್ಯುದೇವನು ಎಂದೆಂದಿಗೂ ಬಾಡದೇ ಹಸನಾಗಿರುವ ಪುಷ್ಪಗಳ ಮಾಲೆಯನ್ನೂ, ಆಕಾಶ ವಿಹಾರಿಗಳಾದ ಸಿದ್ಧ-ಗಂಧರ್ವಾದಿಗಳು ನೃತ್ಯ-ಗಾನ ಮತ್ತು ವಾದ್ಯವಾದನ ಮಾಡುವ ಕಲೆಯನ್ನೂ ಮತ್ತು ಇಷ್ಟಬಂದಾಗ ಅಂತರ್ಧಾನಹೊಂದುವ ಶಕ್ತಿಗಳನ್ನೂ ಬಳುವಳಿಯಾಗಿ ಕೊಟ್ಟರು. ಋಷಿಗಳು ಅಮೋಘವಾದ ಆಶೀರ್ವಾದಗಳನ್ನು ಅನುಗ್ರಹಿಸಿದರು. ಸಮುದ್ರರಾಜನು ತನ್ನಲ್ಲಿ ದೊರೆತ ದಿವ್ಯಶಂಖವನ್ನು ಸಮರ್ಪಿಸಿದನು. ಸಪ್ತಸಾಗರಗಳೂ, ಪರ್ವತಗಳೂ ಮತ್ತು ನದಿಗಳೂ ಆತನ ರಥಕ್ಕೆ ಅಡೆತಡೆಯಿಲ್ಲದೇ ತಮ್ಮಲ್ಲಿ ಸಂಚರಿಸುವ ಶಕ್ತಿಯನ್ನು ಕಾಣಿಕೆಯನ್ನಾಗಿ ಕೊಟ್ಟುವು. ಇದಾದನಂತರ ಸೂತರು, ವಂದಿಗಳು ಮತ್ತು ಮಾಗಧರೆಂಬ ಹೊಗಳುಭಟ್ಟರು ಆತನಿಗೆ ಸ್ತೋತ್ರಸೇವೆ ಯನ್ನು ಸಮರ್ಪಿಸಲು ಮುಂದೆ ಬಂದರು. ಆಗ ಆ ಪರಮಪ್ರತಾಪಶಾಲಿ

ಯಾದ ಪೃಥುಚಕ್ರವರ್ತಿಯು ಅವರ ಆಶಯವನ್ನು ಅರಿತು ನಗುತ್ತಾ ಮೇಘ ದಂತೆ ಗಂಭೀರವಾದ ಧ್ವನಿಯುಳ್ಳ ಮಾತಿನಿಂದ ಅವರಿಗೆ ಹೀಗೆಂದನು :

(ಶ್ಲೋಕ 14-21)

ಭೋಃ ಸೂತ ಹೇ ಮಾಗಧ ಸೌಮ್ಯ ವನ್ದಿ-
ಲ್ಲೋಕೇಽಧುನಾಸ್ಪಷ್ಟಗುಣಸ್ಯ ಮೇ ಸ್ಯಾತ್ ।
ಕಿಮಾಶ್ರಯೋ ಮೇ ಸ್ತವ ಏಷ ಯೋಜ್ಯತಾಂ
ಮಾ ಮಯ್ಯಭೂವನ್ವಿತಥಾ ಗಿರೋ ವಃ ॥೨೨॥

“ಸೌಮ್ಯರಾದ ಸೂತ-ಮಾಗಧ-ವಂದಿಗಳೇ! ನನ್ನ ಯಾವ ಗುಣವೂ ಇಲ್ಲಿಯವರೆಗೂ ಲೋಕದಲ್ಲಿ ಪ್ರಕಟವಾಗಿಲ್ಲ. ಹೀಗಿರುವಾಗ ನನ್ನ ಯಾವ ಗುಣವನ್ನು ಕುರಿತು ಸ್ತೋತ್ರಮಾಡುವಿರಿ? ನಿಮ್ಮ ಮಾತುಗಳು ವ್ಯರ್ಥ ವಾಗಬಾರದು. ನನ್ನ ಬಗೆಗೆ ಸುಳ್ಳುಹೊಗಳಿಕೆಯಾಗಬಾರದು. ಆದ್ದರಿಂದ ಲೋಕದಲ್ಲಿ ಪ್ರಸಿದ್ಧವಾದ ಗುಣಗಳುಳ್ಳ ಬೇರಾರನ್ನಾದರೂ ಹೊಗಳಿರಿ.

ತಸ್ಮಾತ್ಪರೋಕ್ಷೇಽಸ್ಮದುಪಶ್ರುತಾನ್ಯಲಂ-
ಕರಿಷ್ಯಥ ಸ್ತೋತ್ರಮಪೀಚ್ಯವಾಚಃ ।
ಸತ್ಯುತ್ತಮಶ್ಲೋಕಗುಣಾನುವಾದೇ
ಜುಗುಪ್ಸಿತಂ ನ ಸ್ತವಯನ್ತಿ ಸಭ್ಯಾಃ ॥೨೩॥

ಎಲೈ ಸವಿಮಾತುಗಳನ್ನಾಡುವ ಸೌಮ್ಯರೇ! ಕಾಲಾಂತರದಲ್ಲಿ ನನ್ನ ಗುಣಗಳು ಪ್ರಕಟವಾದರೆ ಆಗ ಅವುಗಳನ್ನು ಕುರಿತು ಬಾಯಿತುಂಬ ಹೊಗಳುವಿರಂತೆ ; ಸವಿಮಾತುಗಳಿಂದ ಸ್ತುತಿಸುವಿರಂತೆ. ಪವಿತ್ರವಾದ ಕೀರ್ತಿಯುಳ್ಳ ಶ್ರೀಭಗವಂತನ ಗುಣಗಳನ್ನು ಸ್ತೋತ್ರಮಾಡಬಹುದಾಗಿರುವಾಗ ಶಿಷ್ಟರು ಆ ನಾರಾಯಣಸ್ತುತಿಯನ್ನು ಬಿಟ್ಟು ತುಚ್ಛವಾದ ನರಸ್ತುತಿಯನ್ನು ಮಾಡುವರೇ!

ನಮ್ಮಲ್ಲಿ ಪ್ರಕೃತದಲ್ಲಿ ಇಲ್ಲದಿದ್ದರೂ ಮುಂದೆ ಪ್ರಕಟವಾಗಬಹುದಾದ ಗುಣಗಳನ್ನು ಊಹಿಸಿ ಅವುಗಳನ್ನು ಕುರಿತು ಸ್ತೋತ್ರಮಾಡಿರಿ—ಎಂದು ಶಿಷ್ಟರು ಸ್ತುತಿಪಾಠಕರಿಂದ ತಮ್ಮನ್ನು ಹೊಗಳಿಸಿಕೊಳ್ಳುವುದಿಲ್ಲ. ಮಹಾ ಗುಣಗಳನ್ನು ಧರಿಸುವ ಸಾಮರ್ಥ್ಯವುಳ್ಳವರಾಗಿದ್ದರೂ ಬುದ್ಧಿವಂತರಾದವರು

ಹಾಗೆ ಹೊಗಳಿಸಿಕೊಳ್ಳುವುದಿಲ್ಲ. ಹಾಗೆ ಹೊಗಳಿಸಿಕೊಂಡರೆ 'ಈತನು ಒಳ್ಳೆಯ ಶಿಕ್ಷಣ ಪಡೆದಿದ್ದರೆ ಇವನಲ್ಲಿ ಇಂತಹ ಗುಣಗಳು ಇರಬಹುದಾಗಿತ್ತು'–ಎಂದು ಇದಕ್ಕೆ ಅರ್ಥ–ಎಂಬುದಾಗಿ ಜನರು ತನ್ನನ್ನು ಪರಿಹಾಸ್ಯ ಮಾಡುತ್ತಾರೆ ಎಂಬುದನ್ನು ಅರಿಯದೇ ಆ ಸ್ತುತಿಗಳಿಂದ ವಂಚಿತನಾಗುವವನು ತಿಳಿಗೇಡಿಯೇ ಸರಿ. ಪರಮೋದಾರಿಗಳಾಗಿ ನಾಚಿಕೆಯ ಸ್ವಭಾವವುಳ್ಳ ಸತ್ಪುರುಷರು ಎಲ್ಲ ಸದ್ಗುಣಗಳನ್ನೂ ಸಂಪಾದಿಸುವ ಶಕ್ತಿಯುಳ್ಳವರಾಗಿದ್ದರೂ ಕೂಡ ತಮ್ಮ ಯಾವುದಾದರೂ ನಿಂದಿತವಾದ ಪರಾಕ್ರಮದ ಚರ್ಚೆ ಬಂದರೆ ಅದರ ಬಗೆಗೆ ಜುಗುಪ್ಸೆಪಡುತ್ತಾರೆ ; ಹಾಗೆಯೇ ತಮ್ಮನ್ನು ಕುರಿತ ಹೊಗಳಿಕೆಯನ್ನು ಕೇಳಲೂ ಅವರು ಜುಗುಪ್ಸೆಪಡುತ್ತಾರೆ. ಎಲೈ ಪ್ರೀತಿಯ ಸೂತರೇ! ಇನ್ನೂ ನಾವು ನಮ್ಮ ಶ್ರೇಷ್ಠವಾದ ಕರ್ಮಗಳಿಂದ ಲೋಕದಲ್ಲಿ ಪ್ರಸಿದ್ಧಿಗೆ ಬಂದಿಲ್ಲ. ಹೊಗಳಿಕೆಗೆ ಯೋಗ್ಯವಾದ ಯಾವ ಕರ್ಮವನ್ನೂ ಮಾಡಿಲ್ಲ. ಹೀಗಿರುವಾಗ ಬಾಲಕರಂತೆ ನಿಮ್ಮಿಂದ ಹೇಗೆ ಹೊಗಳಿಕೆಯ ಹಾಡನ್ನು ಹಾಡಿಸಿಕೊಳ್ಳೋಣ?" (ಶ್ಲೋಕ 24-26)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಚತುರ್ಥಸ್ಕಂಧದ ೧೫ನೆಯ ಅಧ್ಯಾಯವು ಮುಗಿಯಿತು.

ಚತುರ್ಥಸ್ಕಂಧ ೧೬ನೆಯ ಅಧ್ಯಾಯ

ವಂದಿ-ಮಾಗಧರಿಂದ ಪೃಥುಚಕ್ರವರ್ತಿಯ ಸ್ತುತಿ

ಮೈತ್ರೇಯರು ಹೇಳುತ್ತಾರೆ :

ಇತಿ ಬ್ರುವಾಣಂ ನೃಪತಿಂ ಗಾಯಕಾ ಮುನಿಚೋದಿತಾಃ ।
ತುಷ್ಟುವುಸ್ತುಷ್ಟಮನಸಸ್ತದ್ವಾಗಮೃತಸೇವಯಾ ॥೧॥

"ಹೀಗೆ ಪೃಥುಮಹಾರಾಜನು 'ತನ್ನನ್ನು ಈಗ ಸ್ತುತಿಸಬಾರದು'– ಎಂದು ಹಾಸ್ಯಲಹರಿಯೊಡನೆ ಗಾಂಭೀರ್ಯ ಮತ್ತು ವಿನಯಸಂಪತ್ತುಗಳಿಂದ ಕೂಡಿದ ತಿಳಿವಳಿಕೆಯ ಮಾತುಗಳನ್ನಾಡಿದರೂ ವಂದಿ-ಮಾಗಧರು ಸುಮ್ಮನಾಗಲಿಲ್ಲ. ಆತನ ಅಮೃತಸದೃಶವಾದ ಮಾತುಗಳನ್ನು ಸೇವಿಸಿ ಅವರ

ಮನಸ್ಸು ಆನಂದದಿಂದ ತುಂಬಿಹೋಯಿತು. ಆ ತುಂಬಿದ ಆನಂದದಿಂದಲೂ ಮತ್ತು ಮುನಿಗಳ ಪ್ರೇರಣೆಯಿಂದಲೂ ಪ್ರೋತ್ಸಾಹಗೊಂಡ ಅವರು ಪೃಥುಚಕ್ರವರ್ತಿಯನ್ನು ಹೀಗೆ ಹಾಡಿ ಹೊಗಳತೊಡಗಿದರು :

ನಾಲಂ ವಯಂ ತೇ ಮಹಿಮಾನುವರ್ಣನೇ
ಯೋ ದೇವವರ್ಯೋಽವತತಾರ ಮಾಯಯಾ ।
ವೇನಾಙ್ಗಜಾತಸ್ಯ ಚ ಪೌರುಷಾಣಿ ತೇ
ವಾಚಸ್ಪತೀನಾಮಪಿ ಬಭ್ರಮುರ್ಧಿಯಃ ॥೨॥

ಅಥಾಪ್ಯುದಾರಶ್ರವಸಃ ಪೃಥೋರ್ಹರೇಃ
ಕಲಾವತಾರಸ್ಯ ಕಥಾಮೃತಾದೃತಾಃ ।
ಯಥೋಪದೇಶಂ ಮುನಿಭಿಃ ಪ್ರಚೋದಿತಾಃ
ಶ್ಲಾಘ್ಯಾನಿ ಕರ್ಮಾಣಿ ವಯಂ ವಿತನ್ಮಹಿ ॥೩॥

"ಮಹಾಪ್ರಭುವೇ! ದೇವಶ್ರೇಷ್ಠನಾದ ಶ್ರೀಮನ್ನಾರಾಯಣನೇ ತನ್ನ *ಮಾಯೆಯಿಂದ ನಿನ್ನ ರೂಪದಲ್ಲಿ ಅವತರಿಸಿದ್ದಾನೆ. ಇಂತಹ ನಿನ್ನ ಮಹಿಮೆಯನ್ನು ವರ್ಣಿಸಲು ನಮಗೇನೂ ಶಕ್ತಿಯಿಲ್ಲ. ದುಷ್ಟನಾದ ವೇನನ ಮೃತಶರೀರದಿಂದ ಆವಿರ್ಭವಿಸಿದ್ದರೂ ನೀನು ಅಪ್ರಾಕೃತನಾದ ಶ್ರೀಭಗವಂತನೇ ಆಗಿರುವುದರಿಂದ ನಿನ್ನ ದಿವ್ಯವಾದ ಪೌರುಷಗಳನ್ನು ವರ್ಣಿಸುವಾಗ ಸಾಕ್ಷಾತ್ ಬ್ರಹ್ಮಾದಿಗಳ ಬುದ್ಧಿಯೂ ಮರುಳುಹೊಂದುವುದು. ಇಂತಹ ಅದ್ಭುತವಾದ ಮಹಿಮೆಯನ್ನು ವರ್ಣಿಸಲು ನಾವು ಎಷ್ಟ

---

* ಮಾಯಯಾ–ಎಂದರೆ : ಭಕ್ತಾನುಕಂಪೆಯ ಇಚ್ಛೆಯಿಂದ–ಎಂದು.
(ವಿಜಯಧ್ವಜೀಯ)

'ಮಾಯಾ ವಯುನಂ ಜ್ಞಾನಂ'–ಎಂಬಂತೆ ಮಾಯಾಶಬ್ದವು ಜ್ಞಾನಪರ್ಯಾಯವಾದ್ದರಿಂದ ಇಲ್ಲಿ ಮಾಯಯಾ ಎಂದರೆ–ಸಂಕಲ್ಪರೂಪವಾದ ಜ್ಞಾನದಿಂದ ಎಂದರ್ಥ.
(ವೀರರಾಘವೀಯ)

ವೇನಾಙ್ಗಜಾತಸ್ಯ ತೇ–ವೇನನ ಅಂಗದಲ್ಲಿ ಹುಟ್ಟಿರುವ ನಿನ್ನಲ್ಲಿ ವಿಶೇಷವಾಗಿ ಸನ್ನಿಹಿತನಾಗಿರುವ ಶ್ರೀಹರಿಯ ಪೌರುಷಗಳನ್ನು ವರ್ಣಿಸಲು ಬ್ರಹ್ಮಾದಿಗಳ ಬುದ್ಧಿಗಳಿಗೂ ಭ್ರಮೆಯುಂಟಾಗುವುದು. ಪೃಥುವಿನಲ್ಲಿ ಸನ್ನಿಹಿತನಾಗಿರುವ ಶ್ರೀಹರಿಯ ಮಹಿಮೆಯನ್ನು ಇಲ್ಲಿ ವರ್ಣಿಸಿದೆ. ವೇನಾಙ್ಗಜೇ ಜಾತಸ್ಯ = ವಿಶೇಷಸನ್ನಿಹಿತ್ವೇನ ಪ್ರಾಪ್ತಸ್ಯ ತೇ ತ್ವಯಿ ಸ್ಥಿತಸ್ಯ.
(ವಿಜಯಧ್ವಜೀಯ) (ಶ್ಲೋಕ ೨)

ರವರು? ಆದರೂ ನಿನ್ನ ಕಥಾಮೃತವನ್ನು ಸವಿಯುವುದರಲ್ಲಿ ಆದರಬುದ್ಧಿಯನ್ನು ಹೊಂದಿ, ನಾವು ಮುನಿಗಳ ಉಪದೇಶಾನುಸಾರ ಅವರ ಪ್ರೇರಣೆಯಂತೆ ನಿನ್ನ ಪರಮಪ್ರಶಂಸನೀಯವಾದ ಕರ್ಮಗಳನ್ನು ಸ್ವಲ್ಪ ವಿವರಿಸಲು ಬಯಸುತ್ತೇವೆ. ನೀನು ಸಾಕ್ಷಾತ್ ಶ್ರೀಹರಿಯ ಕಲಾವತಾರವು. ಉದಾರವಾದ ಕೀರ್ತಿಯುಳ್ಳವನು.

ಏಷ ಧರ್ಮಭೃತಾಂ ಶ್ರೇಷ್ಠೋ ಲೋಕಂ ಧರ್ಮೇಽನುವರ್ತಯನ್ ।
ಗೋಪ್ತಾ ಚ ಧರ್ಮಸೇತೂನಾಂ ಶಾಸ್ತಾ ತತ್ಪರಿಪನ್ಥಿನಾಮ್ ॥೪॥

ಏಷ ವೈ ಲೋಕಪಾಲಾನಾಂ ಬಿಭರ್ತ್ಯೇಕಸ್ತನೌ ತನೂಃ ।
ಕಾಲೇ ಕಾಲೇ ಯಥಾಭಾಗಂ ಲೋಕಯೋರುಭಯೋರ್ಹಿತಮ್ ॥೫॥

ಈ ಪೃಥುಚಕ್ರವರ್ತಿಯು ಧರ್ಮವನ್ನು ಧರಿಸಿ ಪೋಷಿಸುವವರಲ್ಲಿ ಅತ್ಯಂತಶ್ರೇಷ್ಠನು. ಲೋಕವನ್ನು ಧರ್ಮದಲ್ಲಿ ನೆಲೆಗೊಳಿಸಿ ಧರ್ಮಮಾರ್ಗದಲ್ಲಿ ನಡೆಸುವನು. ಧರ್ಮಸೇತುವನ್ನು ಕಾಪಾಡುವನು ಮತ್ತು ಧರ್ಮವಿರೋಧಿಗಳನ್ನು ದಂಡಿಸಿ ಹತೋಟಿಯಲ್ಲಿಡುವನು. ತಾನು ಒಬ್ಬನಾಗಿದ್ದರೂ ತನ್ನ ಶರೀರದಲ್ಲಿ ಇಂದ್ರನೇ ಮುಂತಾದ ಎಲ್ಲ ಲೋಕಪಾಲಕರ ಮೂರ್ತಿಗಳನ್ನೂ ಧರಿಸಿಕೊಂಡು ಆಯಾ ಸಮಯಗಳಲ್ಲಿ ಭೂಲೋಕ, ಸ್ವರ್ಗಲೋಕ–ಈ ಎರಡಕ್ಕೂ ಹಿತವುಂಟಾಗುವಂತೆ ಧರ್ಮಗಳನ್ನು ಆಚರಿಸುವನು. ಯಜ್ಞಾದಿಗಳ ಮೂಲಕ ಲೋಕಕ್ಕೆ ಮಳೆ-ಬೆಳೆಗಳನ್ನೂ, ದೇವತೆಗಳಿಗೆ ಹವಿರ್ಭಾಗಗಳನ್ನೂ ನೀಡುತ್ತಾ ಎರಡೂ ಲೋಕಗಳನ್ನು ಪೊರೆಯುವನು.

ವಸು ಕಾಲ ಉಪಾದತ್ತೇ ಕಾಲೇ ಚಾಯಂ ವಿಮುಞ್ಚತಿ ।
ಸಮಃ ಸರ್ವೇಷು ಭೂತೇಷು ಪ್ರತಪನ್ಸೂರ್ಯವದ್ವಿಭುಃ ॥೬॥

ತಿತಿಕ್ಷತ್ಯಕ್ರಮಂ ವೈನ್ಯ ಉಪರ್ಯಾಕ್ರಮತಾಮಪಿ ।
ಭೂತಾನಾಂ ಕರುಣಃ ಶಶ್ವದಾರ್ತಾನಾಂ ಕ್ಷಿತಿವೃತ್ತಿಮಾನ್ ॥೭॥

ಈತನು ಆದಿತ್ಯನಿಗೆ ಸಮನಾದವನು. ಆತನಂತೆಯೇ ಮಹಾಪ್ರತಾಪಿಯೂ, ಸಮದರ್ಶಿಯೂ, ವ್ಯಾಪಕನೂ ಆಗಿರುವನು. ಆದಿತ್ಯನು ವರ್ಷದಲ್ಲಿ ಎಂಟು ತಿಂಗಳಕಾಲ ಬಿಸಿಲನ್ನೆರೆದು ಜಲವನ್ನು ಸೆಳೆದುಕೊಂಡು

ವರ್ಷಾಕಾಲದಲ್ಲಿ ಹೇರಳವಾಗಿ ಮಳೆಗೆರೆದು ಲೋಕಕ್ಕೆ ಹಿತವನ್ನುಂಟು ಮಾಡುವಂತೆ–ಈತನು ಸುಭಿಕ್ಷಕಾಲದಲ್ಲಿ ಜನರಿಂದ ಕಪ್ಪ-ಕಾಣಿಕೆಗಳನ್ನು ಸಂಗ್ರಹಮಾಡಿ ಕ್ಷಾಮ-ಡಾಮರಾದಿ ಸಮಯಗಳಲ್ಲಿ ಅವರಿಗೆ ಪುಷ್ಕಳವಾಗಿ ಸಂಪತ್ತನ್ನು ನೀಡಿ ಕಾಪಾಡುವನು. ಈ ಮಹಾತ್ಮನು ಕ್ಷಮಾಗುಣದಲ್ಲಿ ಭೂದೇವಿಗೆ ಎಣೆಯಾಗುವನು. ಪೀಡೆಗೆ ಒಳಗಾದ ಕಡುಬಡವರು ತನ್ನ ಮೇಲೆ ಆಕ್ರಮಣಮಾಡಿದರೂ ಕರುಣೆಯಿಂದ ಅವರ ಅಪರಾಧಗಳನ್ನು ಸೈರಿಸಿಕೊಳ್ಳುವನು.

ದೇವೇಽವರ್ಷತ್ಯಸೌ ದೇವೋ ನರದೇವವಪುರ್ಹರಿಃ ।
ಕೃಚ್ಛ್ರಪ್ರಾಣಾಃ ಪ್ರಜಾ ಹ್ಯೇಷ ರಕ್ಷಿಷ್ಯತ್ಯಞ್ಜಸೇನ್ದ್ರವತ್ ॥೮॥

ಆಪ್ಯಾಯಯತ್ಯಸೌ ಲೋಕಂ ವದನಾಮೃತಮೂರ್ತಿನಾ ।
ಸಾನುರಾಗಾವಲೋಕೇನ ವಿಶದಸ್ಮಿತಚಾರುಣಾ ॥೯॥

ಮೋಡಗಳು ಮಳೆಗರೆಯದೇ ಪ್ರಜೆಗಳು ಸಂಕಟಕ್ಕೊಳಗಾದರೆ ಈ ರಾಜರೂಪಿಯಾದ ಶ್ರೀಹರಿಯು ಇಂದ್ರನಂತೆ ಶೀಘ್ರದಲ್ಲಿಯೇ ಮಳೆಗರೆದು ಅವರನ್ನು ಪೊರೆಯುವನು. ಇಂದ್ರನಿಗೆ ಸಾಟಿಯಾಗಿರುವಂತೆಯೇ ಚಂದ್ರನಿಗೂ ಸರಿಸಮನಾಗಿ ಪ್ರಜೆಗಳಿಗೆ ಆಹ್ಲಾದವನ್ನುಂಟುಮಾಡುವನು. ಪ್ರೀತಿಯನ್ನೊಸರಿಸುವ ಸವಿನೋಟದಿಂದಲೂ, ಅಮೃತವನ್ನು ಸುರಿಸುವ ಕಿರುನಗೆಯ ಬೆಳದಿಂಗಳಿನಿಂದಲೂ ಸುಂದರವಾದ ತನ್ನ ಮುಖವೆಂಬ ಚಂದ್ರನಿಂದ ಲೋಕಕ್ಕೆ ಆನಂದವನ್ನುಂಟುಮಾಡುವನು.

ಅವ್ಯಕ್ತವರ್ತ್ಮೈಷ ನಿಗೂಢಕಾರ್ಯೋ
ಗಮ್ಭೀರವೇಧಾ ಉಪಗುಪ್ತವಿತ್ತಃ ।
ಅನನ್ತಮಾಹಾತ್ಮ್ಯಗುಣೈಕಧಾಮಾ
ಪೃಥುಃ ಪ್ರಚೇತಾ ಇವ ಸಂವೃತಾತ್ಮಾ ॥೧೦॥

ದುರಾಸದೋ ದುರ್ವಿಷಹ ಆಸನ್ನೋಽಪಿ ವಿದೂರವತ್ ।
ನೈವಾಭಿಭವಿತುಂ ಶಕ್ಯೋ ವೇನಾರುಣ್ಯುತ್ಥಿತೋಽನಲಃ ॥೧೧॥

ಈತನು ಸಮುದ್ರಕ್ಕೆ ಅಧಿದೇವತೆಯಾಗಿರುವ ವರುಣದೇವರಿಗೂ ಎಣೆಯಾಗುವನು. ಸಮುದ್ರರಾಜನಂತೆ ಗಂಭೀರನಾಗಿರುವನು. ಈತನ ಗತಿ

ಯನ್ನು ಇತರರು ಅರಿಯಲು ಸಾಧ್ಯವಾಗುವುದಿಲ್ಲ. ಫಲವು ದೊರೆಯುವ ವರೆಗೂ ಕಾರ್ಯದ ಉದ್ದೇಶವು ಯಾರಿಗೂ ತಿಳಿಯದಂತೆ–ಗುಪ್ತಭಾವ ದಿಂದ ಕಾರ್ಯಮಾಡುವನು. ಹಣವನ್ನೂ ಗುಟ್ಟಾಗಿ ಸುರಕ್ಷಿತವಾಗಿ ಇಡು ವನು. ಅನಂತವಾದ ಮಹಾತ್ಮ್ಯ ಮತ್ತು ಗುಣರತ್ನಗಳಿಗೆ ಏಕಮಾತ್ರ ಆಶ್ರಯನಾಗುವನು. ಇವನು–ಅನಂತನೂ, ಕಲ್ಯಾಣಗುಣಪರಿಪೂರ್ಣನೂ ಆದ ನಾರಾಯಣನಿಗೆ ನೆಲೆವೀಡಾಗುವನು. ವೇನನೆಂಬ ಅರಣಿಯಿಂದ ಹುಟ್ಟಿದ ಈ ಪೃಥುವು ಅಗ್ನಿಗೂ ಸಾಟಿಯಾಗುವನು. ಅಗ್ನಿಯಂತೆ ಮಹಾ ಪ್ರತಾಪಿಯಾದ ಈತನನ್ನು ಶತ್ರುಗಳು ಮುಟ್ಟಲಾರರು ; ಮುಟ್ಟಿದರೂ ಈತನ ಪ್ರತಾಪವನ್ನು ಸಹಿಸಲಾರರು. ಹತ್ತಿರದಲ್ಲಿದ್ದರೂ ತನ್ನ ಪ್ರತಾಪ ಮುಂತಾದುವುಗಳಿಂದ ರಕ್ಷಿತನಾಗಿರುವುದರಿಂದ ಈತನು ಅವರಿಗೆ ದೂರ ದಲ್ಲಿದ್ದಂತೆಯೇ ಕಾಣುವನು. ಅಂತೆಯೇ ತನ್ನ ಗುಣಾತಿಶಯದಿಂದ ವಾಯು ದೇವರನ್ನೂ ಈತನು ಸರಿಹೋಲುವನು.

ಅನ್ತರ್ಬಹಿಶ್ಚ ಭೂತಾನಾಂ ಪಶ್ಯನ್ಕರ್ಮಾಣಿ ಚಾರಣೈಃ ।
ಉದಾಸೀನ ಇವಾಧ್ಯಕ್ಷೋ ವಾಯುರಾತ್ಮೇವ ದೇಹಿನಾಮ್ ॥೧೨॥

ನಾದಣ್ಡ್ಯಂ ದಣ್ಡಯತ್ಯೇಷ ಸುತಮಾತ್ಮದ್ವಿಷಾಮಪಿ ।
ದಣ್ಡ ಯತ್ಯಾತ್ಮಜಮಪಿ ದಣ್ಡ್ಯಂ ಧರ್ಮಪಥೇ ಸ್ಥಿತಃ ॥೧೩॥

ವಾಯುವು ಸೂತ್ರಾತ್ಮನಾಗಿ ದೇಹದ ಒಳಗಿದ್ದು ಒಳ-ಹೊರ ವ್ಯಾಪಾರಗಳೆಲ್ಲವನ್ನೂ ನೋಡುತ್ತಿದ್ದರೂ ಉದಾಸೀನನಾಗಿರುವಂತೆ– ಈತನು ಗೂಢಚಾರರ ಮೂಲಕ ಪ್ರಾಣಿಗಳ ಗುಟ್ಟಾದ ಮತ್ತು ಪ್ರಕಟವಾದ ವ್ಯಾಪಾರಗಳೆಲ್ಲವನ್ನೂ ತಿಳಿದುಕೊಳ್ಳುತ್ತಿದ್ದರೂ ತನ್ನ ನಿಂದಾ-ಸ್ತುತಿಗಳನ್ನು ಮನಸ್ಸಿಗೆ ಹಚ್ಚಿಕೊಳ್ಳದೇ ಉದಾಸೀನನಂತೆ ಇರುವನು. ಧರ್ಮಮೂರ್ತಿ ಯಾಗಿರುವ ಈತನು ಧರ್ಮಮಾರ್ಗದಲ್ಲಿಯೇ ನಿಷ್ಠೆಯುಳ್ಳವನಾಗುವನು. ನಿರಪರಾಧಿಯನ್ನು–ತನ್ನ ಶತ್ರುವಿನ ಪುತ್ರನೇ ಆಗಿದ್ದರೂ–ದಂಡಿಸುವುದಿಲ್ಲ. ಅಪರಾಧಿಯನ್ನು–ತನ್ನ ಪುತ್ರನೇ ಆಗಿದ್ದರೂ–ದಂಡಿಸದೇ ಬಿಡುವುದಿಲ್ಲ. ಆದುದರಿಂದ ಧರ್ಮೈಕಪಕ್ಷಪಾತಿಯಾಗಿ, ಸಮವರ್ತಿಯಾಗಿ, ದಂಡಧರನಾಗಿ ರುವ ಈತನು ಯಮಧರ್ಮರಾಜನಿಗೆ ಎಣೆಯಾಗುವನು.

ಅಸ್ಯಾಪ್ರತಿಹತಂ ಚಕ್ರಂ ಪೃಥೋರಾಮಾನಸಾಚಲಾತ್ ।
ವರ್ತತೇ ಭಗವಾನರ್ಕೋ ಯಾವತ್ತಪತಿ ಗೋಗಣೈಃ ॥೧೪॥

ರಞ್ಜಯಿಷ್ಯತಿ ಯಲ್ಲೋಕಮಯಮಾತ್ಮವಿಚೇಷ್ಟಿತೈಃ ।
ಅಥಾಮುಮಾಹೂ ರಾಜಾನಂ ಮನೋರಞ್ಜನಕೈಃ ಪ್ರಜಾಃ ॥೧೫॥

ಏಕಚಕ್ರಾಧಿಪತಿಯಾದ ಈತನ ಆಜ್ಞೆಯೂ ಮತ್ತು ರಥಚಕ್ರಗಳೂ ಭಗವಂತನಾದ ಸೂರ್ಯನ ಕಿರಣಗಳಂತೆ–ಮಾನಸೋತ್ತರಪರ್ವತದ ವರೆಗೂ ನಿಷ್ಕಂಟಕವಾಗಿ ನಡೆಯುವುವು. ತನ್ನ ನಡೆ-ನುಡಿಗಳಿಂದ ಎಲ್ಲ ಪ್ರಜೆಗಳನ್ನೂ ರಕ್ಷಿಸುತ್ತಾ ಅವರಿಗೆ ರಂಜನೆಯನ್ನುಂಟುಮಾಡುತ್ತಾ ಬೆಳಗು ವುದರಿಂದ* 'ರಾಜಾ' ಎಂಬ ಅನ್ವರ್ಥವಾದ ಹೆಸರಿಗೆ ಈ ಮಹಾತ್ಮನು ಒಪ್ಪುವನು.

ದೃಢವ್ರತಃ ಸತ್ಯಸನ್ಧೋ ಬ್ರಹ್ಮಣ್ಯೋ ವೃದ್ಧಸೇವಕಃ ।
ಶರಣ್ಯಃ ಸರ್ವಭೂತಾನಾಂ ಮಾನದೋ ದೀನವತ್ಸಲಃ ॥೧೬॥

ಮಾತೃಭಕ್ತಿಃ ಪರಸ್ತ್ರೀಷು ಪತ್ನ್ಯಾಮರ್ಧ ಇವಾತ್ಮನಃ ।
ಪ್ರಜಾಸು ಪಿತೃವತ್ಸ್ನಿಗ್ಧಃ ಕಿಙ್ಕರೋ ಬ್ರಹ್ಮವಾದಿನಾಮ್ ॥೧೭॥

ಈತನು ದೃಢವಾದ ಸಂಕಲ್ಪವುಳ್ಳವನೂ, ಸತ್ಯಸಂಧನೂ, ಬ್ರಾಹ್ಮಣ ಭಕ್ತನೂ, ಗುರುಹಿರಿಯರನ್ನು ಸೇವಿಸುವವನೂ, ಸಮಸ್ತಭೂತಗಳಿಗೂ ಆಶ್ರಯ-ರಕ್ಷಣೆಗಳನ್ನು ನೀಡುವವನೂ, ಸಮ್ಮಾನಮಾಡುವವನೂ ಮತ್ತು ದೀನರಲ್ಲಿ ದಯೆತೋರುವವನೂ, ಪರಸ್ತ್ರೀಯರನ್ನು ತನ್ನ ತಾಯಿಯಂತೆ ತಿಳಿಯುವವನೂ ಆಗುವನು. ಪತ್ನಿಯನ್ನು ತನ್ನ ಶರೀರದ ಅರ್ಧಭಾಗ ದಂತೆಯೂ, ಪ್ರಜೆಗಳನ್ನು ತಂದೆಯಂತೆಯೂ ಪ್ರೀತಿಸುವನು. ಬ್ರಹ್ಮವಾದಿ ಗಳಲ್ಲಿ ಸೇವಕರಂತೆ ನಡೆದುಕೊಳ್ಳುವನು.

---

* 'ರಾಜತೇ ಇತಿ ರಾಜಾ' 'ರಞ್ಜಯತಿ ಇತಿ ರಾಜಾ'–ಎಂಬ ವ್ಯುತ್ಪತ್ತಿಗಳಂತೆ ಬೆಳಗುವವನು ಮತ್ತು ರಂಜನೆಯನ್ನು ಅಂದರೆ–ಆಹ್ಲಾದವನ್ನು ಉಂಟುಮಾಡುವವನು– ರಾಜಾ. ಹೋಲಿಕೆ : ಯಥಾ ಪ್ರಹ್ಲಾದನಾಚ್ಚನ್ದ್ರಃ ಪ್ರತಾಪಾತ್ತಪನೋ ಯಥಾ । ತಥೈವ ಸೋಽಭೂದನ್ವರ್ಥಃ ರಾಜಾ ಪ್ರಕೃತಿರಞ್ಜನಾತ್ ॥ (ರಘುವಂಶ-೪ನೆಯ ಸರ್ಗ) (ಶ್ಲೋಕ ೧೨)

ದೇಹಿನಾಮಾತ್ಮವತ್ಪ್ರೇಷ್ಠಃ ಸುಹೃದಾಂ ನನ್ದಿವರ್ಧನಃ ।
ಮುಕ್ತಸಙ್ಗಪ್ರಸಙ್ಗೋಽಯಂ ದಣ್ಡಪಾಣಿರಸಾಧುಷು ॥೧೮॥

ಅಯಂ ತು ಸಾಕ್ಷಾದ್ಭಗವಾಂಸ್ತ್ರ್ಯಧೀಶಃ
ಕೂಟಸ್ಥ ಆತ್ಮಾ ಕಲಯಾವತೀರ್ಣಃ ।
ಯಸ್ಮಿನ್ನವಿದ್ಯಾರಚಿತಂ ನಿರರ್ಥಕಂ
ಪಶ್ಯನ್ತಿ ನಾನಾತ್ವಮಪಿ ಪ್ರತೀತಮ್ ॥೧೯॥

ಎಲ್ಲ ಪ್ರಾಣಿಗಳಿಗೂ ಅವುಗಳ ದೇಹದಂತೆಯೂ–ಆತ್ಮದಂತೆಯೂ ಅತ್ಯಂತಪ್ರಿಯನಾಗುವನು. ಮಿತ್ರರಿಗೆ ಆನಂದವನ್ನುಂಟುಮಾಡುವನು. ನಿಸ್ಸಂಗರಾದ ವಿರಕ್ತರ ಸಂಗದಲ್ಲಿದ್ದು ಅವರ ಸಂತೋಷಕ್ಕೆ ಕಾರಣನಾಗುವನು. ಯಮನಂತೆ ದಂಡಧರನಾಗಿ ದುಷ್ಟರನ್ನು ದಂಡಿಸುವನು. ಪರಮಾತ್ಮನು ಒಬ್ಬನೇ ಆಗಿದ್ದರೂ ಆತನಲ್ಲಿ ಅವಿದ್ಯೆಯ ಕಾರಣದಿಂದ ವ್ಯರ್ಥವಾದ ನಾನಾತ್ವವು ತೋರಿಬರುತ್ತದೆ.* ಅಂತಹ ತ್ರಿಗುಣಗಳಿಗೆ ನಿಯಾಮಕನೂ, ತ್ರಿಲೋಕಾಧಿಪತಿಯೂ, ನಿರ್ವಿಕಾರನಾದ ಮೂಲ ಪುರುಷನೂ ಆದ ಶ್ರೀಭಗವಂತನೇ ಸಾಕ್ಷಾತ್ತಾಗಿ ತನ್ನ ಅಂಶದಿಂದ ಈ ರಾಜೇಂದ್ರನ ರೂಪದಲ್ಲಿ ಅವತರಿಸಿರುವನು.

---

* ಜೀವನದಲ್ಲಿ ತೋರುತ್ತಿರುವ ಪ್ರಕೃತಿಯ ಪರಿಣಾಮಗಳಾದ ದೇವತೆ-ಮನುಷ್ಯ ಮುಂತಾದ ಭೇದಗಳು ಯಥಾರ್ಥವಲ್ಲ ; ನಿರರ್ಥಕಗಳು. ದೇಹಕ್ಕೆ ಒದಗುವ ಬಾಲ್ಯ, ವಾರ್ಧಕ್ಯ–ಮುಂತಾದ ಭೇದಗಳು ಜೀವನಲ್ಲಿ ತೋರುವಂತೆಯೇ ಜೀವಶರೀರಕನಾದ ಭಗವಂತನಲ್ಲಿಯೂ ತೋರಿಬಂದರೂ ಅವು ಅವಾಸ್ತವಗಳೆಂದು ಜ್ಞಾನಿಗಳು ತಿಳಿಯುತ್ತಾರೆ. 'ಜೀವ ಇವ ಬಾಲತ್ವ–ಯುವತ್ವಾದಿಕಂ ದೇವಾದಿದೇಹಸಂಬಂಧಾತ್ಪ್ರತೀಯಮಾನಮಪಿ ನ ವಾಸ್ತವಿಕಂ. ಕಿನ್ತು ದೇವಾದಿದೇಹಗತಮ್'. (ವೀರರಾಘವೀಯ)

'ಮತ್ಸ್ಯ-ಕೂರ್ಮಾದಿರೂಪಗಳಲ್ಲಿ ತೋರಿಬರುವ ಶ್ರೀಭಗವಂತನ ಭೇದವು ಆಕಾಶಪುಷ್ಪಾದಿಗಳಂತೆ ಮಿಥ್ಯೆ' 'ಮತ್ಸ್ಯರೂಪಾದಿನಾನಾತ್ವದೃಷ್ಟಿವತ್ ಯನ್ನಿರರ್ಥಕಮ್' (ಪದ್ಮ) (ವಿಜಯಧ್ವಜೀಯ)

ಅದ್ವಿತೀಯನಾದ ಆತ್ಮನಲ್ಲಿ ಅವಿದ್ಯೆಯಿಂದ ನಾನಾತ್ವವು ತೋರಿಬಂದರೂ ಅದನ್ನು ಅರ್ಥಶೂನ್ಯವೆಂದು ಯೋಗಿಗಳು ತಿಳಿಯುತ್ತಾರೆ. 'ಯಸ್ಮಿನ್ ಪ್ರತೀತಮಪಿ ನಾನಾತ್ವಂ ಅರ್ಥಶೂನ್ಯಂ ಪಶ್ಯನ್ತಿ.' (ಶ್ರೀಧರೀಯ) (ಶ್ಲೋಕ ೧೯)

ಅಯಂ ಭುವೋ ಮಣ್ಡಲಮೋದಯಾದ್ರೇ-
ರ್ಗೋಪ್ತೇ ಕವೀರೋ ನರದೇವನಾಥಃ ।
ಆಸ್ಥಾಯ ಜೈತ್ರಂ ರಥಮಾತ್ತಚಾಪಃ
ಪರ್ಯಸ್ಯತೇ ದಕ್ಷಿಣತೋ ಯಥಾರ್ಕಃ ॥೨೦॥

ಅಸ್ಮೈ ನೃಪಾಲಾಃ ಕಿಲ ತತ್ರ ತತ್ರ
ಬಲಿಂ ಹರಿಷ್ಯನ್ತಿ ಸಲೋಕಪಾಲಾಃ ।
ಮಂಸ್ಯನ್ತ ಏಷಾಂ ಸ್ತ್ರಿಯ ಆದಿರಾಜಂ
ಚಕ್ರಾಯುಧಂ ತದ್ಯಶ ಉದ್ಧರನ್ತ್ಯಃ ॥೨೧॥

ಅದ್ವಿತೀಯನಾದ ವೀರನೂ ಏಕಚ್ಛತ್ರಾಧಿಪತಿಯೂ ಆಗಿ ಈತನು ಏಕಾಕಿಯಾಗಿಯೇ ಉದಯಪರ್ವತಪರ್ಯಂತವಾದ ಸಮಸ್ತಭೂಮಂಡಲವನ್ನೂ ರಕ್ಷಿಸುವನು ಮತ್ತು ತನ್ನ ಜಯಶೀಲವಾದ ರಥವನ್ನು ಹತ್ತಿ ಕೈಯಲ್ಲಿ ಧನುಸ್ಸನ್ನು ಹಿಡಿದು ಸೂರ್ಯನಂತೆ ಎಲ್ಲೆಲ್ಲಿಯೂ ಪ್ರದಕ್ಷಿಣೆಮಾಡುವನು. ಆ ಸಮಯದಲ್ಲಿ ಎಲ್ಲ ಲೋಕಪಾಲಕರೂ ಮತ್ತು ಭೂಪಾಲಕರೂ ಈತನಿಗೆ ಕಪ್ಪ-ಕಾಣಿಕೆಗಳನ್ನು ಸಮರ್ಪಿಸುವರು ಮತ್ತು ಆ ಭೂಪಾಲಕರ ಸ್ತ್ರೀಯರು ಈತನು ಸಾಕ್ಷಾತ್ ಚಕ್ರಧಾರಿ ಶ್ರೀಹರಿಯೆಂದೇ ತಿಳಿದು ಈತನ ಗುಣಗಾನವನ್ನು ಮಾಡುವರು.

ಅಯಂ ಮಹೀಂ ಗಾಂ ದುದುಹೇಽಧಿರಾಜಃ
ಪ್ರಜಾಪತಿರ್ವೃತ್ತಿಕರಃ ಪ್ರಜಾನಾಮ್ ।
ಯೋ ಲೀಲಯಾದ್ರೀನ್ಸ್ವಶರಾಸಕೋಟ್ಯಾ
ಭಿನ್ದನ್ಸಮಾಂ ಗಾಮಕರೋದ್ಯಥೇನ್ದ್ರಃ ॥೨೨॥

ವಿಸ್ಫೂರ್ಜಯನ್ನಾಜಗವಂ ಧನುಃ ಸ್ವಯಂ
ಯದಾಚರತ್ಕ್ಷ್ಮಾಮವಿಷಹ್ಯಮಾಜೌ ।
ತದಾ ನಿಲಿಲ್ಯುರ್ದಿಶಿ ದಿಶ್ಯಸನ್ತೋ
ಲಾಙ್ಗೂಲಮುದ್ಯಮ್ಯ ಯಥಾ ಮೃಗೇನ್ದ್ರಃ ॥೨೩॥

ಈ ರಾಜಾಧಿರಾಜನು ಪ್ರಜಾಪಾಲಕನಾಗಿ ಪ್ರಜೆಗಳು ಜೀವನ ಯಾತ್ರೆಯನ್ನು ನಡೆಸುವುದಕ್ಕಾಗಿ ಗೋರೂಪವನ್ನು ತಳೆದ ಭೂಮಿಯನ್ನು

ಕರೆಯುವನು ಮತ್ತು ಇಂದ್ರನಂತೆ ಲೀಲಾಜಾಲವಾಗಿ ಪರ್ವತಗಳನ್ನು ತನ್ನ ಧನುಸ್ಸಿನ ತುದಿಗಳಿಂದ ಒಡೆದುಹಾಕಿ ಭೂಮಿಯನ್ನು ಸಮಮಟ್ಟವಾಗಿಸುವನು. ಯುದ್ಧಭೂಮಿಯಲ್ಲಿ ಯಾವನೂ ಈ ವೀರಾಧಿವೀರನ ವೇಗವನ್ನು ಸಹಿಸಲಾರನು. ಅರಣ್ಯದಲ್ಲಿ ಬಾಲವನ್ನು ಎತ್ತಿಕೊಂಡು ಸಂಚಾರಮಾಡುವ ಕೇಸರಿಯಂತೆ–ತನ್ನ 'ಆಜಗವ'* ವೆಂಬ ಧನುಸ್ಸನ್ನು ಟಂಕಾರಮಾಡುತ್ತಾ ಈತನು ಭೂಮಂಡಲದಲ್ಲಿ ಸಂಚರಿಸತೊಡಗಿದಾಗ ದುಷ್ಟಜನರೆಲ್ಲರೂ ಎಲ್ಲೆಲ್ಲಿಯೋ ಅವಿತುಕೊಂಡುಬಿಡುವರು.

ಏಷೋಽಶ್ವಮೇಧಾನ್ ಶತಮಾಜಹಾರ
ಸರಸ್ವತೀ ಪ್ರಾದುರಭಾವಿ ಯತ್ರ ।
ಆಹಾರಷೀದ್ಯಸ್ಯ ಹಯಂ ಪುರನ್ದರಃ
ಶತಕ್ರತುಶ್ಚರಮೇ ವರ್ತಮಾನೇ ॥೨೪॥

ಏಷ ಸ್ವಸದ್ಮೋಪವನೇ ಸಮೇತ್ಯ
ಸನತ್ಕುಮಾರಂ ಭಗವನ್ತಮೇಕಮ್ ।
ಆರಾಧ್ಯ ಭಕ್ತ್ಯಾ ಲಭತಾಮಲಂ ತ-
ಜ್ಜ್ಞಾನಂ ಯತೋ ಬ್ರಹ್ಮ ಪರಂ ವಿದನ್ತಿ ॥೨೫॥

ಈ ಚಕ್ರವರ್ತಿಯು ಸರಸ್ವತೀನದಿಯು ಹುಟ್ಟುವ ಜಾಗದಲ್ಲಿ ನೂರು ಅಶ್ವಮೇಧಯಾಗಗಳನ್ನು ಮಾಡುವನು. ಅವುಗಳಲ್ಲಿ ಕೊನೆಯ ಯಜ್ಞವನ್ನು ಆಚರಿಸುವಾಗ ಇಂದ್ರನು ಈತನ ಯಜ್ಞಾಶ್ವವನ್ನು ಅಪಹರಿಸಿಕೊಂಡು ಹೋಗುವನು.

ಈ ಮಹಾತ್ಮನಿಗೆ ಒಮ್ಮೆ ಅರಮನೆಯ ಉದ್ಯಾನವನದಲ್ಲಿ ಭಗವಂತನಾದ ಸನತ್ಕುಮಾರನ ಭೇಟಿಯಾಗುವುದು. ಆಗ ಆ ಮುನಿಶ್ರೇಷ್ಠನನ್ನು

---

* ಅಜಗ ಎಂದರೆ ವಿಷ್ಣು. ವಿಷ್ಣುವನ್ನು ಬಾಣದ ರೂಪದಲ್ಲಿ ಪಡೆದ ಧನುಸ್ಸು ಶಿವಧನುಸ್ಸು–ಅಜಗವ. ಶಿವನ ಧನುಸ್ಸಿನಂತೆ ದೃಢವಾಗಿರುವುದು ಆಜಗವ.
(ಅಮರಸುಧಾ)

ಏಕಾಂತದಲ್ಲಿ ತಾನೊಬ್ಬನೇ ಭಕ್ತಿಯಿಂದ ಆರಾಧಿಸಿ, ಆತನಿಂದ ಪರಬ್ರಹ್ಮದ ಪ್ರಾಪ್ತಿಗೆ ಕಾರಣವಾದ ಶುದ್ಧವಾದ ಜ್ಞಾನವನ್ನು ಈತನು ಪಡೆಯುವನು.

ತತ್ರ ತತ್ರ ಗಿರಸ್ತಾಸ್ತಾ ಇತಿ ವಿಶ್ರುತವಿಕ್ರಮಃ ।
ಶ್ರೋಷ್ಯತ್ಯಾತ್ಮಾಶ್ರಿತಾ ಗಾಥಾಃ ಪೃಥುಃ ಪೃಥುಪರಾಕ್ರಮಃ ॥೨೯॥

ದಿಶೋ ವಿಜಿತ್ಯಾಪ್ರತಿರುದ್ಧಚಕ್ರಃ
ಸ್ವತೇಜಸೋತ್ಪಾಟಿತಲೋಕಶಲ್ಯಃ ।
ಸುರಾಸುರೇನ್ದ್ರೈರುಪಗೀಯಮಾನ-
ಮಹಾನುಭಾವೋ ಭವಿತಾ ಪತಿರ್ಭುವಃ ॥೩೦॥

ಹೀಗೆ ಈತನ ಪರಾಕ್ರಮಗಳು ಜನರಲ್ಲಿ ಹರಡಿ ಪ್ರಸಿದ್ಧವಾಗಲು– ಪರಮಪರಾಕ್ರಮಿಯಾದ ಈ ಮಹಾರಾಜನಿಗೆ ಎಲ್ಲೆಲ್ಲಿಯೂ ತನ್ನ ಚರಿತ್ರದ ಹೊಗಳಿಕೆಯೇ ಕೇಳಿಬರುವುದು.

ಮಹಾವೀರನಾದ ಈತನ ಆಜ್ಞೆಯನ್ನು ಯಾವನೂ ವಿರೋಧಿಸ ಲಾರನು. ಎಲ್ಲ ದಿಕ್ಕುಗಳನ್ನೂ ಗೆದ್ದು ತನ್ನ ತೇಜಸ್ಸಿನಿಂದ ಪ್ರಜೆಗಳ ಕಷ್ಟ-ಕಾರ್ಪಣ್ಯಗಳೆಂಬ ಮುಳ್ಳನ್ನು ತೆಗೆದುಹಾಕಿ ಈತನು ಸಮಸ್ತಭೂಮಂಡಲದ ಶಾಸಕನಾಗುವನು. ಆಗ ದೇವತೆಗಳೂ ಮತ್ತು ಅಸುರರೂ ಈತನ ವಿಪುಲ ವಾದ ಪ್ರಭಾವವನ್ನು ಹಾಡಿ ಹೊಗಳುವರು."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಚತುರ್ಥಸ್ಕಂಧದ ೧೬ನೆಯ ಅಧ್ಯಾಯವು ಮುಗಿಯಿತು.

ಚತುರ್ಥಸ್ಕಂಧ ೧೭ನೆಯ ಅಧ್ಯಾಯ

ಪೃಥುಮಹಾರಾಜನು ಭೂದೇವಿಯ ಮೇಲೆ ಕೋಪಗೊಂಡುದು : ಭೂದೇವಿಯು ಆತನನ್ನು ಸ್ತುತಿಸಿದುದು

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ಏವಂ ಸ ಭಗವಾನ್ವೈನ್ಯಃ ಖ್ಯಾಪಿತೋ ಗುಣಕರ್ಮಭಿಃ ।
ಛನ್ದಯಾಮಾಸ ತಾನ್ಕಾಮೈಃ ಪ್ರತಿಪೂಜ್ಯಾಭಿನನ್ದ್ಯ ಚ ॥೧॥

ಬ್ರಾಹ್ಮಣಪ್ರಮುಖಾನ್ವರ್ಣಾನ್ಭೃತ್ಯಾಮಾತ್ಯಪುರೋಧಸಃ ।
ಪೌರಾಞ್ಜಾನಪದಾನ್ ಶ್ರೇಣೀಃ ಪ್ರಕೃತೀಃ ಸಮಪೂಜಯತ್ ॥೨॥

ಹೀಗೆ ಆ ವಂದಿ-ಮಾಗಧರು ತನ್ನ ಗುಣಗಳನ್ನೂ ಮತ್ತು ಕರ್ಮಗಳನ್ನೂ ವರ್ಣಿಸಿ ಸ್ತೋತ್ರಮಾಡಲಾಗಿ–ಆ ಪೃಥುಮಹಾರಾಜನೂ ಅವರನ್ನು ಅಭಿನಂದಿಸಿ, ಇಷ್ಟವಾದ ವಸ್ತುಗಳನ್ನು ಕೊಟ್ಟು ಸಂತೋಷ ಪಡಿಸಿದನು. ಹಾಗೆಯೇ ಬ್ರಾಹ್ಮಣರೇ ಮುಂತಾದ ನಾಲ್ಕು ವರ್ಣಗಳಿಗೂ, ಸೇವಕರಿಗೂ, ಮಂತ್ರಿಗಳಿಗೂ, ಪುರೋಹಿತರಿಗೂ, ಪುರಜನರಿಗೂ, ದೇಶವಾಸಿಗಳಿಗೂ, ಬೇರೆ-ಬೇರೆ ಉದ್ಯೋಗವುಳ್ಳವರಿಗೂ ಮತ್ತು ಆಜ್ಞಾನುವರ್ತಿಗಳಾದ ಇತರರಿಗೂ ಸತ್ಕಾರವನ್ನು ಮಾಡಿದನು.

ಮೈತ್ರೇಯರ ಈ ಹೇಳಿಕೆಯನ್ನು ಕೇಳಿ ವಿದುರನು ಅವರನ್ನು ಹೀಗೆ ಪ್ರಶ್ನಿಸಿದನು :

“ಪೂಜ್ಯರೇ! ಪೃಥ್ವಿಯು ನಾನಾರೂಪಗಳನ್ನು ತಾಳಬಲ್ಲವಳು. ಆಕೆಯು ಏತಕ್ಕಾಗಿ ಗೋವಿನ ರೂಪವನ್ನೇ ತಾಳಿದಳು? ಪೃಥುಮಹಾ ರಾಜನು ಗೋರೂಪದಲ್ಲಿದ್ದ ಆಕೆಯನ್ನು ಕರೆದಾಗ ಆಕೆಗೆ ಕರುವಾದವರು ಯಾರು? ಹಾಲು ಕರೆಯುವ ಪಾತ್ರೆ ಯಾವುದಾಯಿತು? ಪೃಥ್ವಿ ಯಾದರೋ ಮೊದಲಿನಿಂದಲೂ ಸ್ವಭಾವವಾಗಿಯೇ ಹಳ್ಳ-ತಿಟ್ಟುಗಳಿಂದ ಕೂಡಿರುವುದೇ ಆಗಿತ್ತು. ಅದನ್ನು ಅವನು ಹೇಗೆ ಸಮತಲವನ್ನಾಗಿ ಮಾಡಿ ದನು? ಇಂದ್ರನು ಆತನ ಯಜ್ಞಾಶ್ವವನ್ನು ಏಕೆ ಅಪಹರಿಸಿಕೊಂಡು ಹೋದನು? ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದ ಭಗವಾನ್ ಸನತ್ಕುಮಾರರಿಂದ ಜ್ಞಾನ-ವಿಜ್ಞಾನಗಳನ್ನು ಪಡೆದು ಆ ರಾಜರ್ಷಿಯು ಯಾವ ಗತಿಯನ್ನು ಪಡೆ ದನು? ಪೃಥುಮಹಾರಾಜನ ರೂಪದಲ್ಲಿ ಭಗವಂತನಾದ ಶ್ರೀಕೃಷ್ಣಪರ ಮಾತ್ಮನೇ ಅವತಾರ ಮಾಡಿದನಲ್ಲವೇ? ಆದ್ದರಿಂದ ಪುಣ್ಯಕೀರ್ತಿಯಾದ ಶ್ರೀಹರಿಯು ಆ ಪೃಥುಚಕ್ರವರ್ತಿಯೆಂಬ ಅವತಾರಕ್ಕೆ ಸಂಬಂಧಪಟ್ಟ ಇನ್ನೂ ಯಾವ-ಯಾವ ಪವಿತ್ರಚರಿತ್ರೆಗಳುಂಟೋ–ಅವೆಲ್ಲವನ್ನೂ ನನಗೆ ತಿಳಿ ಸೋಣವಾಗಲಿ. ನಾನು ತಮ್ಮಲ್ಲಿಯೂ ಮತ್ತು ಶ್ರೀಕೃಷ್ಣಪರಮಾತ್ಮನಲ್ಲಿಯೂ ಅತ್ಯಂತ ಅನುರಾಗವುಳ್ಳ ಭಕ್ತನಾಗಿದ್ದೇನೆ. ಕೃಪೆಯಿಟ್ಟು ನನಗೆ ಆ ವೃತ್ತಾಂತವನ್ನು ಹೇಳುವ ಅನುಗ್ರಹಮಾಡಿರಿ.”

ಸೂತಪುರಾಣಿಕರು ಶೌನಕಾದಿಮಹರ್ಷಿಗಳಿಗೆ ಕಥಾಶ್ರವಣಮಾಡಿ ಸುತ್ತಾ ಹೇಳುತ್ತಾರೆ :

ಹೀಗೆ ಶ್ರೀವಾಸುದೇವನ ಕಥೆಯನ್ನು ಹೇಳಬೇಕೆಂದು ವಿದುರನು ಪ್ರೇರಿಸಲು–ಮೈತ್ರೇಯರು ಮನಸ್ಸಿನಲ್ಲಿ ಸಂತೋಷಗೊಂಡು ಆತನನ್ನು ಪ್ರಶಂಸೆಮಾಡಿ ಪೃಥುವಿನ ವೃತ್ತಾಂತವನ್ನು ಮುಂದುವರಿಸಿದರು :

"ಎಲೈ ಭಾಗವತೋತ್ತಮನೇ! ಬ್ರಾಹ್ಮಣರು ಪೃಥುವಿಗೆ ಪಟ್ಟಾಭಿಷೇಕ ಮಾಡಿ ಆತನನ್ನು ಪ್ರಜಾಪಾಲಕನನ್ನಾಗಿ ಘೋಷಣೆಮಾಡಿದರು. ಆಗ ಭೂಮಿಯಲ್ಲಿ ಅನ್ನವೇ ಇಲ್ಲದಿರಲು ಜನರು ಹಸಿವಿನಿಂದ ಕೃಶರಾಗಿ ಸ್ವಾಮಿಯಾದ ಪೃಥುಮಹಾರಾಜನ ಬಳಿ ಬಂದು ವಿಜ್ಞಾಪಿಸಿದರು :

"ಎಲೈ ರಾಜೇಂದ್ರನೇ! ಪೊಟರೆಯಲ್ಲಿರುವ ಬೆಂಕಿಯಿಂದ ಮರಗಳು ಕರಕಾಗಿ ಹೋಗುವಂತೆ–ನಾವು ಭಯಂಕರವಾದ ಜಠರಾಗ್ನಿಯಿಂದ ಸುಟ್ಟು ಬೆಂಡಾಗಿಬಿಟ್ಟಿದ್ದೇವೆ. ನೀನು ಶರಣಾಗತವತ್ಸಲನು ಮತ್ತು ನಮಗೆ ಅನ್ನದಾತನಾದ ಪ್ರಭುವಾಗಿ ಮಹರ್ಷಿಗಳಿಂದ ನೇಮಿಸಲ್ಪಟ್ಟಿದ್ದೀಯೆ. ನೀನು ಸಮಸ್ತಲೋಕಗಳಿಗೂ ರಕ್ಷಕನು. ಆದುದರಿಂದ ನಿನ್ನನ್ನು ಮೊರೆಹೊಕ್ಕಿದ್ದೇವೆ. ಮಹಾಪ್ರಭುವೇ! ರಾಜರಾಜೇಶ್ವರನೇ! ನಮ್ಮ ಪ್ರಾಣಗಳು ಆಹಾರವಿಲ್ಲದೇ ನಾಶಹೊಂದುವುದಕ್ಕೆ ಮೊದಲೇ ನಮಗೆ ಅನ್ನವನ್ನು ನೀಡಲು ಪ್ರಯತ್ನಿಸು. ನೀನು ಪ್ರಜಾಪಾಲಕನಾದುದರಿಂದ ಪ್ರಜೆಗಳಾದ ನಮ್ಮನ್ನು ನೀನೇ ಕಾಪಾಡಬೇಕಾಗಿದೆ." (ಶ್ಲೋಕ 3-11)

ಕುರುಶ್ರೇಷ್ಠನೇ! ಕೇಳು. ಹೀಗೆ ಪ್ರಜೆಗಳು ಗೋಳಾಡುತ್ತಾ ಮೊರೆಯಿಡುವುದನ್ನು ಕೇಳಿ ಪೃಥುಮಹಾರಾಜನು ಬಹಳ ಹೊತ್ತು ಚಿಂತಿಸಿ ಆ ಅನ್ನಕ್ಷಾಮಕ್ಕೆ ಕಾರಣವೇನೆಂಬುದನ್ನು ಕಂಡುಕೊಂಡನು. ಭೂಮಿಯು ಬೀಜಗಳನ್ನು ಮೊಳಕೆ ಬರದಂತೆ ನುಂಗಿಹಾಕುತ್ತಿದೆ. ತನ್ನಲ್ಲಿಯೇ ಅಡಗಿಸಿಕೊಳ್ಳುತ್ತಿದೆ. ಅದೇ ಈ ವಿಪತ್ತಿಗೆ ಕಾರಣ ಎಂದು ನಿಶ್ಚಯಿಸಿ, ಆತನು ತ್ರಿಪುರಸಂಹಾರಿಯಾದ ರುದ್ರದೇವರಂತೆ ಕಡುಕೋಪದಿಂದ ಬಿಲ್ಲನ್ನು ತೆಗೆದುಕೊಂಡು ಭೂಮಿಯನ್ನು ಧ್ವಂಸಮಾಡಿಬಿಡಬೇಕೆಂದು ಧನುಸ್ಸಿನಲ್ಲಿ ಬಾಣವನ್ನು ಹೂಡಿದನು. ಅದನ್ನು ಕಂಡು ಭೂದೇವಿಯು ಭಯಗೊಂಡು

ಗಡಗಡನೆ ನಡುಗುತ್ತಾ ಹಸುವಿನ ರೂಪವನ್ನು ತಾಳಿ–ಬೇಡನು ಬೆನ್ನಟ್ಟಿದ ಜಿಂಕೆಯಂತೆ ಓಡಿಹೋಗತೊಡಗಿದಳು. ಅದನ್ನು ಕಂಡು ಪೃಥುಮಹಾರಾಜನ ಕಣ್ಣುಗಳು ಕ್ರೋಧದಿಂದ ಮತ್ತೂ ಕೆಂಪೇರಿದುವು. ಆತನು ಬಿಲ್ಲಿನಲ್ಲಿ ಬಾಣವನ್ನು ಹೂಡಿ ಭೂದೇವಿಯನ್ನು ಆಕೆಯು ಓಡಿದ ಕಡೆಗಳಲ್ಲೆಲ್ಲಾ ಅಟ್ಟಿಸಿಕೊಂಡು ಹೋದನು. ದಿಕ್ಕು-ದಿಕ್ಕುಗಳಲ್ಲೂ, ಸ್ವರ್ಗದಲ್ಲೂ, ಆಕಾಶ ದಲ್ಲೂ ಭೂದೇವಿಯು ಎಲ್ಲೆಲ್ಲಿ ಓಡಿದರೂ ಅಲ್ಲೆಲ್ಲಾ ಪೃಥುಸಾರ್ವಭೌಮನು ಆಯುಧವನ್ನು ಕೈಯಲ್ಲಿ ಹಿಡಿದು ಆಕೆಯ ಹಿಂದೆ ಕಾಣಿಸಿಕೊಳ್ಳುತ್ತಿದ್ದನು. ಮನುಷ್ಯನನ್ನು ಮೃತ್ಯುವಿನ ದವಡೆಯಿಂದ ಯಾರೂ ರಕ್ಷಿಸಲಾರರಲ್ಲವೇ! ಹಾಗೆಯೇ ವೇನಪುತ್ರನ ದೆಸೆಯಿಂದ ಪೃಥಿವಿಯನ್ನು ಯಾರೂ ರಕ್ಷಿಸಲಾರದೇ ಹೋದರು. ಆಗ ಆಕೆಯು ಅತ್ಯಂತಭಯಭೀತಳಾಗಿ ಅತಿದುಃಖಗೊಂಡ ಮನಸ್ಸಿನಿಂದ ಹಿಂದಿರುಗಿ ಆ ಮಹಾಭಾಗನಾದ ರಾಜೇಂದ್ರನಲ್ಲಿ ಮೊರೆ ಯಿಟ್ಟಳು : (ಶ್ಲೋಕ 12-17)

ಉವಾಚ ಚ ಮಹಾಭಾಗಂ ಧರ್ಮಜ್ಞಾಪನ್ನವತ್ಸಲ ।
ತ್ರಾಹಿ ಮಾಮಪಿ ಭೂತಾನಾಂ ಪಾಲನೇಽವಸ್ಥಿತೋ ಭವಾನ್ ॥೧೮॥

ಸ ತ್ವಂ ಜಿಘಾಂಸಸೇ ಕಸ್ಮಾದ್ದೀನಾಮಕೃತಕಿಲ್ಬಿಷಾಮ್ ।
ಅಹನಿಷ್ಯತ್ಕಥಂ ಯೋಷಾಂ ಧರ್ಮಜ್ಞ ಇತಿ ಯೋ ಮತಃ ॥೧೯॥

ಪ್ರಹರನ್ತಿ ನ ವೈ ಸ್ತ್ರೀಷು ಕೃತಾಗಃಸ್ವಪಿ ಜನ್ತವಃ ।
ಕಿಮುತ ತ್ವದ್ವಿಧಾ ರಾಜನ್ಕರುಣಾ ದೀನವತ್ಸಲಾಃ ॥೨೦॥

"ಧರ್ಮಜ್ಞನೂ–ಶರಣಾಗತವತ್ಸಲನೂ ಆದ ಎಲೈ ರಾಜೇಂದ್ರನೇ! ಸಮಸ್ತಪ್ರಾಣಿಗಳನ್ನೂ ರಕ್ಷಿಸುವುದರಲ್ಲಿ ತತ್ಪರನಾದ ನೀನು ಭೂತಕೋಟಿ ಗಳಲ್ಲಿ ಸೇರಿರುವ ನನ್ನನ್ನೂ ರಕ್ಷಿಸಬೇಕಲ್ಲವೇ? ಹೀಗಿರುವಾಗ ನೀನು, ದೀನಳೂ–ನಿರಪರಾಧಿನಿಯೂ ಆಗಿರುವ ನನ್ನನ್ನು ಏಕೆ ಕೊಲ್ಲಲು ಬಯಸು ತ್ತಿದ್ದೀಯೆ? ಧರ್ಮಜ್ಞನೆಂದು ಪ್ರಸಿದ್ಧನಾಗಿರುವ ನೀನು ಹೆಂಗಸಾಗಿರುವ ನನ್ನನ್ನು ವಧಿಸುವುದು ಉಚಿತವೇ? ಹೆಂಗಸರು ಅಪರಾಧಗಳನ್ನೇ ಮಾಡಿ ದ್ದರೂ ಅವರನ್ನು ಸಾಮಾನ್ಯಮನುಷ್ಯರೂ ಕೊಂದುಹಾಕುವುದಿಲ್ಲ. ಇನ್ನು

ಕರುಣಾಳುವೂ–ದೀನವತ್ಸಲನೂ ಆಗಿರುವ ನಿನ್ನಂತಹವರ ವಿಷಯದಲ್ಲಿ ಹೇಳತಕ್ಕದ್ದೇನಿದೆ?

ಮಾಂ ವಿಪಾಟ್ಯಾಜರಾಂ ನಾವಂ ಯತ್ರ ವಿಶ್ವಂ ಪ್ರತಿಷ್ಠಿತಮ್ ।
ಆತ್ಮಾನಂ ಚ ಪ್ರಜಾಶ್ಚೇಮಾಃ ಕಥಮಮ್ಭಸಿ ಧಾಸ್ಯಸಿ ॥೨೧॥

ನಾನು ಒಂದು ದೃಢವಾದ ಹಡಗಿನಂತಿದ್ದು ಇಡೀ ಜಗತ್ತನ್ನು ಧರಿಸಿಕೊಂಡಿದ್ದೇನೆ. ಇಂತಹ ನನ್ನನ್ನು ಸಂಹರಿಸಿ ನೀನು ಪ್ರಜೆಗಳನ್ನು ನೀರಿನ ಮೇಲೆ ಹೇಗೆ ತಾನೇ ನೆಲೆಗೊಳಿಸುವೆ? ನೀನಾದರೂ ಅದರ ಮೇಲೆ ಹೇಗೆ ತಾನೇ ನೆಲೆಸುವೆ?"–ಎಂದು ದೈನ್ಯದಿಂದ ಪ್ರಾರ್ಥನೆಮಾಡುತ್ತಾ ಕೇಳಿದಳು.

ಪೃಥುವು ಆಕೆಗೆ ಹೀಗೆ ಉತ್ತರಿಸುತ್ತಾನೆ :

ವಸುಧೇ ತ್ವಾಂ ವಧಿಷ್ಯಾಮಿ ಮಚ್ಛಾಸನಪರಾಙ್ಮುಖೀಮ್ ।
ಭಾಗಂ ಬರ್ಹಿಷಿ ಯಾ ವೃಙ್ಕ್ತೇನ ತನೋತಿ ಚ ನೋ ವಸು ॥೨೨॥

"ಎಲೈ ಭೂಮಿಯೇ! ನೀನು ಭೂಪತಿಯೂ, ಪ್ರಜಾಪಾಲಕನೂ ಆದ ನನ್ನ ಆಜ್ಞೆಯನ್ನು ಉಲ್ಲಂಘಿಸಿದ್ದೀಯೆ. ಅಲ್ಲದೇ ನೀನು ಯಜ್ಞದಲ್ಲಿ ಹವಿರ್ಭಾಗವನ್ನು ದೇವತಾರೂಪದಲ್ಲಿ ಪರಿಗ್ರಹಿಸುತ್ತಿದ್ದರೂ ಅನ್ನ-ಧಾನ್ಯಾದಿ ಗಳನ್ನು ನಮಗೆ ಕೊಡುತ್ತಿಲ್ಲ. ಈ ಅಪರಾಧಗಳಿಗಾಗಿ ನಾನು ನಿನ್ನನ್ನು ಇಂದು ಕೊಂದುಹಾಕುವೆನು.

ಗೋವಿನ ರೂಪದಲ್ಲಿರುವ ನಿನ್ನನ್ನು ಕೊಂದರೆ ಗೋಹತ್ಯಾದೋಷವು ಬರುವುದಿಲ್ಲವೇ? ಎಂದರೆ : ನೀನು ದುಷ್ಟವಾದ ಗೋವು ; ಹಸಿರು ಹುಲ್ಲನ್ನು ಪ್ರತಿದಿನವೂ ತೃಪ್ತಿಯಾಗಿ ಮೇಯುತ್ತಿದ್ದರೂ–ಪೋಷಕನಿಗೆ ಹಾಲುಕೊಡದೇ ವಂಚನೆಮಾಡುತ್ತಿರುವ ಗೋವು. ಇಂತಹ ನಿನ್ನನ್ನು ವಧಿಸುವುದರಲ್ಲಿ ಏನೂ ದೋಷವಿಲ್ಲ. ಹಿಂದೆ ಬ್ರಹ್ಮದೇವರು ಲೋಕರಕ್ಷಣೆಗಾಗಿ ಉತ್ಪಾದನೆಮಾಡಿದ ಅನ್ನಾದಿಬೀಜಗಳನ್ನು ನುಂಗಿಹಾಕಿ, ನನ್ನನ್ನೂ ತಿರಸ್ಕರಿಸುತ್ತಾ, ಸಸ್ಯಗಳನ್ನು ಮೊಳೆಯಿಸದೇ ಇರುವ ಅಪರಾಧಿನೀ ಮತ್ತು ಮೂರ್ಖಳು ನೀನು. ಆದುದರಿಂದ ನಿನ್ನನ್ನು ನನ್ನ ಬಾಣಗಳಿಂದ ತುಂಡರಿಸಿ ಹಸಿವಿನಿಂದ ಕಂಗೆಟ್ಟು ಗೋಳಾಡುತ್ತಿರುವ ನನ್ನ ಪ್ರಜೆಗಳಿಗೆ ನಿನ್ನ ಕೊಬ್ಬಿನಿಂದಲೇ ಅನ್ನಾಹಾರಗಳ ತೃಪ್ತಿಯನ್ನುಂಟುಮಾಡುವೆನು. (ಶ್ಲೋಕ 23-25)

ಪುಮಾನ್ಯೋಷಿದುತ ಕ್ಲೀಬ ಆತ್ಮಸಮ್ಭಾವನೋಽಧರ್ಮಃ ।
ಭೂತೇಷು ನಿರನುಕ್ರೋಶೋ ನೃಪಾಣಾಂ ತದ್ವಧೋಽವಧಃ ॥೨೬॥

ದುರಹಂಕಾರಿಯಾಗಿ ಇತರ ಪ್ರಾಣಿಗಳಲ್ಲಿ ದಯೆಯನ್ನು ತೋರದೆ ಕೇವಲ ತನ್ನ ಪೋಷಣೆಯನ್ನೇ ಮಾಡಿಕೊಳ್ಳುವವನು–ಪುರುಷನಾಗಲೀ, ಸ್ತ್ರೀಯಾಗಲೀ, ನಪುಂಸಕನಾಗಲೀ–ಯಾರೇ ಆಗಿದ್ದರೂ ಅಂತಹವನನ್ನು ರಾಜರು ಕೊಂದುಹಾಕಬಹುದು. ಅಂತಹ ನೀಚನನ್ನು ಕೊಲ್ಲುವುದು ರಾಜರಿಗೆ ಕೊಲೆಯೆನಿಸುವುದಿಲ್ಲ.

ಆದುದರಿಂದ ಅತಿಗರ್ವಿಷ್ಠೆಯಾಗಿ, ಮದದಿಂದ ಕೊಬ್ಬಿದವಳಾಗಿ, ಮಾಯೆಯಿಂದ ಗೋರೂಪವನ್ನು ತಾಳಿರುವ ನಿನ್ನನ್ನು ನನ್ನ ಬಾಣಗಳಿಂದ ತುಂಡು-ತುಂಡಾಗಿಸಿ ಈ ಪ್ರಜೆಗಳನ್ನು ನನ್ನ ಯೋಗಬಲದಿಂದಲೇ ಧರಿಸಿ ಕಾಪಾಡುವೆನು."

ಹೀಗೆ ಮೃತ್ಯುವಿನ ಆಕಾರವನ್ನು ಹೊಂದಿದ ಸಾಕ್ಷಾತ್ ಯಮಧರ್ಮ ರಾಜನಂತೆ ಕ್ರುದ್ಧನಾಗಿದ್ದ ಆ ಭೂಪತಿಯನ್ನು ಕಂಡು ಭೂದೇವಿಯು ಆತನಿಗೆ ನಮಸ್ಕರಿಸಿ ಕೈಜೋಡಿಸಿಕೊಂಡು ಗಡ-ಗಡನೆ ನಡುಗುತ್ತಾ ಆತನನ್ನು ಹೀಗೆ ಸ್ತುತಿಸಿದಳು : (ಶ್ಲೋಕ 27-28)

ನಮಃ ಪರಸ್ಮೈ ಪುರುಷಾಯ ಮಾಯಯಾ
ವಿನ್ಯಸ್ತನಾನಾತನವೇ ಗುಣಾತ್ಮನೇ ।
ನಮಃ ಸ್ವರೂಪಾನುಭವೇನ ನಿರ್ಧೂತ-
ದ್ರವ್ಯಕ್ರಿಯಾಕಾರಕವಿಭ್ರಮೋರ್ಮಯೇ ॥೨೯॥

"ನೀನು ಸಾಕ್ಷಾತ್ ಪರಮಪುರುಷನು. ಮಾಯೆಯಿಂದ ಬಗೆ-ಬಗೆಯ ದೇಹಗಳನ್ನು ಧರಿಸಿ ಗುಣಮಯನಂತೆ ಕಾಣಿಸುತ್ತಿದ್ದರೂ ವಾಸ್ತವವಾಗಿ ತ್ರಿಗುಣಾತೀತನೂ, ಆತ್ಮಾನುಭಾವದಿಂದ ಅಧಿಭೂತ, ಅಧ್ಯಾತ್ಮ ಮತ್ತು ಅಧಿದೈವಸಂಬಂಧವಾದ ಅಭಿಮಾನವನ್ನೂ ಮತ್ತು ಆ ಅಭಿಮಾನ ದಿಂದುಂಟಾದ ರಾಗ-ದ್ವೇಷಗಳನ್ನೂ ಮೀರಿ ನಿಂತಿರುವ ಪರಬ್ರಹ್ಮವೇ ಆಗಿರುವೆ.*

---

* ಯಾವ ಪರಮಾತ್ಮನು ತನ್ನ ಶರೀರಭೂತವಾಗಿ ತನ್ನನ್ನು ಸೇರಿಕೊಂಡಿರುವ

ಯೇನಾಹಮಾತ್ಮಾಯತನಂ ವಿನಿರ್ಮಿತಾ
ಧಾತ್ರಾ ಯತೋಽಯಂ ಗುಣಸರ್ಗಸಂಗ್ರಹಃ ।
ಸ ಏವ ಮಾಂ ಹನ್ತುಮುದಾಯುಧಃ ಸ್ವರಾ-
ಡುಪಸ್ಥಿತೋಽನ್ಯಂ ಶರಣಂ ಕಮಾಶ್ರಯೇ ॥೩೦॥

ನೀನು ಇಡೀ ಜಗತ್ತನ್ನು ನಿರ್ಮಾಣಮಾಡಿದವನು. ಈ ತ್ರಿಗುಣಾತ್ಮಕವಾದ ಸೃಷ್ಟಿಯನ್ನು ರಚಿಸಿ, ನನ್ನನ್ನು ಸಮಸ್ತಜೀವಿಗಳಿಗೂ ಆಶ್ರಯವಾಗಿರುವಂತೆ ಮಾಡಿರುವವನೂ ನೀನೇ. ಹೀಗೆ ಸರ್ವಸ್ವತಂತ್ರನಾಗಿ, ಸರ್ವೇಶ್ವರನಾಗಿ, ನಿಯಾಮಕನಾಗಿರುವ ನೀನೇ ಆಯುಧಧಾರಿಯಾಗಿ ನನ್ನನ್ನು ಸಂಹರಿಸಲು ಬಂದಿರುವಾಗ ನಾನು ಬೇರೆ ಯಾರನ್ನು ತಾನೇ ಶರಣು ಹೊಂದಲಿ?

ಯ ಏತದಾದಾವಸೃಜಚ್ಚರಾಚರಂ
ಸ್ವಮಾಯಯಾತ್ಮಾಶ್ರಯಯಾವಿತರ್ಕ್ಯಯಾ ।
ತಯೈವ ಸೋಽಯಂ ಕಿಲ ಗೋಪ್ತುಮುದ್ಯತಃ
ಕಥಂ ನು ಮಾಂ ಧರ್ಮಪರೋ ಜಿಘಾಂಸತಿ ॥೩೧॥

ಪ್ರಕೃತಿಯಿಂದ ದೇವ-ಮನುಷ್ಯಾದಿ ಜೀವದೇಹಗಳನ್ನು ನಿರ್ಮಿಸಿ ಸತ್ತ್ವಾದಿಗುಣಗಳ ಪರಿಣಾಮಗಳಾದ ಗುಣಗಳನ್ನು ಪಡೆದು ಗುಣಮಯವಾಗಿರುವಂತೆ ಕಾಣುತ್ತಿದ್ದರೂ ಪ್ರಕೃತಿ-ಪುರುಷ ಮತ್ತು ಈಶ್ವರರ ಯಾಥಾತ್ಮ್ಯಜ್ಞಾನದಿಂದ ಯಾವ ಭ್ರಾಂತಿಯೂ ಇಲ್ಲದೇ, ಹಸಿವು-ಬಾಯಾರಿಕೆಗಳೇ ಮುಂತಾದ ಊರ್ಮಿ (ಅಲೆ)ಗಳಿಲ್ಲದೇ ಸರ್ವಜ್ಞನೂ, ಸರ್ವಶಕ್ತನೂ ಆಗಿದ್ದಾನೆಯೋ–ಆ ಭಗವಂತನಿಗೆ ನಮಸ್ಕಾರವು.

(ವೀರರಾಘವೀಯ)

ಹಸಿವು, ಬಾಯಾರಿಕೆ, ಶೋಕ, ಮೋಹ, ಮುಪ್ಪು ಮತ್ತು ಮೃತ್ಯು–ಈ ಆರು ದೋಷಗಳಿಗೆ ಷಡೂರ್ಮಿಗಳೆಂದು ಹೆಸರು.

ಯಾವ ಶ್ರೀಭಗವಂತನು ಚಿತ್ಪ್ರಕೃತಿಯಿಂದ ಬ್ರಹ್ಮಾದಿಜೀವಗಳ ದೇಹಗಳನ್ನು ನಿರ್ಮಾಣ ಮಾಡಿದರೂ–ಸತ್ತ್ವಾದಿಗುಣಗಳಿಂದ ರಹಿತನಾಗಿ, ಸ್ವರೂಪಾನುಭವದಿಂದ ಸಾತ್ತ್ವಿಕ, ರಾಜಸ ಮತ್ತು ತಾಮಸಾಹಂಕಾರಗಳೂ ಮತ್ತು ತಜ್ಜನ್ಯವಾದ ಸಂಶಯವೇ ಮುಂತಾದ ಅಂತಃಕರಣಧರ್ಮಗಳೂ ಇಲ್ಲದವನಾಗಿ ನಿರ್ಲಿಪ್ತನಾಗಿದ್ದಾನೆಯೋ–ಅಂತಹ ಪರಮಾತ್ಮನಿಗೆ ನಮಸ್ಕಾರವು. (ವಿಜಯಧ್ವಜೀಯ)

ಪರಮಾತ್ಮನು ಅಪ್ರಾಕೃತಗುಣಪರಿಪೂರ್ಣನೂ ಮತ್ತು ಪ್ರಾಕೃತಗುಣರಹಿತನೂ

ಎಲೈ ಭಗವಂತನೇ! ನಿನ್ನನ್ನು ಆಶ್ರಯಿಸಿಕೊಂಡಿರುವ ಜೀವಗಳಿಗೆ ಊಹಿಸುವುದಕ್ಕೂ ಅಸಾಧ್ಯವಾಗಿರುವ ಮಾಯಾಶಕ್ತಿಯಿಂದ ಈ ಚರಾಚರವಾದ ಜಗತ್ತನ್ನು ಸೃಷ್ಟಿಮಾಡಿರುವೆ. ಆ ಮಾಯಾಶಕ್ತಿಯಿಂದ ಈ ಜಗತ್ತಿನ ಪಾಲನೆಯನ್ನು ಮಾಡುವುದಕ್ಕಾಗಿ ಈಗ ಪ್ರಜಾಪಾಲಕ ಪೃಥುಮಹಾರಾಜನ ರೂಪದಲ್ಲಿ ಅವತಾರಮಾಡಿರುವೆ. ಹೀಗೆ ಪಾಲಕರೂಪದಲ್ಲಿರುವ ನೀನು ಸರ್ವಸ್ವತಂತ್ರನಾದರೂ ಸಂಹಾರಕಾರ್ಯವನ್ನು ಎಸಗಬಾರದು. ಧರ್ಮಪರಾಯಣನಾಗಿರುವ ನೀನು ಗೋರೂಪದಲ್ಲಿರುವ ನನ್ನನ್ನು ಕೊಲ್ಲಲು ಬಯಸುವುದು ಹೇಗೆ ತಾನೇ ಉಚಿತವೆನಿಸುವುದು?*

ನೂನಂ ಬತೇಶಸ್ಯ ಸಮೀಹಿತಂ ಜನೈ-
ಸ್ತನ್ಮಾಯಯಾ ದುರ್ಜಯಯಾಕೃತಾತ್ಮಭಿಃ ।
ನ ಲಕ್ಷ್ಯತೇ ಯಸ್ತ್ವಕರೋದಕಾರಯ-
ದ್ಯೋಽನೇಕ ಏಕಃ ಪರತಶ್ಚ ಈಶ್ವರಃ ॥೩೦॥

ಸರ್ಗಾದಿ ಯೋಽಸ್ಯಾನುರುಣದ್ಧಿ ಶಕ್ತಿಭಿ-
ರ್ದ್ರವ್ಯಕ್ರಿಯಾಕಾರಕಚೇತನಾತ್ಮಭಿಃ ।

ಆಗಿದ್ದಾನೆಂದು ಇಲ್ಲಿ ಸೂಚಿತವಾಗಿದೆ. ಅವನು ಸರ್ವಜ್ಞನೂ ಮತ್ತು ಸರ್ವಕಾರಣನೂ ಆಗಿರುವುದರಿಂದ ಅಪ್ರಾಕೃತಕಲ್ಯಾಣಗುಣಪರಿಪೂರ್ಣನೆಂದೂ, ಸ್ವರೂಪಾನುಭವದಿಂದ ರಾಗ-ದ್ವೇಷ-ಅಹಂಕಾರಾದಿ ಪ್ರಾಕೃತಗುಣಗಳಿಂದ ರಹಿತನಾಗಿದ್ದಾನೆಂದೂ ತಿಳಿಯಬೇಕು.
(ಸಿದ್ಧಾಂತಚಂದ್ರಿಕಾ)

ಮಾಯೆಯಿಂದ ಕೆಲವು ವೇಳೆಗಳಲ್ಲಿ ಘೋರವೂ–ಕೆಲವು ವೇಳೆಗಳಲ್ಲಿ ಸೌಮ್ಯವೂ ಆಗಿರುವ ದೇಹಗಳನ್ನು ರಚಿಸುತ್ತಾ ಗುಣಮಯನಾಗಿರುವಂತೆ ತೋರಿಬರುತ್ತಿದ್ದರೂ ಅಧಿಭೂತ-ಅಧ್ಯಾತ್ಮ-ಅಧಿದೈವಗಳ ಅಹಂಕಾರದಿಂದಲೂ ಮತ್ತು ಆ ಅಹಂಕಾರದಿಂದ ಉಂಟಾದ ರಾಗ-ದ್ವೇಷಾದಿ ಊರ್ಮಿಗಳಿಂದಲೂ ರಹಿತನಾಗಿರುವ ನಿನಗೆ ನಮಸ್ಕಾರವು.
(ಶ್ರೀಧರೀಯ) (ಶ್ಲೋಕ ೨೯)

---

* ಶುಕದೇವಕೃತವಾದ ಸಿದ್ಧಾಂತದೀಪಿಕಾವ್ಯಾಖ್ಯಾನದ ಪ್ರಕಾರ ಶ್ರೀಭಗವಂತನಲ್ಲಿ ಭೇದ-ಅಭೇದ ಎರಡೂ ಉಂಟು. **'ಅಭೇದಃ ಕೇವಲೋ ಭ್ರಾನ್ತಿಸ್ತಥಾ ಭೇದೋಽಪಿ ಕೇವಲಃ। ತಸ್ಮಾದುಚಿತಃ ಕರ್ತವ್ಯಃ ಭೇದಾಭೇದಮಯೋ ವಿಧಿಃ॥' 'ಏಕಸ್ಸನ್ ಬಹುಧಾ ವಿಚಾರಃ' 'ಏಕೋ ದೇವೋ ಬಹುಧಾ ಸನ್ನಿವಿಷ್ಟಃ' ಏಕತ್ವೇ ಸತಿ ನಾನಾತ್ವಂ ನಾನಾತ್ವೇ ಸತಿ ಚೈಕತಾ। ಅಚಿನ್ತ್ಯಂ ಬ್ರಹ್ಮಣೋ ರೂಪಂ**

ತಸ್ಮೈ ಸಮುನ್ನದ್ಧನಿರುದ್ಧಶಕ್ತಯೇ
ನಮಃ ಪರಸ್ಮೈ ಪುರುಷಾಯ ವೇಧಸೇ ॥೩೩॥

ನೀನು ಏಕಸ್ವರೂಪನಾಗಿದ್ದರೂ ಮಾಯೆಯಿಂದ ಅನೇಕರೂಪಿಯಾಗಿ ಕಾಣಿಸುತ್ತಿದ್ದೀಯೆ. ಬ್ರಹ್ಮದೇವರನ್ನು ಸೃಷ್ಟಿಮಾಡಿ ಅವರಿಂದ ವಿಶ್ವದ ರಚನೆಯನ್ನು ಮಾಡಿಸಿದ್ದೀಯೆ. ಇಂತಹ ಸಾಕ್ಷಾತ್ ಸರ್ವೇಶ್ವರನು ನೀನು. ನಿನ್ನ ಲೀಲೆಗಳನ್ನು ಜಿತೇಂದ್ರಿಯರಲ್ಲದ ಜನರು ಹೇಗೆ ತಾನೇ ತಿಳಿದಾರು? ಗೆಲ್ಲಲು ಅಶಕ್ಯವಾದ ನಿನ್ನ ಮಾಯೆಯಿಂದ ಅವರ ಬುದ್ಧಿಯು ಮರುಳಾಗಿದೆ. ಅವರು ನಿನ್ನ ಸಂಕಲ್ಪವನ್ನು ಹೇಗೆ ತಾನೇ ಅರಿತಾರು?

ಪಂಚಭೂತಗಳು, ಇಂದ್ರಿಯಗಳು, ಇವುಗಳ ಅಧಿಷ್ಠಾತೃದೇವತೆಗಳು, ಬುದ್ಧಿ ಮತ್ತು ಅಹಂಕಾರರೂಪವಾದ ಸ್ವಶಕ್ತಿಗಳಿಂದ ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಸಂಹಾರಗಳನ್ನು ಕ್ರಮವಾಗಿ ಮಾಡುವ ಪರಮೇಶ್ವರನು ನೀನೇ. ನಿನ್ನ ಈ ಶಕ್ತಿಗಳು ಬೇರೆ-ಬೇರೆ ಕಾರ್ಯಗಳಿಗಾಗಿ ಬೇರೆ-ಬೇರೆ ಸಮಯಗಳಲ್ಲಿ ಪ್ರಕಟವಾಗುತ್ತವೆ ಹಾಗೂ ಮರೆಯಾಗುತ್ತವೆ. ಅವು ಪ್ರಬಲಗಳಾಗಿ ಪರಸ್ಪರವಿರೋಧಿಗಳಾಗಿದ್ದರೂ ನಿನ್ನ ಆಜ್ಞಾನುಸಾರವಾಗಿ ಕೆಲಸ ಮಾಡುತ್ತವೆ.

ಸ ವೈ ಭವಾನಾತ್ಮವಿನಿರ್ಮಿತಂ ಜಗ-
ದ್ಭೂತೇನ್ದ್ರಿಯಾನ್ತಃಕರಣಾತ್ಮಕಂ ವಿಭೋ ।
ಸಂಸ್ಥಾಪಯಿಷ್ಯನ್ನಜ ಮಾಂ ರಸಾತಲಾ-
ದಭ್ಯುಜ್ಜಹಾರಾಮ್ಭಸ ಆದಿಸೂಕರಃ ॥೩೪॥

ಅಪಾಮುಪಸ್ಥೇ ಮಯಿ ನಾವ್ಯವಸ್ಥಿತಾಃ
ಪ್ರಜಾ ಭವಾನದ್ಯ ರಿರಕ್ಷಿಷುಃ ಕಿಲ ।
ಸ ವೀರಮೂರ್ತಿಃ ಸಮಭೂದ್ಧರಾಧರೋ
ಯೋ ಮಾಂ ಪಯಸ್ಯುಗ್ರಶರೋ ಜಿಘಾಂಸಸಿ ॥೩೫॥

ಕಸ್ತದ್ವೇದಿತುಮರ್ಹತಿ ॥' 'ಕೇಚಿದ್ಬಹುತ್ವೇನ ವದನ್ತಿ ದೈವಂ ಏಕಾತ್ಮನಾ ಕೇಚಿದಮುಂ ಪುರಾತನಮ್ । ವೇದಾನ್ತಸಂಸ್ಥಾಪಿತತತ್ತ್ವಯುಕ್ತಂ ದ್ರಷ್ಟುಂ ತಮೀಶಂ ವಯಮುದ್ಯತಾಃ ಸ್ಮಃ ।' ಇತ್ಯಾದಿ ಶ್ರುತಿ-ಸ್ಮೃತಿಗಳು ಇದಕ್ಕೆ ಪ್ರಮಾಣ. (ಶ್ಲೋಕ ೩೧)

ಎಲೈ ಜನ್ಮರಹಿತನಾದ ಪ್ರಭುವೇ! ನೀನು ರಚಿಸಿದ ಭೂತಗಳು, ಇಂದ್ರಿಯಗಳು ಮತ್ತು ಅಂತಃಕರಣರೂಪವಾದ ಜಗತ್ತಿನ ಸ್ಥಿತಿಗಾಗಿ ಆದಿವರಾಹರೂಪವನ್ನು ಧರಿಸಿ ನನ್ನನ್ನು ರಸಾತಲದ ನೀರಿನಿಂದ ಹೊರಗೆ ತಂದು ಕಾಪಾಡಿದವನು ನೀನೇ ಎಂಬುದು ನನಗೆ ನೆನಪಿದೆ. ಈ ರೀತಿ ಒಂದು ಬಾರಿ ನನ್ನನ್ನು ಉದ್ಧಾರಮಾಡಿ 'ಧರಾಧರ' ಎಂಬ ಹೆಸರು ಪಡೆದ ನೀನೇ ವೀರಮೂರ್ತಿಯಾಗಿ ಜಲದ ಮೇಲೆ ಹಡಗಿನಂತೆ ನಿಂತಿರುವ ನನ್ನನ್ನು ಆಶ್ರಯಿಸಿರುವ ಪ್ರಜೆಗಳನ್ನು ರಕ್ಷಿಸುವುದಕ್ಕಾಗಿ ಈಗ ಈ ಪೃಥು ಚಕ್ರವರ್ತಿಯ ರೂಪದಲ್ಲಿ ಅವತರಿಸಿರುವಾಗ–ಅತಿತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿ, 'ಹಾಲು ಕೊಡಲಿಲ್ಲ' ಎಂಬ ತಪ್ಪಿಗಾಗಿ ನನ್ನನ್ನು ಸಂಹರಿಸಲು ಬಯಸುತ್ತಿದ್ದೀಯೆ. ಭೂಮಿಯ ಉದ್ಧಾರಕನೇ ಭೂಮಿಯ ಸಂಹಾರಕನಾಗಬಹುದೇ? ನಿನ್ನ ಉದ್ದೇಶವೇನೆಂಬುದು ನನಗೆ ತಿಳಿಯುತ್ತಿಲ್ಲ.

ನೂನಂ ಜನೈರೀತಮೀಶ್ವರಾಣಾ-
ಮಸ್ಮದ್ವಿಧೈಸ್ತದ್ಗುಣಸರ್ಗಮಾಯಯಾ ।
ನ ಜ್ಞಾಯತೇ ಮೋಹಿತಚಿತ್ತವರ್ತ್ಮಭಿ-
ಸ್ತೇಭ್ಯೋ ನಮೋ ವೀರಯಶಸ್ಕರೇಭ್ಯಃ* ॥೩೬॥

ನಮ್ಮಂತಹ ಜೀವಗಳ ಚಿತ್ತವು ಈ ತ್ರಿಗುಣಾತ್ಮಕವಾದ ಸೃಷ್ಟಿಯನ್ನು ರಚನೆಮಾಡಿದ ನಿನ್ನ ಮಾಯೆಯಿಂದ ಮರುಳಾಗಿಬಿಟ್ಟಿದೆ. ಪ್ರಭು! ನಿನ್ನ ದಿವ್ಯಾವತಾರಕ್ರಿಯೆಗಳ ಉದ್ದೇಶವನ್ನು ಇಂತಹ ತಿಳಿಗೇಡಿಗಳಾದ ನಾವು ತಿಳಿಯಲಾರದೇ ಹೋದರೆ ಅದರಲ್ಲಿ ಅಚ್ಚರಿಯೇನೂ ಇಲ್ಲ. ಆದುದರಿಂದ ಮಹಾವೀರರಾದ ಭಕ್ತರ ಕೀರ್ತಿಯನ್ನು ಬೆಳೆಯಿಸುವ ನಿನ್ನ ದಿವ್ಯಾವತಾರಗಳಿಗೆ ಮತ್ತೆ-ಮತ್ತೆ ನಮಸ್ಕಾರಗಳು. ಇಂದ್ರಿಯಾದಿಗಳನ್ನು

---

* ಈ ನಿನ್ನ ಪ್ರಜೆಗಳೆಲ್ಲರೂ ನನ್ನ ಪ್ರಜೆಗಳೂ ಆಗಿದ್ದಾರೆ. ಆದರೆ ಅದರ ದುಷ್ಟತನವನ್ನು ಕಂಡು ಅವರಿಗೆ ಬುದ್ಧಿಕಲಿಸುವುದಕ್ಕಾಗಿ ನಾನು ಕೋಪದಿಂದ ಅವರಿಗೆ ಹಾಲುಕೊಡುವುದನ್ನು ಸ್ವಲ್ಪಕಾಲ ನಿಲ್ಲಿಸಿದ್ದೇನೆ. ಇದನ್ನೇ ಅಪರಾಧವೆಂದು ತಿಳಿದು ನೀನು ನನ್ನನ್ನು ದಂಡಿಸತೊಡಗಿದ್ದೀಯೆ–ಎಂದು ಪೃಥುವಿನಲ್ಲಿ ಭೂಮಿಯ ಬಿನ್ನಪ.
(ಸಾರಾರ್ಥದರ್ಶಿನೀವ್ಯಾಖ್ಯಾನ) (ಶ್ಲೋಕ ೩೬)

ಸಂಯಮಮಾಡಿ ವೀರೋಚಿತಕಾರ್ಯಗಳನ್ನು ಮಾಡುವ ನಿನ್ನ ಭಕ್ತರಿಗೂ ನಮಸ್ಕಾರವು."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಚತುರ್ಥಸ್ಕಂಧದ ೧೭ನೆಯ ಅಧ್ಯಾಯವು ಮುಗಿಯಿತು.

ಚತುರ್ಥಸ್ಕಂಧ ೧೮ನೆಯ ಅಧ್ಯಾಯ

ಗೋರೂಪಳಾದ ಭೂದೇವಿಯಿಂದ ಹಾಲನ್ನು ಕರೆದುದು

ಮೈತ್ರೇಯರು ವಿದುರನಿಗೆ ಹೇಳುತ್ತಾರೆ :

ಇತ್ಥಂ ಪೃಥುಮಭಿಷ್ಟೂಯ ರುಷಾ ಪ್ರಸ್ಫುರಿತಾಧರಮ್ ।
ಪುನರಾಹಾವನಿರ್ಭೀತಾ ಸಂಸ್ತಭ್ಯಾತ್ಮಾನಮಾತ್ಮನಾ ॥೧॥

"ಎಲೈ ವಿದುರನೇ! ಕೇಳು. ಭೂದೇವಿಯು–ಕೋಪದಿಂದ ತುಟಿಗಳು ಅದುರುತ್ತಿದ್ದ ಪೃಥುಮಹಾರಾಜನನ್ನು ಹೀಗೆ ಸ್ತೋತ್ರಮಾಡಿ, ಭಯವು ಹೋಗದಿರಲು ತನಗೆ ತಾನೇ ಸಮಾಧಾನ-ಧೈರ್ಯಗಳನ್ನು ತಂದುಕೊಂಡು ಪುನಃ ಆತನಲ್ಲಿ ಹೀಗೆ ಅರಿಕೆಮಾಡಿಕೊಂಡಳು.

ಸಂನಿಯಚ್ಛಾಭಿಭೋ ಮನ್ಯುಂ ನಿಬೋಧ ಶ್ರಾವಿತಂ ಚ ಮೇ ।
ಸರ್ವತಃ ಸಾರಮಾದತ್ತೇ ಯಥಾ ಮಧುಕರೋ ಬುಧಃ ॥೨॥

"ಎಲೈ ರಾಜೇಂದ್ರನೇ! ಕೋಪವನ್ನು ಉಪಸಂಹಾರಮಾಡು. ನನ್ನ ವಿಜ್ಞಾಪನೆಯನ್ನು ಲಾಲಿಸು. ಬುದ್ಧಿವಂತರು ದುಂಬಿಯಂತೆ ಎಲ್ಲ ಕಡೆಗಳಿಂದಲೂ ಸಾರವನ್ನು ಗ್ರಹಿಸಿಕೊಳ್ಳಬೇಕು.

ಅಸ್ಮಿಲ್ಲೋಕೇಽಥವಾಮುಷ್ಮಿನ್ಮುನಿಭಿಸ್ತತ್ತ್ವದರ್ಶಿಭಿಃ ।
ದೃಷ್ಟಾ ಯೋಗಾಃ ಪ್ರಯುಕ್ತಾಶ್ಚ ಪುಂಸಾಂ ಶ್ರೇಯಃಪ್ರಸಿದ್ಧಯೇ ॥೩॥

ತಾನಾತಿಷ್ಠತಿ ಯಃ ಸಮ್ಯಗುಪಾಯಾನ್ಪೂರ್ವದರ್ಶಿತಾನ್ ।
ಅವರಃ ಶ್ರದ್ಧಯೋಪೇತ ಉಪೇಯಾನ್ವಿಂದತೇಽಞ್ಜಸಾ ॥೪॥

ತತ್ತ್ವದರ್ಶಿಗಳಾದ ಮುನಿಗಳು ಈ ಲೋಕದಲ್ಲೂ ಮತ್ತು ಪರಲೋಕ ದಲ್ಲೂ ಮನುಷ್ಯರಿಗೆ ಶ್ರೇಯಸ್ಸನ್ನುಂಟುಮಾಡಲು ಹಲವಾರು ಉಪಾಯ

ಗಳನ್ನು ಕಂಡುಹಿಡಿದು ಆಚರಣೆಗೆ ತಂದಿರುವರು. ಈ ಲೋಕದಲ್ಲಿ ಸುಖಕ್ಕಾಗಿ ಕೃಷಿ-ವ್ಯಾಪಾರಗಳೇ ಮುಂತಾದ ಉಪಾಯಗಳನ್ನೂ, ಪರಲೋಕದ ಸುಖಕ್ಕಾಗಿ ಅಗ್ನಿಹೋತ್ರವೇ ಮುಂತಾದ ಉಪಾಯಗಳನ್ನೂ ತೋರಿಸಿ ಕೊಟ್ಟಿದ್ದಾರೆ. ಅವುಗಳನ್ನು ಶ್ರದ್ಧಾಪೂರ್ವಕವಾಗಿ ಚೆನ್ನಾಗಿ ಆಚರಿಸುವವರು ಶೀಘ್ರದಲ್ಲಿಯೇ ಇಷ್ಟಾರ್ಥಸಿದ್ಧಿಯನ್ನು ಪಡೆಯುವರು.

ತಾನನಾದೃತ್ಯ ಯೋಽವಿದ್ವಾನರ್ಥಾನಾರಭತೇ ಸ್ವಯಮ್ ।
ತಸ್ಯ ವ್ಯಭಿಚರನ್ತ್ಯರ್ಥಾ ಆರಬ್ಧಾಶ್ಚ ಪುನಃ ಪುನಃ ॥೫॥

ಯಾವನು ಅಜ್ಞಾನದಿಂದ ಅವುಗಳನ್ನು ಆಚರಿಸದೆಯೇ ತನ್ನ ಮನಸ್ಸಿಗೆ ತೋಚಿದ ಉಪಾಯಗಳನ್ನು ಆಶ್ರಯಿಸುತ್ತಾನೆಯೋ–ಅಂತಹವನ ಕೆಲಸಗಳು ಕೆಟ್ಟುಹೋಗುವುವು. ಮತ್ತೆ-ಮತ್ತೆ ಆಚರಣೆಮಾಡಿದರೂ ನಿಷ್ಫಲವಾಗುವುವು.

ಎಲೈ ಭೂಪತಿಯೇ! ಹಿಂದೆ ಬ್ರಹ್ಮದೇವರು ಪ್ರಾಣಿಗಳ ಆಹಾರಕ್ಕಾಗಿಯೂ ಮತ್ತು ಯಜ್ಞವೇ ಮುಂತಾದುವುಗಳ ಆಚರಣೆಗಾಗಿಯೂ ಯಾವ ಧಾನ್ಯಗಳನ್ನು ಸೃಷ್ಟಿಮಾಡಿದರೋ–ಅವುಗಳನ್ನು ವ್ರತ-ಸಂಯಮ ರಹಿತರಾದ ದುರಾಚಾರಿಗಳು ತಿನ್ನುತ್ತಿರುವುದನ್ನು ನಾನು ನೋಡಿದೆನು. ಲೋಕಪಾಲನೆಯ ಹೊಣೆಹೊತ್ತಿರುವ ನಿಮ್ಮಂತಹ ರಾಜರೂ ನನ್ನನ್ನು ಪಾಲನೆಮಾಡಿ ಆದರಿಸುವುದನ್ನು ಬಿಟ್ಟುಬಿಟ್ಟರು. ಅದರಿಂದಾಗಿ ಎಲ್ಲ ಜನರೂ ಕಳ್ಳರಂತೆ ಆಗಿಬಿಟ್ಟರು. ಆದ್ದರಿಂದಲೇ ನಾನು ಮುಂದೆ ಯಜ್ಞಾದಿಗಳಿಗೆ ಒದಗಿಬರಲೆಂದು ಉಳಿದ ಆಹಾರಬೀಜಗಳೆಲ್ಲವನ್ನೂ ನುಂಗಿಬಿಟ್ಟೆನು.

ಹೀಗೆಯೇ ಬಹಳ ಕಾಲವು ಕಳೆದುಹೋದುದರಿಂದ ಆ ಧಾನ್ಯಗಳೆಲ್ಲವೂ ನನ್ನ ಹೊಟ್ಟೆಯಲ್ಲೇ ಅರಗಿಹೋಗಿವೆ. ಅವುಗಳನ್ನು ನೀನೀಗ ತಕ್ಕ ಉಪಾಯದಿಂದ ಹೊರಪಡಿಸಿ ಪಡೆದುಕೊಳ್ಳಬಹುದು.

ಎಲೈ ವೀರನೇ! ಈಗ ನಿನಗೆ ಸಕಲಭೂತಗಳಿಗೂ ಇಷ್ಟವಾಗಿ ಹಿತಕರವಾಗಿರುವ ಅನ್ನವನ್ನು ದೊರಕಿಸಿಕೊಡುವ ಬಯಕೆಯಿದ್ದರೆ–ನನಗೆ ಯೋಗ್ಯವಾಗಿರುವ ಕರುವನ್ನೂ, ಹಾಲುಕರೆಯುವ ಪಾತ್ರೆಯನ್ನೂ ಮತ್ತು ಹಾಲುಕರೆಯುವವನನ್ನೂ ಏರ್ಪಡಿಸು. ಆ ಕರುವಿನ ಮೇಲಿನ ವಾತ್ಸಲ್ಯ

ದಿಂದಾಗಿ ನಾನು ಹಾಲಿನ ರೂಪದಲ್ಲಿ ನಿನಗೆ ನಿನ್ನ ಎಲ್ಲ ಇಷ್ಟಾರ್ಥಗಳನ್ನೂ ಈಡೇರಿಸಿಕೊಡುವೆನು. ಇದಲ್ಲದೇ ಮತ್ತೊಂದು ವಿಷಯವನ್ನೂ ನಿನ್ನಲ್ಲಿ ವಿಜ್ಞಾಪಿಸಬೇಕಾಗಿದೆ. ನೀನು ನನ್ನನ್ನು ಹಳ್ಳ-ತಿಟ್ಟುಗಳಿಲ್ಲದ ಸಮತಲವನ್ನಾಗಿ ಮಾಡಬೇಕು. ಇದರಿಂದ ಇಂದ್ರನು ಸುರಿಸಿದ ಮಳೆಯ ನೀರು ವರ್ಷಾಕಾಲವು ಕಳೆದುಹೋದನಂತರವೂ ಎಲ್ಲ ಕಡೆಗಳಲ್ಲಿಯೂ ಉಳಿಯುವುದು. ನನ್ನೊಳಗಿನ ತೇವವು ಒಣಗದಿರುವುದು. ನೀನು ಹೀಗೆ ಮಾಡಿದೆಯಾದರೆ ನಿನಗೆ ಇದರಿಂದ ತುಂಬಾ ಒಳ್ಳೆಯದಾಗುವುದು.” (ಶ್ಲೋಕ 6-11)

ಭೂದೇವಿಯು ಹೇಳಿದ ಪ್ರಿಯವೂ, ಹಿತಕರವೂ ಆದ ಮಾತು ಪೃಥು ಮಹಾರಾಜನಿಗೆ ಹಿಡಿಸಿತು. ಅದರಂತೆ ಅವನು ಸ್ವಾಯಂಭುವಮನುವನ್ನೇ ಕರುವನ್ನಾಗಿ ಮಾಡಿಕೊಂಡು, ಗೋರೂಪಿಣಿಯಾಗಿದ್ದ ಭೂದೇವಿಯಿಂದ ತನ್ನ ಕೈಯಿಂದಲೇ ಎಲ್ಲ ಧಾನ್ಯಗಳನ್ನೂ ಕರೆದುಕೊಂಡನು. ಹಾಗೆಯೇ ಪೃಥುವಿನಂತೆ ತಿಳಿವಳಿಕೆಯುಳ್ಳ ಇತರ ಎಲ್ಲ ಜನರೂ ಎಲ್ಲ ಕಡೆಗಳಿಂದಲೂ ಸಾರವನ್ನು ಪರಿಗ್ರಹಿಸಿದರು. ಅವರು ಪೃಥುಮಹಾರಾಜನ ಮೂಲಕ ತಮ್ಮ ವಶಕ್ಕೆ ಬಂದ ಭೂಮಿಯಿಂದ ತಮ್ಮ-ತಮ್ಮ ಇಷ್ಟಾರ್ಥಗಳನ್ನು ಕರೆದು ಕೊಂಡರು. ಋಷಿಗಳು ಬೃಹಸ್ಪತಿಯನ್ನು ಕರುವನ್ನಾಗಿ ಮಾಡಿಕೊಂಡು ಇಂದ್ರಿಯರೂಪವಾದ ಪಾತ್ರೆಯಲ್ಲಿ ವೇದರೂಪವಾದ, ಪವಿತ್ರವಾದ ಕ್ಷೀರ ವನ್ನು ಗೋರೂಪಿಣಿಯಾದ ಪೃಥಿವಿಯಿಂದ ಕರೆದುಕೊಂಡರು.* ದೇವತೆ ಗಳು ಇಂದ್ರನನ್ನೇ ಕರುವನ್ನಾಗಿ ಭಾವಿಸಿ ಸುವರ್ಣಮಯವಾದ ಪಾತ್ರೆಯಲ್ಲಿ

---

* ಋಷಿಗಳು ಬೃಹಸ್ಪತಿಯನ್ನು ಕರುವನ್ನಾಗಿ ಮಾಡಿಕೊಂಡು ಇಂದ್ರಿಯಗಳೆಂಬ ಪಾತ್ರೆಗಳಲ್ಲಿ ವೇದರೂಪವಾದ ಹಾಲನ್ನು ಕರೆದುಕೊಂಡರು–ಎಂದರೆ ಏನರ್ಥ? ಎಂದರೆ : ದೇವಗುರುವಾಗಿ, ವೇದಕ್ಕೆ ಉತ್ತಮೋತ್ತಮಾಧಿಕಾರಿಗಳಾದ ಬೃಹಸ್ಪತ್ಯಾ ಚಾರ್ಯರು ಕರುವಿನ ರೂಪವನ್ನು ಪಡೆಯಲು, ಭೂದೇವಿಯು ಹಸುವಿನ ರೂಪದಿಂದ ವೇದವೆಂಬ ಹಾಲನ್ನು ಕರೆದಳು. ಮಹರ್ಷಿಗಳು ಅದನ್ನು ಪಾನಮಾಡಿದ ಕೂಡಲೇ ಅವರಲ್ಲಿ ಅಡಗಿಹೋಗಿದ್ದ ವೇದವು–ವೇದಗ್ರಹಣಕ್ಕೆ ತಕ್ಕ ಪಾತ್ರೆಗಳಾದ ಮನಸ್ಸು, ನಾಲಿಗೆ ಮತ್ತು ಕಿವಿಗಳೆಂಬ ಇಂದ್ರಿಯಗಳಲ್ಲಿ–ಆವಿರ್ಭಾವಗೊಂಡಿತು. ಮುಂದೆ ಹೇಳಲಾಗಿರುವ ಇತರ ರೂಪಗಳನ್ನೂ ಹೀಗೆಯೇ ಅರ್ಥೈಸಿಕೊಳ್ಳಬೇಕು. (ಶ್ಲೋಕ ೧೪)

ತಮಗೆ ಅಭೀಷ್ಟವಾದ ಸೋಮರಸ, ಮನೋಬಲ (ವೀರ್ಯ), ಇಂದ್ರಿಯ ಬಲ (ಓಜಸ್ಸು) ಮತ್ತು ಶಾರೀರಕಬಲರೂಪವಾದ ಹಾಲನ್ನು ಕರೆದು ಕೊಂಡರು.* ದೈತ್ಯರೂ ಮತ್ತು ದಾನವರೂ ಅಸುರಶ್ರೇಷ್ಠನಾದ ಪ್ರಹ್ಲಾದ ನನ್ನು[1] ಕರುವನ್ನಾಗಿ ಮಾಡಿಕೊಂಡು ಕಬ್ಬಿಣದ ಪಾತ್ರೆಯಲ್ಲಿ ಸುರೆ, ಆಸವ ಮುಂತಾದ ಮದ್ಯಗಳನ್ನು ಹಾಲನ್ನಾಗಿ ಕರೆದುಕೊಂಡರು.[2] ಗಂಧರ್ವರು ಮತ್ತು ಅಪ್ಸರೆಯರು ವಿಶ್ವಾವಸುವನ್ನು ಕರುವನ್ನಾಗಿ ಮಾಡಿ ಕೊಂಡರು. ಶ್ರಾದ್ಧದ ಅಧಿಷ್ಠಾತೃದೇವತೆಗಳಾದ ಪಿತೃದೇವತೆಗಳ ಸಮೂಹವು ಅರ್ಯಮನನ್ನು[3] ಕರುವನ್ನಾಗಿ ಮಾಡಿಕೊಂಡು ಹಸಿಮಣ್ಣಿನ ಮಡಕೆಯಲ್ಲಿ ಕಾವ್ಯರೂಪವಾದ ಹಾಲನ್ನು ಹಿಂಡಿಕೊಂಡಿತು. ಅನಂತರ ಸಿದ್ಧರು ಕಪಿಲಮಹರ್ಷಿಗಳನ್ನು ಕರುವನ್ನಾಗಿ ಮಾಡಿಕೊಂಡು ಆಕಾಶವೆಂಬ ಪಾತ್ರೆಯಲ್ಲಿ ಅಣಿಮಾ-ಮಹಿಮಾದಿಗಳೇ ಮುಂತಾದ ಅಷ್ಟಸಿದ್ಧಿಗಳನ್ನೂ,

---

* ದೇವತೆಗಳು ಸೋಮರಸವನ್ನು ಮಾತ್ರವಲ್ಲದೇ ಅದರ ಪಾನದಿಂದುಂಟಾಗುವ ಧಾರಣಾಶಕ್ತಿ, ಓಜಸ್ಸು ಮುಂತಾದ ಗುಣಗಳನ್ನೂ ಹಾಲಿನ ರೂಪದಲ್ಲಿ ಪಡೆದರು. ಇವು ಬಾಹ್ಯಗುಣಗಳು ; ಸ್ವರೂಪಭೂತವಾದ ಗುಣಗಳಲ್ಲ. "**ಗುಣಾಃ ಸ್ವರೂಪ. ಭೂತಾಶ್ಚ ಬಾಹ್ಯಾಶ್ಚೇತಿ ದ್ವಿಧಾ ಮತಮ್ । ಸ್ವರೂಪಭೂತಾ ವ್ಯಜ್ಯನ್ತೇ ಹರೇರ್ಬಾಹ್ಯಾನ್ ದುಹುಃಪಯಃ ॥**" ಎಂದು. (ವಿಜಯಧ್ವಜೀಯ) (ಶ್ಲೋಕ ೧೫)

1 ಪೃಥುಮಹಾರಾಜನ ಕಾಲದಲ್ಲಿ ಪ್ರಹ್ಲಾದನು ಹೇಗೆ ಬಂದನೆಂಬುದಕ್ಕೆ ವಿಜಯ ಧ್ವಜೀಯದಲ್ಲಿ–ಪ್ರಹ್ಲಾದನೇ ಮುಂತಾದವರು ಸಾಮಾನ್ಯವಾಗಿ ಪ್ರತಿಯೊಂದು ಮನ್ವಂತರದಲ್ಲಿಯೂ ಹುಟ್ಟುವರು. '**ಪ್ರತಿಮನ್ವಂತರಂ ಪ್ರಾಯಃ ಪ್ರಹ್ಲಾದಾದ್ಯಾ ಬಭೂವಿರೇ**'–ಎಂದು ಸಮಾಧಾನ ಹೇಳಿದೆ.

2 ಬೆಲ್ಲದಿಂದ ತೆಗೆಯುವ ಮದ್ಯಕ್ಕೆ ಗೌಡಿಯೆಂದೂ, ಹಿಟ್ಟಿನಿಂದ ತೆಗೆಯುವ ಮದ್ಯಕ್ಕೆ ಪೈಷ್ಟಿಯೆಂದೂ, ತೆಂಗು-ತಾಳೆ ಮುಂತಾದುವುಗಳಿಂದ ತೆಗೆಯುವ ಮದ್ಯಕ್ಕೆ ಮಾಧ್ವೀ ಎಂದೂ ಹೆಸರು. '**ಗೌಡೀ ಪೈಷ್ಟೀ ಚ ಮಾಧ್ವೀ ಚ ವಿಜ್ಞೇಯಾ ತ್ರಿವಿಧಾ ಮತಾ**'

(ಶ್ಲೋಕ ೧೬)

3. '**ಪಿತೄಣಾಮರ್ಯಮಾ ಚಾಸ್ಮಿ**' ಎಂದು ಶ್ರೀಗೀತೆಯು ಹೇಳುವಂತೆ ಪಿತೃ ದೇವತೆಗಳಿಗೆ ' ಅರ್ಯಮಾ ' ಎನ್ನುವವನು ನಾಯಕ ವಿಭೂತಿಯಾಗಿದ್ದಾನೆ.

(ಶ್ಲೋಕ ೧೮)

ಹಾಗೆಯೇ ವಿದ್ಯಾಧರರು ಆಕಾಶಗಮನವೇ ಮುಂತಾದ ಸಿದ್ಧಿಗಳನ್ನೂ ಹಾಲನ್ನಾಗಿ ಸಂಪಾದಿಸಿಕೊಂಡರು. ಮಾಯಾವಿಗಣಗಳು ಮಯದಾನವನನ್ನು ಕರುವನ್ನಾಗಿ ಮಾಡಿಕೊಂಡು ಅಂತರ್ಧಾನಹೊಂದುವಿಕೆ, ಇಷ್ಟ ಬಂದಂತೆ ವಿಚಿತ್ರವಾದ ರೂಪಗಳನ್ನು ತಾಳುವಿಕೆ–ಇವೇ ಮುಂತಾದ ಧಾರಣ ಶಕ್ತಿಗಳನ್ನು ಹಾಲನ್ನಾಗಿ ಗಳಿಸಿಕೊಂಡರು. ಹಾಗೆಯೇ ಯಕ್ಷ-ರಾಕ್ಷಸರೂ, ಭೂತ-ಪಿಶಾಚಾದಿ ಮಾಂಸಾಹಾರಿಗಳೂ ಭೂತೇಶರಾದ ರುದ್ರದೇವರನ್ನು ಕರುವನ್ನಾಗಿ ಮಾಡಿಕೊಂಡು ತಲೆಬುರುಡೆಯೆಂಬ ಪಾತ್ರೆಯಲ್ಲಿ ರಕ್ತರೂಪ ವಾದ ಹಾಲನ್ನು ಕರೆದುಕೊಂಡರು. ಹೆಡೆಯಿಲ್ಲದ ಹಾವುಗಳೂ, ಹೆಡೆಯುಳ್ಳ ಸರ್ಪಗಳೂ, ನಾಗಗಳೂ ಮತ್ತು ಚೇಳು* ಮುಂತಾದ ವಿಷಧರ ಪ್ರಾಣಿಗಳೂ ತಕ್ಷಕನನ್ನು ಕರುವನ್ನಾಗಿ ಮಾಡಿಕೊಂಡು ತಮ್ಮ-ತಮ್ಮ ಬಾಯೆಂಬ ಪಾತ್ರೆಗಳಲ್ಲಿ ವಿಷರೂಪವಾದ ಹಾಲನ್ನು ಹಿಂಡಿಕೊಂಡುವು. ಪಶುಗಳು ಭಗವಂತನಾದ ರುದ್ರದೇವರ ವಾಹನವಾದ ವೃಷಭವನ್ನು ಕರುವನ್ನಾಗಿ ಮಾಡಿಕೊಂಡು ಅರಣ್ಯವೆಂಬ ಪಾತ್ರೆಯಲ್ಲಿ ಹುಲ್ಲಿನ ರೂಪವಾದ ಹಾಲನ್ನು ಪಡೆದುಕೊಂಡುವು. ದೊಡ್ಡ-ದೊಡ್ಡ ಕೋರೆದಾಡೆಗಳುಳ್ಳ ಮಾಂಸಭಕ್ಷಕಮೃಗಗಳು ಸಿಂಹವೆಂಬ ಕರುವನ್ನು ಮುಂದಿಟ್ಟುಕೊಂಡು ತಮ್ಮ ಶರೀರವೆಂಬ ಪಾತ್ರೆಗಳಲ್ಲಿ ಹಸಿಯ ಮಾಂಸವೆಂಬ ಹಾಲನ್ನು ಪಡೆದುಕೊಂಡುವು. ಹಾಗೆಯೇ ಹಕ್ಕಿಗಳು ಗರುಡದೇವರನ್ನು ಕರುವನ್ನಾಗಿ ಭಾವಿಸಿಕೊಂಡು ಹುಳು-ಹುಪ್ಪಟೆಗಳು ಮುಂತಾದ ರೂಪವಾದ ಚರ ಪದಾರ್ಥಗಳನ್ನೂ, ಹಣ್ಣು ಮುಂತಾದ ಸ್ಥಾವರಪದಾರ್ಥಗಳನ್ನೂ ತಮ್ಮ ಆಹಾರವಾದ ಹಾಲಿನ ರೂಪದಲ್ಲಿ ಗಳಿಸಿದುವು. ವೃಕ್ಷಗಳು ಆಲದ ಮರವನ್ನು ಕರುವನ್ನಾಗಿ ಮಾಡಿಕೊಂಡು ನಾನಾರಸರೂಪವಾದ ಹಾಲನ್ನು ಹಿಂಡಿ ಕೊಂಡುವು ಮತ್ತು ಪರ್ವತಗಳು ಹಿಮಾಲಯವನ್ನು ಕರುವನ್ನಾಗಿ ಮಾಡಿ

---

* ಅಹಿ–ಎಂದರೆ ಹೆಡೆಯಿಲ್ಲದ ಹಾವುಗಳು. ಸರ್ಪ–ಎಂದರೆ ಹೆಡೆಯುಳ್ಳ ಹಾವುಗಳು. ನಾಗಗಳೆಂದರೆ ಕದ್ರುವಿನ ಹೊಟ್ಟೆಯಲ್ಲಿ ಹುಟ್ಟಿದ ಹಾವುಗಳು. ದಂದಶೂಕಗಳೆಂದರೆ ಕುಟುಕುವ ಚೇಳು ಮುಂತಾದುವು–ಎಂದು ಭಾವಾರ್ಥದೀಪಿಕಾ ವ್ಯಾಖ್ಯಾನವು ತಿಳಿಸುತ್ತದೆ. (ಶ್ಲೋಕ ೨೨)

ಕೊಂಡು ತಮ್ಮ ತಪ್ಪಲುಶಿಖರಗಳೆಂಬ ಪಾತ್ರೆಗಳಲ್ಲಿ ಬಗೆ-ಬಗೆಯ ಧಾತುಗಳನ್ನು ಹಾಲನ್ನಾಗಿ ಪಡೆದುವು. ಹೀಗೆ ಪೃಥುಮಹಾರಾಜನಿಂದ ಭಾವಿಸಲ್ಪಟ್ಟು ಎಲ್ಲ ಇಷ್ಟಾರ್ಥಗಳನ್ನೂ ಕರೆಯುವ ಶಕ್ತಿಯಿಂದ ಕೂಡಿದ ಗೋರೂಪವಾದ ಪೃಥಿವಿಯಿಂದ ಎಲ್ಲ ಜೀವಗಳೂ ತಮ್ಮ-ತಮ್ಮ ವರ್ಗದ ಮುಖ್ಯನಾಯಕನನ್ನು ಕರುವನ್ನಾಗಿ ಮಾಡಿಕೊಂಡು ಬೇರೆ-ಬೇರೆ ಪಾತ್ರೆಗಳಲ್ಲಿ ಬಗೆ-ಬಗೆಯ ಪದಾರ್ಥಗಳನ್ನು ಹಾಲಿನ ರೂಪದಲ್ಲಿ ಹಿಂಡಿಕೊಂಡುವು.

(ಶ್ಲೋಕ 12-26)

ಕುರುಶ್ರೇಷ್ಠನಾದ ವಿದುರನೇ! ಹೀಗೆ ಪೃಥುಮಹಾರಾಜನು ಮೊದಲ್ಗೊಂಡು ಅನ್ನವನ್ನು ತಿನ್ನುವ ಎಲ್ಲ ಜೀವಗಳೂ ನಾನಾಪ್ರಕಾರವಾದ ಕರು ಮತ್ತು ಪಾತ್ರೆ ಇವುಗಳ ಮೂಲಕವಾಗಿ ತಮ-ತಮಗೆ ಬೇಕಾದ ಬೇರೆ-ಬೇರೆ ಅನ್ನಪದಾರ್ಥಗಳನ್ನು ಬಗೆ-ಬಗೆಯ ಹಾಲಿನ ರೂಪದಿಂದ ಸಂಪಾದಿಸಿಕೊಂಡುವು. ಆದರಿಂದ ಮಹಾರಾಜನಾದ ಪೃಥುವಿಗೆ ತುಂಬಾ ಸಂತೋಷವಾಗಿ ಆತನಿಗೆ ಆ ಸರ್ವಕಾಮಗಳನ್ನೂ ಕರೆಯುವ ಪೃಥಿವಿಯಲ್ಲಿ ತನ್ನ ಪುತ್ರಿಯಲ್ಲಿ ಹೇಗೋ ಹಾಗೆ ಪ್ರೀತಿಯು ತುಂಬಿಬರಲು, ಆತನು ಆ ಪೃಥಿವಿಯನ್ನು ತನ್ನ ಪುತ್ರಿಯನ್ನಾಗಿಯೇ ಸ್ವೀಕಾರಮಾಡಿದನು. ಅನಂತರ ಆ ರಾಜಾಧಿರಾಜನು ತನ್ನ ಬಿಲ್ಲಿನ ತುದಿಯಿಂದ ಪರ್ವತಗಳನ್ನು ಒಡೆದು ಪುಡಿಮಾಡಿ ಇಡೀ ಭೂಮಂಡಲವನ್ನು ಬಹುಮಟ್ಟಿಗೆ ಹಳ್ಳ-ತಿಟ್ಟುಗಳಿಲ್ಲದೇ ಸಮತಲವಾಗುವಂತೆ ಮಾಡಿದನು. ಆ ಭಗವಂತನಾದ ವೇನಪುತ್ರನು ಎಲ್ಲ ಪ್ರಜೆಗಳಿಗೂ ತಂದೆಯಂತೆ ಇದ್ದು ಅವರ ಪಾಲನೆ-ಪೋಷಣೆಗಳಿಗೆ ವ್ಯವಸ್ಥೆ ಮಾಡಲು ತೊಡಗಿದನು. ತಾನು ಸಮತಲವಾಗಿ ಮಾಡಿದ ಭೂಮಿಯಲ್ಲಿ ಪ್ರಜೆಗಳಿಗೆ ಅಲ್ಲಲ್ಲಿ ಯಥೋಚಿತವಾದ ವಾಸಸ್ಥಾನಗಳನ್ನು ವಿಭಾಗಿಸಿ ಕೊಟ್ಟನು. ಅವರಿಗಾಗಿ ಅನೇಕ ಗ್ರಾಮಗಳು, ಪುರಗಳು, ಪಟ್ಟಣಗಳು, ದುರ್ಗಗಳು, ಗೊಲ್ಲರ ಊರು-ಕೇರಿಗಳು, ಗೋಶಾಲೆಗಳು, ಶಿಬಿರಗಳು, ಗಣಿಗಳು, ರೈತರ ಹಳ್ಳಿಗಳು, ಪರ್ವತಗಳ ಅಡಿಯ ಹಳ್ಳಿಗಳು* ಮುಂತಾದ

* ದುರ್ಗಗಳಲ್ಲಿ ಜಲದುರ್ಗ, ಗಿರಿದುರ್ಗ, ವೃಕ್ಷದುರ್ಗ, ಮರುದುರ್ಗ, ಧನ್ವದುರ್ಗ– ಎಂದು ಭೇದಗಳುಂಟು. 'ಔದಕಂ ಪಾರ್ವತಂ ವಾರ್ಕ್ಷಂ ಮೈರಿಣಂ ಧಾನ್ವನಂ ತಥಾ'

ಬೇರೆ ಬೇರೆ ವಾಸಸ್ಥಾನಗಳನ್ನು ಕಲ್ಪಿಸಿದನು. ಪೃಥುಮಹಾರಾಜನ ಆಳ್ವಿಕೆಗೆ ಮೊದಲು ಪೃಥಿವಿಯಲ್ಲಿ ಈ ಪುರ-ಗ್ರಾಮ ಮುಂತಾದ ಕಲ್ಪನೆಯೇ ಇರಲಿಲ್ಲ. ಜನರು ಕಂಡ-ಕಂಡಲ್ಲಿ ವಾಸಮಾಡುತ್ತಿದ್ದರು. ಅವರ ರಕ್ಷಣೆಗೂ, ವೃತ್ತಿ ಮುಂತಾದುವುಗಳಿಗೂ ತಕ್ಕಂತೆ ಬೇರೆ-ಬೇರೆ ವಸತಿವಿಭಾಗವಿರಲಿಲ್ಲ. ಅನಂತರ ಎಲ್ಲ ಪ್ರಾಣಿಗಳೂ ಪೃಥುಮಹಾರಾಜನು ಏರ್ಪಡಿಸಿಕೊಟ್ಟ ವಾಸ ಸ್ಥಾನಗಳಲ್ಲಿ ಯಾವ ಭಯವೂ ಇಲ್ಲದೇ ಸಂತೋಷವಾಗಿ ವಾಸಮಾಡ ತೊಡಗಿದುವು." (ಶ್ಲೋಕ 27-32)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಚತುರ್ಥಸ್ಕಂಧದ ೧೮ನೆಯ ಅಧ್ಯಾಯವು ಮುಗಿಯಿತು.

ಚತುರ್ಥಸ್ಕಂಧ ೧೯ನೆಯ ಅಧ್ಯಾಯ

ಪೃಥುಮಹಾರಾಜನಿಂದ ನೂರು ಅಶ್ವಮೇಧಯಜ್ಞಗಳ ಆಚರಣೆ

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ಅಥಾದೀಕ್ಷತ ರಾಜಾ ತು ಹಯಮೇಧಶತೇನ ಸಃ ।
ಬ್ರಹ್ಮಾವರ್ತೇ ಮನೋಃ ಕ್ಷೇತ್ರೇ ಯತ್ರ ಪ್ರಾಚೀ ಸರಸ್ವತೀ ॥೧॥

"ವಿದುರ! ಮುಂದೇನಾಯಿತೆಂಬುದನ್ನು ಹೇಳುತ್ತೇನೆ, ಕೇಳು. ಸರಸ್ವತೀನದಿಯು ಪೂರ್ವದಿಕ್ಕಿನ ಕಡೆಗೆ ಹರಿಯುವ, ಮನುಸಾರ್ವಭೌಮ ನಿಗೆ ಸೇರಿದ ಬ್ರಹ್ಮಾವರ್ತವೆಂಬ ಕ್ಷೇತ್ರದಲ್ಲಿ ಆ ಪೃಥುಚಕ್ರವರ್ತಿಯು ನೂರು ಅಶ್ವಮೇಧಯಾಗಗಳನ್ನು ಆಚರಿಸಬೇಕೆಂದು ಸಂಕಲ್ಪಿಸಿ ದೀಕ್ಷೆಯನ್ನು ವಹಿಸಿದನು.*

ಗ್ರಾಮ : ಹಲವು ಮಂದಿ ಇರುವ ಊರು. ನಗರ : ವೈಶ್ಯರು ಸಮೃದ್ಧವಾಗಿರುವ ಪುರ. ಪಟ್ಟಣ : ನದೀ-ಸಮುದ್ರಗಳ ಸಂಗಮಸ್ಥಾನದಲ್ಲಿ ಬಹುಮಂದಿ ಇರುವ ಸ್ಥಳ. ಖೇಟ : ಬೇಡರ ಊರು. ಘೋಷ : ಗೊಲ್ಲರ ಊರು ಅಥವಾ ಕೇರಿ. ವ್ರಜ : ಪಶುಗಳು ತುಂಬಿ ವಾಸಿಸುವ ಊರು. ಖರ್ವಟ : ದೊಡ್ಡ ಸಂತೆ, ಅಂಗಡಿ—ಇತ್ಯಾದಿಗಳು ಇರುವ ಊರು. (ಶ್ಲೋಕ ೩೧)

* ಬ್ರಹ್ಮಾವರ್ತ—ಎನ್ನುವುದು ಸರಸ್ವತೀ ಮತ್ತು ದೃಷದ್ವತೀನದಿಗಳ ಮಧ್ಯದಲ್ಲಿರುವ ಪ್ರದೇಶ. ಅದು ದೇವತಾಪೂಜೆ-ಯಜ್ಞಗಳಿಗೆ ಮೀಸಲಾಗಿರುವ ಜಾಗ. (ಶ್ಲೋಕ ೧)

ಭಗವಂತನಾದ ಇಂದ್ರನಿಗೆ ಇದನ್ನು ಸೈರಿಸಲಾಗಲಿಲ್ಲ. ನೂರು ಅಶ್ವಮೇಧಯಜ್ಞಗಳನ್ನು ಮಾಡಿ 'ಶತಕ್ರತು' ಎಂದು ಹೆಸರು ಪಡೆದು ಇಂದ್ರಪದವಿಯನ್ನು ಗಳಿಸಿದ ನನ್ನ ಕರ್ಮಗಳಿಗಿಂತಲೂ ಪೃಥುಚಕ್ರವರ್ತಿಯ ಈ ಯಜ್ಞಾದಿಕರ್ಮಗಳು ಅತಿಶಯಗೊಂಡು ಈತನು ತನ್ನನ್ನೂ ಮೀರಿಸಿಯಾನು!–ಎಂದು ಆತನಿಗೆ ಈ ರಾಜೇಂದ್ರನ ಯಜ್ಞಮಹೋತ್ಸವದ ಬಗೆಗೆ ಅಸಹನೆಯುಂಟಾಯಿತು. ಪೃಥುಮಹಾರಾಜನ ಯಜ್ಞವು ಅತ್ಯದ್ಭುತವಾಗಿತ್ತು. ಅದರಲ್ಲಿ ಯಜ್ಞೇಶ್ವರನೂ–ಸಕಲಜಗದೀಶ್ವರನೂ ಆದ ಭಗವಂತನಾದ ಶ್ರೀಹರಿಯೇ ಸಾಕ್ಷಾತ್ತಾಗಿ ದರ್ಶನವನ್ನು ದಯಪಾಲಿಸಿದನು. ಆತನ ಜೊತೆಯಲ್ಲಿ ಬ್ರಹ್ಮದೇವರು, ರುದ್ರದೇವರು ಮತ್ತು ತಮ್ಮ-ತಮ್ಮ ಅನುಚರಸಹಿತರಾದ ಲೋಕಪಾಲಕರು–ಎಲ್ಲರೂ ಯಜ್ಞಕ್ಕೆ ದಯಮಾಡಿಸಿದರು. ಆಗ ಗಂಧರ್ವರೂ, ಮುನಿಗಳೂ, ಅಪ್ಸರೆಯರೂ ಪ್ರಭುವಿನ ಕೀರ್ತಿಯನ್ನು ಹಾಡುತ್ತಿದ್ದರು. ಸಿದ್ಧರು, ವಿದ್ಯಾಧರರು, ದೈತ್ಯರು, ದಾನವರು, ಯಕ್ಷರು, ನಂದ-ಸುನಂದರೇ ಮುಂತಾದ ಭಗವಂತನ ಪ್ರಮುಖರಾದ ಪಾರ್ಷದರು ಮತ್ತು ಸದಾ ಭಗವಂತನ ಸೇವೆಯಲ್ಲಿಯೇ ಉತ್ಸುಕರಾಗಿರುವ ಕಪಿಲರು, ನಾರದರು, ದತ್ತಾತ್ರೇಯರು ಮತ್ತು ಸನಕಾದಿ ಯೋಗೀಶ್ವರರು ಪ್ರಭುವನ್ನು ಹಿಂಬಾಲಿಸಿ ಬಂದಿದ್ದರು. (ಶ್ಲೋಕ 2-6)

ಎಲೈ ಭರತಕುಲಮಣಿಯೇ! ಆ ಯಜ್ಞದಲ್ಲಿ ಧರ್ಮದ ಸಾಮಗ್ರಿ ಗಳನ್ನು ಯಥೇಷ್ಟವಾಗಿ ಕೊಡುತ್ತಿದ್ದ ಭೂದೇವಿಯು ಕಾಮಧೇನುವಿನ ರೂಪವನ್ನು ತಾಳಿ ಯಜಮಾನನ ಎಲ್ಲ ಇಷ್ಟಾರ್ಥಗಳನ್ನೂ ಈಡೇರಿಸುತ್ತಿದ್ದಳು. ನದಿಗಳು–ಹಾಲು, ಮೊಸರು, ತುಪ್ಪಗಳೇ ಮುಂತಾದ ಗೋರಸಗಳನ್ನೂ–ಕಬ್ಬಿನ ರಸ, ದ್ರಾಕ್ಷಿಯ ರಸಗಳೇ ಮುಂತಾದ ಭೋಗ್ಯತಮವಾದ ರಸಗಳನ್ನೂ ಹರಿಯಿಸುತ್ತಿದ್ದುವು. ಮಹಾವೃಕ್ಷಗಳು ಹೇರಳವಾಗಿ ಕಾಣಿಸಿಕೊಂಡು ಜೇನುತುಪ್ಪವನ್ನೂ, ಜೇನಿನಂತಹ ಸವಿಯುಳ್ಳ ಹಣ್ಣುಗಳನ್ನೂ ಸಮರ್ಪಿಸಿದುವು. ಸಮುದ್ರಗಳು ರತ್ನರಾಶಿಗಳನ್ನೂ, ಪರ್ವತಗಳು ಭಕ್ಷ್ಯ-ಭೋಜ್ಯ-ಚೋಷ್ಯ-ಲೇಹ್ಯಗಳೆಂಬ–ನಾಲ್ಕು ಬಗೆಯ ಅನ್ನಗಳನ್ನೂ ಮತ್ತು

ಲೋಕಪಾಲಕರಿಂದ ಸಹಿತವಾದ ಸಮಸ್ತಲೋಕಗಳೂ ಬಗೆ-ಬಗೆಯ ಕಾಣಿಕೆಗಳನ್ನೂ ಯಜಮಾನನಾದ ಪೃಥುಸಾರ್ವಭೌಮನಿಗೆ ಒಪ್ಪಿಸಿದುವು.

(ಶ್ಲೋಕ 7-9)

ಶ್ರೀಹರಿಯ ಏಕಾಂತಭಕ್ತನಾಗಿ ಇಂತಹ ಮಹಾಸಮೃದ್ಧಿಯನ್ನು ಪಡೆದಿದ್ದ ಪೃಥುಚಕ್ರವರ್ತಿಯ ಆ ದೊಡ್ಡ ಏಳಿಗೆಯನ್ನು ಸಹಿಸಲಾರದೇ ಇಂದ್ರದೇವನು ಆತನ ಯಜ್ಞಕ್ಕೆ ವಿಘ್ನವನ್ನು ಒಡ್ಡಲು ಬಯಸಿದನು. ಆ ರಾಜೇಂದ್ರನು ಕೊನೆಯ ಯಜ್ಞದ ಮೂಲಕ ಯಜುಷ್ಪತಿಯಾದ (ಅಶ್ವಮೇಧಯಜ್ಞೇಶನಾದ*) ವಿಷ್ಣುವನ್ನು ಆರಾಧಿಸುತ್ತಿರುವಾಗ ಇಂದ್ರನು ಅಸೂಯೆಯಿಂದ ಗುಟ್ಟಾಗಿ ಆತನ ಯಜ್ಞಾಶ್ವವನ್ನು ಅಪಹರಿಸಿಬಿಟ್ಟನು. ಆಗ ಇಂದ್ರನು ತನ್ನ ರಕ್ಷಣೆಗಾಗಿ ಪಾಷಂಡವೇಷವನ್ನು ಧರಿಸಿ ಬಂದಿದ್ದನು. ಅದು ಮೋಸದ ವೇಷ. ಅದನ್ನು ಧರಿಸಿದರೆ ಪಾಪಿಗಳೂ ಧರ್ಮಿಷ್ಠರಂತೆ ಕಂಡುಬರುತ್ತಾರೆ. ಆ ವೇಷದಲ್ಲಿ ಯಜ್ಞದ ಕುದುರೆಯನ್ನು ಅಪಹರಿಸಿ ಅತಿಶೀಘ್ರವಾಗಿ ಆಕಾಶಮಾರ್ಗದಲ್ಲಿ ಓಡಿಹೋಗುತ್ತಿರುವಾಗ ಇಂದ್ರನು ಮಹಾತ್ಮರಾದ ಅತ್ರಿಮಹರ್ಷಿಗಳ ದೃಷ್ಟಿಗೆ ಬಿದ್ದುಬಿಟ್ಟನು. ಅವರ ಪ್ರೇರಣೆಯಂತೆ ಮಹಾರಥಿಯಾದ ಪೃಥುಸಾರ್ವಭೌಮನ ಪುತ್ರನು ಇಂದ್ರನನ್ನು ಕೊಂದುಹಾಕುವುದಕ್ಕಾಗಿ ಆತನ ಬೆನ್ನಟ್ಟಿಹೋಗಿ ಮಿತಿಮೀರಿದ ಕೋಪದಿಂದ 'ಎಲವೋ! ನಿಲ್ಲು ನಿಲ್ಲು!'–ಎಂದು ಕೂಗಿದನು. ಆಗ ಇಂದ್ರನ ತಲೆಯಲ್ಲಿ ಜಟಾಜೂಟವಿತ್ತು. ಆತನು ಮೈಗೆ ಭಸ್ಮವನ್ನು ಬಳಿದುಕೊಂಡಿದ್ದನು. ಅದನ್ನು ಕಂಡು ಪೃಥುಪುತ್ರನು ಆತನನ್ನು ಧರ್ಮಮೂರ್ತಿಯೆಂದು ಭಾವಿಸಿ ಆತನ ಮೇಲೆ ಬಾಣ ಬಿಡಲಿಲ್ಲ. ಆತನ ಮೇಲೆ ಆಕ್ರಮಣವನ್ನು ಮಾಡದೇ ಹಿಂದಿರುಗಿದನು. ಹೀಗೆ ಹಿಂದಿರುಗಿದ ಆತನನ್ನು ಕಂಡು ಅತ್ರಿಮಹರ್ಷಿಗಳು–'ವತ್ಸ! ಈತನನ್ನು ಸಂಹರಿಸು. ಈತನು ಯಜ್ಞವನ್ನು ಧ್ವಂಸಮಾಡಲು ಬಂದಿರುವ ದೇವತಾಧಮನಾದ ಇಂದ್ರನು'–ಎಂದು ಆತನನ್ನು ಸಂಹರಿಸಲು ಆಣತಿನೀಡಿದರು. ಹೀಗೆ ಮಹರ್ಷಿಗಳು

---

* ಶ್ರೀಭಗವಂತನು ಎಲ್ಲ ವೇದಗಳಿಗೂ ಅಧಿಪತಿಯಾಗಿದ್ದರೂ ಆತನನ್ನು ಇಲ್ಲಿ 'ಯಜುಷ್ಪತಿ' ಎಂದು ಏಕೆ ಕರೆದಿದೆ? ಎಂದರೆ : ಅಶ್ವಮೇಧಯಜ್ಞವು ಯಜುರ್ವೇದದಲ್ಲಿ ಹೇಳಲ್ಪಟ್ಟಿರುವುದರಿಂದ. (ಶ್ಲೋಕ ೧೧)

ಪ್ರೋತ್ಸಾಹನೀಡಲು ಪೃಥುಕುಮಾರನಿಗೆ ಇಂದ್ರನಲ್ಲಿ ಕ್ರೋಧವು ಉಕ್ಕೇರಿ ಬಂದಿತು. ಆತನು–ರಾವಣನನ್ನು ಬೆನ್ನಟ್ಟಿಹೋದ ಜಟಾಯುವಿನಂತೆ–ಆಕಾಶದಲ್ಲಿ ವೇಗದಿಂದ ಓಡಿಹೋಗುತ್ತಿದ್ದ ಇಂದ್ರನನ್ನು ಬೆನ್ನಟ್ಟಿಹೋಗಲು, ಇಂದ್ರನು ಹೆದರಿ ತನ್ನ ಆ ಪಾಷಂಡವೇಷವನ್ನೂ ಮತ್ತು ಯಜ್ಞದ ಕುದುರೆಯನ್ನೂ ಅಲ್ಲಿಯೇ ಬಿಟ್ಟು ಕಣ್ಮರೆಯಾಗಿಬಿಟ್ಟನು. ವೀರನಾದ ಪೃಥುಪುತ್ರನು ಯಜ್ಞಾಶ್ವವನ್ನು ತೆಗೆದುಕೊಂಡು ತಂದೆಯ ಯಜ್ಞಶಾಲೆಗೆ ಹಿಂದಿರುಗಿದನು. ಆತನ ಆ ಅದ್ಭುತವಾದ ಪರಾಕ್ರಮವನ್ನು ಕಂಡು ಮಹರ್ಷಿಗಳು ಆತನಿಗೆ 'ವಿಜಿತಾಶ್ವ' (ಕುದುರೆಯನ್ನು ಗೆದ್ದು ತಂದವನು) ಎಂಬ ಬಿರುದಾಂಕಿತವನ್ನು ಕೊಟ್ಟರು. ಯಜ್ಞದ ಅಶ್ವವನ್ನು ಚಷಾಲ ಮತ್ತು ಯೂಪಸ್ತಂಭಗಳಿಗೆ* ಕಟ್ಟಿಹಾಕಲಾಗಿತ್ತು. ಶಕ್ತಿಶಾಲಿಯಾದ ಇಂದ್ರದೇವನು ಅಲ್ಲಿ ಭಯಂಕರವಾದ ಕತ್ತಲೆಯನ್ನುಂಟುಮಾಡಿ ಆ ಕತ್ತಲೆಯಲ್ಲಿ ತನ್ನನ್ನು ಮರೆಸಿಕೊಂಡು ಯಜ್ಞಾಶ್ವವನ್ನು ಅದರ ಚಿನ್ನದ ಸರಪಣಿಯೊಡನೆ ಅಪಹರಿಸಿಕೊಂಡು ಹೋದನು. ಅತ್ರಿಮುನಿಯು, ಇಂದ್ರನು ಮತ್ತೆ ಆಕಾಶದಲ್ಲಿ ಓಡಿ ಹೋಗುತ್ತಿರುವುದನ್ನು ಗಮನಿಸಿ ರಾಜಪುತ್ರನಿಗೆ ತೋರಿಸಿದನು. ಆದರೆ ಇಂದ್ರನು ಕಪಾಲವನ್ನೂ, ಖಟ್ವಾಂಗವನ್ನೂ ಧರಿಸಿ ತಪಸ್ವಿಯಂತೆ ಕಾಣುತ್ತಿದ್ದುದರಿಂದ ಪೃಥುಪುತ್ರನು ಆತನ ದಾರಿಗೆ ಯಾವ ಅಡಚಣೆಯನ್ನೂ ಉಂಟುಮಾಡಲಿಲ್ಲ. ಆಗ ಅತ್ರಿಮಹರ್ಷಿಯು ಮತ್ತೆ ಆತನಿಗೆ ಉತ್ಸಾಹ ತುಂಬಿ ಪ್ರೇರಿಸಲು ಪೃಥುಪುತ್ರನು ಕ್ರೋಧದಿಂದ ಇಂದ್ರನ ಮೇಲೆ ಬಾಣವನ್ನು ಗುರಿಯಿಟ್ಟು ಪ್ರಯೋಗಿಸಿದನು. ಅದನ್ನು ನೋಡಿದೊಡನೆಯೇ ದೇವರಾಜನು ತನ್ನ ಆ ವೇಷವನ್ನೂ–ಯಜ್ಞಾಶ್ವವನ್ನೂ ಅಲ್ಲಿಯೇ ಬಿಟ್ಟು ಅಂತರ್ಧಾನ ಹೊಂದಿದನು. ವೀರವರನಾದ ವಿಜಿತಾಶ್ವನು ಕುದುರೆಯನ್ನು ಹಿಡಿದುಕೊಂಡು ತಂದೆಯ ಯಜ್ಞಶಾಲೆಗೆ ಹಿಂದಿರುಗಿದನು. ಇಂದ್ರನು ತಾನು ಧರಿಸಿಬಿಟ್ಟುಹೋದ ನಿಂದನೀಯವಾದ ವೇಷವನ್ನು ಮಂದಮತಿಗಳಾದ ಪುರುಷರು (ತಪಸ್ವಿವೇಷವೆಂದು ಭ್ರಮೆಯಿಂದ) ಸ್ವೀಕರಿಸಿದರು.

(ಶ್ಲೋಕ 10-23)

---

* ಯಜ್ಞಮಂಟಪದಲ್ಲಿ ಪಶುವನ್ನು ಕಟ್ಟುವ ಕಂಬಕ್ಕೆ 'ಯೂಪ'ವೆಂದೂ ಅದರ ಮುಂದೆ ಇಟ್ಟಿರುವ ಬಳೆಯ ಆಕಾರದ ಕಾಷ್ಠಕ್ಕೆ 'ಚಷಾಲ'ವೆಂದೂ ಹೆಸರು. (ಶ್ಲೋಕ ೧೯)

ಏವಮಿನ್ದ್ರೇ ಹರತ್ಯಶ್ವಂ ವೈನ್ಯಯಜ್ಞಜಿಘಾಂಸಯಾ ।
ತದ್ಗೃಹೀತವಿಸೃಷ್ಟೇಷು ಪಾಷಣ್ಡೇಷು ಮತಿರ್ನೃಣಾಮ್ ॥೨೪॥

ಧರ್ಮ ಇತ್ಯುಪಧರ್ಮೇಷು ನಗ್ನರಕ್ತಪಟಾದಿಷು ।
ಪ್ರಾಯೇಣ ಸಜ್ಜತೇ ಭ್ರಾನ್ತ್ಯಾ ಪೇಶಲೇಷು ಚ ವಾಗ್ಮಿಷು ॥೨೫॥

ಹೀಗೆ ಇಂದ್ರನು ಯಜ್ಞಾಶ್ವವನ್ನು ಅಪಹರಿಸುವ ದೃಷ್ಟಿಯಿಂದ ಯಾವ ಯಾವ ರೂಪಗಳನ್ನು ಧರಿಸಿದ್ದನೋ–ಇವುಗಳೆಲ್ಲವೂ ಪಾಪದ ಖಂಡಗಳಾದುದರಿಂದ 'ಪಾಖಂಡ' ಎನಿಸಿದುವು. ಇಲ್ಲಿ ಖಂಡ ಎಂದರೆ ಚಿಹ್ನೆ. ಹೀಗೆ ಪೃಥುಚಕ್ರವರ್ತಿಯ ಯಜ್ಞವನ್ನು ಧ್ವಂಸಮಾಡುವುದಕ್ಕಾಗಿ ಯಜ್ಞಪಶುವನ್ನು ಕದ್ದುಕೊಂಡುಹೋಗುವ ಸಮಯದಲ್ಲಿ ಇಂದ್ರನು ಹಲವು ಬಾರಿ ಧರಿಸಿ ತ್ಯಾಗಮಾಡಿದ ದಿಗಂಬರತ್ವ, ಕೆಂಪುವಸ್ತ್ರಗಳ ಧಾರಣೆ, ಕಾಪಾಲಿಕವೇಷಗಳೇ ಮುಂತಾದ ಚಿಹ್ನೆಗಳಿಂದ ಕೂಡಿದ ಆಚಾರವನ್ನು 'ಪಾಖಂಡಾಚಾರ' (ಪಾಷಂಡಾಚಾರ) ಎನ್ನುತ್ತಾರೆ. ಈ ಆಚಾರವು ಜನರ ಬುದ್ಧಿಯನ್ನು ಮರಳುಗೊಳಿಸುತ್ತದೆ. ನೋಡುವುದಕ್ಕೆ ಮಾತ್ರ ರಮಣೀಯ ವಾಗಿ ಕಾಣುವ ಈ ಆಚಾರವುಳ್ಳ ನಾಸ್ತಿಕಮತಗಳು ದೊಡ್ಡ-ದೊಡ್ಡ ಯುಕ್ತಿಗಳಿಂದ ತಮ್ಮ ಪಕ್ಷವನ್ನು ಸಮರ್ಥಿಸುತ್ತವೆ. ವಾಸ್ತವವಾಗಿ ಇವು ಉಪಧರ್ಮಗಳು.* ಧರ್ಮವೆಂಬ ಭ್ರಾಂತಿಯಿಂದ ಪಾಮರಜನರು ಇವುಗಳಲ್ಲಿ ಆಸಕ್ತರಾಗುತ್ತಾರೆ.

ಇಂದ್ರನ ಆ ಕುಕೃತ್ಯವನ್ನು ಕಂಡು ಪರಮಪರಾಕ್ರಮಿಯಾದ ಪೃಥುಮಹಾರಾಜನಿಗೆ ಆತನ ಮೇಲೆ ತುಂಬಾ ಕ್ರೋಧವುಂಟಾಯಿತು. ಆತನು ತನ್ನ ಬಿಲ್ಲನ್ನೆತ್ತಿಕೊಂಡು ಅದರಲ್ಲಿ ಬಾಣವನ್ನು ಅನುಸಂಧಾನ ಮಾಡಿಬಿಟ್ಟನು. ಆಗ ಕ್ರೋಧದಿಂದ ಕೆರಳಿದ್ದ ಆತನನ್ನು ನೋಡುವುದಕ್ಕೂ ಕಷ್ಟವಾಗಿತ್ತು. ಸಹಿಸಲಸದಳವಾದ ಪರಾಕ್ರಮವುಳ್ಳ ಪೃಥುವು ಇಂದ್ರನನ್ನು ವಧಿಸಲು ಸಿದ್ಧನಾಗಿಬಿಟ್ಟಿದ್ದಾನೆ–ಎಂಬುದನ್ನು ತಿಳಿದ ಋತ್ವಿಜರು ಆತನನ್ನು ತಡೆಯುತ್ತಾ 'ಮಹಾರಾಜ! ನೀನು ಮಹಾಬುದ್ಧಿಶಾಲಿಯು ; ಯಜ್ಞದೀಕ್ಷೆ ಯನ್ನು ವಹಿಸಿರುವುದರಿಂದ ನೀನೀಗ ಶಾಸ್ತ್ರವಿಹಿತವಾದ ಯಜ್ಞಪಶುವನ್ನು ಬಿಟ್ಟು ಬೇರೆ ಯಾರನ್ನೂ ವಧಿಸಬಾರದು. ಈ ಯಜ್ಞಕಾರ್ಯದಲ್ಲಿ ನಿನಗೆ

---

* ಉಪಧರ್ಮ–ಧರ್ಮದ ಸೋಗಿನಲ್ಲಿರುವ ಅಧರ್ಮ.

ವಿಘ್ನವನ್ನುಂಟುಮಾಡುತ್ತಿರುವ ಇಂದ್ರನು ನಿನ್ನ ಕೀರ್ತಿಯ ವಿಷಯ ದಲ್ಲಿಯೇ ಅಸೂಯೆಗೊಂಡು ಈಗಾಗಲೇ ತೇಜೋಹೀನನಾಗುತ್ತಿದ್ದಾನೆ. ನಾವು ಅಮೋಘವಾದ ಮಂತ್ರಗಳಿಂದ ಆತನನ್ನು ಇಲ್ಲಿಯೇ ಆವಾಹನೆ ಮಾಡಿ ಬಲಾತ್ಕಾರವಾಗಿ ಅಗ್ನಿಯಲ್ಲಿ ಹೋಮಮಾಡಿಬಿಡುವೆವು'–ಎಂದು ಸಮಾಧಾನ ಹೇಳಿದರು. (ಶ್ಲೋಕ 26-28)

ವಿದುರ! ಯಾಜಕರು ಯಜಮಾನನಿಗೆ ಹೀಗೆ ಹೇಳಿ, ಆತನ ಅನು ಮತಿಯನ್ನು ಪಡೆದು ಕ್ರೋಧದಿಂದ ಇಂದ್ರನನ್ನು ಅಲ್ಲಿಗೆ ಆವಾಹಿಸಿದರು. ಅವರು ಸ್ರುವವೆಂಬ ಸೌಟಿನಿಂದ ಅಗ್ನಿಯಲ್ಲಿ ಆಹುತಿಯನ್ನು ಇನ್ನೇನು ಹಾಕಬೇಕು ಎನ್ನುವಷ್ಟರಲ್ಲಿ ಬ್ರಹ್ಮದೇವರು ಅಲ್ಲಿಗೆ ದಯಮಾಡಿಸಿ ಹಾಗೆ ಮಾಡದಂತೆ ಅವರನ್ನು ತಡೆದು ಅವರಿಗೆ ಹೀಗೆ ತಿಳಿವಳಿಕೆ ನೀಡಿದರು :

'ಎಲೈ ಯಾಜಕರೇ! ನೀವು ಇಂದ್ರನನ್ನು ವಧಿಸುವುದು ಉಚಿತವಲ್ಲ. ಏಕೆಂದರೆ : ಈ ಯಜ್ಞವು ಶ್ರೀಭಗವಂತನಿಗೆ ಶರೀರಭೂತವಾದುದು. ಈ ಇಂದ್ರನೂ ಭಗವಂತನಿಗೆ ಶರೀರಭೂತನಾಗಿ ಯಜ್ಞನೆನಿಸುತ್ತಾನೆ. ಯಜ್ಞದಲ್ಲಿ ನೀವು ಆರಾಧಿಸಿರುವ ದೇವತೆಗಳೆಲ್ಲರೂ ಈತನಿಗೆ ಶರೀರದಂತೆ ಇದ್ದಾರೆ. ಹೀಗೆ ಯಜ್ಞದಲ್ಲಿ ಆರಾಧ್ಯರಾದ ದೇವತೆಗಳಿಗೆ ಆತ್ಮಭೂತನಾಗಿ, ಯಜ್ಞರೂಪಿಯಾದ ಮಹಾವಿಷ್ಣುವಿಗೆ ಶರೀರಭೂತನಾಗಿ, ಯಜ್ಞಾರಾಧ್ಯನೂ ಆಗಿರುವ ಇಂದ್ರನನ್ನು–ಯಜ್ಞದಿಂದಲೇ, ಯಜ್ಞದ ಆಹುತಿಯ ಮೂಲಕವೇ–ನೀವು ಸಂಹರಿಸಲು ಬಯಸುತ್ತಿದ್ದೀರಲ್ಲಾ! ಈ ಇಂದ್ರನೇನೋ ಪೃಥುಮಹಾರಾಜನ ಯಜ್ಞವನ್ನು ಧ್ವಂಸಮಾಡಲು ಬಯಸಿ ದೊಡ್ಡ ಧರ್ಮಸಾಂಕರ್ಯವನ್ನುಂಟುಮಾಡಿದ್ದಾನೆ. ಆದರೆ ನೋಡಿರಿ! ನೀವು ಅದಕ್ಕಾಗಿ ಆತನನ್ನು ಸಂಹರಿಸಲು ಬಯಸಿದರೆ ಅದೂ ಅತಿದೊಡ್ಡ ಧರ್ಮ ಸಾಂಕರ್ಯವಾಗುವುದು ; ಮೂಲಾಘಾತವಾಗುವುದು. ಈ ಪೃಥುವಿಗೂ– ಇಂದ್ರನಿಗೂ ಯಜ್ಞದಲ್ಲಿ ಪೈಪೋಟಿಯೇ ಬೇಡ. ಪೃಥುಮಹಾರಾಜನ ಕೀರ್ತಿಯು ಈಗಾಗಲೇ ಅತ್ಯಂತವಿಸ್ತಾರವಾಗಿ ಹರಡಿದೆ. ಈತನಿಗೆ ನೂರನೆಯ ಯಜ್ಞದ ಆವಶ್ಯಕತೆಯೇ ಇಲ್ಲ. ಆದ್ದರಿಂದ ಈ ಪೃಥುಮಹಾ ರಾಜನ ಯಜ್ಞಸಮಾರಂಭವು ತೊಂಬತ್ತೊಂಬತ್ತು ಯಜ್ಞಗಳಲ್ಲೇ ಪರಿಸಮಾಪ್ತವಾಗಲಿ. ಅವುಗಳಿಂದಲೇ ಈತನಿಗೆ ನೂರು ಯಜ್ಞಗಳನ್ನು

ಮಾಡಿದಂತಹ ಮತ್ತು ಅದಕ್ಕಿಂತಲೂ ಮಿಗಿಲಾದ ಕೀರ್ತಿಯು ಹಬ್ಬುವುದು." ಹೀಗೆ ಹೇಳಿ ಅನಂತರ ಪೃಥುಮಹಾರಾಜನಿಗೆ ಹೀಗೆ ಅಪ್ಪಣೆ ಕೊಡಿಸಿದರು.*

(ಶ್ಲೋಕ 29-31)

ಅಲಂ ತೇ ಕ್ರತುಭಿಃ ಸ್ವಿಷ್ಟೈರ್ಯದ್ಭವಾನ್ಮೋಕ್ಷಧರ್ಮವಿತ್ ॥೩೨॥

"ಎಲೈ ರಾಜೇಂದ್ರನೇ! ನೀನಾದರೋ ಮೋಕ್ಷಧರ್ಮವನ್ನು ಬಲ್ಲವನು. ಆದ್ದರಿಂದ ನಿನಗೆ ಈ ಯಜ್ಞಾನುಷ್ಠಾನಗಳ ಆವಶ್ಯಕತೆಯೇ ಇಲ್ಲ.

ನೈವಾತ್ಮನೇ ಮಹೇನ್ದ್ರಾಯ ರೋಷಮಾಹರ್ತುಮರ್ಹಸಿ ।
ಉಭಾವಪಿ ಹಿ ಭದ್ರಂ ತೇ ಉತ್ತಮಶ್ಲೋಕವಿಗ್ರಹೌ ॥೩೩॥

ನಿನಗೆ ಮಂಗಳವಾಗಲಿ. ನೀನು ಮತ್ತು ಇಂದ್ರರಿಬ್ಬರೂ ಪವಿತ್ರವಾದ ಕೀರ್ತಿಯುಳ್ಳ ಭಗವಂತನಾದ ಶ್ರೀಹರಿಯ ಶರೀರಗಳಾಗಿದ್ದೀರಿ. ಏಕದೇಹಿಗಳೇ ಆಗಿದ್ದೀರಿ. ಆದ್ದರಿಂದ ಇಂದ್ರನ ಮೇಲೆ ನೀನು ಕೋಪಿಸಿಕೊಳ್ಳ ಬಾರದು.

'ನನ್ನ ಕೊನೆಯ ಯಜ್ಞವು ನಿರ್ವಿಘ್ನವಾಗಿ ಮುಗಿಯಲಿಲ್ಲವಲ್ಲಾ'– ಎಂದೂ ನೀನು ಚಿಂತೆಪಡಬಾರದು. ನನ್ನ ಮಾತನ್ನು ಆದರಪೂರ್ವಕವಾಗಿ

---

* ಯಾವ ಇಂದ್ರನನ್ನು ನೀವು ಕೊಲ್ಲಲು ಬಯಸುತ್ತಿದ್ದೀರೋ–ಆ ಇಂದ್ರನಿಗೆ ಯಜ್ಞದಲ್ಲಿ ಆರಾಧಿಸಲ್ಪಟ್ಟ ದೇವತೆಗಳೆಲ್ಲರೂ ಪ್ರಿಯವಾದ ಶರೀರಗಳಾಗಿದ್ದಾರೆ. ಅಂತಹವನನ್ನು ನೀವು ವಧಿಸಬಾರದು. ಏಕೆಂದರೆ : ಯಜ್ಞನೆಂದು ಕರೆಯಲ್ಪಡುವ ಈ ಇಂದ್ರನು ಶ್ರೀಭಗವಂತನ ಅವತಾರವಾಗಿದ್ದಾನೆ. ('ಸ ಯಮಾದ್ಯೈಸ್ಸುರಗಣೈಃ ಅಪಾತ್ಸ್ವಾಯಮ್ಭುವಾನ್ತರಮ್' ಎಂಬಂತೆ.) ಬಲಶಾಲಿಯಾದ ಆತನೊಡನೆ ನೀನು ಸಖ್ಯವನ್ನು ಬೆಳೆಸುವುದೇ ಯೋಗ್ಯವು. ಆತನು ಎಂತಹ ಅಧರ್ಮವನ್ನು, ಅಂದರೆ ಪಾಷಂಡಪಥವನ್ನು ಈಗ ತೋರಿದ್ದಾನೆ ; ನೋಡಿರಿ. ಆತನೊಡನೆ ವೈರವನ್ನು ಬೆಳೆಸಿದರೆ ಆತನು ಈ ಪಾಷಂಡಪಥವನ್ನೇ ಮತ್ತೂ ಬೆಳೆಸಬಹುದು. ಆದುದರಿಂದ ಆತನೊಡನೆ ಗೆಳೆತನವೇ ಲೇಸು. (ಶ್ರೀಧರೀಯ)

ಇಂದ್ರನನ್ನು ನೀವು ವಧಿಸಬಾರದು. ಏಕೆಂದರೆ : ಯಜ್ಞವು ಭಗವಂತನಾದ ಶ್ರೀಹರಿಗೆ ಶರೀರಭೂತವಾಗಿದೆ. ಇಂದ್ರಾದಿದೇವತೆಗಳು ಆತನಿಗೆ ಇಷ್ಟವಾದ ಅಂದರೆ : ವಿಶೇಷಸನ್ನಿದಾನಕ್ಕೆ ಯೋಗ್ಯವಾದ ದೇಹಗಳು, ಅದುದರಿಂದ ಈ ಯಜ್ಞದಲ್ಲಿ ಇಂದ್ರನನ್ನು ನೀವು ಸಂಹರಿಸಬಾರದು. ಹಾಗೆ ಸಂಹರಿಸಲು ಬಯಸಿದರೆ ಶ್ರೀಹರಿಗೆ ಅಸಂತೋಷವಾಗಿ ಅದು ಯಜ್ಞವೇ ಆಗುವುದಿಲ್ಲ. ಅಥವಾ ಯಜ್ಞವು ಶ್ರೀಭಗವಂತನಾದ

ಕೇಳು. ದೈವವು ತಪ್ಪಿಸಿದ ಕೆಲಸವನ್ನು ತಾನು ಮಾಡಬೇಕೆಂದು ವಿಚಾರ ಮಾಡುವವನು ಮನಸ್ಸಿನಲ್ಲಿ ಪ್ರಬಲವಾದ ಕ್ರೋಧವನ್ನು ತುಂಬಿಕೊಂಡು ಭಯಂಕರವಾದ ಮೋಹಜಾಲದಲ್ಲಿ ಸಿಲುಕಿಕೊಳ್ಳುವನು. ಆದುದರಿಂದ ದೇವತೆಗಳಿಗೆ ದುಷ್ಟವಾದ ಆಗ್ರಹವನ್ನು ಉಂಟುಮಾಡುವ ಮತ್ತು ದೇವತೆಗಳಲ್ಲಿ ದುಷ್ಟವಾದ ಆಗ್ರಹದಿಂದ ಕೂಡಿದ ಈ ಯಜ್ಞವನ್ನು ಇಲ್ಲಿಗೇ ನಿಲ್ಲಿಸು. (ನಿಲ್ಲಿಸದಿದ್ದರೆ ಇದರಿಂದ ದೇವತೆಗಳ ಕೆಟ್ಟಕೋಪಕ್ಕೆ ನೀನು ಪಾತ್ರನಾಗಬೇಕಾಗುವುದು. ಅವರು ಕುಪಿತರಾದರೆ ಮಳೆ-ಬೆಳೆಗಳನ್ನು ನಿಲ್ಲಿಸಿ ಪ್ರಜೆಗಳಿಗೆ ಕೆಡುಕುಮಾಡುವರು ಅಥವಾ ದೇವತೆಗಳ ವಿಷಯದಲ್ಲಿ ಕೆಟ್ಟ ಆಗ್ರಹದಿಂದ ಕೂಡಿದ ಈ ಯಜ್ಞವನ್ನು ನಿಲ್ಲಿಸು. ಯಜ್ಞದಿಂದ ದೇವತೆಗಳಿಗೆ ಸಂತೋಷವನ್ನುಂಟುಮಾಡಬೇಕೇ ಹೊರತು ಕೋಪವನ್ನಲ್ಲ.) ಇದರ ಕಾರಣದಿಂದಲೇ ಇಂದ್ರನು ತೊಡಗಿಸಿದ ಪಾಷಂಡಧರ್ಮದಿಂದ ಧರ್ಮವು ನಾಶಹೊಂದುತ್ತದೆ. ಇಂದ್ರನು ಅಶ್ವವನ್ನು ಅಪಹರಿಸಿ ನಿನ್ನ ಯಜ್ಞಕ್ಕೆ ವಿಘ್ನವನ್ನುಂಟುಮಾಡುತ್ತಿರುವಾಗ ಯಾವ ಪಾಷಂಡಧರ್ಮವನ್ನು ಸೃಷ್ಟಿಸಿದನೋ–ಆ ಮನೋಹಾರಿಯಾದ ಮೋಸದ ಧರ್ಮದ ಕಡೆಗೇ ಜನರ

ಇಂದ್ರನಿಗೆ ದೇಹದಂತಿದೆ. ಯಜ್ಞದಲ್ಲಿ ಪೂಜಿತರಾದ ದೇವತೆಗಳು ಆತನ ಶರೀರಗಳು. ಆದುದರಿಂದ ಈ ಯಜ್ಞದಲ್ಲಿ ನೀವು ಆತನನ್ನು ವಧಿಸಬಾರದು. (ವಿಜಯಧ್ವಜೀಯ)

ನೀವು ಇಂದ್ರನನ್ನು ವಧಿಸಬಾರದು. ಏಕೆಂದರೆ : ಯಜ್ಞವು ಶ್ರೀಭಗವಂತನಿಗೆ ಶರೀರಭೂತವಾದುದು. ದೇವತೆಗಳೂ ಅಂತೆಯೇ ಆತನಿಗೆ ಇಷ್ಟವಾದ ಶರೀರಗಳು. ಹೀಗಿರುವಾಗ ಶ್ರೀಭಗವಂತನ ಶರೀರಭೂತವಾದ ಯಜ್ಞದಿಂದ ಶ್ರೀಭಗವಂತನ ಶರೀರಭೂತನೇ ಆಗಿರುವ ಇಂದ್ರನನ್ನು ಹೇಗೆ ತಾನೆ ವಧಿಸಲು ಬಯಸುವಿರಿ? ಈ ಇಂದ್ರನು ಪೃಥುಮಹಾರಾಜನ ಈ ಧರ್ಮರೂಪವಾದ ಕರ್ಮವನ್ನು ನಾಶಮಾಡಲು ಬಯಸಿ ದೊಡ್ಡ ಧರ್ಮಸಾಂಕರ್ಯವನ್ನು ಅಂದರೆ ಪಾಷಂಡಧರ್ಮರೂಪವಾದ ಅನ್ಯಾಯವನ್ನು ಆಚರಿಸಿದ್ದಾನೆ. ನೋಡಿರಿ. (ವೀರರಾಘವೀಯ)

ಇಂದ್ರನು ಅತ್ಯಂತ ಬಲಶಾಲಿಯು. ಆತನೊಡನೆ ಪೃಥುಮಹಾರಾಜನು ವೈರವನ್ನು ಬೆಳೆಸುವುದು ಉಚಿತವಲ್ಲ. ಇಂದ್ರನು ಈಗಾಗಲೇ ಜನರಿಗೆ ಆಕರ್ಷಕವಾಗಿರುವ ಪಾಷಂಡಧರ್ಮವನ್ನು ಪ್ರಕಟಪಡಿಸಿದ್ದಾನೆ. ಆತನೊಡನೆ ವಿರೋಧವನ್ನು ಬೆಳೆಸಿಕೊಂಡರೆ ಆತನು ಈ ಪಾಷಂಡಧರ್ಮವನ್ನೇ ಇನ್ನೂ ಬೆಳೆಸುವನು. ಆದುದರಿಂದ ಪೃಥುವು ನೂರನೆಯ ಯಜ್ಞವನ್ನು ನಿಲ್ಲಿಸಿ, ಇಂದ್ರನೊಡನೆ ಸ್ನೇಹವನ್ನು ಬೆಳೆಸಿಕೊಂಡು

ಮನಸ್ಸು ಎಳೆಯಲ್ಪಡುತ್ತಿದೆ, ನೋಡು. ನೀನಾದರೋ ಸಾಕ್ಷಾತ್ ಮಹಾ ವಿಷ್ಣುವಿನ ಅಂಶವೇ ಆಗಿದ್ದೀಯೆ. ವೇನನ ದುರಾಚರಣೆಯಿಂದ ಧರ್ಮವು ಲೋಪಹೊಂದುತ್ತಿರುವಾಗ ಆ ಸಮಯೋಚಿತವಾದ ಧರ್ಮವನ್ನು ರಕ್ಷಿಸು ವುದಕ್ಕೋಸ್ಕರವೇ ನೀನು ಈ ಶರೀರದಿಂದ ಅವತಾರಮಾಡಿದ್ದೀಯೆ.

(ಶ್ಲೋಕ 34-37)

ಸ ತ್ವಂ ವಿಮೃಶ್ಯಾಸ್ಯ ಭವಂ ಪ್ರಜಾಪತೇ
ಸಙ್ಕಲ್ಪನಂ ವಿಶ್ವಸೃಜಾಂ ಪಿಪೀಪೃಹಿ ।
ಐನ್ದ್ರೀಂ ಚ ಮಾಯಾಮುಪಧರ್ಮಮಾತರಂ
ಪ್ರಚಣ್ಡಪಾಖಣ್ಡಪಥಂ ಪ್ರಭೋ ಜಹಿ ॥೩೮॥

ಆದುದರಿಂದ ಎಲೈ ಪ್ರಜಾಪಾಲಕನೇ! ಈ ನಿನ್ನ ಅವತಾರದ ಉದ್ದೇಶವನ್ನು ವಿಚಾರಮಾಡಿ, ಭೃಗುವೇ ಮುಂತಾದ ಮುನೀಶ್ವರರ ಸಂಕಲ್ಪವನ್ನು ಈಡೇರಿಸು. ಈ ಪ್ರಚಂಡವಾದ ಪಾಷಂಡಮಾರ್ಗವೆಂಬ ಇಂದ್ರನ ಮಾಯೆಯು ಅಧರ್ಮದ ತಾಯಿಯಾಗಿದೆ. ನೀನು ಅದನ್ನು ನಾಶಪಡಿಸಬೇಕು."

ಮೈತ್ರೇಯರು ಹೇಳುತ್ತಾರೆ :

ಲೋಕಗುರುವಾದ ಭಗವಾನ್ ಬ್ರಹ್ಮದೇವರು ಹೀಗೆ ತಿಳಿವಳಿಕೆ ಕೊಡಲು–ಆ ರಾಜೇಂದ್ರನು ಯಜ್ಞದ ಆಗ್ರಹವನ್ನು ತೊರೆದು ಇಂದ್ರದೇವ ರೊಡನೆ ಪ್ರೀತಿಯಿಂದ ಸಂಧಿಯನ್ನು ಮಾಡಿಕೊಂಡನು. ಅನಂತರ ಆತನು ಯಜ್ಞಾಂಗವಾಗಿ ಅದರ ಕೊನೆಯಲ್ಲಿ ಮಾಡುವ ಅವಭೃಥವೆಂಬ ಸ್ನಾನವನ್ನು ಮಾಡಿ ಮುಗಿಸಲು, ಆತನ ಯಜ್ಞಗಳಿಂದ ಸಂತೃಪ್ತರಾದ ದೇವತೆಗಳು ಆತನಿಗೆ ಅಭೀಷ್ಟವಾದ ವರಗಳನ್ನು ಅನುಗ್ರಹಿಸಿದರು. ಆದಿರಾಜನಾದ ಪೃಥುವು ಅತ್ಯಂತಶ್ರದ್ಧೆಯಿಂದ ಬ್ರಾಹ್ಮಣರಿಗೆ ದಕ್ಷಿಣೆಗಳನ್ನು ನೀಡಿದನು. ಆ ಬ್ರಾಹ್ಮಣರೆಲ್ಲರೂ ಆತನ ಸತ್ಕಾರಗಳಿಂದ ಸಂತುಷ್ಟರಾಗಿ ಆತನಿಗೆ ಅಮೋಘ ವಾದ ಆಶೀರ್ವಾದಗಳನ್ನು ಅನುಗ್ರಹಿಸುತ್ತಾ ಹೇಳಿದರು :

ಇಬ್ಬರೂ ಸೇರಿ ಪಾಷಂಡಧರ್ಮವನ್ನು ತಡೆಗಟ್ಟಿ ವೈದಿಕಧರ್ಮವನ್ನು ಅಭಿವೃದ್ಧಿ ಗೊಳಿಸುವುದೇ ಉಚಿತ–ಎಂಬ ಅಭಿಪ್ರಾಯವನ್ನೂ ಇಲ್ಲಿ ಕೆಲವರು ಹೇಳುತ್ತಾರೆ.

(ಶ್ಲೋಕ ೩೧-೩೨)

"ಎಲೈ ಮಹಾಬಾಹುವೇ! ನಿನ್ನ ಆಹ್ವಾನದಂತೆ ದಯಮಾಡಿಸಿದ್ದ ಪಿತೃಗಳು, ದೇವತೆಗಳು, ಋಷಿಗಳು, ಮನುಷ್ಯರೇ ಮುಂತಾದವರೆಲ್ಲರೂ ದಾನ ಮತ್ತು ಮಾನಗಳಿಂದ ಚೆನ್ನಾಗಿ ಸತ್ಕರಿಸಲ್ಪಟ್ಟರು"–ಎಂದು ಆತನನ್ನು ಅಭಿನಂದಿಸಿದರು. (ಶ್ಲೋಕ 39-42)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಚತುರ್ಥಸ್ಕಂಧದ ೧೯ನೆಯ ಅಧ್ಯಾಯವು ಮುಗಿಯಿತು

ಚತುರ್ಥಸ್ಕಂಧ ೨೦ನೆಯ ಅಧ್ಯಾಯ

ಪೃಥುಚಕ್ರವರ್ತಿಯ ಯಜ್ಞಶಾಲೆಯಲ್ಲಿ ಶ್ರೀಭಗವಂತನು ಆವಿರ್ಭವಿಸಿ ಆತನನ್ನು ಅನುಗ್ರಹಿಸಿದುದು

ಶ್ರೀಮೈತ್ರೇಯರು ಪೃಥುಚಕ್ರವರ್ತಿಯ ಕಥೆಯನ್ನು ಮುಂದುವರಿ ಸುತ್ತಾ ಹೇಳುತ್ತಾರೆ :

ಭಗವಾನಪಿ ವೈಕುಣ್ಠಃ ಸಾಕಂ ಮಘವತಾ ವಿಭುಃ ।
ಯಜ್ಞೈರ್ಯಜ್ಞಪತಿಸ್ತುಷ್ಟೋ ಯಜ್ಞಭುಕ್ತಮಭಾಷತ ॥೧॥

"ಯಜ್ಞಪತಿಯೂ ಯಜ್ಞಭೋಕ್ತೃವೂ ಆದ ಭಗವಾನ್ ಶ್ರೀಮಹಾ ವಿಷ್ಣುವು ಪೃಥುಮಹಾರಾಜನ ಯಜ್ಞಗಳಿಂದ ಸಂತುಷ್ಟನಾಗಿ ಇಂದ್ರನೊಡನೆ ಆ ಯಜ್ಞಕ್ಕೆ ದಯಮಾಡಿಸಿ ಆ ರಾಜೇಂದ್ರನನ್ನು ಅಭಿನಂದಿಸುತ್ತಾ ಹೀಗೆಂದನು :

ಏಷಾ ತೇಽಕಾರಷೀದ್ಭಙ್ಗಂ ಹಯಮೇಧಶತಸ್ಯ ಹ ।
ಕ್ಷಮಾಪಯತ ಆತ್ಮಾನಮಮುಷ್ಯ ಕ್ಷನ್ತುಮರ್ಹಸಿ ॥೨॥

"ಎಲೈ ರಾಜೇಂದ್ರನೇ! ಈ ಇಂದ್ರನು ನೂರು ಅಶ್ವಮೇಧಯಜ್ಞಗಳನ್ನು ಪೂರ್ಣಗೊಳಿಸಬೇಕೆಂದಿದ್ದ ನಿನ್ನ ಸಂಕಲ್ಪಕ್ಕೆ ವಿಘ್ನವನ್ನುಂಟು ಮಾಡಿದುದಕ್ಕಾಗಿ ನಿನ್ನಲ್ಲಿ ಕ್ಷಮೆಯನ್ನು ಯಾಚಿಸುತ್ತಿದ್ದೇನೆ. ನೀನು ಈತನನ್ನು ಕ್ಷಮಿಸು.

ಸುಧಿಯಃ ಸಾಧವೋ ಲೋಕೇ ನರದೇವ ನರೋತ್ತಮಾಃ ।
ನಾಭಿದ್ರುಹ್ಯನ್ತಿ ಭೂತೇಭ್ಯೋ ಯರ್ಹಿ ನಾತ್ಮಾ ಕಲೇವರಮ್ ॥೩॥

ಜ್ಞಾನಿಗಳೂ, ಸಾಧುಗಳೂ ಆಗಿರುವ ನರಶ್ರೇಷ್ಠರು ಯಾವ ಜೀವಿಗಳಿಗೂ ದ್ರೋಹವನ್ನೆಸಗುವುದಿಲ್ಲ. ಏಕೆಂದರೆ : 'ಈ ಶರೀರವೇ ಆತ್ಮನಲ್ಲ'–ಎಂಬುದು ಅವರಿಗೆ ತಿಳಿದಿರುತ್ತದೆ.

ನಿನ್ನಂತಹ ನರಶ್ರೇಷ್ಠರು ನನ್ನ ಮಾಯೆಗೆ ಮರುಳಾಗಬಾರದು. ಹಾಗೆ ಮರುಳಾಗುವುದಾದರೆ ಬಹುದಿನಗಳವರೆಗೂ ಮಾಡಿರುವ ಜ್ಞಾನಿಜನರ ಸೇವೆಯು ಕೇವಲ ಶ್ರಮವೆಂದೇ ಸಿದ್ಧವಾಗುತ್ತದೆ. ಜ್ಞಾನದಿಂದ ಎಚ್ಚರಗೊಂಡವನು, ಈ ಶರೀರವನ್ನು–ಅವಿದ್ಯೆ, ವಾಸನೆ ಮತ್ತು ಕರ್ಮಗಳಿಂದ ನಿರ್ಮಿತವಾಗಿರುವ–ಬೊಂಬೆಯೆಂದು ತಿಳಿದಿರುತ್ತಾನೆ. ಆದ್ದರಿಂದ ಆತನು ಇದರಲ್ಲಿ ಆಸಕ್ತನಾಗುವುದಿಲ್ಲ. ಹೀಗೆ ಶರೀರದಲ್ಲಿಯೇ ಅನಾಸಕ್ತನಾಗಿರುವುದರಿಂದ ಆ ವಿವೇಕಿಯು ಆ ಶರೀರಸಂಬಂಧದಿಂದ ಉಂಟಾದ ಮನೆ, ಮಡದಿ, ಮಕ್ಕಳು ಮತ್ತು ಹಣ ಮುಂತಾದುವುಗಳಲ್ಲಿ ಹೇಗೆ ತಾನೇ ಮಮತೆಯಿಂದ ಕೂಡಿರುತ್ತಾನೆ? (ಶ್ಲೋಕ 4-6)

ಏಕಃ ಶುದ್ಧಃ ಸ್ವಯಂಜ್ಯೋತಿರ್ನಿರ್ಗುಣೋಽಸೌ ಗುಣಾಶ್ರಯಃ ।
ಸರ್ವಗೋಽನಾವೃತಃ ಸಾಕ್ಷೀ ನಿರಾತ್ಮಾತ್ಮಾತ್ಮನಃ ಪರಃ ॥೭॥

ಈ ಆತ್ಮನು ಶರೀರದಿಂದ ಭಿನ್ನನಾದವನು. ಏಕೆಂದರೆ : ಈತನು ಕೇವಲನೂ, ಶುದ್ಧನೂ, ಸ್ವಯಂಪ್ರಕಾಶವುಳ್ಳವನೂ ತ್ರಿಗುಣರಹಿತನಾಗಿ ತ್ರಿಗುಣಗಳಿಗೆ ಆಶ್ರಯನಾಗಿರುವವನೂ, ಸರ್ವವ್ಯಾಪಿಯೂ, ಆವರಣಶೂನ್ಯನೂ, ಎಲ್ಲಕ್ಕೂ ಸಾಕ್ಷಿಯೂ ಮತ್ತು ಬೇರೊಂದೂ ಆತ್ಮವಿಲ್ಲದವನೂ ಆಗಿರುತ್ತಾನೆ.

ಈ ದೇಹದಲ್ಲಿರುವ ಆತ್ಮನು ಹೀಗೆ ಶರೀರವಲ್ಲ ; ಶರೀರದಿಂದ ಭಿನ್ನನಾದವನು–ಎಂದು ತಳಿದುಕೊಂಡ ಜ್ಞಾನಿಯಾದ ಮನುಷ್ಯನು ಪ್ರಕೃತಿಯಲ್ಲೇ ಇದ್ದರೂ ಅದರ ಗುಣಗಳ ಅಂಟು ಆತನಿಗೆ ಇರುವುದಿಲ್ಲ. ಎಲೈ ರಾಜೇಂದ್ರನೇ! ಯಾವನು ಯಾವ ಕಾಮನೆಯನ್ನು ಇಟ್ಟುಕೊಳ್ಳದೇ ತನ್ನ ವರ್ಣಾಶ್ರಮಧರ್ಮಗಳ ಮೂಲಕ ಪ್ರತಿದಿನವೂ ಶ್ರದ್ಧೆಯಿಂದ ನನ್ನನ್ನು ಆರಾಧಿಸುತ್ತಾನೆಯೋ–ಆತನ ಚಿತ್ತವು ಮೆಲ್ಲ-ಮೆಲ್ಲಗೆ ಶುದ್ಧವಾಗಿಬಿಡುವುದು. ಚಿತ್ತವು ಶುದ್ಧವಾದ ಬಳಿಕ ಆತನಿಗೆ ವಿಷಯಸುಖಗಳ ಸಂಬಂಧ ತಪ್ಪಿಹೋಗುವುದು. ತತ್ತ್ವಜ್ಞಾನವು ಪ್ರಾಪ್ತವಾಗಲಾಗಿ ಆತನು

ನನ್ನಲ್ಲಿ ನೆಲೆಗೊಳ್ಳುವನು. ಹೀಗೆ ನನ್ನಲ್ಲಿ ನೆಲೆಸುವಿಕೆಯೇ ಪರಮ ಶಾಂತಿಯು, ಬ್ರಹ್ಮವು ಅಥವಾ ಕೈವಲ್ಯವೆನಿಸುವುದು. (ಶ್ಲೋಕ 8-10)

ಉದಾಸೀನಮಿವಾಧ್ಯಕ್ಷಂ ದ್ರವ್ಯಜ್ಞಾನಕ್ರಿಯಾತ್ಮನಾಮ್ ।
ಕೂಟಸ್ಥಮಿಮಮಾತ್ಮಾನಂ ಯೋ ವೇದಾಪ್ನೋತಿ ಶೋಭನಮ್ ॥

ಕೂಟಸ್ಥನಾಗಿ ರಾಶಿಯ ಮೂಲದಲ್ಲಿರುವ ಆತ್ಮನು ದ್ರವ್ಯ (ಶರೀರ), ಜ್ಞಾನ, ಕ್ರಿಯೆ ಮತ್ತು ಮನಸ್ಸು–ಇವುಗಳಿಗೆ ಅಧ್ಯಕ್ಷನಾಗಿದ್ದರೂ ಈತನು ಅವುಗಳ ಬಗೆಗೆ ಉದಾಸೀನನಂತೆ ಇರುವುದರಿಂದ ಅವುಗಳ ಲೋಪವು ಈತನಿಗೆ ಅಂಟುವುದಿಲ್ಲ ಎಂಬುದನ್ನು ತಿಳಿದುಕೊಂಡ ಮನುಷ್ಯನು ಪರಮ ಮಂಗಳರೂಪವಾದ ಮೋಕ್ಷಪದವನ್ನು ಪಡೆಯುವನು.*

ಗುಣಪ್ರವಾಹರೂಪವಾಗಿರುವ ಸಂಸಾರವು–ಪಂಚಭೂತಗಳು, ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು ಮತ್ತು ಚೇತನಾತ್ಮಗಳ ಸಮುದಾಯವಾಗಿ–ದೇವತೆಗಳು, ಮನುಷ್ಯರು ಮುಂತಾದ ರೂಪಗಳಿಂದ ಭಿನ್ನವಾಗಿರುವ ಲಿಂಗಕ್ಕೆ ಅಂದರೆ ಮನೋಮಯದೇಹಕ್ಕೆ ಇರುವುದೇ ಹೊರತು ಆತ್ಮನಿಗಲ್ಲ. ಇದನ್ನು ತಿಳಿದು ಜ್ಞಾನಿಗಳು ನನ್ನಲ್ಲಿ ದೃಢವಾದ ಅನುರಾಗವನ್ನು ಹೊಂದಿದವರಾಗಿ, ಸಂಪತ್ತು ಮತ್ತು ವಿಪತ್ತು ಇವುಗಳೆರಡರಲ್ಲೂ ಹರ್ಷ-ಶೋಕ ಮುಂತಾದ ವಿಕಾರಗಳಿಗೆ ಒಳಗಾಗುವುದಿಲ್ಲ.[1] ಆದುದರಿಂದ ಎಲೈ ವೀರವರನೇ! ನೀನು ಉತ್ತಮರು, ಮಧ್ಯಮರು ಮತ್ತು

---

* ಯಾವ ಪಂಡಿತರು ತತ್ತ್ವತ್ರಯವನ್ನು ವಿಮರ್ಶೆಮಾಡಿ ಜ್ಞಾನಯೋಗ-ಕರ್ಮಯೋಗಸಹಿತವಾದ ಭಕ್ತಿಯೋಗದಿಂದ ಅಪರೋಕ್ಷಜ್ಞಾನವನ್ನು ಪಡೆದಿರುತ್ತಾರೆಯೋ–ಅವರು ಜೀವಂತವಾಗಿರುವಾಗಲೇ ಭೂತ, ಇಂದ್ರಿಯ ಮುಂತಾದುವುಗಳಿಗೆ ಅಧ್ಯಕ್ಷನಾಗಿರುವ ಜೀವನು 'ಸ್ವರೂಪತಃ ನಿರ್ವಿಕಾರನು' ಎಂದು ತಿಳಿಯುತ್ತಾರೆ.
(ವೀರರಾಘವೀಯ)

ಶ್ರೀಭಗವಂತನು ಸಾತ್ತ್ವಿಕ-ರಾಜಸ ಮತ್ತು ತಾಮಸಪದಾರ್ಥಗಳಿಗೆ ಅಧ್ಯಕ್ಷನಾಗಿದ್ದರೂ ನಿರ್ವಿಕಾರನಾಗಿದ್ದಾನೆ ಎಂದು ಅರಿಯುವವನು ಶ್ರೇಯೋಭಾಗಿಯಾಗುತ್ತಾನೆ.
(ವಿಜಯಧ್ವಜೀಯ) (ಶ್ಲೋಕ ೧೧)

[1] ವಿಕಾರವು ಧರ್ಮಭೂತಜ್ಞಾನದಲ್ಲಿರುವುದೇ ಹೊರತು ಆತ್ಮಸ್ವರೂಪದಲ್ಲಿಲ್ಲ. ಆದುದರಿಂದ ಕೂಟಸ್ಥಭಾವ ಮತ್ತು ಉದಾಸೀನತೆಗಳು ಆತ್ಮನಿಗೇ ಸಹಜ ಮತ್ತು

ಅಧಮರೆಂಬ–ಈ ಎಲ್ಲ ಪುರುಷರಲ್ಲೂ ಸಮಾನಭಾವವನ್ನು ಇಟ್ಟು ಕೊಂಡು, ಸುಖ-ದುಃಖಗಳನ್ನು ಸಮವಾಗಿ ಕಾಣಬೇಕು ಮನಸ್ಸು, ಇಂದ್ರಿಯ ಗಳನ್ನು ಗೆದ್ದು ನಾನು ಒದಗಿಸಿಕೊಟ್ಟಿರುವ ಮಂತ್ರಿಯೇ ಮುಂತಾದ ಎಲ್ಲ ರಾಜಕೀಯಪುರುಷರ ಸಹಾಯದಿಂದ ಸಮಸ್ತಲೋಕಗಳನ್ನೂ ರಕ್ಷಿಸಬೇಕು. ಪ್ರಜೆಗಳನ್ನು ರಕ್ಷಿಸುವುದರಿಂದಲೇ ರಾಜನಿಗೆ ಕಲ್ಯಾಣವುಂಟಾಗುವುದು. ಹೀಗೆ ಅವರನ್ನು ರಕ್ಷಿಸಿದರೆ ಆತನಿಗೆ ಪರಲೋಕದಲ್ಲಿ ಪ್ರಜೆಗಳು ಆಚರಿಸಿದ ಪುಣ್ಯದಲ್ಲಿ ಆರನೆಯ ಒಂದು ಭಾಗವು ದೊರೆಯುವುದು. ಹೀಗಲ್ಲದೇ ಪ್ರಜೆಗಳನ್ನು ರಕ್ಷಿಸದೇ ಅವರಿಂದ ಕಂದಾಯವನ್ನು ಮಾತ್ರ ತೆಗೆದುಕೊಳ್ಳು ವಂತಹ ರಾಜನ ಇಡೀ ಪುಣ್ಯವನ್ನು ಪ್ರಜೆಗಳು ಕಿತ್ತುಕೊಳ್ಳುವರು. ಇಷ್ಟೇ ಅಲ್ಲ ; ಪ್ರಜೆಗಳು ಆಚರಿಸುವ ಪಾಪಗಳೂ ಆ ರಾಜನಿಗೆ ಬಂದು ಸೇರುವುವು. ಇದನ್ನರಿತು ನೀನು ಶ್ರೇಷ್ಠರಾದ ಬ್ರಾಹ್ಮಣರ ಸಮ್ಮತಿ ಮತ್ತು ಪರಂಪರೆಯಿಂದ ಧರ್ಮವನ್ನೇ ಪ್ರಧಾನವಾಗಿಟ್ಟುಕೊಂಡು ಎಲ್ಲದರಲ್ಲೂ ಅನಾಸಕ್ತನಾಗಿ ಈ ಭೂಮಿಯನ್ನು ಆಳುತ್ತಿದ್ದರೆ ಪ್ರಜೆಗಳು ನಿನ್ನನ್ನು ಪ್ರೀತಿಸುವರು ಮತ್ತು ಕೆಲವೇ ದಿವಸಗಳಲ್ಲಿ ಸನಕಾದಿಸಿದ್ಧರು ನಿನ್ನ ಮನೆಗೇ ದಯಮಾಡಿಸಿ ನಿನಗೆ ದರ್ಶನವನ್ನು ದಯಪಾಲಿಸುವರು. (ಶ್ಲೋಕ 12-15)

ವರಂ ಚ ಮತ್ಕಞ್ಚನ ಮಾನವೇನ್ದ್ರ
ವೃಣೀಷ್ವ ತೇऽಹಂ ಗುಣಶೀಲಯನ್ತ್ರಿತಃ ।
ನಾಹ ಮಖೈರ್ವೈ ಸುಲಭಸ್ತಪೋಭಿ-
ರ್ಯೋಗೇನ ವಾ ಯತ್ಸಮಚಿತ್ತವರ್ತೀ ॥೧೬॥

ಆದುದರಿಂದ, ರಾಜೇಂದ್ರ! ನಿನಗೆ ಇಷ್ಟವಾದ ವರವನ್ನು ಬೇಡಿಕೊ. ನಾನು ನಿನ್ನ ಗುಣಗಳಿಗೂ, ಶೀಲಕ್ಕೂ ವಶನಾಗಿಬಿಟ್ಟಿದ್ದೇನೆ. ನಾನು ಯಜ್ಞಗಳಿಂದಾಗಲೀ, ತಪಸ್ಸುಗಳಿಂದಾಗಲೀ, ಯೋಗದಿಂದಾಗಲೀ ಸುಲಭ

ದೇವಾದಿರೂಪಪರಿಣಾಮವು ದ್ರವ್ಯ ಮುಂತಾದುವುಗಳ ಸಂಘಾತರೂಪವಾಗಿರುವ ದೇಹಕ್ಕೇ ಸಹಜ. (ವೀರರಾಘವೀಯ)

ಪಂಚಭೂತಗಳು, ಜ್ಞಾನೇಂದ್ರಿಯ-ಕರ್ಮೇಂದ್ರಿಯಗಳು–ಚೇತನಗಳನ್ನು ವ್ಯಾಪಿಸಿರುವ ಮನಸ್ಸಿಗೆ ಗುಣಪ್ರವಾಹರೂಪವಾದ ಸಂಸಾರವೇ ಹೊರತು ಆತ್ಮನಿಗಲ್ಲ ಎಂದು ಜ್ಞಾನಿಗಳು ತಿಳಿಯುತ್ತಾರೆ. (ವಿಜಯಧ್ವಜೀಯ) (ಶ್ಲೋಕ ೧೨)

ವಾಗಿ ಸಿಕ್ಕುವವನಲ್ಲ. ಯಾರಲ್ಲಿ ಸಮಭಾವವಿದೆಯೋ–ಅಂತಹವರ ಚಿತ್ತದಲ್ಲಿ ಮಾತ್ರವೇ ಇರುವವನು."

ಮೈತ್ರೇಯರು ಹೇಳುತ್ತಾರೆ :

ವಿದುರ! ಸರ್ವಲೋಕ ಗುರುವಾದ ಶ್ರೀಹರಿ ವಿಷ್ವಕ್ಸೇನನು ಹೀಗೆ ಆದೇಶನೀಡಲು ಸರ್ವಲೋಕವಿಜಯಿಯಾದ ಆ ರಾಜೇಂದ್ರನು ಅದನ್ನು ಶಿರಸಾವಹಿಸಿದನು. ಆಗ ದೇವರಾಜನಾದ ಇಂದ್ರನು ತನ್ನ ದುಷ್ಕಾರ್ಯಕ್ಕಾಗಿ ತಾನೇ ನಾಚಿಕೆಪಟ್ಟು ಪೃಥುವಿನ ಪಾದಗಳಿಗೆ ಬೀಳುವಷ್ಟರಲ್ಲಿಯೇ ನೃಪತಿಯು ಆತನನ್ನು ಪ್ರೇಮದಿಂದ ಆಲಿಂಗನೆಮಾಡಿಕೊಂಡು ಆತನಲ್ಲಿದ್ದ ದ್ವೇಷವೆಂಬ ದೋಷವನ್ನು ತೊರೆದುಬಿಟ್ಟನು. ಅನಂತರ ಪೃಥುಮಹಾರಾಜನು ವಿಶ್ವಾತ್ಮನಾದ ಶ್ರೀಭಗವಂತನನ್ನು ಆರಾಧನೆಮಾಡಿ ಅಡಿಗಡಿಗೂ ಉಕ್ಕಿ ಬರುತ್ತಿದ್ದ ಭಕ್ತಿಯಿಂದ ಆತನ ಅಡಿದಾವರೆಗಳನ್ನು ಹಿಡಿದುಕೊಳ್ಳುತ್ತಿರಲು, ಸ್ವಾಮಿಯು ಅಲ್ಲಿಂದ ಹೊರಡಲನುವಾಗಿದ್ದರೂ ಆತನ ಭಕ್ತಿಗೆ ವಶನಾಗಿ ಪ್ರಯಾಣಿಸಲು ತಡಮಾಡಿದನು. ಸಂತರಿಗೆ ಸಖನಾದ, ಭಕ್ತಪ್ರಿಯನಾದ ಆ ಸ್ವಾಮಿಯು ತನ್ನ ಕಣ್ದಾವರೆಗಳಿಂದ ಆತನನ್ನು ನೋಡುತ್ತಲೇ ಇದ್ದನು ; ಅಲ್ಲಿಂದ ಹೊರಡಲೇ ಇಲ್ಲ. ಕಣ್ಣುಗಳಲ್ಲಿ ಕಂಬನಿಯು ತುಂಬಿಕೊಂಡಿದ್ದರಿಂದ ಆ ಆದಿರಾಜನು ಶ್ರೀಭಗವಂತನನ್ನು ನೋಡುವುದಕ್ಕೂ ಸಮರ್ಥನಾಗಲಿಲ್ಲ. ಗಂಟಲು ಗದ್ಗದವಾಗಿದ್ದರಿಂದ ಏನನ್ನೂ ಆಡುವುದಕ್ಕೂ ಶಕ್ತನಾಗಲಿಲ್ಲ. ಆತನನ್ನು ಹೃದಯದಲ್ಲಿ ಆಲಂಗಿಸಿಕೊಂಡು, ಅಲ್ಲಿಯೇ ಧರಿಸಿಕೊಂಡು, ಕೈಜೋಡಿಸಿಕೊಂಡು ಹಾಗೆಯೇ ನಿಂತುಕೊಂಡುಬಿಟ್ಟನು. ಅನಂತರ ಕಂಬನಿಯನ್ನು ಒರೆಸಿಕೊಂಡು ಆ ಸೌಂದರ್ಯಾನಂದ ಮೂರ್ತಿಯನ್ನು ನೋಡತೊಡಗಿದನು. ಪ್ರಭುವು ಕಾಲಿನ ತುದಿಯಿಂದ ನೆಲವನ್ನು ಮುಟ್ಟುತ್ತಾ* ತನ್ನ ಕೈತುದಿಯನ್ನು ಉನ್ನತವಾದ ಗರುಡದೇವರ ಹೆಗಲಿನ ಮೇಲೆ ಇರಿಸಿಕೊಂಡಿದ್ದನು. ಆತನನ್ನು ಎಷ್ಟೆಷ್ಟು ನೋಡಿದರೂ ಪೃಥುವಿಗೆ ತೃಪ್ತಿಯಾಗಲಿಲ್ಲ. ಹೀಗೆ ಆ ಶ್ರೀಹರಿಯನ್ನು

---

* ದೇವದೇವನಾದ ಶ್ರೀಭಗವಂತನಿಗೆ ಭೂಸ್ಪರ್ಶಮಾಡಬಾರದೆಂಬ ನಿಯಮವಿದ್ದರೂ ಪೃಥುವಿನ ಮೇಲಿನ ಕರುಣೆಯಿಂದ ತನ್ನ ಪಾದಗಳು ಭೂಮಿಯನ್ನು ಮುಟ್ಟುತ್ತಿರುವಂತೆ ದರ್ಶನನೀಡಿದನು. (ಶ್ಲೋಕ ೨೨)

ಕಣ್ಣುಗಳಿಂದ ಪಾನಮಾಡುತ್ತಾ ಪೃಥುಮಹಾರಾಜನು ಶ್ರೀಭಗವಂತನಲ್ಲಿ ಹೀಗೆ ಬಿನ್ನೈಸಿದನು : (ಶ್ಲೋಕ 17-22)

ವರಾನ್ವಿಭೋ ತ್ವದ್ವರದೇಶ್ವರಾದ್ಬುಧಃ
ಕಥಂ ವೃಣೀತೇ ಗುಣವಿಕ್ರಿಯಾತ್ಮನಾಮ್ ।
ಯೇ ನಾರಕಾಮಪಿ ಸನ್ತಿ ದೇಹಿನಾಂ
ತಾನೀಶ ಕೈವಲ್ಯಪತೇ ವೃಣೇ ನ ಚ ॥೨೩॥

"ಪ್ರಭೋ! ವೈಕುಂಠಪತಿಯೇ! ವರವನ್ನು ಕೊಡುವ ಬ್ರಹ್ಮಾದಿ ದೇವತೆಗಳಿಗೂ ವರವನ್ನು ದಯಪಾಲಿಸುವ ಸರ್ವವರಪ್ರದಾನಸಮರ್ಥನಾದ ಸ್ವಾಮಿಯು ನೀನು. ದೇಹಾಭಿಮಾನಿಗಳು ಭೋಗಿಸಲು ಯೋಗ್ಯವಾದ ಇಂತಹ ವರವನ್ನು ವಿವೇಕಿಗಳು ನಿನ್ನಿಂದ ಹೇಗೆತಾನೇ ಬೇಡಿಯಾರು? ಕ್ಷುದ್ರವಾದ ವಿಷಯಭೋಗಗಳು ನರಕಯೋಗ್ಯರಾದ ಸಂಸಾರಿಗಳಿಗೂ ದೊರೆಯುವುವು. ಆದರೆ ನಾನು ಅವುಗಳನ್ನು ಬೇಡೆನು.

ನ ಕಾಮಯೇ ನಾಥ ತದಪ್ಯಹಂ ಕ್ವಚಿ-
ನ್ನ ಯತ್ರ ಯುಷ್ಮಚ್ಚರಣಾಮ್ಬುಜಾಸವಃ ।
ಮಹತ್ತಮಾನ್ತರ್ಹೃದಯಾನ್ಮುಖಚ್ಯುತೋ
ವಿಧತ್ಸ್ವ ಕರ್ಣಾಯುತಮೇಷ ಮೇ ವರಃ ॥೨೪॥

ಹಾಗಾದರೆ ಮೋಕ್ಷವನ್ನು ಬೇಡುವೆಯಾ? ಎಂದರೆ : ಅದನ್ನೂ ನಾನು ಪ್ರಾರ್ಥಿಸುವುದಿಲ್ಲ. ಏಕೆಂದರೆ : ಅದರಲ್ಲಿ ಮಹಾಪುರುಷರ ಹೃದಯದಿಂದ ಅವರ ಬಾಯಿಯ ಮೂಲಕ ಹರಿದುಬರುವ ನಿನ್ನ ಚರಣಾರವಿಂದಗಳ ಮಕರಂದವಿರುವುದಿಲ್ಲ. ನಿನ್ನ ಕೀರ್ತಿಕಥೆಗಳನ್ನು ಕೇಳುತ್ತಿರುವ ಸುಖವು ದೊರೆಯುವುದಿಲ್ಲ. ಆದುದರಿಂದ ನಿನ್ನ ದಿವ್ಯಲೀಲಾಕಥೆಗಳನ್ನು ನಿರಂತರವಾಗಿ ಶ್ರವಣಮಾಡುತ್ತಿರುವುದಕ್ಕಾಗಿ ನನಗೆ ಹತ್ತು ಸಾವಿರ ಕಿವಿಗಳನ್ನು ಕರುಣಿಸು. ಅದೇ ನಾನು ಬೇಡುವ ವರವು.

ಸ ಉತ್ತಮಶ್ಲೋಕ ಮಹನ್ಮುಖಚ್ಯುತೋ
ಭವತ್ಪದಾಮ್ಭೋಜಸುಧಾಕಣಾನಿಲಃ ।
ಸ್ಮೃತಿಂ ಪುನರ್ವಿಸ್ಮೃತತತ್ತ್ವವರ್ತ್ಮನಾಂ
ಕುಯೋಗಿನಾಂ ನೋ ವಿತರತ್ಯಲಂ ವರೈಃ ॥೨೫॥

ಪುಣ್ಯಕೀರ್ತಿಯಾದ ಪ್ರಭುವೇ! ನಿನ್ನ ಅಡಿದಾವರೆಗಳ ರಸಾಮೃತದ ಕಣಗಳನ್ನು ಹೊತ್ತುತರುತ್ತಾ ಮಹಾತ್ಮರ ಮುಖಾರವಿಂದಗಳಿಂದ ಯಾವ ಗಾಳಿಯು ಹೊರಹೊಮ್ಮುತ್ತದೆಯೋ–ಅದಕ್ಕೆ ಅದ್ಭುತವಾದ ಶಕ್ತಿಯುಂಟು. ತತ್ತ್ವವನ್ನು ಮರೆತಿರುವ ನಮ್ಮಂತಹ ಕುಯೋಗಿಗಳಿಗೂ ಮತ್ತೆ ತತ್ತ್ವದ ಅರಿವನ್ನುಂಟುಮಾಡುವಂತಹ ಶಕ್ತಿಯುಂಟು. ಆದುದರಿಂದ ನನಗೆ ಆ ಕಥಾಮೃತಶ್ರವಣವನ್ನು ಬಿಟ್ಟು ಬೇರಾವ ವರವೂ ಬೇಡ.

ಯಶಃ ಶಿವಂ ಸುಶ್ರವ ಆರ್ಯಸಙ್ಗಮೇ
ಯದೃಚ್ಛಯಾ ಚೋಪಶೃಣೋತಿ ತೇ ಸಕೃತ್ ।
ಕಥಂ ಗುಣಜ್ಞೋ ವಿರಮೇದ್ವಿನಾ ಪಶುಂ
ಶ್ರೀರ್ಯತ್ಪ್ರವವ್ರೇ ಗುಣಸಂಜ್ಘ್ರಹೇಚ್ಛಯಾ ॥೨೬॥

ಪುಣ್ಯಶ್ಲೋಕನಾದ ಪರಮಾತ್ಮನೇ! ಸತ್ಸಂಗದಲ್ಲಿರುವಾಗ ನಿನ್ನ ಮಂಗಳಮಯವಾದ ಕೀರ್ತಿಯು ಒಮ್ಮೆ ಕಿವಿಗಳಿಗೆ ಬಿದ್ದಾಗ ಅಷ್ಟರಲ್ಲಿಯೇ ತೃಪ್ತಿಯಾಯಿತೆನ್ನುವವನು ಪಶುವೇ ಸರಿ. ಗುಣಗ್ರಾಹಿಗಳಾದ ಧನ್ಯಜೀವಿಗಳು ಅದನ್ನು ಸದಾ ಕೇಳುತ್ತಿರಬೇಕೆಂದೇ ಬಯಸುತ್ತಾರೆ. ಜಗನ್ಮಾತೆಯಾದ ಶ್ರೀಮಹಾಲಕ್ಷ್ಮಿಯೂ ಕೂಡ ಗುಣಸಂಗ್ರಹಕ್ಕಾಗಿ ನಿನ್ನ ಆ ದಿವ್ಯಕಥೆಗಳ ನಿರಂತರವಾದ ಶ್ರವಣವನ್ನು ಬಯಸುತ್ತಾಳಲ್ಲವೇ!

ಅಥಾಭಜೇ ತ್ವಾಖಿಲಪುರುಷೋತ್ತಮಂ
ಗುಣಾಲಯಂ ಪದ್ಮಕರೇವ ಲಾಲಸಃ ।
ಅಪ್ಯಾವಯೋರೇಕಪತಿಸ್ಪೃಧೋಃ ಕಲಿ–
ರ್ನ ಸ್ಯಾತ್ಕೃತತ್ವಚ್ಚರಣೈಕತಾನಯೋಃ ॥೨೭॥

ಆ ಶ್ರೀಮಹಾಲಕ್ಷ್ಮೀದೇವಿಯಂತೆ ನಾನು–ಪುರುಷೋತ್ತಮನೂ, ಕಲ್ಯಾಣಗುಣಪರಿಪೂರ್ಣನೂ ಆಗಿರುವ ನಿನ್ನ ಸೇವೆಯನ್ನು ಮಾಡಲು ಇಚ್ಛಿಸುತ್ತೇನೆ. ಆದರೆ ನಿನ್ನ ಅಡಿಗಳಲ್ಲೇ ಮನಸ್ಸನ್ನು ಏಕಾಗ್ರಗೊಳಿಸಿ, ನಿನ್ನೊಬ್ಬನನ್ನೇ ಪತಿಯನ್ನಾಗಿ ಭಾವಿಸಿ ಸೇವೆಮಾಡುತ್ತಿರುವ ಜಗನ್ಮಾತೆಯಾದ ಮಹಾಲಕ್ಷ್ಮಿಗೂ–ನನಗೂ, ಈ ನಿನ್ನ ಸೇವೆಯೆಂಬ ಸ್ಪರ್ಧೆಯಲ್ಲಿ ಕಲಹ ವುಂಟಾಗಬಾರದು ; ಅಷ್ಟೇ.

ಜಗಜ್ಜನನ್ಯಾಂ ಜಗದೀಶ ವೈಶಸಂ
ಸ್ಯಾದೇವ ಯತ್ಕರ್ಮಣಿ ನಃ ಸಮೀಹಿತಮ್ ।
ಕರೋಷಿ ಫಲ್ಗ್ವಪ್ಯುರು ದೀನವತ್ಸಲಃ
ಸ್ವ ಏವ ಧಿಷ್ಣ್ಯೇಽಭಿರತಸ್ಯ ಕಿಂ ತಯಾ ॥೨೮॥

ಓ ಜಗತ್ಪತಿಯೇ! ಆದರೆ ಎಷ್ಟೇ ಬೇಡವೆಂದರೂ ಆ ಜಗನ್ಮಾತೆಗೆ ನನ್ನಲ್ಲಿ ವಿರೋಧವು ಬರುವ ಸಂಭವವು ಇದ್ದೇ ಇದೆ. ಏಕೆಂದರೆ : ನಾವಿಬ್ಬರೂ ಒಂದೇ ಸೇವಾಕೈಂಕರ್ಯಕ್ಕೆ ಆಸೆಪಡುತ್ತಿದ್ದೇವೆ. ಆದರೆ ನೀನು ದೀನವತ್ಸಲನು; ದೀನರಾದ ಭಕ್ತರು ಮಾಡುವ ಅತ್ಯಲ್ಪವಾದ ಸೇವಾ ಕರ್ಮವನ್ನೂ ಬಲುದೊಡ್ಡದೆಂದು ಭಾವಿಸುವವನು. ಆದುದರಿಂದ ನಮ್ಮಿಬ್ಬರ ಜಗಳದಲ್ಲಿ ನೀನು ನನ್ನ ಪಕ್ಷವನ್ನೇ ಹಿಡಿಯುತ್ತೀಯೆಂದು ಆಶಿಸುತ್ತೇನೆ. ಸ್ವಸ್ವರೂಪದಲ್ಲಿಯೇ ರಮಿಸುತ್ತಿರುವ ನಿನಗೆ ಆಕೆಯಿಂದಾದರೂ ಆಗಬೇಕಾದುದೇನು?*

ಭಜನ್ತ್ಯಥ ತ್ವಾಮತ ಏವ ಸಾಧವೋ
ವ್ಯುದಸ್ತಮಾಯಾಗುಣವಿಭ್ರಮೋದಯಮ್ ।
ಭವತ್ಪದಾನುಸ್ಮರಣಾದೃತೇ ಸತಾಂ
ನಿಮಿತ್ತಮನ್ಯದ್ಭಗವನ್ನ ವಿದ್ಮಹೇ ॥೨೯॥

ಹೀಗೆ ನೀನು ದೀನವತ್ಸಲನಾಗಿರುವುದರಿಂದಲೇ ಮಾಯಾಗುಣ ವಿಲಾಸಗಳನ್ನು ಮೀರಿದ, ಮಾಯಾತೀತನಾದ ನಿನ್ನನ್ನು ಸಾಧುಗಳು ನಿರ್ಭಯವಾಗಿ ಭಜಿಸುತ್ತಾರೆ. ಸತ್ಪುರುಷರಿಗೆ ನಿನ್ನ ಚರಣಾರವಿಂದಗಳ ಸೇವೆಯ ಹೊರತು ಬೇರಾವ ಪ್ರಯೋಜನವೂ ಇಲ್ಲವೆಂದೇ ನಾನು ತಿಳಿದಿದ್ದೇನೆ.

---

* ಎಲೈ ಜಗತ್ಪತಿಯೇ! ಅನಾದಿಯಾದ ಪ್ರಕೃತಿಪ್ರವಾಹಕ್ಕೆ ವಶರಾದ ನಾವು– ಯಜ್ಞಾದಿಕರ್ಮಗಳು ನಿನ್ನ ಆರಾಧನಾರೂಪಗಳು–ಎಂಬುದನ್ನು ಅರಿಯದೇ, ಅವುಗಳಿಗೆ ಪಶು, ಪುತ್ರ, ಅನ್ನ, ಸ್ವರ್ಗ–ಮುಂತಾದುವುಗಳೇ ಫಲಗಳೆಂದು ತಿಳಿದು ಅವುಗಳನ್ನು ಆಚರಿಸುತ್ತಿದ್ದೇವೆ. ಆದರೆ ದೀನವತ್ಸಲನಾದ ನೀನು ನಮ್ಮ ತಪ್ಪನ್ನು ಪರಿಗಣಿಸದೇ ಅಲ್ಪವಾದ ಫಲದ ಆಸೆಯನ್ನು ಹೋಗಲಾಡಿಸಿ ನಮ್ಮ ಆ ಕರ್ಮಗಳು

ಮನ್ಯೇ ಗಿರಂ ತೇ ಜಗತಾಂ ವಿಮೋಹಿನೀಂ
ವರಂ ವೃಣೀಷ್ವೇತಿ ಭಜನ್ತಮಾತ್ಥ ಯತ್ ।
ವಾಚಾ ನು ತನ್ತ್ಯಾ ಯದಿ ತೇ ಜನೋಽಸಿತಃ
ಕಥಂ ಪುನಃ ಕರ್ಮ ಕರೋತಿ ಮೋಹಿತಃ ॥೩೦॥

ಶ್ರೀಭಗವಂತನೇ! ಹೀಗೆ ನಿನ್ನ ಭಜನೆಯನ್ನೇ ಅನನ್ಯಪ್ರಯೋಜನವನ್ನಾಗಿ ಭಾವಿಸುವ ಭಕ್ತನಾದ ನನ್ನನ್ನು ಕುರಿತು ನೀನು 'ಯಾವುದಾದರೂ ವರವನ್ನು ಕೇಳಿಕೋ'–ಎಂದು ಮೋಹಕವಾದ ಮಾತನ್ನಾಡಿದೆಯಲ್ಲಾ! ಇದು ಲೋಕವನ್ನು ಮರುಳುಮಾಡುವ ಮಾತಲ್ಲವೇ? ನಿನ್ನ ವಾಣಿಯೇ ಆಗಿರುವ ವೈದಿಕಕರ್ಮಕಾಂಡವೂ ಕೂಡ ಹೀಗೆಯೇ ಆಶೆಯ ಪಾಶಗಳಿಂದ ಜನರನ್ನು ಕಟ್ಟಿಹಾಕಿದೆ. ಹಾಗಿಲ್ಲದಿದ್ದರೆ ಜನರು ಮೋಹವಶರಾಗಿ ಸಕಾಮ ಕರ್ಮಗಳನ್ನು ಏಕೆ ಆಚರಿಸುತ್ತಿದ್ದರು?

ತ್ವನ್ಮಾಯಯಾದ್ಧಾ ಜನ ಈಶ ಖಣ್ಡಿತೋ
ಯದನ್ಯದಾಶಾಸ್ತ ಋತಾತ್ಮನೋಽಬುಧಃ ।
ಯಥಾ ಚರೇದ್ಬಾಲಹಿತಂ ಪಿತಾ ಸ್ವಯಂ
ತಥಾ ತ್ವಮೇವಾರ್ಹಸಿ ನಃ ಸಮೀಹಿತುಮ್ ॥೩೧॥

ಪ್ರಭೋ! ನಿನ್ನ ಮಾಯೆಯಿಂದ ಮರುಳಾಗಿ ಅವಿವೇಕಿಗಳಾದ ಜನರು ನಿನ್ನನ್ನು ಬಿಟ್ಟು ಇತರ ಫಲಗಳನ್ನು ಅಪೇಕ್ಷಿಪಡುತ್ತಾರೆ. ಆದರೂ

ನಿತ್ಯವಾದ ಫಲಕ್ಕೆ ಸಾಧನಗಳಾಗುವಂತೆ ಮಾಡು. ಆತ್ಮಾರಾಮನಾದವನಿಗೆ ಸ್ವರ್ಗವೇ ಮುಂತಾದ ಫಲಗಳೂ ಅತಿತುಚ್ಛವಲ್ಲವೇ? (ವೀರರಾಘವೀಯ)

ರಜೋಗುಣವು ಪ್ರಧಾನವಾಗಿರುವ ಲೋಕದಲ್ಲಿ, ಪ್ರಾಣಿಗಳಲ್ಲಿ ಕಲಿಯ ಸ್ವಭಾವವಾದ ಕಲಹವು ಉಂಟಾಗುವುದೇ ಹೊರತು ಇಲ್ಲಿ ಅದು ಉಂಟಾಗುವುದಿಲ್ಲ. ಏಕೆಂದರೆ : ಅದಕ್ಕೆ ಇಲ್ಲಿ ನಿಮಿತ್ತವಿಲ್ಲ. 'ರಾಜಸಪ್ರಧಾನಲೋಕೇ ವಿದ್ಯಮಾನಸ್ಯ ಜನ್ತುಸಮೂಹಸ್ಯ ಮಿಥಃ ವೈಶಸಂ ಹಿಂಸಾಲಕ್ಷಣಃ ಸ್ಯಾತ್ ಕಲಿಸ್ವಭಾವಾತ್ । ಸ ನ ಸ್ಯಾತ್ ನಿಮಿತ್ತಾಭಾವಾತ್॥' (ವಿಜಯಧ್ವಜೀಯ)

ನಿನ್ನ ಪಾದಾರವಿಂದಸೇವೆಯ ವಿಷಯದಲ್ಲಿ ಮಾತೆಯಾದ ಮಹಾಲಕ್ಷ್ಮಿಗೂ ನನಗೂ ಕಲಹವುಂಟಾಗಬಹುದು. ಆದುದರಿಂದ ಆ ಶ್ರೀಮಾತೆಯು ನಿನ್ನ ವಕ್ಷಃಸ್ಥಳದಲ್ಲಿಯೇ ರಮಿಸುತ್ತಿರಲಿ ; ನಾನು ನಿನ್ನ ಪಾದಾರವಿಂದಸೇವನೆಯಲ್ಲಿ ನಿರತನಾಗಿರುವೆನು. ಒಂದು ಪಕ್ಷ ಆಕೆಯು 'ನೀನು ಅಧಮನು, ನಾನು ಉತ್ತಮಳು' ಎಂದು ನನ್ನನ್ನು

ತನ್ನ ಮಕ್ಕಳು ಬೇಡಿಕೆಯನ್ನು ಸಲ್ಲಿಸದೇ ಇದ್ದರೂ ತಂದೆಯು ತಾನೇ ಅವರಿಗೆ ಕಲ್ಯಾಣವನ್ನುಂಟುಮಾಡುವಂತೆ–ನೀನೂ ಸಹ ನಾವು ಪ್ರಾರ್ಥಿಸದೇ ಇದ್ದರೂ ನಮಗೆ ಯಾವುದು ಹಿತಕರವೋ ಅದನ್ನೇ ಉಂಟುಮಾಡಪ್ಪಾ!"

ಮೈತ್ರೇಯರು ಹೇಳುತ್ತಾರೆ :

ಹೀಗೆ ಆದಿರಾಜನಾದ ಪೃಥುವು ಶ್ರೀಹರಿಯನ್ನು ಕುರಿತು ಸ್ತೋತ್ರ ಮಾಡಲು ಸರ್ವಸಾಕ್ಷಿಯಾದ ಸ್ವಾಮಿ ಶ್ರೀಹರಿಯು–"ರಾಜೇಂದ್ರನೇ! ಹಾಗೆಯೇ ಆಗಲಿ. ನಿನಗೆ ನನ್ನಲ್ಲಿ ಭಕ್ತಿಯುಂಟಾಗಲಿ. ಅದೃಷ್ಟವಿಶೇಷ ದಿಂದಲೇ ನಿನ್ನ ಮನಸ್ಸು ಹೀಗೆ ನನ್ನಲ್ಲಿ ಲೀನವಾಗಿರುವುದು. ಹೀಗಾದರೆ ತಾನೇ ಮನುಷ್ಯರು ತೊರೆದುಹೋಗಲು ಅತಿಕಷ್ಟವಾದ ಮಾಯಾಬಂಧನವನ್ನೂ ಸಹಜವಾಗಿಯೇ ಕಳೆದುಕೊಳ್ಳುತ್ತಾನೆ? (ಶ್ಲೋಕ 32)

ತತ್ತ್ವಂ ಕುರು ಮಯಾದಿಷ್ಟಮಪ್ರಮತ್ತಃ ಪ್ರಜಾಪತೇ।
ಮದಾದೇಶಕರೋ ಲೋಕಃ ಸರ್ವತ್ರಾಪ್ನೋತಿ ಶೋಭನಮ್ ॥೩೩॥

ಪ್ರಜಾಪಾಲಕನೇ! ಆದುದರಿಂದ ಈಗ ನೀನು ಸಾವಧಾನವಾಗಿ ನನ್ನ ಆದೇಶವನ್ನು ಪಾಲಿಸು. ನನ್ನ ಆಜ್ಞೆಯನ್ನು ಪಾಲನೆಮಾಡುವವನಿಗೆ ಎಲ್ಲೆಲ್ಲಿಯೂ ಮಂಗಳವುಂಟಾಗುವುದು."

ಮೈತ್ರೇಯರು ಹೇಳುತ್ತಾರೆ :

ಹೀಗೆ ಶ್ರೀಭಗವಂತನು ಪೃಥುವಿನ ಅರ್ಥಪೂರ್ಣವಾದ ವಚನಗಳನ್ನು ಅಭಿನಂದನೆಮಾಡಿದನು. ಅನಂತರ ಆತನಿಂದ ಪೂಜಿಸಲ್ಪಟ್ಟ ಪ್ರಭುವು ಆತ ನನ್ನು ಸಂಪೂರ್ಣವಾಗಿ ಅನುಗ್ರಹಿಸಿ ಅಲ್ಲಿಂದ ಹೊರಡಲು ಸಿದ್ಧನಾದನು.

ಕಡೆಗಣಿಸಿದರೂ ಭಕ್ತವತ್ಸಲನಾದ ನೀನು ನನ್ನ ಪಕ್ಷವನ್ನೇ ಹಿಡಿಯುತ್ತೀಯೆ. (ಸಾರಾರ್ಥದರ್ಶಿನೀ)

ನನಗೆ ಬ್ರಹ್ಮದೇವರೇ ಆಗಲೀ, ರುದ್ರದೇವರೇ ಆಗಲೀ, ಸಂಕರ್ಷಣದೇವರೇ ಆಗಲೀ, ಶ್ರೀರಮಾದೇವಿಯೇ ಆಗಲೀ, ನನ್ನ ಆತ್ಮವೇ ಆಗಲೀ, ನೀನೇ ಆಗಲೀ–ಯಾರೂ ಭಕ್ತರಿಗಿಂತಲೂ ಹೆಚ್ಚು ಪ್ರಿಯರಲ್ಲ. 'ನ ಮೇ ಭಕ್ತಾತ್ಪ್ರಿಯತಮೋ ಹ್ಯಾತ್ಮಾಯೋನಿರ್ನ ಶಙ್ಕರಃ। ನ ಚ ಸಙ್ಕರ್ಷಣೋ ನ ಶ್ರೀರ್ನೈವಾತ್ಮಾ ಚ ತಥಾ ಭವಾನ್॥'– ಎಂಬಂತೆ ಶ್ರೀಭಗವಂತನಿಗೆ ಭಕ್ತರಿಗಿಂತಲೂ ಹೆಚ್ಚು ಪ್ರಿಯರಾದವರು ಯಾರು ಇಲ್ಲ.
(ಸಿದ್ಧಾಂತಚಂದ್ರಿಕಾ) (ಶ್ಲೋಕ ೨೮)

ಪೃಥುಮಹಾರಾಜನು' ಅಲ್ಲಿಗೆ ದಯಮಾಡಿಸಿದ್ದ ದೇವತೆಗಳು, ಋಷಿಗಳು, ಪಿತೃಗಳು, ಗಂಧರ್ವರು, ಸಿದ್ಧರು, ಚಾರಣರು, ನಾಗರು, ಕಿನ್ನರರು, ಅಪ್ಸರೆಯರು, ಮನುಷ್ಯರು ಮತ್ತು ಪಕ್ಷಿಗಳೇ ಮುಂತಾದ ಎಲ್ಲ ಬಗೆಯ ಪ್ರಾಣಿಗಳಿಗೂ ಮತ್ತು ಭಗವಂತನ ಪಾರ್ಷದರಿಗೂ ಎಲ್ಲರಿಗೂ ಭಗವದ್ಭಾವದಿಂದ ಭಕ್ತಿಪೂರ್ವಕವಾಗಿ ಮಾತು, ಮನಸ್ಸು ಮತ್ತು ಧನದಿಂದ ಬದ್ಧಾಂಜಲಿಯಾಗಿ ಸೇವೆ ಸಲ್ಲಿಸಿದನು. ಅನಂತರ ಅವರೆಲ್ಲರೂ ತಮ್ಮ-ತಮ್ಮ ಲೋಕಗಳಿಗೆ ತೆರಳಿದರು. ಭಗವಂತನಾದ ಅಚ್ಯುತನೂ ಪೃಥುಮಹಾರಾಜನ ಮತ್ತು ಆತನ ಪುರೋಹಿತರ ಚಿತ್ತವನ್ನು ಸೆಳೆಯುತ್ತಾ ತನ್ನ ಧಾಮಕ್ಕೆ ನಿರ್ಗಮಿಸಿದನು. ಅನಂತರ ತನ್ನ ಸ್ವರೂಪವನ್ನು ತೋರಿಸಿ ಅಂತರ್ಧಾನ ಹೊಂದಿದ, ಅವ್ಯಕ್ತಸ್ವರೂಪನಾದ, ದೇವಾಧಿದೇವನಾದ ಶ್ರೀಭಗವಂತನಿಗೆ ನಮಸ್ಕಾರಮಾಡಿ ಪೃಥುಮಹಾರಾಜನು ತನ್ನ ರಾಜಧಾನಿಗೆ ತೆರಳಿದನು.

(ಶ್ಲೋಕ 34-38)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಚತುರ್ಥಸ್ಕಂಧದ ೨೦ನೆಯ ಅಧ್ಯಾಯವು ಮುಗಿಯಿತು.

ಚತುರ್ಥಸ್ಕಂಧ ೨೧ನೆಯ ಅಧ್ಯಾಯ

ಪೃಥುಮಹಾರಾಜನು ತನ್ನ ಪ್ರಜೆಗಳಿಗೆ ಉಪದೇಶಮಾಡಿದುದು

ಮೈತ್ರೇಯಮಹರ್ಷಿಗಳು ವಿದುರನಿಗೆ ಹೇಳುತ್ತಾರೆ :

ಮೌಕ್ತಿಕೈಃ ಕುಸುಮಸ್ರಗ್ಭಿರ್ದುಕೂಲೈಃ ಸ್ವರ್ಣತೋರಣೈಃ ।
ಮಹಾಸುರಭಿಭಿರ್ಧೂಪೈರ್ಮಣ್ಡಿತಂ ತತ್ರ ತತ್ರ ವೈ ॥೧॥

"ಎಲೈ ವಿದುರನೇ! ಕೇಳು. ಶ್ರೀಭಗವಂತನು ಅಂತರ್ಧಾನಹೊಂದಿದ ಬಳಿಕ ಪೃಥುಮಹಾರಾಜನು ತನ್ನ ರಾಜಧಾನಿಯನ್ನು ಪ್ರವೇಶಿಸಿದನು. ಆ ಸಮಯದಲ್ಲಿ ರಾಜಧಾನಿಯು ಎಲ್ಲ ಕಡೆಗಳಲ್ಲಿಯೂ ಮುತ್ತಿನ ಸರಗಳಿಂದಲೂ, ಹೂಮಾಲೆಗಳಿಂದಲೂ, ರೇಷ್ಮೆಯ ಬಟ್ಟೆಗಳಿಂದಲೂ, ಚಿನ್ನದ ತೋರಣಗಳಿಂದಲೂ, ಸುವಾಸನೆಯಿಂದ ಚೆನ್ನಾಗಿ ಘಮಘಮಿಸುತ್ತಿದ್ದ ಧೂಪಗಳಿಂದಲೂ ಅಲಂಕೃತವಾಗಿತ್ತು.

ರಾಜಬೀದಿಗಳಲ್ಲಿಯೂ, ಚೌಕಗಳಲ್ಲಿಯೂ, ಬೀದಿಗಳಲ್ಲಿಯೂ ಚಂದನ ಮತ್ತು ಅಗುರುಗಳಿಂದ ಮಿಶ್ರಿತವಾದ ನೀರನ್ನು ಸಿಂಪಡಿಸಿ ಹೂವು, ಅಕ್ಷತೆ, ಹಣ್ಣು, ಎಳೆಗರಿಕೆ, ಅರಳು ಮತ್ತು ದೀಪಗಳೇ ಮುಂತಾದ ಮಂಗಳ ದ್ರವ್ಯಗಳಿಂದ ಅವುಗಳನ್ನು ಸಿಂಗರಿಸಲಾಗಿತ್ತು. ಆ ರಾಜನಗರಿಯು ಅಲ್ಲಲ್ಲಿ ಇರಿಸಲ್ಪಟ್ಟಿದ್ದ ಹಣ್ಣು-ಹೂವುಗಳ ಗೊಂಚಲುಗಳಿಂದ ಕೂಡಿದ ಬಾಳೆಯ ಕಂಬಗಳಿಂದಲೂ ಮತ್ತು ಅಡಕೆಯ ಮರಗಳಿಂದಲೂ ಅತಿಮನೋಹರ ವಾಗಿತ್ತು ಮತ್ತು ಎಲ್ಲೆಡೆಗಳಲ್ಲಿಯೂ ಮಾವಿನಮರವೇ ಮುಂತಾದುವುಗಳ ಚಿಗುರೆಲೆಗಳ ತೋರಣಗಳ ಅಲಂಕಾರವು ಕಂಗೊಳಿಸುತ್ತಿತ್ತು. ಚಕ್ರ ವರ್ತಿಯು ಆ ನಗರವನ್ನು ಪ್ರವೇಶಿಸಿದಾಗ ದೀಪಗಳನ್ನೂ, ಕಾಣಿಕೆಗಳನ್ನೂ ಮತ್ತು ಅನೇಕ ಮಂಗಳದ್ರವ್ಯಗಳನ್ನೂ ತೆಗೆದುಕೊಂಡು, ಪ್ರಜೆಗಳೂ ಮತ್ತು ಮನೋಹರವಾದ ಕುಂಡಲಗಳಿಂದ ಶೋಭಿಸುತ್ತಿದ್ದ ಚೆಲುವೆಯರಾದ ಕನ್ಯೆ ಯರೂ ಆತನನ್ನು ಎದುರುಗೊಂಡು ಸ್ವಾಗತಿಸಿದರು. ಆಗ ಶಂಖ-ದುಂದುಭಿ ಗಳೇ ಮುಂತಾದ ವಾದ್ಯಗಳು ಮೊಳಗತೊಡಗಿದುವು. ಋತ್ವಿಕ್ಕುಗಳು ವೇದ ಮಂತ್ರಗಳನ್ನು ಪಠಿಸತೊಡಗಿದರು ಮತ್ತು ವಂದಿ-ಮಾಗಧರು ಸ್ತೋತ್ರಗಾನ ವನ್ನು ಮಾಡಲು ಪ್ರಾರಂಭಿಸಿದರು. ಇವೆಲ್ಲವನ್ನೂ ನೋಡುತ್ತಿದ್ದರೂ ಪೃಥು ಮಹಾರಾಜನಿಗೆ ಸ್ವಲ್ಪವೂ ಅಹಂಕಾರವುಂಟಾಗಲಿಲ್ಲ. ಮಾರ್ಗಮಧ್ಯದಲ್ಲಿ ಅಲ್ಲಲ್ಲಿ ಪುರವಾಸಿಗಳೂ ಮತ್ತು ದೇಶವಾಸಿಗಳೂ ಆತನನ್ನು ಅಭಿನಂದಿಸಿ ದರು. ಮಹಾಯಶಸ್ವಿಯಾದ ಮಹಾರಾಜನೂ ಅವರಲ್ಲಿ ಪ್ರಸನ್ನತೆಯಿಂದ ಕೂಡಿ ಅವರಿಗೆ ಇಷ್ಟವಾದ ವರಗಳನ್ನಿತ್ತು ಅವರನ್ನು ಸಂತೋಷಪಡಿಸುತ್ತಾ ತನ್ನ ಅರಮನೆಯನ್ನು ಪ್ರವೇಶಿಸಿದನು. ಆ ಪೃಥುಮಹಾರಾಜನು ಶ್ರೇಷ್ಠತಮ ನಾದ ಮಹಾಪುರುಷನಾಗಿ ಸರ್ವರಿಗೂ ಪೂಜನೀಯನಾಗಿದ್ದನು. ಇಂತಹ ಉದಾರವಾದ ಅನೇಕ ಕಾರ್ಯಗಳನ್ನೆಸಗುತ್ತಾ ಭೂಮಿಯನ್ನು ಆಳಿದನು. ತನ್ನ ವಿಸ್ತಾರವಾದ ಕೀರ್ತಿಯನ್ನು ಎಲ್ಲೆಲ್ಲಿಯೂ ಹರಡಿದವನಾಗಿ ಕೊನೆಗೆ ಶ್ರೀಭಗವಂತನ ಪರಮಪದವನ್ನು ಸೇರಿಕೊಂಡನು." (ಶ್ಲೋಕ 2-7)

ಸೂತಪುರಾಣಿಕರು ಹೇಳುತ್ತಾರೆ :

"ಎಲೈ ಮಹರ್ಷಿಗಳೇ! ಈ ರೀತಿಯಲ್ಲಿ ಪೂಜ್ಯರಾದ ಮೈತ್ರೇಯ ಮಹರ್ಷಿಗಳ ಬಾಯಿಂದ ನಾನಾಗುಣಸಂಪನ್ನವಾಗಿ, ಗುಣಶಾಲಿಗಳಿಂದ

ಹೊಗಳಲ್ಪಟ್ಟು ವಿಸ್ತಾರಗೊಂಡ ಆದಿರಾಜ ಪೃಥುವಿನ ಯಶಸ್ಸನ್ನು ಕೇಳಿ ಪರಮಭಾಗವತೋತ್ತಮನಾದ ವಿದುರನು ಆ ಮಹರ್ಷಿಗಳನ್ನು ಅಭಿನಂದಿಸುತ್ತಾ "ಮಹಾತ್ಮರೇ! ಬ್ರಾಹ್ಮಣರು ಪೃಥುಮಹಾರಾಜನಿಗೆ ಅಭಿಷೇಕ ಮಾಡಿದ್ದು, ಸಮಸ್ತದೇವತೆಗಳೂ ಆತನಿಗೆ ಕಾಣಿಕೆಗಳನ್ನು ಸಮರ್ಪಿಸಿದುದು, ಆತನು ತನ್ನ ಭುಜಗಳಲ್ಲಿ ವೈಷ್ಣವತೇಜಸ್ಸನ್ನು ಧರಿಸಿ ಗೋರೂಪಧಾರಿಣಿಯಾದ ಪೃಥ್ವಿಯನ್ನು ಹಾಲಿಗಾಗಿ ಹಿಂಡಿದುದು–ಈ ಎಲ್ಲವನ್ನೂ ತಾವು ತಿಳಿಸಿದಿರಿ. ಆತನು ಅನುಭವಿಸಿ ಮಿಕ್ಕಿರುವ ಆ ಪರಾಕ್ರಮದ ವಿಷಯ ಭೋಗಗಳಿಂದಲೇ ಇಂದಿಗೂ ಸಮಸ್ತರಾಜರೂ ಮತ್ತು ಲೋಕಪಾಲಕರಿಂದೊಡಗೂಡಿದ ಸಮಸ್ತಲೋಕಗಳೂ ತಮ್ಮ ಇಷ್ಟಾನುಸಾರವಾಗಿ ಜೀವನವನ್ನು ನಡೆಸುತ್ತಿದ್ದಾರೆ. ಆತನ ಪವಿತ್ರವಾದ ಕೀರ್ತಿಯನ್ನು ಕೇಳಲು ಬಯಸದಿರುವ ವಿವೇಕಿಯು ಯಾವನೂ ಇಲ್ಲ. ಆದ್ದರಿಂದ ತಾವು ಕೃಪೆಯಿಟ್ಟು ನನಗೆ ಆ ಮಹಾತ್ಮನ ಇನ್ನೂ ಕೆಲವು ಪವಿತ್ರವಾದ ಚರಿತ್ರೆಗಳನ್ನು ತಿಳಿಸೋಣವಾಗಲಿ"–ಎಂದು ಅವರನ್ನು ಪ್ರಾರ್ಥಿಸಿದನು. (ಶ್ಲೋಕ 8-10)

ವಿದುರನ ಪ್ರಾರ್ಥನೆಗೆ ಮೈತ್ರೇಯರು ಹೀಗೆ ಉತ್ತರಿಸಿದರು :

"ಎಲೈ ಸಾಧುಶ್ರೇಷ್ಠನಾದ ವಿದುರನೇ! ಪೃಥುಮಹಾರಾಜನು ಗಂಗಾ-ಯಮುನೆಗಳ ಮಧ್ಯದಲ್ಲಿರುವ ಬ್ರಹ್ಮಾವರ್ತದೇಶದಲ್ಲಿ ವಾಸ ಮಾಡುತ್ತಾ ತನ್ನ ಪುಣ್ಯಕರ್ಮಗಳನ್ನು ಕ್ಷಯಿಸುವುದಕ್ಕಾಗಿ ಪ್ರಾರಬ್ಧವಶದಿಂದ ಬಂದ ಸುಖೋಪಭೋಗಗಳನ್ನು ಅನುಭವಿಸಿದನು. ಬ್ರಾಹ್ಮಣಕುಲಗಳನ್ನೂ ಮತ್ತು ಭಗವದ್ಭಕ್ತರನ್ನೂ ಬಿಟ್ಟು ಸಪ್ತದ್ವೀಪಗಳಲ್ಲಿರುವ ಉಳಿದ ಎಲ್ಲ ಜನರ ಮೇಲೂ ಅಖಂಡವೂ ನಿಷ್ಕಂಟಕವೂ–ಆದ ಅಧಿಕಾರವನ್ನು ನಡೆಸಿದನು. ಒಂದು ಬಾರಿ ಆತನು ಒಂದು ಮಹಾಸತ್ರದ ದೀಕ್ಷೆಯನ್ನು ಕೈಗೊಂಡನು. ಆಗ ಅಲ್ಲಿ ದೇವತೆಗಳ, ಬ್ರಹ್ಮರ್ಷಿಗಳ ಮತ್ತು ರಾಜರ್ಷಿಗಳ ದೊಡ್ಡ ಸಭೆಯೇ ನೆರೆದಿತ್ತು. ಪೃಥುಮಹಾರಾಜನು ಆ ಸಭೆಯಲ್ಲಿ ಸೇರಿದ್ದ ಪೂಜನೀಯರಾದ ಅತಿಥಿಗಳನ್ನು ಯಥೋಚಿತವಾಗಿ ಸತ್ಕಾರಮಾಡಿ, ಅಲ್ಲಿ ನಕ್ಷತ್ರಮಂಡಲದ ಮಧ್ಯೆ ಚಂದ್ರನು ಹೇಗೋ ಹಾಗೆ–ಶೋಭಿಸುತ್ತಾ ನಿಂತಿದ್ದನು. ಹಾಗೆ ನಿಂತುಕೊಂಡಿದ್ದ ಆತನ ಸೌಂದರ್ಯ, ಗಾಂಭೀರ್ಯಗಳನ್ನು ಹೇಗೆ ತಾನೇ ವರ್ಣಿಸೋಣ! ಉನ್ನತವಾದ ದೇಹ, ತುಂಬಿಕೊಂಡು ವಿಶಾಲ

ವಾಗಿದ್ದ ನಿಡುದೋಳುಗಳು, ಹೊಳೆಯುತ್ತಿದ್ದ ಬಿಳಿಯ ಬಣ್ಣದ ದೇಹ ಕಾಂತಿ, ಕೆಂದಾವರೆಯಂತೆ ಕಂಗೊಳಿಸುತ್ತಿದ್ದ ಕಣ್ಣುಗಳು, ಸುಂದರವಾದ ಮೂಗು-ಮುಖಗಳು, ಸೌಮ್ಯವಾದ ಆಕೃತಿ, ಎತ್ತರವಾದ ಹೆಗಲುಗಳು, ಕಿರುನಗೆಯಿಂದ ಸೊಗಸುತ್ತಿದ್ದ ಸುಂದರವಾದ ಸುಲಿಹಲ್ಲುಗಳ ಸಾಲುಗಳು, ವಿಶಾಲವಾದ ಎದೆ, ಸ್ಥೂಲವಾದ ನಡುವಿನ ಹಿಂಭಾಗ, ಅರಳಿಯ ಎಲೆಯಂತೆ ರಮಣೀಯವಾದ ತ್ರಿವಳಿರೇಖೆಗಳಿಂದ ಒಪ್ಪುತ್ತಿದ್ದ ಹೊಟ್ಟೆ, ಸುಳಿಯಂತೆ ಆಳವಾಗಿದ್ದ ಹೊಕ್ಕುಳು, ತೇಜಸ್ವಿಯಾದ ದೇಹ, ಚಿನ್ನದಂತೆ ಹೊಳೆಯುತ್ತಿದ್ದ ತೊಡೆಗಳು ಮತ್ತು ಎತ್ತರವಾಗಿ ಒಪ್ಪುತ್ತಿದ್ದ ಪಾದಗಳು, ಗುಂಗುರು-ಗುಂಗುರಾಗಿ ನುಣುಪಾಗಿದ್ದ ತಲೆಗೂದಲು, ಶಂಖದಂತೆ ಸುಳಿ ಗೊಂಡಿದ್ದ ಕಂಠ–ಇವುಗಳಿಂದ ಅತ್ಯಂತಕಮನೀಯವಾಗಿದ್ದ ಶ್ರೀದೇಹದಿಂದ ಆ ಮಹಾಪುರುಷನು ಎಣೆಯಿಲ್ಲದ ಸೊಬಗಿನಿಂದ ವಿರಾಜಿಸುತ್ತಿದ್ದನು. ಆತನು ಬಹುಮೂಲ್ಯವಾದ ಪಂಚೆಯನ್ನುಟ್ಟು ಅಂತಹುದೇ ಉತ್ತರೀಯ ವೊಂದನ್ನು ಹೊದ್ದುಕೊಂಡಿದ್ದನು. ದೀಕ್ಷೆಯ ನಿಯಮಕ್ಕೆ ಅನುಸಾರವಾಗಿ ಎಲ್ಲ ಆಭರಣಗಳನ್ನೂ ಕಳಚಿಟ್ಟಿದ್ದರಿಂದ ಆತನ ಶರೀರದ ಅಂಗ ಮತ್ತು ಉಪಾಂಗಗಳು ಸ್ವಾಭಾವಿಕವಾದ ಕಾಂತಿ-ಸೌಂದರ್ಯಗಳಿಂದ ಒಪ್ಪು ತ್ತಿದ್ದುವು. ದೇಹದಲ್ಲಿ ಕೃಷ್ಣಾಜಿನವನ್ನು ಧರಿಸಿ ಕೈಗಳಲ್ಲಿ ದರ್ಭೆಯನ್ನು ಹಿಡಿದಿದ್ದನು. ಇವುಗಳಿಂದ ಆತನ ದೇಹದ ಕಾಂತಿಯು ಮತ್ತೂ ಮಿಗಿ ಲೇರಿತ್ತು. ಆತನು ತನ್ನ ಎಲ್ಲ ನಿತ್ಯಕರ್ಮಗಳನ್ನೂ ಯಥಾವಿಧಿಯಾಗಿ ಮಾಡಿ ಮುಗಿಸಿ ಅಲ್ಲಿ ನಿಂತುಕೊಂಡಿದ್ದನು. ಆ ಪೃಥುಮಹಾರಾಜನು ಇಡೀ ಸಭೆ ಯನ್ನು ಆನಂದದಿಂದ ನೆನೆಸುತ್ತಾ, ಸ್ನೇಹಪೂರ್ಣವಾದ ತಂಪಿನಿಂದ ಕೂಡಿದ್ದ ತನ್ನ ಕಣ್ಣುಗಳಿಂದ ನಾಲ್ಕು ಕಡೆಗಳಲ್ಲಿಯೂ ದೃಷ್ಟಿಯನ್ನು ಹರಿಸಿ ಸಭೆಯನ್ನು ದ್ದೇಶಿಸಿ ಒಂದು ಭಾಷಣವನ್ನು ಮಾಡಿದನು. ಆ ಭಾಷಣವು ಅತ್ಯಂತ ಸುಂದರವಾಗಿ, ವಿಚಿತ್ರವಾದ ಪದಗಳಿಂದ ಕೂಡಿ ಸ್ಪಷ್ಟವೂ, ಮಧುರವೂ, ಗಂಭೀರವೂ, ಶಂಕಾರಹಿತವೂ ಆದ ಶಬ್ದಗಳಿಂದ ಶೋಭಾಯಮಾನ ವಾಗಿತ್ತು. ಎಲ್ಲರಿಗೂ ಉಪಕಾರಮಾಡುವುದಕ್ಕಾಗಿ ತನ್ನ ಅನುಭವವನ್ನೇ ಅನುವಾದಮಾಡುತ್ತಿರುವನೋ ಎಂಬಂತೆ ರಾಜೇಂದ್ರನು ಭಾಷಣಮಾಡಿ ದನು : (ಶ್ಲೋಕ 11-20)

"ಎಲೈ ಸಜ್ಜನರೇ! ಸಭ್ಯಮಹಾಶಯರೇ! ನಿಮಗೆ ಮಂಗಳವಾಗಲಿ. ಇಲ್ಲಿಗೆ ದಯಮಾಡಿಸಿರುವ ಮಹಾನುಭಾವರಾದ ನೀವು ನನ್ನ ಪ್ರಾರ್ಥನೆಯನ್ನು ಲಾಲಿಸಬೇಕು. ನಾನು ಏಕೆ ಇಲ್ಲಿ ಮಾತನಾಡುತ್ತಿದ್ದೇನೆ? ಎಂದರೆ : ವಿಷಯವನ್ನು ತಿಳಿದುಕೊಳ್ಳಬೇಕು–ಎಂಬ ಪ್ರಾಮಾಣಿಕವಾದ ಆಸೆಯುಳ್ಳವನು ಸತ್ಪುರುಷರ ಸಭೆಯಲ್ಲಿ ತನ್ನ ಸಿದ್ಧಾಂತಗಳನ್ನು ಅರಿಕೆಮಾಡಿಕೊಳ್ಳುವುದು ನ್ಯಾಯಬದ್ಧವಾಗಿರುವುದರಿಂದ, ಈ ಲೋಕದಲ್ಲಿ ನನ್ನನ್ನು–ಪ್ರಜೆಗಳ ಮೇಲಿನ ಆಳ್ವಿಕೆ, ಅವರ ರಕ್ಷಣೆ, ಅವರಿಗೆ ವೃತ್ತಿ-ಉದ್ಯೋಗಗಳನ್ನು ಒದಗಿಸಿಕೊಡುವಿಕೆ ಮತ್ತು ಯೋಗ್ಯತೆಗೆ ತಕ್ಕಂತೆ ಬೇರೆ-ಬೇರೆ ಮರ್ಯಾದೆಗಳಲ್ಲಿ ಅವರನ್ನು ಸ್ಥಾಪಿಸುವಿಕೆ–ಇವುಗಳಿಗಾಗಿಯೇ ರಾಜನನ್ನಾಗಿ ಮಾಡಲಾಗಿದೆ. ಆದುದರಿಂದ ಈ ಕರ್ತವ್ಯಗಳನ್ನು ವಿಧಿಗೆ ಅನುಸಾರವಾಗಿ ನಾನು ಪಾಲನೆಮಾಡಿದರೆ–ನನಗೆ ವೇದಜ್ಞರಾದ ಮುನಿಗಳ ಸಿದ್ಧಾಂತದಂತೆ ಸರ್ವ ಕರ್ಮಗಳಿಗೂ ಸಾಕ್ಷಿಯಾಗಿರುವ ಶ್ರೀಹರಿಯು ಪ್ರಸನ್ನವಾದರೆ ಯಾವ ಲೋಕಗಳು ದೊರೆಯಬೇಕೋ–ಅವೇ ಲೋಕಗಳೇ ದೊರೆಯುತ್ತವೆ. ಪ್ರಜೆಗಳಿಗೆ ಧರ್ಮಮಾರ್ಗದಲ್ಲಿ ತಿಳಿವಳಿಕೆಯನ್ನು ನೀಡದೇ ಅವರಿಂದ ತೆರಿಗೆ ಯನ್ನು ಸಂಗ್ರಹಮಾಡುವುದರಲ್ಲಿಯೇ ತತ್ಪರನಾಗಿರುವ ರಾಜನಿಗೆ ಆ ಪ್ರಜೆಗಳ ಪಾಪಗಳಿಗೆ ಭಾಗಿಯಾಗುವುದೇ ಫಲವು. ಇದಲ್ಲದೇ ಆತನು ತನ್ನ ಐಶ್ವರ್ಯವನ್ನೂ ಕಳೆದುಕೊಳ್ಳುವನು. ಆದುದರಿಂದ ಎಲೈ ನನ್ನ ಪ್ರಿಯ ಪ್ರಜೆಗಳೇ! ನೀವು ನಿಮ್ಮ ಈ ರಾಜನಿಗೆ ಪರಲೋಕದಲ್ಲಿ ಹಿತವನ್ನುಂಟು ಮಾಡುವುದಕ್ಕಾಗಿ ಪರಸ್ಪರ ದೋಷದೃಷ್ಟಿಯನ್ನು ಬಿಟ್ಟು ಹೃದಯದಲ್ಲಿ ಶ್ರೀಭಗವಂತನನ್ನು ನೆನೆಯುತ್ತಾ ನಿಮ್ಮ-ನಿಮ್ಮ ಕರ್ತವ್ಯಗಳನ್ನು ಪಾಲಿಸುತ್ತಿರಬೇಕು. ಹೀಗೆ ಮಾಡಿದರೆ ನಿಮ್ಮ ಸ್ವಾರ್ಥವೂ ಸಂಪನ್ನವಾಗುತ್ತದೆ ಮತ್ತು ರಾಜನಾದ ನನ್ನ ಮೇಲೂ ದೊಡ್ಡ ಅನುಗ್ರಹವನ್ನು ಮಾಡಿದಂತಾಗುತ್ತದೆ.

(ಶ್ಲೋಕ 21-25)

ಯೂಯಂ ತದನುಮೋದಧ್ವಂ ಪಿತೃದೇವರ್ಷಯೋಽಮಲಾಃ ।
ಕರ್ತುಃ ಶಾಸ್ತುರನುಜ್ಞಾತುಸ್ತುಲ್ಯಂ ಯತ್ಪ್ರೇತ್ಯ ತತ್ಫಲಮ್ ॥೨೬॥

ಪರಿಶುದ್ಧಾತ್ಮರಾದ ಎಲೈ ಪಿತೃದೇವತೆಗಳೇ! ದೇವತೆಗಳೇ! ಮಹರ್ಷಿಗಳೇ! ನನ್ನ ಈ ಪ್ರಾರ್ಥನೆಯನ್ನು ನೀವೆಲ್ಲರೂ ಅನುಮೋದಿಸಿರಿ.

ಏಕೆಂದರೆ : ಕರ್ಮಗಳ ಫಲವು ಮರಣಾನಂತರ ಅವುಗಳಿಗೆ ಕರ್ತೃವಿಗೆ ಮಾತ್ರವಲ್ಲದೇ ಅವುಗಳನ್ನು ಉಪದೇಶಮಾಡಿದವನಿಗೂ ಮತ್ತು ಸಮರ್ಥನೆಮಾಡಿದವನಿಗೂ ಸಮನಾಗಿಯೇ ದೊರೆಯುವುದು.

ಪೂಜ್ಯತಮರಾದ ಸಜ್ಜನರೇ! ಈ ಯಜ್ಞಾದಿಕರ್ಮಗಳು ನಿಷ್ಫಲಗಳೋ? ತಾವಾಗಿಯೇ ಫಲವನ್ನು ಕೊಡುತ್ತವೆಯೋ ಅಥವಾ ಅವುಗಳಿಗೆ ಫಲಗಳನ್ನು ಕೊಡುವ ಈಶ್ವರನೆಂಬುವನು ಇರುವನೋ–ಎಂದು ವಿಚಾರ ಮಾಡಿದಾಗ, ಅವುಗಳಿಗೆ ಫಲವನ್ನು ಕೊಡುವ ಯಜ್ಞಪತಿಯೆಂಬ ಪರಮೇಶ್ವರನು ಇರುವನೆಂಬುದೇ ಜ್ಞಾನಿಗಳ ಸಿದ್ಧಾಂತವು. ಏಕೆಂದರೆ : ಇಹಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಕೆಲವು ಕಡೆ ಪ್ರಕಾಶವಿದೆ ; ಕೆಲವೆಡೆಗಳಲ್ಲಿ ಪ್ರಕಾಶವಿಲ್ಲ. ಒಂದೇ ಬಗೆಯ ಕೆಲಸಮಾಡಿದವರಲ್ಲಿ ಕೆಲವರಿಗೆ ಫಲವೇ ದೊರೆಯುವುದಿಲ್ಲ. ಕೆಲವರಿಗೆ ಫಲದಲ್ಲಿ ತಾರತಮ್ಯವಂಟಾಗುವುದು. ಜಗತ್ತಿನ ಈ ವೈಚಿತ್ರ್ಯಕ್ಕೆ ಪರಮೇಶ್ವರನನ್ನು ಬಿಟ್ಟು ಬೇರೆ ಯಾವ ಕಾರಣವೂ ತೋರುವುದಿಲ್ಲ. ಜ್ಞಾನಿಗಳ ಅನುಭವವೂ ಕರ್ಮಫಲಪ್ರದಾತೃವಾದ ಪರಮೇಶ್ವರನು ಇರುವನೆಂಬುದಕ್ಕೆ ಪ್ರಮಾಣವಾಗಿದೆ. ಮನು, ಉತ್ತಾನಪಾದ, ಧ್ರುವ, ರಾಜರ್ಷಿಯಾದ ಪ್ರಿಯವ್ರತ, ನಮ್ಮ ತಾತ ಅಂಗಮಹಾರಾಜರು, ದೇವೋತ್ತಮರಾದ ಬ್ರಹ್ಮ-ರುದ್ರರು, ಪ್ರಹ್ಲಾದ, ಬಲಿಚಕ್ರವರ್ತಿ ಮತ್ತು ಇದೇ ವರ್ಗಕ್ಕೆ ಸೇರಿದ ಇತರ ಮಹಾನುಭಾವರು–ಇವರೆಲ್ಲರೂ ಧರ್ಮಾರ್ಥ-ಕಾಮಗಳಿಗೂ, ಸ್ವರ್ಗ-ಮೋಕ್ಷಗಳಿಗೂ ನಿಯಾಮಕನಾಗಿ ಕರ್ಮಫಲಪ್ರದನಾದ, ಸ್ವಾಮಿಯಾದ ಗದಾಧರನು ಇರುವನೆಂದೇ ಘೋಷಣೆಮಾಡುತ್ತಾರೆ. ಈ ಬಗೆಗೆ ಧರ್ಮದ ವಿಷಯದಲ್ಲಿ ಮೂಢನಾದ, ಮೃತ್ಯುವಿನ ಮೊಮ್ಮಗನಾದ ವೇನರಾಜನೇ ಮುಂತಾದ ಕೆಲವುಮಂದಿ ಶೋಚನೀಯರಾದ ಜನರು ಅಭಿಪ್ರಾಯಭೇದವನ್ನು ಹೇಳಬಹುದು. ಅವಿವೇಕಿಗಳಾದ ಅವರ ಮಾತಿಗೆ ಮಹತ್ತ್ವವೇನೂ ಇಲ್ಲ.* 'ಶ್ರೀಭಗವಂತನ

* ಕರ್ಮಗಳಿಗೆ ಫಲವನ್ನು ಕೊಡುವ ಈಶ್ವರನೆಂಬುವನು ಇಲ್ಲವೇ ಇಲ್ಲ–ಎಂದು ಕೆಲವರು ವಾದಿಸುತ್ತಾರೆ. ಅವರ ವಾದವೈಖರಿ ಹೀಗಿದೆ : ಪ್ರಕೃತಿ-ಪುರುಷರಿಗಿಂತಲೂ ಬೇರೆಯಾದ ಈಶ್ವರನು ಉಂಟು ಎಂಬುದಕ್ಕೆ ಏನು ಪ್ರಮಾಣ? ಇಂದ್ರಿಯಗಳಿಗೆ ಈಶ್ವರನು ಕಾಣುವುದಿಲ್ಲವಾದ್ದರಿಂದ ಅದಕ್ಕೆ ಪ್ರತ್ಯಕ್ಷಪ್ರಮಾಣವಿಲ್ಲ.

ಚರಣಕಮಲಗಳನ್ನು ಸೇವಿಸಬೇಕು'–ಎಂಬ ಅಭಿಲಾಷೆಯೂ–ಆತನ ಚರಣ ನಖದಿಂದ ಉದ್ಭವಿಸಿದ ಗಂಗೆಯಂತೆ–ಸಂಸಾರದ ತಾಪಗಳಿಂದ ಸಂತಪ್ತ ರಾದ ಜೀವಗಳ ಜನ್ಮ-ಜನ್ಮಾಂತರಗಳ ಕೊಳೆಗಳನ್ನು ಒಡನೆಯೇ ತೊಳೆದು ಹಾಕುವುದು. ಆತನ ಚರಣತಲವನ್ನು ಆಶ್ರಯಿಸಿದ ಮನುಷ್ಯನು ಎಲ್ಲ ಮನೋದೋಷಗಳನ್ನೂ ತೊಳೆದುಕೊಳ್ಳುವನು. ವೈರಾಗ್ಯವನ್ನೂ ಮತ್ತು ತತ್ತ್ವಸಾಕ್ಷಾತ್ಕಾರದ ಬಲವನ್ನೂ ಪಡೆದುಕೊಳ್ಳುವನು. ಈ ದುಃಖಮಯ ವಾದ ಸಂಸಾರಚಕ್ರಕ್ಕೆ ಮತ್ತೆ ಬೀಳುವುದಿಲ್ಲ. ಆತನ ಅಡಿದಾವರೆಗಳು ಎಲ್ಲ ಪುರುಷಾರ್ಥಗಳನ್ನೂ ಈಡೇರಿಸುವುವು. ಇಂತಹ ಪ್ರಭುವನ್ನು ನೀವು ನಿಮ್ಮ ಜೀವನವೃತ್ತಿಗೆ ಉಪಯೋಗಪಡುವ ವರ್ಣಾಶ್ರಮೋಚಿತ ವಾದ ಅಧ್ಯಯನ-ಅಧ್ಯಾಪನಗಳೇ ಮುಂತಾದ ಕರ್ಮಗಳಿಂದಲೂ, ಧ್ಯಾನ-

---

ಅನುಮಾನಪ್ರಮಾಣವು ಪ್ರತ್ಯಕ್ಷಮೂಲವಾದ್ದರಿಂದ ಈಶ್ವರನ ಅಸ್ತಿತ್ವಕ್ಕೆ ಅನುಮಾನವೂ ಪ್ರಮಾಣವಾಗಲಾರದು. ಇನ್ನು ಶಬ್ದಪ್ರಮಾಣದ ವಿಷಯ. ಶಬ್ದದಲ್ಲಿ ಲೌಕಿಕಶಬ್ದವು ನಿಷ್ಕೃಷ್ಟವಾದ ಪ್ರಮಾಣವಾಗಲಾರದು. ಏಕೆಂದರೆ : ಅದರಲ್ಲಿ ಭ್ರಮೆ, ಪ್ರಮಾದ–ಮುಂತಾದ ದೋಷಗಳು ಸಂಭವಿಸುತ್ತವೆ. ಯಾವುದಾದರೂ ಶಬ್ದಕ್ಕೆ ಇದೇ ಅರ್ಥವೆಂಬುದು ಹಿರಿಯರು ಹೇಳಿದ ಹೊರತು ತಿಳಿಯುವುದಿಲ್ಲ. ಆ ಹಿರಿಯರೂ ಕಾರ್ಯವನ್ನು ಯೋಚಿಸದೇ ಶಬ್ದಪ್ರಯೋಗವನ್ನು ಮಾಡುವುದಿಲ್ಲ. ಆದುದರಿಂದ ಲೌಕಿಕ ಶಬ್ದಗಳು ಹೇಗೆ ಕಾರ್ಯರೂಪವಾದ ಅರ್ಥದಲ್ಲಿ ಮಾತ್ರವೇ ಪ್ರಮಾಣವೆನಿಸು ತ್ತವೆಯೋ–ಹಾಗೆಯೇ ವೇದವಾಣಿಗಳೂ ಕೂಡ ಕಾರ್ಯರೂಪವಾದ ಅರ್ಥದಲ್ಲಿ ಪ್ರಮಾಣವೇ ಹೊರತು ಸಿದ್ಧವಾದ 'ಈಶ್ವರ' ಎಂಬ ಪದಾರ್ಥಕ್ಕೆ ಪ್ರಮಾಣವಾಗುವುದಿಲ್ಲ. ಹೀಗೆ ಈಶ್ವರನೇ ಪ್ರಮಾಣಗಳಿಂದ ಸಿದ್ಧಿಸದೇ ಇರುವಾಗ ಆತನಿಂದ ಕರ್ಮಗಳ ಫಲಪ್ರಾಪ್ತಿಯಾಗುವುದಾದರೂ ಹೇಗೆ?

ಜಗತ್ತಿನ ವೈಚಿತ್ರ್ಯಕ್ಕೆ ಈಶ್ವರನನ್ನು ಬಿಟ್ಟು ಬೇರೆ ಕಾರಣವಿಲ್ಲವಾದ್ದರಿಂದ ಈಶ್ವರನು ಉಂಟು–ಎಂದು ಕೆಲವರು ವಾದಿಸಬಹುದು. ಆದರೆ ಪುಣ್ಯ-ಪಾಪರೂಪಗಳಿಂದ ಸಂಸ್ಕೃತವಾದ ಪ್ರಕೃತಿಯೇ ಜೀವರುಗಳ ಪುರುಷಾರ್ಥಕ್ಕೆ ಅನುಗುಣವಾಗಿ ಪರಿಣಮಿಸುವುದು. ಉದಾಹರಣೆ : ವಿಷಮಿಶ್ರವಾದ ಅನ್ನ-ಪಾನೀಯಾದಿಗಳು ದೇಶ-ಕಾಲ-ವ್ಯವಸ್ಥೆಗಳಂತೆ ದುಃಖಕ್ಕೆ ಕಾರಣವಾಗುತ್ತವೆ. ಔಷಧಮಿಶ್ರವಾದ ಅನ್ನ-ಪಾನೀಯಗಳು ಸುಖಕ್ಕೆ ಕಾರಣವಾಗುತ್ತವೆ. ಹೀಗೆ ಪ್ರಕೃತಿಯ ಪರಿಣಾಮದಿಂದಲೇ ಫಲಪ್ರಾಪ್ತಿಯನ್ನು ನಿರ್ಣಯಿಸಬಹುದಾಗಿರುವಾಗ ಈಶ್ವರನ ಅವಶ್ಯಕತೆಯೇನೂ ಇಲ್ಲ.'

ಸ್ತೋತ್ರ-ಪೂಜೆಗಳೇ ಮುಂತಾದ ಮನಸ್ಸು, ಮಾತು ಮತ್ತು ದೇಹಗಳ ಕರ್ಮಗಳಿಂದಲೂ ಆರಾಧಿಸಿರಿ. ಮನಸ್ಸಿನಲ್ಲಿ ಯಾವ ಕಪಟವನ್ನೂ ಇಟ್ಟುಕೊಳ್ಳಬೇಡಿರಿ. ನಮಗೆ ನಮ್ಮ ನಮ್ಮ ಕರ್ಮಾನುಸಾರವಾಗಿ ಫಲವು ದೊರೆತೇ ದೊರೆಯುವುದು ಎಂದು ನಿಶ್ಚಯಿಸಿಕೊಳ್ಳಿರಿ.* ಯಜ್ಞರೂಪಿಯಾದ ಈ ಭಗವಂತನು ವಿಶುದ್ಧ ವಿಜ್ಞಾನಘನವಾದ ಸ್ವರೂಪದಿಂದ ಕೂಡಿ, ಏಕರೂಪನಾಗಿದ್ದರೂ, ಯಜ್ಞದಲ್ಲಿ ಬಳಸುವ ನಾನಾದ್ರವ್ಯಗಳು[1] ಗುಣಗಳು,

---

ಆದರೆ ಈ ವಾದವೈಖರಿಯು ಸರಿಯಲ್ಲ. ಏಕೆಂದರೆ : ಸರ್ವಜ್ಞನೂ ಸರ್ವಶಕ್ತನೂ ಆದ ಈಶ್ವರನ ಆಶ್ರಯವಿಲ್ಲದೇ ಕೇವಲ ಪ್ರಕೃತಿಯ ಪರಿಣಾಮದಿಂದಲೇ ಜಗತ್ತಿನ ವೈಚಿತ್ರ್ಯವು ಉಂಟಾಗಲಾರದು. ಹಾಗಾದಪಕ್ಷದಲ್ಲಿ ಆ ವೈಚಿತ್ರ್ಯವು ಯಾವಾಗಲೂ ಉಂಟಾಗುತ್ತಲೇ ಇರಬೇಕು. ಪ್ರಳಯದಲ್ಲಿಯೂ ಪ್ರಕೃತಿಪರಿಣಾಮವು ಇರಬೇಕಾಗುತ್ತದೆ. ಆದರಿಂದ ಪ್ರಳಯವೇ ಇಲ್ಲವಾಗುವುದು. ಪ್ರಕೃತಿಗೆ ನಿಯಾಮಕನಾದ ಈಶ್ವರನು ಉಂಟು–ಎಂದ ಪಕ್ಷದಲ್ಲಿ ಆತನ ಸತ್ಯಸಂಕಲ್ಪಕ್ಕೆ ತಕ್ಕಂತೆ ಸೃಷ್ಟಿ ಮತ್ತು ಪ್ರಳಯಗಳು ಕ್ರಮವಾಗಿ ನಡೆಯುತ್ತವೆಯೆನ್ನಬಹುದು. ಈಶ್ವರನು ಬೇಡ ; ಜೀವನಿಂದ ಅಧಿಷ್ಠಿತವಾದ ಪ್ರಕೃತಿಯಿಂದಲೇ ಕ್ರಮವಾಗಿ ಸೃಷ್ಟಿ-ಪ್ರಳಯಗಳು ನಡೆಯಬಹುದಲ್ಲಾ! ಎಂದರೆ–ಅದು ಸಾಧ್ಯವಿಲ್ಲ. ಜೀವರೇ ಪ್ರಕೃತಿಗೆ ಅಧಿಷ್ಠಾತೃಗಳಾಗಿದ್ದಲ್ಲಿ ಪಾಪಾಚರಣೆಯ ಫಲವಾಗಿ ಪಶು-ಪಕ್ಷಿ, ಕೀಟ, ವೃಕ್ಷಗಳೇ ಮುಂತಾದ ನೀಚಶರೀರಗಳನ್ನು ತಮಗೆ ತಾವೇ ಅವರು ತಂದುಕೊಳ್ಳುವರೇ? ಬೇಕು-ಬೇಕೆಂದು ಕಷ್ಟಕ್ಕೆ ಏಕೆ ಅವರು ಸಿಕ್ಕಿಹಾಕಿಕೊಂಡಾರು? ಆದುದರಿಂದ ಅವಾಪ್ತಸಮಸ್ತಕಾಮನೂ, ಸರ್ವಜ್ಞನೂ, ಸತ್ಯಸಂಕಲ್ಪನೂ, ಸರ್ವಶಕ್ತನೂ ಆದ ಭಗವಂತನು ಉಂಟು. ಆತನು ಕರ್ಮಗಳನ್ನು ಪುಣ್ಯ-ಪಾಪ ಎಂದು ವಿಂಗಡಿಸಿ, ಅವುಗಳನ್ನು ಅನುಭವಿಸಲು ಬೇಕಾದ ದೇಹಾದಿಗಳನ್ನು ಕೊಟ್ಟು, ತನ್ನ ಆಜ್ಞೆಯಾಗಿರುವ ವೇದಗಳನ್ನು ಪ್ರಕಾಶಪಡಿಸಿ, ಅವುಗಳ ಆಣತಿಯನ್ನು ಮೀರುವವನಿಗೆ ಕೆಟ್ಟ ಫಲಗಳನ್ನೂ ಕೊಡುವನು–ಎಂದು ಹೇಳಿದರೆ ಜಗತ್ತಿನ ವೈಚಿತ್ರ್ಯವನ್ನು ಸಾಧಿಸಲು ಬರುತ್ತದೆ. ವೇದವಾಣಿಗಳು ಕಾರ್ಯವಸ್ತುಗಳಲ್ಲಿ ಹೇಗೋ ಹಾಗೆ ಸಿದ್ಧವಸ್ತುಗಳಲ್ಲೂ ಪ್ರಮಾಣವೆನಿಸುತ್ತವೆ. (ವೀರರಾಘವೀಯ) (ಶ್ಲೋಕ ೨೭)

* ಜೀವರು ತಮ್ಮ ತಮ್ಮ ಉಪಾಸನೆಗಳಿಗೆ ಅನುಗುಣವಾಗಿ ಫಲಗಳನ್ನು ಪಡೆಯುವರು. ಇದರಲ್ಲಿ ಸಂಶಯಪಡಬಾರದು. (ಶ್ಲೋಕ ೩೩)

[1] ಕರ್ಮಗಳು ಅಗ್ನಿ-ಇಂದ್ರ-ವರುಣರೇ ಮುಂತಾದ ದೇವತೆಗಳ ಭೇದದಿಂದಲೂ ದ್ರವ್ಯ, ಗುಣ ಮುಂತಾದುವುಗಳ ಭೇದದಿಂದಲೂ ಬೇರೆ-ಬೇರೆಯಾಗಿದ್ದರೂ ಆ

ಕ್ರಿಯೆಗಳು ಮತ್ತು ಮಂತ್ರಗಳ ಮೂಲಕವೂ, ಬಗೆ-ಬಗೆಯ ಅರ್ಥಗಳು, ಸಂಕಲ್ಪಗಳು, ಪದಾರ್ಥಶಕ್ತಿಗಳು ಮತ್ತು ನಾಮಧೇಯಗಳು–ಇವುಗಳ ಮೂಲಕವೂ ನಾನಾವಿಧವಾದ ಯಜ್ಞಗಳ ರೂಪದಲ್ಲಿ ಪ್ರಕಾಶಗೊಳ್ಳುತ್ತಾನೆ. ಒಂದೇ ಅಗ್ನಿಯು ಬೇರೆ-ಬೇರೆ ಸೌದೆಗಳಲ್ಲಿ ಸೇರಿ ಉರಿಯುವಾಗ ಆಯಾ ಸೌದೆಗಳ ಆಕಾರವನ್ನೇ ತಾಳಿ ಕಾಣಿಸುವುದಿಲ್ಲವೇ? ಹಾಗೆಯೇ ಸರ್ವ ವ್ಯಾಪಕನಾದ ಪ್ರಭುವು ಪರಮಾನಂದೈಕಸ್ವರೂಪನಾಗಿದ್ದರೂ–ಪ್ರಕೃತಿ, ಕಾಲ, ವಾಸನೆ ಮತ್ತು ಅದೃಷ್ಟಗಳಿಂದ ಉತ್ಪನ್ನವಾಗಿರುವ ಶರೀರದಲ್ಲಿ ವಿಷಯಾಕಾರವನ್ನು ತಳೆದಿರುವ ಬುದ್ಧಿಯಲ್ಲಿದ್ದು ಆ ಯಜ್ಞಾದಿಕ್ರಿಯೆಗಳ ಫಲಗಳ ರೂಪದಲ್ಲಿ ಅನೇಕಪ್ರಕಾರನಾಗಿರುವಂತೆ ಕಾಣುತ್ತಾನೆ.

(ಶ್ಲೋಕ 27-35)

ಅಹೋ ಮಮಾಮೀ ವಿತರನ್ತ್ಯನುಗ್ರಹಂ
ಹರಿಂ ಗುರುಂ ಯಜ್ಞಭುಜಾಮಧೀಶ್ವರಮ್ ।
ಸ್ವಧರ್ಮಯೋಗೇನ ಯಜನ್ತಿ ಮಾಮಕಾ
ನಿರನ್ತರಂ ಕ್ಷೋಣಿತಲೇ ದೃಢವ್ರತಾಃ ॥೩೬॥

ಈ ಭೂಮಂಡಲದಲ್ಲಿರುವ ನನ್ನ ಪ್ರಜೆಗಳು–ಯಜ್ಞವನ್ನು ಭೋಗಿ

ದ್ರವ್ಯಾದಿಗಳನ್ನೇ ಶರೀರವನ್ನಾಗಿ ಹೊಂದಿ ಅಗ್ನಿ-ಇಂದ್ರ ಮುಂತಾದ ದೇವತೆಗಳಲ್ಲಿ ಅಂತರ್ಯಾಮಿಯಾಗಿರುವ ಭಗವಂತನೇ ಆಯಾ ರೂಪದಿಂದ ಉಪಾಸನೆಗೆ ತಕ್ಕ ಫಲ ಗಳನ್ನು ದಯಪಾಲಿಸುತ್ತಾನೆ. ಆದುದರಿಂದ ಕರ್ಮಗಳನ್ನು ಆ ಏಕದೇವತೋ ದ್ದೇಶದಿಂದಲೇ ಆಚರಿಸಬೇಕು. (ವೀರರಾಘವೀಯ)

ಯಜ್ಞವು ಸ್ವರೂಪದಿಂದ ಜಡವಾಗಿದ್ದರೂ, ರಾಜಸವಾಗಿದ್ದರೂ, ಭಗವದರ್ಪಣ ರೂಪವಾದ ಮಹಿಮೆಯಿಂದ ಫಲವನ್ನು ಕೊಡುವಾಗ ತ್ರಿಗುಣಾತೀತವಾಗಿ ಬ್ರಹ್ಮಾ ನಂದರೂಪವನ್ನು ಪಡೆಯುವುದು. ಹೀಗಿರುವಾಗ ಶ್ರೀಭಗವಂತನನ್ನೇ ಕುರಿತು ನೇರವಾಗಿ ಮಾಡುವ ಶ್ರವಣ, ಕೀರ್ತನ–ಮುಂತಾದುವುಗಳು ಬ್ರಹ್ಮಾನಂದಪ್ರದಗಳೆಂದು ಬೇರೆ ಹೇಳಬೇಕೇ? (ಸಾರಾರ್ಥದರ್ಶಿನೀ)

ದ್ರವ್ಯಭೇದ–(ಯಜ್ಞದಲ್ಲಿ ಬಳಸುವ ಬತ್ತ, ಗೋಧಿ ಮುಂತಾದುವುಗಳಿಂದ) ಗುಣಭೇದ–(ಬಿಳುಪು, ಕೆಂಪು ಮುಂತಾದುವುಗಳಿಂದ) ಕ್ರಿಯಾಭೇದ–(ಬತ್ತವನ್ನು ಕುಟ್ಟುವುದು, ಸೋಮವನ್ನು ಶೋಧಿಸುವುದು. ಇತ್ಯಾದಿಗಳಿಂದ) (ಶ್ಲೋಕ ೩೪)

ಸುವ ದೇವತೆಗಳಿಗೂ ಅಧೀಶ್ವರನಾದ, ಸರ್ವಗುರುವಾದ ಶ್ರೀಹರಿಯನ್ನು ದೃಢವಾದ ವ್ರತನಿಷ್ಠೆಯಿಂದ ತಮ್ಮ-ತಮ್ಮ ಧರ್ಮಗಳ ಮೂಲಕ ನಿರಂತರ ವಾಗಿ ಸೇವಿಸಿದರೆ ಅದರಿಂದ ಅವರಿಗೆ ಒಳ್ಳೆಯದಾಗುವುದು ಮಾತ್ರವಲ್ಲ ; ಆಶ್ಚರ್ಯವೇನೆಂದರೆ–ಅದರಿಂದ ಅವರು ನನ್ನ ಮೇಲೆಯೇ ಪರಮಕೃಪೆ ಯನ್ನು ತೋರಿದಂತೆಯೂ ಆಗುವುದು.

ರಾಜನಿಗೆ ಎಲ್ಲರ ಮೇಲೂ ಅಧಿಕಾರವಿದ್ದರೂ ಆತನು ಭಗವದ್ಭಕ್ತ ರಾದ ಬ್ರಾಹ್ಮಣಶ್ರೇಷ್ಠರ ಮೇಲೆ ತನ್ನ ಅಧಿಕಾರವನ್ನು ಪ್ರಯೋಗಿಸಬಾರದು. ಸಹನಶೀಲತೆ, ತಪಸ್ಸು ಮತ್ತು ಜ್ಞಾನಗಳೆಂಬ ಐಶ್ವರ್ಯಗಳಿಂದ ಆ ವಿಷ್ಣುಭಕ್ತರಾದ ಬ್ರಾಹ್ಮಣರ ವಂಶಗಳು ಸ್ವಾಭಾವಿಕವಾಗಿಯೇ ತೇಜೋ ಮಯವಾಗಿರುತ್ತದೆ. ರಾಜಕುಲಗಳು ತಮ್ಮ ಸಿರಿ-ಸಂಪತ್ತು, ತೇಜಸ್ಸು ಮುಂತಾದ ಪ್ರಭಾವಗಳನ್ನು ಅವರ ಮೇಲೆ ಬೀರಬಾರದು. ಬ್ರಹ್ಮದೇವರೇ ಮುಂತಾದ ಶ್ರೇಷ್ಠತಮರಾದ ಸಮಸ್ತದೇವತೆಗಳಿಗೂ ಅಗ್ರಗಣ್ಯನಾಗಿ, ಬ್ರಾಹ್ಮಣರಿಗೆ ಹಿತಕರನಾಗಿರುವ ಪುರಾಣಪುರುಷನಾದ ಶ್ರೀಹರಿಯು ಕೂಡ ನಿರಂತರವಾಗಿ ಆ ಮಹಾತ್ಮರ ಪಾದಗಳನ್ನು ನಮಸ್ಕರಿಸಿದ್ದರಿಂದಲೇ ಸ್ಥಿರವಾದ ಲಕ್ಷ್ಮಿಯನ್ನೂ ಮತ್ತು ಸಂಸಾರವನ್ನೂ ಪವಿತ್ರಗೊಳಿಸುವ ಕೀರ್ತಿಯನ್ನೂ ಗಳಿಸಿದ್ದಾನೆ. ಇಂತಹ ಮಹಿಮಾವಂತರಲ್ಲವೇ ಇವರು?* ನೀವೆಲ್ಲರೂ ಧರ್ಮಪರಾಯಣರು. ಸರ್ವಾಂತರ್ಯಾಮಿಯೂ, ಸ್ವಯಂಪ್ರಕಾಶನೂ, ಬ್ರಾಹ್ಮಣಪ್ರಿಯನೂ, ಧರ್ಮಮೂರ್ತಿಯೂ ಆಗಿರುವ ಶ್ರೀಹರಿಯು ವಿಪ್ರಕುಲದ ಸೇವೆಮಾಡುವುದರಿಂದಲೇ ಅತ್ಯಂತಸಂತುಷ್ಟನಾಗುತ್ತಾನೆ. ಆದುದರಿಂದ ನೀವೆಲ್ಲರೂ ಎಲ್ಲ ರೀತಿಗಳಿಂದಲೂ ವಿನಯಪೂರ್ವಕವಾಗಿ

---

* ಬ್ರಾಹ್ಮಣರ ಪಾದಸೇವೆಯ ಮಹಿಮೆಯಿಂದಲೇ ಶ್ರೀಹರಿಯು ಲಕ್ಷ್ಮಿಯನ್ನೂ ಮತ್ತು ಪವಿತ್ರವಾದ ಕೀರ್ತಿಯನ್ನೂ ಪಡೆದನು–ಎಂಬುದನ್ನು ನೇರವಾದ ಅರ್ಥದಲ್ಲಿ ತೆಗೆದುಕೊಳ್ಳಕೂಡದು. ಇದು ಸದ್ಬ್ರಾಹ್ಮಣರ ಪ್ರಶಂಸಾರೂಪವಾದ ಅರ್ಥವಾದ. ಅರ್ಥವಾದ ವಾಕ್ಯಗಳಿಗೆ ಸ್ವತಂತ್ರವಾದ ಅರ್ಥವಿಲ್ಲ. ವಿಧಿವಾಕ್ಯದೊಡನೆ ಸೇರಿಸಿಯೇ ಅವುಗಳನ್ನು ಅರ್ಥೈಸಬೇಕು. ಬ್ರಾಹ್ಮಣರನ್ನು ಭಕ್ತಿಯಿಂದ ಸೇವೆಮಾಡಬೇಕು–ಎಂಬುದು ವಿಧಿ. ಅದನ್ನು ಸ್ತುತಿಸುವುದರಲ್ಲೇ ಮೇಲ್ಕಂಡ ಅರ್ಥವಾದಕ್ಕೆ ತಾತ್ಪರ್ಯ. ಕೀರ್ತಿ-ಸಂಪತ್ತುಗಳನ್ನು ಪಡೆಯಬೇಕಾದರೆ ಎಲ್ಲರೂ ಜ್ಞಾನಿಗಳಾದ ಬ್ರಾಹ್ಮಣರನ್ನು ಸೇವಿಸಬೇಕು–ಎಂಬುದೇ ಇಲ್ಲಿಯ ಆಶಯ. (ಶ್ಲೋಕ ೩೮)

ಅಂತಹ ಸದಾಚಾರ, ಸದ್ಗುಣ ಮತ್ತು ಭಗವದ್ಭಕ್ತಿಗಳಿಂದ ಸಂಪನ್ನವಾದ ಬ್ರಾಹ್ಮಣಕುಲವನ್ನು ಸೇವೆಮಾಡಬೇಕು. ಅವರನ್ನು ನಿತ್ಯವೂ ಸೇವೆಮಾಡಿ ಪ್ರಸನ್ನಗೊಳಿಸಿದರೆ ಶೀಘ್ರವಾಗಿಯೇ ಚಿತ್ತವು ಶುದ್ಧವಾಗಿ ಮನುಷ್ಯನು ತಾನಾಗಿಯೇ ಪರಮಶಾಂತಿರೂಪವಾದ ಮೋಕ್ಷವನ್ನು ಪಡೆಯುವನು. ಹವಿಸ್ಸನ್ನು ಸ್ವೀಕರಿಸುವ ದೇವತೆಗಳಿಗೆ ಮುಖವಾಗುವ ಶಕ್ತಿಯು ಇಂತಹ ಮಹಾತ್ಮರಾದ ಬ್ರಾಹ್ಮಣರಿಗಲ್ಲದೇ ಬೇರಾರಿಗುಂಟು? (ಶ್ಲೋಕ 37-40)

ಅಶ್ನಾತ್ಯನಂತಃ ಖಲು ತತ್ತ್ವಕೋವಿದೈಃ
ಶ್ರದ್ಧಾಹುತಂ ಯನ್ಮುಖ ಇಜ್ಯನಾಮಭಿಃ ।
ನ ವೈ ತಥಾ ಚೇತನಯಾ ಬಹಿಷ್ಕೃತೇ
ಹುತಾಶನೇ ಪಾರಮಹಂಸ್ಯಪರ್ಯಗುಃ ॥೪೧॥

ಇಂತಹ ಜ್ಞಾನಿಗಳು ಅಗ್ನಿಗೆ ಮಾತ್ರವಲ್ಲದೇ ಭಗವಂತನಾದ ಶ್ರೀಹರಿಗೂ ಮುಖವಾಗಿದ್ದಾರೆ. ಏಕೆಂದರೆ : ಪರಮಹಂಸರಿಂದ ಹೊಂದಲ್ಪಡುವವನೂ ಮತ್ತು ಜ್ಞಾನಪರವಾದ ಉಪನಿಷತ್ತಿನ ವಾಕ್ಯಗಳಿಂದ ಪ್ರತಿ ಪಾದಿಸಲ್ಪಡುವವನೂ ಆಗಿರುವ ಸ್ವಾಮಿಯಾದ ಅನಂತನು ಇಂದ್ರನೇ ಮುಂತಾದ ಯಜ್ಞದ ದೇವತೆಗಳ ಹೆಸರನ್ನು ಹೇಳುತ್ತಾ ತತ್ತ್ವಜ್ಞಾನಿಗಳು ಬ್ರಾಹ್ಮಣರ ಮುಖದಲ್ಲಿ ಶ್ರದ್ಧಾಪೂರ್ವಕವಾಗಿ ಹೋಮಮಾಡುವ ಪದಾರ್ಥ ಗಳನ್ನು ಅತ್ಯಂತಪ್ರೀತಿಯಿಂದ ಆಸ್ವಾದಿಸುತ್ತಾನೆ. ಚೇತನಾರಹಿತವಾದ ಅಗ್ನಿಯಲ್ಲಿ ಹೋಮಮಾಡುವ ದ್ರವ್ಯಗಳನ್ನೂ ಕೂಡ ಶ್ರೀಭಗವಂತನು ಅಷ್ಟು ಪ್ರೀತಿಯಿಂದ ಸವಿಯುವುದಿಲ್ಲ.

ಎಲೈ ಸಭ್ಯಮಹಾಶಯರೇ! ಸ್ವಚ್ಛವಾದ ಕನ್ನಡಿಯು ಪ್ರತಿಬಿಂಬವನ್ನು ಶುದ್ಧವಾಗಿ ತೋರಿಸುವಂತೆ–ಇಡೀ ವಿಶ್ವದ ಅರಿವನ್ನು ಚೆನ್ನಾಗಿ ಮಾಡಿಸಿಕೊಡುವಂತಹ ನಿತ್ಯವೂ, ಶುದ್ಧವೂ, ಸನಾತನವೂ ಆದ ವೇದ ವೆಂಬ ಬ್ರಹ್ಮವನ್ನು ಪರಮಾರ್ಥತತ್ತ್ವದ ಪ್ರಾಪ್ತಿಗಾಗಿ ಶ್ರದ್ಧೆ, ತಪಸ್ಸು, ಮಂಗಳ ಕರವಾದ ಆಚರಣೆ, ಮೌನ ಮತ್ತು ಸಂಯಮ-ಸಮಾಧಿಗಳಿಂದ ಯಾರು ಧರಿಸಿದ್ದಾರೆಯೋ–ಅಂತಹ ಬ್ರಾಹ್ಮಣರ ಚರಣಕಮಲಗಳ ಧೂಳಿಯನ್ನು ನಾನು ಆಯುಸ್ಸು ಇರುವವರೆಗೂ ನನ್ನ ಕಿರೀಟದಲ್ಲಿ ಧರಿಸಿರುವೆನು.

ಏಕೆಂದರೆ : ಅದನ್ನು ಸದಾ ತಲೆಯಲ್ಲಿ ಧರಿಸುತ್ತಿದ್ದರೆ ಮನುಷ್ಯನ ಸಮಸ್ತ ಪಾಪಗಳೂ ಒಡನೆಯೇ ನಾಶಹೊಂದುವುವು ಮತ್ತು ಸಮಸ್ತಸದ್ಗುಣಗಳೂ ಆತನನ್ನು ಆಶ್ರಯಿಸುವುವು. (ಶ್ಲೋಕ 42-43)

ಗುಣಾಯನಂ ಶೀಲಧನಂ ಕೃತಜ್ಞಂ
ವೃದ್ಧಾಶ್ರಯಂ ಸಂವೃಣತೇಽನು ಸಮ್ಪದಃ ।
ಪ್ರಸೀದತಾಂ ಬ್ರಹ್ಮಕುಲಂ ಗವಾಂ ಚ
ಜನಾರ್ದನಃ ಸಾನುಚರಶ್ಚ ಮಹ್ಯಮ್ ॥೪೪॥

ಅಂತಹ ಗುಣಶಾಲಿಗಳೂ, ಶೀಲಸಂಪನ್ನರೂ, ಕೃತಜ್ಞರೂ ಮತ್ತು ಗುರುಜನಸೇವಾ-ಶುಶ್ರೂಷೆಗಳಲ್ಲಿ ತತ್ಪರರೂ ಆದ ಮನುಷ್ಯರ ಬಳಿಗೆ ಸಮಸ್ತಸಂಪತ್ತುಗಳೂ ತಾವಾಗಿಯೇ ಬಂದು ಸೇರುವುವು. ಆದುದರಿಂದ ಅಂತಹ ಬ್ರಾಹ್ಮಣಕುಲಗಳೂ, ಗೋವುಗಳ ವಂಶಗಳೂ ಮತ್ತು ಭಕ್ತಜನ ರಿಂದೊಡಗೂಡಿದ ಶ್ರೀಭಗವಂತನೂ ನನ್ನಲ್ಲಿ ಸದಾ ಪ್ರಸನ್ನನಾಗಿರಲಿ– ಎಂದು ತಾನೇ ನಾನು ಆಶಿಸುತ್ತೇನೆ!"

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ಪೃಥುಮಹಾರಾಜನ ಭಾಷಣವನ್ನು ಕೇಳಿ ದೇವತೆಗಳೂ, ಪಿತೃಗಳೂ ಮತ್ತು ಬ್ರಾಹ್ಮಣರೇ ಮುಂತಾದ ಸಮಸ್ತಸಜ್ಜನರೂ ಅತ್ಯಂತಪ್ರಸನ್ನರಾಗಿ 'ಭಲೇ!ಭಲೇ' ಎಂದು ಆತನನ್ನು ಪ್ರಶಂಸೆಮಾಡತೊಡಗಿದರು :

"ಎಲೈ ಪುಣ್ಯಾತ್ಮನೇ! ಪುತ್ರರ ಮೂಲಕ ತಂದೆಯು ಪುಣ್ಯಲೋಕ ಗಳನ್ನು ಪಡೆಯುತ್ತಾನೆ–ಎಂಬ ಶ್ರುತಿವಾಕ್ಯವು ಸಾರ್ಥಕವಾಯಿತು. ಏಕೆಂದರೆ: ವೇನನು ಬ್ರಾಹ್ಮಣರ ಶಾಪದಿಂದ ದಗ್ಧನಾಗಿದ್ದರೂ–ಸತ್ಪುತ್ರನಾದ ನಿನ್ನ ಪುಣ್ಯಬಲದಿಂದ ನರಕವನ್ನು ದಾಟಿಬಿಟ್ಟನು. ಇದೇ ರೀತಿಯಲ್ಲೇ ಹಿರಣ್ಯಕಶಿಪುವೂ ಭಗವನ್ನಿಂದೆಯಿಂದ ನರಕಕೂಪದಲ್ಲಿ ಬಿದ್ದು ಹೋಗುವವನಾಗಿದ್ದರೂ ತನ್ನ ಸುಪುತ್ರನಾದ ಪ್ರಹ್ಲಾದನ ಮಹಿಮೆಯಿಂದ ಉದ್ಧಾರಹೊಂದಿದನು. ಎಲೈ ವೀರವರನೇ! ಪೃಥುಸಾರ್ವಭೌಮನೇ! ನೀನು ಪೃಥಿವಿಗೆಲ್ಲಾ ಸ್ವಾಮಿಯಾಗಿರುವುದಲ್ಲದೇ ಸಮಸ್ತಲೋಕಗಳಿಗೂ ಏಕೈಕಸ್ವಾಮಿಯಾಗಿರುವ ಶ್ರೀಹರಿಯಲ್ಲಿ ನಿಶ್ಚಲಭಕ್ತಿಯಿಂದ ಸಂಪನ್ನನೂ

ಆಗಿದ್ದೀಯೆ. ಇಂತಹ ನೀನು ಅನಂತವರ್ಷಗಳ ಕಾಲ ಸುಖವಾಗಿ ಬಾಳು. ನಿನ್ನ ಸುಕೀರ್ತಿಯು ಅತ್ಯಂತಪವಿತ್ರವಾದುದು. ಏಕೆಂದರೆ : ನೀನು ಉದಾರ ಕೀರ್ತಿಯುಳ್ಳವನಾಗಿ ವೇದಕ್ಕೂ, ತಪಸ್ಸಿಗೂ, ಬ್ರಾಹ್ಮಣರಿಗೂ ಹಿತಕಾರಿ ಯಾಗಿರುವ ಬ್ರಾಹ್ಮಣ್ಯದೇವನಾದ ಶ್ರೀಹರಿಯ ಕಥೆಗಳನ್ನು ಪ್ರಕಟಪಡಿಸುತ್ತಿದ್ದೀಯೆ. ನಮ್ಮದು ಎಂತಹ ಭಾಗ್ಯ! ಇಂತಹ ಮಹಾತ್ಮನಾದ ನಿನ್ನನ್ನು ರಾಜನನ್ನಾಗಿ ಪಡೆದ ನಾವು ನಿನ್ನ ರಾಜ್ಯದ ಪ್ರಜೆಗಳಾಗಿರುವುದರಿಂದ ನಮ್ಮನ್ನು ಭಗವಂತನ ರಾಜ್ಯದಲ್ಲೇ ಇರುವವರನ್ನಾಗಿ ತಿಳಿದಿದ್ದೇವೆ. ಪ್ರಭುವೇ! ನೀನು ಆಶ್ರಿತಜನರಿಗೆ ಹೀಗೆ ಶ್ರೇಷ್ಠವಾದ ಉಪದೇಶವನ್ನು ನೀಡುತ್ತಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಏಕೆಂದರೆ : ತನ್ನ ಪ್ರಜೆಗಳಲ್ಲಿ ಅನುರಾಗವನ್ನು ಹೊಂದಿರುವುದು ಕರುಣಾಳುಗಳಾದ ಮಹಾತ್ಮರ ಸ್ವಭಾವವೇ ಆಗಿದೆ. ದುರದೃಷ್ಟವಶದಿಂದ ವಿವೇಕಹೀನರಾಗಿ ಸಂಸಾರಾರಣ್ಯದಲ್ಲಿ ಅಲೆದಾಡುತ್ತಿದ್ದ ನಮ್ಮನ್ನು ನೀನು ಈ ಅಜ್ಞಾನಾಂಧಕಾರದಿಂದ ಪಾರುಮಾಡಿದ್ದೀಯೆ. ನೀನು ಶುದ್ಧಸತ್ತ್ವಮಯನಾದ ಪರಮಪುರುಷನೇ ಆಗಿದ್ದೀಯೆ. ಬ್ರಾಹ್ಮಣಜಾತಿ ಮತ್ತು ಕ್ಷತ್ರಿಯಜಾತಿಗಳೆರಡನ್ನೂ ಒಳಹೊಕ್ಕು ನಿನ್ನ ತೇಜಸ್ಸಿನಿಂದ ಈ ಇಡೀ ಜಗತ್ತನ್ನು ರಕ್ಷಿಸುತ್ತಿದ್ದೀಯೆ. ಬ್ರಾಹ್ಮಣ ಜಾತಿಯ ಒಳಹೊಕ್ಕು ಕ್ಷತ್ರಿಯರನ್ನೂ, ಕ್ಷತ್ರಿಯಜಾತಿಯ ಒಳಹೊಕ್ಕು ಬ್ರಾಹ್ಮಣರನ್ನೂ ಮತ್ತು ಈ ಎರಡು ಜಾತಿಗಳಲ್ಲಿಯೂ ಪ್ರವಿಷ್ಟನಾಗಿ ಈ ಎಲ್ಲ ಲೋಕಗಳನ್ನೂ ನಿನ್ನ ತೇಜಸ್ಸಿನಿಂದ ಸಂರಕ್ಷಿಸುತ್ತಿದ್ದೀಯೆ. ಇಂತಹ ಪರಮಪುರುಷನಾದ ನಿನಗೆ ನಮೋ ನಮಃ."

(ಶ್ಲೋಕ 45-52)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಚತುರ್ಥಸ್ಕಂಧದ ೨೧ನೆಯ ಅಧ್ಯಾಯವು ಮುಗಿಯಿತು.

ಪೃಥುಚಕ್ರವರ್ತಿಗೆ ಸನಕಾದಿಸಿದ್ಧರ ಉಪದೇಶ

ಮೈತ್ರೇಯರು ಹೇಳುತ್ತಾರೆ :

ಜನೇಷು ಪ್ರಗೃಣತ್ಸ್ವೇವಂ ಪೃಥುಂ ಪೃಥುಲವಿಕ್ರಮಮ್ ।
ತತ್ರೋಪಜಗ್ಮುರ್ಮುನಯಶ್ಚತ್ವಾರಃ ಸೂರ್ಯವರ್ಚಸಃ ॥೧॥

"ವಿಪುಲಪರಾಕ್ರಮಿಯಾದ ಪೃಥುಸಾರ್ವಭೌಮನನ್ನು ಜನರು ಹೀಗೆ ಅಭಿನಂದಿಸುತ್ತಿರುವಾಗಲೇ ಸೂರ್ಯನಂತೆ ದೇದೀಪ್ಯಮಾನರಾಗಿದ್ದ ಸನಕರೇ ಮುಂತಾದ ನಾಲ್ವರು ಮುನಿಶ್ರೇಷ್ಠರು ಅಲ್ಲಿಗೆ ದಯಮಾಡಿಸಿದರು.

ತಮ್ಮ ದಿವ್ಯವಾದ ಕಾಂತಿಯಿಂದ ಲೋಕಗಳ ಪಾಪಗಳನ್ನು ಕಳೆಯುತ್ತಾ ಆಕಾಶದಿಂದ ಇಳಿದು ಬರುತ್ತಿದ್ದ ಆ ಸಿದ್ಧೇಶ್ವರರನ್ನು ಪೃಥುವೂ–ಆತನ ಅನುಚರರೂ ಗುರುತಿಸಿದರು. ಆ ಸನಕಾದಿಮುನಿಗಳನ್ನು ಕಂಡೊಡನೆಯೇ ಪೃಥುವಿನ ಪ್ರಾಣಗಳು–ವಿಷಯಾಸಕ್ತರಾದ ಜೀವಗಳು ವಿಷಯಗಳನ್ನು ಕುರಿತು ಓಡುವಂತೆ–ಮೇಲೆದ್ದು ಅವರ ಕಡೆಗೆ ಧಾವಿಸಿದುವು. ಅವುಗಳನ್ನು ಹಿಂದಕ್ಕೆ ಬರಮಾಡಿಕೊಳ್ಳುವುದಕ್ಕೋಸ್ಕರವೋ ಎಂಬಂತೆ ಪೃಥುಸಾರ್ವಭೌಮನು ತನ್ನ ಸದಸ್ಯರೊಡನೆಯೂ– ಅನುಯಾಯಿಗಳೊಡನೆಯೂ ತಟ್ಟನೆ ಮೇಲಕ್ಕೆ ಎದ್ದು ನಿಂತನು.* ಆ ಮುನೀಂದ್ರರು ಅರ್ಘ್ಯವನ್ನು ಸ್ವೀಕರಿಸಿ ಆಸನದಲ್ಲಿ ಮಂಡಿಸಲು, ಶಿಷ್ಟಾಗ್ರೇಸರನಾದ ಪೃಥುಮಹಾರಾಜನು ಅವರ ಗೌರವದಿಂದ ಪ್ರಭಾವಿತನಾಗಿ ವಿನಯದಿಂದ ಕತ್ತನ್ನು ಬಗ್ಗಿಸಿಕೊಂಡು ಅವರಿಗೆ ವಿಧಿಪೂರ್ವಕವಾಗಿ ಪೂಜೆಯನ್ನು ಸಲ್ಲಿಸಿದನು.

---

* ಹೋಲಿಕೆ :– 'ಊರ್ಧ್ವಂ ಪ್ರಾಣಾ ಹ್ಯುತ್ಕ್ರಾಮನ್ತಿ ಯೂನಃ ಸ್ಥವಿರ ಆಗತೇ । ಪ್ರತ್ಯುತ್ಥಾನಾಭಿವಾದಾಭ್ಯಾಂ ಪುನಸ್ತಾನ್ಪ್ರತಿಪದ್ಯತೇ॥ ' ವೃದ್ಧನು ಬಂದೊಡನೆಯೇ ಅವನನ್ನು ನೋಡಿದ ತರುಣನ ಪ್ರಾಣಗಳು (ದೇಹದಿಂದ) ಮೇಲಕ್ಕೆ ಏಳುತ್ತವೆ. ಆ ವೃದ್ಧನನ್ನು ಎದುರುಗೊಂಡು ಅಭಿವಾದನಮಾಡಿದರೆ ಆ ಪ್ರಾಣಗಳು ತರುಣನ ದೇಹಕ್ಕೆ ಹಿಂದಿರುಗುತ್ತವೆ–ಎಂಬ ಅಭಿಪ್ರಾಯವನ್ನು ಮನುಧರ್ಮಶಾಸ್ತ್ರವು ಹೇಳುತ್ತದೆ.

(ಶ್ಲೋಕ ೩)

ಅನಂತರ ಅವರ ಶ್ರೀಪಾದತೀರ್ಥವನ್ನು ತನ್ನ ತಲೆಗೂದಲಿಗೆ ಪ್ರೋಕ್ಷಿಸಿ ಕೊಂಡು ಶೀಲವಂತರಾದ ಶಿಷ್ಟಜನರ ಆಚರಣೆಯು ಅಂತಹ ಸಮಯದಲ್ಲಿ ಹೇಗೆ ಇರಬೇಕು–ಎಂಬುದಕ್ಕೆ ಆದರ್ಶನಾದನು. ಸ್ವಾಮಿಯಾದ ಶಂಕರನಿಗೂ ಅಣ್ಣಂದಿರಾಗಿದ್ದ ಆ ಮುನೀಶ್ವರರು ತಮ್ಮ ತಮ್ಮ ಸ್ಥಾನಗಳಲ್ಲಿ ಬೆಳಗುತ್ತಿರುವ ಅಗ್ನಿಗಳಂತೆ ತಾವು ಮಂಡಿಸಿದ್ದ ಸ್ವರ್ಣಸಿಂಹಾಸನದ ಮೇಲೆ ಶೋಭಿಸಿದರು. ಪೃಥುವು ಅತ್ಯಂತಶ್ರದ್ಧಾ-ಸಂಯಮಗಳೊಡನೆ ಸಂಪ್ರೀತಿಯಿಂದ ಅವರಲ್ಲಿ ಹೀಗೆ ವಿಜ್ಞಾಪನೆಮಾಡಿದನು : (ಶ್ಲೋಕ 2-6)

ಅಹೋ ಆಚರಿತಂ ಕಿಂ ಮೇ ಮಙ್ಗಲಂ ಮಙ್ಗಲಾಯನಾಃ ।
ಯಸ್ಯ ವೋ ದರ್ಶನಂ ಹ್ಯಾಸೀದ್ದುರ್ದರ್ಶಾನಾಂ ಚ ಯೋಗಿಭಿಃ ॥೭॥

"ಮಂಗಳಮೂರ್ತಿಗಳಾದ ಮುನೀಶ್ವರರೇ! ನನ್ನದು ಎಂತಹ ಭಾಗ್ಯ! ಎಂತಹ ಭಾಗ್ಯ! ಯೋಗಿಗಳಿಗೂ ದುರ್ಲಭವಾಗಿರುವ ನಿಮ್ಮ ದರ್ಶನವು ನನಗೆ ತಾನಾಗಿಯೇ ಒದಗಿಬಂದಿತಲ್ಲಾ! ನಾನು ಎಂತಹ ಪುಣ್ಯ ವನ್ನು ಆಚರಿಸಿರಬೇಕು? ಜ್ಞಾನಿಗಳಾದ ಬ್ರಾಹ್ಮಣರಾಗಲೀ, ಅನುಚರಸಹಿತ ನಾದ ಶಿವನಾಗಲೀ, ವಿಷ್ಣುವಾಗಲೀ–ಯಾವನಲ್ಲಿ ಪ್ರಸನ್ನರಾಗುವರೋ– ಆತನಿಗೆ ಇಹಲೋಕದಲ್ಲಾಗಲೀ, ಪರಲೋಕದಲ್ಲಾಗಲೀ ಯಾವ ವಸ್ತುವೂ ದುರ್ಲಭವಲ್ಲ. ಈ ಜಗತ್ತಿಗೆ ಕಾರಣವಾಗಿರುವ ಮಹತ್ತತ್ತ್ವವೇ ಮುಂತಾದುವು–ಆತ್ಮನು ಸರ್ವದರ್ಶಿಯಾಗಿ ಸರ್ವಗತನಾಗಿದ್ದರೂ–ಆತ ನನ್ನು ನೋಡಲಾರವಲ್ಲವೇ? ಹಾಗೆಯೇ ನೀವು ಸಮಸ್ತಲೋಕಗಳಲ್ಲಿಯೂ ಸದಾ ಸಂಚರಿಸುತ್ತಿದ್ದರೂ ನಿಮ್ಮನ್ನು ಸಾಧಾರಣಮನುಷ್ಯರು ನೋಡ ಲಾರರು. ನಿಮ್ಮಂತಹ ಪೂಜ್ಯತಮರಾದ ಮಹಾಪುರುಷರು–ಯಾವ ನಾದರೂ ಗೃಹಸ್ಥನ ಮನೆಯಲ್ಲಿ ನೀರು, ನೆಲ, ಹುಲ್ಲು, ಮನೆಯ ಯಜ ಮಾನನ ಅಥವಾ ಸೇವಕರ ಸೇವೆಯನ್ನು ಸ್ವೀಕರಿಸಿದ್ದೇ ಆದರೆ ಆತನು ಧನಹೀನನಾಗಿದ್ದರೂ ಧನ್ಯತಮನೇ ಆಗುತ್ತಾನಲ್ಲವೇ! ಹಾಗೆಯೇ ಭಗವದ್ಭಕ್ತರ ಪರಮಪವಿತ್ರವಾದ ಪಾದೋದಕದ ಬಿಂದುಗಳು ಯಾವ ಮನೆ ಗಳನ್ನು ಎಂದಿಗೂ ಮುಟ್ಟುವುದಿಲ್ಲವೋ–ಆ ಮನೆಗಳು ಎಲ್ಲ ಬಗೆಯ ಸಿರಿ-ಸಂಪತ್ತುಗಳಿಂದ ತುಂಬಿದ್ದರೂ–ಹಾವುಗಳಿಗೆ ವಾಸಸ್ಥಾನವಾಗಿರುವ ವೃಕ್ಷ ಗಳಿಗೇ ಸಮಾನವೆನಿಸುವುವು. ಮುನಿಸಾರ್ವಭೌಮರೇ! ನಿಮಗೆ ಸ್ವಾಗತವು.

ಬಾಲರಾಗಿದ್ದರೂ ದೊಡ್ಡವರು ನೀವು. ಏಕೆಂದರೆ : ನೀವು ಬಾಲ್ಯದಿಂದಲೇ ಮುಮುಕ್ಷುಗಳ ಮಾರ್ಗವನ್ನು ಅನುಸರಿಸುತ್ತಾ ಏಕಾಗ್ರವಾದ ಚಿತ್ತದಿಂದ ಬ್ರಹ್ಮಚರ್ಯವೇ ಮುಂತಾದ ಮಹಾವ್ರತಗಳನ್ನು ಅತಿಶ್ರದ್ಧೆಯಿಂದ ಆಚರಣೆ ಮಾಡುತ್ತಿರುವವರು. ಸ್ವಾಮಿಗಳೇ! ನಾವು ಕರ್ಮವಶರಾಗಿ ವಿಪತ್ತುಗಳಿಗೆ ಕ್ಷೇತ್ರವಾಗಿರುವ ಈ ಸಂಸಾರದಲ್ಲಿ ಬಿದ್ದು ಇಂದ್ರಿಯಸಂಬಂಧವಾದ ಭೋಗಗಳನ್ನೇ ಪರಮಪುರುಷಾರ್ಥವೆಂದು ಭಾವಿಸುತ್ತಿರುವವರು. ಇಂತಹ ನಮಗೆ ತಾವೇ ಶ್ರೇಯಸ್ಸನ್ನು ಅಪ್ಪಣೆಕೊಡಿಸಬೇಕು. ನಮ್ಮಂತಹವರಿಗೆ ಕುಶಲವುಂಟೇ? ಇನ್ನು ನಿಮ್ಮ ಕುಶಲದ ಬಗೆಗೆ ಪ್ರಶ್ನೆಮಾಡುವ ಪ್ರಕರಣವೇ ಇಲ್ಲ. ಏಕೆಂದರೆ : ತಾವು ಆತ್ಮಾರಾಮರು ; ಪರಮಾತ್ಮನಲ್ಲೇ ಸದಾ ರಮಿಸುತ್ತಿರುವವರು. ಕುಶಲಾಕುಶಲಗಳೆಂಬ ವೃತ್ತಿಗಳೇ ನಿಮ್ಮಲ್ಲಿ ಎಂದಿಗೂ ಇರುವುದಿಲ್ಲ.* ನೀವು ಸಂಸಾರದಲ್ಲಿ ಬೆಂದು-ನೊಂದ ಜೀವಿಗಳಿಗೆಲ್ಲಾ ಪರಮಪವಿತ್ರರಾಗಿದ್ದೀರಿ. ಆದ್ದರಿಂದ ನಿಮ್ಮಲ್ಲಿ ನಂಬಿಕೆಯನ್ನಿಟ್ಟು–'ಈ ಸಂಸಾರದಲ್ಲಿ ಮನುಷ್ಯನಿಗೆ ಶೀಘ್ರವಾಗಿ ಮತ್ತು ಸುಲಭವಾಗಿ ಮಂಗಳವು ಯಾವುದರಿಂದ ಉಂಟಾಗುವುದು?'–ಎಂದು ನಿಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

(ಶ್ಲೋಕ 8-15)

ವ್ಯಕ್ತಮಾತ್ಮವತಾಮಾತ್ಮಾ ಭಗವಾನಾತ್ಮಭಾವನಃ ।
ಸ್ವಾನಾಮನುಗ್ರಹಾಯೇಮಾಂ ಸಿದ್ಧರೂಪೀ ಚರತ್ಯಜಃ ॥೧೬॥

ಆತ್ಮಜ್ಞಾನಿಗಳಾದ ಧೀರರಿಗೆಲ್ಲಾ 'ಆತ್ಮ' ನಾಗಿ ಪ್ರಕಾಶಿಸುತ್ತಾ ಉಪಾಸಕರ ಹೃದಯಗಳಲ್ಲಿ ತನ್ನ ಸ್ವರೂಪವನ್ನು ಯಾವನು ಪ್ರಕಟಪಡಿ

---

* ಶುಭಾಶುಭವಿಷಯಗಳನ್ನು ಚಿಂತಿಸುವ ರೂಪವಾದ ಬುದ್ಧಿವೃತ್ತಿಗಳೇ ಸುಖ-ದುಃಖಗಳನ್ನುಂಟುಮಾಡುವುವು. ಸನಕಾದಿಗಳಿಗೆ ಆ ವೃತ್ತಿಗಳೇ ಇಲ್ಲದಿರುವುದರಿಂದ ಇನ್ನು ಶುಭಾಶುಭಗಳು ಅವರಿಗೆ ಉಂಟಾಗುವ ಪ್ರಶ್ನೆಯೇ ಇಲ್ಲ. ಇಲ್ಲಿ '**ಧ್ಯಾಯತೋ ವಿಷಯಾನ್ಪುಂಸಃ ಸಙ್ಗಸ್ತೇಷೂಪಜಾಯತೇ । ಸಙ್ಗಾತ್ಸಂಜಾಯತೇ ಕಾಮಃ ಕಾಮಾತೊ ೀಧೆ ೀSಭಿಜಾಯತೇ ॥ ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ಸ್ಮೃತಿವಿಭ್ರಮಃ । ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ಪ್ರಣಶ್ಯತಿ॥**' ಎಂಬ ಗೀತಾವಾಕ್ಯಗಳನ್ನು ಗಮನಿಸಬೇಕು. ವಿಷಯಧ್ಯಾನ ಮುಂತಾದುವುಗಳಿಂದ ಸುಖ-ದುಃಖಾದಿಗಳು ಉಂಟಾಗುವುದಕ್ಕೆ ಬುದ್ಧಿವೃತ್ತಿಗಳೇ ಕಾರಣ. (ಶ್ಲೋಕ ೧೪)

ಸುತ್ತಾನೆಯೋ–ಅಂತಹ ಜನ್ಮರಹಿತನಾದ ಭಗವಂತನಾದ ನಾರಾಯಣನೇ ಭಕ್ತರನ್ನು ಅನುಗ್ರಹಿಸುವುದಕ್ಕಾಗಿ ನಿಮ್ಮಂತಹ ಸಿದ್ಧರ ರೂಪದಲ್ಲಿ ಭೂಮಿಯಲ್ಲಿ ಸಂಚರಿಸುತ್ತಾನೆಂಬುದರಲ್ಲಿ ಸಂಶಯವೇ ಇಲ್ಲ."

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

"ಪೃಥುಮಹಾರಾಜನ ಯುಕ್ತಿಯುಕ್ತವೂ, ಗಂಭೀರವೂ, ಸಂಕ್ಷಿಪ್ತವೂ ಆದ ಆ ಮಧುರವಚನಗಳನ್ನು ಕೇಳಿ ಮುನಿಶ್ರೇಷ್ಠರಾದ ಸನತ್ಕುಮಾರರಿಗೆ ಅತೀವಸಂತೋಷವಾಯಿತು. ಪ್ರಸನ್ನರಾದ ಅವರು ನಸುನಗುತ್ತಾ ರಾಜನಿಗೆ ಹೀಗೆಂದರು :

ಸಾಧು ಪೃಷ್ಟಂ ಮಹಾರಾಜ ಸರ್ವಭೂತಹಿತಾತ್ಮನಾ ।
ಭವತಾ ವಿದುಷಾ ಚಾಪಿ ಸಾಧೂನಾಂ ಮತಿರೀದೃಶೀ ॥೧೮॥

"ಮಹಾರಾಜ! ಬಹಳ ಸಂತೋಷ. ನೀನು ಸ್ವತಃ ಇವೆಲ್ಲವನ್ನೂ ತಿಳಿದುಕೊಂಡಿದ್ದರೂ–ಸಮಸ್ತಪ್ರಾಣಿಗಳಿಗೂ ಒಳ್ಳೆಯದಾಗಲಿ–ಎಂಬ ದೃಷ್ಟಿಯಿಂದ ಇಂತಹ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದೀಯೆ. ಸಾಧುಗಳ ಮನಸ್ಸು ಹೀಗೆತಾನೇ ಇರುವುದು!

ಸಙ್ಗಮಃ ಖಲು ಸಾಧೂನಾಮುಭಯೇಷಾಂ ಚ ಸಮ್ಮತಃ ।
ಯತ್ಸಮ್ಭಾಷಣಸಮ್ಪ್ರಶ್ನಃ ಸರ್ವೇಷಾಂ ವಿತನೋತಿ ಶಮ್ ॥೧೯॥

ಸತ್ಪುರುಷರು ಪರಸ್ಪರವಾಗಿ ಸೇರಿ ಸಂಭಾಷಣೆಮಾಡುವುದರಿಂದ ಅದು–ಪ್ರಶ್ನೆ ಕೇಳುವವರು ಮತ್ತು ಉತ್ತರ ಹೇಳುವವರು–ಇಬ್ಬರಿಗೂ ಸಮ್ಮತವೇ. ಏಕೆಂದರೆ : ಅದರಿಂದ ಎಲ್ಲರಿಗೂ ಒಳ್ಳೆಯದಾಗುವುದು. ಎಲ್ಲರಿಗೂ ಒಳ್ಳೆಯದನ್ನುಂಟುಮಾಡುವುದೇ ಸತ್ಪುರುಷರ ಇಷ್ಟವಲ್ಲವೇ?

ರಾಜೇಂದ್ರನೇ! ನಿನಗೆ ಸ್ವಾಮಿ ಶ್ರೀಮಧುಸೂದನನ ಅಡಿದಾವರೆಗಳ ಗುಣಗಳನ್ನು ವರ್ಣಿಸುವುದರಲ್ಲಿಯೇ ಪೂರ್ಣವಾದ ಮತ್ತು ಸ್ಥಿರವಾದ ಪ್ರೀತಿಯಿದೆ. ಈ ಪ್ರೀತಿಯೆಂಬುದು ಸುಲಭವಾಗಿ ಸಾಧ್ಯವಾಗುವುದಲ್ಲ. ಆದರೂ ಅದು ಭಾಗ್ಯವಶದಿಂದ ದೊರಕಿದ್ದೇ ಆದರೆ–ಬೇರಾವ ಉಪಾಯದಿಂದಲೂ ಬಿಟ್ಟುಹೋಗದೇ ಇರುವ ಹೃದಯಸ್ಥವಾದ ವಾಸನೆಯೆಂಬ ಮಲ

ವನ್ನು ಸಂಪೂರ್ಣವಾಗಿ ಧ್ವಂಸಮಾಡಿಬಿಡುವುದು. ಜೀವರಿಗೆ ಕಲ್ಯಾಣದ ಮಾರ್ಗ ಯಾವುದು?–ಎಂದು ಕೇಳಿದೆಯಲ್ಲವೇ! ಅದನ್ನು ಹೇಳುತ್ತೇನೆ ; ಕೇಳು. ಶಾಸ್ತ್ರಗಳು ಜೀವರಿಗೆ ಕಲ್ಯಾಣವನ್ನುಂಟುಮಾಡುವ ಬಗೆಗೆ ಚೆನ್ನಾಗಿ ವಿಚಾರಮಾಡಿ ಆತ್ಮದಿಂದ ಭಿನ್ನವಾಗಿರುವ ದೇಹವೇ ಮುಂತಾದುವುಗಳಲ್ಲಿ ವೈರಾಗ್ಯವುಂಟಾಗುವುದೇ ಜೀವರಿಗೆ ಕಲ್ಯಾಣಸಾಧನವೆಂದು ನಿಶ್ಚಯ ಮಾಡಿದೆ. ಗುರುಗಳ ಮತ್ತು ಶಾಸ್ತ್ರಗಳ ವಚನಗಳಲ್ಲಿ ನಂಬಿಕೆಯನ್ನಿಡುವುದು, ಭಾಗವತಧರ್ಮಗಳನ್ನು ಆಚರಿಸುವುದು, ತತ್ತ್ವವನ್ನು ತಿಳಿದುಕೊಳ್ಳುವ ಬಯಕೆಯನ್ನೂ–ಜ್ಞಾನಯೋಗನಿಷ್ಠೆಯನ್ನೂ ಹೊಂದಿರುವುದು, ಯೋಗೇಶ್ವರನಾದ ಶ್ರೀಹರಿಯನ್ನು ಉಪಾಸನೆಮಾಡುವುದು, ಹಣ ಮತ್ತು ಇಂದ್ರಿಯಭೋಗಗಳಲ್ಲಿ ನಿರತರಾಗಿರುವವರ ಗೋಷ್ಠಿಯನ್ನು ಪ್ರೀತಿಸದೇ ಇರುವುದು, ಅವರಿಗೆ ಪ್ರಿಯವಾದ ಪದಾರ್ಥಗಳನ್ನು ಆಸಕ್ತಿಪೂರ್ವಕವಾಗಿ ಸಂಗ್ರಹಿಸದೇ ಇರುವುದು, ಭಗವದ್ಗುಣಾಮೃತವನ್ನು ಪಾನಮಾಡುವ ಕಾಲವನ್ನು ಬಿಟ್ಟು ಉಳಿದ ಎಲ್ಲ ಸಮಯಗಳಲ್ಲಿಯೂ ಆತ್ಮನಲ್ಲೇ ಸಂತೋಷಿಸುತ್ತಾ ಏಕಾಂತಸೇವನೆಮಾಡುವುದರಲ್ಲಿ ಪ್ರೀತಿಯನ್ನಿಟ್ಟುಕೊಳ್ಳುವುದು, ಯಾವುದೇ ಜೀವಕ್ಕೂ ಕಷ್ಟವನ್ನು ಕೊಡದೇ ಇರುವುದು, ನಿವೃತ್ತಿಧರ್ಮದಲ್ಲಿ ನಿಷ್ಠೆಯನ್ನು ಹೊಂದಿರುವುದು, ಆತ್ಮಹಿತವನ್ನೇ ಅನುಸಂಧಾನಮಾಡುತ್ತಿರುವುದು, ಶ್ರೀಹರಿಯ ಪವಿತ್ರಚರಿತ್ರೆಯೆಂಬ ಶ್ರೇಷ್ಠವಾದ ಅಮೃತವನ್ನು ಸವಿಯುತ್ತಿರುವುದು, ನಿಷ್ಕಾಮಭಾವದಿಂದ ಯಮ-ನಿಯಮಾದಿಗಳನ್ನು ಪಾಲಿಸುತ್ತಿರುವುದು, ಎಂದಿಗೂ ಯಾರನ್ನೂ ನಿಂದಿಸದೇ ಇರುವುದು, ಭಗವಂತನಲ್ಲಿ ಭರವಸೆಯನ್ನಿಟ್ಟು ಯೋಗ-ಕ್ಷೇಮಗಳ ಬಗೆಗೆ ಪ್ರಯತ್ನಿಸದಿರುವುದು, ಶೀತೋಷ್ಣಗಳೇ ಮುಂತಾದ ದ್ವಂದ್ವಗಳನ್ನು ಸಹಿಸಿಕೊಳ್ಳುವುದು, ಭಕ್ತಜನರ ಕಿವಿಗಳಿಗೆ ಸುಖವನ್ನುಂಟುಮಾಡುವ ಶ್ರೀಹರಿಯ ಗುಣಗಳನ್ನು ಬಾರಿ-ಬಾರಿಗೂ ವರ್ಣಿಸುತ್ತಿರುವುದು ಮತ್ತು ಭಕ್ತಿಭಾವವನ್ನು ವೃದ್ಧಿಪಡಿಸಿಕೊಳ್ಳುವುದು–ಇವುಗಳಿಂದ ಮನುಷ್ಯನಿಗೆ ಕಾರ್ಯ-ಕಾರಣ ರೂಪವಾದ ಇಡೀ ಜಗತ್ತಿನ ವಿಷಯದಲ್ಲಿ ವೈರಾಗ್ಯವುಂಟಾಗುವುದು ಮತ್ತು ಆತ್ಮಸ್ವರೂಪವೂ, ತ್ರಿಗುಣರಹಿತವೂ ಆಗಿರುವ ಪರಬ್ರಹ್ಮದಲ್ಲಿ ಆತನಿಗೆ ಪ್ರೀತಿಯುಂಟಾಗುವುದು–ಎಂಬುದಾಗಿಯೂ ಶಾಸ್ತ್ರಗಳು ಹೇಳುತ್ತವೆ. ಪರ

ಬ್ರಹ್ಮದಲ್ಲಿ ದೃಢವಾದ ಪ್ರೀತಿಯುಂಟಾದರೆ ಮನುಷ್ಯನು ಅದರ ಪ್ರಾಪ್ತಿಗಾಗಿ ಸದ್ಗುರುವನ್ನು ಶರಣುಹೊಂದುತ್ತಾನೆ ಮತ್ತು ಜ್ಞಾನ-ವೈರಾಗ್ಯಗಳ ಪ್ರಬಲವಾದ ವೇಗದಿಂದ ವಾಸನಾಶೂನ್ಯನಾಗಿ, ಅವಿದ್ಯೆಯೇ ಮುಂತಾದ ಐದು ಬಗೆಯ ಕ್ಲೇಶಗಳಿಂದ ಕೂಡಿದ* ಅಹಂಕಾರರೂಪವಾದ ತನ್ನ ಲಿಂಗ ಶರೀರವನ್ನು–ಅಗ್ನಿಯು ಕಟ್ಟಿಗೆಯಿಂದ ಪ್ರಕಟವಾಗಿ ಆ ಕಟ್ಟಿಗೆಯನ್ನೇ ಸುಟ್ಟು ಹಾಕುವಂತೆ–ಸುಟ್ಟುಬೂದಿಮಾಡಿಕೊಳ್ಳುವನು. ಹೀಗೆ ಲಿಂಗಶರೀರವು ನಷ್ಟವಾಗಲು ಆತನನ್ನು ಕರ್ತೃತ್ವವೇ ಮುಂತಾದ ಗುಣಗಳು ಬಿಟ್ಟು ತೊಲಗುವುವು. ಕನಸಿನಲ್ಲಿ ಬಗೆ-ಬಗೆಯ ಪದಾರ್ಥಗಳನ್ನು ಕಂಡರೂ ಎಚ್ಚರವಾದಾಗ ಅವುಗಳಾವುವೂ ಕಾಣಿಸುವುದಿಲ್ಲವಷ್ಟೇ! ಹಾಗೆಯೇ ಆತನಿಗೆ ಮನುಷ್ಯನ ಶರೀರದ ಹೊರಗೆ ಕಾಣಿಸುವ ಮಡಕೆಯೇ ಮುಂತಾದ ಪದಾರ್ಥಗಳೂ ಒಳಗಡೆಯಲ್ಲಿ ಅನುಭವಕ್ಕೆ ಬರುವ ಸುಖ-ದುಃಖ ಮುಂತಾದುವುಗಳೂ ಕಾಣಿಸದೇ ಹೋಗುವುವು. ಈ ಸ್ಥಿತಿಯು ಬರುವುದಕ್ಕೆ ಮೊದಲು ಈ ಪದಾರ್ಥಗಳೇ ಜೀವಾತ್ಮ-ಪರಮಾತ್ಮರ ಮಧ್ಯದಲ್ಲಿ ಅಡ್ಡ ಗೋಡೆಯಂತೆ ಇದ್ದುವು. (ಶ್ಲೋಕ 20-27)

ಅಂತಃಕರಣವೆಂಬ ಉಪಾಧಿಯು ಎಲ್ಲಿಯವರೆಗೆ ಇರುವುದೋ–ಅಲ್ಲಿಯವರೆಗೆ ಮಾತ್ರವೇ ಜೀವಾತ್ಮ, ಶಬ್ದ-ಸ್ಪರ್ಶಗಳೇ ಮುಂತಾದ ಇಂದ್ರಿಯ ವಿಷಯಗಳು ಮತ್ತು ಇವೆರಡಕ್ಕೂ ಸಂಬಂಧವನ್ನುಂಟುಮಾಡುವ ಅಹಂಕಾರದ ಅನುಭವವುಂಟಾಗುವುದು. ಅದರನಂತರ ಇರುವುದಿಲ್ಲ. ಹೊರಗಡೆಯ ಪ್ರಪಂಚದಲ್ಲೂ ಕೂಡ ನೀರು–ಕನ್ನಡಿಗಳೇ ಮುಂತಾದ ನಿಮಿತ್ತಗಳು ಇದ್ದಾಗ ಮಾತ್ರವೇ ಬಿಂಬ ಮತ್ತು ಪ್ರತಿಬಿಂಬಗಳ ಭೇದವು ಕಾಣಿಸುತ್ತವೆಯಲ್ಲವೇ? ವಿಷಯಚಿಂತನೆಯಲ್ಲಿಯೇ ಯಾರು ಆಸಕ್ತರಾಗಿರುವರೋ–ಅವರ ಇಂದ್ರಿಯಗಳು ವಿಷಯಗಳಲ್ಲಿ ಸಿಕ್ಕಿಹಾಕಿಕೊಂಡು ಮನಸ್ಸನ್ನೂ ತಮ್ಮ ಕಡೆಗೆ ಸೆಳೆದುಕೊಳ್ಳುವುವು. ಹೀಗಾದನಂತರ ಏನಾಗುವುದು? ಎಂದರೆ : ಯಾವುದಾದರೂ ಜಲಾಶಯತೀರದಲ್ಲಿ ಬೆಳೆದಿರುವ

---

* ಪಂಚಕ್ಲೇಶಗಳು :– ಅವಿದ್ಯೆ, ಅಸ್ಮಿತಾ, ರಾಗ, ದ್ವೇಷ ಮತ್ತು ಅಭಿನಿವೇಶಗಳು. 'ಅವಿದ್ಯಾಸ್ಮಿತಾರಾಗದ್ವೇಷಾಭಿನಿವೇಶಾಃ ಪಂಚ ಕ್ಲೇಶಾಃ' (ಯೋಗಸೂತ್ರ) (ಶ್ಲೋಕ ೨೬)

ದರ್ಭೆಯೇ ಮುಂತಾದ ಹುಲ್ಲುಗಳು ತಮ್ಮ ಬೇರುಗಳಿಂದ ಅದರ ನೀರನ್ನು ಸೆಳೆಯುವಂತೆ–ಆ ಇಂದ್ರಿಯಾಸಕ್ತವಾದ ಮನಸ್ಸು–ಬುದ್ಧಿಯ ವಿಚಾರಶಕ್ತಿ ಯನ್ನು ಕ್ರಮವಾಗಿ ಕಸಿದುಕೊಳ್ಳುವುದು. ವಿಚಾರಶಕ್ತಿಯು ನಷ್ಟವಾದರೆ ಹಿಂದು-ಮುಂದಿನ ಸಂಗತಿಗಳ ನೆನಪು ಹೊರಟುಹೋಗುವುದು. ಹೀಗೆ ಸ್ಮೃತಿಯು ನಾಶಹೊಂದಲಾಗಿ ಜ್ಞಾನವು ನಷ್ಟವಾಗುವುದು. ಈ ಜ್ಞಾನನಾಶ ವನ್ನೇ ಪಂಡಿತರು 'ತಾನು ತನ್ನನ್ನೇ ಕಸಿದುಕೊಳ್ಳುವಿಕೆ, ತಾನು ತನ್ನನ್ನು ಹತ್ಯೆ ಮಾಡಿಕೊಳ್ಳುವಿಕೆ' (ಆತ್ಮದಿಂದಲೇ ಆತ್ಮಾಪಹ್ನವ)–ಎಂಬುದಾಗಿ ಕರೆ ಯುವರು.* (ಶ್ಲೋಕ 28 -31)

ನಾತಃ ಪರತರೋ ಲೋಕೇ ಪುಂಸಃ ಸ್ವಾರ್ಥವ್ಯತಿಕ್ರಮಃ ।
ಯದಧ್ಯನ್ಯಸ್ಯ ಪ್ರೇಯಸ್ತ್ವಮಾತ್ಮನಃ ಸ್ವವ್ಯತಿಕ್ರಮಾತ್[1] ॥೩೨॥

ಇತರ ಪದಾರ್ಥಗಳಲ್ಲಿ ಯಾವುದಕ್ಕೋಸ್ಕರವೋ 'ಇದು ಪ್ರಿಯ' ಎಂಬ ಭಾವನೆಯುಂಟಾಗುತ್ತದೆಯೋ–ಆಗ ಆ ಆತ್ಮವು ತನಗೆ ತಾನೇ ನಷ್ಟ ವಾಗುವುದರಿಂದ ಸ್ವಾರ್ಥಹಾನಿಯಾದಂತಾಗುತ್ತದೆ. ಸ್ವಾರ್ಥಹಾನಿಗಿಂತಲೂ ದೊಡ್ಡ ಹಾನಿಯು ಜೀವಕ್ಕೆ ಯಾವುದಿದೆ?

ಅರ್ಥೇನ್ದ್ರಿಯಾರ್ಥಾಭಿಧ್ಯಾನಂ ಸರ್ವಾರ್ಥಾಪಹ್ನವೋ ನೃಣಾಮ್ ।
ಭ್ರಂಶಿತೋ ಜ್ಞಾನವಿಜ್ಞಾನಾದ್ಯೇನಾವಿಶತಿ ಮುಖ್ಯತಾಮ್ ॥೩೩॥

ಹಣವನ್ನೂ ಮತ್ತು ಇಂದ್ರಿಯಗಳ ವಿಷಯಗಳನ್ನೂ ಚಿಂತಿಸುತ್ತಿದ್ದರೆ ಅದರಿಂದ ಮನುಷ್ಯನ ಎಲ್ಲ ಪುರುಷಾರ್ಥಗಳೂ ನಾಶಹೊಂದುವುವು. ಏಕೆಂದರೆ : ಅವುಗಳ ಚಿಂತನೆಯಿಂದ ಆತನು ಜ್ಞಾನ-ವಿಜ್ಞಾನಗಳಿಂದ

---

* ಹೋಲಿಕೆ :– 'ಧ್ಯಾಯತೋ ವಿಷಯಾನ್ಪುಂಸಃ ಸಙ್ಗಸ್ತೇಷೂಪಜಾಯತೇ। ಸಙ್ಗಾತ್ಸಂಜಾಯತೇ ಕಾಮಃ ಕಾಮಾತ್ಕ್ರೋಧೋಽಭಿಜಾಯತೇ ॥ ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ಸ್ಮೃತಿವಿಭ್ರಮಃ। ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿ ನಾಶಾತ್ಪ್ರಣಶ್ಯತಿ॥' ಶ್ರೀಗೀತಾ. 'ಚೋರೇಣಾತ್ಮಾಪಹಾರಿಣಾ'
(ಸತತ್ಸುಜಾತೀಯ) (ಶ್ಲೋಕ ೩೧)

[1] 'ನ ವಾ ಅರೇ ಪತ್ಯುಃ ಕಾಮಾಯ ಪತಿಃ ಪತ್ಯುಃ ಪ್ರಿಯೋ ಭವತಿ ಕಿನ್ತ್ವಾತ್ಮನಃ ಕಾಮಾಯ' (ಬೃ.ಅ. ಉಪನಿಷತ್ತು) (ಶ್ಲೋಕ ೩೨)

ಭ್ರಷ್ಟನಾಗಿ ಮರ-ಬಳ್ಳಿಗಳೇ ಮುಂತಾದ ಸ್ಥಾವರಪ್ರಾಣಿಗಳ ಯೋನಿಗಳಲ್ಲಿ ಜನಿಸುವನು.

ನ ಕುರ್ಯಾತ್ಕರ್ಹಿಚಿತ್ಸಙ್ಗಂ ತಮಸ್ತೀವ್ರಂ ತಿತೀರಿಷುಃ ।
ಧರ್ಮಾರ್ಥಕಾಮಮೋಕ್ಷಾಣಾಂ ಯದತ್ಯನ್ತವಿಘಾತಕಮ್ ॥೩೪॥

ಆದುದರಿಂದ ಅಜ್ಞಾನದ ಅಂಧಕಾರವನ್ನು ದಾಟಿಹೋಗುವ ಇಚ್ಛೆಯುಳ್ಳ ಮನುಷ್ಯನು ಎಂದಿಗೂ ವಿಷಯಾಸಕ್ತನಾಗಬಾರದು. ಏಕೆಂದರೆ : ವಿಷಯಾಸಕ್ತಿಯು–ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಎಲ್ಲ ಪುರುಷಾರ್ಥಗಳ ಪ್ರಾಪ್ತಿಗೂ ಅಡಚಣೆಯಾಗುವುದು.

ತತ್ರಾಪಿ ಮೋಕ್ಷ ಏವಾರ್ಥ ಆತ್ಯನ್ತಿಕತಯೇಷ್ಯತೇ ।
ತ್ರೈವರ್ಗ್ಯೋऽರ್ಥೋ ಯತೋ ನಿತ್ಯಂ ಕೃತಾನ್ತಭಯಸಂಯುತಃ ॥

ಈ ನಾಲ್ಕು ಪುರುಷಾರ್ಥಗಳಲ್ಲಿಯೂ ಶ್ರೇಷ್ಠತಮವಾದುದು ಮೋಕ್ಷವೇ. ಏಕೆಂದರೆ : ಅದು ನಿತ್ಯವಾದುದು. ಉಳಿದ ಪುರುಷಾರ್ಥಗಳು ಯಾವಾಗಲೂ ಕಾಲದ ಭಯಕ್ಕೆ ಒಳಗಾಗಿಯೇ ಇರುವುವು.

ಪ್ರಕೃತಿಯಲ್ಲಿ ಗುಣಗಳ ಕ್ಷೋಭೆಯುಂಟಾದನಂತರ ಪ್ರಕಟವಾಗುವ ಯಾವ ಉತ್ತಮ ಮತ್ತು ಅಧಮಭಾವಗಳು ಅಂದರೆ ಪದಾರ್ಥಗಳು ಇವೆಯೋ–ಅವುಗಳಲ್ಲಿ ಸದಾ ಕ್ಷೇಮವಾಗಿಯೇ ಇರುವುದು ಯಾವುದೂ ಇಲ್ಲ. ಭಗವಂತನಾದ ಕಾಲನು ಆ ಎಲ್ಲ ಕುಶಲಗಳನ್ನೂ ತುಳಿದುಹಾಕುತ್ತಿರುತ್ತಾನೆ. (ಶ್ಲೋಕ 36)

ತತ್ತ್ವಂ ನರೇನ್ದ್ರ ಜಗತಾಮಥ ತಸ್ಥುಷಾಂ ಚ
ದೇಹೇನ್ದ್ರಿಯಾಸುಧಿಷಣಾತ್ಮಭಿರಾವೃತಾನಾಮ್ ।
ಯಃ ಕ್ಷೇತ್ರವಿತ್ತಪತಯಾ ಹೃದಿ ವಿಶ್ವಗಾವಿಃ
ಪ್ರತ್ಯಕ್ಚಕಾಸ್ತಿ ಭಗವಾಂಸ್ತಮವೇಹಿ ಸೋऽಸ್ಮಿ ॥೩೭॥

ಆದುದರಿಂದ, ಎಲೈ ರಾಜನೇ! ದೇಹ, ಇಂದ್ರಿಯ, ಪ್ರಾಣ, ಬುದ್ಧಿ ಮತ್ತು ಅಹಂಕಾರಗಳಿಂದ ಆವರಿಸಲ್ಪಟ್ಟಿರುವ ಎಲ್ಲ ಸ್ಥಾವರ-ಜಂಗಮ ಪ್ರಾಣಿಗಳ ಹೃದಯಗಳಲ್ಲಿಯೂ ಜೀವಕ್ಕೆ ನಿಯಾಮಕನಾಗಿ, ಅಂತರ್ಯಾಮಿಯಾಗಿ, ಆತ್ಮರೂಪದಲ್ಲಿ ಎಲ್ಲೆಲ್ಲಿಯೂ ಬೆಳಗುತ್ತಿರುವ ಯಾವ ಭಗವಂತ

ನುಂಟೋ ಆತನನ್ನು ನೀನು 'ಸೋಽಸ್ಮಿ' ನಾನೇ ಆ ಪರಮಾತ್ಮನು ಆಗಿದ್ದೇನೆ* ಎಂದು ತಿಳಿ.

ಯಸ್ಮಿನ್ನಿದಂ ಸದಸದಾತ್ಮತಯಾ ವಿಭಾತಿ
ಮಾಯಾವಿವೇಕವಿಧುತಿ ಸ್ರಜಿ ವಾಹಿಬುದ್ಧಿಃ ।
ತಂ ನಿತ್ಯಮುಕ್ತಪರಿಶುದ್ಧವಿಬುದ್ಧತತ್ತ್ವಂ
ಪ್ರತ್ಯೂಢಕರ್ಮಕಲಿಲಪ್ರಕೃತಿಂ ಪ್ರಪದ್ಯೆ ॥೩೮॥

ಅಜ್ಞಾನವಶದಿಂದ ಹೂಮಾಲೆಯಲ್ಲಿ ಸರ್ಪವೆಂಬ ಬುದ್ಧಿಯುಂಟಾದರೂ ಅದು ಹೂಮಾಲೆಯೆಂಬ ಜ್ಞಾನವುಂಟಾದ ಬಳಿಕ ಸರ್ಪಬುದ್ಧಿಯು ತೊಲಗಿಹೋಗುವಂತೆ–ವಿವೇಕವುಂಟಾದಾಗ ತೊಲಗಿಹೋಗುವಂತಹ ಈ ಮಾಯಾಮಯವಾದ ಪ್ರಪಂಚವು ಯಾವನಲ್ಲಿ ಕಾರ್ಯ-ಕಾರಣರೂಪದಲ್ಲಿ ಕಾಣಿಸುತ್ತಿದೆಯೋ, ಯಾವನು ಕರ್ಮಫಲಗಳಿಂದ ಕಲುಷಿತವಾದ ಪ್ರಕೃತಿಯ ಹೊರಗಿರುತ್ತಾನೆಯೋ–ಆ ನಿತ್ಯಮುಕ್ತನೂ, ನಿರ್ಮಲನೂ, ಜ್ಞಾನರೂಪನೂ ಆದ ಪರಮಾತ್ಮನನ್ನು ನಾನು ಶರಣುಹೊಂದುವೆನು.[1]

---

* ಚೇತನ-ಅಚೇತನರೂಪವಾದ ಸಮಸ್ತಭೂತಗಳಲ್ಲಿಯೂ ಅಂತರ್ಯಾಮಿಯಾಗಿ ಜೀವ ಮತ್ತು ಪ್ರಕೃತಿಗಳಿಗೆ ವಿಲಕ್ಷಣವಾಗಿ ವಿರಾಜಿಸುತ್ತಿರುವ ಯಾವ ಭಗವಂತನುಂಟೋ–ಆ ಭಗವದಾತ್ಮಕನೇ ನಾನಾಗಿದ್ದೇನೆ ಅಥವಾ ಅಹಂಕಾರ-ಮಮಕಾರಗಳಿಗೆ ನೆಲೆಯಾಗಿರುವ ದೇಹ-ಧನ ಮುಂತಾದುವುಗಳನ್ನು ರಕ್ಷಿಸುತ್ತಾ ದೇಹಾದಿವಿಲಕ್ಷಣನಾಗಿ ಜೀವರೂಪದಿಂದ ಹೃದಯದಲ್ಲಿ ಬೆಳಗುತ್ತಿರುವ ಭಗವದಾತ್ಮಕನಾದ ಚೇತನನು ನಾನೇ.

(ವೀರರಾಘವೀಯ)

ಶ್ರೀಭಗವಂತನ ಇಚ್ಛೆಯಿಂದ ಎಚ್ಚರವಾಗಿರುವಾಗ ಕಾಣಿಸುವ ಆನೆ-ಅಶ್ವಗಳೇ ಮುಂತಾದ ಪದಾರ್ಥಗಳ ವಾಸನೆಯಿಂದ ಕೂಡಿದ ಮನಸ್ಸು ಸ್ವಪ್ನಪ್ರಪಂಚವನ್ನು ಸೃಷ್ಟಿಸುವುದಿಲ್ಲವೇ? ಹಾಗೆಯೇ ಈ ದೃಶ್ಯಪ್ರಪಂಚವು ಭಗವಂತನ ಮನಸ್ಸಿನಿಂದಲೇ ಸೃಷ್ಟಿಸಲ್ಪಟ್ಟು ರಕ್ಷಿತವಾಗುತ್ತಿದೆ. ಆತನು ಸೃಷ್ಟಿವ್ಯಾಪಾರವನ್ನು ನಿಲ್ಲಿಸಿದಾಗ ಈ ಜಗತ್ತು ತನ್ನ ಕಾರಣಾವಸ್ಥೆಯನ್ನು ಸೇರುವ ಮೂಲಕ ಅಗೋಚರವಾಗುತ್ತದೆಯೇ ಹೊರತು ಶೂನ್ಯವಾಗುವುದಿಲ್ಲ. ಹೀಗೆ ಶ್ರೀಹರಿಯಿಂದಲೇ ಜಗತ್ತು ಸೃಷ್ಟಿಸಲ್ಪಟ್ಟಿರುವುದರಿಂದ ಶ್ರೀಹರಿಯ ಪ್ರಸಾದದಿಂದಲೇ ಅದನ್ನು ತ್ಯಜಿಸಲು ಸಾಧ್ಯವಾಗುವುದು.

(ವಿಜಯಧ್ವಜೀಯ) (ಶ್ಲೋಕ ೩೭)

---

1 ಮಾಯಾಶಕ್ತಿಯಿಂದ ಜೀವೇಶ್ವರವಿಜ್ಞಾನವನ್ನು ನಾಶಗೊಳಿಸುವ ದೇವ-ಮನುಷ್ಯಾದಿ

ಯತ್ಪಾದಪಙ್ಕಜಪಲಾಶವಿಲಾಸಭಕ್ತ್ಯಾ
ಕರ್ಮಾಶಯಂ ಗ್ರಥಿತಮುದ್ಗ್ರಥಯನ್ತಿ ಸನ್ತಃ ।
ತದ್ವನ್ನ ರಿಕ್ತಮತಯೋ ಯತಯೋऽಪಿ ರುದ್ಧ-
ಸ್ರೋತೋಗಣಾಸ್ತಮರಣಂ ಭಜ ವಾಸುದೇವಮ್ ॥೩೯॥

ಸಂತರಾದ ಮಹಾತ್ಮರು ಅವನ ಚರಣಕಮಲಗಳ ಬೆರಳುಗಳ ದಳಗಳಿಂದ ಹೊರಹೊಮ್ಮುವ ಕಾಂತಿಯನ್ನು ಸ್ಮರಿಸುತ್ತಾ–ಕರ್ಮಗಳಿಂದ ಕಟ್ಟಲ್ಪಟ್ಟಿರುವ ಅಹಂಕಾರವೆಂಬ ಹೃದಯಗ್ರಂಥಿಯನ್ನು ಛಿನ್ನ-ಭಿನ್ನ ಗೊಳಿಸುತ್ತಾರೆ. ಎಲ್ಲ ಇಂದ್ರಿಯಗಳನ್ನೂ ಪ್ರತ್ಯಾಹಾರದಿಂದ ಹಿಂದಕ್ಕೆ ಸೆಳೆದುಕೊಂಡು ವಿಷಯಶೂನ್ಯವನ್ನಾಗಿ ಮಾಡುವ ಸಂನ್ಯಾಸಿಗಳೂ ಕತ್ತರಿಸಿ ಹಾಕಲು ಅತಿಕಷ್ಟಸಾಧ್ಯವಾಗಿರುವ ಆ ಹೃದಯದ ಗಂಟನ್ನು ಅದರಿಂದ ಸುಲಭವಾಗಿ ಕತ್ತರಿಸಿಹಾಕುವರು. ಆದುದರಿಂದ ನೀನು ಸರ್ವಾಶ್ರಯ ನಾಗಿರುವ ಭಗವಂತನಾದ ಆ ವಾಸುದೇವನನ್ನು ಭಜಿಸು.

ಕೃಚ್ಛ್ರೋ ಮಹಾನಿಹ ಭವಾರ್ಣವಮಪ್ಲವೇಶಾಂ
ಷಡ್ವರ್ಗನಕ್ರಮಸುಖೇನ ತಿತೀರಷನ್ತಿ ।
ತತ್ತ್ವಂ ಹರೇರ್ಭಗವತೋ ಭಜನೀಯಮಙ್ಘ್ರಿಂ
ಕೃತ್ವೋಡುಪಂ ವ್ಯಸನಮುತ್ತರ ದುಸ್ತರಾರ್ಣಮ್ ॥೪೦॥

ರೂಪವಾದ ಈ ಜಗತ್ತು ಕಾರ್ಯ-ಕಾರಣರೂಪದಿಂದ ಕ್ಷೇತ್ರಜ್ಞರೂಪನಾದ ಶ್ರೀಭಗವಂತನಲ್ಲಿ ಪುಷ್ಪಮಾಲೆಯಲ್ಲಿ ಸರ್ಪಬುದ್ಧಿಯು ಹೇಗೋ ಹಾಗೆ ತೋರುವುದು. (ಜಗತ್ತು ಕಾರ್ಯ ; ಪರಮಾತ್ಮನು ಕಾರಣ.) ಆದುದರಿಂದ ಶ್ರೀಭಗವಂತನು ಜೀವಾಂತರ್ಯಾಮಿಯಾಗಿದ್ದರೂ ಜೀವಗತವಾದ ದೋಷಗಳಿಗೆ ಒಳಗಾಗುವುದಿಲ್ಲ. (ವೀರರಾಘವೀಯ)

ಜೀವೇಶ್ವರಭೇದಜ್ಞಾನವನ್ನು ಹೋಗಲಾಡಿಸುವ ಮಾಯಾಸಿದ್ಧಾಂತವು ಹಗ್ಗದಲ್ಲಿ ಉಂಟಾಗುವ ಹಾವಿನ ಬುದ್ಧಿಯಂತೆ ಭ್ರಾಂತಿಯೆಂದು ತಿಳಿಯಬೇಕು. ಇಲ್ಲಿ ಮಾಯಾ ಎಂದರೆ–ಜ್ಞಾನಪ್ರಕೃತಿ ಎಂದು. ಜ್ಞಾನಪ್ರಕೃತಿ ಎಂದರೆ : ಈಶ್ವರಜೀವ ಎಂದೂ ಅರ್ಥ. ಪ್ರಕೃತಿಯು ಶ್ರೀಹರಿಗೆ ಶರೀರವಾಗುವುದಿಲ್ಲ. 'ನ ಭ್ರಾನ್ತಿರ್ಜಗತೋ ದೃಷ್ಟಿರ್ನ ಭ್ರಾನ್ತಿರ್ಹರಿದರ್ಶನಮ್ । ಅನ್ಯೋನ್ಯಾತ್ಮತಯಾ ದೃಷ್ಟಿಃ ಭ್ರಾನ್ತಿರಿತ್ಯವಧಾರ್ಯತಾಮ್ ॥ ಮಾಯೇತಿ ಜ್ಞಾನನಾಮ ಸ್ಯಾತ್ ಮಾಯೇತಿಪ್ರಕೃತಿಸ್ತಥಾ । ಜ್ಞಾನಂ ಸ್ವರೂಪಂ ವಿಷ್ಣೋಸ್ತು ಪ್ರಕೃತಿರ್ನ ಹರೇಸ್ತನುಃ ॥ (ವಿಜಯಧ್ವಜೀಯ) (ಶ್ಲೋಕ ೩೮)

ಮನಸ್ಸು ಮತ್ತು ಇಂದ್ರಿಯಗಳೆಂಬ ಮೊಸಳೆಗಳಿಂದ ತುಂಬಿರುವ ಈ ಸಂಸಾರವೆಂಬ ಸಾಗರವನ್ನು ಕೇವಲ ಯೋಗವೇ ಮುಂತಾದ ದುಷ್ಕರವಾದ ಸಾಧನಗಳಿಂದ ದಾಟಲು ಕೆಲವರು ಬಯಸುತ್ತಾರೆ. ಅಂತಹವರು ಸಾಗರದ ದಡವನ್ನು ಮುಟ್ಟುವುದು ತುಂಬಾ ಕಠಿನವೇ ಸರಿ. ಏಕೆಂದರೆ : ಅವರಿಗೆ ಶ್ರೀಹರಿಯೆಂಬ ಅಂಬಿಗನ ಆಶ್ರಯವಿರುವುದಿಲ್ಲ. ಆದುದರಿಂದ ಎಲೈ ರಾಜನೇ! ನೀನು, ಆರಾಧಿಸಲು ಯೋಗ್ಯವಾದ ಶ್ರೀಭಗವಂತನ ತಿರುವಡಿಗಳನ್ನು ಹಡಗನ್ನಾಗಿ ಮಾಡಿಕೊಂಡು ಅನಾಯಾಸವಾಗಿ ಈ ದುಸ್ತರವಾದ ಸಮುದ್ರವನ್ನು ದಾಟು."

ಮೈತ್ರೇಯರು ಹೇಳುತ್ತಾರೆ :

ವಿದುರನೇ! ಕೇಳು. ಹೀಗೆ ಆತ್ಮಜ್ಞಾನಿಗಳಿಗೆ ಶಿಖಾಮಣಿಗಳಾಗಿರುವ ಬ್ರಹ್ಮಪುತ್ರರಾದ ಸನತ್ಕುಮಾರಮಹರ್ಷಿಗಳಿಂದ ಆತ್ಮತತ್ತ್ವದ ಉಪದೇಶವನ್ನು ಪಡೆದ ಪೃಥುಮಹಾರಾಜನು ಅವರನ್ನು ಪುಷ್ಕಳವಾಗಿ ಸ್ತುತಿಸುತ್ತಾ ಹೀಗೆಂದನು :

ಕೃತೋ ಮೇಽನುಗ್ರಹಃ ಪೂರ್ವಂ ಹರಿಣಾರ್ತಾನುಕಮ್ಪಿನಾ ।
ತಮಾಪಾದಯಿತುಂ ಬ್ರಹ್ಮನ್ಭಗವನ್ಯೂಯಮಾಗತಾಃ ॥೪೨॥

"ದೀನದಯಾಸಿಂಧುವಾದ ಶ್ರೀಹರಿಯು ಮೊದಲು ನನ್ನ ಮೇಲೆ ಅನುಗ್ರಹವನ್ನು ಬೀರಲಾಗಿ ಅದನ್ನೇ ಪೂರ್ಣಗೊಳಿಸುವುದಕ್ಕೋಸ್ಕರ ನೀವು ಇಲ್ಲಿಗೆ ದಯಮಾಡಿಸಿರುವಿರಿ.

ನಿಷ್ಪಾದಿತಶ್ಚ ಕಾರ್ತ್ಸ್ನ್ಯೇನ ಭಗವದ್ಭಿರ್ಘೃಣಾಲುಭಿಃ ।
ಸಾಧೂಚ್ಛಿಷ್ಟಂ ಹಿ ಮೇ ಸರ್ವಮಾತ್ಮನಾ ಸಹ ಕಿಂ ದದೇ ॥೪೩॥

ನೀವು ಅತ್ಯಂತಕರುಣಾಳುಗಳು. ಇಲ್ಲಿಗೆ ಯಾವ ಉದ್ದೇಶದಿಂದ ದಯಮಾಡಿಸಿದ್ದಿರೋ–ಅದನ್ನು ಬಹಳ ಚೆನ್ನಾಗಿ ಸಂಪನ್ನಗೊಳಿಸಿರುವಿರಿ. ಇದರ ಬದಲಿಗೆ ಈಗ ನಾನು ನಿಮಗೆ ಏನನ್ನು ಸಮರ್ಪಿಸಲಿ? ನನ್ನ ಬಳಿ ನನ್ನ ದೇಹ ಮತ್ತು ಅದರೊಡನೆ ಏನೇನಿವೆಯೋ–ಅವೆಲ್ಲವೂ ಮಹಾಪುರುಷರ ಪ್ರಸಾದವೇ ಆಗಿದೆ.

ಪ್ರಾಣಾ ದಾರಾಃ ಸುತಾ ಬ್ರಹ್ಮನ್ಗೃಹಾಶ್ಚ ಸಪರಿಚ್ಛದಾಃ ।
ರಾಜ್ಯಂ ಬಲಂ ಮಹೀ ಕೋಶ ಇತಿ ಸರ್ವಂ ನಿವೇದಿತಮ್ ॥೪೪॥

ಬ್ರಾಹ್ಮಣೋತ್ತಮರೇ! ನನ್ನ ಪ್ರಾಣ, ಹೆಂಡತಿ, ಮಕ್ಕಳು ಮತ್ತು ಎಲ್ಲ ಬಗೆಯ ಸಾಮಗ್ರಿಗಳಿಂದ ಕೂಡಿದ ಅರಮನೆ, ರಾಜ್ಯ, ಸೇನೆ, ಪೃಥಿವೀ ಮತ್ತು ಭಂಡಾರ–ಇವೆಲ್ಲವೂ ನಿಮಗೇ ಸೇರಿದುವುಗಳು. ಆದುದರಿಂದ ಇವೆಲ್ಲವನ್ನೂ ನಿಮ್ಮ ಪೊನ್ನಡಿಗಳಲ್ಲೇ ಸಮರ್ಪಿಸುತ್ತಿದ್ದೇನೆ.

ಸೈನಾಪತ್ಯಂ ಚ ರಾಜ್ಯಂ ಚ ದಣ್ಡನೇತೃತ್ವಮೇವ ಚ ।
ಸರ್ವಲೋಕಾಧಿಪತ್ಯಂ ಚ ವೇದಶಾಸ್ತ್ರವಿದರ್ಹತಿ ॥೪೫॥

ಏಕೆಂದರೆ : ವೇದ-ಶಾಸ್ತ್ರಗಳನ್ನರಿತ ಬ್ರಾಹ್ಮಣೋತ್ತಮರು ನೀವು. ವೇದ-ಶಾಸ್ತ್ರಗಳನ್ನರಿತ ಜ್ಞಾನಿಯಾದ ಬ್ರಾಹ್ಮಣೋತ್ತಮನು ಸೇನಾಪತಿಯ ಪಟ್ಟ, ರಾಜನ ಪಟ್ಟ, ದಂಡನೆಯನ್ನು ವಿಧಿಸುವ ಅಧಿಕಾರ ಮತ್ತು ಎಲ್ಲ ಲೋಕಗಳ ಅಧಿಪತ್ಯವನ್ನು ಪಡೆದು ನಿರ್ವಹಿಸಲು ಯೋಗ್ಯನೂ–ಸಮರ್ಥನೂ ಆಗಿರುತ್ತಾನೆ.

ಸ್ವಮೇವ ಬ್ರಾಹ್ಮಣೋ ಭುಙ್ಕ್ತೇ ಸ್ವಂ ವಸ್ತೇ ಸ್ವಂ ದದಾತಿ ಚ ।
ತಸ್ಯೈವಾನುಗ್ರಹೇಣಾನ್ನಂ ಭುಞ್ಜತೇ ಕ್ಷತ್ರಿಯಾದಯಃ ॥೪೬॥

ಜ್ಞಾನಿಯಾದ ಬ್ರಾಹ್ಮಣನು ಉಣ್ಣುವುದು, ಉಡುವುದು ಮತ್ತು ದಾನ ಮಾಡುವುದು ತನ್ನ ಪದಾರ್ಥಗಳನ್ನೇ ಏಕೆಂದರೆ : ಎಲ್ಲವೂ ವಾಸ್ತವವಾಗಿ ಆತನ ಸ್ವತ್ತು-ಸಂಪತ್ತೇ ಆಗಿರುತ್ತದೆ. ಕ್ಷತ್ರಿಯರೇ ಮುಂತಾದ ಇತರರಾದರೋ ಬ್ರಾಹ್ಮಣನ ಕೃಪೆಯಿಂದಲೇ ತಿನ್ನಲು ಅನ್ನವನ್ನು ಪಡೆಯುತ್ತಾರೆ.*

---

* ಎಲ್ಲ ಆಹಾರ, ಉಡಿಗೆ-ತೊಡಿಗೆ, ಸಿರಿ-ಸಂಪತ್ತು, ಅಧಿಕಾರಗಳು–ಎಲ್ಲಕ್ಕೂ ಮೂಲವಾಗಿ, ಎಲ್ಲಕ್ಕೂ ನಿಯಾಮಕನಾಗಿರುವ ಪರಬ್ರಹ್ಮಪರಮಾತ್ಮನ ಸ್ವತ್ತುಗಳು. ಜ್ಞಾನಿಯಾದ ಬ್ರಾಹ್ಮಣನು ಅಂತಹ ಬ್ರಹ್ಮದಲ್ಲಿ ತಾದಾತ್ಮ್ಯಹೊಂದಿರುವುದರಿಂದ ಇವೆಲ್ಲವೂ ಆತನ ಸ್ವತ್ತು ಎಂದು ಹೇಳಬಹುದು. ಇದಲ್ಲದೇ ಇವೆಲ್ಲದರ ವಾಸ್ತವಿಕವಾದ ಸ್ವರೂಪ-ಸ್ವಭಾವಗಳನ್ನೂ, ಸದ್ವಿನಿಯೋಗವನ್ನೂ ಚೆನ್ನಾಗಿ ಅರಿತಿರುವುದರಿಂದ ಆತನೇ ಇವುಗಳನ್ನು ತನ್ನದೆಂದು ಧರಿಸಿ ವಿನಿಯೋಗವನ್ನು ಮಾಡಲು ಅರ್ಹನು. ಉಳಿದವರು ಈತನ ಪ್ರಸಾದವೆಂದು ಇವುಗಳನ್ನು ಸ್ವೀಕರಿಸಿ, ಈತನು ಮಾಡಿದ ಸಂವಿಧಾನದಂತೆ ಇವುಗಳನ್ನು ವಿನಿಯೋಗಿಸಬೇಕು. (ಶ್ಲೋಕ ೪೫-೪೬)

ಯೈರೀದೃಶೀ ಭಗವತೋ ಗತಿರಾತ್ಮವಾದೇ
ಏಕಾನ್ತತೋ ನಿಗಮಿಭಿಃ ಪ್ರತಿಪಾದಿತಾ ನಃ ।
ತುಷ್ಯನ್ತ್ವದಭ್ರಕರುಣಾಃ ಸ್ವಕೃತೇನ ನಿತ್ಯಂ
ಕೋ ನಾಮ ತತ್ಪ್ರತಿಕರೋತಿ ವಿನೋದಪಾತ್ರಮ್ ॥೪೭॥

ವೇದಪಾರಂಗತರಾದ ನೀವು ಆಧ್ಯಾತ್ಮತತ್ತ್ವವನ್ನು ವಿಚಾರಪೂರ್ವಕವಾಗಿ ತಿಳಿಸುತ್ತಾ 'ಶ್ರೀಭಗವಂತನಲ್ಲಿ ಏಕಾಂತಭಕ್ತಿಯನ್ನು ಇಟ್ಟುಕೊಳ್ಳುವುದೇ ಆತನನ್ನು ಪಡೆಯಲು ಪ್ರಧಾನವಾದ ಸಾಧನ'–ಎಂಬುದನ್ನು ನಮಗೆ ನಿಶ್ಚಿತರೂಪದಲ್ಲಿ ಮನವರಿಕೆಮಾಡಿಕೊಟ್ಟಿದ್ದೀರಿ. ನೀವು ಪರಮಕೃಪಾಳುಗಳು. ಈ ದೀನೋದ್ಧಾರಕಾರ್ಯವನ್ನು ಮಾಡಿದಷ್ಟರಿಂದಲೇ ನೀವು ಸಂತುಷ್ಟರಾಗಿರಿ. ಸಜ್ಜನಸತ್ತಮರೇ! ಈ ಉಪಕಾರಕ್ಕೆ ಬದಲಾಗಿ ನಿಮಗೆ ಯಾರಾದರೂ ಏನನ್ನು ತಾನೇ ಕೊಡಲು ಸಾಧ್ಯವಾದೀತು? ಹಾಗೆ ನಿಮ್ಮ ಉಪಕಾರಕ್ಕೆ ಪ್ರತ್ಯುಪಕಾರಮಾಡುವೆನೆಂದು ಪ್ರಯತ್ನಮಾಡಿದರೂ ಅದು ತನ್ನನ್ನೇ ನಗೆಗೆ ಈಡಾಗಿಸಿಕೊಂಡಂತೆ ಆಗುವುದು."

ಮೈತ್ರೇಯರು ಹೇಳುತ್ತಾರೆ :

"ಅನಂತರ ಆತ್ಮಯೋಗಸಾಮ್ರಾಜ್ಯಕ್ಕೆ ಅಧಿಪತಿಗಳಾದ, ಆತ್ಮಜ್ಞಾನಿಶ್ರೇಷ್ಠರಾದ, ಸನಕಾದಿಸಿದ್ಧರು ಆದಿರಾಜನಾದ ಪೃಥುಚಕ್ರವರ್ತಿಯಿಂದ ಪೂಜಿತರಾಗಿ ಆತನ ಶೀಲವನ್ನು ಕೊಂಡಾಡುತ್ತಾ ಎಲ್ಲ ಜನರ ಎದುರಿಗೆ ಅವರು ನೋಡುತ್ತಿರುವಂತೆಯೇ ಆಕಾಶಮಾರ್ಗದಿಂದ ಹೊರಟುಹೋದರು. ಮಹಾತ್ಮರಲ್ಲಿ ಅಗ್ರಗಣ್ಯನಾದ ಪೃಥುವು ಅವರಿಂದ ಆತ್ಮೋಪದೇಶವನ್ನು ಪಡೆದು, ಚಿತ್ತವು ಆತ್ಮದಲ್ಲಿ ಏಕಾಗ್ರತೆಯನ್ನು ಹೊಂದಿ ಆತ್ಮದಲ್ಲಿ ನೆಲೆಯನ್ನು ಪಡೆದಿದ್ದರಿಂದ ತಾನು ಕೃತಕೃತ್ಯನಾದೆನೆಂದು ಭಾವಿಸಿದನು. ಪೃಥುವು ಸಮಯ, ಸ್ಥಾನ, ಶಕ್ತಿ, ನ್ಯಾಯ ಮತ್ತು ಹಣಗಳಿಗೆ ಅನುಗುಣವಾಗಿ ಬ್ರಹ್ಮಾರ್ಪಣಬುದ್ಧಿಯಿಂದ ಎಲ್ಲ ಕರ್ಮಗಳನ್ನೂ ಆಚರಿಸತೊಡಗಿದನು. ಹೀಗೆ ಏಕಾಗ್ರವಾದ ಚಿತ್ತದಿಂದ ಸಮಸ್ತಕಾರ್ಯಗಳ ಫಲಗಳನ್ನೂ ಪರಮಾತ್ಮನಲ್ಲಿ ಸಮರ್ಪಣೆಮಾಡಿ ಆತ್ಮವನ್ನು ಕರ್ಮಗಳ ಸಾಕ್ಷಿಯೆಂದೂ ಮತ್ತು ಪ್ರಕೃತಿಯನ್ನೂ ಮೀರಿದುದೆಂದೂ ಕಂಡುಕೊಳ್ಳುತ್ತಾ ಸಂಪೂರ್ಣವಾಗಿ

ನಿರ್ಲಿಪ್ತನಾಗಿದ್ದನು. ಸೂರ್ಯದೇವನು ಎಲ್ಲೆಡೆಗಳಲ್ಲಿಯೂ ಪ್ರಕಾಶವನ್ನು ಚೆಲ್ಲಿದರೂ ಕೂಡ ವಸ್ತುಗಳ ಗುಣ-ದೋಷಗಳನ್ನು ಅಂಟಿಸಿಕೊಳ್ಳ ದಿರುವಂತೆ–ಪೃಥುಸಾರ್ವಭೌಮನು ಸಾಮ್ರಾಜ್ಯಲಕ್ಷ್ಮಿಯಿಂದ ಸಂಪನ್ನನಾಗಿ ಗೃಹಸ್ಥಾಶ್ರಮದಲ್ಲಿಯೇ ಇದ್ದರೂ ಕೂಡ ಅಹಂಕಾರರಹಿತನಾಗಿದ್ದುದರಿಂದ ಇಂದ್ರಿಯಗಳಲ್ಲಿ ಅನಾಸಕ್ತನಾಗಿದ್ದನು. (ಶ್ಲೋಕ 48-52)

ಪೃಥುಮಹಾರಾಜನು ಹೀಗೆ ಆತ್ಮನಿಷ್ಠನಾಗಿ ಎಲ್ಲ ಕರ್ತವ್ಯ-ಕರ್ಮ ಗಳನ್ನೂ ಯಥೋಚಿತವಾಗಿ ಮಾಡುತ್ತಾ ತನ್ನ ಮಡದಿಯಾದ ಅರ್ಚಿಯಲ್ಲಿ ತನಗೆ ಅನುರೂಪರಾಗಿದ್ದ ವಿಜಿತಾಶ್ವ, ಧೂಮ್ರಕೇಶ, ಹರ್ಯಕ್ಷ, ದ್ರವಿಣ ಮತ್ತು ವೃಕ–ಎಂಬ ಐವರು ಪುತ್ರರನ್ನು ಪಡೆದನು. ಆತನು ಶ್ರೀಭಗವಂತನ ಅಂಶಸಂಭೂತನೇ ಆಗಿದ್ದುದರಿಂದ ಕಾಲ-ಕಾಲಗಳಲ್ಲಿ ಆವಶ್ಯಕತೆಗೆ ಅನು ಗುಣವಾಗಿ ಪ್ರಾಣಿಗಳನ್ನು ರಕ್ಷಿಸುವುದಕ್ಕಾಗಿ ತಾನೊಬ್ಬನೇ ಎಲ್ಲ ಲೋಕಪಾಲ ಕರ ಗುಣಗಳನ್ನೂ ಧರಿಸುತ್ತಿದ್ದನು. ತನ್ನ ಉದಾರವಾದ ಮನಸ್ಸು, ಪ್ರಿಯವೂ–ಹಿತಕರವೂ ಆದ ಸವಿಮಾತು, ಮನೋಹರವಾದ ಮೂರ್ತಿ ಮತ್ತು ಸೌಮ್ಯವಾದ ಗುಣಗಳಿಂದ ಪ್ರಜಾರಂಜನೆಯನ್ನು ಮಾಡುತ್ತಿದ್ದುದ ರಿಂದ ಮತ್ತೊಬ್ಬ ಸೋಮರಾಜನಂತೆ 'ರಾಜಾ' ಎಂಬ ಅನ್ವರ್ಥವಾದ ಹೆಸರಿ ನಿಂದ ಶೋಭಿಸಿದನು. ಸೂರ್ಯದೇವನು ಬೇಸಗೆಯ ಕಾಲದಲ್ಲಿ ಪೃಥಿವಿ ಯಿಂದ ನೀರನ್ನು ಸೆಳೆದುಕೊಂಡು ಮಳೆಗಾಲದಲ್ಲಿ ಅದನ್ನು ಮಳೆಯ ರೂಪ ದಲ್ಲಿ ಪುಷ್ಕಳವಾಗಿ ಸುರಿಸುತ್ತಾನೆ ಮತ್ತು ತನ್ನ ಕಿರಣಗಳಿಂದ ಎಲ್ಲರಿಗೂ ಬಿಸಿಲನ್ನುಂಟುಮಾಡುತ್ತಾನೆ. ಹಾಗೆಯೇ ಪೃಥುಚಕ್ರವರ್ತಿಯು ಸುಭಿಕ್ಷ ಕಾಲದಲ್ಲಿ ಪ್ರಜೆಗಳಿಂದ ಕಪ್ಪ-ಕಾಣಿಕೆಗಳನ್ನು ತೆಗೆದುಕೊಂಡು ವೃದ್ಧಿಪಡಿಸಿ ದುರ್ಭಿಕ್ಷವೇ ಮುಂತಾದ ಕಷ್ಟಕಾಲಗಳಲ್ಲಿ ಅದನ್ನು ಕೊಡುಗೈಯಿಂದ ಪ್ರಜೆಗಳ ಹಿತಕ್ಕಾಗಿ ವಿನಿಯೋಗಿಸಿ ತನ್ನ ಪರಾಕ್ರಮದ ಪ್ರಭಾವವನ್ನು ಎಲ್ಲರ ಮೇಲೂ ಬೀರುತ್ತಿದ್ದನು. ಆತನು ತೇಜಸ್ಸಿನಲ್ಲಿ ಅಗ್ನಿಯಂತೆ ತಿರಸ್ಕರಿಸಲು ಅಸಾಧ್ಯನಾಗಿದ್ದನು. ಇಂದ್ರನಂತೆ ಜಯಿಸಲು ಅಶಕ್ಯ ನಾಗಿದ್ದನು. ಭೂದೇವಿಯಂತೆ ಕ್ಷಮಾಶೀಲನಾಗಿದ್ದನು ಮತ್ತು ಸ್ವರ್ಗಲೋಕ ದಂತೆ ಪ್ರಜೆಗಳ ಎಲ್ಲ ಕಾಮನೆಗಳನ್ನೂ ಪೂರ್ಣಗೊಳಿಸುತ್ತಿದ್ದನು. ಕಾಲ-ಕಾಲಗಳಲ್ಲಿ ಪ್ರಜೆಗಳನ್ನು ತೃಪ್ತಿಪಡಿಸುವುದಕ್ಕೋಸ್ಕರ ಮೇಘದಂತೆ ಧಾರಾಳ

ವಾಗಿ ಅವರೆಲ್ಲರ ಅಭೀಷ್ಟಪದಾರ್ಥಗಳ ಮಳೆಯನ್ನು ಕರೆಯುತ್ತಿದ್ದನು. ಮುಕ್ತಹಸ್ತದಿಂದ ಅವರ ಎಲ್ಲ ಇಷ್ಟಾರ್ಥಗಳನ್ನೂ ಈಡೇರಿಸಿ ಅವರಿಗೆ ಸಂತೃಪ್ತಿಯನ್ನುಂಟುಮಾಡುತ್ತಿದ್ದನು. ಸಮುದ್ರರಾಜನಂತೆ ಗಂಭೀರನಾಗಿ ಮಹಾಮೇರುಪರ್ವತದಂತೆ ಧೃತಿಯನ್ನೂ ತೋರಿಸುತ್ತಿದ್ದನು. ದುಷ್ಟರನ್ನು ದಮನಮಾಡುವ ವಿಷಯದಲ್ಲಿ ಯಮಧರ್ಮರಾಜನನ್ನೂ, ಆಶ್ಚರ್ಯ ಪೂರ್ಣವಾದ ವಸ್ತುಗಳನ್ನು ಸಂಗ್ರಹಿಸುವ ವಿಷಯದಲ್ಲಿ ಹಿಮಾಲಯವನ್ನೂ, ಭಂಡಾರದ ಐಶ್ವರ್ಯಸಮೃದ್ಧಿಯಲ್ಲಿ ಕುಬೇರನನ್ನೂ, ಹಣವನ್ನು ಗುಟ್ಟಾಗಿ ಇರಿಸುವ ವಿಷಯದಲ್ಲಿ ವರುಣನನ್ನೂ ಸರಿಹೋಲುತ್ತಿದ್ದನು. ಶರೀರದ ಬಲದಲ್ಲಿ, ಎಲ್ಲೆಡೆಗಳಲ್ಲಿಯೂ ಸಂಚರಿಸುವ ವಿಷಯದಲ್ಲಿ ಮತ್ತು ಬಲ-ಪರಾಕ್ರಮಗಳಲ್ಲಿ ವಾಯುದೇವರಿಗೂ, ಸಹಿಸಲು ಅಸಾಧ್ಯವಾದ ತೇಜಸ್ಸನ್ನು ಪಡೆದಿರುವ ವಿಷಯದಲ್ಲಿ ಭಗವಂತನಾದ ಶಂಕರನಿಗೂ ಸಮಾನನಾಗಿದ್ದನು. ಸೌಂದರ್ಯದಲ್ಲಿ ಕಾಮದೇವನಿಗೂ, ಉತ್ಸಾಹದಲ್ಲಿ ಸಿಂಹಕ್ಕೂ, ವಾತ್ಸಲ್ಯದಲ್ಲಿ ಮನುಸಾರ್ವಭೌಮನಿಗೂ ಮತ್ತು ಪ್ರಭುತ್ವದಲ್ಲಿ ಬ್ರಹ್ಮದೇವರಿಗೂ ಸಾಟಿಯಾಗಿದ್ದನು. ಬ್ರಹ್ಮವಿಚಾರಮಾಡುವುದರಲ್ಲಿ ಬೃಹಸ್ಪತ್ಯಾಚಾರ್ಯರನ್ನೂ, ಇಂದ್ರಿಯಗಳ ಜಯದಲ್ಲಿ ಸಾಕ್ಷಾತ್ ಶ್ರೀಹರಿಯನ್ನೂ ಹೋಲುತ್ತಿದ್ದನು. ಗೋವುಗಳು, ಬ್ರಾಹ್ಮಣರು, ಗುರು-ಹಿರಿಯರು ಮತ್ತು ಭಗವದ್ಭಕ್ತರ ವಿಷಯದಲ್ಲಿ ಭಕ್ತಿ, ಲಜ್ಜೆ, ವಿನಯಶೀಲತೆ, ಶೀಲ ಮತ್ತು ಪರೋಪಕಾರಗಳೇ ಮುಂತಾದ ಗುಣಸಂಪತ್ತಿನಲ್ಲಿ ತನಗೆ ತಾನೇ ಸಮಾನನಾಗಿದ್ದನು. ಈ ವಿಷಯಗಳಲ್ಲಿ ಆತನಿಗೆ ಬೇರಾರೂ ಎಣೆಯಿರಲಿಲ್ಲ. ಮೂರು ಲೋಕಗಳಲ್ಲಿಯೂ, ಎಲ್ಲೆಡೆಗಳಲ್ಲಿಯೂ ಉಚ್ಚಸ್ವರದಲ್ಲಿ ಆತನ ಕೀರ್ತಿಯು ಹಾಡಲ್ಪಡುತ್ತಿತ್ತು. ಆದ್ದರಿಂದ ಆತನು ಸತ್ಪುರುಷರ ಹೃದಯಗಳಲ್ಲಿ ಶ್ರೀರಾಮನು ಹೇಗೋ ಹಾಗೆ–ಹೆಂಗಸರ ಕಿವಿದರೆಗಳಲ್ಲೂ ಪ್ರವೇಶಪಡೆದುಕೊಂಡಿದ್ದನು. (ಶ್ಲೋಕ 53-63)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಚತುರ್ಥಸ್ಕಂಧದ ೨೨ನೆಯ ಅಧ್ಯಾಯವು ಮುಗಿಯಿತು.

ಚತುರ್ಥಸ್ಕಂಧ ೨೩ನೆಯ ಅಧಾಯ

ಪೃಥುಮಹಾರಾಜನ ಮಹಾತಪಸ್ಸು ಮತ್ತು ಪರಮಪದಪ್ರಾಪ್ತಿ

ಮೈತ್ರೇಯರು ವಿದುರನಿಗೆ ಹೇಳುತ್ತಾರೆ :

ದೃಷ್ಟ್ವಾತ್ಮಾನಂ ಪ್ರವಯಸಮೇಕದಾ ವೈನ್ಯ ಆತ್ಮವಾನ್ ।
ಆತ್ಮನಾ ವರ್ಧಿತಾಶೇಷಸ್ವಾನುಸರ್ಗಃ ಪ್ರಜಾಪತಿಃ ॥೧॥

ಜಗತಸ್ತಸ್ಥುಷಶ್ಚಾಪಿ ವೃತ್ತಿದೋ ಧರ್ಮಭೃತ್ಸತಾಮ್ ।
ನಿಷ್ಪಾದಿತೇಶ್ವರಾದೇಶೋ ಯದರ್ಥಮಿಹ ಜಜ್ಞಿವಾನ್ ॥೨॥

ಆತ್ಮಜೇಷ್ವಾತ್ಮಜಾಂ ನ್ಯಸ್ಯ ವಿರಹಾದ್ರುದತೀಮಿವ ।
ಪ್ರಜಾಸು ವಿಮನಃಸ್ವೇಕಃ ಸದಾರೋಽಗಾತ್ತಪೋವನಮ್ ॥೩॥

ಪ್ರಜಾಪಾಲಕನಾದ ಪೃಥುವು ಹೀಗೆ ತನ್ನ ಪ್ರಜೆಗಳಿಗಾಗಿ ನಗರ-ಗ್ರಾಮಾದಿ ಸರ್ವವ್ಯವಸ್ಥೆಗಳನ್ನೂ ತಾನೇ ಮಾಡಿಕೊಟ್ಟು, ಸ್ಥಾವರ-ಜಂಗಮ ರೂಪವಾದ ಎಲ್ಲ ಪ್ರಾಣಿಗಳಿಗೂ ಜೀವನವೃತ್ತಿಗಳನ್ನೂ ಕಲ್ಪಿಸಿ ಸತ್ಪುರುಷರ ಧರ್ಮವನ್ನು ಪಾಲಿಸಿದನು. ಆ ಆತ್ಮವಂತನಾದ ಭೂಪತಿಯು ತಾನು ಯಾವ ಕಾರಣಕ್ಕಾಗಿ ಜನಿಸಿದ್ದನೋ–ಆ ಭಗವದಾಜ್ಞೆಯು ನೆರವೇರಿ ಯಾಯಿತು–ಎಂಬುದನ್ನು ಮನಗಂಡನು. 'ತನಗೆ ವೃದ್ಧಾಪ್ಯವು ಬಂದಿದೆ ; ಇನ್ನು ತನಗೆ ರಾಜ್ಯದ ಕರ್ತವ್ಯವಿಲ್ಲ'–ಎಂಬುದನ್ನೂ ಗಮನಿಸಿ ಆತನು ತನ್ನ ಪುತ್ರಿಯ ಸ್ಥಾನದಲ್ಲಿದ್ದ ಪೃಥಿವಿಯನ್ನು ಪುತ್ರರಿಗೆ ಒಪ್ಪಿಸಿ ಪತ್ನೀಸಹಿತನಾಗಿ ತಾನೊಬ್ಬನೇ ತಪೋವನಕ್ಕೆ ತೆರಳಿದನು. ಆಗ ಆತನ ಅಗಲಿಕೆಯನ್ನು ತಾಳಲಾರದೇ ಪೃಥ್ವೀದೇವಿಯು ಗೋಳಾಡುವಂತೆ ಕಾಣುತ್ತಿದ್ದಳು. ಪ್ರಜೆಗಳು ದುಃಖದಿಂದ ಮರುಗಿದರು. ಆದರೆ ಅದಾವುದಕ್ಕೂ ಮನ ಸೋಲದೇ ಆತನು ಮೋಕ್ಷಸಾಧನೆಗಾಗಿ ತಪೋವನಕ್ಕೆ ಹೊರಟೇಬಿಟ್ಟನು.

ಹಿಂದೆ ಗೃಹಸ್ಥಾಶ್ರಮದಲ್ಲಿದ್ದಾಗ ಹೇಗೆ ವ್ರತನಿಷ್ಠನಾಗಿ ಭೂಮಿ ಯನ್ನು ಜಯಿಸುವುದರಲ್ಲಿ ತೊಡಗಿದ್ದನೋ–ಹಾಗೆಯೇ ಈಗಲೂ ವಾನ

ಪ್ರಸ್ಥಾಶ್ರಮದ ಧರ್ಮಾಚರಣೆಯ ವ್ರತದಲ್ಲಿಯೂ ನಿಷ್ಠನಾಗಿ ಕಠೋರವಾದ ತಪಸ್ಸನ್ನಾಚರಿಸತೊಡಗಿದನು. ಆ ತಪಸ್ಸಿನಲ್ಲಿ ಆತನು ಕೆಲವು ದಿನಗಳ ಕಾಲ ಗೆಡ್ಡೆ-ಗೆಣಸು, ಹಣ್ಣು-ಹಂಪಲುಗಳನ್ನು ಮಾತ್ರವೇ ತಿನ್ನುತ್ತಿದ್ದನು. ಕೆಲವು ದಿನ ಒಣಗಿದ ಎಲೆಗಳನ್ನೇ ಭಕ್ಷಿಸುತ್ತಾ ತಪೋಮಗ್ನನಾಗಿದ್ದನು. ಇನ್ನು ಕೆಲವು ಕಾಲ ನೀರನ್ನು ಕುಡಿಯುತ್ತಲೂ, ಕೆಲವು ದಿವಸಗಳ ಕಾಲ ಗಾಳಿಯನ್ನೇ ಸೇವಿಸುತ್ತಲೂ ತಪಸ್ಸನ್ನಾಚರಿಸಿದನು. ಮುನಿವೃತ್ತಿಯಲ್ಲಿದ್ದ ಆ ವೀರವರನು ಬೇಸಗೆಯ ಕಾಲದಲ್ಲಿ ನಾಲ್ಕು ದಿಕ್ಕುಗಳಲ್ಲಿ ಅಗ್ನಿಗಳು ಮತ್ತು ಮೇಲುಗಡೆ ಯಲ್ಲಿ ಸೂರ್ಯ ಎಂಬ ಐದು ಅಗ್ನಿಗಳನ್ನು ಸೇವಿಸುತ್ತಿದ್ದನು. ಮಳೆಗಾಲದಲ್ಲಿ ಬಯಲಿನಲ್ಲಿದ್ದು ತನ್ನ ಮೇಲೆ ಸುರಿಯುತ್ತಿದ್ದ ಜಲಧಾರೆಯನ್ನು ಸಹಿಸಿಕೊಳ್ಳುತ್ತಿದ್ದನು. ಚಳಿಗಾಲದಲ್ಲಿ ಕತ್ತಿನವರೆಗೆ ಬರುತ್ತಿದ್ದ ನೀರಿನಲ್ಲಿ ನಿಂತು ತಪಸ್ಸು ಮಾಡುತ್ತಿದ್ದನು. ಪ್ರತಿದಿನವೂ ನೆಲದಲ್ಲಿ ಮಣ್ಣಿನ ವೇದಿಕೆಯ ಮೇಲೆಯೇ ಮಲಗುತ್ತಿದ್ದನು. ಚಳಿ-ಸೆಕೆಗಳೇ ಮುಂತಾದ ದ್ವಂದ್ವಗಳನ್ನು ಸಹಿಸುತ್ತಾ ಮಾತು-ಮನಸ್ಸುಗಳನ್ನು ಹತೋಟಿಯಲ್ಲಿರಿಸಿಕೊಂಡು ಬ್ರಹ್ಮಚರ್ಯವನ್ನು ಪಾಲಿಸುತ್ತಾ ಪ್ರಾಣ ವಾಯುಗಳನ್ನು ವಶಪಡಿಸಿಕೊಂಡನು. ಶ್ರೀಕೃಷ್ಣನನ್ನು ಆರಾಧಿಸುವುದಕ್ಕಾಗಿ ಆತನು ಪರಮಶ್ರೇಷ್ಠವಾದ ತೀವ್ರವಾದ ತಪಸ್ಸನ್ನಾಚರಿಸಿದನು. ಹೀಗೆ ಕ್ರಮವಾಗಿ ತಪಸ್ಸು ಬೆಳವಣಿಗೆಹೊಂದಿ ಸಿದ್ಧಿಸುತ್ತಿರಲಾಗಿ–ಆತನ ಚಿತ್ತವು ಸಂಪೂರ್ಣವಾಗಿ ಶುದ್ಧಿಹೊಂದಿತು. ಪ್ರಾಣಾಯಾಮಗಳಿಂದ ಮನಸ್ಸು ಮತ್ತು ಇಂದ್ರಿಯಗಳು ನಿರುದ್ಧವಾಗಿ ಕರ್ಮವಾಸನೆಗಳಿಂದುಂಟಾದ ಕಟ್ಟುಗಳೂ ಬಿಟ್ಟುಹೋದುವು. ಆಗ ಭಗವಂತನಾದ ಸನತ್ಕುಮಾರ ಯೋಗೀಂದ್ರನು ಉಪದೇಶಿಸಿದ್ದ ಶ್ರೇಷ್ಠತಮವಾದ ಆಧ್ಯಾತ್ಮಶಿಕ್ಷಣ ದಂತೆಯೇ ಪೃಥುವು ಪುರುಷೋತ್ತಮವಾದ ಶ್ರೀಹರಿಯನ್ನು ಆರಾಧಿಸ ತೊಡಗಿದನು. ಹೀಗೆ ಭಗವತ್ಪರಾಯಣನಾಗಿ ಶ್ರದ್ಧೆಯಿಂದ ಸದಾಚಾರವನ್ನು ಪಾಲಿಸುತ್ತಾ ನಿರಂತರವಾಗಿ ಸಾಧನೆಮಾಡಿದ್ದರಿಂದ ಆತನಿಗೆ ಪರಬ್ರಹ್ಮ ಪರಮಾತ್ಮನಲ್ಲಿ ಅನನ್ಯವಾದ ಭಕ್ತಿಯೋಗವು ಬೆಳೆದು ಬೇರೂರಿತು. (ಶ್ಲೋಕ 4 - 10)

ಈ ರೀತಿಯಲ್ಲಿ ಆಚರಿಸಿದ ಭಗವಂತನ ಉಪಾಸನೆಯಿಂದ ಆತನ

ಅಂತಃಕರಣವು ಶುದ್ಧಸತ್ತ್ವಮಯವಾಯಿತು. ನಿರಂತರವಾದ ಭಗವದ್ಧ್ಯಾನ ದಿಂದುಂಟಾದ ಆ ಅನನ್ಯಭಕ್ತಿಯಿಂದ ಆತನಿಗೆ ವೈರಾಗ್ಯಸಹಿತವಾದ ಜ್ಞಾನವು ಸಿದ್ಧಿಸಿತು. ಆ ತೀವ್ರವಾದ ಜ್ಞಾನದಿಂದ ಸಂಶಯಗಳಿಗೆ ಆಸರೆಯಾಗಿರುವ ಜೀವನ ಮೇಲಿನ ಅಹಂಕಾರವೇ ಮುಂತಾದ ಆವರಣವು ಧ್ವಂಸವಾಯಿತು. ಅನಂತರ ದೇಹಾತ್ಮಬುದ್ಧಿಯು ತೊಲಗಿ ಪರಮಾತ್ಮನಾದ ಶ್ರೀಕೃಷ್ಣನ ಅನುಭವವು ಸಿದ್ಧಿಸಿದ್ದರಿಂದ ಎಲ್ಲ ಬಗೆಯ ಸಿದ್ಧಿ ಮುಂತಾದುವುಗಳ ವಿಷಯಗಳಲ್ಲಿಯೂ ಉದಾಸೀನತೆಯುಂಟಾಗಿ ತನ್ನ ಜೀವಕ್ಕೆ ಆವರಣ ವಾಗಿದ್ದ ಉಪಾಧಿಯನ್ನು ನಾಶಪಡಿಸಿದಂತಹ ಜ್ಞಾನದ ಸಾಧನೆಯನ್ನೂ ಆತನು ನಿಲ್ಲಿಸಿಬಿಟ್ಟನು. ಶ್ರೀಭಗವಂತನ ಕಥಾಮೃತದ ವಿಷಯದಲ್ಲಿ ಗಾಢವಾದ ಅನುರಾಗವು ಉಂಟಾಗುವವರೆಗೆ ತಾನೇ ಸಾಧನೆಯ ಆವಶ್ಯಕತೆ ಮತ್ತು ಯೋಗಸಿದ್ಧಿಗಳ ಆಕರ್ಷಣೆ, ಭ್ರಮೆ, ಪ್ರಮಾದಗಳು ಇರುವುದು! ಹೀಗೆ ಆ ಧೀರವೀರಾಗ್ರಣಿಯು ತನ್ನ ಚಿತ್ತವನ್ನು ಪರಮಾತ್ಮನಲ್ಲಿ ದೃಢವಾಗಿ ನೆಲೆಗೊಳಿಸಿ ಬ್ರಹ್ಮಸ್ಥಿತಿಯಲ್ಲಿ ಬ್ರಹ್ಮಭೂತನಾಗಿ, ಅವಸಾನಕಾಲಬಂದಾಗ ತನ್ನ ಶರೀರವನ್ನು ತೊರೆದುಬಿಟ್ಟನು. ಆತನು ದೇಹವನ್ನು ತ್ಯಜಿಸಿ ಬ್ರಹ್ಮಪದಕ್ಕೆ ಆರೋಹಣಮಾಡಿದ ಕ್ರಮವು ಹೀಗಿತ್ತು; ಎರಡು ಹಿಮ್ಮಡಿಗಳಿಂದಲೂ ಗುದದ ದ್ವಾರವನ್ನು ತಡೆದು ಮೂಲಾಧಾರದಲ್ಲಿರುವ ವಾಯುವನ್ನು ಮೆಲ್ಲಮೆಲ್ಲಗೆ ಮೇಲಕ್ಕೆ ಏರಿಸುತ್ತ ಅದನ್ನು ಕ್ರಮವಾಗಿ ನಾಭಿಯಲ್ಲಿಯೂ, ಅನಂತರ ಹೃದಯದಲ್ಲಿಯೂ, ಎದೆಯಲ್ಲಿಯೂ, ಕಂಠದಲ್ಲಿಯೂ ಮತ್ತು ಹುಬ್ಬುಗಳ ಮಧ್ಯದ ಸ್ಥಾನದಲ್ಲಿಯೂ ನಿಲ್ಲಿಸಿದನು. ಅಲ್ಲಿಂದ ಅದನ್ನು ಮೇಲಕ್ಕೆ ಸೆಳೆದು ಬ್ರಹ್ಮರಂಧ್ರದಲ್ಲಿ ಸ್ಥಾಪಿಸಿದನು. ಆತನಲ್ಲಿ ಯಾವ ಸಾಂಸಾರಿಕವಾದ ಭೋಗಗಳ ಆಸೆಯೂ ಉಳಿಯಲಿಲ್ಲ. ಅನಂತರ ಆ ವಾಯುವನ್ನು ಸಮಷ್ಟಿಯಾದ ವಾಯುವಿನಲ್ಲಿಯೂ, ಶರೀರದ ಪಾರ್ಥಿವಭಾಗವನ್ನು ಪೃಥಿವಿಯಲ್ಲಿಯೂ, ಶರೀರದ ತೇಜೋಭಾಗವನ್ನು ಸಮಷ್ಟಿತೇಜಸ್ಸಿನಲ್ಲಿಯೂ ಲಯಗೊಳಿಸಿದನು. ಶರೀರದಲ್ಲಿನ ಹೃದಯಾದಿ ಗಳಲ್ಲಿರುವ ಆಕಾಶವನ್ನು ಮಹಾಕಾಶದಲ್ಲಿಯೂ, ರಕ್ತವೇ ಮುಂತಾದುವು ಗಳಲ್ಲಿರುವ ಜಲವನ್ನು ಸಮಷ್ಟಿಜಲದಲ್ಲಿಯೂ ಲಯಗೊಳಿಸಿದನು. ಅದೇ ರೀತಿಯಲ್ಲಿ ಪೃಥಿವಿಯನ್ನು ಜಲದಲ್ಲಿಯೂ, ಜಲವನ್ನು ತೇಜಸ್ಸಿನಲ್ಲಿಯೂ,

ತೇಜಸ್ಸನ್ನು ವಾಯುವಿನಲ್ಲಿಯೂ ಮತ್ತು ವಾಯುವನ್ನು ಆಕಾಶದಲ್ಲಿಯೂ ಲೀನಮಾಡಿಬಿಟ್ಟನು. ಅನಂತರ ಮನಸ್ಸನ್ನು (ಸವಿಕಲ್ಪಜ್ಞಾನವನ್ನು) ಇಂದ್ರಿಯಗಳಲ್ಲಿಯೂ, ಇಂದ್ರಿಯಗಳನ್ನು ಅವುಗಳಿಗೆ ಕಾರಣವಾಗಿರುವ ತನ್ಮಾತ್ರೆಗಳಲ್ಲಿಯೂ ಮತ್ತು ತನ್ಮಾತ್ರೆಗಳಿಗೆ ಕಾರಣವಾದ ಅಹಂಕಾರದ ಮೂಲಕ ಆಕಾಶ, ಇಂದ್ರಿಯಗಳು ಮತ್ತು ತನ್ಮಾತ್ರೆಗಳನ್ನು ಅದೇ ಅಹಂಕಾರದಲ್ಲಿಯೂ ಲಯಗೊಳಿಸಿ, ಅಹಂಕಾರವನ್ನು ಮಹತ್ತತ್ತ್ವದಲ್ಲಿ ಲೀನಮಾಡಿದನು. ಬಳಿಕ ಸಂಪೂರ್ಣವಾದ ಗುಣಗಳನ್ನು ಅಭಿವ್ಯಕ್ತಿ ಗೊಳಿಸುವ ಆ ಮಹತ್ತತ್ತ್ವವನ್ನು ಮಾಯೋಪಾಧಿಯಲ್ಲಿರುವ ಜೀವದಲ್ಲಿರಿಸಿ ದನು. ಅನಂತರ ಆತನು ಆ ಜೀವವನ್ನು ಜ್ಞಾನ ಮತ್ತು ವೈರಾಗ್ಯಗಳ ಪ್ರಭಾವದಿಂದ ಶುದ್ಧವಾದ ಬ್ರಹ್ಮಸ್ವರೂಪದಲ್ಲಿ ಲಯಗೊಳಿಸಿ ದೇಹತ್ಯಾಗ ಮಾಡಿದನು. (ಶ್ಲೋಕ 11-18)

ಆ ಪೃಥುಮಹಾರಾಜನ ಧರ್ಮಪತ್ನಿಯಾದ ಅರ್ಚಿಯೂ ಕೂಡ ಆತನೊಡನೆ ತಪೋವನಕ್ಕೆ ಹೋಗಿದ್ದಳಷ್ಟೇ! ಆಕೆಯು ಪಾದಗಳನ್ನು ನೆಲಕ್ಕೆ ಸೋಕಿಸಿದರೂ ತೊಂದರೆಪಡುವಷ್ಟು ಸುಕುಮಾರಿಯಾಗಿದ್ದವಳು. ಆದರೂ ಆಕೆಯು ತನ್ನ ಪತಿಯು ಕೈಗೊಂಡಿದ್ದ ವ್ರತ ಮತ್ತು ನಿಯಮಾದಿಗಳನ್ನೇ ಪಾಲಿಸುತ್ತಾ–ಆತನ ಸೇವೆಯನ್ನು ಮಾಡುತ್ತಿದ್ದಳು. ಮುನಿವೃತ್ತಿಗೆ ತಕ್ಕಂತೆ ತಾನೂ ಗೆಡ್ಡೆ-ಗೆಣಸು ಮುಂತಾದುವುಗಳಿಂದಲೇ ಜೀವನವನ್ನು ನಿರ್ವಹಿಸು ತ್ತಿದ್ದಳು. ಅದರಿಂದ ಶಾರೀರಕವಾಗಿ ತುಂಬಾ ದುರ್ಬಲತೆಯುಂಟಾದರೂ ಪ್ರಿಯತಮನ ಕರಸ್ಪರ್ಶವನ್ನೇ ಗೌರವವೆಂದು ಭಾವಿಸುತ್ತಾ ಆತನಿಗೆ ಯಾವ ರೀತಿಯ ಕಷ್ಟವನ್ನೂ ಕೊಡದೇ ಸಹಕರಿಸಿದಳು. ಪೃಥಿವಿಗೆ ಪತಿಯಾಗಿ, ತನಗೂ ಪ್ರಿಯತಮಪತಿಯಾಗಿದ್ದ ಆತನ ದೇಹವು ಚೇತನ ಧರ್ಮಗಳೆಲ್ಲ ವನ್ನೂ ಕಳೆದುಕೊಂಡುಬಿಟ್ಟಿದ್ದನ್ನು ಕಂಡು ಆ ಸಾಧ್ವಿಯು ಸ್ವಲ್ಪಹೊತ್ತು ವಿಲಪಿಸಿದಳು. ಅನಂತರ ಪರ್ವತದ ಮೇಲೆ ಚಿತೆಯನ್ನು ರಚಿಸಿ ಪತಿಯ ಪವಿತ್ರವಾದ ದೇಹವನ್ನು ಅದರ ಮೇಲೆ ಇರಿಸಿದಳು. ಹಾಗೂ ಆ ಸಮಯದಲ್ಲಿ ಮಾಡಬೇಕಾದ ಎಲ್ಲ ವಿಧಿಗಳನ್ನೂ ಮುಗಿಸಿ ನದಿಯ ತೀರ್ಥ ದಲ್ಲಿ ಸ್ನಾನಮಾಡಿದಳು. ತನ್ನ ಆ ಪರಮಪರಾಕ್ರಮಿಯಾದ ಪತಿಯನ್ನು ಉದ್ದೇಶಿಸಿ ಜಲಾಂಜಲಿಯನ್ನು ಸಮರ್ಪಣೆಮಾಡಿ, ಆಕಾಶದಲ್ಲಿರುವ

ದೇವತೆಗಳಿಗೆ ಪ್ರಣಾಮವನ್ನು ಸಲ್ಲಿಸಿ, ಚಿತೆಯನ್ನು ಮೂರು ಬಾರಿ ಪ್ರದಕ್ಷಿಣೆ ಮಾಡಿ, ಪತಿದೇವನ ಚರಣಗಳನ್ನು ಧ್ಯಾನಿಸುತ್ತಾ ಅಗ್ನಿಯಲ್ಲಿ ಪ್ರವೇಶ ಮಾಡಿಬಿಟ್ಟಳು. ಪರಮಸಾಧ್ವೀಮಣಿಯಾದ ಅರ್ಚಿಯು ಈ ರೀತಿಯಲ್ಲಿ ತನ್ನ ಪತಿಯಾದ, ವೀರವರೇಣ್ಯನಾದ ಪೃಥುವಿನ ಜೊತೆಯಲ್ಲಿ ಸಹಗಮನ ಮಾಡುತ್ತಿದ್ದುದನ್ನು ಕಂಡು ಸಾವಿರಾರು ಮಂದಿ ವರಪ್ರದರಾದ ದೇವಿಯರು ತಮ್ಮ-ತಮ್ಮ ಪತಿಗಳೊಡನೆ ಆಕೆಯನ್ನು ಸ್ತುತಿಸಿದರು. ಆಗ ಅಲ್ಲಿ ದೇವ ವಾದ್ಯಗಳು ಮೊಳಗತೊಡಗಿದುವು. ಮಂದರಪರ್ವತದ ಶಿಖರದಲ್ಲಿ ದೇವ ಸ್ತ್ರೀಯರು ಹೂಮಳೆಗರೆಯುತ್ತಾ ತಮ್ಮ-ತಮ್ಮಲ್ಲಿ ಹೀಗೆ ಮಾತನಾಡಿ ಕೊಳ್ಳತೊಡಗಿದರು : (ಶ್ಲೋಕ 19-24)

"ಅಬ್ಬಾ! ಎಂತಹ ಧನ್ಯಳು ಈಕೆ! ಶ್ರೀಲಕ್ಷ್ಮೀದೇವಿಯು ಯಜ್ಞೇಶ್ವರನಾದ ಶ್ರೀಮಹಾವಿಷ್ಣುವಿನ ಸೇವೆಯನ್ನು ಹೇಗೆ ಮಾಡುತ್ತಿರುವಳೋ–ಹಾಗೆಯೇ ಮನಸ್ಸು, ಮಾತು ಮತ್ತು ದೇಹ–ಎಂಬ ಮೂರು ಕರಣಗಳಿಂದಲೂ ತನ್ನ ಪತಿಯಾದ, ರಾಜರಾಜೇಶ್ವರನಾದ ಪೃಥುವಿನ ಸೇವೆಯನ್ನು ಮಾಡಿದಳಲ್ಲಾ! ಅವಶ್ಯವಾಗಿಯೂ ಈ ಸಾಧ್ವೀಮಣಿಯು ಚಿಂತಿಸಲೂ ಅಸದಳವಾದ ತನ್ನ ಪುಣ್ಯಕರ್ಮದ ಆ ಪ್ರಭಾವದಿಂದ ನಮ್ಮ ಸ್ಥಾನಗಳನ್ನೂ ದಾಟಿ ಮೇಲೆ ಹೋಗಿ ತನ್ನ ಪತಿದೇವನೊಡನೆ ಉತ್ತಮೋತ್ತಮಲೋಕಗಳಿಗೆ ಹೋಗುತ್ತಿದ್ದಾಳೆ. ಈ ಲೋಕದಲ್ಲಿ ಕೆಲವೇ ಕೆಲವು ದಿನಗಳ ಕಾಲದವರೆಗೆ ಬದುಕಿದ್ದರೂ ಶ್ರೀಭಗವಂತನ ಪರಮಪದಕ್ಕೆ ಒಯ್ಯುವಂತಹ ಆತ್ಮಜ್ಞಾನವನ್ನು ಪಡೆದಂತಹ ಧನ್ಯಾತ್ಮರಿಗೆ ಪ್ರಪಂಚದಲ್ಲಿ ಯಾವುದೂ ದುರ್ಲಭವಲ್ಲ. ಮನುಷ್ಯದೇಹವನ್ನು ಅತಿಪ್ರಯಾಸದಿಂದ ಪಡೆದನಂತರವೂ ಆ ಮೋಕ್ಷಕ್ಕಾಗಿ ಪ್ರಯತ್ನಮಾಡದೇ ವಿಷಯಸುಖಗಳಲ್ಲಿ ಆಸಕ್ತರಾಗುವ ಮನುಷ್ಯರು ನಿಜವಾಗಿಯೂ ಆತ್ಮಘಾತಿಗಳೆಂದೇ ತಿಳಿಯಬೇಕು. 'ಅಯ್ಯೋ ಪಾಪ! ಮೋಸ ಹೋದರಲ್ಲಾ!'–ಎಂದು ಅವರ ಬಗೆಗೆ ಶೋಚಿಸಬೇಕಾಗುವುದು."

(ಶ್ಲೋಕ 25-28)

ಮೈತ್ರೇಯರು ಹೇಳುತ್ತಾರೆ :

ಮಹಾತ್ಮನಾದ ವಿದುರನೇ! ಕೇಳು. ದೇವಸ್ತ್ರೀಯರು ಹೀಗೆ ಪರಸ್ಪರ

ವಾಗಿ ಮಾತನಾಡುತ್ತಿರುವಾಗಲೇ ಮಹಾರಾಣಿ ಅರ್ಚಿಯು ಆತ್ಮಜ್ಞಾನಿಗಳಲ್ಲಿ ಶ್ರೇಷ್ಠನಾಗಿ, ಭಗವದ್ಭಕ್ತಶಿರೋಮಣಿಯಾಗಿದ್ದ ತನ್ನ ಪತಿಯಾದ ಪೃಥುಮಹಾರಾಜನು ಯಾವ ಪರಮಧಾಮಕ್ಕೆ ಹೋಗಿದ್ದನೋ–ಅದೇ ಲೋಕಕ್ಕೆ ಹೋಗಿ ಸೇರಿದಳು. ಪರಮಭಾಗವತೋತ್ತಮನಾದ ಪೃಥುವು ಮಹಾಮಹಿಮನು. ಆತನ ಚರಿತ್ರೆಗಳೂ ಅತ್ಯಂತ ಉದಾರವಾದುವುಗಳು. ಅವುಗಳನ್ನು ನಿನಗೆ ನಾನು ವರ್ಣಿಸಿದ್ದೇನೆ. ವಿದುರ! ಈ ಪರಮಪವಿತ್ರವಾದ ಚರಿತ್ರೆಯನ್ನು ಶ್ರದ್ಧಾಪೂರ್ವಕವಾಗಿ, ನಿಷ್ಕಾಮಭಾವದಿಂದ ಏಕಾಗ್ರವಾದ ಚಿತ್ತದಿಂದ ಕೇಳುವ ಅಥವಾ ಕಥನಮಾಡುವ ಪುಣ್ಯಾತ್ಮನೂ ಪೃಥುಮಹಾರಾಜನ ಪದವನ್ನೇ ಅಂದರೆ–ಪರಮಾತ್ಮನ ಪರಂಧಾಮವನ್ನೇ–ಪಡೆಯುವನು. ಇದನ್ನು ಸಕಾಮನಾಗಿ ಪಠಿಸಿದರೆ ಬ್ರಾಹ್ಮಣನು ಬ್ರಹ್ಮತೇಜಸ್ಸನ್ನು ಪಡೆಯುತ್ತಾನೆ. ಕ್ಷತ್ರಿಯನು ಪೃಥಿವೀಪತಿಯಾಗುತ್ತಾನೆ. ವೈಶ್ಯನು ವ್ಯಾಪಾರಿಗಳಲ್ಲಿ ಉನ್ನತಿ ಪಡೆದು ಶ್ರೇಷ್ಠನಾಯಕನಾಗುತ್ತಾನೆ ಮತ್ತು ಶೂದ್ರನು ಶ್ರೇಷ್ಠತಮಸಾಧುವಾಗುತ್ತಾನೆ. ಪುರುಷನಾಗಲೀ ಅಥವಾ ಸ್ತ್ರೀಯಾಗಲೀ ಇದನ್ನು ಆದರಪೂರ್ವಕವಾಗಿ ಕೇಳಿದರೆ ಸಂತಾನಹೀನನಾಗಿದ್ದವನು ಉತ್ತಮಸಂತಾನವನ್ನು ಪಡೆಯುತ್ತಾನೆ. ದರಿದ್ರನು ಧನವಂತರಲ್ಲಿ ಅಗ್ಗಳಿಕೆಯನ್ನು ಪಡೆಯುತ್ತಾನೆ. ಕೀರ್ತಿಯ ಸ್ಪರ್ಶವಿಲ್ಲದವನು ಕೀರ್ತಿಶಾಲಿಯಾಗುವನು ಮತ್ತು ಮೂರ್ಖನು ಪಂಡಿತನಾಗುವನು. ಇದು ಮನುಷ್ಯಮಾತ್ರಕ್ಕೇ ಕಲ್ಯಾಣವನ್ನುಂಟುಮಾಡುವುದು. ಅಮಂಗಳವನ್ನು ಹೋಗಲಾಡಿಸುವುದು. ಧನ, ಯಶಸ್ಸು, ಆಯುಸ್ಸು ಮತ್ತು ಸ್ವರ್ಗಗಳನ್ನೂ ಕೊಡುವುದು. ಕಲಿಯ ದೋಷಗಳನ್ನು ತೊಳೆದುಹಾಕುವುದು. ಧರ್ಮವೇ ಮುಂತಾದ ನಾಲ್ಕೂ ಪುರುಷಾರ್ಥಗಳ ಉತ್ತಮಸಿದ್ಧಿಯನ್ನು ಪಡೆಯಲು ಬಯಸುವವರು ಇದನ್ನು ಶ್ರದ್ಧಾಪೂರ್ವಕವಾಗಿ ಶ್ರವಣಮಾಡಬೇಕು. ಏಕೆಂದರೆ : ಇದು ಅವೆಲ್ಲವನ್ನೂ ಪಡೆಯಲು ತುಂಬಾ ಸಹಾಯಕವಾಗುವುದು. ವಿಜಯೋದ್ದೇಶದಿಂದ ಪ್ರಯಾಣವನ್ನು ಬೆಳೆಸುವ ರಾಜನು ಇದನ್ನು ಶ್ರವಣಮಾಡಿ ಹೊರಟರೆ–ಶತ್ರುರಾಜರು ಆತನ ಮುಂದೆ ಬಂದು ಹಿಂದೆ ಪೃಥುಮಹಾರಾಜನಿಗೆ ಕಾಣಿಕೆಗಳನ್ನು ಒಪ್ಪಿಸುತ್ತಿದ್ದಂತೆ ಈತನಿಗೂ ಒಪ್ಪಿಸುವರು. ಮನುಷ್ಯನು ಇತರ ಎಲ್ಲ ಆಸಕ್ತಿಗಳನ್ನೂ ತ್ಯಜಿಸಿ

ಶ್ರೀಭಗವಂತನಲ್ಲಿ ಪರಿಶುದ್ಧವಾದ ಭಕ್ತಿಭಾವದಿಂದ ಕೂಡಿ ಪೃಥುಮಹಾರಾಜನ ನಿರ್ಮಲವಾದ ಚರಿತ್ರೆಯನ್ನು ಕೇಳಬೇಕು ; ಹೇಳಬೇಕು ಮತ್ತು ಪಠಿಸಬೇಕು. ವಿದುರ! ನಾನು ಶ್ರೀಭಗವಂತನ ಮಾಹಾತ್ಮ್ಯವನ್ನು ಪ್ರಕಟಪಡಿಸುವ ಈ ಪವಿತ್ರವಾದ ಚರಿತ್ರೆಯನ್ನು ನಿನಗೆ ತಿಳಿಸಿರುವೆನು. ಇದರಲ್ಲಿ ಭಕ್ತಿ-ಶ್ರದ್ಧಾಪೂರ್ಣವಾದ ಮನಸ್ಸನ್ನಿಟ್ಟುಕೊಳ್ಳುವವನು ಪೃಥುಮಹಾರಾಜನು ಪಡೆದ ಗತಿಯನ್ನೇ ಪಡೆಯುವನು. (ಶ್ಲೋಕ 29-38)

ಅನುದಿನಮಿದಮಾದರೇಣ ಶೃಣ್ವ-
ನ್ಪೃಥುಚರಿತಂ ಪ್ರಥಯನ್ವಿಮುಕ್ತಸಙ್ಗಃ ।
ಭಗವತಿ ಭವಸಿನ್ಧುಪೋತಪಾದೇ
ಸ ಚ ನಿಪುಣಾಂ ಲಭತೇ ರತಿಂ ಮನುಷ್ಯಃ ॥೩೯॥

ಯಾವನು ಈ ಪೃಥುವಿನ ಚರಿತ್ರೆಯನ್ನು ಪ್ರತಿದಿನವೂ ಆದರಪೂರ್ವಕವಾಗಿ ನಿಷ್ಕಾಮಭಾವದಿಂದ ಕೇಳಿ ಪಾರಾಯಣ, ಕೀರ್ತನ, ಪ್ರವಚನಾದಿಗಳಿಂದ ಪ್ರಸಿದ್ಧಿಪಡಿಸುವನೋ–ಆತನು ಸಂಸಾರಸಾಗರವನ್ನು ದಾಟಿಸುವ ನೌಕೆಯಂತಿರುವ ಪಾದಗಳುಳ್ಳ ಭಗವಂತನಾದ ಶ್ರೀಹರಿಯಲ್ಲಿ ದೃಢವಾದ ಅನುರಾಗವನ್ನು ಸಂಪಾದಿಸುವನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಚತುರ್ಥಸ್ಕಂಧದ ೨೩ನೆಯ ಅಧ್ಯಾಯವು ಮುಗಿಯಿತು.

ಚತುರ್ಥಸ್ಕಂಧ ೨೪ನೆಯ ಅಧ್ಯಾಯ

ಪೃಥುವಿನ ವಂಶಪರಂಪರೆ ಮತ್ತು ಪ್ರಚೇತಸರಿಗೆ ರುದ್ರಭಗವಂತನಿಂದ ಉಪದೇಶ

ಮೈತ್ರೇಯರು ಹೇಳುತ್ತಾರೆ :

ವಿಜಿತಾಶ್ವೋಽಧಿರಾಜಾಸೀತ್ಪೃಥುಪುತ್ರಃ ಪೃಥುಶ್ರವಾಃ ।
ಯವೀಯೋಭ್ಯೋಽದದಾತ್ಕಾಷ್ಠಾ ಭ್ರಾತೃಭ್ಯೋ ಭ್ರಾತೃವತ್ಸಲಃ ॥

"ಪೃಥುವಿನ ಅನಂತರ ಪರಮಯಶಸ್ವಿಯಾದ ಆತನ ಪುತ್ರ

ವಿಜಿತಾಶ್ವನು ಮಹಾರಾಜನಾದನು. ಆತನಿಗೆ ತನ್ನ ತಮ್ಮಂದಿರಲ್ಲಿ ತುಂಬಿದ ವಾತ್ಸಲ್ಯವಿತ್ತು. ಆದ್ದರಿಂದ ಆತನು ತನ್ನ ನಾಲ್ಕು ಮಂದಿ ತಮ್ಮಂದಿರಿಗೂ ಒಂದೊಂದು ದಿಕ್ಕಿನ ರಾಜ್ಯಾಧಿಕಾರವನ್ನು ಕೊಟ್ಟನು.

ಅವರಲ್ಲಿ ಹರ್ಯಕ್ಷನಿಗೆ ಪೂರ್ವದಿಕ್ಕಿನ ಆಧಿಪತ್ಯವೂ, ಧೂಮ್ರಕೇಶನಿಗೆ ದಕ್ಷಿಣದಿಕ್ಕಿನ ಆಧಿಪತ್ಯವೂ, ವೃಕನಿಗೆ ಪಶ್ಚಿಮದಿಕ್ಕಿನ ಆಧಿಪತ್ಯವೂ ಮತ್ತು ದ್ರವಿಣನಿಗೆ ಉತ್ತರದಿಕ್ಕಿನ ಆಧಿಪತ್ಯವೂ ಕೊಡಲ್ಪಟ್ಟಿತು. ವಿಜಿತಾಶ್ವನು ಇಂದ್ರನಿಂದ ಅಂತರ್ಧಾನಹೊಂದುವ ಶಕ್ತಿಯನ್ನು ಸಂಪಾದಿಸಿದ್ದರಿಂದ 'ಅಂತರ್ಧಾನ' ಎಂಬ ಹೆಸರಿನಿಂದಲೂ ಆತನನ್ನು ಕರೆಯುತ್ತಿದ್ದರು. ಆತನು ತನ್ನ ಪತ್ನಿಯಾದ ಶಿಖಂಡಿನಿಯಲ್ಲಿ ಪಾವಕ, ಪವಮಾನ ಮತ್ತು ಶುಚಿ ಎಂಬ ಮೂವರು ಪುತ್ರರನ್ನು ಪಡೆದನು. ಹಿಂದೆ ವಸಿಷ್ಠಮಹರ್ಷಿಗಳ ಶಾಪಕ್ಕೆ ತುತ್ತಾಗಿದ್ದ ಮೂರು ಅಗ್ನಿಗಳೇ ಈಗ ವಿಜಿತಾಶ್ವನ ಮೂವರು ಪುತ್ರರಾಗಿ ಜನಿಸಿದರು. ಮುಂದೆ ಅವರು ಯೋಗಮಾರ್ಗವನ್ನು ಅವಲಂಬಿಸಿ ಮತ್ತೆ ತಮ್ಮ ಅಗ್ನಿರೂಪವನ್ನು ಪಡೆದುಕೊಂಡರು. ಅಂತರ್ಧಾನನಿಗೆ ನಭಸ್ವತೀ–ಎಂಬ ಪತ್ನಿಯಲ್ಲಿ ಹವಿರ್ಧಾನ ಎಂಬ ಹೆಸರಿನ ಪುತ್ರಶ್ರೇಷ್ಠನು ಹುಟ್ಟಿದನು. ಹೀಗೆ ಆತನಿಗೆ ನಾಲ್ಕು ಮಂದಿ ಪುತ್ರರತ್ನರು ಜನಿಸಿದರು. ಆ ಅಂತರ್ಧಾನಮಹಾರಾಜನು ಪರಮೋದಾರಿಯಾಗಿದ್ದನು. ತನ್ನ ತಂದೆ ಪೃಥುಚಕ್ರವರ್ತಿಯ ಯಜ್ಞಾಶ್ವವನ್ನು ಇಂದ್ರನು ಅಪಹರಿಸಿ ಸಿಕ್ಕಿಬಿದ್ದಾಗಲೂ ಆತನು ಇಂದ್ರನನ್ನು ವಧಿಸಲಿಲ್ಲ. ಕಂದಾಯವನ್ನು ಸಂಗ್ರಹಿಸುವುದು, ದಂಡನೆಯನ್ನು ಕೊಡುವುದು, ದಂಡಹಾಕುವುದು–ಮುಂತಾದುವು ಕಠೋರವಾದ ಕರ್ತವ್ಯಗಳು ; ಇವುಗಳಿಂದ ಇತರರಿಗೆ ಕಷ್ಟವುಂಟಾಗುತ್ತದೆ–ಎಂದು ಭಾವಿಸಿ ಆ ಸಾಧುಶ್ರೇಷ್ಠನು ಒಂದು ದೀರ್ಘಕಾಲಯಜ್ಞದ ದೀಕ್ಷೆಯನ್ನು ಕೈಗೊಂಡನು. ಯಜ್ಞದೀಕ್ಷಿತನು ಲೌಕಿಕವಾದ ರಾಜಕಾರ್ಯಗಳಲ್ಲಿ ಭಾಗವಹಿಸಬಾರದು–ಎಂಬ ನೆಪದಿಂದ ತನ್ನ ರಾಜವೃತ್ತಿಯನ್ನು ಬಿಟ್ಟುಬಿಟ್ಟನು. ಆ ಆತ್ಮಜ್ಞಾನಿಯಾದ ರಾಜನು ಯಜ್ಞಕಾರ್ಯದಲ್ಲಿ ತೊಡಗಿರುವಾಗಲೇ ಭಕ್ತಭಯಭಂಜಕನೂ, ಪರಿಪೂರ್ಣನೂ ಆದ ಪರಮಾತ್ಮನನ್ನು ಆರಾಧಿಸುತ್ತಾ ಸ್ಥಿರವಾದ ಸಮಾಧಿಯ ಮೂಲಕ ಶ್ರೀಭಗವಂತನ ದಿವ್ಯಲೋಕವನ್ನು ಸೇರಿಬಿಟ್ಟನು. ಮುಂದೆ

ಹವಿರ್ಧಾನನು ತನ್ನ ಪತ್ನಿ ಹವಿರ್ಧಾನಿಯಲ್ಲಿ ಬರ್ಹಿಷದ, ಗಯ, ಶುಕ್ಲ, ಕೃಷ್ಣ, ಸತ್ಯ ಮತ್ತು ಜಿತವರ್ತ–ಎಂಬ ಆರು ಮಂದಿ ಪುತ್ರರನ್ನು ಪಡೆದನು. ಎಲೈ ಕುರುಶ್ರೇಷ್ಠನೇ! ಆ ಪುತ್ರರಲ್ಲಿ ಹವಿರ್ಧಾನನ ಮಗನಾದ ಮಹಾತ್ಮನಾದ ಬರ್ಹಿಷದನು ಯಜ್ಞವೇ ಮುಂತಾದ ಕರ್ಮಕಾಂಡದಲ್ಲಿಯೂ ಅಂತೆಯೇ ಯೋಗಾಭ್ಯಾಸದಲ್ಲಿಯೂ ಕುಶಲನಾಗಿದ್ದನು. ಇವುಗಳಿಂದ ಆತನು ಪ್ರಜಾಪತಿಯ ಪದವಿಯನ್ನು ಗಳಿಸಿದನು. ಬರ್ಹಿಷದನು ನಾನಾ ಸ್ಥಾನಗಳಲ್ಲಿ ನಿರಂತರವಾಗಿ ಎಷ್ಟು ಯಜ್ಞಗಳನ್ನು ಆಚರಿಸಿದನೆಂದರೆ : ಈ ಸಮಸ್ತಭೂಮಂಡಲವೂ ಆತನು ಯಜ್ಞಗಳನ್ನು ಆಚರಿಸಿದಾಗ ಹರಡಿದ ಪೂರ್ವಾಗ್ರವಾದ ದರ್ಭೆಗಳಿಂದಲೇ ತುಂಬಿಹೋಯಿತು. ಆದ್ದರಿಂದ ಮುಂದೆ ಆತನು 'ಪ್ರಾಚೀನಬರ್ಹಿ' ಎಂಬ ಹೆಸರಿನಿಂದಲೇ ವಿಖ್ಯಾತನಾದನು. ಆ ಪ್ರಾಚೀನಬರ್ಹಿಮಹಾರಾಜನು ದೇವದೇವರಾದ ಬ್ರಹ್ಮದೇವರ ಆಣತಿ ಯಂತೆ ಸಮುದ್ರರಾಜನ ಪುತ್ರಿಯಾದ ಶತದ್ರುತಿ ಎಂಬಾಕೆಯನ್ನು ಮದುವೆ ಯಾದನು. ಅವಳ ರೂಪ-ಲಾವಣ್ಯಗಳನ್ನು ಹೇಗೆ ತಾನೇ ವರ್ಣಿಸುವುದು? ಸರ್ವಾಂಗಸುಂದರಿಯಾದ ಆಕೆಯು ಸುಂದರವಾದ ಉಡುಗೆ-ತೊಡುಗೆ ಗಳನ್ನು ಧರಿಸಿ ವಿವಾಹಮಂಟಪಕ್ಕೆ ಬಂದು ಪತಿಯೊಡನೆ ಅಗ್ನಿಯನ್ನು ಪ್ರದಕ್ಷಿಣೆಮಾಡುತ್ತಿದ್ದಾಗ ಅಗ್ನಿದೇವನೇ ಆಕೆಯನ್ನು ಕಂಡು ಮೋಹ ಗೊಂಡನು. ಹಿಂದೆ ಹೆಣ್ಣುಗಿಳಿಯ ರೂಪವನ್ನು ಧರಿಸಿದ್ದ ಸ್ವಾಹಾದೇವಿಯನ್ನು ಕಾಮಿಸಿದಂತೆಯೇ ಆಕೆಯನ್ನೂ ಅಗ್ನಿಯು ಕಾಮಿಸಿದನು. ಮದುವಣಗಿತ್ತಿಯಾದ ಆಕೆಯು ಝಣ-ಝಣಿಸುವ ನೂಪುರಗಳನ್ನು ಧರಿಸಿ ಬಂದಾಗ ಆ ಕಾಲಂದುಗೆಗಳ ಧ್ವನಿಗೇ ದಿಕ್ಕು-ವಿದಿಕ್ಕುಗಳಲ್ಲಿರುವ ದೇವತೆಗಳು, ಅಸುರರು, ಗಂಧರ್ವರು, ಮುನಿಗಳು, ಸಿದ್ಧರು, ಮನುಷ್ಯರು ಮತ್ತು ನಾಗರು–ಎಲ್ಲರೂ ಮನಸೋತು ಪರವಶರಾದರು. ಪ್ರಾಚೀನಬರ್ಹಿ ಮಹಾರಾಜನಿಗೆ ಶತದ್ರುತಿಯ ಗರ್ಭದಲ್ಲಿ ಪ್ರಚೇತಸರೆಂಬ ಹೆಸರುಳ್ಳ ಹತ್ತು ಮಂದಿ ಪುತ್ರರು ಜನಿಸಿದರು. ಅವರೆಲ್ಲರೂ ಅತ್ಯಂತಧರ್ಮಜ್ಞರಾಗಿದ್ದರು. ಅವರ ಹೆಸರು ಮತ್ತು ಆಚರಣೆಗಳೂ ಅದೇ ರೀತಿಯಲ್ಲಿದ್ದುವು. ತಂದೆ ಪ್ರಾಚೀನಬರ್ಹಿಯು 'ಸಂತಾನವನ್ನು ಪಡೆಯಿರಿ'–ಎಂದು ಆದೇಶನೀಡಲು ಅವರು ಅದನ್ನು ಶಿರಸಾವಹಿಸಿ ತಪಸ್ಸುಮಾಡುವುದಕ್ಕಾಗಿ ಸಮುದ್ರವನ್ನು

ಪ್ರವೇಶಮಾಡಿದರು. ಹತ್ತು ಸಾವಿರ ವರ್ಷಗಳ ಕಾಲ ತಪಸ್ಸನ್ನಾಚರಿಸುತ್ತಾ ತಪಸ್ಸಿನ ಫಲವನ್ನು ನೀಡುವ ಶ್ರೀಹರಿಯನ್ನು ಆರಾಧಿಸತೊಡಗಿದರು. ತಪಸ್ಸುಮಾಡುವುದಕ್ಕಾಗಿ ಅವರು ಮನೆಯನ್ನು ಬಿಟ್ಟುಹೊರಟಾಗ ಮಾರ್ಗದಲ್ಲಿ ಸ್ವಾಮಿ ಶ್ರೀಮಹಾದೇವನೇ ದರ್ಶನವನ್ನಿತ್ತು ಕರುಣೆಯಿಂದ ಉಪದೇಶಮಾಡಿದ ತತ್ತ್ವವನ್ನು ಕುರಿತು ಅವರು ಏಕಾಗ್ರತಾಪೂರ್ವಕವಾಗಿ ಧ್ಯಾನ, ಜಪ ಮತ್ತು ಪೂಜೆಗಳನ್ನು ಆಚರಿಸುತ್ತಿದ್ದರು."

(ಶ್ಲೋಕ 2-15)

ಮೈತ್ರೇಯಮಹರ್ಷಿಗಳು ಹೀಗೆ ಹೇಳಿದುದನ್ನು ಕೇಳಿ ವಿದುರನು ಅವರನ್ನು ಪ್ರಶ್ನಿಸಿದನು :

"ಮಹಾತ್ಮರೇ! ಪ್ರಚೇತಸರಿಗೆ ಮಾರ್ಗದಲ್ಲಿ ಶ್ರೀಮಹಾದೇವನ ಭೇಟಿ ಹೇಗಾಯಿತು? ಅವರಲ್ಲಿ ಪ್ರಸನ್ನನಾಗಿ ಭಗವಂತನಾದ ಶಂಕರನು ಅವರಿಗೆ ಏನನ್ನು ಉಪದೇಶಮಾಡಿದನು? ಆ ಸಾರರೂಪವಾದ ಮಾತನ್ನು ತಾವು ಕೃಪೆಯಿಟ್ಟು ನನಗೆ ತಿಳಿಸೋಣವಾಗಲಿ. ಬ್ರಹ್ಮರ್ಷಿಗಳೇ! ದೇಹವನ್ನು ಧರಿಸಿರುವ ಸಂಸಾರಿಗಳಿಗೆ ಶಿವನ ದರ್ಶನವೇ ಅತ್ಯಂತದುರ್ಲಭ. ಮುನಿ ಜನರು ಕೂಡ ಎಲ್ಲ ಬಗೆಯ ಆಸಕ್ತಿಗಳನ್ನೂ ತೊರೆದು ಆತನನ್ನು ಪಡೆಯುವುದಕ್ಕಾಗಿ ನಿರಂತರವಾಗಿ ಧ್ಯಾನಮಾಡುವರೇ ಹೊರತು ಸುಲಭ ವಾಗಿ ಪಡೆಯುವುದಿಲ್ಲ. ಹೀಗಿರುವಾಗ ಇತರರ ವಿಷಯದಲ್ಲಿ ಹೇಳತಕ್ಕದ್ದೇ ನಿದೆ? ಭಗವಂತನಾದ ಶ್ರೀಶಂಕರನು ಆತ್ಮಾರಾಮನು. ತನಗೋಸ್ಕರ ಯಾವುದನ್ನೂ ಮಾಡಿಕೊಳ್ಳುವವನಲ್ಲ. ಆದರೂ ಲೋಕವನ್ನು ಸಲಹುವುದ ಕ್ಕಾಗಿ ತನ್ನ ಘೋರರೂಪವಾದ ಶಕ್ತಿದೇವಿಯೊಡನೆ ಎಲ್ಲೆಲ್ಲಿಯೂ ಸಂಚರಿ ಸುತ್ತಿರುವನು." (ಶ್ಲೋಕ 16-18)

ಮೈತ್ರೇಯರು ಹೇಳುತ್ತಾರೆ :

"ಎಲೈ ಮಹಾತ್ಮನೇ! ಕೇಳು. ಸಾಧುಶ್ರೇಷ್ಠರಾದ ಪ್ರಚೇತಸರು ತಂದೆಯ ಮಾತನ್ನು ಶಿರಸಾವಹಿಸಿ ತಪಸ್ಸುಮಾಡುವ ಆದರ-ಉತ್ಸಾಹ ಗಳಿಂದ ಪಶ್ಚಿಮದಿಕ್ಕಿಗೆ ಹೊರಟರು. ಹಾಗೆ ಹೋಗುತ್ತಿರುವಾಗ ಅವರಿಗೆ ಮಾರ್ಗದಲ್ಲಿ ಸಮುದ್ರದಂತೆ ವಿಶಾಲವಾದ ಒಂದು ಸರೋವರವು ಕಾಣಿ

ಸಿತು. ಆ ಸರೋವರವು ಮಹಾಪುರುಷರ ಮನಸ್ಸಿನಂತೆ ಸ್ವಚ್ಛವಾಗಿದ್ದಿತು. ಅದರಲ್ಲಿದ್ದ ಮೀನುಗಳೇ ಮುಂತಾದ ಜಲಚರಪ್ರಾಣಿಗಳೂ ಪ್ರಸನ್ನವಾಗಿರು ವಂತೆ ಕಾಣಿಸುತ್ತಿದ್ದುವು. ಕನ್ನೈದಿಲೆ, ಕೆಂದಾವರೆಗಳೇ ಮುಂತಾದ ಬಣ್ಣ-ಬಣ್ಣಗಳ ಬಗೆ-ಬಗೆಯ ನೈದಿಲೆಗಳೂ, ತಾವರೆಗಳೂ ಅದರಲ್ಲಿ ಕಂಗೊಳಿಸು ತ್ತಿದ್ದುವು. ಹಂಸ, ಸಾರಸ, ಚಕ್ರವಾಕ ಮತ್ತು ಕಾರಂಡವಗಳೇ ಮುಂತಾದ ನೀರು ಹಕ್ಕಿಗಳು ಅದರ ದಡದಲ್ಲಿ ಕಲ-ಕಲಧ್ವನಿಮಾಡುತ್ತಿದ್ದುವು. ಆ ರಮಣೀಯವಾದ ಸರೋವರದ ನಾಲ್ಕು ಕಡೆಗಳಲ್ಲಿಯೂ ಸೊಂಪಾಗಿ ಬೆಳೆ ದಿದ್ದ ಬಗೆ-ಬಗೆಯ ಗಿಡ-ಮರ-ಬಳ್ಳಿಗಳ ಮೇಲೆ ಮದದಿಂದ ಸೊಕ್ಕಿದ್ದ ದುಂಬಿಗಳು ಝೇಂಕರಿಸುತ್ತಿರಲಾಗಿ, ಆ ಗಿಡ-ಮರ-ಬಳ್ಳಿಗಳು ಆ ಮಧುರ ಧ್ವನಿಯಿಂದ ರೋಮಾಂಚಿತವಾಗಿವೆಯೋ ಎಂಬಂತೆ ಶೋಭಿಸುತ್ತಿದ್ದುವು. ತಾವರೆಯ ದಂಟುಗಳಲ್ಲಿದ್ದ ಪೂಧೂಳಿಯನ್ನು ಗಾಳಿಯು ಎಲ್ಲೆಲ್ಲಿಯೂ ಚೆಲ್ಲುತ್ತಾ ಜನರಿಗೆ ಆನಂದೋತ್ಸವವನ್ನುಂಟುಮಾಡುತ್ತಿತ್ತು. ಅಲ್ಲಿ ದಿವ್ಯವಾದ ಮಾರ್ಗವಿಧಾನದಿಂದ ಕೂಡಿ ಕಿವಿಗಳಿಗೆ ಹಬ್ಬವಾಗಿದ್ದ ಮೃದಂಗ-ಪಣಹಗಳೇ, ಮುಂತಾದ ವಾದ್ಯಗಳ ಸಂಗೀತಧ್ವನಿಯನ್ನು ಕೇಳಿ ಆ ರಾಜ ಪುತ್ರರಿಗೆ ಆಶ್ಚರ್ಯವಾಯಿತು. ಅಷ್ಟರಲ್ಲೇ ಅವರಿಗೆ ಅಲ್ಲಿ ದೇವಾಧಿದೇವನಾದ ಭಗವಂತನಾದ ಶ್ರೀಶಂಕರನು ತನ್ನ ಅನುಚರರೊಡನೆ ಆ ಸರೋ ವರದಿಂದ ಹೊರಗೆ ಬರುತ್ತಿರುವುದು ಕಾಣಿಸಿತು. ಸ್ವಾಮಿಯ ಆ ಶ್ರೀದೇಹವು ಪುಟವಿಟ್ಟ ಚಿನ್ನದ ರಾಶಿಯಂತೆ ಥಳ-ಥಳಿಸುತ್ತಿತ್ತು. ನೀಲಿಬಣ್ಣದ ಕಂಠದಿಂದಲೂ ಮತ್ತು ವಿಶಾಲವಾದ ಮೂರು ಕಣ್ಣುಗಳಿಂದಲೂ ಒಪ್ಪುತ್ತಿದ್ದ ಆ ಶ್ರೀಭಗವಂತನು ಪ್ರಸನ್ನವಾದ ಮುಖಮುದ್ರೆಯಿಂದ ಭಕ್ತರ ಮೇಲೆ ಅನುಗ್ರಹವನ್ನು ಬೀರುತ್ತಿದ್ದನು. ಗಂಧರ್ವರು ಶ್ರುತಿಮಧುರವಾಗಿ ಆತನ ಗುಣಗಾನಮಾಡುತ್ತಿದ್ದರು. ಹೀಗೆ ಇದ್ದಕ್ಕಿದ್ದಂತೆ ಆತನ ದರ್ಶನಭಾಗ್ಯವನ್ನು ಪಡೆದ ಪ್ರಚೇತಸರಿಗೆ ತುಂಬಾ ಕುತೂಹಲವುಂಟಾಗಿ ಅವರು ಆತನಿಗೆ ಪ್ರಣಾಮಗಳನ್ನು ಅರ್ಪಿಸಿದರು. ಆಗ ಶರಣಾಗತರ ಪೀಡೆಯನ್ನು ಪರಿಹರಿಸು ವವನೂ, ಧರ್ಮವತ್ಸಲನೂ ಆದ ದೇವದೇವನಾದ ಮಹಾದೇವನು– ತನ್ನನ್ನು ನೋಡಿ ಸಂತೋಷಗೊಂಡ ಧರ್ಮಜ್ಞರೂ, ಶೀಲಸಂಪನ್ನರೂ ಆದ ಆ ರಾಜಕುಮಾರರಲ್ಲಿ ಪ್ರಸನ್ನನಾಗಿ ಅವರಿಗೆ ಹೀಗೆ ಹೇಳಿದನು :

(ಶ್ಲೋಕ 19-26)

"ಪ್ರಚೇತಸರೇ! ನೀವು ಪ್ರಾಚೀನಬರ್ಹಿರಾಜನ ಸುಪುತ್ರರು. ನೀವು ಏನು ಮಾಡಬೇಕೆಂದಿದ್ದೀರೆಂಬುದೂ ನನಗೆ ತಿಳಿದಿದೆ. ನಿಮಗೆ ಮಂಗಳ ವಾಗಲಿ. ಈಗ ನಿಮ್ಮನ್ನು ಅನುಗ್ರಹಿಸುವುದಕ್ಕಾಗಿಯೇ ಹೀಗೆ ನಿಮಗೆ ದರ್ಶನವನ್ನು ನೀಡಿದ್ದೇನೆ. ನಿಮ್ಮಲ್ಲಿ ನನಗೆ ಏತಕ್ಕೆ ಇಷ್ಟೊಂದು ಪ್ರೀತಿ ಇದೆ–ಎಂದರೆ : ತ್ರಿಗುಣಾತ್ಮಕವಾದ ಪ್ರಕೃತಿಗಿಂತಲೂ ಮತ್ತು ಜೀವನಿಗಿಂತಲೂ ಪರನಾಗಿ ಅವುಗಳಿಗೆ ನಿಯಾಮಕನಾಗಿರುವ ಭಗವಂತನಾದ ಶ್ರೀವಾಸು ದೇವನನ್ನು ಸಾಕ್ಷಾತ್ತಾಗಿ ಯಾವನು ಶರಣುಹೊಂದುತ್ತಾನೆಯೋ–ಅವನು ನನಗೆ ತುಂಬಾ ಪ್ರಿಯನಾಗುತ್ತಾನೆ. (ಶ್ಲೋಕ 27-28)

ಸ್ವಧರ್ಮನಿಷ್ಠಃ ಶತಜನ್ಮಭಿಃ ಪುಮಾ-
ನ್ವಿರಿಞ್ಚತಾಮೇತಿ ತತಃ ಪರಂ ಹಿ ಮಾಮ್ ।
ಅವ್ಯಾಕೃತಂ ಭಾಗವತೋಽಥ ವೈಷ್ಣವಂ
ಪದಂ ಯಥಾಹಂ ವಿಬುಧಾಃ ಕಲಾತ್ಯಯೇ ॥೨೯॥

ತನ್ನ ವರ್ಣಾಶ್ರಮಧರ್ಮವನ್ನು ಚೆನ್ನಾಗಿ ಪಾಲನೆಮಾಡುವ ಮನುಷ್ಯನು ನೂರು ಜನ್ಮಗಳ ನಂತರ ಬ್ರಹ್ಮದೇವರ ಪದವನ್ನು ಪಡೆಯುತ್ತಾನೆ. ಅದಕ್ಕಿಂತಲೂ ಹೆಚ್ಚು ಪುಣ್ಯವನ್ನು ಗಳಿಸಿದರೆ ಆತನು ನನ್ನನ್ನು ಹೊಂದುವನು. ಭಗವಂತನಲ್ಲಿ ಅನನ್ಯಭಕ್ತಿಯುಳ್ಳ ಭಾಗವತೋತ್ತಮ ನಾದರೋ ನೇರವಾಗಿ ಸರ್ವಾತೀತವಾಗಿರುವ ವಿಷ್ಣುವಿನ ಪರಮಪದವನ್ನೇ ಪಡೆಯುವನು. ನಾವೂ ಮತ್ತು ನಮ್ಮಂತಹ ಅಧಿಕಾರಿಕಪುರುಷರಾದ ದೇವತೆಗಳೂ ನಮ್ಮ-ನಮ್ಮ ಅಧಿಕಾರದ ಕಾಲವು ಮುಗಿದ ನಂತರ ಹೋಗಿ ಸೇರುವ ಪರಮೋತ್ತಮಪದವದು.

ನೀವು ಶ್ರೀಭಗವಂತನ ಮಹಾಭಕ್ತರಾಗಿರುವುದರಿಂದ ನನಗೂ ಶ್ರೀಭಗವಂತನಷ್ಟೇ ಪ್ರಿಯರಾಗಿದ್ದೀರಿ. ಅಂತೆಯೇ ಭಗವಂತನ ಭಕ್ತರಿಗೂ ನನಗಿಂತಲೂ ಪ್ರಿಯನಾದವನು ಬೇರಾವನೂ ಎಂದಿಗೂ ಇರುವುದಿಲ್ಲ. ಈಗ ನಾನು ನಿಮಗೆ ಅತ್ಯಂತಪವಿತ್ರವೂ, ಮಂಗಳಕರವೂ, ಮೋಕ್ಷಪ್ರದವೂ ಆದ ಒಂದು ಸ್ತೋತ್ರವನ್ನು ಉಪದೇಶಿಸುತ್ತೇನೆ. ಇದನ್ನು ನೀವು ಶುದ್ಧವಾದ ಭಾವದಿಂದ ಜಪಿಸಬೇಕು."

ಮೈತ್ರೇಯರು ಹೇಳುತ್ತಾರೆ :

ಆಗ ಕರುಣಾರ್ದ್ರಹೃದಯನಾದ, ನಾರಾಯಣಪರಾಯಣನಾದ ಭಗವಾನ್ ಶಂಭುವು ತನ್ನ ಮುಂದೆ ಕೈಜೋಡಿಸಿ ನಿಂತುಕೊಂಡ ಆ ರಾಜಕುಮಾರರಿಗೆ ಈ ಸ್ತೋತ್ರವನ್ನು ಉಪದೇಶಮಾಡಿದನು :

(ಶ್ಲೋಕ 29-32)

ಶ್ರೀರುದ್ರಗೀತಾ :

ರುದ್ರಭಗವಂತನು ಹೇಳುತ್ತಾನೆ :

ಜಿತಂ ತ ಆತ್ಮವಿದ್ಧುರ್ಯಸ್ವಸ್ತಯೇ ಸ್ವಸ್ತಿರಸ್ತು ಮೇ ।
ಭವತಾ ರಾಧಸಾ ರಾದ್ಧಂ ಸರ್ವಸ್ಮಾ ಆತ್ಮನೇ ನಮಃ ॥೩೩॥

"ಓ ಪರಮಾತ್ಮನೇ! ನಿನಗೆ ಜಯವಾಗಲಿ. ಆತ್ಮಜ್ಞರಿಗೆ ನಾಯಕನಾಗಿ ಅವರನ್ನು ರಕ್ಷಣೆಮಾಡುವ ಜ್ಞಾನಪ್ರಭುವೇ! ಅವರ ಕ್ಷೇಮಕ್ಕಾಗಿ ನಿನಗೆ ಜಯವಾಗಲಿ. ಇದರಿಂದ ನನಗೆ ಕ್ಷೇಮವುಂಟಾಗಲಿ. ಸಿದ್ಧಸ್ವರೂಪನಾಗಿರುವ ನಿನ್ನಿಂದಲೇ ಇದು ಸಿದ್ಧವಾಗಿದೆ. ಸರ್ವವೂ ಆಗಿ ಸರ್ವಾತ್ಮನೂ ಆಗಿರುವ ನಿನಗೆ ನಮೋ ನಮಃ.*

---

* ನಿನ್ನ ಜಯ (ಉತ್ಕರ್ಷ) ದಿಂದ ಆತ್ಮಜ್ಞಶಿರೋಮಣಿಗಳಿಗೆ ಸ್ವಾನಂದಲಾಭವುಂಟಾಗುವುದು. ಅದರಿಂದ ನನಗೆ ಸ್ವಾನಂದಲಾಭರೂಪವಾದ ಉತ್ಕರ್ಷವುಂಟಾಗಲಿ. ನೀನು ಸದಾ ನಿರತಿಶಯಪರಮಾನಂದ ರೂಪದಲ್ಲಿಯೇ ನೆಲೆಗೊಂಡಿರುವವನು. ಸರ್ವರೂಪನಾಗಿರುವ ನಿನಗೆ ನಮಸ್ಕಾರವು. (ಶ್ರೀಧರೀಯ)

ಶ್ರೀಭಗವಂತನು ಸ್ವರೂಪ, ಸ್ವಭಾವ ಮತ್ತು ಗುಣಗಳಿಂದ ಸರ್ವೋತ್ಕೃಷ್ಟನಾಗಿದ್ದಾನೆ. ಅವನು ಹೀಗೆ ಉತ್ಕೃಷ್ಟನಾಗಿರುವುದು ಭಕ್ತರ ಅನುಗ್ರಹಕ್ಕೋಸ್ಕರವೇ ಹೊರತು ಸ್ವಾರ್ಥಕ್ಕಲ್ಲ. ಆತ್ಮಜ್ಞರನ್ನು ರಕ್ಷಿಸುವ ಪ್ರಭುವೇ! ಆತ್ಮವಿದ್ಧುರ್ಯ! ನಿನ್ನ ನಿರತಿಶಯವಾದ ಉತ್ಕರ್ಷವಿರುವುದು ಆತ್ಮಜ್ಞರ ಕ್ಷೇಮಕ್ಕೋಸ್ಕರವೇ ಅಥವಾ ಆತ್ಮಜ್ಞಶಿರೋಮಣಿಗಳಾದ ಯೋಗೀಶ್ವರರ ಸುಖ-ಕ್ಷೇಮಗಳಿಗೋಸ್ಕರವೇ. (ಆತ್ಮವಿದ್ಧುರ್ಯಸ್ವಸ್ತಯೇ). ಆ ನಿನ್ನ ಉಪಾಸಕರಿಗೆ ನಿನ್ನ ಅನುಭವದ ಸುಖವು ಉಂಟಾಗಲಿ. ನೀನು ಸಿದ್ಧರೂಪನಾಗಿ ಸ್ಥಿರವಾಗಿರುವುದರಿಂದ ನಿನ್ನನ್ನು ಅನುಭವಿಸುವ ನನ್ನ ಸುಖವೂ ಸ್ಥಿರವಾಗಿರುವುದು. ಸರ್ವಕ್ಕೂ ಆತ್ಮನಾಗಿ ಸರ್ವರೂಪನಾಗಿರುವ ನಿನಗೆ ನಮಸ್ಕಾರವು. (ವೀರರಾಘವೀಯ)

'ಜಿತಂ ವ ಆತ್ಮವಿದ್ಧುರ್ಯಾಃ' ಎಂದು ಪಾಠಾಂತರ. ಪರಮಾತ್ಮಜ್ಞಾನಿಗಳಲ್ಲಿ

ನಮಃ ಪಙ್ಕಜನಾಭಾಯ ಭೂತಸೂಕ್ಷ್ಮೇನ್ದ್ರಿಯಾತ್ಮನೇ ।
ವಾಸುದೇವಾಯ ಶಾನ್ತಾಯ ಕೂಟಸ್ಥಾಯ ಸ್ವರೋಚಿಷೇ ॥೩೪॥

ಜಗತ್ತಿಗೆ ಕಾರಣವಾದ ಪದ್ಮವನ್ನು ನಾಭಿಯಲ್ಲಿ ಹೊಂದಿದವನಾಗಿ, ಪಂಚಭೂತಗಳಿಗೂ, ಪಂಚತನ್ಮಾತ್ರೆಗಳಿಗೂ, ಇಂದ್ರಿಯಗಳಿಗೂ ನಿಯಾಮಕನಾಗಿ, ಪ್ರಶಾಂತನಾಗಿ, ಎಲ್ಲಕ್ಕೂ ಶಿಖರಸ್ಥಾನದಲ್ಲಿರುವ ಮೂಲ ಪುರುಷನಾಗಿ, ಸ್ವಯಂಪ್ರಕಾಶನಾಗಿರುವ ಪರಮಾತ್ಮ ವಾಸುದೇವನೇ! ನಿನಗೆ ನಮೋ ನಮಃ.*

ಸಙ್ಕರ್ಷಣಾಯ ಸೂಕ್ಷ್ಮಾಯ ದುರನ್ತಾಯಾನ್ತಕಾಯ ಚ ।
ನಮೋ ವಿಶ್ವಪ್ರಬೋಧಾಯ ಪ್ರದ್ಯುಮ್ನಾಯಾನ್ತರಾತ್ಮನೇ ॥೩೫॥

ಶ್ರೇಷ್ಠರಾದ ಪ್ರಚೇತಸರೇ! ನೀವು ಎಲ್ಲವನ್ನೂ ಜಯಿಸುವಿರಿ. ಏಕೆಂದರೆ : ನಾನು ನಿಮಗೆ ಭಗವದುಪಾಸನೆಯೆಂಬ ಸತ್ಕರ್ಮವನ್ನು ಉಪದೇಶಿಸಿದ್ದೇನೆ. ಶ್ರೀಹರಿಯಲ್ಲಿ ನಿಮಗೆ ಸದ್ಭಾವವು (ಭಕ್ತಿಯು) ದಿನ-ದಿನವೂ ಬೆಳೆಯಲಿ. ಆ ಭಕ್ತಿಯಿಂದ ನಿಮಗೆ ಸಿದ್ಧಿಯುಂಟಾಗುವುದಕ್ಕಾಗಿ ನೀವು–'ಸರ್ವನಾಗಿರುವ ಅಂದರೆ ಸವಾಂತರ್ಯಾಮಿಯಾಗಿರುವ ಶ್ರೀಭಗವಂತನಿಗೆ ನಮಸ್ಕಾರಮಾಡುವುದಷ್ಟೇ ಶಕ್ಯ' ಎಂದು ಸಂಕಲ್ಪಮಾಡಿ ಭಕ್ತಿಯನ್ನು ಬೆಳೆಸಿಕೊಳ್ಳಿರಿ. 'ಸರ್ವ' ಶಬ್ದಕ್ಕೆ 'ಸರ್ವಾಂತರ್ಯಾಮೀ' ಎಂದು ಅರ್ಥಮಾಡಬೇಕೇ ಹೊರತು ಸರ್ವಸ್ವರೂಪ, ಜಗದಾತ್ಮ–ಎಂದು ಅರ್ಥೈಸಬಾರದು. ' ಸರ್ವಾನ್ತರ್ಯಾಮಿಕತ್ವಾತ್ತು ಸರ್ವನಾಮಾ ಜನಾರ್ದನಃ । ನ ತು ಸರ್ವಸ್ವರೂಪತ್ವಾತ್ ಸರ್ವೇಶೇಶೋ ಹರಿರ್ಯತಃ ॥' (ವಿಜಯಧ್ವಜೀಯ) (ಶ್ಲೋಕ ೩೩)

---

* **ಭೂತಸೂಕ್ಷ್ಮೇನ್ದ್ರಿಯಾತ್ಮನೇ**=ಪಂಚಭೂತಗಳಿಗೂ, ಪಂಚತನ್ಮಾತ್ರೆಗಳಿಗೂ, ಕಿವಿಯೇ ಮುಂತಾದ ಇಂದ್ರಿಯಗಳಿಗೂ ಪತಿಯಾಗಿ ಅವುಗಳನ್ನು ವ್ಯಾಪಿಸಿರುವವನಿಗೆ. (ವಿಜಯಧ್ವಜೀಯ)

ಈ ಪದಕ್ಕೆ ಭೂತಸೂಕ್ಷ್ಮ (ತನ್ಮಾತ್ರೆ) ಗಳಿಗೂ ಮತ್ತು ಇಂದ್ರಿಯಗಳಿಗೂ ಆತ್ಮಭೂತನಾದವನಿಗೆ–ಎಂದು ಶ್ರೀಧರಾಚಾರ್ಯರೇ ಮುಂತಾದವರು ಅರ್ಥೈಸಿರುತ್ತಾರೆ.

ಸೂಕ್ಷ್ಮಾಯ = ನಾಮ-ರೂಪ ವಿಭಾಗಕ್ಕೆ ಅನರ್ಹವಾದ ಸೂಕ್ಷ್ಮಚಿದಚಿದ್ವಿಶಿಷ್ಟನಾದವನಿಗೆ. (ವೀರರಾಘವೀಯ)

ನಮೋ ನಮೋಽನಿರುದ್ಧಾಯ ಹೃಷೀಕೇಶೇನ್ದ್ರಿಯಾತ್ಮನೇ ।
ನಮಃ ಪರಮಹಂಸಾಯ ಪೂರ್ಣಾಯ ನಿಭೃತಾತ್ಮನೇ ॥೩೬॥

ಸ್ವರ್ಗಾಪವರ್ಗದ್ವಾರಾಯ ನಿತ್ಯಂ ಶುಚಿಷದೇ ನಮಃ ।
ನಮೋ ಹಿರಣ್ಯವೀರ್ಯಾಯ ಚಾತುರ್ಹೋತ್ರಾಯ ತನ್ತವೇ ॥೩೭॥

ಸೂಕ್ಷ್ಮ (ಅವ್ಯಕ್ತ) ರೂಪಿಯೂ, ಅಂತರಹಿತನೂ, ಸರ್ವಸಂಹಾರಕನೂ ಆಗಿರುವ ಸಂಕರ್ಷಣರೂಪಿಯಾದ ನಿನಗೆ ನಮಸ್ಕಾರವು. ವಿಶ್ವವನ್ನು ಎಚ್ಚರಗೊಳಿಸುವ, ವಿಶ್ವಕ್ಕೆ ಅಂತರಾತ್ಮನಾಗಿರುವ ಪ್ರದ್ಯುಮ್ನರೂಪಿಯಾದ ನಿನಗೆ ನಮಸ್ಕಾರವು. ಇಂದ್ರಿಯಗಳಿಗೆ ಅಧಿಪತಿಯಾಗಿ ಅವುಗಳಿಗೆ ಆತ್ಮನಾಗಿರುವ ಅನಿರುದ್ಧರೂಪಿಯಾದ ನಿನಗೆ ನಮಸ್ಕಾರವು.* ಪರಿಪೂರ್ಣನಾಗಿ, ನಿಶ್ಚಲನಾಗಿ, ಸ್ವರ್ಗ-ಮೋಕ್ಷಗಳೆರಡಕ್ಕೂ ದ್ವಾರವಾಗಿರುವ ಜ್ಞಾನಾಕಾಶಸ್ಥನಾದ, ಜ್ಞಾನಸೂರ್ಯಸ್ವರೂಪಿಯಾದ ನಿನಗೆ ನಮಸ್ಕಾರವು.

ಶಾನ್ತಾಯ = ಹಸಿವು, ಬಾಯಾರಿಕೆ, ಶೋಕ, ಮೋಹ, ಮುಪ್ಪು, ಸಾವು–ಎಂಬ ಆರು ಊರ್ಮಿಗಳು ಇಲ್ಲದವನಿಗೆ... ಶ್ರೀಭಗವಂತನು ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ–ಎಂಬ ವ್ಯೂಹಗಳಿಂದಲೂ ಜಗತ್ತನ್ನು ರಕ್ಷಿಸುತ್ತಾನೆ.
(ವೀರರಾಘವೀಯ)

ಕೂಟಸ್ಥಃ = ವೃದ್ಧಿ- ಕ್ಷಯಾದಿ ವಿಕಾರಗಳಿಲ್ಲದವನಿಗೆ. (ಶ್ರೀಧರೀಯ) (ಶ್ಲೋಕ ೩೪)

* **ದುರನ್ತಾಯ** = ಅಂತತ್ರಯರಹಿತನಾದ, **ವಿಶ್ವಪ್ರಬೋಧಾಯ** = ಪೂರ್ಣಜ್ಞಾನಿಯಾದ ಅಥವಾ ವಿಶ್ವಕ್ಕೆ ಜ್ಞಾನವನ್ನುಂಟುಮಾಡುವ, ಹೃಷೀಕೇಶೇನ್ದ್ರಿಯಾತ್ಮನೇ = ಹೃಷೀಕೇಶನ ಅಂದರೆ : ಇಂದ್ರಿಯಗಳಿಗೆ ಅಧಿಪತಿಯಾಗಿರುವ ಜೀವನ ಇಂದ್ರಿಯಗಳಿಗೆ ಆತ್ಮನಾಗಿರುವ ಭಗವಂತನಿಗೆ ಅಥವಾ ಹೃಷೀಕೇಶನೂ (ಇಂದ್ರಿಯಾಧಿಪತಿಯೂ) ಮತ್ತು ಇಂದ್ರನಲ್ಲಿ ಏನೇನುಂಟೋ ಅವೆಲ್ಲಕ್ಕೂ ಸ್ವಾಮಿಯೂ ಆಗಿರುವ ಭಗವಂತನಿಗೆ.
(ವಿಜಯಧ್ವಜೀಯ)

ಶುಚಿಷದೇ = ಅಂತಃಕರಣದಲ್ಲಿರುವ. (ಶ್ರೀಧರೀಯ)

ಯೋಗಿಗಳ ಚಿತ್ತದಲ್ಲಿರುವ. (ವೀರರಾಘವೀಯ)

ಅಗ್ನಿಯಲ್ಲಿರುವ. (ವಿಜಯಧ್ವಜೀಯ)

'**ಹಗ್ಂ ಸಶ್ಶುಚಿಷತ್** ' ಎಂಬ ಮಹಾನಾರಾಯಣೀಯ ಮಂತ್ರದಲ್ಲಿ ಶುಚಿಷತ್– ಎಂಬ ಶಬ್ದಕ್ಕೆ 'ಆಕಾಶದಲ್ಲಿರುವ' ಎಂದು ಭಾಷ್ಯವಿದೆ.

ಸುವರ್ಣವನ್ನು ವೀರ್ಯವನ್ನಾಗಿ ಹೊಂದಿರುವವನೂ ಚಾತುರ್ಮಾಸ್ಯವೇ ಮುಂತಾದ ಯಜ್ಞಗಳಿಗೆ ಸಾಧನವಾಗಿ ಅವುಗಳನ್ನು ವಿಸ್ತರಿಸುವವನೂ ಆಗಿರುವ ಅಗ್ನಿದೇವಸ್ವರೂಪಿಯಾದ ನಿನಗೆ ನಮಸ್ಕಾರವು.

ನಮ ಊರ್ಜ ಇಷೇ ತ್ರಯ್ಯಾಃ ಪತಯೇ ಯಜ್ಞರೇತಸೇ ।
ತೃಪ್ತಿದಾಯ ಚ ಜೀವಾನಾಂ ನಮಃ ಸರ್ವರಸಾತ್ಮನೇ ॥೩೮॥

ಸರ್ವಸತ್ತ್ವಾತ್ಮದೇಹಾಯ ವಿಶೇಷಾಯ ಸ್ಥವೀಯಸೇ ।
ನಮಸ್ತ್ರೈಲೋಕ್ಯಪಾಲಾಯ ಸಹ ಓಜೋಬಲಾಯ ಚ ॥೩೯॥

ದೇವತೆಗಳಿಗೂ, ಪಿತೃಗಳಿಗೂ ಬಲವೂ ಅನ್ನವೂ ಆಗಿರುವ ಸೋಮರೂಪಿಗೆ ನಮಸ್ಕಾರವು. ವೇದಗಳಿಗೆ ಪತಿಯಾದ ಯಜ್ಞೇಶನಿಗೆ ನಮಸ್ಕಾರವು. ಎಲ್ಲ ಜೀವಿಗಳಿಗೂ ತೃಪ್ತಿಯನ್ನುಂಟುಮಾಡುವ ಸರ್ವರಸ (ಜಲ) ರೂಪಿಯಾದ ಸ್ವಾಮಿಗೆ ನಮಸ್ಕಾರವು. ಎಲ್ಲ ಪ್ರಾಣಿಗಳಿಗೂ ನೆಲೆಯಾಗಿರುವ ಸ್ಥೂಲವಿರಾಟ್‌ಪುರುಷರೂಪಿಗೆ, ಮೂರೂ ಲೋಕಗಳ ಪಾಲಕನಿಗೆ, ಇಂದ್ರಿಯಶಕ್ತಿ, ಪ್ರಾಣಶಕ್ತಿ ಮತ್ತು ದೇಹಶಕ್ತಿರೂಪನಿಗೆ ನಮೋ

ವಾಸುದೇವನನ್ನು ಚಿತ್ತಕ್ಕೂ, ಸಂಕರ್ಷಣನನ್ನು ಅಹಂಕಾರಕ್ಕೂ, ಪ್ರದ್ಯುಮ್ನನನ್ನು ಬುದ್ಧಿತತ್ತ್ವಕ್ಕೂ, ಅನಿರುದ್ಧನನ್ನು ಮನಸ್ತತ್ತ್ವಕ್ಕೂ ಅಧಿಷ್ಠಾತೃಗಳನ್ನಾಗಿ ಹೇಳಿದೆ. ಆದರೆ ಶ್ರೀಶಂಕರಾಚಾರ್ಯರ ಬ್ರಹ್ಮಸೂತ್ರಭಾಷ್ಯದಲ್ಲಿ (2-2-42 ಉತ್ಪತ್ತ್ಯಧಿಕರಣದಲ್ಲಿ) ಭಾಗವತಮತವನ್ನು ಅನುವಾದಮಾಡುವಾಗ ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರನ್ನು ಕ್ರಮವಾಗಿ ಜೀವ, ಮನಸ್ಸು, ಅಹಂಕಾರಗಳನ್ನಾಗಿಯೂ–ವಾಸುದೇವನನ್ನು ಪರಮಾತ್ಮನನ್ನಾಗಿಯೂ ಹೇಳಿದೆ. '**ವಾಸುದೇವೋ ನಾಮ ಪರಮಾತ್ಮೋಚ್ಯತೇ । ಸಙ್ಕರ್ಷಣೋ ನಾಮ ಜೀವಃ । ಪ್ರದ್ಯುಮ್ನೋ ನಾಮ ಮನಃ । ಅನಿರುದ್ಧೋ ನಾಮ ಅಹಂಕಾರಃ । ತೇಷಾಂ ವಾಸುದೇವಃ ಪರಾಪ್ರಕೃತಿಃ ॥**' ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರೂ ಶ್ರೀಭಗವಂತನ ಅವತಾರಗಳೆಂದೂ ಅವರು ಕ್ರಮವಾಗಿ ಜೀವ-ಮನಸ್ಸು-ಅಹಂಕಾರಗಳಿಗೆ ಅಧಿಷ್ಠಾತೃದೇವತೆಗಳೆಂದೂ ಶ್ರೀಭಾಷ್ಯಕಾರರು ನಿರೂಪಿಸುತ್ತಾರೆ. ಈ ನಾಲ್ಕರ ವ್ಯೂಹದಲ್ಲಿ ವಾಸುದೇವನಿಗೆ ಜ್ಞಾನ, ಬಲ, ಐಶ್ವರ್ಯ, ವೀರ್ಯ, ಶಕ್ತಿ, ತೇಜಸ್ಸು ಎಂಬ ಆರು ಗುಣಗಳೂ ಇರುತ್ತವೆ. ಉಳಿದವರಲ್ಲಿ ಕ್ರಮವಾಗಿ ಎರಡೆರಡು ಗುಣಗಳು ಇರುತ್ತವೆಯೆಂದು ಆಗಮಶಾಸ್ತ್ರವು ಹೇಳುತ್ತದೆ. (ಶ್ರೀಧರೀಯ) (ಶ್ಲೋಕ ೩೫-೩೬)

ನಮಃ. ಈ ಮುಬ್ಬಗೆಯ ಬಲಗಳಿಗೆ ನೆಲೆಯಾಗಿರುವ ವಾಯುರೂಪಿಗೆ ನಮಸ್ಕಾರವು.

ಅರ್ಥಲಿಙ್ಗಾಯ ನಭಸೇ ನಮೋಽನ್ತರ್ಬಹಿರಾತ್ಮನೇ ।
ನಮಃ ಪುಣ್ಯಾಯ ಲೋಕಾಯ ಅಮುಷ್ಮೈ ಭೂರಿವರ್ಚಸೇ ॥೪೦॥

ತನಗೆ ಗುಣವಾಗಿರುವ ಶಬ್ದದಿಂದ ಪದಾರ್ಥಗಳ ಅರಿವನ್ನುಂಟು ಮಾಡುತ್ತಾ ಒಳಗೂ-ಹೊರಗೂ ತುಂಬಿಕೊಂಡಿರುವ, ಮಹಾತೇಜೋ ಮಯವಾದ, ಪುಣ್ಯಲೋಕಗಳಿಗೆ ಆಧಾರವಾಗಿರುವ ಆಕಾಶರೂಪಿಗೆ ನಮಸ್ಕಾರವು. ಇಂದ್ರಿಯಗಳಿಗೆ ಗೋಚರನಾಗದೇ ಇಂದ್ರಿಯವಿಷಯಗಳ ಮೂಲಕ ಜನಸಾಮಾನ್ಯರಿಂದ ಊಹಿಸಿ ತಿಳಿಯಲ್ಪಡುವವನೂ, ಒಳಗೂ ಹೊರಗೂ ತುಂಬಿಕೊಂಡಿರುವವನೂ, ಮಹಾತೇಜೋಮಯನೂ, ಪರಮ ವೈಕುಂಠರೂಪಿಯೂ, ಪುಣ್ಯದರ್ಶನನೂ ಆದ ಜ್ಞಾನಾಕಾಶರೂಪಿಯಾದ ಪರಮಾತ್ಮನಿಗೆ ನಮಸ್ಕಾರವು.

ಪ್ರವೃತ್ತಾಯ ನಿವೃತ್ತಾಯ ಪಿತೃದೇವಾಯ ಕರ್ಮಣೇ ।
ನಮೋಽಧರ್ಮವಿಪಾಕಾಯ ಮೃತ್ಯವೇ ದುಃಖದಾಯ ಚ ॥೪೧॥

ಪಿತೃಲೋಕಕ್ಕೆ ಒಯ್ಯುವ ಪ್ರವೃತ್ತಿ (ಸಕಾಮ) ಕರ್ಮರೂಪಿಯೂ ನಿವೃತ್ತಿ (ನಿಷ್ಕಾಮ) ಕರ್ಮರೂಪಿಯೂ, ಈ ಇಬ್ಬಗೆಯ ಧರ್ಮಗಳ ಮೂರ್ತಿಯಾಗಿರುವಂತೆಯೇ ಅಧರ್ಮದ ಫಲವಾಗಿ ದುಃಖವನ್ನುಂಟು ಮಾಡುವ ಮೃತ್ಯುರೂಪಿಯೂ ಆಗಿ ಧರ್ಮಾಧರ್ಮಗಳೆರಡಕ್ಕೂ ನಿಯಾಮಕನಾಗಿರುವ ದೇವನಿಗೆ ನಮಸ್ಕಾರವು.

ನಮಸ್ತ ಆಶಿಷಾಮೀಶ ಮನವೇ ಕಾರಣಾತ್ಮನೇ ।
ನಮೋ ಧರ್ಮಾಯ ಬೃಹತೇ ಕೃಷ್ಣಾಯಾಕುಣ್ಠಮೇಧಸೇ ।
ಪುರುಷಾಯ ಪುರಾಣಾಯ ಸಾಂಖ್ಯಯೋಗೇಶ್ವರಾಯ ಚ ॥೪೨॥

ಶಕ್ತಿತ್ರಯಸಮೇತಾಯ ಮೀಢುಷೇಽಹಂಕೃತಾತ್ಮನೇ ।
ಚೇತಆಕೂತಿರೂಪಾಯ ನಮೋ ವಾಚೋವಿಭೂತಯೇ ॥೪೩॥

ಕಾಮನೆಗಳನ್ನು ಪೂರ್ಣಗೊಳಿಸಲು ಕಾರಣನಾದವನೇ! ಮಂತ್ರ

ರೂಪಿಯೇ! ಮಹಾಧರ್ಮಸ್ವರೂಪಿಯೂ, ಕುಂದಿಸಲಾಗದ–ಎದುರಿಸಲಾಗದ ಮೇಧೆಯುಳ್ಳವನೂ, ಪುರಾಣಪುರುಷನೂ, ಸಾಂಖ್ಯ ಮತ್ತು ಯೋಗಗಳಿಗೆ ಈಶ್ವರನೂ ಆಗಿರುವ ಶ್ರೀಕೃಷ್ಣಸ್ವರೂಪಿಯಾದ ನಿನಗೆ ನಮಸ್ಕಾರವು. ಜ್ಞಾನಶಕ್ತಿ, ಇಚ್ಛಾಶಕ್ತಿ ಮತ್ತು ಕ್ರಿಯಾಶಕ್ತಿಗಳಿಂದ ಕೂಡಿದ, ಮಹಾವೀರ್ಯಶಾಲಿಯಾಗಿ ಅಹಂಕಾರತತ್ತ್ವಕ್ಕೆ ಅಧಿಪತಿಯಾದ ರುದ್ರರೂಪಿಯೂ–ಜ್ಞಾನ-ಕ್ರಿಯೆಗಳಿಗೆ ಅಧಿಪತಿಯಾದ ಬ್ರಹ್ಮರೂಪಿಯೂ– ಪರಾ, ಪಶ್ಯನ್ತೀ, ಮಧ್ಯಮಾ, ವೈಖರೀ–ಎಂಬ ನಾಲ್ಕು ಬಗೆಯ ವಾಣೀ ಪ್ರಕಾರನೂ–ಆಗಿರುವ ನಿನಗೆ ನಮಸ್ಕಾರವು.

ದರ್ಶನಂ ನೋ ದಿದೃಕ್ಷೂಣಾಂ ದೇಹಿ ಭಾಗವತಾರ್ಚಿತಮ್ ।
ರೂಪಂ ಪ್ರಿಯತಮಂ ಸ್ವಾನಾಂ ಸರ್ವೇನ್ದ್ರಿಯಗುಣಾಞ್ಜನಮ್ ॥

ನಿನ್ನ ದಿವ್ಯಮಂಗಳವಿಗ್ರಹವನ್ನು ನೋಡಬೇಕೆಂದು ಹಂಬಲಿಸುತ್ತಿರುವ ನಮಗೆ–ಭಾಗವತಶ್ರೇಷ್ಠರಿಂದ ಪೂಜಿತವಾಗಿ, ಆತ್ಮೀಯಭಕ್ತರಿಗೆ ಅತ್ಯಂತಪ್ರಿಯತಮವಾಗಿ, ಎಲ್ಲ ಇಂದ್ರಿಯಗಳಿಗೂ ತೃಪ್ತಿಯನ್ನುಂಟು ಮಾಡುವ ಗುಣಗಳಿಂದ ಸಂಪನ್ನವಾಗಿರುವ ಆ ದಿವ್ಯಮೂರ್ತಿಯ ದರ್ಶನವನ್ನು ದಯಪಾಲಿಸು ಪ್ರಭುವೇ!

ಸ್ನಿಗ್ಧಪ್ರಾವೃಡ್ಘನಶ್ಯಾಮಂ ಸರ್ವಸೌನ್ದರ್ಯಸಂಗ್ರಹಮ್ ।
ಚಾರ್ವಾಯತಚತುರ್ಬಾಹುಂ ಸುಜಾತರುಚಿರಾನನಮ್ ॥೪೫॥

ಪದ್ಮಕೋಶಪಲಾಶಾಕ್ಷಂ ಸುನ್ದರಭ್ರುಸುನಾಸಿಕಮ್ ।
ಸುದ್ವಿಜಂ ಸುಕಪೋಲಾಸ್ಯಂ ಸಮಕರ್ಣವಿಭೂಷಣಮ್ ॥೪೬॥

ಪ್ರೀತಿಪ್ರಹಸಿತಾಪಾಙ್ಗಮಲಕೈರುಪಶೋಭಿತಮ್ ।
ಲಸತ್ಪಙ್ಕಜಕಿಞ್ಜಲ್ಕದುಕೂಲಂ ಮೃಷ್ಟಕುಣ್ಡಲಮ್ ॥೪೭॥

ಸ್ಫುರತ್ಕಿರೀಟವಲಯಹಾರನೂಪುರಮೇಖಲಮ್ ।
ಶಙ್ಖಚಕ್ರಗದಾಪದ್ಮಮಾಲಾಮಣ್ಯುತ್ತಮರ್ಧಿಮತ್ ॥೪೮॥

ಸಿಂಹಸ್ಕನ್ಧತ್ವಿಷೋ ಬಿಭ್ರತ್ಸೌಭಗಗ್ರೀವಕೌಸ್ತುಭಮ್ ।
ಶ್ರಿಯಾನಪಾಯಿನ್ಯಾಕ್ಷಿಪ್ತನಿಕಷಾಶ್ಮೋರಸೋಲ್ಲಸತ್ ॥೪೯॥

ಪೂರರೇಚಕಸಂವಿಗ್ನವಲಿವಲ್ಗುದಲೋದರಮ್ ।
ಪ್ರತಿಸಂಕ್ರಾಮಯದ್ವಿಶ್ವಂ ನಾಭ್ಯಾವರ್ತಗಭೀರಯಾ ॥೫೦॥

ಶ್ಯಾಮಶ್ರೋಣ್ಯಧಿರೋಚಿಷ್ಣುದುಕೂಲಸ್ವರ್ಣಮೇಖಲಮ್ ।
ಸಮಚಾರ್ವಙ್ಘ್ರಿಜಙ್ಘೋರುನಿಮ್ನಜಾನುಸುದರ್ಶನಮ್ ॥೫೧॥

ಪದಾ ಶರತ್ಪದ್ಮಪಲಾಶರೋಚಿಷಾ
ನಖದ್ಯುಭಿರ್ನೋಽನ್ತರಘಂ ವಿಧುನ್ವತಾ ।
ಪ್ರದರ್ಶಯ ಸ್ವೀಯಮಪಾಸ್ತಸಾಧ್ವಸಂ
ಪದಂ ಗುರೋ ಮಾರ್ಗಗುರುಸ್ತಮೋಜುಷಾಮ್ ॥೫೨॥

ಆ ನಿನ್ನ ದಿವ್ಯಮಂಗಳವಿಗ್ರಹವಾದರೋ ಕಾರ್ಮುಗಿಲಿನಂತೆ ತೇವದ ಹೊಳಪಿನಿಂದಲೂ ನೀಲವರ್ಣದಿಂದಲೂ ಕಂಗೊಳಿಸುತ್ತಾ ಸಮಸ್ತ ಸೌಂದರ್ಯದ ಸಾರಸಂಗ್ರಹವಾಗಿದೆ. ಮನೋಹರವಾದ ನಾಲ್ಕು ನಿಡು ದೋಳುಗಳು, ಚೆಲುವಿನ ನೆಲೆಮನೆಯಾದ ಮುಖಾರವಿಂದ, ಕಮಲದಳ ದಂತಹ ಕಣ್ಣುಗಳು, ಸುಂದರವಾದ ಹುಬ್ಬುಗಳು, ಎಸಳಾದ ಮೂಗು, ಮೋಹಕವಾದ ಸುಲಿಹಲ್ಲುಗಳು, ಕಮನೀಯವಾದ ಕೆನ್ನೆಗಳು ಮತ್ತು ನಗೆ ಮೊಗ, ಸಮವಾಗಿ ಶೋಭಿಸುತ್ತಿರುವ ಎರಡು ಕಿವಿಗಳಲ್ಲಿ ಧರಿಸಿರುವ ಆಭರಣಗಳು, ಪ್ರೀತಿಯಿಂದ ನಗುವನ್ನು ಸೂಸುವಂತಿರುವ ಕಡೆಗಣ್ಣು ನೋಟಗಳು, ಮೆರೆಯುತ್ತಿರುವ ಮುಂಗುರುಳುಗಳು, ಕಮಲಪುಷ್ಪದ ಕೇಸರಗಳಂತೆ ಕಾಂತಿಕಿರಣಗಳನ್ನು ಚೆಲ್ಲುತ್ತಿರುವ ಪೀತಾಂಬರ, ಥಳ-ಥಳಿ ಸುವ ಕುಂಡಲಗಳು, ಮಿರುಗುತ್ತಿರುವ ಕಿರೀಟ, ಕಂಕಣ, ಹಾರ, ಕಾಲಂದುಗೆ, ಒಡ್ಯಾಣಗಳೇ ಮುಂತಾದ ಚಿತ್ರ-ವಿಚಿತ್ರವಾದ ಬಗೆ-ಬಗೆಯ ಆಭರಣಗಳು ಮತ್ತು ಶಂಖ, ಚಕ್ರ, ಗದಾ, ಪದ್ಮ, ವನಮಾಲೆ ಮತ್ತು ಕೌಸ್ತುಭಮಣಿ– ಇವುಗಳು ಅಪೂರ್ವವಾದ ಕಾಂತಿಯಿಂದ ಕಂಗೊಳಿಸುತ್ತಿವೆ. ಸಿಂಹದ ಹೆಗಲನ್ನು ಹೋಲುವ ಉಬ್ಬಿದ ಹೆಗಲಿನ ಸೊಗಸು, ಸುಂದರವಾದ ಕೊರಳಿ ನಲ್ಲಿ ಹೊಳೆಯುತ್ತಿರುವ ಹಾರ ಮತ್ತು ಕೌಸ್ತುಭಮಣಿಗಳ ಕಾಂತಿ, ಶ್ರೀಲಕ್ಷ್ಮೀ ದೇವಿಗೆ ನಿತ್ಯನಿವಾಸಮಂದಿರವಾಗಿ ಶ್ರೀವತ್ಸಚಿಹ್ನೆಯಿಂದ ಮಿರುಗುತ್ತಿರುವ

ವಿಶಾಲವಾದ ವಕ್ಷಃಸ್ಥಳ ಇವು ಕಣ್ಣುಗಳಿಗೆ ಹಬ್ಬವಾಗಿವೆ. ಉಚ್ಛ್ವಾಸ-ನಿಃಶ್ವಾಸಗಳ ಏರಿಳಿತಗಳಿಂದ ಚಲಿಸುತ್ತಿರುವ ತ್ರಿವಳಿಗಳಿಂದ ಒಪ್ಪುತ್ತಿರುವ ತೆಳುವಾದ ಹೊಟ್ಟೆಯಲ್ಲಿ ತನ್ನಿಂದ ಹೊರಬಂದ ವಿಶ್ವವನ್ನು ಮತ್ತೆ ತನ್ನಲ್ಲಿಯೇ ಲಯಗೊಳಿಸಿಕೊಂಡಿದೆಯೋ ಎಂಬಂತಿರುವ ಆಳವಾದ ಸುಳಿನಾಭಿಯು ಶೋಭಿಸುತ್ತಿದೆ. ಶ್ಯಾಮಲವಾದ ನಡುವಿನಲ್ಲಿ ಪೀತಾಂಬರವೂ ಉಡಿದಾರವೂ ರಾರಾಜಿಸುತ್ತಿವೆ. ಪರಸ್ಪರ ಸಮನಾಗಿರುವ ಸುಂದರವಾದ ಪಾದಗಳು, ಮೇಗಾಲು, ಮೊಣಕಾಲು ಮತ್ತು ತೊಡೆಗಳಿಂದ ರಮಣೀಯವಾಗಿರುವ ಶ್ರೀದೇಹ ಮತ್ತು ಶರತ್ಕಾಲದ ಕಮಲದಳದ ಕಾಂತಿಯನ್ನೂ ನಾಚಿಸುವ ಅಡಿದಾವರೆಗಳು, ಅದರಲ್ಲಿ ರಾರಾಜಿಸುತ್ತಿರಲು ಆ ಕಾಲುಗುರುಗಳಿಂದ ಹೊರಹೊಮ್ಮುತ್ತಿರುವ ಪ್ರಕಾಶವು ಜೀವರ ಹೃದಯದ ಕತ್ತಲೆಯನ್ನು ತೊಡೆದುಹಾಕುತ್ತಿದೆ. ಭಕ್ತರ ಭಯವನ್ನು ನೀಗಿಸಿ ಅವರಿಗೆ ಆಶ್ರಯಸ್ವರೂಪವಾಗಿರುವ ಇಂತಹ ನಿನ್ನ ದಿವ್ಯರೂಪದ ದರ್ಶನವನ್ನು ದಯಪಾಲಿಸು, ಮಹಾದೇವ! ಜಗದ್ಗುರುವೇ! ಅಜ್ಞಾನದ ಇರುಳಿನಲ್ಲಿ ದಾರಿಗಾಣದೇ ತತ್ತರಿಸುತ್ತಿರುವ ನಮ್ಮಂತಹ ಬಡಜೀವಿಗಳಿಗೆ ದಾರಿತೋರಿಸುವ ಗುರು ನೀನೇ ಅಲ್ಲವೇ!

ಏತದ್ರೂಪಮನುಧ್ಯೇಯಮಾತ್ಮಶುದ್ಧಿಮಭೀಪ್ಸತಾಮ್ ।
ಯದ್ಭಕ್ತಿಯೋಗೋऽಭಯದಃ ಸ್ವಧರ್ಮಮನುತಿಷ್ಠತಾಮ್ ॥೫೩॥

ಆತ್ಮಶುದ್ಧಿಯನ್ನು ಬಯಸುವವನು–ಇಂತಹ ನಿನ್ನ ದಿವ್ಯಮೂರ್ತಿಯನ್ನೇ ಧ್ಯಾನಿಸಬೇಕು. ಇದರಲ್ಲಿ ನೆಲೆಗೊಂಡ ಭಕ್ತಿಯೋಗವು ತಾನೇ ಸ್ವಧರ್ಮಾಚರಣೆಯನ್ನು ಮಾಡುವವರಿಗೆ ಅಭಯವನ್ನು ನೀಡುವುದು!

ಭವಾನ್ಭಕ್ತಿಮತಾ ಲಭ್ಯೋ ದುರ್ಲಭಃ ಸರ್ವದೇಹಿನಾಮ್ ।
ಸ್ವಾರಾಜ್ಯಸ್ಯಾಪ್ಯಭಿಮತ ಏಕಾನ್ತೇನಾತ್ಮವಿದ್ಗತಿಃ ॥೫೪॥

ಇತರ ಎಲ್ಲ ದೇಹಿಗಳಿಗೂ ದುರ್ಲಭನಾಗಿದ್ದರೂ–ನೀನು ಭಕ್ತರಿಗೆ ಸುಲಭವಾಗಿ ದೊರೆಯುವೆ. ಸ್ವರ್ಗರಾಜ್ಯದಲ್ಲಿರುವ ಇಂದ್ರಾದಿಗಳೂ ನಿನ್ನನ್ನು ಬಯಸುವರು. ಏಕಾಂತಭಾವವುಳ್ಳ ಆತ್ಮಜ್ಞರಿಗೆ ನೀನೇ ಗತಿಯಲ್ಲವೇ?

ತಂ ದುರಾರಾಧ್ಯಮಾರಾಧ್ಯ ಸತಾಮಪಿ ದುರಾಪಯಾ ।
ಏಕಾನ್ತಭಕ್ತ್ಯಾ ಕೋ ವಾಞ್ಛೇತ್ಪಾದಮೂಲಂ ವಿನಾ ಬಹಿಃ ॥೫೫॥

ಸತ್ಪುರುಷರಿಗೂ ದುರ್ಲಭವಾಗಿರುವ ನಿನ್ನನ್ನು ಅನನ್ಯವಾದ ಮತ್ತು ದುಸ್ಸಾಧ್ಯವಾದ ಭಕ್ತಿಯಿಂದ ಪ್ರಸನ್ನಗೊಳಿಸಿದ ಬಳಿಕ ಆ ನಿನ್ನ ಪಾದ ಕಮಲಗಳನ್ನು ಬಿಟ್ಟು ಬೇರಾವುದನ್ನಾದರೂ ಯಾವನು ತಾನೇ ಬಯಸಿ ಯಾನು?

ಯತ್ರ ನಿರ್ವಿಷ್ಟಮರಣಂ ಕೃತಾನ್ತೋ ನಾಭಿಮನ್ಯತೇ ।
ವಿಶ್ವಂ ವಿಧ್ವಂಸಯನ್ವೀರ್ಯಶೌರ್ಯವಿಸ್ಫೂರ್ಜಿತಭ್ರುವಾ ॥೫೬॥

ವೀರ್ಯ-ಶೌರ್ಯಗಳಿಂದ ಅದುರುತ್ತಿರುವ ತನ್ನ ಹುಬ್ಬಿನಾಟ ಗಳಿಂದಲೇ ಇಡೀ ಜಗತ್ತನ್ನು ಸಂಹಾರಮಾಡುವ ಯಮನೂ ಕೂಡ ನಿನ್ನ ಅಡಿದಾವರೆಗಳಲ್ಲಿ ಶರಣುಹೊಂದಿರುವ ಪ್ರಾಣಿಗಳ ಮೇಲೆ ತನ್ನ ಅಧಿಕಾರ ವನ್ನು ನಡೆಸಲಾರನು.

ಕ್ಷಣಾರ್ಧೇನಾಪಿ ತುಲಯೇ ನ ಸ್ವರ್ಗಂ ನಾಪುನರ್ಭವಮ್ ।
ಭಗವತ್ಸಙ್ಗಿಸಙ್ಗಸ್ಯ ಮರ್ತ್ಯಾನಾಂ ಕಿಮುತಾಶಿಷಃ ॥೫೭॥

ಅಂತಹ ಭಗವದ್ಭಕ್ತರ ಸಹವಾಸಕ್ಕೆ ಯಾವುದು ತಾನೇ ಎಣೆ ಯಾದೀತು? ಆ ಸತ್ಸಂಗವು ಒಂದು ಕ್ಷಣಕಾಲ ಒದಗಿದರೂ ಅದನ್ನು ನಾನು ಸ್ವರ್ಗಕ್ಕಾಗಲೀ, ಮೋಕ್ಷಕ್ಕಾಗಲೀ ಸಾಟಿಯೆಂದು ಲೆಕ್ಕಿಸುವುದಿಲ್ಲ. ಹೀಗಿರು ವಾಗ ಮರಣಧರ್ಮವುಳ್ಳ ಮನುಷ್ಯರು ಬಯಸುವ ತುಚ್ಛವಾದ ಭೋಗಗಳಿಗೆ ಅದು ಹೇಗೆ ಸಮನಾದೀತು?

ಅಥಾನಘಾಙ್ಘ್ರೇಸ್ತವ ಕೀರ್ತಿತೀರ್ಥಯೋ-
ರನ್ತರ್ಬಹಿಃಸ್ನಾನವಿಧೂತಪಾಪ್ಮನಾಮ್ ।
ಭೂತೇಷ್ವನುಕ್ರೋಶಸುಸತ್ತ್ವಶೀಲಿನಾಂ
ಸ್ಯಾತ್ಸಙ್ಗಮೋಽನುಗ್ರಹ ಏಷ ನಸ್ತವ ॥೫೮॥

ಪ್ರಭುವೇ! ಪಾಪನಾಶಕವಾದ ಪಾದಗಳುಳ್ಳ ನಿನ್ನ ಕೀರ್ತಿಯಲ್ಲಿಯೂ ಮತ್ತು ನಿನ್ನ ಶ್ರೀಪಾದತೀರ್ಥವಾದ ಗಂಗೆಯಲ್ಲಿಯೂ ಒಳಗೂ-ಹೊರಗೂ ಮಿಂದು ಪಾಪಗಳನ್ನು ತೊಳೆದುಕೊಂಡವರಾಗಿ ಸಮಸ್ತಪ್ರಾಣಿಗಳಲ್ಲಿಯೂ

ದಯೆತೋರುವ ಪ್ರಕೃತಿ ಮತ್ತು ಗುಣ-ಶೀಲಗಳಿಂದ ಸಂಪನ್ನರಾಗಿರುವ ಭಾಗವತೋತ್ತಮರ ಸಂಗಮವು ನಮಗೆ ದೊರೆಯುತ್ತಿರಲಿ. ಇದೇ ನೀನು ನಮಗೆ ತೋರಬೇಕಾದ ಅನುಗ್ರಹ.

ನ ಯಸ್ಯ ಚಿತ್ತಂ ಬಹಿರರ್ಥವಿಭ್ರಮಂ
ತಮೋಗುಹಾಯಾಂ ಚ ವಿಶುದ್ಧಮಾವಿಶತ್ ।
ಯದ್ಭಕ್ತಿಯೋಗಾನುಗೃಹೀತಮಞ್ಜಸಾ
ಮುನಿರ್ವಿಚಷ್ಟೇ ನನು ತತ್ರ ತೇ ಗತಿಮ್ ॥೫೯॥

ಯಾವನ ಚಿತ್ತವು ನಿನ್ನನ್ನು ಕುರಿತ ಭಕ್ತಿಯೋಗದಿಂದ ಅನುಗ್ರಹಿಸಲ್ಪಟ್ಟು ಪರಿಶುದ್ಧವಾಗಿ ಹೊರಗಿನ ವಿಷಯಗಳಲ್ಲಿ ಅಲೆದಾಡುವುದಿಲ್ಲವೋ ಮತ್ತು ಅಜ್ಞಾನದ ಗುಹೆಯಾಗಿರುವ ಪ್ರಕೃತಿಯಲ್ಲಿಯೂ ಪ್ರವೇಶಮಾಡುವುದಿಲ್ಲವೋ–ಅಂತಹ ಮುನಿಯು ತಾನೇ ಶೀಘ್ರದಲ್ಲಿ ಆಯಾಸವಿಲ್ಲದೆಯೇ ನಿನ್ನ ಸ್ವರೂಪವನ್ನು ತಿಳಿಯಬಲ್ಲನು?

ಯತ್ರೇದಂ ವ್ಯಜ್ಯತೇ ವಿಶ್ವಂ ವಿಶ್ವಸ್ಮಿನ್ನವಭಾತಿ ಯತ್ ।
ತತ್ತ್ವಂ ಬ್ರಹ್ಮ ಪರಂ ಜ್ಯೋತಿರಾಕಾಶಮಿವ ವಿಸ್ತೃತಮ್ ॥೬೦॥

ಈ ವಿಶ್ವವೆಲ್ಲವೂ ಯಾವುದರಲ್ಲಿ ಅಭಿವ್ಯಕ್ತವಾಗಿದೆಯೋ ಮತ್ತು ಯಾವುದು ಈ ಇಡೀ ವಿಶ್ವದಲ್ಲಿ ಬೆಳಗುತ್ತಿದೆಯೋ–ಆ ಆಕಾಶದಂತೆ ಸರ್ವವ್ಯಾಪಕವೂ ಪರಮಪ್ರಕಾಶಮಯವೂ ಆಗಿರುವ ಪರಬ್ರಹ್ಮ-ಪರಂಜ್ಯೋತಿಯೇ ನೀನಲ್ಲವೇ?

ಯೋ ಮಾಯಯೇದಂ ಪುರುರೂಪಯಾಸೃಜ-
ದ್ಬಿಭರ್ತಿ ಭೂಯಃ ಕ್ಷಪಯತ್ಯವಿಕ್ರಿಯಃ ।
ಯದ್ಭೇದಬುದ್ಧಿಃ ಸದಿವಾತ್ಮದುಃಸ್ಥಯಾ
ತಮಾತ್ಮತನ್ತ್ರಂ ಭಗವನ್ಪ್ರತೀಮಹಿ ॥೬೧॥

ಓ ಭಗವಂತನೇ! ನೀನು ನಾನಾರೂಪಗಳನ್ನು ಧರಿಸಿರುವ ಮಾಯೆಯಿಂದ ಈ ಜಗತ್ತನ್ನು ಸೃಷ್ಟಿಸಿ, ಸಲಹಿ, ಸಂಹರಿಸುತ್ತಿದ್ದರೂ–ಯಾವ ವಿಕಾರಕ್ಕೂ ಒಳಪಡದವನಾಗಿರುವೆ. ಭೇದಬುದ್ಧಿಯನ್ನುಂಟುಮಾಡುತ್ತಾ ಜಗತ್ತಿನಲ್ಲಿ ಎಲ್ಲರ ಮೇಲೂ ಪ್ರಭಾವವನ್ನು ಬೀರುತ್ತಿರುವ ಆ ಮಾಯೆಯು

ನಿನ್ನ ವಿಷಯದಲ್ಲಿ ಮಾತ್ರ ತನ್ನ ಯಾವ ಪ್ರಭಾವವನ್ನೂ ಬೀರಲಾರದು. ಏಕೆಂದರೆ : ನೀನು ಪರಮಸ್ವತಂತ್ರನು.*

ಕ್ರಿಯಾಕಲಾಪೈರಿದಮೇವ ಯೋಗಿನಃ
ಶ್ರದ್ಧಾನ್ವಿತಾಃ ಸಾಧು ಯಜನ್ತಿ ಸಿದ್ಧಯೇ ।
ಭೂತೇನ್ದ್ರಿಯಾನ್ತಃಕರಣೋಪಲಕ್ಷಿತಂ
ವೇದೇ ಚ ತನ್ತ್ರೇ ಚ ತ ಏವ ಕೋವಿದಾಃ ॥೬೨॥

ಪ್ರಭುವೇ! ಹೀಗೆ ನೀನು ಪಂಚಭೂತಗಳನ್ನೂ, ಇಂದ್ರಿಯಗಳನ್ನೂ, ಅಂತಃಕರಣಗಳನ್ನೂ ಮೀರಿದವನಾಗಿ ಅವುಗಳಿಗೆ ಪ್ರೇರಕನಾಗಿದ್ದರೂ ಅವುಗಳ ಮೂಲಕವೇ ಸೂಚಿತನಾಗುತ್ತೀಯೆ. ಇಂತಹ ನಿನ್ನನ್ನು ಕರ್ಮ ಯೋಗಿಗಳು ಶ್ರದ್ಧಾಯುಕ್ತರಾಗಿ ಫಲಸಿದ್ಧಿಗೋಸ್ಕರ ಯಜ್ಞಾದಿ ನಾನಾ ಕರ್ಮಗಳ ಮೂಲಕ ಆರಾಧಿಸುತ್ತಾರೆ. ಅಂತಹ ಯೋಗಿಗಳೇ ವೇದ ಮತ್ತು ತಂತ್ರಶಾಸ್ತ್ರಗಳಲ್ಲಿ ಪ್ರವೀಣರೆಂದು ತಿಳಿಯಬೇಕು.

ತ್ವಮೇಕ ಆದ್ಯಃ ಪುರುಷಃ ಸುಪ್ತಶಕ್ತಿ-
ಸ್ತಯಾ ರಜಃಸತ್ತ್ವತಮೋ ವಿಭಿದ್ಯತೇ ।
ಮಹಾನಹಂ ಖಂ ಮರುದಗ್ನಿವಾರ್ಧರಾಃ
ಸುರರ್ಷಯೋ ಭೂತಗಣಾ ಇದಂ ಯತಃ ॥೬೩॥

ಓ ಸರ್ವಮೂಲನಾದ ಸ್ವಾಮಿಯೇ! ನೀನೇ ಅದ್ವಿತೀಯನಾದ ಆದಿ ಪುರುಷನು. ಸೃಷ್ಟಿಗೆ ಮೊದಲು ಮಾಯಾಶಕ್ತಿಯು ನಿನ್ನಲ್ಲೇ ಅಡಗಿ ನಿದ್ರಿಸುತ್ತಿರುತ್ತದೆ. ಅನಂತರ ಸೃಷ್ಟಿಕಾಲದಲ್ಲಿ ಸತ್ತ್ವ, ರಜಸ್ಸು, ತಮಸ್ಸು–ಎಂಬ

---

* ಆಕಾಶವು ಮಡಕೆಯೇ ಮುಂತಾದುವುಗಳಲ್ಲಿ ವ್ಯಾಪಿಸಿದ್ದರೂ ಅವುಗಳ ಹಿಗ್ಗುವಿಕೆ-ಕುಗ್ಗುವಿಕೆಗಳೇ ಮುಂತಾದ ವಿಕಾರಗಳು ಆ ಆಕಾಶಕ್ಕೆ ಉಂಟಾಗುವುದಿಲ್ಲ. ಹಾಗೆಯೇ ಪರಮಾತ್ಮನು ಚಿದಚಿತ್ತುಗಳಿಂದ ಕೂಡಿದ ಜಗತ್ತಿಗೆ ಆಧಾರವಾಗಿದ್ದರೂ ಆ ಜಗತ್ತಿನ ವಿಕಾರಗಳಿಗೆ ಗುರಿಯಾಗುವುದಿಲ್ಲ. (ವೀರರಾಘವೀಯ)

ಭಗವಂತನಲ್ಲಿ ಜಗತ್ತು ಅಭಿವ್ಯಕ್ತವಾಗಿದೆ–ಎಂದು ಇಲ್ಲಿ ಹೇಳಿದೆ. ಅವ್ಯಕ್ತವಾಗುವುದು ಮೊದಲಿದ್ದ ವಸ್ತುವೇ. ಆದುದರಿಂದ ಅದರಲ್ಲಿರುವ ಭೇದವೂ ಸತ್ಯವೆಂದು ಸಿದ್ಧವಾಗುವುದು. ಆಕಾಶದೃಷ್ಟಾಂತದಿಂದ ಆತ್ಮವು ಅಪರಿಚ್ಛಿನ್ನವೆಂದು ಸೂಚಿತವಾಗುವುದು.
(ವಿಜಯಧ್ವಜೀಯ) (ಶ್ಲೋಕ ೬೧)

ಗುಣಗಳ ವಿಭಾಗವಾಗಿ ಮಹತ್ತತ್ತ್ವ, ಅಹಂಕಾರ, ಆಕಾಶ, ವಾಯು, ಅಗ್ನಿ, ಜಲ ಮತ್ತು ಭೂಮಿಗಳೆಂಬ ತತ್ತ್ವಗಳೂ, ದೇವತೆಗಳೂ, ಋಷಿಗಳೂ ಮತ್ತು ಸಮಸ್ತ ಪ್ರಾಣಿಗಳಿಂದ ಕೂಡಿದ ಈ ಜಗತ್ತೂ ಅದರಿಂದ ಉತ್ಪನ್ನವಾಗುವುದು.

ಸೃಷ್ಟಂ ಸ್ವಶಕ್ತ್ಯೇದಮನುಪ್ರವಿಷ್ಟ-
ಶ್ಚತುರ್ವಿಧಂ ಪುರಮಾತ್ಮಾಂಶಕೇನ ।
ಅಥೋ ವಿದುಸ್ತಂ ಪುರುಷಂ ಸನ್ತಮನ್ತ-
ರ್ಭುಙ್ಕ್ತೇ ಹೃಷೀಕೈರ್ಮಧು ಸಾರಘಂ ಯಃ ॥೬೪॥

ಜೇನುಹುಳುಗಳು ತಾವೇ ತಯಾರಿಸಿದ ಜೇನುತುಪ್ಪವನ್ನು ತಿನ್ನುವಂತೆ–ಪುರುಷನು ನಿನ್ನ ಶಕ್ತಿಯಿಂದ ಸೃಷ್ಟಿಸಲ್ಪಟ್ಟ ಈ ಜರಾಯುಜ, ಅಂಡಜ, ಸ್ವೇದಜ ಮತ್ತು ಉದ್ಭಿಜ್ಜಗಳೆಂಬ ನಾಲ್ಕು ಬಗೆಯ ದೇಹಗಳಲ್ಲಿ ಒಳಹೊಕ್ಕು ಇಂದ್ರಿಯಗಳ ಮೂಲಕ ವಿಷಯಸುಖಗಳನ್ನು ಅನುಭವಿಸು ತ್ತಾನೆ. ಈ ಪುರುಷನು ನಿನ್ನ ಅಂಗವೇ ಆಗಿದ್ದಾನೆ.*

ಸ ಏಷ ಲೋಕಾನತಿಚಣ್ಡವೇಗೋ
ವಿಕರ್ಷಸಿ ತ್ವಂ ಖಲು ಕಾಲಯಾನಃ ।
ಭೂತಾನಿ ಭೂತೈರನುಮೇಯತತ್ತ್ವೋ
ಘನಾವಲೀರ್ವಾಯುರಿವಾವಿಷಹ್ಯಃ ॥೬೫॥

ಸಹಿಸಲು ಅಶಕ್ಯವಾದ ಪ್ರಚಂಡವೇಗದಿಂದ ಬೀಸುವ ಗಾಳಿಯು ಮೋಡಗಳ ಸಮೂಹವನ್ನು ಚದುರಿಸುವಂತೆ–ನೀನೇ ಕಾಲವೆಂಬ ರಥದಲ್ಲಿ ಕುಳಿತು ಸಹಿಸಲು ಅಸಾಧ್ಯವಾದ ಪ್ರಚಂಡವಾದ ಕಾಲವೇಗದಿಂದ ಭೂತಗಳನ್ನು ಚದುರಿಸಿ ಲಯಗೊಳಿಸುವೆ. ನಿನ್ನ ತತ್ತ್ವವನ್ನು ಅನುಮಾನಪ್ರಮಾಣದಿಂದ ತಿಳಿಯಬೇಕೇ ಹೊರತು ಪ್ರತ್ಯಕ್ಷದಿಂದ ತಿಳಿಯಲಾಗುವುದಿಲ್ಲ.

---

* 'ಅಂಶೋ ನಾನಾವ್ಯಪದೇಶಾತ್' 'ಗುಹಾಂ ಪ್ರವಿಷ್ಟಾವಾತ್ಮಾನೌ ತದ್ದರ್ಶನಾತ್' (ಬ್ರಹ್ಮಸೂತ್ರ).

'ದ್ವಾಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ ।
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋಽಭಿಚಾಕಶೀತಿ ॥'

(ಮುಂಡಕೋಪನಿಷತ್ತು) (ಶ್ಲೋಕ ೬೪)

ಪ್ರಮತ್ತಮುಚ್ಚೈರಿತಿಕೃತ್ಯಚಿನ್ತಯಾ
ಪ್ರವೃದ್ಧಲೋಭಂ ವಿಷಯೇಷು ಲಾಲಸಮ್ ।
ತ್ವಮಪ್ರಮತ್ತಃ ಸಹಸಾಭಿಪದ್ಯಸೇ
ಕ್ಷುಲ್ಲೇಲಿಹಾನೋಽಹಿರಿವಾಖುಮನ್ತಕಃ ॥೬೬॥

'ಇದನ್ನು ಮಾಡಬೇಕು ; ಅದನ್ನು ಮಾಡಬೇಕು'–ಮುಂತಾದ ಚಿಂತಾಪರಂಪರೆಗಳಿಂದ ಲೋಭವು ಹೆಚ್ಚಿ ವಿಷಯಭೋಗಗಳಲ್ಲಿ ಆಸಕ್ತನಾಗಿ ಮೈಮರೆತಿರುವ ಪುರುಷನನ್ನು–ಎಂದಿಗೂ ಮೈ ಮರೆಯದೇ ಎಚ್ಚರವಾಗಿರುವ ಕಾಲರೂಪಿಯಾದ ನೀನು ದಿಢೀರನೆ ಆಕ್ರಮಿಸಿಬಿಡುತ್ತೀಯೆ. ಹಸಿವಿನಿಂದ ನಾಲಿಗೆಯನ್ನು ಚಾಚಿರುವ ಸರ್ಪವು ಇಲಿಯನ್ನು ಕಬಳಿಸುವಂತೆ–ಮೈಮರೆತಿರುವ ಪುರುಷಜಂತುವನ್ನು ಕಬಳಿಸಿಬಿಡುವೆ.

ಕಸ್ತ್ವತ್ಪದಾಬ್ಜಂ ವಿಜಹಾತಿ ಪಣ್ಡಿತೋ
ಯಸ್ತೇಽವಮಾನವ್ಯಯಮಾನಕೇತನಃ ।
ವಿಶಙ್ಕಯಾಸ್ಮದ್ಗುರುರರ್ಚತಿ ಸ್ಮ ಯ –
ದ್ವಿನೋಪಪತ್ತಿಂ ಮನವಶ್ಚತುರ್ದಶ ॥೬೭॥

ಯಾವ ಪಂಡಿತನು ತಾನೇ ನಿನ್ನನ್ನು ಅನಾದರಿಸಿ ಶರೀರದ ಆಯುಸ್ಸನ್ನು ವ್ಯರ್ಥಮಾಡಿಕೊಂಡು ನಿನ್ನ ಪಾದಾರವಿಂದವನ್ನು ತೊರೆದಾನು? ನಮ್ಮ ಗುರುಗಳಾದ ಬ್ರಹ್ಮದೇವರೂ (ರುದ್ರದೇವರೂ) ಮತ್ತು ಹದಿನಾಲ್ಕು ಮಂದಿ ಮನುಗಳೂ ಕೂಡ ಯಾವ ವಿಚಾರವೂ ಇಲ್ಲದೇ ನಿಷ್ಕಪಟವಾದ ಭಕ್ತಿಯಿಂದ ಅದನ್ನು ಪೂಜಿಸುತ್ತಿದ್ದಾರಲ್ಲವೇ?*

---

* ಅಸ್ಮದ್ಗುರುಃ= ನಮ್ಮ ಗುರುವು. ಬ್ರಹ್ಮದೇವರು ಎಲ್ಲರಿಗೂ ಗುರುಗಳು. ಪ್ರಾಚೇತಸರಿಗೆ ಪರಮಾತ್ಮತತ್ತ್ವವನ್ನು ಉಪದೇಶಮಾಡಿದ್ದರಿಂದ ಅವರ ದೃಷ್ಟಿಯಿಂದ ಶಿವಭಗವಂತನನ್ನೂ ಇಲ್ಲಿ ಗುರುಶಬ್ದದಿಂದ ಕರೆಯಬಹುದು. 'ಜ್ಞಾನಂ ಮಹೇಶ್ವರಾದಿಚ್ಛೇತ್' ಎಂಬಂತೆ ಜ್ಞಾನಪ್ರದನಾದ ದೇವರಾದ್ದರಿಂದಲೂ ಶಿವನು ಲೋಕಗುರುವು. ಆದರೆ ಶ್ರೀರುದ್ರದೇವರೇ ಈ ಸ್ತೋತ್ರವನ್ನು ಉಪದೇಶಮಾಡು ತ್ತಿರುವುದರಿಂದ 'ಗುರು' ಶಬ್ದಕ್ಕೆ ಬ್ರಹ್ಮದೇವರು ಎಂದೂ ಅರ್ಥೈಸಬಹುದು. ಬ್ರಹ್ಮದೇವರ ಹಣೆಯಿಂದಲೇ ಶ್ರೀರುದ್ರದೇವರ ಅವತಾರವಾಯಿತೆಂದು ಹಿಂದೆಯೇ ಸೃಷ್ಟಿಪ್ರಕರಣದಲ್ಲಿ ಹೇಳಿದೆ. (ಶ್ಲೋಕ ೬೭)

ಅಥ ತ್ವಮಸಿ ನೋ ಬ್ರಹ್ಮನ್ಪರಮಾತ್ಮನ್ವಿಪಶ್ಚಿತಾಮ್ ।
ವಿಶ್ವಂ ರುದ್ರಭಯಧ್ವಸ್ತಮಕುತಶ್ಚಿದ್ಭಯಾ ಗತಿಃ ॥೬೮॥

ಓ ಪರಬ್ರಹ್ಮವೇ! ಈ ಜಗತ್ತೆಲ್ಲವೂ ರುದ್ರರೂಪವಾದ ಕಾಲದ ಭಯದಿಂದ ವ್ಯಾಕುಲಗೊಂಡಿದೆ. ಒಂದಲ್ಲ ಒಂದು ದಿವಸ ಅದಕ್ಕೆ ಸಂಸಾರಿಗಳೆಲ್ಲರೂ ತುತ್ತಾಗಲೇಬೇಕು. ಆದುದರಿಂದ ಎಲೈ ಪರಮಾತ್ಮನೇ! ಈ ತತ್ತ್ವವನ್ನರಿತಿರುವ ನಮಗೆ ಯಾವ ಭಯಕ್ಕೂ, ಎಂದಿಗೂ, ಎಲ್ಲಿಯೂ ಎಡೆಯಿಲ್ಲದಿರುವ ಅಂತಹ ಪತಿಯು ನೀನು ತಾನೇ!"

ಎಲೈ ರಾಜಕುಮಾರರೇ! ನೀವು ಪರಿಶುದ್ಧಭಾವದಿಂದ ಸ್ವಧರ್ಮವನ್ನು ಅನುಷ್ಠಾನಮಾಡುತ್ತಾ ಶ್ರೀಭಗವಂತನಲ್ಲಿ ಚಿತ್ತವನ್ನು ನೆಲೆಗೊಳಿಸಿ ಈ ಮಂತ್ರವನ್ನು ಜಪಿಸಿರಿ. ಸರ್ವಾಂತರ್ಯಾಮಿಯಾಗಿ ನಿಮ್ಮ ಅಂತಃಕರಣದಲ್ಲಿಯೇ ನೆಲೆಸಿರುವ ಪರಮಾತ್ಮನಾದ ಶ್ರೀಹರಿಯನ್ನು ಮತ್ತೆ-ಮತ್ತೆ ಸ್ತುತಿಸುತ್ತಾ–ಧ್ಯಾನಿಸುತ್ತಾ ಪೂಜಿಸುತ್ತಿರಿ. ನಿಮಗೆ ನಾನು ಉಪದೇಶ ಮಾಡಿರುವ ಈ ಯೋಗಾದೇಶವೆಂಬ ಸ್ತೋತ್ರವನ್ನು ನೀವೆಲ್ಲರೂ ಮನಸ್ಸಿನಲ್ಲಿ ಧರಿಸಿ ಮುನಿವ್ರತವನ್ನು ಆಚರಿಸುತ್ತಾ ಅತ್ಯಂತ ಆದರದಿಂದ ಕೂಡಿ ಏಕಾಗ್ರಭಾವದಿಂದ ಅಭ್ಯಾಸವನ್ನು ಮಾಡುತ್ತಿರಿ. ಹಿಂದೆ ಭೃಗುವೇ ಮುಂತಾದ ತನ್ನ ಪುತ್ರರು ಪ್ರಜೆಗಳನ್ನು ಪಡೆಯಬೇಕೆಂಬ ಉತ್ಕಟವಾದ ಇಚ್ಛೆಯಿಂದ ಕೂಡಿರುವುದನ್ನು ಕಂಡು ಪ್ರಜಾಪತಿಗಳಿಗೂ ಅಧಿಪತಿಯಾದ ಭಗವಂತರಾದ ಬ್ರಹ್ಮದೇವರು ಈ ಸ್ತೋತ್ರವನ್ನು ಅವರಿಗೆ ಉಪದೇಶಮಾಡಿದ್ದರು. ಪ್ರಜಾಪತಿಗಳಾದ ನಮಗೆ 'ನೀವೆಲ್ಲರೂ ಪ್ರಜೆಗಳನ್ನು ವಿಸ್ತರಿಸಿರಿ'–ಎಂಬ ಆಜ್ಞೆಯು ಬಂದಾಗ ನಾವು ಈ ಸ್ತೋತ್ರದಿಂದಲೇ ಜಾಡ್ಯವನ್ನು ಕಳೆದುಕೊಂಡು ಪ್ರಜೆಗಳನ್ನು ಪಡೆದೆವು. (ಶ್ಲೋಕ 69-73)

ಅಥೇದಂ ನಿತ್ಯದಾ ಯುಕ್ತೋ ಜಪನ್ನವಹಿತಃ ಪುಮಾನ್ ।
ಅಚಿರಾಚ್ಛ್ರೇಯ ಆಪ್ನೋತಿ ವಾಸುದೇವಪರಾಯಣಃ ॥೭೪॥

ಈಗಲೂ ಕೂಡ ಯಾವನು ವಾಸುದೇವಪರಾಯಣನಾಗಿ ಏಕಾಗ್ರ ಚಿತ್ತದಿಂದ ಪ್ರತಿದಿನವೂ ಇದನ್ನು ಜಪಿಸುತ್ತಾನೆಯೋ–ಆತನಿಗೆ ಶೀಘ್ರದಲ್ಲಿಯೇ ಶ್ರೇಯಸ್ಸುಂಟಾಗುವುದು.

ಯಚ್ಛ್ರೇಯಸಾಮಿಹ ಸರ್ವೇಷಾಂ ಜ್ಞಾನಂ ನಿಃಶ್ರೇಯಸಂ ಪರಮ್ ।
ಸುಖಂ ತರತಿ ದುಷ್ಪಾರಂ ಜ್ಞಾನನೌರ್ವ್ಯಸನಾರ್ಣವಮ್ ॥೭೫॥

ಲೋಕದಲ್ಲಿ ಶ್ರೇಯಸ್ಸನ್ನುಂಟುಮಾಡುವ ಅನೇಕ ಸಾಧನಗಳುಂಟು. ಅವುಗಳಲ್ಲಿ ಮೋಕ್ಷವನ್ನು ಕೊಡುವ ಜ್ಞಾನವೇ ಎಲ್ಲಕ್ಕಿಂತಲೂ ಶ್ರೇಷ್ಠತಮವಾದ ಸಾಧನವು. ಜ್ಞಾನವೆಂಬ ಹಡಗನ್ನು ಹತ್ತಿದ ಮನುಷ್ಯನು ಆಯಾಸವೇ ಇಲ್ಲದೇ ಈ ದುಸ್ತರವಾದ ಸಂಸಾರಸಾಗರವನ್ನು ದಾಟಿಬಿಡುವನು.

ಯ ಇಮಂ ಶ್ರದ್ಧಯಾ ಯುಕ್ತೋ ಮದ್ಗೀತಂ ಭಗವತ್ಸ್ತವಮ್ ।
ಅಧೀಯಾನೋ ದುರಾರಾಧ್ಯಂ ಹರಿಮಾರಾಧಯತ್ಯಸೌ ॥೭೬॥

ಶ್ರೀಭಗವಂತನನ್ನು ಆರಾಧಿಸುವುದು ಬಹಳ ಕಠಿಣವೇ ಆದರೂ– ನಾನು ಉಪದೇಶಮಾಡಿರುವ ಭಗವಂತನ ಈ ಸ್ತೋತ್ರವನ್ನು ಶ್ರದ್ಧೆಯಿಂದ ಯಾವನು ಪಠಿಸುತ್ತಾನೆಯೋ–ಆತನು ಸುಲಭವಾಗಿಯೇ ಆತನ ಪ್ರಸನ್ನತೆಯನ್ನು ಪಡೆಯುವನು.

ವಿನ್ದತೇ ಪುರುಷೋಽಮುಷ್ಮಾದ್ಯದ್ಯದಿಚ್ಛತ್ಯಸತ್ವರಮ್ ।
ಮದ್ಗೀತಗೀತಾತ್ಸುಪ್ರೀತಾಚ್ಛ್ರೇಯಸಾಮೇಕವಲ್ಲಭಾತ್ ॥೭೭॥

ಕಲ್ಯಾಣವನ್ನುಂಟುಮಾಡುವ ಎಲ್ಲ ಶ್ರೇಯಸ್ಸುಗಳಿಗೂ ಏಕಮಾತ್ರ ಧ್ಯೇಯವಾಗಿ–ಪ್ರಿಯತಮನಾಗಿರುವವನು ಶ್ರೀಭಗವಂತನೇ. ಆದುದರಿಂದ ಮನುಷ್ಯನು ನಾನು ಹಾಡಿರುವ ಈ ಸ್ತೋತ್ರವನ್ನು ಗಾನಮಾಡಿ, ಆತನನ್ನು ಪ್ರಸನ್ನಗೊಳಿಸಿ ಸ್ಥಿರವಾದ ಚಿತ್ತದಿಂದ ಮನಸ್ಸಿಗೆ ಇಷ್ಟವಾದ ಏನನ್ನೇ ಪ್ರಾರ್ಥನೆಮಾಡಿದರೂ ಅದನ್ನು ಪಡೆಯಬಹುದು.

ಇದಂ ಯಃ ಕಲ್ಯ ಉತ್ಥಾಯ ಪ್ರಾಞ್ಜಲಿಃ ಶ್ರದ್ಧಯಾನ್ವಿತಃ ।
ಶೃಣುಯಾಚ್ಛ್ರಾವಯೇನ್ಮರ್ತ್ಯೋ ಮುಚ್ಯತೇ ಕರ್ಮಬನ್ಧನೈಃ ॥

ಪ್ರಾತಃಕಾಲದಲ್ಲಿ ಎದ್ದು ಶ್ರದ್ಧೆಯಿಂದ ಕೈಜೋಡಿಸಿಕೊಂಡು ಈ ಸ್ತೋತ್ರವನ್ನು ಕೇಳುವವನು ಮತ್ತು ಹೇಳುವವನು ಎಲ್ಲ ಕರ್ಮಬಂಧನಗಳಿಂದಲೂ ಬಿಡುಗಡೆಹೊಂದುವನು.

ಗೀತಂ ಮಯೇದಂ ನರದೇವನನ್ದನಾಃ
ಪರಸ್ಯ ಪುಂಸಃ ಪರಮಾತ್ಮನಃ ಸ್ತವಮ್ ।

ಜಪನ್ತ ಏಕಾಗ್ರಧಿಯಸ್ತಪೋ ಮಹ-
ಚ್ಚರಧ್ವಮನ್ತೇ ತತ ಆಪ್ಸ್ಯಥೇಪ್ಸಿತಮ್ ॥೭೯॥

ಎಲೈ ರಾಜಕುಮಾರರೇ! ನಾನು ನಿಮಗೆ ಉಪದೇಶಮಾಡಿರುವ ಈ ಪರಮಪುರುಷ-ಪರಮಾತ್ಮನ ಸ್ತೋತ್ರವನ್ನು ಏಕಾಗ್ರವಾದ ಚಿತ್ತದಿಂದ ಜಪಿಸುತ್ತಾ ಮಹಾತಪಸ್ಸನ್ನು ಆಚರಿಸಿರಿ. ಅದು ಪೂರ್ಣವಾದಾಗ ಅದರಿಂದಲೇ ನಿಮ್ಮ ಅಭೀಷ್ಟವು ಈಡೇರುವುದು."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಚತುರ್ಥಸ್ಕಂಧದ ೨೪ನೆಯ ಅಧ್ಯಾಯವು ಮುಗಿಯಿತು.

ಚತುರ್ಥಸ್ಕಂಧ ೨೫ನೆಯ ಅಧ್ಯಾಯ

ಪುರಂಜನೋಪಾಖ್ಯಾನದ ಪ್ರಾರಂಭ

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ಇತಿ ಸನ್ದಿಶ್ಯ ಭಗವಾನ್ಬಾರ್ಹಿಷದೈರಭಿಪೂಜಿತಃ ।
ಪಶ್ಯತಾಂ ರಾಜಪುತ್ರಾಣಾಂ ತತ್ರೈವಾನ್ತರ್ದಧೇ ಹರಃ ॥೧॥

ಭಗವಂತನಾದ ಶಂಕರನು ಪ್ರಚೇತಸರಿಗೆ ಹೀಗೆ ಉಪದೇಶವನ್ನು ದಯಪಾಲಿಸಿ, ಅವರ ಭಕ್ತಿಪೂರ್ವಕವಾದ ಪೂಜೆಯನ್ನು ಸ್ವೀಕರಿಸಿ, ಆ ರಾಜ ಪುತ್ರರು ನೋಡುತ್ತಿರುವಂತೆಯೇ ಅಂತರ್ಧಾನಹೊಂದಿದನು.

ಅನಂತರ ಪ್ರಚೇತಸರು ರುದ್ರದೇವರು ಉಪದೇಶಿಸಿದ ಸ್ತೋತ್ರವನ್ನು ಜಪಿಸುತ್ತಾ ನೀರಿನಲ್ಲಿ ನಿಂತುಕೊಂಡು ಹತ್ತು ಸಾವಿರ ವರ್ಷಗಳ ಕಾಲ ತಪಸ್ಸನ್ನಾಚರಿಸುತ್ತಿದ್ದರು. ಇತ್ತಕಡೆ ಪ್ರಾಚೀನಬರ್ಹಿಮಹಾರಾಜನ ಮನಸ್ಸು ಕರ್ಮಕಾಂಡದಲ್ಲಿ ಅತ್ಯಂತ ಆಸಕ್ತವಾಗಿ ಅಧ್ಯಾತ್ಮದ ವಿಷಯದಲ್ಲಿ ಪ್ರೀತಿ ಯಿಲ್ಲದೇ ಇರುವುದನ್ನು ಗಮನಿಸಿ ಅಧ್ಯಾತ್ಮತತ್ತ್ವವಿಶಾರದರಾದ ಪರಮ ದಯಾಳುಗಳಾದ ನಾರದರು ಆತನ ಬಳಿಗೆ ಬಂದು "ಮಹಾರಾಜ! ಈ ಕರ್ಮಗಳನ್ನು ಆಚರಿಸುತ್ತಿರುವುದರಿಂದ ನಿನಗೆ ಏನು ಶ್ರೇಯಸ್ಸು ಉಂಟಾ ಗಿದೆ? ಶ್ರೇಯಸ್ಸು ಎಂದರೆ ಏನು? ಎಂದರೆ : ದುಃಖವು ಅತ್ಯಂತವಾಗಿ ನಾಶಹೊಂದಿ ಪರಮಾನಂದವು ದೊರೆಯುವುದೇ ನಿಜವಾದ ಶ್ರೇಯಸ್ಸು.

ಕರ್ಮಗಳ ಅನುಷ್ಠಾನದಿಂದ ಅಂತಹ ಶ್ರೇಯಸ್ಸು ಸಿದ್ಧಿಸುವುದಿಲ್ಲ"–ಎಂದು ಆತನಿಗೆ ತಿಳಿವಳಿಕೆಯನ್ನು ನೀಡಿದರು.

ಆಗ ರಾಜನು ಅವರಲ್ಲಿ ಹೀಗೆ ವಿಜ್ಞಾಪಿಸಿದನು :

"ಮಹಾಭಾಗರೇ! ಮಹಾಮುನಿಗಳೇ! ನನ್ನ ಬುದ್ಧಿಯು ಕರ್ಮಗಳಲ್ಲೇ ಸಿಕ್ಕಿಹಾಕಿಕೊಂಡುಬಿಟ್ಟಿದೆ. ಆದುದರಿಂದ ಪರಮಶ್ರೇಯಸ್ಸು ಯಾವುದು–ಎಂಬುದೇ ತಿಳಿಯದಾಗಿದೆ. ತಾವು ನನಗೆ ಕರ್ಮಗಳ ಕಟ್ಟಿನಿಂದ ಬಿಡುಗಡೆಯನ್ನುಂಟುಮಾಡುವಂತಹ ಪರಿಶುದ್ಧವಾದ ಜ್ಞಾನವನ್ನು ಉಪದೇಶಮಾಡೋಣವಾಗಲಿ. ಕಪಟಧರ್ಮದಿಂದ ತುಂಬಿರುವ ಗೃಹಸ್ಥಾಶ್ರಮದಲ್ಲಿಯೇ ಇರುತ್ತಾ ಮಗ, ಮಡದಿ ಮತ್ತು ಹಣ–ಇವುಗಳನ್ನೇ ಪರಮ ಪುರುಷಾರ್ಥವೆಂದು ತಿಳಿದುಕೊಂಡಿರುವ ಮನುಷ್ಯನು ಅಜ್ಞಾನಕ್ಕೆ ವಶನಾಗಿ ಸಂಸಾರವೆಂಬ ಅರಣ್ಯದಲ್ಲಿಯೇ ಸುತ್ತಾಡುತ್ತಿರುವನು. ಆತನಿಗೆ ಪರಮ ಕಲ್ಯಾಣವು ದೊರೆಯುವುದಿಲ್ಲ. ತಾವು ಕೃಪೆಯಿಟ್ಟು ನನಗೆ ಪರಮ ಕಲ್ಯಾಣದ ಮಾರ್ಗವನ್ನು ಉಪದೇಶಿಸಬೇಕು."

ರಾಜನ ಪ್ರಾರ್ಥನೆಯನ್ನು ಕೇಳಿ ನಾರದಮುನಿಗಳು ಆತನಿಗೆ ಹೀಗೆ ಉಪದೇಶಮಾಡತೊಡಗಿದರು :

"ಎಲೈ ರಾಜೇಂದ್ರನೇ! ನೀನು ಯಜ್ಞದಲ್ಲಿ ನಿರ್ದಯೆಯಿಂದ ಸಾವಿರಾರು ಪಶುಗಳನ್ನು ಬಲಿಕೊಟ್ಟಿರುವೆಯಲ್ಲವೇ? ಆ ಜೀವಗಳೆಲ್ಲವನ್ನೂ ಈ ಆಕಾಶದಲ್ಲಿ ನೋಡು.* ಅವೆಲ್ಲವೂ ನೀನು ಅವುಗಳಿಗೆ ಕೊಟ್ಟ ಹಿಂಸೆಯನ್ನು ನೆನಪಿಗೆ ತಂದುಕೊಂಡು ಸೇಡುತೀರಿಸಿಕೊಳ್ಳುವುದಕ್ಕೋಸ್ಕರ ನಿನ್ನ ದಾರಿಯನ್ನು ಕಾಯುತ್ತಿವೆ. ನೀನು ಸತ್ತು ಪರಲೋಕಕ್ಕೆ ಹೋದಾಗ ಅವೆಲ್ಲವೂ ಕಡುಕೋಪಗೊಂಡು ನಿನ್ನನ್ನು ತಮ್ಮ ಕಬ್ಬಿಣದ ಕೊಂಬುಗಳಿಂದ ತಿವಿದು ಚುಚ್ಚಿಹಾಕುವುವು. ಈ ವಿಷಯವನ್ನು ಕುರಿತು ನಿನಗೆ ಒಂದು ಪುರಾತನವಾದ ಕಥೆಯನ್ನು ಹೇಳುತ್ತೇನೆ, ಕೇಳು. ಅದಕ್ಕೆ 'ಪುರಂಜನೋಪಾಖ್ಯಾನ' ಎಂದು ಹೆಸರು. ಅದನ್ನು ನೀನು ಸಾವಧಾನವಾಗಿ ಕೇಳುವವನಾಗು. (ಶ್ಲೋಕ 2-9)

---

* ನಾರದರು ತಮ್ಮ ಯೋಗಮಹಿಮೆಯಿಂದ ಪ್ರಾಚೀನಬರ್ಹಿರಾಜನಿಗೆ–ಆತನು

ಹಿಂದೆ ಪುರಂಜನನೆಂಬ ಹೆಸರಿನ ಮಹಾಯಶಸ್ವಿಯಾದ ಒಬ್ಬ ರಾಜನಿದ್ದನು. ಆತನಿಗೆ ಅವಿಜ್ಞಾತನೆಂಬ ಒಬ್ಬ ಗೆಳೆಯನಿದ್ದನು. ಆ ಗೆಳೆಯನ ಕೆಲಸ-ಕಾರ್ಯಗಳು ಯಾರಿಗೂ ತಿಳಿಯುತ್ತಿರಲಿಲ್ಲ. ರಾಜನು ತಾನು ವಾಸ ಮಾಡುವುದಕ್ಕೆ ಯೋಗ್ಯವಾದ ಸ್ಥಾನವಾವುದೆಂದು ಹುಡುಕುತ್ತಾ ಇಡೀ ಭೂಮಂಡಲದಲ್ಲಿ ಸುತ್ತಾಡಿದನು. ತಕ್ಕ ವಾಸಸ್ಥಾನ ಸಿಕ್ಕದೇ ಇರಲು ಆತನಿಗೆ ತುಂಬಾ ಚಿಂತೆಯುಂಟಾಯಿತು. ಆತನಿಗೆ ನಾನಾಭೋಗಗಳನ್ನು ಅನುಭವಿಸುವ ಬಯಕೆ ಉತ್ಕಟವಾಗಿತ್ತು. ಆದರೆ ಪ್ರಪಂಚದಲ್ಲಿ ಎಷ್ಟೇ ನಗರಿಗಳನ್ನು ಹುಡುಕಿದರೂ ಆತನಿಗೆ ಯಾವುದೂ ಸರಿಯಾಗಿದೆಯೆಂದು ಕಂಡುಬರಲಿಲ್ಲ. ಹೀಗೆಯೇ ಇರುವಾಗ ಆತನಿಗೆ ಹಿಮಾಲಯದ ದಕ್ಷಿಣದ ತಪ್ಪಲಿನಲ್ಲಿ ಕರ್ಮಭೂಮಿಯಾದ ಭರತಖಂಡದಲ್ಲಿ ಒಂಬತ್ತು ಬಾಗಿಲುಗಳಿಂದ ಕೂಡಿರುವ ಒಂದು ನಗರಿಯು ದೃಷ್ಟಿಗೆ ಬಿದ್ದಿತು. ಆ ನಗರಿಯು ಸಮಸ್ತಲಕ್ಷಣಗಳಿಂದಲೂ ಸಂಪನ್ನವಾಗಿದ್ದಿತು. ಅದರ ಸುತ್ತಲೂ ಎತ್ತರವಾದ ಕೋಟೆ-ಕೊತ್ತಲಗಳೂ, ಕಂದಕಗಳೂ ಶೋಭಿಸುತ್ತಿದ್ದುವು. ಉದ್ಯಾನವನಗಳೂ, ಗವಾಕ್ಷಗಳೂ, ತೋರಣದ್ವಾರಗಳೂ, ಚಿನ್ನ-ಬೆಳ್ಳಿ-ಕಬ್ಬಿಣಗಳ ಕಲಶಗಳಿಂದ ರಮಣೀಯವಾಗಿದ್ದ ವಿಶಾಲವಾದ ಭವನಗಳೂ ಅದನ್ನು ಅಲಂಕರಿಸಿದ್ದುವು. ಅದರಲ್ಲಿದ್ದ ಅರಮನೆಯೇ ಮುಂತಾದ ಭವನಗಳು, ನೆಲಗಳು—ಇಂದ್ರನೀಲಮಣಿ, ಸ್ಫಟಿಕ, ವಜ್ರ-ವೈಢೂರ್ಯ, ಮುತ್ತು, ಮರಕತಮಣಿ, ಕೆಂಪುಬಣ್ಣದ ರತ್ನಗಳಿಂದ ಖಚಿತವಾಗಿದ್ದುವು. ಅಂತಹ ಕಾಂತಿಸಂಪತ್ತಿನಿಂದ ಆ ನಗರಿಯು ನಾಗದೇವತೆಗಳ ರಾಜಧಾನಿಯಾದ ಭೋಗವತೀನಗರದಂತೆ ಒಪ್ಪುತ್ತಿತ್ತು. ಆ ನಗರದಲ್ಲಿ ಅಲ್ಲಲ್ಲಿ ಅನೇಕಸಭಾಭವನಗಳೂ, ಚೌಕಗಳೂ, ರಸ್ತೆಗಳೂ, ಕ್ರೀಡಾಗೃಹಗಳೂ, ಅಂಗಡಿಬೀದಿಗಳೂ, ವಿಶ್ರಾಂತಿಧಾಮಗಳೂ, ಬಾವುಟ-ಪತಾಕೆಗಳೂ, ಹವಳದ ಜಗುಲಿಗಳೂ, ರಾರಾಜಿಸುತ್ತಿದ್ದುವು. ನಗರದ ಹೊರಗೆ ದಿವ್ಯವಾದ ಮರ-ಬಳ್ಳಿಗಳಿಂದ ಕಂಗೊಳಿಸುತ್ತಿದ್ದ ಒಂದು ಸುಂದರವಾದ ಉದ್ಯಾನವನವೂ—ಆ ಉದ್ಯಾನವನದ ಮಧ್ಯದಲ್ಲಿ ಒಂದು ಸರೋವರವೂ ಶೋಭಿಸುತ್ತಿದ್ದುವು.

ಯಜ್ಞಗಳಲ್ಲಿ ಹಿಂದೆ ಬಲಿಕೊಟ್ಟಿದ್ದ ಪಶುಗಳೆಲ್ಲವೂ ಒಟ್ಟಿಗೆ ಆಕಾಶದಲ್ಲಿ ಕಾಣುವಂತೆ ಮಾಡಿ ಈ ಮಾತನ್ನು ಹೇಳುತ್ತಾರೆ.

ಅದರ ಅಕ್ಕ-ಪಕ್ಕಗಳಲ್ಲಿ ಬಗೆಬಗೆಯ ಹಕ್ಕಿಗಳು ಚಿಲಿ-ಪಿಲಿಗುಟ್ಟುತ್ತಿದ್ದುವು ಮತ್ತು ದುಂಬಿಗಳು ಝೇಂಕರಿಸುತ್ತಿದ್ದುವು. ಸರೋವರದ ಪಕ್ಕದಲ್ಲಿದ್ದ ವೃಕ್ಷಗಳ ಕೊಂಬೆಗಳೂ ಮತ್ತು ಎಲೆಗಳೂ ಶೀತಲವಾದ ಝರಿಗಳ ನೀರಿನ ಹನಿಗಳು ಬೆರೆತಿದ್ದ ವಸಂತಮಾರುತದಿಂದ ಮೆಲ್ಲಗೆ ಅಲುಗಾಡುತ್ತಾ ದಡದಲ್ಲಿದ್ದ ನೆಲದ ಶೋಭೆಯನ್ನು ಹೆಚ್ಚಿಸುತ್ತಿದ್ದುವು. ಅಲ್ಲಿಯ ಅರಣ್ಯಪಶುಗಳೂ ಮುನಿಜನರಿಗೆ ಉಚಿತವಾದ ಅಹಿಂಸಾದಿ ವ್ರತಗಳನ್ನು ಪಾಲಿಸುತ್ತಿದ್ದುವು. ಆದುದರಿಂದ ಅಲ್ಲಿ ಯಾರಿಗೂ ಯಾವ ವಿಧವಾದ ತೊಂದರೆಯೂ ಆಗುತ್ತಿರಲಿಲ್ಲ. ಆ ಉದ್ಯಾನವನದಲ್ಲಿ ಕೋಗಿಲೆಗಳು 'ಕುಹೂ ಕುಹೂ'–ಎಂದು ರಮಣೀಯವಾಗಿ ಧ್ವನಿಮಾಡುತ್ತಿದ್ದುದರಿಂದ ದಾರಿಯಲ್ಲಿ ಹೋಗುತ್ತಿದ್ದ ಜನರಿಗೆ ಉದ್ಯಾನವನವು 'ವಿಶ್ರಾಂತಿ ಪಡೆಯಲು ಇಲ್ಲಿಗೆ ಬನ್ನಿರಿ'–ಎಂದು ಅದು ತಮಗೆ ಸ್ವಾಗತದ ಕರೆನೀಡುತ್ತಿವೆಯೋ ಎಂಬ ಭ್ರಮೆ ಯುಂಟಾಗುತ್ತಿದ್ದಿತು. ಆ ಅದ್ಭುತವಾದ ಉದ್ಯಾನವನದಲ್ಲಿ ಸಂಚರಿಸುತ್ತಿದ್ದ ಪುರಂಜನರಾಜನಿಗೆ ಆಗ ಅಕಸ್ಮಾತ್ತಾಗಿ ಅಲ್ಲಿಗೇ ಬರುತ್ತಿದ್ದ ಒಬ್ಬ ಸುಂದರಿಯು ಕಾಣಿಸಿದಳು. ಆಕೆಗೆ ಹತ್ತು ಮಂದಿ ಸೇವಕರು ಬೆಂಗಾವ ಲಾಗಿದ್ದರು. ಆ ಸೇವಕರಲ್ಲಿ ಒಬ್ಬೊಬ್ಬನೂ ನೂರು ಮಂದಿ ಸ್ತ್ರೀಯರಿಗೆ ನಾಯಕನಾಗಿದ್ದನು. ಐದು ಹೆಡೆಯ ಹಾವೊಂದು ಪರಿವಾರಸಹಿತಳಾಗಿದ್ದ ಆ ಸುಂದರಿಗೆ ದ್ವಾರಪಾಲಕನಾಗಿ ಅಂಗರಕ್ಷಕನಾಗಿ ಎಲ್ಲೆಡೆಗಳಿಂದಲೂ ಆಕೆಯನ್ನು ಕಾಪಾಡುತ್ತಿತ್ತು. ಮುಗ್ಧೆಯಾಗಿ ಇಷ್ಟಬಂದ ರೂಪವನ್ನು ಧರಿಸ ಬಲ್ಲವಳಾಗಿದ್ದ ಆ ರಮಣಿಯು ತನಗೆ ಅನುರೂಪನಾದ ರಮಣನನ್ನು ಹುಡುಕುತ್ತಿದ್ದಳು. ಆಕೆಗೆ ನೀಳವಾದ ಮೂಗು, ಸುಂದರವಾದ ಸುಲಿಹಲ್ಲುಗಳ ಸಾಲುಗಳು, ಕಮನೀಯವಾದ ಕೆನ್ನೆ-ಕದಪುಗಳು, ಥಳ-ಥಳಿಸುತ್ತಿದ್ದ ಕುಂಡಲಗಳಿಂದ ಮೆರೆಯುತ್ತಿದ್ದ ಸಮವೂ-ಸುಂದರವೂ ಆದ ಕಿವಿಗಳು, ಶ್ಯಾಮಲವರ್ಣದ ದೇಹಕಾಂತಿ ಮತ್ತು ಸುಂದರವಾದ ನಡುವಿನಿಂದ ಕೂಡಿ, ಹಳದಿಯ ಸೀರೆಯನ್ನುಟ್ಟು–ಚಿನ್ನದ ಡಾಬನ್ನು ಧರಿಸಿ–ಕಾಲಂದುಗೆಗಳು ಝಣ-ಝಣಿಸುವಂತೆ ವೈಯ್ಯಾರದಿಂದ ನಡೆದುಬರುತ್ತಿದ್ದ ಆ ರಮಣೀ ಮಣಿಯು ಧರೆಗೆ ಇಳಿದು ಬಂದ ಒಬ್ಬ ದೇವತಾಸ್ತ್ರೀಯಂತೆ ಬೆಳಗುತ್ತಿದ್ದಳು. ಆ ಗಜಗಾಮಿನಿಯು–ತಾರುಣ್ಯವನ್ನು ಸೂಚಿಸುತ್ತಾ ದುಂಡಾಗಿ ಒಂದ

ಕ್ಕೊಂದು ಸೇರಿಕೊಂಡಿದ್ದ ತನ್ನ ಸ್ತನಗಳನ್ನು ಲಜ್ಜೆಯಿಂದ ಬಾರಿ-ಬಾರಿಗೂ ಸೆರಗಿನಿಂದ ಮುಚ್ಚಿಕೊಳ್ಳುತ್ತಿದ್ದಳು. ಲಜ್ಜೆಯಿಂದ ಕೂಡಿದ್ದ ಮುಗುಳುನಗೆಯಿಂದ ಶೋಭಿಸುತ್ತಾ, ಪ್ರೇಮದಿಂದ ಕೂಡಿದ ಹುಬ್ಬಿನಾಟದಿಂದಲೂ, ಮನೋಹರವಾದ ಕಡೆಗಣ್ಣಿನ ನೋಟವೆಂಬ ಬಾಣದಿಂದಲೂ ತನ್ನನ್ನು ಭೇದಿಸಿದ ಆಕೆಗೆ ಆ ವೀರ ಪುರಂಜನರಾಜನು ಪರವಶನಾಗಿ ಧೈರ್ಯವನ್ನು ಕಳೆದುಕೊಂಡು ಸವಿಮಾತುಗಳಿಂದ ಆಕೆಯನ್ನು ಹೀಗೆ ಪ್ರಶ್ನಿಸಿದನು :

(ಶ್ಲೋಕ 10-25)

"ಎಲೈ ಕಮಲಾಕ್ಷಿಯೇ! ನೀನು ಯಾರು? ಯಾರ ಮಗಳು? ಎಲ್ಲಿಂದ ಬರುತ್ತಿರುವೆ? ಈ ಪುರಿಯ ಬಳಿ ಏನು ಮಾಡಬೇಕೆಂದಿರುವೆ? ಹೇಳು, ಭೀರುವೇ! ಬೆಂಗಾವಲಾಗಿ ನಿನ್ನನ್ನು ಹಿಂಬಾಲಿಸುತ್ತಿರುವ ಈ ಹನ್ನೊಂದು ಮಂದಿ ವೀರಭಟರು ಯಾರು? ಈ ಸ್ತ್ರೀಯರು ಯಾರು? ನಿನ್ನ ಮುಂದೆ ಕಾವಲಾಗಿ ಬರುತ್ತಿರುವ ಈ ಸರ್ಪರಾಜನಾದರೂ ಯಾರು? ಸುಂದರಿಯೇ! ನೀನು ಪತಿಯನ್ನು ಅರಸುತ್ತಾ ಬಂದಿರುವ ಸಾಕ್ಷಾತ್ ಲಜ್ಜಾದೇವಿಯೇ? ಉಮಾದೇವಿಯೇ? ಸರಸ್ವತೀದೇವಿಯೇ? ಅಥವಾ ರಮಾದೇವಿಯೇ? ನೀನು ಮುನಿಯಂತೆ ಈ ವನದಲ್ಲಿ ಏಕಾಂತವಾಸವನ್ನು ಏಕೆ ಮಾಡುತ್ತಿರುವೆ? ನಿನ್ನ ಚರಣಾನುಗ್ರಹದಿಂದಲೇ ಪತಿಯ ಎಲ್ಲ ಕಾಮನೆಗಳೂ ಈಡೇರಿದಂತಾಗುವುವಲ್ಲವೇ? ನೀನು ಲಕ್ಷ್ಮೀದೇವಿಯೇ ಆಗಿದ್ದರೆ ನಿನ್ನ ಕೈಯಲ್ಲಿದ್ದ ಲೀಲಾಕಮಲವು ಎಲ್ಲಿ ಬಿದ್ದುಹೋಯಿತು? ಆದರೆ ನೀನು ಆ ಲಕ್ಷ್ಮೀ, ಸರಸ್ವತೀ, ಗೌರೀದೇವಿಯಲ್ಲಿ ಯಾರೂ ಆಗಿರಲಾರೆ. ಏಕೆಂದರೆ : ನಿನ್ನ ಪಾದಗಳು ಭೂಮಿಯನ್ನು ಮುಟ್ಟುತ್ತಿವೆ. ನೀನು ಮನುಷ್ಯ ಸ್ತ್ರೀಯೇ ಆಗಿರಬೇಕು. ಒಳ್ಳೆಯದು, ಮಹಾಲಕ್ಷ್ಮಿಯು ಪುರುಷೋತ್ತಮನೊಡಗೂಡಿ ವೈಕುಂಠವನ್ನು ಬೆಳಗುವಂತೆ–ನೀನು ವೀರವರನಾದ ನನ್ನೊಡನೆ ಈ ನಗರಿಯನ್ನು ಅಲಂಕರಿಸುವವಳಾಗು. ನಾನು ಮಹಾಪರಾಕ್ರಮಿಯೇ ಆದರೂ ಈಗ ನಿನ್ನ ಕಟಾಕ್ಷಗಳು ನನ್ನ ಮನಸ್ಸನ್ನು ಸೂರೆಗೊಂಡುಬಿಟ್ಟಿವೆ. ಲಜ್ಜೆಯಿಂದ ಕೂಡಿ ರತಿಭಾವದಿಂದ ತುಂಬಿರುವ ಕಿರುನಗೆಯಿಂದ ಕೂಡಿರುವ ನಿನ್ನ ಈ ಹುಬ್ಬುಗಳ ಪ್ರೇರಣೆಯನ್ನು ಪಡೆದು ಕಡುಗಲಿಯಾದ ಕಾಮದೇವನು ನನ್ನನ್ನು ಪೀಡಿಸುತ್ತಿದ್ದಾನೆ. ಆದುದರಿಂದ ನನ್ನಲ್ಲಿ ಕೃಪೆದೋರು, ಸುಂದರಿ! ಶುಚಿಯಾದ ಮುಗುಳುನಗೆಯುಳ್ಳ ಮನ

ಮೋಹಿನಿಯೇ! ಸುಮಧುರವಾದ ವಾಣಿಯನ್ನು ಸುರಿಸುವ ನಿನ್ನ ಮುಖಾರವಿಂದವನ್ನು ನಾಚಿಕೆಯಿಂದ ಏಕೆ ಹಿಂದಿರುಗಿಸಿಕೊಂಡಿದ್ದೀಯೇ? ಮುಖವನ್ನು ಮೇಲಕ್ಕೆ ಎತ್ತಿ ನನಗೆ ತೋರಿಸು. ಸುಂದರವಾದ ಹುಬ್ಬುಗಳಿಂದ ಶೋಭಿಸುತ್ತಾ ಕರಿಯ ಗುಡ್ಡೆಗಳುಳ್ಳ ಕಣ್ಣುಗಳಿಂದ ಕಂಗೊಳಿಸುತ್ತಿರುವ ನಿನ್ನ ಈ ಮುಖಕಮಲವನ್ನು ಕಮನೀಯವಾದ ಕರಿಯ ಮುಂಗುರುಳುಗಳು ಆವರಿಸಿಕೊಂಡಿವೆ." (ಶ್ಲೋಕ 2 - 31)

ಎಲೈ ವೀರಾಗ್ರಣಿಯಾದ ರಾಜೇಂದ್ರನೇ! ಕೇಳು. ಹೀಗೆ ವೀರವರನಾದ ಪುರಂಜನರಾಜನು ದೈನ್ಯದಿಂದ ಬೇಡುತ್ತಿರುವುದನ್ನು ಕಂಡು ಆತನಲ್ಲಿ ಮೋಹಗೊಂಡ ಆ ರಮಣಿಯು ನಸುನಗುತ್ತಾ ಆತನನ್ನು ಅಭಿನಂದಿಸಿ ಹೀಗೆಂದಳು :

"ಎಲೈ ಪುರುಷಪುಂಗವನೇ! ನಾನು ಯಾರು? ಯಾರ ಮಗಳು? ಎಂದು ಕೇಳಿದೆಯಲ್ಲವೇ? ಹೇಳುತ್ತೇನೆ, ಕೇಳು. ನನ್ನನ್ನಾಗಲೀ, ನಿನ್ನನ್ನಾಗಲೀ ಹುಟ್ಟಿಸಿದವರು ಯಾರು?–ಎಂಬುದು ಸರಿಯಾಗಿ ನನಗೂ ತಿಳಿಯದು ; ನಿನಗೂ ತಿಳಿಯದು. ಯಾವ ಹೆಸರು-ಗೋತ್ರಗಳ ಅರಿವೂ ನಮಗಿಲ್ಲ. ಈಗ ನಾವು ಈ ನಗರಿಯಲ್ಲಿ ಇದ್ದೇವೆ ಎಂಬುದನ್ನು ಬಿಟ್ಟು ಬೇರೇನೂ ನಮಗೆ ತಿಳಿಯದು. ನಮಗೆ ವಾಸಮಾಡಲು ಈ ನಗರಿಯನ್ನು ರಚಿಸಿಕೊಟ್ಟವರು ಯಾರು?–ಎಂಬುದನ್ನೂ ನಾವು ಅರಿಯೆವು. ಪ್ರಿಯನೇ! ಈ ಪುರುಷರು ನನ್ನ ಸ್ನೇಹಿತರು ಹಾಗೂ ಈ ಸ್ತ್ರೀಯರು ನನ್ನ ಗೆಳತಿಯರು. ಈ ಸರ್ಪವು ನನ್ನ ರಕ್ಷಕನು. ನಾನು ನಿದ್ರೆಹೋದ ಸಮಯದಲ್ಲಿಯೂ ಇದು ಎಚ್ಚರವಾಗಿದ್ದು ನನ್ನ ಈ ಪುರಿಯನ್ನು ರಕ್ಷಿಸುತ್ತಿರುವುದು. ಎಲೈ ಶತ್ರುಸೂದನನೇ! ನೀನು ಭಾಗ್ಯವಶದಿಂದ ಇಲ್ಲಿಗೆ ದಯಮಾಡಿಸಿರುವೆ. ಗ್ರಾಮ್ಯ ಸುಖಗಳನ್ನೂ ಬಯಸುತ್ತಿರುವೆ. ನಿನಗೆ ಒಳ್ಳೆಯದಾಗಲಿ. ನಾನು ನನ್ನ ಗೆಳೆಯ-ಗೆಳತಿಯರೊಡನೆ ನಿನಗೆ ಎಲ್ಲ ವಿಷಯಸುಖಗಳನ್ನೂ ಒದಗಿಸಿಕೊಡುವೆನು. ಸುಂದರನೇ! ಒಂಬತ್ತು ಬಾಗಿಲುಗಳುಳ್ಳ ಈ ನಗರಿಯಲ್ಲಿ ಇಷ್ಟಬಂದ ಭೋಗಗಳನ್ನು ಅನುಭವಿಸುತ್ತಾ ನೂರಾರು ವರ್ಷಗಳ ಕಾಲ ಇಲ್ಲಿ ವಾಸಿಸುತ್ತಿರು. ನಾನು ನಿನ್ನನ್ನು ಬಿಟ್ಟು ಬೇರೆ ಯಾರ ಜೊತೆಯಲ್ಲಿ

ರಮಿಸಲಿ? ಇತರ ಜನರಿಗೆ ರತಿಸುಖವೂ ಗೊತ್ತಿಲ್ಲ ; ಭೋಗಗಳು ಯಾವುವು ಎಂಬುದನ್ನು ಅವರು ಅರಿಯರು. ಅವರು ಶುದ್ಧಮೂರ್ಖರು. ಪರಲೋಕದ ವಿಚಾರವನ್ನೂ, ನಾಳೆ ಏನಾಗುವುದು–ಎಂಬುದನ್ನೂ ತಿಳಿಯರು. ಅವರು ಪಶುಗಳಿಗೆ ಸಮಾನರು. ಈ ಗೃಹಸ್ಥಾಶ್ರಮವು ಎಷ್ಟು ಶ್ರೇಷ್ಠವಾದುದೆಂದರೆ : ಇದರಲ್ಲಿಯೇ ಧರ್ಮ, ಅರ್ಥ, ಕಾಮ, ಸಂತಾನ ಸುಖ, ಮೋಕ್ಷ, ಒಳ್ಳೆಯ ಕೀರ್ತಿ ಮತ್ತು ಸ್ವರ್ಗಗಳೇ ಮುಂತಾದ ಎಲ್ಲ ಪುರುಷಾರ್ಥ-ಸುಖಭೋಗಗಳೂ ಲಭಿಸುವುವು. ಸಂಸಾರವನ್ನು ತ್ಯಜಿಸಿದ ಯತಿಜನರಿಗೆ ಈ ಸುಖರಾಶಿಯ ಕಲ್ಪನೆಯು ಕೂಡ ಉಂಟಾಗದು. ಈ ಲೋಕದಲ್ಲಿ ಪಿತೃಗಳು, ದೇವತೆಗಳು, ಋಷಿಗಳು, ಮನುಷ್ಯರು ಮತ್ತು ಸಮಸ್ತಪ್ರಾಣಿಗಳು–ಇವರೆಲ್ಲರಿಗೂ ಮತ್ತು ತನಗೂ ಕೂಡ ಕ್ಷೇಮಕ್ಕೆ ನೆಲೆಯಾಗಿರುವ ಬೀಡು ಗೃಹಸ್ಥಾಶ್ರಮವೊಂದೇ–ಎಂದು ಮಹಾಪುರುಷರು ಹೇಳುತ್ತಾರೆ. ಎಲೈ ವೀರಶಿರೋಮಣಿಯೇ! ತಾನಾಗಿಯೇ ಕಾಮಿಸಿ ಬಂದಿ ರುವ ನಿನ್ನಂತಹ ಸುಪ್ರಸಿದ್ಧನೂ, ಉದಾರಚಿತ್ತನೂ, ಸುಂದರನೂ ಆಗಿರುವ ಪತಿಯನ್ನು ಈ ಲೋಕದಲ್ಲಿ ನನ್ನಂತಹ ಯಾವ ಹೆಂಗಸು ತಾನೇ ವರಿಸು ವುದಿಲ್ಲ? ಮಹಾಬಾಹುವೇ! ಸರ್ಪದಂತೆ ದುಂಡಾಗಿ ಕೋಮಲವಾಗಿರುವ ನಿನ್ನ ಭುಜಗಳಲ್ಲಿ ಸ್ಥಾನವನ್ನು ಪಡೆಯಲು ಯಾವ ಕಾಮಿನಿಯ ಚಿತ್ತವು ತಾನೇ ಆಸೆಪಡುವುದಿಲ್ಲ? ನೀನು ಸುಂದರವಾದ ಮಗುಳುನಗೆಯಿಂದ ಕೂಡಿದ ಕರುಣಾಪೂರ್ಣವಾದ ದೃಷ್ಟಿಯಿಂದ ನಮ್ಮಂತಹ ಅನಾಥೆಯರ ಮನಸ್ಸಿನ ಸಂತಾಪವನ್ನು ಶಮನಗೊಳಿಸುವುದಕ್ಕಾಗಿಯೇ ಭೂಮಿಯಲ್ಲಿ ಸಂಚರಿಸುತ್ತಿದ್ದೀಯೆ."

(ಶ್ಲೋಕ 32-42)

ಶ್ರೀನಾರದಮಹರ್ಷಿಗಳು ಹೇಳುತ್ತಾರೆ :

ಇತಿ ತೌ ದಮ್ಪತೀ ತತ್ರ ಸಮುದ್ಯ ಸಮಯಂ ಮಿಥಃ ।
ತಾಂ ಪ್ರವಿಶ್ಯ ಪುರೀಂ ರಾಜನ್ಮುಮುದಾತೇ ಶತಂ ಸಮಾಃ ॥೪೩॥

"ಎಲೈ ಪ್ರಾಚೀನಬರ್ಹಿನ್ನೃಪತಿಯೇ! ಹೀಗೆ ಆ ದಂಪತಿಗಳು ಪರಸ್ಪರವಾಗಿ ಒಪ್ಪಂದಮಾಡಿಕೊಂಡು ಆ ನಗರಿಯನ್ನು ಪ್ರವೇಶಿಸಿ ನೂರು ವರ್ಷಗಳ ಕಾಲ ಅಲ್ಲಿ ಆನಂದವನ್ನು ಅನುಭವಿಸುತ್ತಿದ್ದರು.

ಸಂಗೀತಗಾರರು ಅಲ್ಲಲ್ಲಿ ಆ ರಾಜನ ಕೀರ್ತಿಯನ್ನು ಸುಮಧುರ

ಸ್ವರದಿಂದ ಹಾಡುತ್ತಿದ್ದರು. ಅದನ್ನು ಕೇಳಿ ಆನಂದಿಸುತ್ತಾ ಪುರಂಜನ ಮಹಾರಾಜನು ಬೇಸಗೆಯ ಕಾಲ ಬಂದಾಗ ಹಲವಾರು ಲಲನೆಯರೊಡನೆ ಕೂಡಿ ನದೀ-ಸರೋವರಗಳಲ್ಲಿ ಜಲಕ್ರೀಡೆಯನ್ನಾಡುತ್ತಿದ್ದನು.

ಆ ನಗರಿಯಲ್ಲಿ ಒಂಬತ್ತು ಬಾಗಿಲುಗಳಿದ್ದುವು ಎಂದು–ಹೇಳಿದೆ ನಲ್ಲವೇ? ಅವುಗಳಲ್ಲಿ ಏಳು ದ್ವಾರಗಳು ನಗರಿಯ ಮೇಲುಭಾಗದಲ್ಲಿದ್ದುವು. ಎರಡು ಕೆಳಭಾಗಕ್ಕೆ ಸೇರಿದ್ದುವು. ಆ ನಗರಕ್ಕೆ ಯಾವನೇ ರಾಜನಾಗಿ ಬಂದರೂ ಆತನಿಗೆ ಬೇರೆ-ಬೇರೆ ದೇಶಗಳಿಗೆ ಹೋಗುವುದಕ್ಕಾಗಿ ಆ ಬಾಗಿಲುಗಳು ನಿರ್ಮಿತವಾಗಿದ್ದುವು. ರಾಜೇಂದ್ರನೇ! ಅವುಗಳಲ್ಲಿ ಐದು ಬಾಗಿಲುಗಳು ಪೂರ್ವದ ಕಡೆಗೂ, ಒಂದು ಬಾಗಿಲು ದಕ್ಷಿಣದ ಕಡೆಗೂ, ಒಂದು ಬಾಗಿಲು ಉತ್ತರದ ಕಡೆಗೂ ಮತ್ತು ಎರಡು ಬಾಗಿಲುಗಳು ಪಶ್ಚಿಮದ ಕಡೆಗೂ ಅಭಿಮುಖವಾಗಿದ್ದುವು. ಅವುಗಳ ಹೆಸರುಗಳನ್ನು ಹೇಳುತ್ತೇನೆ, ಕೇಳು. ಪೂರ್ವಕ್ಕೆ ಅಭಿಮುಖವಾಗಿದ್ದ ಖದ್ಯೋತಾ ಮತ್ತು ಆವಿರ್ಮುಖೀ ಎಂಬ ಎರಡು ಬಾಗಿಲುಗಳು ಒಂದೇ ಕಡೆ ನಿರ್ಮಿತವಾಗಿದ್ದುವು. ಅವುಗಳ ಮಾರ್ಗವಾಗಿ ಪುರಂಜನರಾಜನು ತನ್ನ ಮಿತ್ರನಾದ ದ್ಯುಮಂತನೊಡನೆ ವಿಭ್ರಾಜಿತವೆಂಬ ದೇಶಕ್ಕೆ ಹೋಗುತ್ತಿದ್ದನು. ಹಾಗೆಯೇ ಪೂರ್ವಾಭಿಮುಖ ವಾಗಿದ್ದ ನಲಿನೀ ಮತ್ತು ನಾಲಿನೀ ಎಂಬ ಇನ್ನೆರಡು ದ್ವಾರಗಳು ಕೂಡ ಒಂದೇ ಕಡೆಯಲ್ಲಿ ನಿರ್ಮಿತವಾಗಿದ್ದುವು. ಅವುಗಳ ಮೂಲಕವಾಗಿ ರಾಜನು ಅವಧೂತ ಎಂಬಾತನೊಡನೆ ಸೌರಭವೆಂಬ ದೇಶಕ್ಕೆ ಹೋಗುತ್ತಿದ್ದನು. ಪೂರ್ವದಿಕ್ಕಿಗೇ ಅಭಿಮುಖವಾಗಿದ್ದ ಮುಖ್ಯಾ ಎಂಬ ಐದನೆಯ ದ್ವಾರದ ಮೂಲಕ ರಾಜನು ರಸಜ್ಞ ಮತ್ತು ವಿಪಣ ಎಂಬುವರೊಡನೆ ಕ್ರಮವಾಗಿ ಬಹೂದನ ಮತ್ತು ಆಪಣ ಎಂಬ ದೇಶಗಳಿಗೆ ಹೋಗುತ್ತಿದ್ದನು. ನಗರಿಯ ದಕ್ಷಿಣದ ಕಡೆಗಿದ್ದ ಪಿತೃಹೂ ಎಂಬ ದ್ವಾರದಿಂದ ಆತನು ಶ್ರುತಧರ ಎಂಬಾತ ನೊಡನೆ ದಕ್ಷಿಣಪಾಂಚಾಲದೇಶಕ್ಕೆ ಹೋಗುತ್ತಿದ್ದನು. ಹಾಗೆಯೇ ಉತ್ತರದಿಕ್ಕಿ ನೆಡೆಗಿದ್ದ ದೇವಹೂ ಎಂಬ ದ್ವಾರದ ಮಾರ್ಗವಾಗಿ ಪುರಂಜನರಾಜನು ಶ್ರುತ ಧರ ಎಂಬಾತನೊಡನೆ ಉತ್ತರಪಾಂಚಾಲದೇಶಕ್ಕೆ ಹೋಗುತ್ತಿದ್ದನು. ಪಶ್ಚಿಮ ದಿಕ್ಕಿನಲ್ಲಿದ್ದ ಆಸುರೀ ಎಂಬ ಬಾಗಿಲಿನ ಮೂಲಕ ದುರ್ಮದ ಎಂಬಾತ ನೊಡನೆ ಗ್ರಾಮಕವೆಂಬ ದೇಶಕ್ಕೆ ಆತನು ಹೋಗುತ್ತಿದ್ದನು. ಹಾಗೆಯೇ

ನಿರ್ಋತಿ ಎಂಬ ಹೆಸರಿನ ಮತ್ತೊಂದು ಪಶ್ಚಿಮದ್ವಾರದಿಂದ ಆತನು ಲುಬ್ಧಕ ಎಂಬಾತನೊಡನೆ ವೈಶಸವೆಂಬ ದೇಶಕ್ಕೆ ಹೋಗುತ್ತಿದ್ದನು. ಆ ನಗರದ ನಿವಾಸಿಗಳಲ್ಲಿ ನಿರ್ವಾಕ್ ಮತ್ತು ಪೇಶಸ್ಕೃತ್ ಎಂಬ ಇಬ್ಬರು ಪೌರರು ಕುರುಡರಾಗಿದ್ದರು. ಪುರಂಜನರಾಜನು ಕಣ್ಣುಗಳುಳ್ಳ ಪೌರರಿಗೆ ಅಧಿಪತಿ ಯಾಗಿದ್ದರೂ–ಆ ಇಬ್ಬರು ಕುರುಡರ ಸಹಾಯದಿಂದಲೇ ಅಲ್ಲಲ್ಲಿಗೆ ಹೋಗಿ ಎಲ್ಲ ಬಗೆಯ ಕಾರ್ಯಗಳನ್ನೂ ಮಾಡುತ್ತಿದ್ದನು.* (ಶ್ಲೋಕ 44-54)

ಆ ರಾಜನಿಗೆ ತನ್ನ ಪ್ರಧಾನಸೇವಕನಾದ ವಿಷೂಚೀನ ಎಂಬಾತ ನೊಡನೆ ಅಂತಃಪುರಕ್ಕೆ ಹೋದಾಗಲೆಲ್ಲಾ ತನ್ನ ಹೆಂಡತಿ ಮತ್ತು ಮಕ್ಕಳ ಕಾರಣದಿಂದುಂಟಾಗುವ ಮೋಹ, ಪ್ರಸನ್ನತೆ ಮತ್ತು ಹರ್ಷಗಳೇ ಮುಂತಾದ ವಿಕಾರಗಳ ಅನುಭವ ಉಂಟಾಗುತ್ತಿತ್ತು. ಆಗ ಆತನು ಒಮ್ಮೆ ಮದ-ಮೋಹ ಗಳಿಗೆ ಒಳಗಾಗುತ್ತಿದ್ದನು. ಕೆಲವೊಮ್ಮೆ ಆತನ ಚಿತ್ತವು ಪ್ರಸನ್ನವಾಗುತ್ತಿತ್ತು. ಕೆಲವು ವೇಳೆ ಸಂತೋಷದಿಂದ ಹಿಗ್ಗುತ್ತಿದ್ದನು. ಹೀಗೆ ಬಗೆ-ಬಗೆಯ ಕರ್ಮಗಳ ಬಲೆಯಲ್ಲಿ ಸಿಕ್ಕಿಹಾಕಿಕೊಂಡು ಕಾಮವಶನಾದ ಆ ರಾಜನು ಮೂಢನಾಗಿ ದೈವದ ವಂಚನೆಗೊಳಗಾಗಿದ್ದನು. ರಮಣಿಯ ಮೋಹಕ್ಕೆ ತುತ್ತಾಗಿ ಆಕೆಯು ಏನೇನು ಬಯಸಿ ಏನೇನು ಮಾಡುತ್ತಿದ್ದಳೋ ಅದನ್ನೇ ತಾನೂ ಮಾಡುತ್ತಿದ್ದನು. ಆಕೆಯು ಮದ್ಯವನ್ನು ಕುಡಿದಾಗ ತಾನೂ ಕುಡಿದು ಮತ್ತೇರುತ್ತಿದ್ದನು. ಆಕೆಯು ತಿಂದಾಗ ತಾನೂ ತಿನ್ನುತ್ತಿದ್ದನು. ಆಕೆಯು ಏನನ್ನಾದರೂ ಅಗಿದರೆ ತಾನೂ ಅಗಿಯುತ್ತಿದ್ದನು. ಆಕೆಯು ಹಾಡಿದರೆ ತಾನೂ ಹಾಡುವುದು, ಆಕೆಯು ಅತ್ತರೆ ತಾನೂ ಅಳುವುದು, ಆಕೆಯು ನಕ್ಕರೆ ತಾನೂ ನಗುವುದು ಮತ್ತು ಆಕೆಯು ಮಾತನಾಡಿದರೆ ತಾನೂ ಮಾತನಾಡುವುದು–ಹೀಗೆಲ್ಲಾ ಮಾಡುತ್ತಿದ್ದನು. ಆಕೆಯು ಓಡಿದರೆ ತಾನೂ ಓಡುತ್ತಿದ್ದನು. ಆಕೆಯು ನಿಂತರೆ ತಾನೂ ನಿಂತುಕೊಳ್ಳುತ್ತಿದ್ದನು. ಆಕೆಯು ಮಲಗಿದರೆ ತಾನೂ ಆಕೆಯೊಡನೆ ಮಲಗುತ್ತಿದ್ದನು ಮತ್ತು ಆಕೆಯು ಕುಳಿತರೆ ತಾನೂ ಆಕೆಯೊಡನೆ ಕುಳಿತುಕೊಳ್ಳುತ್ತಿದ್ದನು. ಆಕೆಯು ಎಲ್ಲಾದರೂ ಏನನ್ನಾದರೂ ಕೇಳಲು ತೊಡಗಿದರೆ ತಾನೂ

* ನಿರ್ವಾಕ್ = ರಂಧ್ರರಹಿತವಾದುದು. ಪೇಶಸ್ಕೃತ್ = ರೇಷ್ಮೆಹುಳು. (ಶ್ಲೋಕ 54)

ಕೇಳತೊಡಗುತ್ತಿದ್ದನು. ಆಕೆಯು ನೋಡಿದರೆ ತಾನೂ ನೋಡುತ್ತಿದ್ದನು. ಆಕೆಯು ಏನಾದರೂ ಮೂಸಿನೋಡಿದರೆ ತಾನೂ ಮೂಸಿನೋಡುತ್ತಿದ್ದನು ಮತ್ತು ಆಕೆಯು ಯಾವುದನ್ನಾದರೂ ಮುಟ್ಟಿದರೆ ತಾನೂ ಅದನ್ನು ಮುಟ್ಟುತ್ತಿದ್ದನು. ತನ್ನ ಆ ಪ್ರಿಯೆಯು ಯಾವಾಗಲಾದರೂ ಶೋಕಿಸಿದರೆ ತಾನೂ ಆಕೆಯೊಡನೆ ಶೋಕಪಡುತ್ತಿದ್ದನು. ಆಕೆಯು ಹಿಗ್ಗಿದಾಗ ತಾನೂ ಹಿಗ್ಗುತ್ತಿದ್ದನು ಮತ್ತು ಆಕೆಯು ಸಂತೋಷಿಸಿದರೆ ತಾನೂ ಸಂತೋಷಪಡು ತ್ತಿದ್ದನು. ಹೀಗೆ ಆ ಪುರಂಜನರಾಜನು ತನ್ನ ರಾಣಿಯ ವಂಚನೆಗೂ ಮತ್ತು ಎಲ್ಲ ಪ್ರಕೃತಿವರ್ಗದ ವಂಚನೆಗೂ ಒಳಗಾದನು. ತನ್ನ ಪ್ರಕೃತಿಯ ವಂಚನೆಗೂ ವಶನಾಗಿ ವಿವೇಕವನ್ನು ಕಳೆದುಕೊಂಡ ಆ ಮೂರ್ಖನು ದುರ್ಬಲತೆಯಿಂದ ತನಗೆ ಇಷ್ಟವಿಲ್ಲದಿದ್ದರೂ–ಯಜಮಾನನ ಕೈಸನ್ನೆಯಂತೆ ಆತನನ್ನು ಅನುಕರಿಸುತ್ತಾ ಆಟವಾಡುವ ಸಾಕುಕಪಿಯೇ ಮುಂತಾದ ಪ್ರಾಣಿಗಳಂತೆ–ತನ್ನ ಪ್ರಿಯೆಯ ಕೈಗೊಂಬೆಯಾಗಿ ಆಕೆಯನ್ನೇ ಅನುಕರಣೆಮಾಡುತ್ತಿದ್ದನು."

(ಶ್ಲೋಕ 55-62)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಚತುರ್ಥಸ್ಕಂಧದ ೨೫ನೆಯ ಅಧ್ಯಾಯವು ಮುಗಿಯಿತು.

ಚತುರ್ಥಸ್ಕಂಧ ೨೬ನೆಯ ಅಧ್ಯಾಯ

ಪುರಂಜನನ ಬೇಟೆಯ ವರ್ಣನೆ : ರಾಣಿಯ ಪ್ರಣಯಕೋಪ

ನಾರದಮಹರ್ಷಿಗಳು ಪ್ರಾಚೀನಬರ್ಹಿಮಹಾರಾಜನಿಗೆ ಹೇಳುತ್ತಾರೆ :

ಸ ಏಕದಾ ಮಹೇಷ್ವಾಸೋ ರಥಂ ಪಞ್ಚಾಶ್ವಮಾಶುಗಮ್ ।
ದ್ವೀಪಂ ದ್ವಿಚಕ್ರಮೇಕಾಕ್ಷಂ ತ್ರಿವೇಣುಂ ಪಞ್ಚಬನ್ಧುರಮ್ ॥೧॥

ಏಕರಶ್ಮ್ಯೇಕದಮನಮೇಕನೀಡಂ ದ್ವಿಕೂಬರಮ್ ।
ಪಞ್ಚಪ್ರಹರಣಂ ಸಪ್ತವರೂಥಂ ಪಞ್ಚವಿಕ್ರಮಮ್ ॥೨॥

ಹೈಮೋಪಸ್ಕರಮಾರುಹ್ಯ ಸ್ವರ್ಣವರ್ಮಾಕ್ಷಯೇಷುಧಿಃ ।
ಏಕಾದಶಚಮೂನಾಥಃ ಪಞ್ಚಪ್ರಸ್ಥಮಗಾದ್ವನಮ್ ॥೩॥

"ಎಲೈ ಮಹಾರಾಜನೇ! ಕೇಳು. ಒಮ್ಮೆ ಮಹಾಧನುರ್ಧರನಾದ ಆ ಪುರಂಜನರಾಜನು ತನ್ನ ಧನುಸ್ಸನ್ನು ಎತ್ತಿಕೊಂಡು, ಚಿನ್ನದ ಕವಚವನ್ನು ತೊಟ್ಟು, ಅಕ್ಷಯಬಾಣಗಳಿರುವ ಬತ್ತಳಿಕೆಯನ್ನು ಕಟ್ಟಿಕೊಂಡು, ಹತ್ತು ಸೇನಾಪಡೆಗಳಿಗೆ ಅಧ್ಯಕ್ಷನಾಗಿದ್ದು ಹನ್ನೊಂದನೆಯವನಾಗಿದ್ದ ತನ್ನ ಸೇನಾ ಪತಿಯೊಡನೆ ಚಿನ್ನದ ಅಲಂಕಾರದಿಂದ ಶೋಭಿತವಾಗಿದ್ದ ಒಂದು ರಥದಲ್ಲಿ ಕುಳಿತು, ಬೇಟೆಯಾಡುವುದಕ್ಕಾಗಿ ಪಂಚಪ್ರಸ್ಥವೆಂಬ ಅರಣ್ಯಕ್ಕೆ ಹೊರಟನು. ಆ ರಥವು ಐದು ಕುದುರೆಗಳಿಂದಲೂ, ಎರಡು ನೊಗಗಳಿಂದಲೂ, ಎರಡು ಚಕ್ರಗಳಿಂದಲೂ, ಒಂದು ಅಚ್ಚುಮರದಿಂದಲೂ, ಮೂರು ಧ್ವಜ ಗಳಿಂದಲೂ, ಐದು ಕಟ್ಟುಗಳಿಂದಲೂ, ಒಂದೇ ಹಗ್ಗವನ್ನು ಹಿಡಿದು ಕೊಂಡಿದ್ದ ಒಬ್ಬ ಸಾರಥಿಯಿಂದಲೂ, ಒಂದು ಸಾರಥಿಯ ಸ್ಥಾನ–ಎರಡು ಯುಗಸ್ಥಾನಗಳಿಂದಲೂ, ಏಳು ಆವರಣಗಳಿಂದಲೂ, ಐದು ಆಯುಧ ಗಳಿಂದಲೂ ಮತ್ತು ಐದು ಪ್ರಕಾರವಾದ ಗತಿಗಳಿಂದಲೂ ಕೂಡಿ ಅತ್ಯಂತ ಶೋಭಾಯಮಾನವಾಗಿದ್ದಿತು. ಹೀಗೆ ನೋಡಲು ಅತಿಸುಂದರವಾಗಿದ್ದ, ಶೀಘ್ರವಾಗಿ ಸಂಚರಿಸುತ್ತಿದ್ದ ಆ ರಥವನ್ನೇರಿ ಪುರಂಜನರಾಜನು ಕಾಡಿಗೆ ಹೋಗಿ ಅಲ್ಲಿ ಬೇಟೆಯಾಡತೊಡಗಿದನು.

ಆತನಿಗೆ ಮಡದಿಯು ಪ್ರಿಯತಮೆಯಾಗಿದ್ದುದರಿಂದ ಆಕೆಗೆ ಹೇಳದೇ ಕೇಳದೇ ಆತನು ಬೇಟೆಗೆ ಬರುವುದು ಉಚಿತವಾಗಿರಲಿಲ್ಲ. ಆದರೂ ಬೇಟೆಯ ಮದವು ಏರಿ ಬಂದಿದ್ದರಿಂದ ಆತನು ಆಕೆಯನ್ನು ಗಮನಿಸದೇ ಗರ್ವದಿಂದ ಕಾಡಿಗೆ ಬಂದು ಬಿಲ್ಲಿನಲ್ಲಿ ಬಾಣಗಳನ್ನು ಏರಿಸಿ ಬೇಟೆಯಾಡ ತೊಡಗಿದನು. ಆ ಕರ್ಮದಲ್ಲಿ ಆಸುರೀವೃತ್ತಿಯು ಆತನನ್ನು ಆಕ್ರಮಿಸಿದ್ದ ರಿಂದ ಆತನ ಕಠೋರವಾದ ಚಿತ್ತದಿಂದ ದಯೆಯನ್ನು ತೊರೆದು ತೀಕ್ಷ್ಣ ವಾದ ಬಾಣಗಳಿಂದ ಅರಣ್ಯದ ದಯೆಯನ್ನು ತೊರೆದು ತೀಕ್ಷ್ಣವಾದ ಬಾಣಗಳಿಂದ ಅರಣ್ಯದ ಮೃಗಗಳನ್ನು ಹೊಡೆದುಹಾಕಿದನು ; ದೋಷರಹಿತ ವಾಗಿದ್ದ ಸಾಧುಮೃಗಗಳನ್ನೂ ಸಂಹರಿಸಿದನು. (ಶ್ಲೋಕ 1-5)

ತೀರ್ಥೇಷು ಪ್ರತಿದೃಷ್ಟೇಷು ರಾಜಾ ಮೇಧ್ಯಾನ್ಪಶೂನ್ವನೇ ।
ಯಾವದರ್ಥಮಲಂ ಲುಬ್ಧೋ ಹನ್ಯಾದಿತಿ ನಿಯಮ್ಯತೇ ॥೬॥

ಬೇಟೆಯಾಡುವುದು ರಾಜನಿಗೆ ಶಾಸ್ತ್ರಸಮ್ಮತವಲ್ಲವೇ? ಎಂದರೆ : ಆತನು ಮನಬಂದಂತೆ ಪ್ರಾಣಿಗಳನ್ನು ಕೊಲ್ಲುವುದು ಶಾಸ್ತ್ರಕ್ಕೆ ವಿರುದ್ಧ

ವಾದುದು. ವಿಧಿಪೂರ್ವಕವಾದ ಶ್ರದ್ಧಾದಿ ಕರ್ಮಗಳಿಗಾಗಿ ಮಾಂಸವು ಅನಿವಾರ್ಯವಾಗಿದ್ದರೆ ಆಗ ಕಾಡಿಗೆ ಹೋಗಿ ಭಕ್ಷಣಕ್ಕೆ ಯೋಗ್ಯವಾಗಿರುವ, ನಿಷಿದ್ಧವಲ್ಲದೇ ಇರುವ ಶುದ್ಧವಾದ ಮೃಗಗಳನ್ನು ಶ್ರಾದ್ಧಕರ್ಮಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರವೇ ಕೊಲ್ಲಬೇಕೆಂದು ವಿಧಿಯಿರುವುದು. ವ್ಯರ್ಥವಾಗಿ ಪಶುಹಿಂಸೆಯನ್ನು ಮಾಡಬಾರದು.

ಯ ಏವಂ ಕರ್ಮ ನಿಯತಂ ವಿದ್ವಾನ್ಕುರ್ವೀತ ಮಾನವಃ ।
ಕರ್ಮಣಾ ತೇನ ರಾಜೇನ್ದ್ರ ಜ್ಞಾನೇನ ನ ಸ ಲಿಪ್ಯತೇ ॥೭॥

ಎಲೈ ರಾಜೇಂದ್ರನೇ! ಹೀಗೆ ಶಾಸ್ತ್ರವು ನಿಯತಮಾಡಿರುವ ಕರ್ಮಗಳನ್ನು–ನಿಯಮವನ್ನರಿತು ಆಚರಿಸುವ ಮನುಷ್ಯನಿಗೆ–ಚಿತ್ತಶುದ್ಧಿಯಿಂದ ಜ್ಞಾನವುಂಟಾಗುವುದರಿಂದ ಆತನಿಗೆ ಕರ್ಮದ ಲೋಪವುಂಟಾಗುವುದಿಲ್ಲ.

ಅನ್ಯಥಾ ಕರ್ಮ ಕುರ್ವಾಣೋ ಮಾನಾರೂಢೋ ನಿಬಧ್ಯತೇ ।
ಗುಣಪ್ರವಾಹಪತಿತೋ ನಷ್ಟಪ್ರಜ್ಞೋ ವ್ರಜತ್ಯಧಃ ॥೮॥

ಕರ್ತೃತ್ವವೇ ಮುಂತಾದ ಅಭಿಮಾನಗಳನ್ನು ಬಿಟ್ಟು ಶಾಸ್ತ್ರೋಕ್ತವಾದ ಕರ್ಮಗಳನ್ನು ಆಚರಿಸಬೇಕು. ಹಾಗಲ್ಲದೇ ಮನಸ್ಸಿಗೆ ತೋಚಿದಂತೆ ಕರ್ಮಗಳನ್ನು ಆಚರಿಸಿದರೆ ಮನುಷ್ಯನು ಅಭಿಮಾನಕ್ಕೆ ವಶನಾಗಿ ಕರ್ಮಗಳ ಕಟ್ಟಿಗೆ ಸಿಕ್ಕಿಬೀಳುತ್ತಾನೆ ಮತ್ತು ಗುಣಪ್ರವಾಹರೂಪವಾದ ಸಂಸಾರಚಕ್ರದಲ್ಲಿ ಬಿದ್ದು ವಿವೇಕವನ್ನು ಕಳೆದುಕೊಳ್ಳುವುದರಿಂದ ಪತಿತನಾಗುತ್ತಾನೆ ; ಅಧಮಯೋನಿಯಲ್ಲಿ ಬೀಳುತ್ತಾನೆ.

ಪುರಂಜನನು ಪ್ರಯೋಗಿಸಿದ ಚಿತ್ರ-ವಿಚಿತ್ರವಾದ ಗರಿಗಳುಳ್ಳ ಬಗೆ-ಬಗೆಯ ಬಾಣಗಳಿಂದ ಕತ್ತರಿಸಲ್ಪಟ್ಟು ಅನೇಕ ಜೀವಗಳು ಅತಿಕಷ್ಟದಿಂದ ಪ್ರಾಣವನ್ನು ಬಿಡತೊಡಗಿದುವು. ಆತನ ಆ ನಿರ್ದಯವಾದ ವ್ಯವಹಾರವನ್ನು ಕಂಡು ದಯಾಳುಗಳಾದ ಸಾಧುಗಳಿಗೆ ಅತೀವ ದುಃಖವಾಯಿತು ; ಅವರಿಗೆ ಅದನ್ನು ಸಹಿಸಲಾಗಲಿಲ್ಲ. ಈ ರೀತಿಯಲ್ಲಿ ಅಲ್ಲಿರುವ ಮೊಲಗಳು, ಕಾಡುಹಂದಿಗಳು, ಕಾಡುಕೋಣಗಳು, ಕಾಡುಹಸುಗಳು, ಜಿಂಕೆಗಳು, ಮುಳ್ಳುಹಂದಿಗಳು ಮತ್ತು ಇನ್ನೂ ಅನೇಕ ಜಾತಿಯ ನೂರಾರು ಮೃಗಗಳನ್ನು ಕೊಂದುದರಿಂದ ಪುರಂಜನನಿಗೆ ತುಂಬಾ ಆಯಾಸವಾಯಿತು. ಆಗ ಆತನು

ಹಸಿವು-ಬಾಯಾರಿಕೆಗಳಿಂದ ಬಳಲಿ ಬೇಟೆಯನ್ನು ನಿಲ್ಲಿಸಿ ಅರಮನೆಗೆ ಹಿಂದಿರುಗಿದನು. ಅಲ್ಲಿ ಸ್ನಾನ, ಭೋಜನಗಳೇ ಮುಂತಾದುವುಗಳನ್ನು ಯಥೋಚಿತವಾಗಿ ಮುಗಿಸಿ ಸ್ವಲ್ಪ ವಿಶ್ರಾಂತಿಯನ್ನು ಪಡೆದು ಆಯಾಸ ಪರಿಹಾರಮಾಡಿಕೊಂಡನು. ಅನಂತರ, ಧೂಪ-ಗಂಧ-ಪುಷ್ಪಮಾಲಿಕೆ–ಮುಂತಾದುವುಗಳನ್ನು ಸೇವಿಸಿ, ಎಲ್ಲ ಅಂಗಗಳನ್ನೂ ಚೆನ್ನಾಗಿ ಅಲಂಕರಿಸಿ ಕೊಂಡವನಾಗಿ ಮಡದಿಯನ್ನು ಮನಸ್ಸಿನಲ್ಲಿಯೇ ನೆನೆಸಿಕೊಂಡನು. ಆಹಾರ-ಪಾನೀಯ ಮುಂತಾದುವುಗಳಿಂದ ತೃಪ್ತಿಗೊಂಡು ಸಂತೋಷಭರಿತನಾಗಿ ಮದವೇರಿ ಕಾಮಪೀಡಿತನಾಗಿ ತನ್ನ ಸುಂದರಿಯಾದ ಮಡದಿಯನ್ನು ಹುಡುಕತೊಡಗಿದನು. ಆದರೆ ಆತನಿಗೆ ತನ್ನ ಮಡದಿಯು ಸಿಕ್ಕದಿರಲು ಮನಸ್ಸಿಗೆ ಸ್ವಲ್ಪ ಬೇಸರವಾದಂತಾಗಿ ಅಂತಃಪುರದ ಸ್ತ್ರೀಯರನ್ನು ಕುರಿತು "ಎಲೈ ಸುಂದರಿಯರೇ! ನಿಮ್ಮ ಒಡತಿಯೂ ಮತ್ತು ನೀವೂ ಹಿಂದಿನಂತೆ ಕುಶಲವಾಗಿದ್ದೀರಿ ತಾನೇ? (ಶ್ಲೋಕ 9-14)

ನ ತಥೈತರ್ಹಿ ರೋಚನ್ತೇ ಗೃಹೇಷು ಗೃಹಸಮ್ಪದಃ ।
ಯದಿ ನ ಸ್ಯಾದ್ಗೃಹೇ ಮಾತಾ ಪತ್ನೀ ವಾ ಪತಿದೇವತಾ ।
ವ್ಯಙ್ಗೇ ರಥ ಇವ ಪ್ರಾಜ್ಞಃ ಕೋ ನಾಮಾಸೀತ ದೀನವತ್ ॥೧೫॥

ಇಂದು ಈ ಮನೆಯ ಸಂಪತ್ತು ಹಿಂದಿನಂತೆ ಸುಂದರವಾಗಿ ಕಾಣು ತ್ತಿಲ್ಲವಲ್ಲಾ! ಇದಕ್ಕೇನು ಕಾರಣ? ಯಾವ ಮನೆಯಲ್ಲಿ ತಾಯಿಯಾಗಲೀ ಅಥವಾ ಪತಿನಿಷ್ಠೆಯುಳ್ಳ ಹೆಂಡತಿಯಾಗಲೀ ಇರುವುದಿಲ್ಲವೋ–ಆ ಮನೆಯು ಚಕ್ರವಿಲ್ಲದ ರಥದಂತೆ ಆಗಿಬಿಡುವುದು. ಅಂತಹ ಮನೆಯಲ್ಲಿ ಯಾವ ಬುದ್ಧಿವಂತನು ತಾನೇ ದೀನಜನರಂತೆ ವಾಸಮಾಡಲು ಇಚ್ಛೆಪಡುತ್ತಾನೆ?

ಆದ್ದರಿಂದ ನಾನು, ದುಃಖಸಮುದ್ರದಲ್ಲಿ ಮುಳುಗಿದಾಗಲೆಲ್ಲಾ ನನ್ನ ವಿವೇಕಬುದ್ಧಿಯನ್ನು ಹೆಜ್ಜೆ-ಹೆಜ್ಜೆಯಲ್ಲಿಯೂ ಎಚ್ಚರಗೊಳಿಸುತ್ತಾ ಆ ಸಂಕಟದಿಂದ ಉದ್ಧರಿಸುವ, ಸುಂದರಿಯಾದ ಆ ನನ್ನ ಪ್ರಿಯತಮೆಯು ಎಲ್ಲಿದ್ದಾಳೆ? ಎಂಬುದನ್ನು ಹೇಳಿರಿ"–ಎಂದು ಪ್ರಶ್ನೆಮಾಡಿದನು.

ಆ ಹೆಂಗಸರು ಅದಕ್ಕೆ–"ನರೇಂದ್ರನೇ! ನಿಮ್ಮ ಆ ಇನಿಯಳು ಇಂದು ಏನು ಮಾಡಲು ನಿಶ್ಚಯಿಸಿದ್ದಾಳೆ?–ಎಂಬುದು ನಮಗೆ ತಿಳಿಯದು.

ಶತ್ರುಸಂಹಾರಕನೇ! ಇದೋ ನೋಡು, ಆಕೆಯು ಹಾಸಿಗೆಯಿಲ್ಲದ ಬರೀ ನೆಲದ ಮೇಲೆ ಮಲಗಿಕೊಂಡಿದ್ದಾಳೆ"–ಎಂದು ಉತ್ತರಿಸಿದರು.

ಶ್ರೀನಾರದಮಹರ್ಷಿಗಳು ಹೇಳುತ್ತಾರೆ :

"ಮಹಾರಾಜ! ಮುಂದೇನಾಯಿತೆಂಬುದನ್ನು ಹೇಳುತ್ತೇನೆ, ಕೇಳು. ಆ ರಾಣಿಯ ಸಂಗದಿಂದಾಗಿ ಪುರಂಜನಮಹಾರಾಜನ ವಿವೇಕವು ನಷ್ಟವಾಗಿ ಬಿಟ್ಟಿತ್ತು. ಆದ್ದರಿಂದ ತನ್ನ ರಾಣಿಯು ನೆಲದ ಮೇಲೆ ಅಸ್ತವ್ಯಸ್ತವಾಗಿ ಬಿದ್ದುಕೊಂಡಿರುವುದನ್ನು ನೋಡಿ ಆತನಿಗೆ ತಡೆಯಲಾರದ ಶೋಕ ವುಂಟಾಯಿತು. ಆತನು ನೊಂದ ಹೃದಯದಿಂದ ಆಕೆಯನ್ನು ಸವಿಮಾತು ಗಳಿಂದ ಸಂತೈಸಿದನು. ಆದರೆ ಆಕೆಗೆ ತನ್ನಲ್ಲಿ ಪ್ರೀತಿಯುಂಟಾಗುವ ಯಾವ ಚಿಹ್ನೆಯೂ ಆತನಿಗೆ ಕಂಡುಬರಲಿಲ್ಲ. ಪುರಂಜನನು ಸಂತೈಸುವ ಕಲೆಯಲ್ಲಿ ತುಂಬಾ ಕುಶಲನಾಗಿದ್ದನು. ಆತನು ಆಕೆಯನ್ನು ಮೆಲ್ಲ-ಮೆಲ್ಲನೆ ಅನುನಯ-ವಿನಯಗಳಿಂದ ಸಾಂತ್ವನಗೊಳಿಸಲು ಪ್ರಾರಂಭಿಸಿದನು. ಮೊದಲಿಗೆ ಆಕೆಯ ಪಾದಗಳನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡು ಪ್ರೀತಿಯಿಂದ ಆಕೆಯನ್ನು ಮುದ್ದಿಸುತ್ತಾ ಹೀಗೆಂದನು :

"ಸುಂದರಿ! ಯಾವ ಸೇವಕರು–ಅಪರಾಧವನ್ನು ಮಾಡಿದಾಗ ಒಡೆಯನಿಂದ ಅದಕ್ಕೆ ತಕ್ಕ ದಂಡನೆಯನ್ನು ಪಡೆಯುವುದಿಲ್ಲವೋ–ಅವರು ನಿಜವಾಗಿಯೂ ಮಂದಭಾಗ್ಯರು. ಸ್ವಾಮಿಯು ಸೇವಕರಿಗೆ ದಂಡನೆಯನ್ನು ಕೊಟ್ಟರೆ ಅವರ ಮೇಲೆ ದೊಡ್ಡ ಅನುಗ್ರಹವನ್ನು ತೋರಿದಂತೆ ಆಗುತ್ತದೆ. ಹಿತಕಾರಿಯಾದ ತನ್ನ ಪ್ರಭುವು ಬಂಧುವಿನಂತೆ ಮಾಡಿದ ಆ ದಂಡನೆಯೆಂಬ ಉಪಕಾರವನ್ನು ಸೈರಿಸದೇ ಇರುವವರು ನಿಜವಾಗಿಯೂ ಮೂರ್ಖರು. ಸುಂದರವಾದ ಸುಲಿಹಲ್ಲುಗಳಿಂದಲೂ–ರಮಣೀಯವಾದ ಹುಬ್ಬು ಗಳಿಂದಲೂ ಶೋಭಿಸುತ್ತಿರುವ ಶುಭಾಂಗಿಯೇ! ಈಗ ಈ ಕೋಪವನ್ನು ತೊರೆದು 'ನಾನು ನಿನ್ನವನು' ಎಂಬುದನ್ನು ನೆನೆದು ಪ್ರೇಮಾತಿಶಯದಿಂದ ಕೂಡಿದ, ನಾಚಿಕೆಯಿಂದ ತಗ್ಗಿ ಮಧುರವಾದ ಕಿರುನಗೆಯಿಂದ ಮೆರೆಯುವ ನಿನ್ನ ಮನೋಹರವಾದ ಮುಖವನ್ನು ತೋರಿಸುವವಳಾಗು. ಆಹಾ! ದುಂಬಿ ವಿಂಡುಗಳ ಸಾಲಿನಂತೆ ನೀಲಿಯ ಬಣ್ಣದಿಂದ ಕಂಗೊಳಿಸುತ್ತಿರುವ

ಮುಂಗುರುಳು, ಉನ್ನತವಾದ ಮೂಗು ಮತ್ತು ಸವಿನುಡಿಗಳಿಂದ ನಿನ್ನ ಮುಖಾರವಿಂದವು ಎಷ್ಟು ಮನೋಮೋಹಕವಾಗಿದೆ? ಎಲೈ ವೀರ ಪತ್ನಿಯೇ! ಯಾವನಾದರೂ ನಿನಗೆ ಅಪರಾಧವನ್ನೆಸಗಿದ್ದರೆ ಅದನ್ನು ಒಡನೆಯೇ ತಿಳಿಸು. ಆತನು ಬ್ರಾಹ್ಮಣಕುಲದವನಲ್ಲದೇ ಇದ್ದರೆ ನಾನು ಆತನಿಗೆ ಈಗಲೇ ಉಗ್ರಶಿಕ್ಷೆಯನ್ನು ವಿಧಿಸುತ್ತೇನೆ. ಮೂರು ಲೋಕಗಳಲ್ಲಾ ಗಲೀ ಅಥವಾ ಅವುಗಳ ಹೊರಗಾಗಲೀ ಶ್ರೀಭಗವಂತನ ಭಕ್ತರನ್ನು ಬಿಟ್ಟು ಬೇರೆ ಯಾವನೂ ನಿನ್ನಲ್ಲಿ ಅಪರಾಧವನ್ನು ಮಾಡಿ ನಿರ್ಭಯನಾಗಿಯೂ, ಸುಖಿಯಾಗಿಯೂ ಇರಲಾರನು. ಪ್ರಿಯೇ! ನಿನ್ನ ಮುಖವು ತಿಲಕವಿಲ್ಲದೇ ಕಾಂತಿಹೀನವಾಗಿ ಬಾಡಿ, ಬಸವಳಿದು, ಕೋಪದಿಂದ ಭೀಕರವಾಗಿ ಇದ್ದು ದನ್ನು ನಾನು ಇಂದಿನವರೆಗೂ ಎಂದೂ ಕಂಡಿರಲಿಲ್ಲ–ಹಾಗೆಯೇ ನಿನ್ನ ಸುಂದರವಾದ ಸ್ತನಗಳು ಕಣ್ಣೀರಿನಿಂದ ನೆನೆದಿರುವುದನ್ನಾಗಲೀ, ನಿನ್ನ ತೊಂಡೆ ಹಣ್ಣಿನಂತಿರುವ ಚಂದವಾದ ಕೆಳದುಟಿಯು ಕೇಸರಿಯ ಲೇಪದಿಂದ ಕೆಂಪಾಗದೇ ಇರುವುದನ್ನಾಗಲೀ ಎಂದೂ ಕಂಡಿರಲಿಲ್ಲ. ನಾನು ಬೇಟೆಯ ಮೇಲಿನ ಮಿತಿಮೀರಿದ ಆಸಕ್ತಿಯಿಂದ ಸೆಳೆಯಲ್ಪಟ್ಟವನಾಗಿ ನಿನ್ನನ್ನು ಕೇಳದೆಯೇ ಬೇಟೆಯಾಡಲು ಹೋಗಿ ನಿಜವಾಗಿಯೂ ಅಪರಾಧವನ್ನು ಮಾಡಿದ್ದೇನೆ. ಆದರೂ ನಾನು ನಿನ್ನವನು ಎಂಬುದನ್ನು ತಿಳಿದು ನನ್ನಲ್ಲಿ ಪ್ರಸನ್ನಳಾಗು. ಮನ್ಮಥನ ವಿಷಯವಾದ ಬಾಣಗಳಿಂದ ಪೀಡಿತನಾಗಿ, ಸದಾ ತನಗೆ ಅಧೀನ ನಾಗಿ ಬೇಡಿಕೊಳ್ಳುತ್ತಿರುವ ತನ್ನ ಪ್ರಿಯನಾದ ಪತಿಯನ್ನು ಯಾವ ಕಾಮಿನಿಯು ತಾನೇ ಉಚಿತವಾದ ಕಾರ್ಯಕ್ಕಾಗಿ ಸ್ವೀಕರಿಸುವುದಿಲ್ಲ?" ಹೀಗೆ ಬಗೆ-ಬಗೆಯ ಸವಿಮಾತು-ವರ್ತನೆಗಳಿಂದ ಪುರಂಜನನು ತನ್ನ ಕಾಮಿನಿಯನ್ನು ಸಂತೈಸಿದನು.

(ಶ್ಲೋಕ 16-26)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಚತುರ್ಥಸ್ಕಂಧದ ೨೬ನೆಯ ಅಧ್ಯಾಯವು ಮುಗಿಯಿತು.

ಚತುರ್ಥಸ್ಕಂಧ ೨೭ನೆಯ ಅಧ್ಯಾಯ

ಪುರಂಜನನ ನಗರಿಯ ಮೇಲೆ ಚಂಡವೇಗನ ದಾಳಿ : ಕಾಲಕನ್ಯೆಯ ಚರಿತ್ರೆ

ನಾರದಮಹರ್ಷಿಗಳು ಪ್ರಾಚೀನಬರ್ಹಿಮಹಾರಾಜನಿಗೆ ಹೇಳುತ್ತಾರೆ :

ಇತ್ಥಂ ಪುರಞ್ಜನಂ ಸಮ್ಯಗ್ವಶಮಾನೀಯ ವಿಭ್ರಮೈಃ ।
ಪುರಞ್ಜನೀ ಮಹಾರಾಜ ರೇಮೇ ರಮಯತೀ ಪತಿಮ್ ॥೧॥

"ಮಹಾರಾಜನೇ! ಕೇಳು. ಹೀಗೆ ಪುರಂಜನನ ಮಡದಿಯು ತನ್ನ ಪತಿಯನ್ನು ಬಗೆ-ಬಗೆಯ ವಿಲಾಸಗಳಿಂದ ಸಂಪೂರ್ಣವಾಗಿ ವಶಪಡಿಸಿ ಕೊಂಡು ಆತನನ್ನು ಆನಂದಗೊಳಿಸುತ್ತಾ ರಮಿಸತೊಡಗಿದಳು.

ಆಕೆಯು ಸ್ನಾನಮಾಡಿ ಚೆನ್ನಾಗಿ ಸಿಂಗರಿಸಿಕೊಂಡು ತೃಪ್ತಿಯಿಂದ ರಾಜನ ಬಳಿಗೆ ಬರಲು—ಆತನು ಆ ಚೆಲುವಿನ ಮುಖದ ಸುಂದರಿಯನ್ನು ಆದರದಿಂದ ಅಭಿನಂದಿಸಿದನು. ಪುರಂಜನಿಯು ರಾಜನನ್ನು ಆಲಿಂಗಿಸಿಕೊಳ್ಳಲು ಆತನೂ ಆಕೆಯನ್ನು ಆಲಿಂಗಿಸಿಕೊಂಡನು. ಹಾಗೂ ಏಕಾಂತದಲ್ಲಿ ಮನಸ್ಸಿಗೆ ಅನುಕೂಲವಾದ ರಹಸ್ಯವಾದ ಮಾತುಗಳನ್ನಾಡುತ್ತಾ ಆತನು ಆಕೆಯಲ್ಲಿ ಮಿತಿಮೀರಿ ಮೋಹಗೊಂಡನು. ಆ ಕಾಮಿನಿಯಲ್ಲಿ ಚಿತ್ತವು ನೆಟ್ಟುಹೋಗಿ ಆತನಿಗೆ ಆಕೆಯಲ್ಲಿ ಎಷ್ಟು ಮೋಹವುಂಟಾಯಿತೆಂದರೆ : ಹಗಲು-ರಾತ್ರಿ ಎಂಬ ವ್ಯತ್ಯಾಸದಿಂದ ನಿರಂತರವಾಗಿ ಕಳೆದುಹೋಗುತ್ತಿದ್ದ ಕಾಲದ ದುಸ್ತರವಾದ ಗತಿಯೇ ಆತನ ಗಮನಕ್ಕೆ ಬರದೇ ಹೋಯಿತು. ಮತ್ತೇರಿದ ಮನಸ್ವಿಯಾದ ಪುರಂಜನನು ತನ್ನ ಪ್ರಿಯೆಯ ಭುಜದ ಮೇಲೆ ತಲೆಯನ್ನಿಟ್ಟುಕೊಂಡು ಅಮೂಲ್ಯವಾದ ಹಂಸತೂಲಿಕಾತಲ್ಪದ ಮೇಲೆ ಪವಡಿಸುತ್ತಿದ್ದನು. ಆ ರಮಣಿಯೇ ಜೀವನದ ಪರಮಫಲವೆಂದು ಆತನು ಭಾವಿಸಿಕೊಂಡನು. ಅಜ್ಞಾನದಿಂದ ನಿಬಿಡವಾಗಿ ಆವರಿಸಲ್ಪಟ್ಟಿದ್ದ ಆತನಿಗೆ ಆತ್ಮನ ಅಥವಾ ಪರಮಾತ್ಮನ ಜ್ಞಾನವು ಸ್ವಲ್ಪವೂ ಬರಲಿಲ್ಲ.

ಎಲೈ ರಾಜನೇ! ಹೀಗೆ ಕಾಮಾತುರವಾದ ಚಿತ್ತದಿಂದ ಆಕೆಯೊಡನೆ ವಿಹರಿಸುತ್ತಾ ಇದ್ದ ಪುರಂಜನನಿಗೆ ಯೌವವು ಅರ್ಧಕ್ಷಣದಂತೆ ಕಳೆದು

ಹೋಯಿತು. ರಾಜನಿಗೆ ಆ ಪುರಂಜನಿಯಲ್ಲಿ ಸಾವಿರದ ನೂರು ಮಂದಿ ಪುತ್ರರೂ–ನೂರಹತ್ತು ಮಂದಿ ಪುತ್ರಿಯರೂ ಜನಿಸಿದರು. ಅವರೆಲ್ಲರೂ ತಂದೆ-ತಾಯಿಗಳ ಕೀರ್ತಿಯನ್ನು ವೃದ್ಧಿಪಡಿಸುವ ಸುಪುತ್ರ-ಸುಪುತ್ರಿಯ ರಾಗಿದ್ದರು. ಸೌಶೀಲ್ಯ-ಔದಾರ್ಯಗಳೇ ಮುಂತಾದ ಉತ್ತಮಗುಣಗಳಿಂದ ಸಂಪನ್ನರಾಗಿದ್ದ ಅವರು ಪೌರಂಜನಿಯರೆಂದೇ ವಿಖ್ಯಾತರಾದರು. ಅಷ್ಟ ರಲ್ಲಿಯೇ ರಾಜನ ದೀರ್ಘವಾದ ಆಯುಸ್ಸಿನ ಅರ್ಧಭಾಗ ಕಳೆದುಹೋಗಿತ್ತು. ಅನಂತರ ಪುರಂಜನಮಹಾರಾಜನು ಪಿತೃವಂಶವನ್ನು ವೃದ್ಧಿಪಡಿಸುವ ತನ್ನ ಪುತ್ರರಿಗೆ ಯೋಗ್ಯರಾದ ವಧುಗಳೊಡನೆಯೂ ಮತ್ತು ಪುತ್ರಿಯರಿಗೆ ತಕ್ಕ ವರರೊಡನೆಯೂ ವಿವಾಹವನ್ನು ನೆರವೇರಿಸಿದನು. ಅವನ ಪುತ್ರರಲ್ಲಿ ಒಬ್ಬೊಬ್ಬನಿಗೂ ನೂರು-ನೂರು ಮಂದಿ ಪುತ್ರರು ಜನಿಸಿದರು. ಅವರಿಂದ ವೃದ್ಧಿಹೊಂದಿದ ಪುರಂಜನನ ವಂಶವು ಇಡೀ ಪಾಂಚಾಲದೇಶದಲ್ಲಿ ಹರಡಿಕೊಂಡಿತು. ಹಾಗೆ ಬೆಳೆಯುತ್ತಾ ಆಸ್ತಿಗೆ ಬಾಧ್ಯಸ್ಥರಾಗಿದ್ದ ಪುತ್ರ-ಪೌತ್ರಾದಿಗಳಲ್ಲಿಯೂ, ಮನೆಯಲ್ಲಿಯೂ, ಕೋಶದಲ್ಲಿಯೂ, ತನ್ನನ್ನು ಅನುಸರಿಸಿ ಬಾಳುತ್ತಿದ್ದ ಮಂತ್ರಿ-ಸೇನಾಪತಿ-ಸೇವಕರು ಮುಂತಾದವ ರಲ್ಲಿಯೂ ಮಮತೆಯು ದೃಢವಾಗಿ ಬೇರೂರಿಬಿಟ್ಟಿದ್ದರಿಂದ ಪುರಂಜನನು ಈ ವಿಷಯಗಳಲ್ಲಿಯೇ ಆಸಕ್ತನಾಗಿಬಿಟ್ಟಿದ್ದನು. ಎಲೈ ಪ್ರಾಚೀನಬರ್ಹಿಯೇ! ಅನಂತರ ಆತನೂ ಕೂಡ ನಿನ್ನಂತೆಯೇ ನಾನಾಬಗೆಯ ಭೋಗಗಳನ್ನು ಪಡೆಯುವ ಕಾಮನೆಯಿಂದ ಯಜ್ಞದೀಕ್ಷೆಯನ್ನು ಕೈಗೊಂಡು ಹಲವಾರು ಬಗೆಯ ಪಶುಹಿಂಸಾಮಯವಾದ ಘೋರಯಜ್ಞಗಳಿಂದ ದೇವತೆಗಳನ್ನೂ, ಪಿತೃಗಳನ್ನೂ, ಭೂತಪತಿಗಳನ್ನೂ ಆರಾಧಿಸಿದನು. ಹೀಗೆ ಆತನು ತನ್ನ ಇಡೀ ಆಯುಷ್ಯಕಾಲದಲ್ಲಿ ಆತ್ಮಕಲ್ಯಾಣವನ್ನುಂಟುಮಾಡುವ ಕರ್ಮಗಳ ಬಗೆಗೆ ಗಮನಕೊಡದೇ ಕುಟುಂಬಪಾಲನೆಯಲ್ಲಿಯೇ ಆಸಕ್ತನಾಗಿದ್ದನು. ಕೊನೆಗೆ ಸ್ತ್ರೀಲಂಪಟರಿಗೆ ಅತ್ಯಂತ ಅಪ್ರಿಯವಾಗಿರುವ ಮುಪ್ಪಿನ ಕಾಲವು ಆತನನ್ನು ಆವರಿಸಿತು.

ಈ ಕಥೆಗೆ ಸಂಬಂಧಪಟ್ಟಂತೆ ಚಂಡವೇಗನ ವೃತ್ತಾಂತವನ್ನು ಹೇಳು ತ್ತೇನೆ, ಕೇಳು. ಚಂಡವೇಗನೆಂಬುವನು ಒಬ್ಬ ಗಂಧರ್ವರಾಜನು. ಮುನ್ನೂರ ಅರುವತ್ತು ಮಂದಿ ಮಹಾಶೂರರಾದ ಗಂಧರ್ವರು ಆತನ ಅಧೀನ

ದಲ್ಲಿದ್ದರು. ಕಪ್ಪು ಮತ್ತು ಬಿಳುಪು ಬಣ್ಣಗಳಿಂದ ಕೂಡಿದ ಅಷ್ಟೇ ಸಂಖ್ಯೆಯ ಗಂಧರ್ವಸ್ತ್ರೀಯರು ಅವರೊಡನೆ ಮಡದಿಯರಂತೆ ಎಡೆಬಿಡದೇ ಕಲೆತು ಕೆಲಸಮಾಡುತ್ತಿರಲಾಗಿ ಅವರೆಲ್ಲರೂ ಅಲ್ಲಲ್ಲಿ ಸುತ್ತಾಡುತ್ತಾ ಸಂಪತ್ತಿ ನಿಂದಲೂ ಭೋಗಸಾಮಗ್ರಿಗಳಿಂದಲೂ ತುಂಬಿರುವ ನಗರಿಗಳನ್ನು ಒಬ್ಬ ರಾದ ಮೇಲೊಬ್ಬರಂತೆ ಸರದಿಯಿಂದ ಸೂರೆಮಾಡುತ್ತಿದ್ದರು. ಹಾಗೆಯೇ ಗಂಧರ್ವರಾಜನಾದ ಆ ಚಂಡವೇಗನೂ ಮತ್ತು ಆತನ ಅನುಚರರೂ ಪುರಂಜನರಾಜನ ನಗರವನ್ನು ಲೂಟಿಮಾಡಲು ಬಂದರು. ಆಗ ಅವರನ್ನು ಪ್ರಜಾಗರವೆಂಬ ಹೆಸರಿನ ಐದು ಹೆಡೆಯ ಸರ್ಪವು ತಡೆಗಟ್ಟಿತು. ಪುರಂಜನ ಪುರದ ಕಾವಲುಗಾರನಾಗಿದ್ದ ಆ ಮಹಾಬಲಶಾಲಿಯಾದ ಸರ್ಪವು ಒಬ್ಬಂಟಿಗನಾಗಿಯೇ, ಕೊಳ್ಳೆಹೊಡೆಯಲು ಬಂದ ಆ ಏಳುನೂರ ಇಪ್ಪತ್ತು ಮಂದಿ ಗಂಧರ್ವ ಮತ್ತು ಗಂಧರ್ವಿಯರೊಡನೆ ನೂರು ವರ್ಷಗಳ ಕಾಲ ಯುದ್ಧಮಾಡಿತು. ಹೀಗೆ ಬಹಳ ಮಂದಿ ವೀರರೊಡನೆ ಒಬ್ಬಂಟಿಗನಾಗಿಯೇ ಯುದ್ಧಮಾಡಿದ್ದರಿಂದ ತನ್ನ ಏಕಮಾತ್ರ ಬಂಧುವಾಗಿದ್ದ ಪ್ರಜಾಗರಸರ್ಪವು ಬಲಗುಂದಿರುವುದನ್ನು ಕಂಡು ಪುರಂಜನರಾಜನಿಗೂ, ಆತನ ರಾಷ್ಟ್ರ ದಲ್ಲೂ–ನಗರದಲ್ಲೂ ಇದ್ದ ಇತರ ಬಂಧುಗಳಿಗೂ ತುಂಬಾ ಚಿಂತೆಯುಂಟಾ ಯಿತು. ಅಷ್ಟು ದಿನಗಳವರೆಗೂ ಆತನು ಪಾಂಚಾಲದೇಶದ ಆ ನಗರಿಯಲ್ಲಿ ತನ್ನ ದೂತರು ತಂದುಕೊಡುತ್ತಿದ್ದ ಕಂದಾಯವನ್ನು ತೆಗೆದುಕೊಳ್ಳುತ್ತಾ ವಿಷಯಭೋಗಗಳಲ್ಲಿಯೇ ಮುಳುಗಿಬಿಟ್ಟಿದ್ದನಷ್ಟೇ! ಆತನು ಹೆಂಗಸಿಗೆ ವಶನಾಗಿಬಿಟ್ಟಿದ್ದರಿಂದ ಮುಂದೆ ಅವಶ್ಯವಾಗಿ ಬಂದೇ ಬರುವ ಇಂತಹ ಭಯದ ಸುಳಿವೇ ಆತನಿಗೆ ಅಲ್ಲಿಯವರೆಗೂ ಇರಲಿಲ್ಲ. (ಶ್ಲೋಕ 2-18)

ಬರ್ಹಿಷ್ಮಂತಮಹಾರಾಜನೇ! ಕೇಳು. ಅದೇ ದಿನಗಳಲ್ಲಿ ಕಾಲ ಪುರುಷನ ಮಗಳೊಬ್ಬಳು ತನಗಾಗಿ ವರನೊಬ್ಬನನ್ನು ಹುಡುಕುತ್ತಾ ಮೂರು ಲೋಕಗಳಲ್ಲಿಯೂ ಅಲೆದಾಡುತ್ತಿದ್ದಳು. ಆದರೆ ಆಕೆಯನ್ನು ಯಾರೂ ಸ್ವೀಕರಿಸಲಿಲ್ಲ. ಆಕೆಯ ಹೆಸರು ಜರಾ (ಮುಪ್ಪು) ಎಂದು. ಆಕೆಯು ಅತ್ಯಂತಭಾಗ್ಯಹೀನೆಯಾಗಿದ್ದುದರಿಂದ ಆಕೆಯನ್ನು ಲೋಕದಲ್ಲಿ ಎಲ್ಲರೂ ದುರ್ಭಗಾ (ದುರ್ಭಾಗ್ಯಳು) ಎಂದು ಕರೆಯುತ್ತಿದ್ದರು. ಆದರೆ ಅಂತಹ ದುರ್ಭಾಗ್ಯಳನ್ನೂ ರಾಜರ್ಷಿ ಪೂರುವು ತನ್ನ ಇಚ್ಛೆಯಿಂದಲೇ ವರಿಸಿದ್ದನು.

ಆ ರಾಜರ್ಷಿಯು ತನ್ನ ತಂದೆಯನ್ನು ಸಂತೋಷಪಡಿಸುವ ಸಲುವಾಗಿ ತನ್ನ ಯೌವನವನ್ನು ಅವನಿಗೆ ಕೊಡುವುದಕ್ಕಾಗಿ ಸ್ವೇಚ್ಛೆಯಿಂದಲೇ ಆಕೆಯನ್ನು ವರಿಸಿದನು. ಅದರಿಂದ ಸಂತೋಷಗೊಂಡ ಜರೆಯು ಆತನಿಗೆ 'ನಿನಗೆ ರಾಜಪದವಿಯು ಸಿಕ್ಕಲಿ' ಎಂದು ವರವನ್ನು ಕೊಟ್ಟಳು. ಒಮ್ಮೆ ನಾನು ಬ್ರಹ್ಮಲೋಕದಿಂದ ಭೂಮಿಗೆ ಬರುತ್ತಿದ್ದಾಗ ಆ ಕನ್ಯೆಯು ಅಲ್ಲಲ್ಲಿ ಅಲೆದಾಡುತ್ತಾ ನನ್ನನ್ನೂ ಸಂಧಿಸಿದಳು. ನಾನು ನೈಷ್ಠಿಕಬ್ರಹ್ಮಚಾರಿ ಎಂಬುದು ಆಕೆಗೆ ಗೊತ್ತಿದ್ದರೂ ಕಾಮಮೋಹಿತೆಯಾಗಿ ಆಕೆಯು ನನ್ನನ್ನು ವರಿಸಲು ಬಯಸಿದಳು. ನಾನು ಅವಳ ಬಯಕೆಯನ್ನು ತಿರಸ್ಕರಿಸಲು ಆಕೆಯು ಅತ್ಯಂತ ಕೋಪಗೊಂಡು ನನ್ನನ್ನು ಈ ರೀತಿ ಶಪಿಸಿದಳು :*

(ಶ್ಲೋಕ 19-21)

ಮಯಿ ಸಂರಭ್ಯ ವಿಪುಲಮದಾಚ್ಛಾಪಸಂ ಸುದುಃಸಹಮ್ ।
ಸ್ಥಾತುಮರ್ಹಸಿ ನೈಕತ್ರ ಮದ್ಯಾಚ್ಞಾವಿಮುಖೋ ಮುನೇ ॥೨೨॥

"ಎಲೈ ಮುನಿಯೇ! ನನ್ನ ಬೇಡಿಕೆಯನ್ನು ತಿರಸ್ಕರಿಸಿದ್ದೀಯೆ. ಆದುದರಿಂದ ನೀನು ಯಾವುದೇ ಒಂದು ಜಾಗದಲ್ಲಿಯೂ ಹೆಚ್ಚು ಕಾಲ ನಿಲ್ಲದಿರುವಂತಾಗಲಿ"–ಎಂದು ನನಗೆ ಸಹಿಸಲು ಕಷ್ಟವಾದಂತಹ ಶಾಪವನ್ನು ಕೊಟ್ಟುಬಿಟ್ಟಳು.

ಹೀಗೆ ನನ್ನಿಂದ ನಿರಾಶಳಾದ ಆಕೆಯು ನನ್ನ ಸಮ್ಮತಿಯನ್ನು ಪಡೆದು ಯವನರಾಜನಾದ ಭಯ ಎಂಬುವನ ಬಳಿಗೆ ಹೋಗಿ ಅವನನ್ನು ಪತಿಯಾಗಬೇಕೆಂದು ಪ್ರಾರ್ಥಿಸುತ್ತಾ ಹೀಗೆ ಹೇಳಿದಳು :

ಋಷಭಂ ಯವನಾನಾಂ ತ್ವಾಂ ವೃಣೇ ವೀರೇಪ್ಸಿತಂ ಪತಿಮ್ ।
ಸಙ್ಕಲ್ಪಸ್ತ್ವಯಿ ಭೂತಾನಾಂ ಕೃತಃ ಕಿಲ ನ ರಿಷ್ಯತಿ ॥೨೪॥

ದ್ವಾವಿಮಾವನುಶೋಚನ್ತಿ ಬಾಲಾವಸದವಗ್ರಹೌ ।
ಯಲ್ಲೋಕಶಾಸ್ತ್ರೋಪನತಂ ನ ರಾತಿ ನ ತದಿಚ್ಛತಿ ॥೨೫॥

---

* ಇಲ್ಲಿ 'ನಾನು' ಎಂದರೆ ನಾರದಮಹರ್ಷಿಗಳು. ಅವರು ಬರ್ಹಿಷ್ಮಂತರಾಜ (ಪ್ರಾಚೀನಬರ್ಹಿಮಹಾರಾಜ) ನಿಗೆ ಈ ಪುರಂಜನೋಪಾಖ್ಯಾನವನ್ನು ಹೇಳುತ್ತಿದ್ದಾರೆಂಬುದನ್ನು ಸ್ಮರಿಸಬೇಕು. (ಶ್ಲೋಕ ೨೧)

"ಎಲೈ ವೀರವರನೇ! ನೀನು ಯವನರಲ್ಲಿ ಶ್ರೇಷ್ಠನು. ಇಂತಹ ನಿನ್ನನ್ನು ಕುರಿತು ಜೀವಗಳು ಮಾಡಿದ ಸಂಕಲ್ಪವು ಎಂದಿಗೂ ವ್ಯರ್ಥವಾಗುವುದಿಲ್ಲ. ಯಾವ ಮನುಷ್ಯನು ಲೋಕದೃಷ್ಟಿಯಿಂದ ಅಥವಾ ಶಾಸ್ತ್ರದೃಷ್ಟಿಯಿಂದ ದಾನಮಾಡಲು ಯೋಗ್ಯವಾದ ವಸ್ತುವನ್ನು ದಾನಮಾಡುವುದಿಲ್ಲವೋ, ಹಾಗೆಯೇ ಯಾವನು ಶಾಸ್ತ್ರದೃಷ್ಟಿಯಿಂದ ಆ ದಾನವನ್ನು ತೆಗೆದುಕೊಳ್ಳುವುದಕ್ಕೆ ಯೋಗ್ಯನಾಗಿದ್ದರೂ ತೆಗೆದುಕೊಳ್ಳುವುದಿಲ್ಲವೋ– ಅವರಿಬ್ಬರೂ ದುರಾಗ್ರಹಿಗಳು ಮತ್ತು ಮೂಢರು. ಅವರು ಶೋಚನೀಯ ಪ್ರಾಣಿಗಳಾಗಿ ಮುಂದೆ ಪಶ್ಚಾತ್ತಾಪಪಡಬೇಕಾಗುವುದು.

ಅಥೋ ಭಜಸ್ವ ಮಾಂ ಭದ್ರ ಭಜನ್ತೀಂ ಮೇ ದಯಾಂ ಕುರು ।
ಏತಾವಾನ್ಪೌರುಷೋ ಧರ್ಮೋ ಯದಾರ್ತಾನನುಕಮ್ಪತೇ ॥೨೬॥

ಮಂಗಳಾಂಗನೇ! ಈಗ ನಾನು ನಿನ್ನನ್ನು ಸೇವಿಸಲು ಸಿದ್ಧಳಾಗಿ ಬಂದಿದ್ದೇನೆ. ನನ್ನನ್ನು ಸ್ವೀಕರಿಸಿ ಅನುಗ್ರಹಿಸು. ದೀನರ ಮೇಲೆ ದಯೆ ತೋರುವುದೇ ಮನುಷ್ಯನ ಸರ್ವಶ್ರೇಷ್ಠವಾದ ಧರ್ಮವಲ್ಲವೇ?"

ಕಾಲಕನ್ಯೆಯ ಮಾತನ್ನು ಕೇಳಿ ಯವನೇಶ್ವರನು ದೈವಸಂಕಲ್ಪದಲ್ಲಿದ್ದ ಒಂದು ಗುಟ್ಟಾದ ಕಾರ್ಯವನ್ನು ಆಕೆಯಿಂದ ನೆರವೇರಿಸಲು ಇಚ್ಛಿಸುತ್ತಾ ನಸುನಗೆಯೊಡನೆ ಆಕೆಗೆ ಹೀಗೆಂದನು :

"ಎಲೈ ಭದ್ರೆಯೇ! ನಾನು ಯೋಗದೃಷ್ಟಿಯಿಂದ ನೋಡಿ ನಿನಗೆ ಒಬ್ಬ ವರನನ್ನು ನಿಶ್ಚಯಮಾಡಿದ್ದೇನೆ. ನೀನು ಎಲ್ಲರಿಗೂ ಅನಿಷ್ಟವನ್ನುಂಟು ಮಾಡುವುದರಿಂದ ಯಾರಿಗೂ ಬೇಕೆನಿಸುವುದಿಲ್ಲ. ಅದಕ್ಕಾಗಿಯೇ ಯಾರೂ ನಿನ್ನನ್ನು ಸ್ವೀಕರಿಸುತ್ತಿಲ್ಲ. ಆದುದರಿಂದ ನೀನು ಕರ್ಮದಿಂದ ನಿರ್ಮಿತವಾಗಿರುವ ಈ ಲೋಕವನ್ನು ಬಲಾತ್ಕಾರದಿಂದ ಭೋಗಿಸು. ನಿನ್ನ ಗತಿಯು ಅವರಿಗೆ ತಿಳಿಯದೇ ಇರುವಂತೆ ಜನರನ್ನು ಆಕ್ರಮಿಸು. ಜೊತೆಗೆ ನನ್ನ ಸೈನ್ಯವನ್ನೂ ಕರೆದುಕೊಂಡು ಹೋಗು. ಅದರ ಸಹಾಯದಿಂದ ನೀನು ಎಲ್ಲ ಪ್ರಜೆಗಳನ್ನೂ ನಾಶಮಾಡಲು ಸಮರ್ಥಳಾಗುವೆ. ನಿನ್ನನ್ನು ಯಾರೂ ಎದುರಿಸಲಾಗುವುದಿಲ್ಲ. ನೋಡು! ಈ 'ಪ್ರಜ್ವಾರ' ಎನ್ನುವವನು ನನ್ನ

ಸೋದರನು. ನೀನು ನನ್ನ ಸೋದರಿಯಾಗು. ನಿಮ್ಮಿಬ್ಬರಿಂದೊಡಗೂಡಿ ನಾನು ನನ್ನ ಗತಿಯ ಸುಳಿವನ್ನು ಕೊಡದೇ ಭಯಂಕರವಾದ ಸೈನ್ಯವನ್ನು ಜೊತೆಯಲ್ಲಿ ಕರೆದುಕೊಂಡು ಈ ಲೋಕದಲ್ಲಿ ಎಲ್ಲೆಲ್ಲೂ ಸಂಚರಿಸುವೆನು."

(ಶ್ಲೋಕ 27-30)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಚತುರ್ಥಸ್ಕಂಧದ ೨೭ನೆಯ ಅಧ್ಯಾಯವು ಮುಗಿಯಿತು.

ಚತುರ್ಥಸ್ಕಂಧ ೨೮ನೆಯ ಅಧ್ಯಾಯ

ಪುರಂಜನನು ಜನ್ಮಾಂತರದಲ್ಲಿ ಹೆಂಗಸಾಗಿ ಹುಟ್ಟಿದುದು : ಅವಿಜ್ಞಾತನ ಉಪದೇಶದಿಂದ ಮುಕ್ತನಾದುದು

ನಾರದಮಹರ್ಷಿಗಳು ಹೇಳುತ್ತಾರೆ :

ಸೈನಿಕಾ ಭಯನಾಮ್ನೋ ಯೇ ಬರ್ಹಿಷ್ಮನ್ದಿಷ್ಟಕಾರಿಣಃ ।
ಪ್ರಜ್ವಾರಕಾಲಕನ್ಯಾಭ್ಯಾಂ ವಿಚೇರುರವನೀಮಿಮಾಮ್ ॥೧॥

"ಬರ್ಹಿಷ್ಮಂತನೇ! ಕೇಳು. ಅನಂತರ ಆ ಭಯನೆಂಬ ಯವನರಾಜನ ಸೈನಿಕರು ಪ್ರಜ್ವಾರ ಮತ್ತು ಕಾಲಕನ್ಯೆಯಾದ ಜರೆ–ಇವರೊಡನೆ ಈ ಭೂಮಿ ಯಲ್ಲಿ ಎಲ್ಲೆಲ್ಲೂ ಸಂಚರಿಸತೊಡಗಿದರು.

ಹೀಗೆ ಸುತ್ತಾಡುತ್ತಿರುವಾಗ ಒಮ್ಮೆ ಅವರು ಮುದಿಸರ್ಪದಿಂದ ಸಂರಕ್ಷಿತವಾಗಿ ಎಲ್ಲ ಬಗೆಯ ಸುಖಸಾಮಗ್ರಿಗಳಿಂದಲೂ ಸಂಪನ್ನವಾಗಿದ್ದ ಪುರಂಜನನ ಪುರಿಗೆ ಇದ್ದಕ್ಕಿದ್ದಂತೆ ರಭಸದಿಂದ ದಾಳಿಯಿಟ್ಟರು. ಆಗ ಕಾಲಕನ್ಯೆಯು ಆ ಪುರಿಯ ಪ್ರಜೆಗಳನ್ನು ಬಲಾತ್ಕಾರವಾಗಿ ಭೋಗಿಸ ತೊಡಗಿದಳು. ಆಕೆಯ ಹಿಡಿತಕ್ಕೆ ಸಿಕ್ಕಿದ ಮನುಷ್ಯರು ಶೀಘ್ರದಲ್ಲಿಯೇ ಸತ್ವಹೀನರಾಗಿಬಿಡುವರಷ್ಟೇ! ಅದೇ ಸಮಯದಲ್ಲಿ ಆ ಯವನರಾಜನೂ ಕಾಲಕನ್ಯೆಯಿಂದ ಭೋಗಿಸಲ್ಪಡುತ್ತಿದ್ದ ಆ ಪುರದೊಳಕ್ಕೆ ನಾಲ್ಕೂ ಕಡೆ ಗಳಿಂದಲೂ ಬೇರೆ-ಬೇರೆ ದ್ವಾರಗಳಿಂದ ನುಗ್ಗಿ ಅದನ್ನು ನಾಶಪಡಿಸ ತೊಡಗಿದನು. ಹೀಗೆ ತನ್ನ ಪುರಿಯು ಪೀಡಿತವಾಗುತ್ತಿದ್ದಾಗ 'ತಾನು ಆ ಪುರಕ್ಕೆ ಒಡೆಯನು. ಅದು ತನಗೇ ಸೇರಿದ್ದು'–ಎಂದು ಅಭಿಮಾನದಿಂದ

ಕೂಡಿ ಮಮತೆಗೆ ವಶನಾಗಿದ್ದ ದೊಡ್ಡ ಕುಟುಂಬಿಯಾದ ಪುರಂಜನರಾಜನನ್ನೂ ಬಗೆ-ಬಗೆಯ ಸಂಕಷ್ಟ-ಸಂತಾಪಗಳು ಪೀಡಿಸತೊಡಗಿದುವು. ಕಾಲಕನ್ಯೆಯು ಆಲಿಂಗನೆಮಾಡಿಕೊಂಡಿದ್ದರಿಂದ ಆತನ ಎಲ್ಲ ಸಂಪತ್ತೂ ನಷ್ಟವಾಗಿಬಿಟ್ಟಿತು. ವಿಷಯಗಳಲ್ಲಿ ಅತ್ಯಂತವಾಗಿ ಆಸಕ್ತನಾಗಿದ್ದ ಕಾರಣ ಆತನು ದೀನನಾಗಿ ವಿವೇಕಶಕ್ತಿಯನ್ನು ಕಳೆದುಕೊಂಡನು. ಗಂಧರ್ವರೂ ಮತ್ತು ಯವನರೂ ಬಲಾತ್ಕಾರದಿಂದ ಆತನ ಎಲ್ಲ ಸಂಪತ್ತನ್ನೂ ಕೊಳ್ಳೆಹೊಡೆದುಬಿಟ್ಟರು. 'ನಗರವೆಲ್ಲಾ ಧ್ವಂಸವಾಗಿಬಿಟ್ಟಿದೆ ; ಮಕ್ಕಳು, ಮೊಮ್ಮಕ್ಕಳು, ಸೇವಕರು ಮತ್ತು ಮಂತ್ರಿವರ್ಗದವರೆಲ್ಲರೂ ತನಗೆ ಪ್ರತಿಕೂಲರಾಗಿ ತನ್ನನ್ನು ತಿರಸ್ಕರಿಸುತ್ತಿದ್ದಾರೆ; ಹೆಂಡತಿಯೂ ಸ್ನೇಹರಹಿತಳಾಗಿಬಿಟ್ಟಿದ್ದಾಳೆ ; ಕಾಲಕನ್ಯೆಯು ದೇಹವನ್ನು ವಶಪಡಿಸಿಕೊಂಡುಬಿಟ್ಟಿದ್ದಾಳೆ ; ಪಾಂಚಾಲದೇಶವು ಶತ್ರುಗಳ ಕೈಯಲ್ಲಿ ಸಿಕ್ಕಿ ವಿನಾಶಹೊಂದಿದೆ' ಎಂಬುದನ್ನು ಗಮನಿಸಿ ಆತನು ಚಿಂತಾಸಾಗರದಲ್ಲಿ ಮುಳುಗಿಹೋದನು. ಆ ವಿಪತ್ತಿನಿಂದ ಪಾರಾಗುವ ಯಾವ ಉಪಾಯವೂ ಆತನಿಗೆ ತಿಳಿಯದೇ ಹೋಯಿತು. ಕಾಲಕನ್ಯೆಯು ಯಾವುದನ್ನು ಸಾರಹೀನವನ್ನಾಗಿ ಮಾಡಿಬಿಟ್ಟಳೋ–ಆ ಭೋಗಗಳಿಗೇ ಆಸೆಪಡುತ್ತಾ ಆತನು ದೈನ್ಯವನ್ನು ಹೊಂದಿದನು. ತನ್ನ ಪರಲೋಕಗತಿಯನ್ನೂ, ಪರಮಾತ್ಮಸ್ನೇಹವನ್ನೂ ಮರೆತು ಆತನು ಹೆಂಡತಿ-ಮಕ್ಕಳನ್ನು ಸಾಕಿ ಮುದ್ದಿಸುವುದರಲ್ಲಿಯೇ ಆಸಕ್ತನಾಗಿದ್ದನಷ್ಟೇ! (ಆಗಲೂ ಆತನಿಗೆ ಅದೇ ಚಿಂತೆ.) ಆ ಸ್ಥಿತಿಯಲ್ಲಿ ಬಿಟ್ಟುಹೋಗಲು ಇಷ್ಟವಿಲ್ಲದಿದ್ದರೂ ಆತನು ಆ ನಗರವನ್ನು ಬಿಟ್ಟುಹೋಗಲೇಬೇಕಾಯಿತು. ಏಕೆಂದರೆ : ಅದನ್ನು ಗಂಧರ್ವರೂ ಮತ್ತು ಯವನರೂ ಮುತ್ತಿ ಲೂಟಿಮಾಡಿದ್ದರು ಮತ್ತು ಕಾಲಕನ್ಯೆಯು ತುಳಿದುಹಾಕಿಬಿಟ್ಟಿದ್ದಳು. ಅಷ್ಟೇ ಅಲ್ಲದೇ ಯವನರಾಜನಾದ, ಭಯನ ಅಣ್ಣನಾದ ಪ್ರಜ್ವಾರನು ತನ್ನ ತಮ್ಮನಿಗೆ ಪ್ರಿಯವನ್ನುಂಟುಮಾಡುವ ಸಲುವಾಗಿ ಆ ಇಡೀ ನಗರಿಗೇ ಬೆಂಕಿಯನ್ನು ಹಚ್ಚಿಬಿಟ್ಟನು.

ಹಾಗೆ ತಮ್ಮ ನಗರಿಯು ಉರಿದುಹೋಗುತ್ತಿರುವುದನ್ನು ಕಂಡು ಪುರನಿವಾಸಿಗಳಿಗೂ, ಸೇವಕಗಣಕ್ಕೂ, ಸಂತಾನಗಳ ಸಮೂಹಕ್ಕೂ,

ಕುಟುಂಬದ ಯಜಮಾನಿಯಿಂದೊಡಗೂಡಿದ ಕುಟುಂಬವತ್ಸಲನಾಗಿದ್ದ ಪುರಂಜನರಾಜನಿಗೂ ಅತಿದುಃಖವಾಯಿತು. ನಗರವು ಕಾಲಕನ್ಯೆಯ ಕೈಗೆ ಸಿಕ್ಕಿಕೊಂಡಿರುವುದನ್ನು ಕಂಡು ನಗರವನ್ನು ರಕ್ಷಣೆಮಾಡುತ್ತಿದ್ದ ಸರ್ಪಕ್ಕೂ ಬಹಳ ಪೀಡೆಯುಂಟಾಯಿತು. ಏಕೆಂದರೆ : ಯವನರು ಅದರ ವಾಸಸ್ಥಾನದ ಮೇಲೂ ಅಧಿಕಾರ ಪಡೆದುಕೊಂಡುಬಿಟ್ಟಿದ್ದರು ಮತ್ತು ಪ್ರಜ್ವಾರನು ಅದರ ಮೇಲೂ ಆಕ್ರಮಣ ನಡೆಸಿದನು. ಆ ನಗರವನ್ನು ರಕ್ಷಿಸುವ ಸಾಮರ್ಥ್ಯವು ತನಗೆ ಇಲ್ಲದೇ ಹೋಗಲಾಗಿ ಆ ಮಹಾಸರ್ಪವು–ಮರವು ಬೆಂಕಿಯಿಂದ ಉರಿಯುತ್ತಿದ್ದರೆ ಪೊಟರೆಯಲ್ಲಿರುವ ಸರ್ಪವು ಮರವನ್ನು ಬಿಟ್ಟು ಹೊರಟು ಹೋಗುವಂತೆ–ತಾನೂ ಅತಿಕಷ್ಟದಿಂದ ನಡುಗುತ್ತಾ ಅಲ್ಲಿಂದ ಓಡಿ ಹೋಗಲು ಬಯಸಿತು. ಅದರ ಅಂಗಗಳು ಮತ್ತು ಉಪಾಂಗಗಳೆಲ್ಲವೂ ಶಿಥಿಲವಾಗಿಬಿಟ್ಟಿದ್ದುವು. ಗಂಧರ್ವರು ಅದರ ಎಲ್ಲ ಶಕ್ತಿಯನ್ನೂ ನಷ್ಟಪಡಿಸಿ ಬಿಟ್ಟಿದ್ದರು. ಆದುದರಿಂದ ಯವನಶತ್ರುಗಳು ತಡೆದಾಗ ಅದು ದುಃಖದಿಂದ ಗೋಳಾಡತೊಡಗಿತು. ಮನೆ, ಒಡಲು ಮೊದಲಾದವುಗಳಲ್ಲಿ 'ತಾನು-ತನ್ನದು' ಎಂಬ ಭಾವವನ್ನು ಇಟ್ಟುಕೊಂಡಿದ್ದರಿಂದ ಪುರಂಜನರಾಜನು ಅತ್ಯಂತ ಬುದ್ಧಿಹೀನನಾಗಿಬಿಟ್ಟಿದ್ದನು. ಹೆಂಡತಿಯ ಪ್ರೇಮದ ಸಂಕೋಲೆಯಲ್ಲಿ ಸಿಲುಕಿ ಆತನು ಅತ್ಯಂತ ದೀನನಾಗಿಬಿಟ್ಟಿದ್ದನು. ಅವುಗಳನ್ನು ಅಗಲಿ ಹೋಗುವ ಕಾಲವು ಬರಲು–ಮಕ್ಕಳು, ಮೊಮ್ಮಕ್ಕಳು, ಸೊಸೆ, ಅಳಿಯ, ಸೇವಕರು, ಮನೆ, ಭಂಡಾರ, ಕಾರ್ಯಗಾರ ಮತ್ತು ಇತರ ಪದಾರ್ಥಗಳಲ್ಲಿ ಆತನಿಗೆ ಮಮತೆಯು ಇನ್ನೂ ಉಳಿದುಕೊಂಡಿದ್ದಿತು. ಅವುಗಳ ಭೋಗವನ್ನು ಎಂದಿಗೂ ಅನುಭವಿಸಿ ತೀರಿಸಲಾಗುತ್ತಿರಲಿಲ್ಲ. ಈ ಎಲ್ಲ ಕಾರಣಗಳಿಂದ ಆತನು ಬಗೆ-ಬಗೆಯಾಗಿ ಚಿಂತೆಪಡತೊಡಗಿದನು. (ಶ್ಲೋಕ 2 -17)

"ಅಯ್ಯೋ! ನಾನು ಪರಲೋಕಕ್ಕೆ ಹೋಗಿಬಿಟ್ಟ ಬಳಿಕ ಈ ದೊಡ್ಡ ಕುಟುಂಬಕ್ಕೆ ಒಡತಿಯಾದ ನನ್ನ ಈ ಹೆಂಡತಿಯು ಅಸಹಾಯಳಾಗಿ ಹೇಗೆ ತಾನೇ ತನ್ನನ್ನು ನಿರ್ವಹಿಸಿಕೊಳ್ಳುವಳು? ಈ ಮಕ್ಕಳು-ಮರಿಗಳನ್ನು ಕುರಿತ ಚಿಂತೆಯೇ ಈಕೆಯನ್ನು ತಿಂದುಹಾಕಿಬಿಡುವುದಲ್ಲಾ! ಈಕೆಗೆ ನನ್ನ ಮೇಲೆ ಅದೆಷ್ಟು ಪ್ರೀತಿ! ನಾನು ಊಟಮಾಡದ ಹೊರತು ತಾನು ಊಟ

ಮಾಡುತ್ತಿರಲಿಲ್ಲ ; ನಾನು ಸ್ನಾನಮಾಡದ ಹೊರತು ತಾನೂ ಸ್ನಾನಮಾಡುತ್ತಿರಲಿಲ್ಲ ; ಸದಾ ನನ್ನ ಸೇವೆಯಲ್ಲಿಯೇ ಆಸಕ್ತಳಾಗಿರುತ್ತಿದ್ದಳು. ನಾನೇನಾದರೂ ಮುನಿಸಿಕೊಂಡರೆ ಭಯದಿಂದ ನಡುಗುತ್ತಿದ್ದಳು. ನಾನು ಗದರಿಸಿದರೆ ಹೆದರಿಕೆಯಿಂದ ಬಾಯಿಮುಚ್ಚಿಕೊಂಡುಬಿಡುತ್ತಿದ್ದಳು. ನಾನೇನಾದರೂ ತಪ್ಪುಮಾಡಿದರೆ ನನಗೆ ಎಚ್ಚರಿಕೆಯನ್ನು ನೀಡುತ್ತಿದ್ದಳು. ಈಕೆಗೆ ನನ್ನ ಮೇಲೆ ಪ್ರೀತಿಯು ಎಷ್ಟು ಹೆಚ್ಚಾಗಿತ್ತೆಂದರೆ : ನಾನೇನಾದರೂ ಪರದೇಶಕ್ಕೆ ಹೋದರೆ ಆಗ ಈಕೆಯು ಅಗಲಿಕೆಯ ದುಃಖದಿಂದ ಒಣಗಿಹೋಗುತ್ತಿದ್ದಳು. ಈಕೆಯು ವೀರಮಾತೆಯೇನೋ ಹೌದು. ಆದರೂ ನನ್ನ ಅನಂತರ ಈ ಗೃಹಸ್ಥಾಶ್ರಮದ ವ್ಯವಹಾರವನ್ನು ನಿಭಾಯಿಸಿಯಾಳೇ? ನನ್ನನ್ನೇ ಏಕಮಾತ್ರ ಆಧಾರವನ್ನಾಗಿ ಹೊಂದಿ ಇಲ್ಲಿರುವ ನನ್ನ ಪುತ್ರ-ಪುತ್ರಿಯರು ನಾನು ಹೊರಟುಹೋದ ಬಳಿಕ ಹೇಗೆ ತಾನೇ ಜೀವನವನ್ನು ಧರಿಸಿಯಾರು? ಸಮುದ್ರಮಧ್ಯದಲ್ಲಿ ಹಡಗು ಒಡೆದುಹೋಗಲಾಗಿ ಕಳವಳಪಡುವ ಹಡಗಿನ ಪ್ರಯಾಣಿಕರಂತೆ ಒದ್ದಾಡುವರಲ್ಲವೇ?"–ಎಂದು ಮೊದಲಾಗಿ ಪುರಂಜನನು ಚಿಂತಿಸತೊಡಗಿದನು." (ಶ್ಲೋಕ 18-21)

ಜ್ಞಾನದೃಷ್ಟಿಯಿಂದ ನೋಡಿದಾಗ ಹೀಗೆಲ್ಲಾ ಶೋಕಪಡುವುದು ಅನುಚಿತವಾಗಿದ್ದರೂ–ಪುರಂಜನನು ಅಜ್ಞಾನಕ್ಕೆ ಒಳಪಟ್ಟು ಹೀಗೆ ದೀನವಾದ ಬುದ್ಧಿಯಿಂದ ತನ್ನ ಹೆಂಡತಿ-ಮಕ್ಕಳಿಗಾಗಿ ದುಃಖದಿಂದ ಕಳವಳಪಡುತ್ತಿದ್ದನು. ಅದೇ ಸಮಯದಲ್ಲಿ ಆ ಬಡಪಾಯಿಗಳನ್ನು ಹಿಡಿದುಹಾಕುವುದಕ್ಕಾಗಿ ಭಯನೆಂಬ ಯವನರಾಜನು ಅಲ್ಲಿಗೆ ಬಂದನು. ಯವನರು ಪಶುವನ್ನು ಹೇಗೋ ಹಾಗೆ ರಾಜನನ್ನೂ ಕಟ್ಟಿಹಾಕಿ ತಮ್ಮ ಜಾಗಕ್ಕೆ ಸೆಳೆದೊಯ್ಯತೊಡಗಿದರು. ಆಗ ಆತನ ಅನುಚರರೂ ಕಡುಶೋಕದಿಂದ ಪೀಡಿತರಾಗಿ ದುಗುಡದಿಂದ ಆತನ ಹಿಂದೆ ಹೋದರು. ಯವನರಿಂದ ತಡೆಹಿಡಿಯಲ್ಪಟ್ಟಿದ್ದ ಸರ್ಪವೂ ಆಗ ಆ ಪುರಿಯನ್ನು ಬಿಟ್ಟು ಅವರೆಲ್ಲರ ಹಿಂದೆಯೇ ಹೋಯಿತು. ಅದು ಹೋದೊಡನೆಯೇ ಇಡೀ ನಗರವು ಭಿನ್ನ-ಭಿನ್ನವಾಗಿ ತನ್ನ ಪ್ರಕೃತಿಯಲ್ಲಿ ಲಯಹೊಂದಿತು. ಹೀಗೆ ಮಹಾಬಲಶಾಲಿಯಾದ ಯವನರಾಜನು ಬಲಾತ್ಕಾರದಿಂದ ಸೆಳೆದೊಯ್ಯುತ್ತಿದ್ದರೂ ಅಜ್ಞಾನದಲ್ಲಿ ಮುಳುಗಿಹೋಗಿದ್ದುದರಿಂದ ತನ್ನ ಹಿತೈಷಿಯೂ, ಹಳೆಯ

ಮಿತ್ರನೂ ಆದ ಅವಿಜ್ಞಾತನನ್ನು ಸ್ಮರಿಸಲಿಲ್ಲ. ಹಿಂದೆ ಪುರಂಜನನ ಯಜ್ಞಗಳಲ್ಲಿ ಬಲಿಕೊಡಲ್ಪಟ್ಟಿದ್ದ ಪಶುಗಳೇ ಆಗ ರಾಜನು ತಮಗೆ ಕೊಟ್ಟಿದ್ದ ಪೀಡೆಯನ್ನು ನೆನೆಸಿಕೊಂಡು ಕ್ರೋಧದಿಂದ ಆತನನ್ನು ಕೊಡಲಿಗಳಿಂದ ಕತ್ತರಿಸತೊಡಗಿದುವು. ಅನೇಕ ವರ್ಷಗಳ ಕಾಲ ಅವಿವೇಕದ ಸ್ಥಿತಿಯಲ್ಲೇ ಬಿದ್ದು ಆತನು ನಿರಂತರವಾಗಿ ಕಷ್ಟಗಳನ್ನು ಅನುಭವಿಸತೊಡಗಿದನು. ಸ್ತ್ರೀಯನ್ನು ಕುರಿತ ಆಸಕ್ತಿಯಿಂದ ಆತನಿಗೆ ಇಂತಹ ದುರ್ಗತಿಯು ಉಂಟಾಯಿತು. ತನ್ನ ಕೊನೆಗಾಲದಲ್ಲಿಯೂ ಸ್ತ್ರೀಚಿಂತನೆಯನ್ನೇ ಮಾಡುತ್ತಿದ್ದುದರಿಂದ ಪುರಂಜನರಾಜನು ಮುಂದಿನ ಹುಟ್ಟಿನಲ್ಲಿ ರಾಜಶ್ರೇಷ್ಠನಾದ ವಿದರ್ಭರಾಜನ ಮನೆಯಲ್ಲಿ ಒಬ್ಬ ಸುಂದರಿಯಾದ ಕನ್ಯೆಯಾಗಿ ಜನ್ಮ ಪಡೆದನು. ಆ ವಿದರ್ಭಪುತ್ರಿಯ ವಿವಾಹಕಾಲವು ಸನ್ನಿಹಿತವಾಗಲು ತಂದೆ ವಿದರ್ಭಭೂಪತಿಯು 'ಸರ್ವಶ್ರೇಷ್ಠನಾದ ವೀರಪರಾಕ್ರಮಿಯು ಮಾತ್ರವೇ ಈ ನನ್ನ ಪುತ್ರಿಯ ಕೈಹಿಡಿಯಬಲ್ಲನು'–ಎಂದು ಘೋಷಣೆಮಾಡಿದನು. ಆಗ ಶತ್ರುಪುರಗಳನ್ನು ಗೆಲ್ಲುವುದರಲ್ಲಿ ಸಮರ್ಥನಾದ, ಶೂರ-ವೀರನಾದ ಪಾಂಡ್ಯನರೇಶ ಮಲಯಧ್ವಜನು ಯುದ್ಧಭೂಮಿಯಲ್ಲಿ ಎಲ್ಲ ರಾಜರನ್ನೂ ಸೋಲಿಸಿ ವಿದರ್ಭಪುತ್ರಿಯನ್ನು ಮದುವೆಯಾದನು. ಆಕೆಯಲ್ಲಿ ಆ ಮಲಯಧ್ವಜನು ಸುಂದರಿಯಾಗಿದ್ದ ಒಬ್ಬ ಕನ್ಯೆಯನ್ನೂ ಮತ್ತು ಆಕೆಯ ತಮ್ಮಂದಿರನ್ನಾಗಿ ಏಳು ಮಂದಿ ಪುತ್ರರನ್ನೂ ಪಡೆದನು. ಆ ಪುತ್ರರೇ ಮುಂದೆ ದ್ರಾವಿಡದೇಶದ ಏಳು ಮಂದಿ ರಾಜರಾದರು.

ಎಲೈ ರಾಜನೇ! ಅನಂತರ ಆ ಮಲಯಧ್ವಜಮಹಾರಾಜನ ಏಳು ಮಂದಿ ಪುತ್ರರಿಗೂ ಬಹುಮಂದಿ ಪುತ್ರರು ಹುಟ್ಟಲು–ಆ ವಂಶದವರು ಈ ಭೂಮಿಯನ್ನು ಮನ್ವಂತರದ ಕೊನೆಯವರೆಗೂ ಮತ್ತು ಅದರ ನಂತರವೂ ಅನುಭವಿಸುವರು. ಮಲಯಧ್ವಜರಾಜನ ಮೊದಲನೆಯ ಪುತ್ರಿಯು ತುಂಬಾ ವ್ರತನಿಷ್ಠಳಾಗಿದ್ದಳು.* ಅಗಸ್ತ್ಯಮಹರ್ಷಿಗಳು ಆಕೆಯನ್ನು ವಿವಾಹ

---

* ಅಗಸ್ತ್ಯಶಬ್ದವು–ಮನಸ್ಸನ್ನು ಅಥವಾ ಮುಮುಕ್ಷುವಾದ ಭಕ್ತನಾದ ಶುದ್ಧ ಚೇತನನನ್ನು ರೂಪಿಸುವುದು. ಅಗಂ = ನಿಷ್ಕ್ರಿಯವಾದ ಶರೀರವನ್ನು. ಸ್ತ್ಯಾಯತಿ = ಜೊತೆಗೂಡಿಸುವುದು ಅಥವಾ ನಡೆಯಿಸುವುದು ಮನಸ್ಸು, ಅಂತಃಕರಣ ಎಂದು.

(ಶ್ರೀಧರೀಯ)

ಮಾಡಿಕೊಂಡು ದೃಢಚ್ಯುತನೆಂಬ ಪುತ್ರನನ್ನು ಆಕೆಯಿಂದ ಪಡೆದರು. ದೃಢಚ್ಯುತನ ಸುಪುತ್ರನು ಇಧ್ಮವಾಹನನೆನಿಸಿದನು. ಕಡೆಗೆ ಆ ರಾಜರ್ಷಿ ಮಲಯಧ್ವಜನು ಭೂಮಿಯನ್ನು ತನ್ನ ಪುತ್ರರಿಗೆ ಹಂಚಿಕೊಟ್ಟು ಭಗವಂತನಾದ ಶ್ರೀಕೃಷ್ಣನನ್ನು ಆರಾಧಿಸಬೇಕೆಂಬ ಇಚ್ಛೆಯಿಂದ ಕುಲಪರ್ವತಗಳಲ್ಲೊಂದಾದ ಮಲಯಪರ್ವತಕ್ಕೆ ಹೊರಟುಹೋದರು. ಆಗ ಚಂದ್ರಿಕೆಯು ಚಂದ್ರನನ್ನು ಅನುಸರಿಸುವಂತೆ–ಸುಂದರಿಯಾದ ವಿದರ್ಭರಾಜನ ಪುತ್ರಿಯು ತನ್ನ ಮನೆ, ಮಕ್ಕಳು ಮತ್ತು ಭೋಗಗಳೆಲ್ಲವನ್ನೂ ತೊರೆದು ತನ್ನ ಪತಿಯಾದ ಪಾಂಡ್ಯನರೇಶನನ್ನೇ ಅನುಸರಿಸಿಹೋದಳು. ಪಾಂಡ್ಯಭೂಪತಿಯು ತಪಸ್ಸಿಗಾಗಿ ಬಂದ ಆ ಜಾಗದಲ್ಲಿ ಚಂದ್ರವಸಾ, ತಾಮ್ರಪರ್ಣೀ, ಮತ್ತು ವಟೋದಕಾ–ಎಂಬ ಮೂರು ನದಿಗಳು ಹರಿಯುತ್ತಿದ್ದುವು. ರಾಜನು ಆ ನದಿಗಳ ಪವಿತ್ರವಾದ ತೀರ್ಥಗಳಲ್ಲಿ ಸ್ನಾನಮಾಡಿ ಪ್ರತಿದಿನವೂ ತನ್ನ ದೇಹವನ್ನೂ ಮತ್ತು ಮನಸ್ಸನ್ನೂ ಶುಚಿಪಡಿಸಿಕೊಳ್ಳುತ್ತಿದ್ದನು. ಅಲ್ಲಿ ಆತನು ಗೆಡ್ಡೆ-ಗೆಣಸು, ಬೀಜ, ಹಣ್ಣು, ಹೂವು, ಎಲೆ, ಹುಲ್ಲು ಮತ್ತು ನೀರು–ಇವುಗಳಿಂದಲೇ ದೇಹಯಾತ್ರೆಯನ್ನು ನಡೆಸುತ್ತಾ ಬಹುಕಠೋರವಾದ ತಪಸ್ಸನ್ನಾಚರಿಸಿದನು. ಅದರಿಂದ ಆತನ ದೇಹವು ತುಂಬಾ ಸೊರಗಿ ಹೋಯಿತು. ಆತನು ಎಲ್ಲರಲ್ಲೂ ಸಮದೃಷ್ಟಿಯನ್ನಿಟ್ಟುಕೊಂಡು ಶೀತೋಷ್ಣ, ಮಳೆ-ಗಾಳಿ, ಹಸಿವು-ಬಾಯಾರಿಕೆ, ಪ್ರಿಯ-ಅಪ್ರಿಯ, ಸುಖ-ದುಃಖಗಳೇ ಮುಂತಾದ ದ್ವಂದ್ವಗಳ ಮೇಲೆ ಜಯವನ್ನು ಗಳಿಸಿದನು. ತಪಸ್ಸು ಮತ್ತು ಉಪಾಸನೆಗಳಿಂದ ವಾಸನೆಗಳನ್ನು ನಿರ್ಮೂಲಗೊಳಿಸಿ, ಯಮ-ನಿಯಮಗಳೇ ಮುಂತಾದುವುಗಳ ಮೂಲಕ ಇಂದ್ರಿಯ, ಪ್ರಾಣ ಮತ್ತು ಮನಸ್ಸುಗಳನ್ನು ವಶಪಡಿಸಿಕೊಂಡು ಸಮಾಧಿಯಲ್ಲಿ ಆತ್ಮವನ್ನು ಪರಬ್ರಹ್ಮದಲ್ಲಿ ಸೇರಿಸಿದನು. ಹೀಗೆ ಆತನು ದೇವಮಾನದ ನೂರು ವರ್ಷಗಳ ಕಾಲ ಕಂಬದಂತೆ ನಿಶ್ಚಲವಾಗಿ ಒಂದೇ ಸ್ಥಾನದಲ್ಲಿ ನಿಂತಿದ್ದನು. ಭಗವಂತ

ಮುಮುಕ್ಷುವಾದ ಶುದ್ಧಾತ್ಮನು. (ವೀರರಾಘವೀಯ)

ಅಗಂ = ಶ್ರೀಭಗವಂತನನ್ನು, **ಸ್ಥಾಯತಿ** = ಸ್ತುತಿಸುವವನು ಭಕ್ತನು. (ವಿಜಯಧ್ವಜೀಯ)

ನಾದ ವಾಸುದೇವನಲ್ಲಿ ಸ್ಥಿರವಾದ ರತಿಯುಂಟಾಗಿದ್ದುದರಿಂದ ಆತನಿಗೆ ಅಷ್ಟು ಕಾಲದವರೆಗೂ ದೇಹ ಮುಂತಾದುವುಗಳ ಇರುವಿಕೆಯು ತೋರಲಿಲ್ಲ.

(ಶ್ಲೋಕ 22-39)

ಸ ವ್ಯಾಪಕತಯಾತ್ಮಾನಂ ವ್ಯತಿರಿಕ್ತತಯಾತ್ಮನಿ ।
ವಿದ್ವಾನ್ಸ್ವಪ್ನ ಇವಾಮರ್ಶಸಾಕ್ಷಿಣಂ ವಿರರಾಮ ಹ ॥೪೦॥

'ಪರಮಾತ್ಮನು ಎಲ್ಲವನ್ನೂ ವ್ಯಾಪಿಸಿಕೊಂಡಿದ್ದಾನೆ. ಅವನು ಎಲ್ಲಕ್ಕಿಂತಲೂ ಬೇರೆಯಾಗಿ ವಿಲಕ್ಷಣನಾಗಿದ್ದಾನೆ. ಎಲ್ಲಕ್ಕೂ ಸಾಕ್ಷಿಯಾಗಿದ್ದಾನೆ'– ಎಂಬುದನ್ನು ಆ ಮಲಯಧ್ವಜಮಹಾರಾಜನು ಕನಸಿನಲ್ಲಿ ಹೇಗೋ ಹಾಗೆ ತನ್ನೊಳಗೆ ಕಂಡುಕೊಂಡು ವಿಶ್ರಾಂತಿಪಡೆದನು.*

ಸಾಕ್ಷಾದ್ಭಗವತೋಕ್ತೇನ ಗುರುಣಾ ಹರಿಣಾ ನೃಪ ।
ವಿಶುದ್ಧಜ್ಞಾನದೀಪೇನ ಸ್ಫುರತಾ ವಿಶ್ವತೋಮುಖಮ್ ॥೪೧॥

---

* 'ಪರಮಾತ್ಮನು ಸರ್ವವ್ಯಾಪಕ, ಸರ್ವವಿಲಕ್ಷಣ ಮತ್ತು ಸರ್ವಸಾಕ್ಷಿ–ಎಂಬುದನ್ನು ಕನಸಿನಲ್ಲಿ ಹೇಗೋ ಹಾಗೆ ತನ್ನೊಳಗೆ ಸಾಕ್ಷಾತ್ಕರಿಸಿಕೊಂಡನು.' ಶ್ರೀಭಗವಂತನ ಸಾಕ್ಷಾತ್ಕಾರದ ಸ್ಥಿತಿಯನ್ನು ಅಂದರೆ–ಸಮಾಧಿಯನ್ನು ಮನುಧರ್ಮಶಾಸ್ತ್ರವು ಕನಸಿಗೆ ಹೋಲಿಸುತ್ತದೆ. **'ರುಕ್ಮಾಭಂ ಸ್ವಪ್ನಧೀಗಮ್ಯಂ'** ಮನುಷ್ಯರು ಕನಸಿನಲ್ಲಿ ಬಾಹ್ಯಪ್ರಪಂಚವನ್ನು ಮರೆತು ಬೇರೆ ಪ್ರಪಂಚದಲ್ಲಿರುವಂತೆ–ಸಮಾಧಿಯಲ್ಲಿಯೂ ಯೋಗಿಯು ಬಾಹ್ಯಪ್ರಪಂಚವನ್ನು ಮರೆತು ತುರೀಯಾವಸ್ಥೆಯ ಅನುಭವದ ಪ್ರಪಂಚದಲ್ಲಿರುತ್ತಾನೆ–ಎಂಬುದು ಇಲ್ಲಿಯ ಹೋಲಿಕೆಯ ಭಾಗ. ಸಮಾಧಿಯ ಅನುಭವವು ಕನಸಿನ ಅನುಭವದಂತೆಯೇ ಅನಿತ್ಯ ಮುಂತಾದ ಅರ್ಥಗಳನ್ನು ಇಲ್ಲಿ ತೆಗೆದುಕೊಳ್ಳ ಕೂಡದು.

ಇತರ ವ್ಯಾಖ್ಯಾನಕಾರರು ಇಲ್ಲಿ ಹೇಳಿರುವ ಅಭಿಪ್ರಾಯಗಳನ್ನು ಹೀಗೆ ಸಂಕ್ಷೇಪಿಸಬಹುದು.

ಆ ರಾಜನು ಪರಮಾತ್ಮನನ್ನು ತನ್ನಲ್ಲಿಯೇ (ಸ್ವಾತ್ಮಾಭೇದದಿಂದ) ಕಂಡುಕೊಂಡು ಉಳಿದಿದ್ದರಿಂದ ವಿಶ್ರಾಂತನಾದನು. ತನ್ನಲ್ಲಿ ಹೇಗೆ ಕಂಡುಕೊಂಡನು? ಎಂದರೆ : ಆತನು ವ್ಯಾಪಕನು–ದೇಹಾದಿಗಳಿಗೆಲ್ಲಾ ಪ್ರಕಾಶಕನು, ವ್ಯತಿರಿಕ್ತನು– ದೇಹಾದಿವ್ಯತಿರಿಕ್ತನಾದವನು. ಅಮರ್ಶಕ್ಕೆ ಎಂದರೆ : ಅಂತಃಕರಣವೃತ್ತಿಗೆ ಸಾಕ್ಷಿಯು ಎಂಬುದಾಗಿ ಕಂಡುಕೊಂಡನು. ಕನಸಿನಲ್ಲಿ ಹೇಗೋ ಹಾಗೆ ಕಂಡುಕೊಂಡನು ಎಂದರೆ : ಕನಸಿನಲ್ಲಿ ತನ್ನ ತಲೆಯು ಕತ್ತರಿಸಿಹೋದಂತೆ ತಾನೇ ನೋಡುವುದುಂಟು.

ಪರೇ ಬ್ರಹ್ಮಣಿ ಚಾತ್ಮಾನಂ ಪರಂ ಬ್ರಹ್ಮ ತಥಾತ್ಮನಿ ।
ವೀಕ್ಷಮಾಣೋ ವಿಹಾಯೇಕ್ಷಾಮಸ್ಮಾದುಪರರಾಮ ಹ ॥೪೨॥

ಎಲೈ ರಾಜನೇ! ಆ ಮಲಯಧ್ವಜನು ಆದಿಗುರುವೂ ಅಖಿಲ ಗುರುವೂ ಆಗಿರುವ ಭಗವಂತನಾದ ಸಾಕ್ಷಾತ್ ಶ್ರೀಹರಿಯಿಂದ ಉಪದೇಶ ಮಾಡಲ್ಪಟ್ಟು ಸರ್ವತೋಮುಖವಾಗಿ ಬೆಳಗುತ್ತಿರುವ ಪರಿಶುದ್ಧವಾದ ಜ್ಞಾನ ದೀಪದಿಂದ ಪರಬ್ರಹ್ಮದಲ್ಲಿ ತನ್ನನ್ನೂ ಮತ್ತು ತನ್ನಲ್ಲಿ ಪರಬ್ರಹ್ಮವನ್ನೂ ನೋಡುತ್ತಾ ಪ್ರಾಕೃತವಾದ ನೋಟವನ್ನು ತೊರೆದು ಈ ಸಂಸಾರದಿಂದ ಪರಮವಿಶ್ರಾಂತಿಯನ್ನು ಪಡೆದನು.*

ಇದು ಮಿಥ್ಯಾನುಭವ. ಆತ್ಮನು ನಿಜವಾಗಿಯೂ ಕತ್ತರಿಸಲ್ಪಡುವುದಿಲ್ಲ. ಅವನು ಇದಕ್ಕಿಂತಲೂ ವ್ಯತಿರಿಕ್ತನಾದವನು. **'ಯಥಾ ಸ್ವಪ್ನೇ ಮಮೇದಂ ಶಿರಶ್ಚಿನ್ನ ಮಿತ್ಯಾದಿ ಪ್ರತೀತೌ ತದ್ವ್ಯತಿರಿಕ್ತಮಾತ್ಮಾನಂ ವೇತ್ತಿ ತದ್ವತ್'** (ಶ್ರೀಧರೀಯ)

ಸಾಕ್ಷಿಯಾಗಿರುವ ಅಂದರೆ : ಸಾಕ್ಷಾತ್ತಾಗಿ ನೋಡುತ್ತಿರುವ ಪರಮಾತ್ಮನು ಜೀವಾತ್ಮನಲ್ಲಿ ವ್ಯಾಪಿಸಿ ಅವನಿಗಿಂತಲೂ ವಿಲಕ್ಷಣನಾಗಿರುವುದನ್ನು ಕಂಡುಕೊಂಡು, ದೇಹವೃತ್ತಾಂತವು ಕನಸಿನಂತೆ ಅನಿತ್ಯವಾದುದು ಎಂದರಿತು, ಅದರಿಂದ ವಿಶ್ರಾಂತನಾದನು ಅಂದರೆ : ಕೇವಲ ಪರಮಾತ್ಮಾನುಸಂಧಾನಪರನಾದನು. **'ಸ್ವಪ್ನ ಇವ ಅನಿತ್ಯಂ ದೇಹವೃತ್ತಾನ್ತಮಾಮೃಶ್ಯ ತಸ್ಮಾದ್ವಿರರಾಮ । ಕೇವಲ ಪರಮಾತ್ಮಾನು ಸಂಧಾನಪರೋಽಭೂತ್ ಇತ್ಯರ್ಥಃ ॥'** (ವೀರರಾಘವೀಯ)

ಆ ರಾಜನು ಚೆನ್ನಾಗಿ ವಿಚಾರಮಾಡಿ, ಜೀವನದಲ್ಲಿ ಅಂತರ್ಯಾಮಿಯಾಗಿ ಸಾಕ್ಷಾತ್ತಾಗಿ ದ್ರಷ್ಟೃವಾಗಿರುವ ಪರಮಾತ್ಮನನ್ನು ಸ್ವಪ್ನದಲ್ಲಿ ಹೇಗೋ ಹಾಗೆ ಎಂದರೆ : ಸ್ವಪ್ನದಲ್ಲಿ ಜೀವನನ್ನು ಪರತಂತ್ರನನ್ನಾಗಿ ನೋಡುವಂತೆ ಉಳಿದ ಸಮಯಗಳಲ್ಲಿಯೂ ಪರತಂತ್ರನನ್ನಾಗಿಯೇ ನೋಡುತ್ತಾನೆ ಎಂದೂ, ಸರ್ವವ್ಯಾಪಿಯಾಗಿ ಚೇತನಾ ಚೇತನಾತ್ಮಕವಾದ ಜಗತ್ತಿಗಿಂತಲೂ ವ್ಯತಿರಿಕ್ತನಾಗಿದ್ದಾನೆ–ಎಂದೂ ತಿಳಿದು ಸಂಸಾರದಿಂದ ವಿರಕ್ತನಾಗಿ ಜೀವನ್ಮುಕ್ತನಾದನು. ಅಥವಾ ಪರಮಾತ್ಮನು ವ್ಯಾಪಕನಾಗಿ ಜೀವನಲ್ಲಿ ವ್ಯತಿರಿಕ್ತನಾಗಿದ್ದಾನೆ. ಸ್ವಪ್ನದಲ್ಲಿ ಹೇಗೋ ಹಾಗೆ ಸ್ವತಂತ್ರನಾಗಿ ಸಾಕ್ಷಿಯಾಗಿದ್ದಾನೆ. ಜೀವನು ಸದಾ ಅಸ್ವತಂತ್ರನಾಗಿದ್ದಾನೆ–ಎಂದು ನಿಶ್ಚಯಿಸಿ ವ್ಯತಿರಿಕ್ತನಾದವನು. **'ಯತಃ ಸ್ವಪ್ನೋ ನ ಸ್ವತಂತ್ರಃ ತತಸ್ತದ್ದರ್ಶಕಃ ಪರಃ । ಜೀವಾದನ್ಯಸ್ತು ವಿಜ್ಞೇಯಃ ಸ ವಿಷ್ಣುರವಧಾರ್ಯತಾಮ್ ॥'**

(ವಿಜಯಧ್ವಜೀಯ) (ಶ್ಲೋಕ ೪೦)

* ತನ್ನನ್ನು ಪರಮಾತ್ಮನಲ್ಲಿಯೂ, ಪರಮಾತ್ಮನಲ್ಲಿ ತನ್ನನ್ನೂ 'ನಾನೇ ಬ್ರಹ್ಮವು' ಎಂದು

ರಾಜೇಂದ್ರನೇ! ಪತಿವ್ರತಾಶಿರೋಮಣಿಯಾದ ವಿದರ್ಭರಾಜ ಪುತ್ರಿಯು ಅಲ್ಲಿ ಎಲ್ಲ ಭೋಗಗಳನ್ನೂ ತೊರೆದು ಮಹಾಪ್ರೇಮದಿಂದ ಪರಮಧರ್ಮಜ್ಞನಾದ ತನ್ನ ಪತಿ ಮಲಯಧ್ವಜನ ಸೇವೆಯನ್ನು ಮಾಡುತ್ತಿದ್ದಳು. ಆಕೆಯು ನಾರುಮಡಿಯನ್ನುಟ್ಟು ವ್ರತ-ಉಪವಾಸಾದಿಗಳನ್ನು ಮಾಡುತ್ತಿದ್ದುದರಿಂದ ಆಕೆಯ ಶರೀರವು ತುಂಬಾ ಕೃಶವಾಗಿಬಿಟ್ಟಿತ್ತು. ತಲೆಗೂದಲು ಸಂಸ್ಕಾರವಿಲ್ಲದೇ ಜಡೆಯಾಗಿಬಿಟ್ಟಿತ್ತು. ಆಗ ಆಕೆಯು ತನ್ನ ಪತಿದೇವನ ಪಕ್ಕದಲ್ಲಿ ಶಾಂತವಾದ ಅಗ್ನಿಜ್ವಾಲೆಯಂತೆ ಪ್ರಶಾಂತವಾದ ಮನಸ್ಸು-ಮುಖಮುದ್ರೆಗಳಿಂದ ಶೋಭಿಸುತ್ತಿದ್ದಳು. ಆ ವೇಳೆಗಾಗಲೇ ಆಕೆಯ ಪ್ರಿಯತಮನು ಪರಮಪದವನ್ನು ಸೇರಿಕೊಂಡುಬಿಟ್ಟಿದ್ದನು. ಜೀವವು ದೇಹದಿಂದ ಹೋಗಿದ್ದರೂ ಆತನ ಆಸನಬಂಧವು ಮಾತ್ರ ಹಾಗೆಯೇ ಸ್ಥಿರವಾಗಿತ್ತು. ಆ ರಹಸ್ಯವನ್ನರಿಯದೇ ಆ ಮುಗ್ಧೆಯು ಆತನ ದೇಹದ ಬಳಿಗೆ ಹೋಗಿ ಹಿಂದಿನಂತೆಯೇ ಸೇವೆ-ಉಪಚಾರಗಳನ್ನು ಮಾಡತೊಡಗಿದಳು. ಹಾಗೆ ಪಾದಸೇವೆಮಾಡುತ್ತಿದ್ದಾಗ ಪತಿದೇವನ ಚರಣಗಳಲ್ಲಿ ಶಾಖವು

ಅಭೇದದಿಂದ ನೋಡುತ್ತಾ ಕಡೆಗೆ ಆ ನೋಟವೂ ಶಾಂತವಾಗಲು ಸಂಸಾರದಿಂದ ಬಿಡುಗಡೆ ಹೊಂದಿದನು. ನೋಟವೆಂಬುದೂ ಬ್ರಹ್ಮತ್ವವನ್ನು ಹೊಂದುವುದಕ್ಕೆ ವ್ಯವಧಾನಕರವೇ ಆಗಿದೆ. ಸೌದೆಯು ಉರಿದುಹೋದ ಬಳಿಕ ಅಗ್ನಿಯು ಶಾಂತವಾಗುವಂತೆ–ಬ್ರಹ್ಮತ್ವವು ಬಂದಾಗ ಆ ನೋಟವು ತಾನಾಗಿಯೇ ಶಾಂತವಾಗಿಬಿಡುವುದು. **‘ಈಕ್ಷಾಂ ವಿಹಾಯ–ಯದ್ವಗ್ಧೇನ್ಧನಾನಲಮ್ ತಸ್ಯಾಃ ಸ್ವಯಮೇವ ಉಪಶಾಂತಿರಿತಿ ಭಾವಃ’**

(ಶ್ರೀಧರೀಯ)

ಪರಮಾತ್ಮನು ಜೀವನಿಗೆ ಧಾರಕನೂ, ವ್ಯಾಪಕನೂ ಆಗಿದ್ದಾನೆಂದು ದೇಹಾವಸಾನ ಕಾಲದವರೆಗೂ ಉಪಾಸನೆಮಾಡುತ್ತಿದ್ದು ಕಡೆಗೆ ಆ ಉಪಾಸನಾತ್ಮಕಜ್ಞಾನವನ್ನು ಬಿಟ್ಟು ಮೃತನಾದನು. **‘ಉಪಾಸನಾತ್ಮಕಂ ಜ್ಞಾನಂ ಹಿತ್ವಾ ಯಾವದುಪರಮಂ ಆಮರಣಮುಪಾಸಿತವಾನ್–ಇತಿ ಭಾವಃ’** (ವೀರರಾಘವೀಯ)

ಜೀವಾತ್ಮನು ಪರಮಾತ್ಮನಲ್ಲಿ ಇದ್ದಾನೆ. ಪರಮಾತ್ಮನು ಜೀವಾತ್ಮನಲ್ಲಿ ಅಂತರ್ಯಾಮಿಯಾಗಿದ್ದಾನೆ ಮತ್ತು ಜೀವೇಶ್ವರಭೇದವು ಸತ್ಯ–ಎಂದು ತಿಳಿದು ಈ ಶರೀರದಿಂದ ವಿಶ್ರಾಂತನಾದನು. **‘ಆತ್ಮಾನಂ ಜೀವಾನ್ತರ್ಯಾಮಿಣಂ ಈಕ್ಷಾಂ = ತಯೋರ್ಭೇದದರ್ಶನಂ ಅಸ್ಮಾತ್ ಶರೀರಾತ್ । ಹೇತ್ಯನೇನ ಪ್ರಾಮಾಣಿಕತ್ವಂ ದ್ಯೋತಯತಿ ॥’** (ವಿಜಯಧ್ವಜೀಯ) (ಶ್ಲೋಕ ೪೨)

ಸ್ವಲ್ಪವೂ ಕಾಣದೇ ಹೋಗಲು–ಆಕೆಯು ಹಿಂಡನ್ನು ಅಗಲಿದ ಹೆಣ್ಣು ಹುಲ್ಲೆಯಂತೆ–ಗಾಬರಿಗೊಂಡು ಕಳವಳಿಸಿದಳು. (ಶ್ಲೋಕ 43-46)

'ನನಗೆ ಎಂತಹ ದೈನ್ಯಾವಸ್ಥೆಯು ಬಂದಿತು! ಬಂಧುವನ್ನು ಕಳೆದು ಕೊಂಡು ಒಬ್ಬಂಟಿಗಳಾದೆನಲ್ಲಾ!' ಎಂದು ತನ್ನ ಬಗೆಗೆ ಶೋಕಿಸುತ್ತಾ ಕಣ್ಣೀರು ಧಾರೆಯಿಂದ ಸ್ತನಗಳು ನೆನೆಯುತ್ತಿರಲು ಗಟ್ಟಿಯಾಗಿ ರೋಧಿಸ ತೊಡಗಿದಳು. 'ಓ ರಾಜರ್ಷಿಯೇ! ಏಳು! ಏಳು! ಸಮುದ್ರದಿಂದ ಸುತ್ತು ವರಿಯಲ್ಪಟ್ಟಿರುವ ಈ ಭೂದೇವಿಯು ದರೋಡೆಗಾರರಿಂದಲೂ, ಅಧರ್ಮಿಷ್ಠರಾದ ರಾಜರಿಂದಲೂ ಭಯಪಡುತ್ತಿದ್ದಾಳೆ. ನೀನು ಈಕೆಯನ್ನು ರಕ್ಷಿಸು' ಎಂದು ಮೊರೆಯಿಡುತ್ತಾ ವಿಲಪಿಸಿದಳು. ಪತಿಯೊಡನೆ ಅರಣ್ಯಕ್ಕೆ ತೆರಳಿದ್ದ ಆ ಅಬಲೆಯು ಹೀಗೆ ವಿಲಪಿಸುತ್ತಾ ಪತಿಯ ಪಾದಗಳ ಮೇಲೆ ಬಿದ್ದು ಅಳುತ್ತಾ ಕಣ್ಣೀರು ಸುರಿಸುತ್ತಿದ್ದಳು. ಆಕೆಯು ಕಟ್ಟಿಗೆಗಳಿಂದ ಚಿತೆ ಯನ್ನು ರಚಿಸಿ ಅದರ ಮೇಲೆ ಪತಿಯ ಶವವನ್ನಿರಿಸಿ ಬೆಂಕಿಯನ್ನಿಟ್ಟು ರೋದಿ ಸುತ್ತಾ ತಾನೂ ಸಹಗಮನಮಾಡಲು ನಿಶ್ಚಯಿಸಿದಳು. ರಾಜೇಂದ್ರನೇ! ಆಗ ಅಲ್ಲಿಗೆ ಆಕೆಯ ಹಳೆಯ ಗೆಳೆಯನಾಗಿ ಆತ್ಮಜ್ಞಾನಿಯಾಗಿದ್ದ ಬ್ರಾಹ್ಮಣನೊಬ್ಬನು ಬಂದನು. ಆತನು ಅಳುತ್ತಿದ್ದ ಆ ಅಬಲೆಯನ್ನು ಸವಿಮಾತುಗಳಿಂದ ಸಂತೈಸುತ್ತಾ ಹೀಗೆಂದನು : (ಶ್ಲೋಕ 47-51)

"ಯಾರಮ್ಮ ನೀನು? ಯಾರ ಮಗಳು! ನೀನು ಯಾರ ಹೆಂಡತಿ ಯಾಗಿದ್ದೀಯೆ? ಮಲಗಿಕೊಂಡಿರುವ ಯಾವನೋ ಪುರುಷನನ್ನು ಕುರಿತು ಅಳುತ್ತಿದೀಯಲ್ಲಾ! ಈತನು ಯಾರು? ನಾನು ಯಾರೆಂಬುದು ನಿನಗೆ ಗೊತ್ತಿಲ್ಲವೇ? ನೀನು ಯಾರ ಜೊತೆಯಲ್ಲಿ ಹಿಂದೆ ಓಡಾಡುತ್ತಿದ್ದೆಯೋ ಆ ನಿನ್ನ ಮಿತ್ರನೇ ನಾನಮ್ಮ! ಮಿತ್ರನೇ! ನಿನಗೆ ಅವಿಜ್ಞಾತನೆಂಬ ಒಬ್ಬ ಗೆಳೆಯನಿದ್ದನೆಂಬುದು ನೆನಪಿನಲ್ಲಿದೆಯೇ? ಆ ಅವಿಜ್ಞಾತನೇ ನಾನು. ನೀನು ಭೂಮಿಯ ಭೋಗಗಳನ್ನು ಅನುಭವಿಸುವುದಕ್ಕೋಸ್ಕರ ವಾಸದ ಜಾಗವನ್ನು ಹುಡುಕುತ್ತಾ ನನ್ನನ್ನು ಬಿಟ್ಟು ಹೊರಟುಬಿಟ್ಟೆ. ಆರ್ಯನೇ! ನಾನು ಮತ್ತು ನೀನು ಇಬ್ಬರೂ ಹಿಂದೆ ಪರಸ್ಪರ ಮಿತ್ರರಾಗಿ ಮಾನಸಸರೋವರದಲ್ಲಿ ವಾಸ ಮಾಡುತ್ತಿದ್ದ ಹಂಸಗಳಪ್ಪಾ! ಹಿಂದೆ ನಾವಿಬ್ಬರೂ ಸಾವಿರಾರು ವರ್ಷ ಗಳವರೆಗೆ ವಾಸಕ್ಕೆ ಜಾಗವಿಲ್ಲದೆಯೇ ಇರುತ್ತಿದ್ದೆವು. ಆದರೆ ಗೆಳೆಯನೇ!

ನೀನು ವಿಷಯಗಳನ್ನು ಭೋಗಿಸುವ ಇಚ್ಛೆಯಿಂದ ನನ್ನನ್ನು ಬಿಟ್ಟು ಈ ಭೂಮಿಗೆ ಬಂದುಬಿಟ್ಟೆ. ಇಲ್ಲಿ ಅಲೆದಾಡುತ್ತಾ ಇರುವಾಗ ಒಬ್ಬ ಹೆಂಗಸು ನಿರ್ಮಿಸಿದ್ದ ಒಂದು ಜಾಗವನ್ನು ನೀನು ನೋಡಿದೆ. ಅದರಲ್ಲಿ ಐದು ತೋಟಗಳೂ, ಒಂಬತ್ತು ಬಾಗಿಲುಗಳೂ, ಒಬ್ಬ ದ್ವಾರಪಾಲಕನೂ, ಮೂರು ಕೋಟೆಗಳೂ, ಆರು ಮಂದಿ ಸಾಮಗ್ರಿಗಳನ್ನೊದಗಿಸುವ ವರ್ತಕರೂ, ಐದು ಅಂಗಡಿಗಳೂ, ಮತ್ತು ಅನೇಕ ಪ್ರಜೆಗಳೂ ಇದ್ದ ಐದು ಉಪಾದಾನ ಕಾರಣಗಳಿಂದ ರಚಿತವಾಗಿದ್ದ ಆ ನಗರಿಯು ಒಬ್ಬ ಹೆಂಗಸಿನ ಅಧಿಕಾರದಲ್ಲಿತ್ತು. ಮಹಾರಾಜನೇ! ಇಂದ್ರಿಯಗಳಿಗೆ ಸೇರಿದ ಐದು ವಿಷಯಗಳೇ ಅದರ ತೋಟಗಳು ಮತ್ತು ಒಂಬತ್ತು ಇಂದ್ರಿಯ ಬಿಲಗಳೂ ಅದರ ಒಂಬತ್ತು ದ್ವಾರಗಳಾಗಿದ್ದುವು. ತೇಜಸ್ಸು, ಜಲ ಮತ್ತು ಅನ್ನ–ಇವು ಮೂರು ಅದರ ಕೋಟೆಗಳಾಗಿದ್ದು, ಮನಸ್ಸು ಮತ್ತು ಐದು ಜ್ಞಾನೇಂದ್ರಿಯಗಳು ಸೇರಿ ಒಟ್ಟು ಆರೂ ಅಲ್ಲಿಯ ಆರು ಮಂದಿ ವರ್ತಕರಾಗಿದ್ದರು. ಕ್ರಿಯಾಶಕ್ತಿರೂಪವಾದ ಕರ್ಮೇಂದ್ರಿಯಗಳು ಅದರ ಅಂಗಡಿಗಳು ಮತ್ತು ಪಂಚಮಹಾಭೂತಗಳೇ ಎಂದಿಗೂ ಕ್ಷೀಣಿಸದೇ ಇರುವ ಅದರ ಉಪಾದಾನಕಾರಣಗಳಾಗಿದ್ದುವು. ಅದರ ಒಡತಿಯು ಯಾರು? ಎಂದರೆ : ಬುದ್ಧಿಶಕ್ತಿಯು. ಅದು ಎಂತಹ ವಿಚಿತ್ರವಾದ ನಗರಿಯೆಂದರೆ : ಅದನ್ನು ಹೊಕ್ಕ ಮನುಷ್ಯನು ಜ್ಞಾನಶೂನ್ಯವಾಗಿ ತನ್ನ ಸ್ವರೂಪವನ್ನೇ ಮರೆತುಬಿಡುತ್ತಾನೆ. ಪ್ರಭುವೇ! ಅಲ್ಲಿದ್ದ ವೈಯಾರದ ಹೆಂಗಸಿನ ಹಿಡಿತಕ್ಕೆ ಸಿಕ್ಕಿಬಿದ್ದು ನೀನು ಆಕೆಯೊಡನೆ ರಮಿಸುತ್ತಾ ನಿನ್ನ ಸ್ವರೂಪವನ್ನೇ ಮರೆತುಬಿಟ್ಟೆ. ಆಕೆಯ ಸಹವಾಸ ದಿಂದಲೇ ನಿನಗಾಗ ಇಂತಹ ದುರವಸ್ಥೆಯುಂಟಾಗಿದೆ. ಇಲ್ಲಿ ನೋಡು ; ನನ್ನ ಮಾತನ್ನು ಕೇಳು. ವಾಸ್ತವವಾಗಿ ನೀನು ವಿದರ್ಭರಾಜನ ಪುತ್ರಿಯೂ ಅಲ್ಲ ; ವೀರನಾದ ಈ ಮಲಯಧ್ವಜಮಹಾರಾಜನು ನಿನ್ನ ಪತಿಯೂ ಅಲ್ಲ. ನಿನ್ನನ್ನು ಒಂಬತ್ತು ಬಾಗಿಲುಗಳ ನಗರಿಯಲ್ಲಿ ಸೆರೆಹಿಡಿದು ಇಟ್ಟಿದ್ದ ಪುರಂಜನೀ ಎಂಬ ಹೆಂಗಸಿನ ಪತಿಯೂ ನೀನಲ್ಲ. ನೀನು ಕಳೆದ ಜನ್ಮ ದಲ್ಲಿ ನಿನ್ನನ್ನು ಪುರುಷನೆಂದು ತಿಳಿದುಕೊಂಡಿದ್ದೆ. ಈ ಜನ್ಮದಲ್ಲಿ ಸಾಧ್ವಿಯಾದ ಒಬ್ಬ ಸ್ತ್ರೀಯೆಂದು ಭಾವಿಸಿಕೊಂಡಿರುವೆ–ಇವೆಲ್ಲವೂ ನಾನೇ ಹಾಸಿದ ಮಾಯೆಯ ರಚನೆ. ವಾಸ್ತವವಾಗಿ ನೀನು ಪುರುಷನೂ ಅಲ್ಲ ;

ಸ್ತ್ರೀಯೂ ಅಲ್ಲ. ನಾವಿಬ್ಬರೂ ಹಂಸಗಳು.* ಆ ನಮ್ಮ ವಾಸ್ತವಿಕಸ್ವರೂಪವನ್ನು ಅನುಭವಕ್ಕೆ ತಂದುಕೋ. ನಾನು ಏನಾಗಿದ್ದೇನೋ ನೀನು ಅದೇ ಆಗಿದ್ದೀಯೆ. ನೀನು ನನ್ನಿಂದ ಬೇರೆಯಲ್ಲ. ವಿಚಾರಪೂರ್ವಕವಾಗಿ ನೋಡು. ನೀನು ಯಾರೋ ನಾನೂ ಅವನೇ. ಜ್ಞಾನಿಗಳಾದವರು–ನಮ್ಮಿಬ್ಬರಲ್ಲಿಯೂ ಯಾವ ಅಂತರವನ್ನೂ ಕಾಣುವುದಿಲ್ಲ.[1] ಮನುಷ್ಯನು ತನ್ನ ಶರೀರದ ಪ್ರತಿಬಿಂಬವನ್ನು ಯಾವುದಾದರೂ ಕನ್ನಡಿಯಲ್ಲಿ ನೋಡಬಹುದು. ಅದನ್ನೇ ಯಾವನಾದರೂ ಮನುಷ್ಯನ ಕಣ್ಣಿನಲ್ಲೂ ಕಾಣಬಹುದು. ಈ ಎರಡರಲ್ಲೂ ತನ್ನನ್ನೇ ಬೇರೆ-ಬೇರೆಯಾಗಿ ಎರಡು ರೂಪಗಳಲ್ಲಿ ಆತನು ನೋಡುತ್ತಾನೆ.

---

* ನೀನು-ನಿನ್ನನ್ನು ಹಿಂದಿನ ಹುಟ್ಟಿನಲ್ಲಿ ಪುರುಷನೆಂದೂ ಈ ಜನ್ಮದಲ್ಲಿ ಸ್ತ್ರೀಯೆಂದೂ ತಿಳಿದುಕೊಂಡಿರುವುದರಿಂದ ನನ್ನ ಮಾಯೆಯಿಂದಲೇ. ಆತ್ಮನಲ್ಲಿ ಈ ಸ್ತ್ರೀ ಪುರುಷ-ನಪುಂಸಕರೆಂಬ ಭೇದವಿಲ್ಲ. ನೀನು ನನಗೆ ಶರೀರವಾಗಿರುವುದರಿಂದ ನಾನು ನಿನ್ನ ರೂಪವೇ ಆಗಿದ್ದೇನೆ. ನೀನು ಯಾವಾಗಲೂ ನನ್ನ ಶರೀರಭಾವವನ್ನು ಬಿಟ್ಟಿರುವುದಿಲ್ಲ. ಆದುದರಿಂದ ನೀನು ನನಗಿಂತಲೂ ಅನ್ಯನಲ್ಲ. ಪಂಡಿತರು ನಮ್ಮಿಬ್ಬರಿಗೂ ಸ್ವಲ್ಪವೂ ಸಂಬಂಧರಾಹಿತ್ಯವನ್ನು ಕಾಣುವುದಿಲ್ಲ. ಜೀವೇಶ್ವರಾತ್ಮಕವಾದ ವಸ್ತುವು ವಿಶಿಷ್ಟರೂಪದಿಂದ ಒಂದೇ ಆಗಿದೆ. (ಮಣಿಯೂ ಅದರಲ್ಲಿರುವ ಪ್ರಭೆಯೂ ಸೇರಿ ವಿಶಿಷ್ಟವಾಗಿ ಒಂದೇ ಪದಾರ್ಥವಾಗಿರುವಂತೆ.) ಇದಕ್ಕೆ ದೃಷ್ಟಾಂತ : ನಮ್ಮ ದೇಹವನ್ನು ನಾವು ದೊಡ್ಡ ಕನ್ನಡಿಯಲ್ಲಿ ದೊಡ್ಡದನ್ನಾಗಿಯೂ, ಚಿಕ್ಕದಾಗಿರುವ ಕಣ್ಣುಗುಡ್ಡೆಯಲ್ಲಿ ಚಿಕ್ಕದಾಗಿಯೂ ಕಾಣುವಂತೆ– ಶರೀರ-ಶರೀರಿಭಾವದಿಂದ ಸೇರಿಕೊಂಡಿರುವ ಜೀವೇಶ್ವರರರೂಪದಿಂದ ಒಂದೇ ವಿಶಿಷ್ಟವಸ್ತುವು ಸ್ಥೂಲ ಮತ್ತು ಸೂಕ್ಷ್ಮಶರೀರಗಳನ್ನು ಒಳಹೊಕ್ಕು ಉಪಾಧಿಭೇದದಿಂದ ಹಲವು ಬಗೆಯಾಗಿ ಕಾಣುವುದು. ಜಾತಿ-ವ್ಯಕ್ತಿಗಳಿಗೂ ಗುಣ-ಗುಣಿಗಳಿಗೂ ಸ್ವರೂಪಭೇದವು ಇದ್ದೇ ಇದೆ. ಹಾಗೆಯೇ ಜೀವೇಶ್ವರರಿಗೆ ಸ್ವರೂಪಭೇದವಿದೆ. ಆದರೆ ವಿಶಿಷ್ಟೈಕ್ಯವಿದೆ.

(ವೀರರಾಘವೀಯ) (ಶ್ಲೋಕ ೬೧)

1 ನೀನು ಹಿಂದೆ ಗಂಡೆಂದೂ, ಈಗ ಹೆಂಗಸೆಂದೂ ತಿಳಿದಿರುವುದು ಪ್ರಾರಬ್ಧಕರ್ಮಕ್ಕೆ ತಕ್ಕಂತೆ–ಇಂತಹ ಫಲವನ್ನು ಅನುಭವಿಸುವುದಕ್ಕಾಗಿ ನಾನು ಬೀರಿರುವ ಬಂಧಕಶಕ್ತಿಯಿಂದ. ಪರಮಾತ್ಮನು ನಾನು, ಗೋತ್ರಾದಿರಹಿತನು, ಪರಿಶುದ್ಧನು ಮತ್ತು ಎಲ್ಲಕ್ಕೂ ಸತ್ತೆಯನ್ನು ಕೊಟ್ಟಿರುವವನು ಎಂದು ತಿಳಿ. ಅಹಂ ಭವಾನ್ನ = ನಾನು ನೀನಲ್ಲ. ತ್ವಂ = ನೀನು ನನ್ನಿಂದ ಅನ್ಯನು. ಆದುದರಿಂದ ತ್ವಂ ತ್ವಮೇವ– ನೀನು ನೀನೇ ಆಗಿದ್ದೀಯೆ. ಅಹಂ ಅಹಮೇವ – ನಾನು ನಾನೇ ಆಗಿದ್ದೇನೆ.

ನಮ್ಮಿಬ್ಬರ ನಡುವೆ ಇರುವ ಭೇದವೂ ಹೀಗೆಯೇ.”* ಈ ರೀತಿಯಲ್ಲಿ ಹಂಸವು (ಈಶ್ವರನು) ಎಚ್ಚರನೀಡಿದಾಗ ಮಾನಸಸರೋವರದ ಮತ್ತೊಂದು ಹಂಸ (ಜೀವ)ಕ್ಕೆ ಅರಿವುಂಟಾಗಿ ಅದು ಸ್ವಸ್ವರೂಪದಲ್ಲಿ ನೆಲೆಗೊಂಡಿತು ; ನೆಮ್ಮದಿಯನ್ನು ಪಡೆಯಿತು. ತನ್ನ ಮಿತ್ರನ ಅಗಲುವಿಕೆಯಿಂದ ಮರೆತುಹೋಗಿದ್ದ ಆತ್ಮವು ಮತ್ತೆ ನೆನಪಿಗೆ ಬಂದಿತು.

(ಶ್ಲೋಕ 52-64)

ಬರ್ಹಿಷ್ಮನ್ನೇತದಧ್ಯಾತ್ಮಂ ಪಾರೋಕ್ಷ್ಯೇಣ ಪ್ರದರ್ಶಿತಮ್ ।
ಯತ್ಪರೋಕ್ಷಪ್ರಿಯೋ ದೇವೋ ಭಗವಾನ್ವಿಶ್ವಭಾವನಃ ॥೬೫॥

ಪ್ರಾಚೀನಬರ್ಹಿಮಹಾರಾಜನೇ! ಹೀಗೆ ನಾನು ನಿನಗೆ ಪರೋಕ್ಷ ರೂಪದಿಂದ ಆತ್ಮಜ್ಞಾನದ ದಿಗ್ದರ್ಶನವನ್ನು ಮಾಡಿಸಿಕೊಟ್ಟಿದ್ದೇನೆ. ನೇರವಾಗಿ ಹೇಳದೇ ಪರೋಕ್ಷರೂಪದಿಂದ ಏಕೆ ಬೋಧಿಸಿದಿರಿ? ಎಂದರೆ : ಜಗತ್ತನ್ನು ರಚಿಸಿರುವ ಜಗದೀಶ್ವರನಿಗೆ ಪರೋಕ್ಷವರ್ಣನೆಯೇ ಹೆಚ್ಚು ಪ್ರಿಯ ವಾದುದು.”

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಚತುರ್ಥಸ್ಕಂಧದ ೨೮ನೆಯ ಅಧ್ಯಾಯವು ಮುಗಿಯಿತು.

ಕವಯಃ = ಪಂಡಿತರು. **ಆವಯೋಃ** = ನಮ್ಮಿಬ್ಬರಿಗೂ. **ಮನಾಕ್ ಛಿದ್ರಂ** = ಸ್ವಲ್ಪ ಭೇದವನ್ನು. **ನ ಕುರ್ವನ್ತಿ** = ಮಾಡುವುದಿಲ್ಲ. ಎಂದರೆ : ನಮ್ಮಿಬ್ಬರಿಗೂ ತುಂಬಾ ಭೇದವುಂಟು. ಅಥವಾ ಪಂಡಿತರು ನಮ್ಮ ಅಂತರ್ಯಾಮಿಗಳಲ್ಲಿ ಭೇದವನ್ನು ಎಣಿಸುವುದಿಲ್ಲ. (ಶ್ಲೋಕ ೬೨)

* ಕನ್ನಡಿ ಮತ್ತು ಕಣ್ಣುಗಳಲ್ಲಿ ತೋರುವ ಪ್ರತಿಬಿಂಬಗಳ ಸತ್ತೆಯು ನೋಡುವವನ ಬಿಂಬಕ್ಕೆ ಅಧೀನವಾಗಿರುವುದರಿಂದ ಆ ಬಿಂಬ–ಪ್ರತಿಬಿಂಬಗಳಿಗೆ ಭೇದವಿಲ್ಲ. ಈ ಅರ್ಥದಲ್ಲಿ ಸತ್ತಾಪ್ರದನಾದ ಪರಮಾತ್ಮನಿಗೂ ಮತ್ತು ಆತನಿಂದ ಸತ್ತೆಯನ್ನು ಪಡೆದಿರುವ ಜೀವನಿಗೂ ಭೇದವಿಲ್ಲವೆಂದು ತಿಳಿಯಬೇಕು. (ವಿಜಯಧ್ವಜೀಯ) (ಶ್ಲೋಕ ೬೩)

ಪುರಂಜನೋಪಾಖ್ಯಾನದ ತಾತ್ಪರ್ಯ

ಪುರಂಜನೋಪಾಖ್ಯಾನವನ್ನು ಕೇಳಿದ ಪ್ರಾಚೀನಬರ್ಹಿಮಹಾರಾಜನು ನಾರದರಲ್ಲಿ ಹೀಗೆ ಪ್ರಾರ್ಥನೆಮಾಡಿದನು :

ಭಗವಂಸ್ತೇ ವಚೋಽಸ್ಮಾಭಿರ್ನ ಸಮ್ಯಗವಗಮ್ಯತೇ ।
ಕವಯಸ್ತದ್ವಿಜಾನನ್ತಿ ನ ವಯಂ ಕರ್ಮಮೋಹಿತಾಃ ॥೧॥

"ಪರಮಪೂಜ್ಯರಾದ ಮಹಾಮುನಿಗಳೇ! ತಮ್ಮ ನುಡಿಗಳ ಅಭಿಪ್ರಾಯವೇನೆಂಬುದು ಪೂರ್ಣವಾಗಿ ನನ್ನ ಮನಸ್ಸಿಗೆ ಬರಲಿಲ್ಲ. ಜ್ಞಾನಿಗಳಿಗೆ ತಾನೇ ಇದರ ತಾತ್ಪರ್ಯವು ತಿಳಿಯುವುದು! ಕರ್ಮಗಳಿಂದ ಮರುಳಾದ ನಮ್ಮಂತಹ ಜೀವಗಳಿಗೆ ಅದು ಹೇಗೆ ತಾನೇ ತಿಳಿದೀತು? ದಯವಿಟ್ಟು ತಮ್ಮ ಮಾತಿನ ಅಭಿಪ್ರಾಯವನ್ನು ತಾವೇ ನನಗೆ ವಿವರಿಸಬೇಕು."

ಪ್ರಾಚೀನಬರ್ಹಿಮಹಾರಾಜನ ಪಾರ್ಥನೆಯಂತೆ ತಾವು ಹೇಳಿದ ಉಪಾಖ್ಯಾನದ ಒಳ ಅರ್ಥವನ್ನು ವಿವರಿಸುತ್ತಾ ನಾರದಮಹರ್ಷಿಗಳು ಆತನಿಗೆ ಹೀಗೆಂದರು :

"ಎಲೈ ಮಹಾರಾಜನೇ! ಕೇಳು. ನಾನು ಹೇಳಿದ ಉಪಾಖ್ಯಾನದಲ್ಲಿ ಪುರಂಜನ–ಎಂಬುವನು ಪುರುಷ (ಜೀವ) ಎಂಬುದಾಗಿ ತಿಳಿದುಕೊಳ್ಳಬೇಕು. ಪುರಂಜನ ಎಂದರೆ ಪುರವನ್ನು ನಿರ್ಮಿಸುವವನು ಎಂದರ್ಥ. ಜೀವನು ತನ್ನ ಕರ್ಮಗಳಿಗೆ ತಕ್ಕಂತೆ ಒಂದು, ಎರಡು, ಮೂರು ಅಥವಾ ನಾಲ್ಕು ಪಾದಗಳಿಂದ ಕೂಡಿದ ಅಥವಾ ಪಾದವೇ ಇಲ್ಲದ ಶರೀರವೆಂಬ ಪುರವನ್ನು ನಿರ್ಮಿಸುವುದರಿಂದ ಆತನನ್ನು ಪುರಂಜನನೆಂದು ಕರೆಯಲಾಗಿದೆ. ಆತನ ಗೆಳೆಯನೆಂದು ನಾನು ಕಥೆಯಲ್ಲಿ ಹೇಳಿದ 'ಅವಿಜ್ಞಾತ' ಎನ್ನುವವನು ಈಶ್ವರನೇ ಆಗಿದ್ದಾನೆ. ಯಾವುದೇ ವಿಧವಾದ ಹೆಸರುಗಳಿಂದಾಗಲೀ, ಗುಣಗಳಿಂದಾಗಲೀ, ಕರ್ಮಗಳಿಂದಾಗಲೀ–ಯಾರೂ ಆತನನ್ನು ಸಂಪೂರ್ಣವಾಗಿ ತಿಳಿಯಲಾರರು. ಶರೀರವೆಂಬ ಪುರದಲ್ಲಿ ತನ್ನೊಡನೆಯೇ ಆತನು ಇದ್ದರೂ ಜೀವನು ಆತನನ್ನು ತಿಳಿಯಲಾರನು. ಆದುದರಿಂದ ಈಶ್ವರನು 'ಅವಿಜ್ಞಾತ' (ಚೆನ್ನಾಗಿ ಅರಿಯಲ್ಪಡದವನು) ನೆನಿಸಿದ್ದಾನೆ. ಜೀವನು

ಸುಖ-ದುಃಖರೂಪವಾದ ಪ್ರಾಕೃತವಿಷಯಗಳನ್ನು ಭೋಗಿಸಬೇಕೆಂದು ಬಯಸಿದಾಗ ಅದಕ್ಕಾಗಿ ಆತನಿಗೆ ಉಳಿದ ಶರೀರಗಳಿಗಿಂತಲೂ ಒಂಬತ್ತು ಬಾಗಿಲುಗಳು, ಎರಡು ಕೈಗಳು ಮತ್ತು ಎರಡು ಕಾಲುಗಳುಳ್ಳ ಮನುಷ್ಯ ಶರೀರವೇ ರುಚಿಸಿತು. ಉಪಾಖ್ಯಾನದಲ್ಲಿ ಹೆಸರಿಸಲ್ಪಟ್ಟ 'ಪುರಂಜನೀ' ಎನ್ನುವವಳು ಯಾರು? ಎಂದರೆ : ಬುದ್ಧಿ ಅಥವಾ ಅವಿದ್ಯೆ. ಆ ಬುದ್ಧಿಯ ಕಾರಣದಿಂದಲೇ ಪುರುಷನಿಗೆ ದೇಹ ಮತ್ತು ಇಂದ್ರಿಯ ಮುಂತಾದುವುಗಳಲ್ಲಿ 'ಅವೇ ತಾನು'–'ಅವು ತನ್ನವು' ಎಂಬ ಅಹಂಕಾರ-ಮಮಕಾರ ಗಳುಂಟಾಗುತ್ತವೆ ಮತ್ತು ಅದರ ಆಸರೆಯಿಂದಲೇ ಆತನು ಶರೀರದಲ್ಲಿ ಇಂದ್ರಿಯಗಳ ಮೂಲಕ ವಿಷಯಗಳನ್ನು ಭೋಗಿಸುತ್ತಾನೆ. ಹತ್ತು ಇಂದ್ರಿಯ ಗಳೇ ಆ ಪುರಂಜನಿಯ ಗೆಳತಿಯರು. ಶಬ್ದವೇ ಮುಂತಾದ ವಿಷಯಗಳ ತಿಳಿವಳಿಕೆಯನ್ನು ಮತ್ತು ಓಡಾಟವೇ ಮುಂತಾದ ಕರ್ಮಗಳನ್ನು ಬುದ್ಧಿಗೆ ಉಂಟುಮಾಡುವ ಹತ್ತು ಇಂದ್ರಿಯಗಳನ್ನೇ ಬುದ್ಧಿಯ ಮಿತ್ರರೆಂದೂ, ಸೇವಕರೆಂದೂ ಕರೆಯಲಾಗಿದೆ. ಇಂದ್ರಿಯವೃತ್ತಿಗಳೇ ಆಕೆಯ ಗೆಳತಿಯರು. ಪ್ರಾಣ-ಅಪಾನ-ವ್ಯಾನ-ಉದಾನ-ಸಮಾನಗಳೆಂಬ ಐದು ವೃತ್ತಿಗಳುಳ್ಳ ಪ್ರಾಣವಾಯುವೇ ಆ ನಗರವನ್ನು ರಕ್ಷಿಸುವ ಐದು ಹೆಡೆಯ ಸರ್ಪವೆಂದು ತಿಳಿ. ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳೆಂಬ ಎರಡು ಪ್ರಕಾರಗಳುಳ್ಳ ಇಂದ್ರಿಯಗಳಿಗೆ ನಾಯಕನಾಗಿರುವ ಮನಸ್ಸನ್ನೇ ಹನ್ನೊಂದನೆಯದಾಗಿರುವ ಮಹಾಬಲಶಾಲಿಯಾದ ಭಟನೆಂದು ತಿಳಿಯಬೇಕು. ಶಬ್ದವೇ ಮುಂತಾದ ಐದು ಇಂದ್ರಿಯವಿಷಯಗಳೇ ಪಾಂಚಾಲದೇಶ.* ಅದರ ಮಧ್ಯದಲ್ಲಿ ಈ ನವದ್ವಾರಗಳುಳ್ಳ ಪುರವು ಶೋಭಿಸುತ್ತಿದೆ. ಎರಡು ಕಣ್ಣುಗಳು, ಎರಡು ಕಿವಿಗಳು, ಎರಡು ಮೂಗು ಹೊಳ್ಳೆಗಳು ಒಂದು ಮುಖ, ಎರಡು ಲಿಂಗ ಮತ್ತು ಗುದಗಳು–ಇವೇ ನಗರದ ಒಂಬತ್ತು ಬಾಗಿಲುಗಳು. ಇವುಗಳಲ್ಲಿ ಮುಖವನ್ನುಳಿದು ಉಳಿದ ಬಾಗಿಲುಗಳೆಲ್ಲಾ ಎರಡೆರಡಾಗಿ ಜೊತೆಯಲ್ಲಿರು ವುವು. ಜೀವನು ಇಂದ್ರಿಯಸಮೇತನಾಗಿ ಈ ಬಾಗಿಲುಗಳ ಮೂಲಕ

---

* ಹಿಮವತ್ಪರ್ವತದ ದಕ್ಷಿಣದಲ್ಲಿರುವ ಭರತಖಂಡವೇ ಕರ್ಮಭೂಮಿಯಾಗಿರುವುದ ರಿಂದ ಮೇಲ್ಕಂಡ ನಗರಿಯು ಹಿಮವತ್ಪರ್ವತದ ದಕ್ಷಿಣದ ತಪ್ಪಲಿನಲ್ಲಿದೆಯೆಂದು ಉಪಾಖ್ಯಾನದಲ್ಲಿ ಹೇಳಿದೆ. 'ಸ ಏಕದಾ ಹಿಮವತೋ ದಕ್ಷಿಣೇ ಪೃಥುಸಾನುಷು'

ಹೊರಗಿನ ವಿಷಯಗಳಲ್ಲಿ ಸಂಚಾರಮಾಡುವನು. ಈ ದ್ವಾರಗಳಲ್ಲಿ ಕಣ್ಣುಗಳು, ಮೂಗುಹೊಳ್ಳೆಗಳು ಮತ್ತು ಬಾಯಿ–ಎಂಬ ಐದು ಪೂರ್ವದ್ವಾರಗಳು. ಬಲಗಿವಿಯು ದಕ್ಷಿಣದ್ವಾರ ಮತ್ತು ಎಡಗಿವಿಯು ಉತ್ತರದ್ವಾರ. ಲಿಂಗ ಮತ್ತು ಗುದ–ಎಂಬ ಎರಡೂ ಕೆಳಮುಖವಾಗಿರುವ ಪಶ್ಚಿಮದ್ವಾರಗಳು. ಖದ್ಯೋತ ಮತ್ತು ಆವಿರ್ಮುಖೀ* ಎಂಬ ಎರಡು ದ್ವಾರಗಳು ಒಂದು ಸ್ಥಾನದಲ್ಲಿವೆಯೆಂದು ಹೇಳಿದೆನಲ್ಲವೇ! ಎರಡು ನೇತ್ರಗೋಳಕಗಳೇ ಆ ದ್ವಾರಗಳು. ಎಡಗಣ್ಣಿಗೆ ಖದ್ಯೋತವೆಂದೂ, ಬಲಗಣ್ಣಿಗೆ ಆವಿರ್ಮುಖವೆಂದೂ ಹೆಸರು. ರೂಪವೇ ವಿಭ್ರಾಜಿತವೆಂಬ ದೇಶ. ಈ ನೇತ್ರದ್ವಾರಗಳ ಮೂಲಕ ಜೀವನು ಕಣ್ಣೆಂಬ ಇಂದ್ರಿಯದ ಸಹಾಯದಿಂದ ಈ ದೇಶದ ಅನುಭವವನ್ನು ಪಡೆಯುತ್ತಾನೆ. (ಕಣ್ಣೆಂಬ ಇಂದ್ರಿಯವನ್ನೇ ಹಿಂದೆ 'ದ್ಯುಮಾನ್' ಎಂಬ ಹೆಸರಿನ ಗೆಳೆಯನೆಂದು ಕರೆದಿದೆ.) ಮೂಗಿನ ಹೊಳ್ಳೆಗಳನ್ನು ನಳಿನೀ ಮತ್ತು ನಾಳಿನೀ ಎಂದು ಕರೆಯಲಾಗಿದೆ. ಈ ಇಂದ್ರಿಯದ ವಿಷಯವಾದ ಗಂಧವನ್ನು ಸೌರಭದೇಶವೆಂದು ಕರೆಯಲಾಗಿದೆ. ಘ್ರಾಣೇಂದ್ರಿಯವೇ ಅವಧೂತನೆಂಬ ಮಿತ್ರನು. ಮುಖವನ್ನು ಮುಖ್ಯದ್ವಾರವೆಂದೂ, ವಾಕ್ಕನ್ನು ವಿಪಣವೆಂದೂ ಹೆಸರಿಸಲಾಗಿದೆ. ಮುಖದಲ್ಲಿರುವ ವಾಗಿಂದ್ರಿಯವೇ ವಿಪಣವು ಮತ್ತು ರಸನೇಂದ್ರಿಯವೇ 'ರಸವಿತ್' ಎಂಬ ಮಿತ್ರನು. ವಾಣಿಯು ವ್ಯವಹಾರಕ್ಕೆ ಆಪಣವೆಂದೂ, ಬಗೆ-ಬಗೆಯ ಅನ್ನಗಳಿಗೆ ಬಹೂದನವೆಂದೂ, ಬಲಗಿವಿಗೆ 'ಪಿತೃಹೂ' ಎಂದೂ, ಎಡಗಿವಿಗೆ 'ದೇವಹೂ' ಎಂದು ಹೆಸರಿಸಲಾಗಿದೆ. ದಕ್ಷಿಣಪಾಂಚಾಲ ಮತ್ತು ಉತ್ತರ ಪಾಂಚಾಲದೇಶಗಳು ಯಾವುವೆಂದರೆ ಕರ್ಮಕಾಂಡರೂಪವಾದ ಪ್ರವೃತ್ತಿ ಮಾರ್ಗದ ಶಾಸ್ತ್ರಗಳು ಮತ್ತು ಉಪಾಸನಾಕಾಂಡರೂಪವಾದ ನಿವೃತ್ತಿ ಮಾರ್ಗದ ಶಾಸ್ತ್ರಗಳು. ಇವುಗಳನ್ನು ಶ್ರವಣೇಂದ್ರಿಯರೂಪವಾದ ಶ್ರುತಧರನ ಸಹಾಯದಿಂದ ಕೇಳಿ ತಿಳಿದು ಜೀವನು ಕ್ರಮವಾಗಿ ಪಿತೃಯಾನ ಮತ್ತು ದೇವಾಯಾನಮಾರ್ಗಗಳ ಮೂಲಕ ಹೋಗುವನು.[1] ಲಿಂಗವೇ

---

* ಅಲ್ಪಪ್ರಕಾಶವುಳ್ಳ ಎಡಗಣ್ಣಿಗೆ ಖದ್ಯೋತ (ಮಿಣುಕುಹುಳು) ಮತ್ತು ಹೆಚ್ಚು ಪ್ರಕಾಶವುಳ್ಳ ಬಲಗಣ್ಣಿಗೆ ಆವಿರ್ಮುಖವೆಂದು ಹೆಸರು.

1 ಶರೀರವನ್ನು ಪುರವೆಂದು ರೂಪಿಸಿರುವುದರಿಂದ ಅದರ ಬೇರೆ-ಬೇರೆ ಅಂಗ-

ಆಸುರೀ* ಎಂದು ಹೇಳಲ್ಪಟ್ಟಿರುವ ಪಶ್ಚಿಮದ್ವಾರವು. ಸ್ತ್ರೀಪ್ರಸಂಗವೇ ಗ್ರಾಮಕವೆಂಬ ಗ್ರಾಮ್ಯಸುಖದ ದೇಶವು ಮತ್ತು ಲಿಂಗದಲ್ಲಿರುವ ಉಪಸ್ಥೇಂದ್ರಿಯವು ದುರ್ಮದನೆಂಬ ಗೆಳೆಯನು. ಗುದವೇ ನಿರ್ಋತಿ ಯೆಂಬ ಪಶ್ಚಿಮದ್ವಾರವು. ನರಕವೇ ವೈಶಸವೆಂಬ ದೇಶ ಮತ್ತು ಗುದದಲ್ಲಿ ರುವ ಪಾಯುವೆಂಬ ಇಂದ್ರಿಯವು ಲುಬ್ಧಕನೆಂಬ ಮಿತ್ರನು. ಕಥೆಯಲ್ಲಿ ಹೇಳ ಲ್ಪಟ್ಟಿರುವ ಅಂಧರು ಕೈ ಕಾಲುಗಳು. ಇವುಗಳ ಸಹಾಯದಿಂದ ಜೀವನು ಕೊಡುವಿಕೆ, ತೆಗೆದುಕೊಳ್ಳುವಿಕೆ ಮತ್ತು ನಡೆಯುವಿಕೆಗಳೇ ಮುಂತಾದ ಕರ್ಮಗಳನ್ನು ಮಾಡುವನು. ಹೃದಯವೇ ಅರಮನೆಯ ಅಂತಃಪುರ. ಇದರಲ್ಲಿರುವ ಮನಸ್ಸೇ ವಿಷೂಚಿಯೆಂಬ ಪ್ರಧಾನಸೇವಕನೆಂದು ತಿಳಿಯ ಬೇಕು. ಈ ಮನಸ್ಸಿನ ಗುಣಗಳಾದ ಸತ್ತ್ವ ಮುಂತಾದುವುಗಳಿಂದ ಜೀವನು

ಉಪಾಂಗ ಮುಂತಾದುವುಗಳನ್ನು ನಗರದ ವಿವಿಧಭಾಗಗಳನ್ನಾಗಿ ತಿಳಿಯಬೇಕು. ಈ ದೇಹವೆಂಬ ಪುರಕ್ಕೆ ಚರ್ಮ, ಮೂಳೆ-ಮಾಂಸ ಮುಂತಾದುವುಗಳು ಕೋಟೆಗಳು. ಹೆಗಲಿನ ಮೇಲುಭಾಗವು ಕೊತ್ತಳ. ರಕ್ತವು ಸಂಚರಿಸುತ್ತಾ ಇರುವ ಧಮನಿಗಳೇ ಕಂದಕಗಳು. ಇಂದ್ರಿಯಧ್ವಜಗಳು ಕಿಟಕಿಗಳು. ಕಣ್ಣುರೆಪ್ಪೆಗಳು ದ್ವಾರತೋರಣಗಳು. ಮೂಲಾಧಾರವೇ ಮುಂತಾದ ಚಕ್ರಗಳೇ ತ್ರಿಗುಣಗಳೆಂಬ ಕಲಶಗಳಿಂದ ಕೂಡಿದ ಮನೆಗಳು. ನೀಲಮಣಿ-ಮರಕತಗಳೇ ಮುಂತಾದ ಬಗೆ-ಬಗೆಯ ರತ್ನಗಳಂತೆ ನಾನಾವರ್ಣಗಳುಳ್ಳ ನಾಡಿಗಳಿಗೆ ನೆಲೆಯಾಗಿರುವ ಹೃದಯವೇ ಮನೆಯಲ್ಲಿರುವ ರತ್ನದ ಜಗುಲಿಯು. ಹೃದಯವು ಜೀವನಿಗೆ ನಿವಾಸಸ್ಥಾನ, ಜೀವನವನ್ನು ಆಶ್ರಯಿಸಿರುವ ಇಂದ್ರಿಯಗಳಿಗೆ ಸಭಾಗೃಹ ಮತ್ತು ಪರಮಾತ್ಮನೂ ರಮಿಸುವ ಜಾಗ. ಆದುದರಿಂದ ಅದನ್ನು ಸಭೆ, ಚತ್ವರ (ಅಂಗಳ), ರಸ್ತೆ, ಕ್ರೀಡಾಸ್ಥಾನ–ಇತ್ಯಾದಿ ಪದಗಳಿಂದ ರೂಪಿಸಲಾಗಿದೆ. ಕಣ್ಣು ಮುಂತಾದ ಇಂದ್ರಿಯಗಳೇ ನಗರದ ಅಂಗಡಿಗಳು ಮತ್ತು ಶಬ್ದವೇ ಮುಂತಾದ ವಿಷಯಗಳು ಅಲ್ಲಿ ಮಾರಲ್ಪಡುವ ಸರಕುಗಳು. ಪುರೀತತ್ ಎಂಬ ನಾಡಿಯು ಗಾಢನಿದ್ರೆಯಲ್ಲಿ ಜೀವನು ವಿಶ್ರಮಿಸುವ ಸ್ಥಾನ ಮತ್ತು ಕೈಕಾಲುಗಳೇ ನಗರದ ಧ್ವಜಪತಾಕೆಗಳು. ನಗರದ ಉಪವನದಲ್ಲಿ ಹೇಳಿರುವ ವೃಕ್ಷಗಳು ಪುರುಷನೆಂದೂ, ಬಳ್ಳಿಗಳು ಲತೆಗಳೆಂದೂ, ಹಕ್ಕಿಗಳು ಆ ದಂಪತಿಗಳ ಮಕ್ಕಳೆಂದೂ ಭಾವಿಸಬಹುದು. (ಶ್ಲೋಕ ೧೩)

* ಜೀವನು ಉಪಸ್ಥೇಂದ್ರಿಯದಿಂದ ಕೂಡಿ ಆಸುರೀ–ಎಂದು ಹೇಳಲ್ಪಟ್ಟಿರುವ ಶಿಶ್ನದಿಂದ ಮೈಥುನಸುಖವನ್ನು ಅನುಭವಿಸುವನು. ಈ ಸುಖವೊಂದೇ ಅಸುರರಿಗೆ ಪ್ರಿಯವಾಗಿರುವುದರಿಂದ ಶಿಶ್ನಕ್ಕೆ ಆಸುರೀ ಎಂದು ಹೆಸರು. ಗುದವು ಮಲವನ್ನು ಹೊರಪಡಿಸುವುದರಿಂದ ಅದಕ್ಕೆ ನಿರ್ಋತಿ–ಎಂದು ಹೆಸರು.

ಪ್ರಸನ್ನತೆ-ಹರ್ಷಗಳೆಂಬ ವಿಕಾರಗಳನ್ನೂ ಮತ್ತು ಮೋಹವನ್ನೂ ಪಡೆಯುವನು. ಪುರಂಜನರಾಜನು ತನ್ನ ಪತ್ನಿಯಲ್ಲಿ ದಾಸನಂತಿದ್ದು ಎಲ್ಲದರಲ್ಲಿಯೂ, ಆಕೆಯನ್ನು ಅನುಕರಿಸುತ್ತಿದ್ದನು ಎಂದು ಹೇಳಿದೆನಲ್ಲವೇ? ಅದರ ಅರ್ಥವೇನೆಂದರೆ–ಜೀವನು ಸ್ವತಃ ವಿಕಾರರಹಿತನಾಗಿದ್ದರೂ, ಸಾಕ್ಷಿಮಾತ್ರನೇ ಆಗಿದ್ದರೂ–ಬುದ್ಧಿಗೆ ಅಡಿಯಾಳಿನಂತೆ ಇರುತ್ತಾನೆ. ಬುದ್ಧಿಯ ಗುಣಗಳಿಂದ ಲೇಪಿಸಲ್ಪಟ್ಟ ಆತನು–ಬುದ್ಧಿಯು ಹೇಗೆ ಕನಸಿನ ಸ್ಥಿತಿಯಲ್ಲಿ ವಿಕಾರ ಹೊಂದುತ್ತದೆಯೋ ಎಚ್ಚರದ ಸ್ಥಿತಿಯಲ್ಲಿ ಇಂದ್ರಿಯಗಳೇ ಮುಂತಾದುವುಗಳನ್ನು ವಿಕಾರಗೊಳಿಸುತ್ತದೆಯೋ–ಅದೇ ರೂಪದಲ್ಲಿ ಅದರ ವೃತ್ತಿಗಳನ್ನು ಆತನು ಅನುಸರಿಸಬೇಕಾಗುತ್ತದೆ. (ಶ್ಲೋಕ 2-17)

ಉಪಾಖ್ಯಾನದಲ್ಲಿ ಪುರಂಜನರಾಜನ ರಥವೆಂದು ಹೇಳಲ್ಪಟ್ಟಿರುವುದು ಶರೀರವೇ ಆಗಿದೆ. ಅದಕ್ಕೆ ಐದು ಜ್ಞಾನೇಂದ್ರಿಯರೂಪಗಳಾದ ಐದು ಕುದುರೆಗಳು ಹೂಡಲ್ಪಟ್ಟಿವೆ. ವಾಸ್ತವವಾಗಿ ಅದು ಗತಿಹೀನವಾಗಿದ್ದರೂ ನೋಡುವುದಕ್ಕೆ ಸಂವತ್ಸರರೂಪವಾದ ಕಾಲದಂತೆಯೇ ಅಡೆ-ತಡೆಗಳಿಲ್ಲದ ವೇಗವನ್ನು ಹೊಂದಿರುವುದು. ಪುಣ್ಯ ಮತ್ತು ಪಾಪಗಳೆಂಬ ಎರಡು ಬಗೆಯ ಕರ್ಮಗಳೇ ಆ ರಥದ ಎರಡು ಚಕ್ರಗಳು. ತ್ರಿಗುಣಗಳು ಆ ರಥದ ಧ್ವಜಗಳು. ಪಂಚಪ್ರಾಣಗಳು ಅದರ ಕಟ್ಟುಗಳು. ಮನಸ್ಸೇ ರಥದ ಹಗ್ಗಗಳು. ಬುದ್ಧಿಯು ರಥವನ್ನು ನಡೆಸುವ ಸಾರಥಿಯು. ಹೃದಯವೇ ಕುಳಿತುಕೊಳ್ಳುವ ಸ್ಥಾನ. ಸುಖ-ದುಃಖಗಳೇ ಮುಂತಾದ ದ್ವಂದ್ವಗಳು ರಥದ ನೊಗಗಳನ್ನು ಬಿಗಿಯುವ ಜಾಗವಾಗಿದ್ದು ಶಬ್ದ-ಸ್ಪರ್ಶಗಳೇ ಮುಂತಾದ ವಿಷಯಗಳು ರಥದಲ್ಲಿ ಇರಿಸಲ್ಪಟ್ಟಿರುವ ಆಯುಧಗಳು ಮತ್ತು ಚರ್ಮವೇ ಮುಂತಾದ ಸಪ್ತ ಧಾತುಗಳು ಅದರ ಆವರಣಗಳು. ಐದು ಕರ್ಮೇಂದ್ರಿಯಗಳೇ ಆ ರಥದ ಐದು ಬಗೆಯ ಗತಿಗಳಾಗಿವೆ. ಇಂತಹ ರಥವನ್ನೇರಿ ರಥಿಯಾಗಿರುವ ಜೀವನು ಬಿಸಿಲ್ಗೊದರೆಯಂತಿರುವ ವಿಷಯಗಳ ಕಡೆಗೆ ವೇಗದಿಂದ ಓಡುತ್ತಾನೆ. ಹನ್ನೊಂದು ಇಂದ್ರಿಯಗಳೇ ಆತನ ಸೇನೆಯಾಗಿವೆ. ಆತನು ಆಡುವ ಬೇಟೆ ಯಾವುದೆಂದರೆ : ಐದು ಜ್ಞಾನೇಂದ್ರಿಯಗಳ ಮೂಲಕ ಆಯಾ ಇಂದ್ರಿಯವಿಷಯಗಳನ್ನು ಅನ್ಯಾಯವಾಗಿ ಗ್ರಹಣಮಾಡುವುದು. ಕಾಲದ

ಜ್ಞಾನವನ್ನುಂಟುಮಾಡುವ ಸಂವತ್ಸರವೇ ಚಂಡವೇಗನೆಂಬ ಗಂಧರ್ವ ರಾಜನು. ಆತನ ಅಧೀನದಲ್ಲಿ ಮುನ್ನೂರ ಅರುವತ್ತು ಗಂಧರ್ವರು ಇದ್ದಾರೆಂದು ಹೇಳಿದೆನಲ್ಲವೇ! ಅವರೇ ಹಗಲುಗಳು. ಮುನ್ನೂರ ಅರುವತ್ತು ಮಂದಿ ಗಂಧರ್ವಸ್ತ್ರೀಯರು ರಾತ್ರಿಗಳು. ಅವರು ಸುತ್ತುತ್ತಾ ಮನುಷ್ಯರ ಆಯುಸ್ಸನ್ನು ಕಸಿದುಕೊಳ್ಳುತ್ತಿರುವರು. ಮುಪ್ಪು ಎಂಬ ಅವಸ್ಥೆಯೇ ಕಣ್ಣಿಗೆ ಕಾಣುತ್ತಿರುವ ಕಾಲಕನ್ಯೆಯು. ಆಕೆಯನ್ನು ಯಾವ ಮನುಷ್ಯನೂ ಮನಃಪೂರ್ವಕವಾಗಿ ಅಂಗೀಕರಿಸುವುದಿಲ್ಲವಷ್ಟೇ! ಮೃತ್ಯುವೆಂಬ ಯವನ ರಾಜನು ಲೋಕವನ್ನು ಸಂಹರಿಸುವುದಕ್ಕೋಸ್ಕರ ಆಕೆಯನ್ನು ತನ್ನ ತಂಗಿ ಯನ್ನಾಗಿ ಸ್ವೀಕರಿಸುತ್ತಾನೆ. ಅಧಿ (ಮಾನಸಿಕ) ಮತ್ತು ವ್ಯಾಧಿ (ದೈಹಿಕ) ರೋಗಗಳೇ ಆತನ ಕಾಲಾಳುಪಡೆಗಳು. ಪ್ರಾಣಿಗಳಿಗೆ ಪೀಡೆಯನ್ನುಂಟು ಮಾಡಿ ಮೃತ್ಯುವಿನ ಮುಖಕ್ಕೆ ಒಯ್ಯುವ ಶೀತಜ್ವರ ಮತ್ತು ಉಷ್ಣಜ್ವರಗಳೆಂಬ ಎರಡೂ ಆತನ ಸೋದರನೆಂದು ಕರೆಯಲ್ಪಟ್ಟಿರುವ ಪ್ರಜ್ವಾರನು. (ಶ್ಲೋಕ 18-23)

ಆ ಪುರಂಜನರಾಜನೆಂಬ ಜೀವನು ಹೇಗೆ ಕ್ಲೇಶಪಡುತ್ತಾನೆಂಬುದನ್ನು ವಿವರಿಸುತ್ತೇನೆ ಕೇಳು, ರಾಜೇಂದ್ರ! ದೇಹಾಭಿಮಾನಿಯಾದ ಜೀವನು ಈ ರೀತಿಯಲ್ಲಿ ಬಗೆ-ಬಗೆಯ ಆಧಿಭೌತಿಕ, ಆಧ್ಯಾತ್ಮಿಕ ಮತ್ತು ಆಧಿದೈವಿಕ ಗಳಾದ ಕ್ಲೇಶಗಳನ್ನು ಅನುಭವಿಸುತ್ತಾ ನೂರು ವರ್ಷಗಳವರೆಗೆ ಮನುಷ್ಯ ಶರೀರದಲ್ಲಿರುತ್ತಾನೆ. ಬುದ್ಧಿಯ ಜೊತೆಯಲ್ಲಿ ವಿವಾಹಮಾಡಿಕೊಂಡಿದ್ದ ರಿಂದ ಆತನು ಹೀಗೆ ಸಂಸಾರಾಸಕ್ತನಾಗಿ ಸಂತಾಪಗಳಿಗೆ ಒಳಗಾಗಿರುತ್ತಾನೆ. ಈತನು ವಾಸ್ತವವಾಗಿ ತ್ರಿಗುಣರಹಿತನು. ಆದರೂ ಅಜ್ಞಾನದಿಂದ ಆವೃತ ನಾಗಿ 'ನಾನು-ನನ್ನದು'–ಎಂಬ ಅಭಿಮಾನಗಳಿಗೆ ವಶನಾಗಿ ಪ್ರಾಣದ ಧರ್ಮಗಳಾದ ಹಸಿವು-ಬಾಯಾರಿಕೆಗಳನ್ನೂ, ಇಂದ್ರಿಯಧರ್ಮಗಳಾದ ಕುರುಡು-ಕುಂಟು ಮುಂತಾದುವುಗಳನ್ನೂ ಮತ್ತು ಮನಸ್ಸಿನ ಧರ್ಮಗಳಾದ ಸಂಕಲ್ಪಾದಿಗಳನ್ನು ತನ್ನಲ್ಲಿ ಆರೋಪಿಸಿಕೊಂಡು ಕ್ಷುದ್ರವಾದ ವಿಷಯ ಗಳನ್ನೇ ಚಿಂತಿಸುತ್ತಾ ಬಗೆ-ಬಗೆಯ ಕರ್ಮಗಳನ್ನು ಮಾಡುತ್ತಿರುತ್ತಾನೆ. ಈ ಜೀವನು ಸ್ವಯಂಪ್ರಕಾಶನಾಗಿದ್ದರೂ–ಎಲ್ಲಿಯವರೆಗೆ ಸರ್ವರಿಗೂ ಪರಮ ಗುರುವಾಗಿ, ಎಲ್ಲರಿಗೂ ಆತ್ಮಸ್ವರೂಪನಾಗಿರುವ ಶ್ರೀಭಗವಂತನ ಸ್ವರೂಪ

ವನ್ನು ತಿಳಿದುಕೊಳ್ಳುವುದಿಲ್ಲವೋ–ಅಲ್ಲಿಯವರೆಗೂ ಪ್ರಕೃತಿಯ ಗುಣಗಳ ಲ್ಲಿಯೇ ಕಟ್ಟಿಹಾಕಲ್ಪಟ್ಟಿರುತ್ತಾನೆ. ಆ ಗುಣಗಳಲ್ಲಿ ಅಭಿಮಾನಪರವಶನಾಗಿ ಈತನು ಸಾತ್ತ್ವಿಕ, ರಾಜಸ ಮತ್ತು ತಾಮಸಕರ್ಮಗಳನ್ನು ಆಚರಿಸುತ್ತಾ ಅವುಗಳಿಗೆ ತಕ್ಕಂತೆ ಬೇರೆ-ಬೇರೆ ಯೋನಿಗಳಲ್ಲಿ ಜನ್ಮತಾಳುತ್ತಿರುತ್ತಾನೆ. ಕೆಲವೊಮ್ಮೆ ಸಾತ್ತ್ವಿಕಕರ್ಮಗಳನ್ನಾಚರಿಸಿ ಅವುಗಳ ಫಲವಾಗಿ ಪ್ರಕಾಶವೇ ಹೆಚ್ಚಾಗಿರುವ ಸ್ವರ್ಗವೇ ಮುಂತಾದ ಲೋಕಗಳನ್ನು ಹೊಂದುವನು. ಕೆಲವೊಮ್ಮೆ ರಾಜಸಕರ್ಮಗಳನ್ನಾಚರಿಸಿ ಅವುಗಳ ಫಲವಾಗಿ ದುಃಖಮಯವಾದ ರಜೋಗುಣದ ಲೋಕಗಳನ್ನು ಪಡೆದು ಬಗೆ-ಬಗೆ ಕರ್ಮಗಳ ಕ್ಲೇಶಗಳನ್ನು ಅನುಭವಿಸುವನು ಮತ್ತು ಕೆಲವು ವೇಳೆಗಳಲ್ಲಿ ತಮೋಗುಣದ ಕರ್ಮಗಳ ಫಲವಾಗಿ ಅತ್ಯಧಿಕಶೋಕದಿಂದ ತುಂಬಿದ ಯೋನಿಗಳಲ್ಲಿ ಜನ್ಮತಾಳುವನು. ಅಜ್ಞಾನದಿಂದ ಕುರುಡನಾದ ಈ ಜೀವನು ಈ ರೀತಿಯಲ್ಲಿ ತನ್ನ ಕರ್ಮಗಳಿಗೂ–ಗುಣಗಳಿಗೂ ತಕ್ಕಂತೆ ದೇವಯೋನಿಗಳಲ್ಲಿಯೋ, ಮನುಷ್ಯ ಯೋನಿಗಳಲ್ಲಿಯೋ ಅಥವಾ ಪಶು, ಪಕ್ಷಿ, ಕೀಟ–ಮುಂತಾದುವುಗಳ ಯೋನಿಗಳಲ್ಲಿಯೋ, ಕೆಲವೊಮ್ಮೆ ಗಂಡಸಾಗಿಯೋ, ಕೆಲವೊಮ್ಮೆ ಹೆಂಗಸಾಗಿಯೋ ಮತ್ತೆ ಕೆಲವೊಮ್ಮೆ ನಪುಂಸಕನಾಗಿಯೋ ಜನಿಸುವನು. ಬಡಪಾಯಿಯಾದ ನಾಯಿಯು ಹಸಿವಿಗೆ ತುತ್ತಾಗಿ ಮನೆ-ಮನೆಗೂ ಅಲೆಯುತ್ತಾ ತನ್ನ ಅದೃಷ್ಟದಂತೆ ಕೆಲವೊಮ್ಮೆ ಜನರಿಂದ ಏಟು ತಿನ್ನುವುದು ಮತ್ತು ಕೆಲವೊಮ್ಮೆ ಅನ್ನವನ್ನು ತಿನ್ನುವುದಿಲ್ಲವೇ! ಹಾಗೆಯೇ ಈ ಜೀವನು ಚಿತ್ತದಲ್ಲಿ ಬಗೆ ಬಗೆಯ ವಾಸನೆಗಳನ್ನು ತುಂಬಿಕೊಂಡು ಮೇಲಿನ ಮತ್ತು ಕೆಳಗಿನ ಮಾರ್ಗ ಗಳಿಂದ ಮೇಲಿನ ಲೋಕಗಳಿಗೋ, ಕೆಳಗಿನ ಲೋಕಗಳಿಗೋ ಅಥವಾ ಮಧ್ಯದಲ್ಲಿರುವ ಲೋಕಗಳಿಗೋ ಹೋಗಿ ಅಲೆದಾಡುತ್ತಾ ತನ್ನ ಕರ್ಮಗಳಿಗೆ ಅನುಗುಣವಾಗಿ ಸುಖ-ದುಃಖಗಳನ್ನು ಅನುಭವಿಸುವನು. ಅಜ್ಞಾನಿಯಾದ ಜೀವನು ಆಧಿದೈವಿಕ, ಆಧಿಭೌತಿಕ ಮತ್ತು ಆಧ್ಯಾತ್ಮಿಕಗಳೆಂಬ ಮುಬ್ಬಗೆಯ ಸಂತಾಪಗಳಲ್ಲಿ ಯಾವುದರಿಂದಲೂ ಪೂರ್ಣವಾಗಿ ಮತ್ತು ಅವಶ್ಯವಾಗಿ ಬಿಡುಗಡೆ ಹೊಂದಲಾರನು. ಎಂದಾದರೂ ಏನಾದರೂ ಸ್ವಲ್ಪ ಬಿಡುಗಡೆಯಾದಂತೆ ತೋರಿದರೂ ಅದು ತಾತ್ಕಾಲಿಕವಾದ ಬಿಡುಗಡೆಯೇ ಹೊರತು ಪೂರ್ಣವಾದ ಮುಕ್ತಿಯೆನಿಸುವುದಿಲ್ಲ. ತಲೆಯ ಮೇಲೆ ಮಹಾಭಾರವನ್ನು

ಹೊತ್ತುಕೊಂಡು ಹೋಗುತ್ತಿರುವವನು ಆ ಭಾರವನ್ನು ತಲೆಯಿಂದ ಇಳಿಸಿ ಹೆಗಲಿನ ಮೇಲೆ ಇಟ್ಟುಕೊಂಡರೆ ಯಾವ ಅನುಭವವು ಉಂಟಾಗುವುದೋ– ಅದೇ ಅನುಭವವು ಮನುಷ್ಯನಿಗೆ ಈ ತಾತ್ಕಾಲಿಕವಾದ ದುಃಖನಿವೃತ್ತಿಯಿಂದ ಉಂಟಾಗುವುದು. ಯಾವುದಾದರೂ ಉಪಾಯದಿಂದ ಒಂದು ದುಃಖದಿಂದ ಬಿಡುಗಡೆಹೊಂದಿದರೆ ಆಗ ಮತ್ತೊಂದು ದುಃಖವು ಆತನ ತಲೆಯ ಮೇಲೆ ಬಂದು ಕೂರುವುದು. (ಶ್ಲೋಕ 24-33)

ನೈಕಾನ್ತತಃ ಪ್ರತೀಕಾರಃ ಕರ್ಮಣಾಂ ಕರ್ಮ ಕೇವಲಮ್ ।
ದ್ವಯಂ ಹ್ಯವಿದ್ಯೋಪಸೃತಂ ಸ್ವಪ್ನೇ ಸ್ವಪ್ನ ಇವಾನಘ ॥೩೪॥

ಎಲೈ ಪಾಪರಹಿತನಾದ ರಾಜನೇ! ಕೇಳು. ಸ್ವಪ್ನವನ್ನು ಅನುಭವಿಸುತ್ತಿರುವಾಗ ಅದರಲ್ಲಿ ಮತ್ತೊಂದು ಸ್ವಪ್ನವು ಕಾಣುವುದುಂಟು. ಆದರೆ ಆ ಮತ್ತೊಂದು ಸ್ವಪ್ನವು ಸ್ವಪ್ನಾವಸ್ಥೆಯಿಂದ ಪೂರ್ಣವಾಗಿ ಬಿಡುಗಡೆ ಹೊಂದುವ ಉಪಾಯವಾಗಲಾರದಲ್ಲವೇ? ಹಾಗೆಯೇ ಕೇವಲ ಕರ್ಮವೇ ಕರ್ಮಫಲಭೋಗದಿಂದ ಪೂರ್ಣವಾಗಿ ಪಾರಾಗುವುದಕ್ಕೆ ಉಪಾಯವಾಗಲಾರದು. ಏಕೆಂದರೆ : ಕರ್ಮ ಮತ್ತು ಕರ್ಮಫಲ–ಇವೆರಡೂ ಅವಿದ್ಯೆಯಿಂದ ಕೂಡಿರುವುದೇ ಆಗಿವೆ. ಎಚ್ಚರವಾಗುವವರೆಗೂ ಅವೆರಡಕ್ಕೂ ನಾಶವಿಲ್ಲ. ಹೇಗೆ ಕತ್ತಲೆಯಿಂದ ಕತ್ತಲೆಯು ನಾಶವಾಗುವುದಿಲ್ಲವೋ–ಹಾಗೆಯೇ ಕರ್ಮಗಳಿಂದಲೇ ಕರ್ಮದ ಪರಿಹಾರವಾಗುವುದಿಲ್ಲ.

ಕನಸಿನ ಸ್ಥಿತಿಯಲ್ಲಿ ತನ್ನ ಮನೋಮಯವಾದ ಲಿಂಗಶರೀರದಿಂದ ಸಂಚರಿಸುವ ಪ್ರಾಣಿಗೆ ಕನಸಿನಲ್ಲಿ ಪದಾರ್ಥಗಳು ಇಲ್ಲದೇ ಇದ್ದರೂ ಇರುವಂತೆ ತೋರಿಬರುವುದಿಲ್ಲವೇ? ಹಾಗೆಯೇ ಅಜ್ಞಾನನಿದ್ರೆಯು ಕಳೆದು ಹೋಗುವವರೆಗೂ ದೃಶ್ಯಪದಾರ್ಥಗಳು ಕಂಡೇಕಾಣುತ್ತವೆ ; ಹುಟ್ಟು-ಸಾವುಗಳ ರೂಪವಾದ ಸಂಸಾರದಿಂದ ಬಿಡುಗಡೆಯುಂಟಾಗುವುದೇ ಇಲ್ಲ. ಆತ್ಮಜ್ಞಾನವೊಂದೇ ಇವುಗಳನ್ನು ಅವಶ್ಯವಾಗಿ ತೊಲಗಿಸುವ ಉಪಾಯವು.

ಎಲೈ ರಾಜನೇ! ಪರಮಾರ್ಥಸ್ವರೂಪನಾಗಿರುವ ಆತ್ಮನ ಹುಟ್ಟು-ಸಾವುಗಳ ರೂಪವಾದ ಈ ಅನರ್ಥಪರಂಪರೆಗೆ ಕಾರಣವಾಗಿರುವ ಅವಿದ್ಯೆಯು ಶ್ರೀಗುರುಸ್ವರೂಪನಾದ ಶ್ರೀಹರಿಯಲ್ಲಿ ದೃಢವಾದ ಭಕ್ತಿ

ಯುಂಟಾದಾಗಲೇ ತೊಲಗುವುದು. ಭಗವಂತನಾದ ಆ ವಾಸುದೇವನಲ್ಲಿ ಭಕ್ತಿಯೋಗವು ಚೆನ್ನಾಗಿ ನೆಲೆಗೊಂಡರೆ ಅದರಿಂದ ಜ್ಞಾನ-ವೈರಾಗ್ಯ ಗಳುಂಟಾಗುವುವು. ರಾಜರ್ಷಿಯೇ! ಭಕ್ತಿಭಾವವು ಶ್ರೀಭಗವಂತನ ಕಥೆಗಳನ್ನು ಆಶ್ರಯಿಸಿರುವುದರಿಂದ-ಶ್ರದ್ಧೆಯಿಂದ ಅವುಗಳನ್ನು ಪ್ರತಿದಿನವೂ ಕೇಳುತ್ತಿದ್ದರೆ ಅಥವಾ ಓದುತ್ತಿದ್ದರೆ—ಶೀಘ್ರವೇ ಆ ಭಕ್ತಿಭಾವವು ಉಂಟಾಗುವುದು.

(ಶ್ಲೋಕ 35-38)

ಯತ್ರ ಭಾಗವತಾ ರಾಜನ್ಸಾಧವೋ ವಿಶದಾಶಯಾಃ ।
ಭಗವದ್ಗುಣಾನುಕಥನಶ್ರವಣವ್ಯಗ್ರಚೇತಸಃ ॥೩೯॥

ತಸ್ಮಿನ್ಮಹನ್ಮುಖರಿತಾ ಮಧುಭಿಚ್ಚರಿತ್ರ-
ಪೀಯೂಷಶೇಷಸರಿತಃ ಪರಿತಃ ಸ್ರವನ್ತಿ ।
ತಾ ಯೇ ಪಿಬನ್ತ್ಯವಿತೃಷೋ ನೃಪ ಗಾಢಕರ್ಣೈ-
ಸ್ತಾನ್ನ ಸ್ಪೃಶನ್ತ್ಯಶನತೃಡ್ಭಯಶೋಕಮೋಹಾಃ ॥೪೦॥

ಶ್ರೀಭಗವಂತನ ಗುಣಗಳನ್ನು ಹೇಳುವುದರಲ್ಲಿಯೂ, ಕೇಳುವುದ ರಲ್ಲಿಯೂ ಆಸಕ್ತರಾಗಿರುವ ಪರಿಶುದ್ಧಚಿತ್ತವುಳ್ಳ ಭಕ್ತಜನರು ಇರುವ ಸಾಧು ಸಮಾಜದಲ್ಲಿ ಎಲ್ಲ ಕಡೆಗಳಲ್ಲಿಯೂ ಮಹಾಪುರುಷರ ಮುಖದಿಂದ ಹೊರ ಬರುವ ಶ್ರೀಭಗವಂತನಾದ ಮಧುಸೂದನನ ಚರಿತ್ರೆಯೆಂಬ ಶುದ್ಧವಾದ ಅಮೃತದ ನದಿಗಳು ಹರಿಯುತ್ತಿರುತ್ತವೆ. ಯಾರು ಎಷ್ಟು ಕೇಳಿದರೂ ತೃಪ್ತಿ ಹೊಂದದಿರುವ ಮನಸ್ಸಿನಿಂದ ಆ ಶ್ರೀಭಗವಂತನ ಚರಿತ್ರೆಯ ಶ್ರವಣದಲ್ಲಿ ತತ್ಪರರಾಗಿ ತಮ್ಮ ಕಿವಿಗಳೆಂಬ ಪಾತ್ರೆಗಳಿಂದ ಆ ಅಮೃತವನ್ನು ಕುಡಿಯುತ್ತಾರೋ—ಅವರನ್ನು ಹಸಿವು, ಬಾಯಾರಿಕೆ, ಭಯ, ಶೋಕ, ಮೋಹ—ಮುಂತಾದ ಯಾವುದೂ ಪೀಡಿಸಲಾರದು.

ಅಕಟಾ! ಸ್ವಭಾವದಿಂದಲೇ ಉಂಟಾಗುವ ಈ ಹಸಿವು-ಬಾಯಾ ರಿಕೆಗಳೇ ಮುಂತಾದುವುಗಳಿಂದ ಸದಾ ಸುತ್ತುವರಿಯಲ್ಪಟ್ಟಿದ್ದರೂ ಜೀವ ವರ್ಗವು ಶ್ರೀಹರಿಯ ಕಥಾಸಮುದ್ರವನ್ನು ಪ್ರೀತಿಸುವುದಿಲ್ಲವಲ್ಲಾ! ಎಲ್ಲ ಪ್ರಜಾಪತಿಗಳಿಗೂ ಅಧಿಪತಿಯಾಗಿರುವ ಸಾಕ್ಷಾತ್ ಬ್ರಹ್ಮದೇವರು, ಶ್ರೀರುದ್ರದೇವರು, ಸ್ವಾಯಂಭುವಮನು, ದಕ್ಷನೇ ಮುಂತಾದ ಪ್ರಜಾಪತಿ

ಗಳ ಗಣ, ಸನಕಾದಿಗಳೇ ಮುಂತಾದ ನೈಷ್ಠಿಕಬ್ರಹ್ಮಚಾರಿಗಳು, ಮರೀಚಿ, ಅತ್ರಿ ಅಂಗಿರಸ್ಸು, ಪುಲಸ್ತ್ಯ, ಪುಲಹ, ಕ್ರತು, ಭೃಗು, ವಸಿಷ್ಠ–ಇವರೆಲ್ಲರೂ ಮತ್ತು ನನ್ನವರೆಗಿನ ಬ್ರಹ್ಮಜ್ಞರಾದ ಮುನಿಗಳ ಸಮೂಹವೂ–ಸಮಸ್ತ ವಾಙ್ಮಯಕ್ಕೆ ಅಧಿಪತಿಗಳಾದರೂ ಕೂಡ ತಪಸ್ಸು, ಉಪಾಸನೆ ಮತ್ತು ಸಂಯಮಾದಿಗಳ ಮೂಲಕ ಈತನನ್ನು ಹುಡುಕಿ-ಹುಡುಕಿ ಸೋತರು. ಆದರೂ ಅವರು ಇಂದಿನವರೆಗೂ ಸರ್ವಸಾಕ್ಷಿಯಾಗಿರುವ ಆ ಪರಮೇಶ್ವರ ನನ್ನು ನೋಡಲಾಗಲಿಲ್ಲ. ವೇದಗಳು ಅನಂತವಾಗಿವೆ ; ಅಪಾರವಾಗಿವೆ. ಅನೇಕ ಮಹಾನುಭಾವರು ಆ ವೇದವನ್ನು ವಿಚಾರಮಾಡಿ ಮಂತ್ರಗಳಲ್ಲಿ ಹೇಳಿರುವ ಗುರುತು-ಲಕ್ಷಣಗಳಿಂದ ಕೂಡಿರುವ ಇಂದ್ರನೇ ಮುಂತಾದ ದೇವತೆಗಳ ರೂಪದಲ್ಲಿ, ಬೇರೆ-ಬೇರೆ ಕರ್ಮಗಳ ಮೂಲಕ ಆ ಪರಮಾತ್ಮ ನೊಬ್ಬನನ್ನೇ ಆರಾಧಿಸುತ್ತಾರಾದರೂ ಆತನ ಸ್ವರೂಪವನ್ನು ಅವರೂ ಅರಿತಿಲ್ಲ. ನಿರಂತರವಾಗಿ ಮತ್ತೆ-ಮತ್ತೆ ಹೃದಯದಲ್ಲಿ ಚಿಂತನೆಮಾಡು ತ್ತಿರುವ ಯಾವನಾದರೂ ಜೀವನ ಮೇಲೆ ಶ್ರೀಭಗವಂತನು ಯಾವಾಗ ಕೃಪೆಯನ್ನು ಹರಿಸುವನೋ–ಆಗ ತಾನೇ ಆತನು ಲೌಕಿಕವ್ಯವಹಾರ ಗಳಿಂದಲೂ ಮತ್ತು ವೈದಿಕಕರ್ಮಮಾರ್ಗದಲ್ಲಿ ಬೇರೂರಿದ್ದ ಆಸೆಗಳಿಂದಲೂ ಬಿಡುಗಡೆಹೊಂದುವನು! (ಶ್ಲೋಕ 41-46)

ರಾಜನೇ! ನೀನು ಈ ಕರ್ಮಗಳಲ್ಲಿ ಪರಮಾರ್ಥಬುದ್ಧಿಯನ್ನು ಇಟ್ಟುಕೊಳ್ಳಬೇಡ. ಇವು ಕೇಳುವುದಕ್ಕೆ ಪ್ರಿಯವಾಗಿ ಕಂಡುಬರುತ್ತಿದ್ದರೂ ಪರಮಾರ್ಥವನ್ನು ಮುಟ್ಟುವುದಿಲ್ಲ. ಇವು ಪರಮಾರ್ಥವೆಂದು ಕಂಡು ಬರುವುದಕ್ಕೆ ಕಾರಣ ಅಜ್ಞಾನವೊಂದೇ. ವೇದಗಳು ಕರ್ಮಪರವಾಗಿವೆ ; ಅವುಗಳಿಗೆ ಕರ್ಮಗಳಲ್ಲಿಯೇ ತಾತ್ಪರ್ಯ–ಎಂದು ವಾದಿಸುವ ಮಲಿನಮತಿ ಯುಳ್ಳ ಜನರಿಗೆ ಕರ್ಮದ ಮರ್ಮವೇ ವಾಸ್ತವವಾಗಿ ತಿಳಿದಿಲ್ಲ. ಭಗವಂತನಾದ ಶ್ರೀಜನಾರ್ದನನು ಸಾಕ್ಷಾತ್ತಾಗಿ ವಾಸಮಾಡುತ್ತಿರುವ ಸ್ವರೂಪಭೂತವಾದ ಲೋಕವು ಅಂದರೆ–ಆತ್ಮತತ್ತ್ವವು ಅವರಿಗೆ ತಿಳಿಯದೇ ಇರುವುದೇ ಇದಕ್ಕೆ ಕಾರಣವು. ಪೂರ್ವಾಗ್ರವಾಗಿರುವ ದರ್ಭೆಗಳನ್ನು ಇಡೀ ಭೂಮಂಡಲದ ಮೇಲೆ ಹರಡಿ ಅನೇಕಪಶುಗಳನ್ನು ಯಜ್ಞಗಳಲ್ಲಿ ವಧೆ ಮಾಡಿರುವುದರಿಂದ ನಿನಗೆ ಮದವುಂಟಾಗಿಬಿಟ್ಟಿದೆ. ಆದರೆ ವಸ್ತುತಃ ನಿನಗೆ

ಕರ್ಮದ ರಹಸ್ಯವಾಗಲೀ, ಉಪಾಸನೆಯ ರಹಸ್ಯವಾಗಲೀ ಯಾವುದೂ ತಿಳಿಯದು. ವಾಸ್ತವವಾಗಿ ಹೇಳುವುದಾದರೆ–ಯಾವುದರಿಂದ ಶ್ರೀಭಗವಂತ ನನ್ನು ಪ್ರಸನ್ನಗೊಳಿಸಲು ಸಾಧ್ಯವಾಗುವುದೋ–ಅದೇ ಕರ್ಮವು ಮತ್ತು ಯಾವುದರಿಂದ ಶ್ರೀಭಗವಂತನಲ್ಲಿ ಚಿತ್ತವು ಲಗ್ನವಾಗುವುದೋ–ಅದೇ ವಿದ್ಯೆಯು. ಶ್ರೀಹರಿಯು ಸಮಸ್ತದೇಹಿಗಳಿಗೂ ಆತ್ಮವೂ, ನಿಯಾಮಕನೂ ಮತ್ತು ಸ್ವತಂತ್ರವಾದ ಕಾರಣವೂ ಆಗಿರುವನು. ಆತನ ಪಾದತಲಗಳೇ ಎಲ್ಲ ಮನುಷ್ಯರಿಗೂ ಏಕಮಾತ್ರ ಆಶ್ರಯವು. ಅವುಗಳಿಂದಲೇ ಪ್ರಪಂಚದಲ್ಲಿ ಎಲ್ಲರಿಗೂ ಕಲ್ಯಾಣವುಂಟಾಗುವುದು. (ಶ್ಲೋಕ 47-50)

ಸ ವೈ ಪ್ರಿಯತಮಶ್ಚಾತ್ಮಾ ಯತೋ ನ ಭಯಮಣ್ವಪಿ ।
ಇತಿ ವೇದ ಸ ವೈ ವಿದ್ವಾನ್ಯೋ ವಿದ್ವಾನ್ಸ ಗುರುರ್ಹರಿಃ ॥೫೧॥

ಆತ್ಮವೆಂದರೆ ಏನು? ಎಂದರೆ : ಯಾವುದರಿಂದ ಯಾರಿಗೂ ಎಳ್ಳಷ್ಟೂ ಭಯವುಂಟಾಗುವುದಿಲ್ಲವೋ–ಅದೇ ಎಲ್ಲರಿಗೂ ಪ್ರಿಯತಮ ವಾಗಿರುವ ಆತ್ಮವು–ಎಂಬುದಾಗಿ ಯಾವನು ಅರಿತಿದ್ದಾನೆಯೋ–ಆತನೇ ಜ್ಞಾನಿಯು. ಆತನೇ ಗುರುವು ಮತ್ತು ಸಾಕ್ಷಾತ್ ಶ್ರೀಹರಿಯೂ ಆತನೇ."

ನಾರದರು ಮುಂದುವರಿದು ಹೇಳುತ್ತಾರೆ :

"ಎಲೈ ಪುರುಷಶ್ರೇಷ್ಠನೇ! ನಿನ್ನ ಪ್ರಶ್ನೆಗೆ ಇಲ್ಲಿಯವರೆಗೂ ಸಂಕ್ಷಿಪ್ತವಾಗಿ ಉತ್ತರವನ್ನು ಹೇಳಿಯಾಯಿತು. ಈಗ ನಾನು ನಿನಗೆ ಒಂದು ಅತ್ಯಂತ ರಹಸ್ಯವಾದ ಒಗಟಿನಂತಿರುವ ಒಂದು ವಿಷಯವನ್ನು ಹೇಳುತ್ತೇನೆ. ಸಾವಧಾನಚಿತ್ತನಾಗಿ ಕೇಳು : (ಶ್ಲೋಕ 52)

ಕ್ಷುದ್ರಶ್ಚರಂ ಸುಮನಸಾಂ ಶರಣೇ ಮಿಥಿತ್ವಾ
ರಕ್ತಂ ಷಡಙ್ಘ್ರಿಗಣಸಾಮಸು ಲುಬ್ಧಕರ್ಣಮ್ ।
ಅಗ್ರೇ ವೃಕಾನಸುತೃಪೋಽವಿಗಣಯ್ಯ ಯಾಂತಂ
ಪೃಷ್ಠೇ ಮೃಗಂ ಮೃಗಯ ಲುಬ್ಧಕಬಾಣಭಿನ್ನಮ್ ॥

'ಹೂದೋಟವೊಂದರಲ್ಲಿ ಒಂದು ಗಂಡುಹುಲ್ಲೆಯು ಹೆಣ್ಣುಹುಲ್ಲೆ ಯೊಡನೆ ವಿಹರಿಸುತ್ತಾ ಮತ್ತೇರಿ ಅಲೆದಾಡುತ್ತಾ ಎಳೆಗರಿಕೆಯೇ ಮುಂತಾದ ಸಣ್ಣ ಚಿಗುರುಗಳನ್ನು ಮೇಯುತ್ತಿದೆ. ಅದರ ಕಿವಿಗಳು ದುಂಬಿಗಳ

ಮಧುರವಾದ ಝೇಂಕಾರವನ್ನು ಆಲಿಸುತ್ತಿವೆ. ಆ ಹುಲ್ಲೆಯ ಮುಂದೆಯೇ ಇತರ ಜೀವಗಳನ್ನು ತಿಂದು ಹೊಟ್ಟೆತುಂಬಿಸಿಕೊಳ್ಳುವ ತೋಳಗಳು ಹೊಂಚುಹಾಕುತ್ತಾ ನಿಂತಿವೆ. ಹಿಂದುಗಡೆಯಿಂದ ಒಬ್ಬ ಬೇಟೆಗಾರನು ಹುಲ್ಲೆಯ ಮೇಲೆ ಬಾಣವನ್ನು ಬಿಟ್ಟು ಘಾಸಿಗೊಳಿಸುತ್ತಾನೆ. ಆದರೆ ಹುಲ್ಲೆಯು ಇದಾವುದನ್ನೂ ಗಮನಿಸದಷ್ಟು ಅಜಾಗರೂಕವಾಗಿದೆ. ಆ ಒಂದು ಹುಲ್ಲೆಯ ಸ್ಥಿತಿಯನ್ನು ಕುರಿತು ವಿಚಾರಮಾಡು.'

ಈ ರೂಪಕದ ಅಭಿಪ್ರಾಯವನ್ನು ತಿಳಿಸುತ್ತೇನೆ, ಕೇಳು. ಇಲ್ಲಿ ಮೃತ್ಯುವಿನಿಂದ ಪೆಟ್ಟು ತಿನ್ನುತ್ತಿರುವ ಜಿಂಕೆಯು ನೀನೇ ಆಗಿದ್ದೀಯೆ–ಎಂಬು ದನ್ನು ತಿಳಿದುಕೋ. ನೀನು ಸೇವಿಸುತ್ತಿರುವ ಈ ಸ್ತ್ರೀಯರು ಪುಷ್ಪಗಳಂತೆ ನೋಡುವುದಕ್ಕೆ ಮಾತ್ರ ಚೆಲುವೆಯರಾಗಿದ್ದಾರೆ. ಇವರು ವಾಸಿಸುತ್ತಿರುವ ಮನೆಯೇ ಹೂದೋಟವು. ಆ ಹೂದೋಟದಲ್ಲಿ ನೀನು ವಾಸಿಸುತ್ತಾ ಹೂಗಳ ಜೇನುತುಪ್ಪಕ್ಕೂ, ವಾಸನೆಗೂ ಸಮಾನವಾದ ಕ್ಷುದ್ರವಾದ ಸಕಾಮ ಕರ್ಮಗಳನ್ನು ಆಚರಿಸಿದ್ದರ ಫಲವಾಗಿ ನಾಲಿಗೆಗೂ ಜನನೇಂದ್ರಿಯಕ್ಕೂ ಪ್ರಿಯವೆನಿಸುವ ಭೋಜನ, ಸ್ತ್ರೀಸಂಗಗಳೇ ಮುಂತಾದ ತುಚ್ಛವಾದ ಭೋಗ ಗಳನ್ನೇ ಆಚರಿಸುತ್ತಿದ್ದೀಯೆ. ಜಿಂಕೆಯು ಎಳೆಗರಿಕೆಯನ್ನು ತಿನ್ನುವಂತೆ ನೀನು ಈ ಕ್ಷುದ್ರಭೋಗಗಳನ್ನು ಅನುಭವಿಸುತ್ತಿದ್ದೀಯೆ. ಹೆಂಗಸರಿಂದ ಸದಾ ಸುತ್ತುವರಿಯಲ್ಪಟ್ಟವನಾಗಿ ಅವರಲ್ಲೇ ನೆಟ್ಟಮನಸ್ಸುಳ್ಳವನಾಗಿದ್ದೀಯೆ. ನಾನು ಹೇಳಿದ ರೂಪಕದಲ್ಲಿ ಹೆಂಡಿರು-ಮಕ್ಕಳ ಸವಿಮಾತುಗಳೇ ದುಂಬಿಗಳ ಝೇಂಕಾರಗಳು. ನಿನ್ನ ಕಿವಿಗಳು ಅವುಗಳಲ್ಲೇ ಲಗ್ನವಾಗಿವೆಯಲ್ಲವೇ? ನಿನ್ನ ಎದುರಿಗೇ ತೋಳಗಳ ಹಿಂಡಿನಂತೆ ಇರುವ ಕಾಲದ ಅಂಶಗಳಾದ ಹಗಲು ಮತ್ತು ರಾತ್ರಿಗಳು ನಿನ್ನ ಆಯುಸ್ಸನ್ನು ಕಸಿದುಕೊಳ್ಳುತ್ತಿವೆ. ಆದರೆ ನೀನು ಅವುಗಳನ್ನು ಸ್ವಲ್ಪವೂ ಗಮನಿಸದೇ ಗೃಹಸ್ಥ ಸುಖಗಳಲ್ಲಿಯೇ ರಮಿಸುತ್ತಿದ್ದೀಯೆ. ನಿನ್ನ ಹಿಂದುಗಡೆ ಕಾಲಪುರುಷನೆಂಬ ಬೇಟೆಗಾರನು ಸದ್ದಿಲ್ಲದೇ ನಿಂತುಕೊಂಡು, ಬಾಣದಿಂದ ನಿನ್ನ ಹೃದಯವನ್ನು ದೂರದಿಂದಲೇ ಸೀಳಿಹಾಕಲು ಬಯಸುತ್ತಿದ್ದಾನೆ. (ಶ್ಲೋಕ 53-54)

ಸ ತ್ವಂ ವಿಚಕ್ಷ್ಯ ಮೃಗಚೇಷ್ಟಿತಮಾತ್ಮನೋಽನ್ತ –
ಶ್ಚಿತ್ತಂ ನಿಯಚ್ಛ ಹೃದಿ ಕರ್ಣಧುನೀಂ ಚ ಚಿತ್ತೇ ।

ಜಹ್ಯಙ್ಗನಾಶ್ರಮಮಸತ್ತಮಯೂಥಗಾಥಂ
ಪ್ರೀಣೀಹಿ ಹಂಸಶರಣಂ ವಿರಮ ಕ್ರಮೇಣ ॥೫೫॥

ಹೀಗೆ ನಿನ್ನ ಸ್ಥಿತಿಯು ಆ ಮೂರ್ಖಮೃಗದ ಸ್ಥಿತಿಯಂತೆಯೇ ಇರುವುದೆಂಬುದನ್ನು ಗಮನಿಸಿ ನೀನು ಚಿತ್ತವನ್ನು ಹೃದಯದೊಳಗೆ ತಡೆಗಟ್ಟಿ, ನದಿಯಂತೆ ಪ್ರವಹಿಸುತ್ತಿರುವ ಕಿವಿಯ ಹೊರವೃತ್ತಿಯನ್ನು ಚಿತ್ತದಲ್ಲಿ ನೆಲೆಗೊಳಿಸು ; ಒಳಮುಖವಾಗಿಸು. ನೀಚರಾದ ಕಾಮಿಗಳ ಚರ್ಚೆಯಿಂದ ತುಂಬಿರುವ ಈ ಗೃಹಸ್ಥಾಶ್ರಮವನ್ನು ತ್ಯಜಿಸಿ ಪರಮಹಂಸರಿಗೆ ಆಸರೆಯಾಗಿರುವ ಶ್ರೀಹರಿಯನ್ನು ಪ್ರಸನ್ನಗೊಳಿಸು. ಕ್ರಮವಾಗಿ ಎಲ್ಲ ವಿಷಯಗಳನ್ನೂ ತ್ಯಜಿಸಿಬಿಡು.''

ಶ್ರೀನಾರದರ ಈ ಉಪದೇಶವನ್ನು ಕೇಳಿ ಪ್ರಾಚೀನಬರ್ಹಿಮಹಾರಾಜನು ಅವರನ್ನು ಹೀಗೆ ಪ್ರಾರ್ಥಿಸಿದನು :

``ಭಗವಂತರಾದ ದೇವರ್ಷಿಗಳೇ! ತಾವು ಕರುಣೆಯಿಂದ ನನಗೆ ಅನುಗ್ರಹಿಸಿರುವ ಉಪದೇಶವನ್ನು ಆಲಿಸಿ ಅದರ ಬಗೆಗೆ ವಿಶೇಷವಾಗಿ ವಿಚಾರವನ್ನೂ ಮಾಡಿದೆನು. ಕರ್ಮವನ್ನೇ ನನಗೆ ಉಪದೇಶಮಾಡುವ ಆ ಉಪಾಧ್ಯಾಯರಿಗೆ ನಿಶ್ಚಯವಾಗಿಯೂ ಈ ತತ್ತ್ವದ ಜ್ಞಾನವು ಇಲ್ಲವೇ ಇಲ್ಲ. ಅವರಿಗೆ ಇದು ತಿಳಿದಿದ್ದರೆ ನನಗೆ ಇಂತಹ ಉಪದೇಶವನ್ನು ಅವರು ಏಕೆ ಮಾಡುತ್ತಿದ್ದರು? ಕರ್ಮವಾದಿಗಳಾದ ಅಂತಹ ಉಪಾಧ್ಯಾಯರ ಉಪದೇಶದಿಂದ ನನಗೆ ಉಂಟಾಗಿದ್ದ ದೊಡ್ಡ ಸಂಶಯವನ್ನು ತಾವು ತೊಲಗಿಸಿದಿರಿ. ಇದು ಅತೀಂದ್ರಿಯವಾದ ವಿಷಯವಾದ್ದರಿಂದ ಋಷಿಗಳಿಗೂ ಇದರಲ್ಲಿ ಕೆಲವೊಮ್ಮೆ ಮೋಹವುಂಟಾಗಿ ಅವರು ಕರ್ಮಶರಣರಾಗುವುದುಂಟು. ಹೀಗಿರುವಾಗ ನಮ್ಮಂತಹವರ ಬಗೆಗೆ ಹೇಳುವುದೇನಿದೆ? 'ಮನುಷ್ಯನು ಈ ಲೋಕದಲ್ಲಿ ಯಾವ ದೇಹದಿಂದ ಕರ್ಮಗಳನ್ನು ಆಚರಿಸುತ್ತಾನೆಯೋ–ಆ ಸ್ಥೂಲದೇಹವನ್ನು ಇಲ್ಲಿಯೇ ಬಿಟ್ಟು ಪರಲೋಕದಲ್ಲಿ ಕರ್ಮಗಳಿಂದಲೇ ನಿರ್ಮಿತವಾದ ಬೇರೊಂದು ಶರೀರವನ್ನು ಪಡೆದು ಅದರಿಂದ ಕರ್ಮಫಲವನ್ನು ಅನುಭವಿಸುವನು'–ಎಂದು ವೇದವಾದಿಗಳು ಹೇಳುವುದನ್ನು ಕೇಳಿದ್ದೇವೆ. ಈ ಹೇಳಿಕೆಯು ಹೇಗೆ ಸರಿಹೋಗುತ್ತದೆ? ಕರ್ಮವನ್ನು ಮಾಡಿದ

ಸ್ಥೂಲಶರೀರವು ಇಲ್ಲಿಯೇ ನಷ್ಟವಾಗಿಬಿಡುವುದಲ್ಲವೇ? ಒಂದು ಶರೀರದಿಂದ ಮಾಡಿದ ಕರ್ಮಗಳ ಫಲವನ್ನು ಮತ್ತೊಂದು ಶರೀರದಿಂದ ಅನುಭವಿಸುವನು–ಎಂಬುದು ಹೇಗೆ ಸಮಂಜಸವಾಗುತ್ತದೆ? ಇದಲ್ಲದೇ ನನ್ನದು ಇನ್ನೂ ಒಂದು ಪ್ರಶ್ನೆಯಿದೆ. ಇಲ್ಲಿ ಮಾಡುವ ಕರ್ಮಗಳು ಅವುಗಳನ್ನು ಆಚರಿಸಿದ ಮರುಕ್ಷಣದಲ್ಲಿಯೇ ನಾಶಹೊಂದಿಬಿಡುತ್ತವೆ. ಅವು ಪರಲೋಕದಲ್ಲಿ ಫಲವನ್ನು ಕೊಡಲು ಮತ್ತೊಮ್ಮೆ ಹೇಗೆ ಪ್ರಕಟವಾಗುವುವು? ನನ್ನ ಈ ಸಂಶಯಗಳನ್ನು ತಾವು ಪರಿಹರಿಸಬೇಕು."* (ಶ್ಲೋಕ 56-59)

ರಾಜನ ಪ್ರಶ್ನೆಗಳಿಗೆ ಉತ್ತರಿಸುತ್ತಾ ನಾರದರು ಹೀಗೆಂದರು :

"ರಾಜೇಂದ್ರ! ಪುರುಷನು ಈ ಲೋಕದಲ್ಲಿ ಯಾವ ಶರೀರದಿಂದ ಕರ್ಮಗಳನ್ನು ಆಚರಿಸುವನೋ–ಅದೇ ಶರೀರದಿಂದಲೇ ಎಡೆಬಿಡದೇ ಪರಲೋಕದಲ್ಲಿ ತಾನೇ ಆ ಕರ್ಮಫಲಗಳನ್ನು ಅನುಭವಿಸುತ್ತಾನೆ–ಎಂಬುದರಲ್ಲಿ ಸಂಶಯವಿಲ್ಲ. ಕರ್ಮಗಳನ್ನು ಮಾಡಿದ ಶರೀರಕ್ಕೇ ಅವುಗಳ ಫಲವನ್ನೂ ಅನುಭವಿಸುವ ಹೊಣೆಗಾರಿಕೆ ಇರುವುದು. ಮನುಷ್ಯನು ಕರ್ಮಗಳನ್ನು ಮನಃಪ್ರಧಾನವಾದ ಲಿಂಗಶರೀರದಿಂದಲೇ ಮಾಡುತ್ತಾನೆ. ಆ ಶರೀರವು ಆತನು ಸತ್ತನಂತರವೂ ಅವನೊಡನೆಯೇ ಇರುವುದಾದ್ದರಿಂದ ಪರಲೋಕದಲ್ಲಿ ಆತನು ಅಪರೋಕ್ಷವಾಗಿ ತಾನೇ ಆ ಶರೀರದಿಂದಲೇ ಕರ್ಮಫಲಗಳನ್ನು ಅನುಭವಿಸುವನು. ಸ್ಥೂಲಶರೀರವು ನಷ್ಟವಾದರೂ ಅದಕ್ಕೆ ಮೂಲವಾಗಿ ಕರ್ಮಗಳನ್ನು ಆಚರಿಸಿದ ಸೂಕ್ಷ್ಮ (ಲಿಂಗ) ಶರೀರವು ಇಲ್ಲಿ ಮತ್ತು ಪರಲೋಕದಲ್ಲಿ ಒಂದೇ ಆಗಿರುವುದು. ಇದಕ್ಕೆ ಒಂದು ದೃಷ್ಟಾಂತವನ್ನು ಹೇಳುವೆನು, ಕೇಳು : (ಶ್ಲೋಕ 60)

---

* ಇಲ್ಲಿ ವೀರರಾಘವೀಯವು ಈ ಸೂಕ್ತವನ್ನು ಪ್ರಮಾಣವನ್ನಾಗಿ ಉದ್ಧರಿಸುತ್ತದೆ : ವರ್ಣಾಶ್ಚಾಶ್ರಮಾಶ್ಚ ಸ್ವಕರ್ಮನಿಷ್ಠಾಃ ಪ್ರೇತ್ಯ ಕರ್ಮಫಲಮನುಭೂಯತತಃ । ಶೇಷೇಣ ವಿಶಿಷ್ಟಕುಲಜಾತಿರೂಪಾಯುಶ್ಶ್ರುತವಿತ್ತಸುಖಮೇಧಸೋ ಜನ್ಮ ಪ್ರತಿಪದ್ಯನ್ತೇ ವಿಷ್ವಂಚೋ ವಿಪರೀತಂ ನಶ್ಯನ್ತಿ ॥ ವರ್ಣಾಶ್ರಮಧರ್ಮಗಳಿಗೆ ತಕ್ಕಂತೆ ತಮ್ಮ-ತಮ್ಮ ಕರ್ಮಗಳನ್ನು ನಿಷ್ಠೆಯಿಂದ ಆಚರಿಸಿದವರು ಮರಣಾನಂತರ ಆ ಪುಣ್ಯಗಳ ಫಲವನ್ನನುಭವಿಸಿ ಅನಂತರ ಉಳಿಕೆಯ ಕರ್ಮದಿಂದ ವಿಶಿಷ್ಟವಾದ ಕುಲ, ಜಾತಿ, ರೂಪ, ಆಯುಸ್ಸು, ವಿದ್ಯೆ ಮತ್ತು ಸಂಪತ್ತು-ಸುಖಗಳುಳ್ಳ ಶ್ರೇಷ್ಠಜನ್ಮಗಳನ್ನು ಪಡೆಯುವರು. (ಶ್ಲೋಕ ೫೯)

ಶಯಾನಮಿಮಮುತ್ಸೃಜ್ಯ ಶ್ವಸನ್ತಂ ಪುರುಷೋ ಯಥಾ ।
ಕರ್ಮಾತ್ಮನ್ಯಾಹಿತಂ ಭುಙ್ಕ್ತೇ ತಾದೃಶೇನೇತರೇಣ ವಾ ॥೬೧॥

ಮನುಷ್ಯನು ನಿದ್ರಿಸುವಾಗ ಉಸಿರಾಡುತ್ತಿರುವ ಸ್ಥೂಲಶರೀರವು ಮಲಗಿದ್ದ ಕಡೆಯೇ ಬಿದ್ದುಕೊಂಡಿದ್ದರೂ–ಆಗ ಆತನು ಆ ದೇಹಾಭಿಮಾನ ವನ್ನು ಬಿಟ್ಟು ಅದರಂತೆಯೇ ಇರುವ ಬೇರೆ ಮನುಷ್ಯಶರೀರದಿಂದಾಗಲೀ ಅಥವಾ (ಪಶು-ಪಕ್ಷಿಗಳೇ ಮುಂತಾದ) ಬೇರೆ ಶರೀರದಿಂದಾಗಲೀ ಮನಸ್ಸಿ ನಲ್ಲಿ ಸಂಸ್ಕಾರರೂಪದಲ್ಲಿರುವ ಕರ್ಮಗಳ ಫಲವನ್ನು ಅನುಭವಿಸುತ್ತಾ ನಲ್ಲವೇ?

ನಾನು ವಿವರಿಸಿದ ಈ ಕರ್ಮಫಲವು ಜೀವನ ಕರ್ತೃತ್ವಭಾವನೆಯಿಂದ ಬರುವುದು. ಹೆಂಡತಿ-ಮಕ್ಕಳು ಮುಂತಾದವರಲ್ಲಿ 'ಇವರು ನನ್ನವರು'– ಎಂಬುದಾಗಿಯೂ–ತಮ್ಮ ದೇಹವನ್ನು ಕುರಿತು 'ಇದೇ ತಾನು'–ಎಂಬು ದಾಗಿಯೂ ಮನಸ್ಸಿನಲ್ಲಿ ಅಭಿಮಾನಿಸುವವನು ಅಹಂಕಾರ-ಮಮಕಾರ ಗಳಿಂದ ಬರುವ ಕರ್ಮಫಲಗಳನ್ನು ಲಿಂಗದೇಹದಿಂದ ಪರಿಗ್ರಹಿಸಿ ಮರು ಹುಟ್ಟನ್ನು ಪಡೆಯುವನು. ಈ ಕರ್ತೃತ್ವವು ಅಭಿಮಾನಪಡುವ ಜೀವಕ್ಕೇ ಹೊರತು ದೇಹಕ್ಕಲ್ಲ. ಜ್ಞಾನೇಂದ್ರಿಯಗಳ ಮತ್ತು ಕರ್ಮೇಂದ್ರಿಯಗಳ ಚೇಷ್ಟೆಗಳನ್ನು ನೋಡಿ ಅವುಗಳಿಗೆ ಪ್ರೇರಕವಾದ ಚಿತ್ತವೆಂಬುದು ಇರಬೇಕು– ಎಂದು ಊಹೆಯಿಂದ ತಿಳಿಯುತ್ತೇವೆ. ಹಾಗೆಯೇ ಚಿತ್ತಕ್ಕೆ ಬೇರೆ-ಬೇರೆ ಯಾದ ವೃತ್ತಿಗಳಿರುವುದನ್ನೂ ಗಮನಿಸಿ ಆ ಮನೋವ್ಯಾಪಾರಗಳಿಂದ ಪೂರ್ವಜನ್ಮದ ಕರ್ಮಗಳು ಇರಲೇಬೇಕೆಂದು ಊಹಿಸಬೇಕು. (ಆದುದರಿಂದ ಕರ್ಮವು ಅದೃಷ್ಟದ ರೂಪದಲ್ಲಿ ಫಲಕೊಡುವುದಕ್ಕೋಸ್ಕರ ಕಾಲಾಂತರದಲ್ಲಿಯೂ ಇರುವುದೆಂದು ತಿಳಿಯಬೇಕು.) *ಕೆಲವೊಮ್ಮೆ ನಾವು ಈಗ ಇರುವ ದೇಹದಿಂದ ಎಲ್ಲಿಯೂ ಯಾವಾಗಲೂ ಕಾಣದಿರುವ ಮತ್ತು

---

* 'ಮನಸ್ಸು' ಎಂಬುದು ಇದೆ ಎನ್ನುವುದಕ್ಕೆ ಕುರುಹು ಏನೆಂದರೆ ಶಬ್ದವೇ ಮುಂತಾದ ವಿಷಯಗಳ ಜ್ಞಾನವು ಒಂದೇ ಕಾಲದಲ್ಲಿ ಉಂಟಾಗದೇ ಇರುವುದು. '**ಯುಗಪತ್ ಜ್ಞಾನಾನುತ್ಪತ್ತಿಃ ಮನಸೋ ಲಿಙ್ಗಂ**' ಎಂದು ಅಕ್ಷಪಾದರು ಹೇಳುತ್ತಾರೆ.
(ಶ್ಲೋಕ ೩೬)

ಕೇಳದೇ ಇರುವ ಸಂಗತಿಗಳನ್ನು ಕನಸಿನಲ್ಲಿ ಸ್ಪಷ್ಟವಾಗಿ, ನಿಜವಾಗಿ ನಡೆದಂತೆಯೇ ಅನುಭವಿಸುತ್ತೇವೆ. ಇದರಿಂದ ಪೂರ್ವಜನ್ಮದ ಕರ್ಮಗಳು ಉಂಟು ಎಂದು ಊಹಿಸಬಹುದು. ಆದುದರಿಂದ ಜೀವನಿಗೆ ಹಿಂದಿನ ಜನ್ಮದಲ್ಲಿ ಆತನು ಅನುಭವಿಸಿದ ಪ್ರಾಚೀನಕರ್ಮಗಳು ಇರಲೇಬೇಕು. ಇದು ಸತ್ಯವೆಂದು ನಂಬುವವನಾಗು. ಏಕೆಂದರೆ : ಹಿಂದೆ ಎಂದೂ ಅನುಭವಿಸಲ್ಪಡದೇ ಇರುವ ವಿಷಯವಾಸನೆಯು ಮನಸ್ಸಿನಲ್ಲಿ ಬರಲು ಸಾಧ್ಯವೇ ಇಲ್ಲ. (ಶ್ಲೋಕ 62-65)

ಎಲೈ ರಾಜನೇ! ನಿನಗೆ ಮಂಗಳವಾಗಲಿ. ಪ್ರಾಣಿಗಳಿಗೆ ಹಿಂದೆ ಉಂಟಾಗಿದ್ದ ದೇಹಗಳನ್ನೂ, ಮುಂದೆ ಬರುವ ದೇಹಗಳನ್ನೂ ಮತ್ತು ದೇಹವೇ ಇಲ್ಲದಿರುವ ಮುಕ್ತಿಸ್ಥಿತಿಯನ್ನೂ–ಮನಸ್ಸೇ ತಿಳಿಸುವುದು. ಮನುಷ್ಯನಿಗೆ ಕೆಲವೊಮ್ಮೆ ಪರ್ವತದ ತುದಿಯಲ್ಲಿ ಸಮುದ್ರವು ಇರುವಂತೆಯೂ, ನಕ್ಷತ್ರಗಳು ಹಗಲಿನಲ್ಲಿ ಹೊಳೆಯುವಂತೆಯೂ, ತನ್ನ ತಲೆಯು ಕತ್ತರಿಸುವುದನ್ನು ತಾನೇ ನೋಡುವಂತೆಯೂ ಕನಸಿನಲ್ಲಿ ಅನುಭವಕ್ಕೆ ಬರುತ್ತದೆ. ಹಿಂದೆ ಅನುಭವಿಸಿದ ವಿಷಯಗಳೇ ಮನಸ್ಸಿನಲ್ಲಿ ಹೊಳೆಯುತ್ತವೆ–ಎಂಬುದು ನಿಜವಾದರೆ ಈ ಅನುಭವಗಳು ಹೇಗೆ ಸಾಧ್ಯ? ಇವುಗಳನ್ನು ಮನುಷ್ಯನು ಹಿಂದೆ ಎಂದೂ ಅನುಭವಿಸಿಲ್ಲವಲ್ಲಾ? ಎಂದರೆ : ಇವುಗಳನ್ನು ಬೇರೆ-ಬೇರೆ ದೇಶ-ಕಾಲಗಳಲ್ಲಿ ಬಿಡಿ-ಬಿಡಿಯಾಗಿ ಮನುಷ್ಯನು ಅನುಭವಿಸಿರುತ್ತಾನೆ. ಉದಾಹರಣೆಗೆ ಪರ್ವತಾಗ್ರವನ್ನೂ ನೋಡಿರುತ್ತಾನೆ, ಸಮುದ್ರವನ್ನೂ ನೋಡಿರುತ್ತಾನೆ. ಅವೆರಡನ್ನೂ ಒಂದೇ ಕಡೆಯಲ್ಲಿ ಇರುವಂತೆ ನೋಡುವುದು ಮನಸ್ಸಿನ ಭ್ರಾಂತಿದೋಷದಿಂದ. ನಕ್ಷತ್ರಗಳನ್ನೂ ಮತ್ತು ಹಗಲನ್ನೂ ಬೇರೆ-ಬೇರೆ ಕಾಲಗಳಲ್ಲಿ ನೋಡಿರುತ್ತಾನೆ. ಅವೆರಡೂ ಒಟ್ಟಿಗೇ ಇರುವಂತೆ ಕಾಣುವುದು ಮನಸ್ಸಿನ ಭ್ರಾಂತಿಯಿಂದ.* ಎಲ್ಲ ಜನ್ಮಗಳ ಸಂಸ್ಕಾರಗಳೂ ಒಟ್ಟಿಗೇ ಏಕೆ ಮನಸ್ಸಿಗೆ ಬರುವುದಿಲ್ಲ? ಎಂದರೆ :

---

* ಈ ಜನ್ಮದಲ್ಲಿ ನಾವು ಸವಿಯಲು ಬಯಸುವ ಪದಾರ್ಥಗಳೆಲ್ಲವೂ ನಮ್ಮ ಹಿಂದಿನ ಜನ್ಮದಲ್ಲಿ ಇಂದ್ರಿಯಗಳ ಮೂಲಕ ನಮ್ಮ ಮನಸ್ಸನ್ನು ಹೊಕ್ಕು ಅಲ್ಲಿ ನೆಲೆಸಿದ್ದುವು. ಆ ಅನುಭವದಿಂದ ಉಂಟಾದ ಸಂಸ್ಕಾರದಿಂದ ಪ್ರತಿಮನುಷ್ಯನಿಗೂ ಬೇರೆ-ಬೇರೆಯಾಗಿ ಕೋರಿಕೆಗಳು ಉಂಟಾಗುತ್ತವೆ. ಕಾರಣವಿಲ್ಲದೇ ಕಾರ್ಯವು ಉಂಟಾಗುವುದಿಲ್ಲ.

ಸಂಸ್ಕಾರರೂಪದಲ್ಲಿ ಮನಸ್ಸಿನಲ್ಲಿ ನೆಲೆಗೊಂಡಿರುವ ಆ ಅನೇಕಜನ್ಮಗ್ರಳ ವಿಷಯಗಳು ಜೀವನ ಅದೃಷ್ಟಕ್ಕೆ ಅನುಗುಣವಾಗಿ, ಕ್ರಮವಾಗಿ ಅನುಭವಕ್ಕೆ ಬರುವುವು. ಎಲ್ಲರಿಗೂ ಮನಸ್ಸು ಇರುವುದೇ ಇದಕ್ಕೆ ಕಾರಣವು. ಎಲ್ಲ ಕರ್ಮವಾಸನೆಗಳಿಗೂ ಮನಸ್ಸೇ ಭಂಡಾರವು. ಅವುಗಳು ಯಾವ ಕ್ರಮದಲ್ಲಿ ಅನುಭವಕ್ಕೆ ಬರಬೇಕು ಎಂಬುದಕ್ಕೆ ಆ ಜೀವದ ಅದೃಷ್ಟವೇ ನಿಯಾಮಕವು. ಸಾಮಾನ್ಯವಾಗಿ ವಿಷಯಗಳು ಎಲ್ಲರಿಗೂ ಕ್ರಮವಾಗಿ ಅನುಭವಕ್ಕೆ ಬರುತ್ತವೆ–ಎಂಬುದು ನಿಜ. ಆದರೆ ಮನಸ್ಸು ಶುದ್ಧಸತ್ತ್ವದಲ್ಲಿ ನೆಲೆಸಿ ಶ್ರೀಭಗವಂತನ ಸ್ಥಾನದಲ್ಲಿರುವಾಗ–ಚಂದ್ರಬಿಂಬದಲ್ಲಿ ರಾಹುವು ತೋರುವಂತೆ* –ಕೆಲವೊಮ್ಮೆ ಸಮಸ್ತವಿಶ್ವವೂ, ಸಮಸ್ತವಾಸನೆಗಳೂ ಏಕಕಾಲದಲ್ಲಿ

ಆದುದರಿಂದ ನಮ್ಮ ಮನಸ್ಸಿನಲ್ಲಿ ಈಗ ಉಂಟಾಗುವ ಸಾವಿರಾರು ಕೋರಿಕೆಗಳಿಂದ ಪೂರ್ವಸಂಸ್ಕಾರಗಳನ್ನೂ, ಅವುಗಳಿಂದ ಆ ಸಂಸ್ಕಾರಗಳಿಗೆ ಕಾರಣವಾದ ಪೂರ್ವಾನುಭವವನ್ನೂ ಊಹಿಸಬೇಕು. ಈ ಜನ್ಮದಲ್ಲಿ ಅಂತಹ ಅನುಭವವು ಇಲ್ಲವಾದ್ದರಿಂದ ಹಿಂದಿನ ಜನ್ಮವುಂಟೆಂದೂ ಸಾಧಿತವಾಗುವುದು. ಜನ್ಮಗ್ರಳಲ್ಲಿ ತಾರತಮ್ಯವನ್ನೂ ನೋಡುತ್ತೇವೆ. ಇಲ್ಲಿಯೂ 'ಕಾರಣವಿಲ್ಲದೇ ಕಾರ್ಯವು ಇರಲಿಕ್ಕಿಲ್ಲ'–ಎಂಬ ನಿಯಮದಂತೆ ಪ್ರಾಚೀನ ಕರ್ಮವು ಸಿದ್ಧಿಸುತ್ತದೆ. ಆದುದರಿಂದ ಮನಸ್ಸು, ಜನ್ಮ ಮತ್ತು ಕರ್ಮ–ಎಂಬ ಇವು ಮೂರೂ ಅನಾದಿಗಳೆಂದು ತಿಳಿಯಬೇಕು. 'ಇಹ ಜನ್ಮನಿ ಮನೋರಥವಿಷಯ ಭೂತಾಃ ಪದಾರ್ಥಾಃ ಪೂರ್ವಜನ್ಮನಿ ಕ್ರಮೇಣ ಇನ್ದ್ರಿಯಗೋಚರಾಃ ಭೂತ್ವಾ ಮನಸಿ ವರ್ತನ್ತೇ। ಪೂರ್ವಾನುಭವ ಜನಿತವಾಸನಾವಿಶೇಷೇಣ ಹಿ ಪ್ರತಿಪುರುಷಂ ರುಚಿವಿಶೇಷಃ । ನ ಹಿ ಪೂರ್ವ ಕಾರಣೇನ ಕಾರ್ಯಂ ಭವತಿ ಏವಂ ಮನಸಿ ವರ್ತಮಾನಮನೋರಥಸಹಸ್ರಾನುಗುಣಂ ವಾಸನಾ ಅನುಮೀಯತೇ । ಸಾ ಚ ಪೂರ್ವಾನುಭವಮನುಮಾಪಯತಿ ಇಹ ಜನ್ಮನಿ ತಾದೃಗನುಭವಾಭಾವಾತ್ ದೇಹಾನ್ತರೇಣ ತದನುಭವ ಇತಿ ಪೂರ್ವ ಜನ್ಮಸಿದ್ಧಿಃ। ಜನ್ಮಾನ್ತರಪ್ಯಸ್ಯ ನಿರ್ಹೇತುಕತ್ವಾಯೋಗಾತ್ ವಿವಿಧಾದೃಷ್ಟಸಿದ್ಧಿರಿತಿ ಮನಸಃ ಕರ್ಮಣಿ ಪೂರ್ವಜನ್ಮನಶ್ಚ ಉಪಾದಾನಂ ಕೃತಂ ಭವತಿ ॥' (ವೀರರಾಘವೀಯ) (ಶ್ಲೋಕ ೬೭)

*ರಾಹುವು ದೃಷ್ಟಿಗೆ ವಿಷಯನಾಗದಿದ್ದರೂ ಪ್ರಕಾಶಾತ್ಮಕನಾದ ಚಂದ್ರನ ಸಂಬಂಧದಿಂದ ಕಾಣಿಸುತ್ತಾನೆ. ಹಾಗೆಯೇ ಶ್ರೀಭಗವಂತನ ಸಂಸರ್ಗವು ಒದಗಿದಾಗ ಸಮಸ್ತವಿಶ್ವವೂ ಸರ್ವಸಂಸ್ಕಾರಗಳೂ ಒಟ್ಟಿಗೇ ಕಾಣಿಸುವುದೂ ಉಂಟು. (ಶ್ಲೋಕ ೬೯)

ತೋರುವುದೂ ಉಂಟು. ಇದು ಯೋಗಿಪ್ರತ್ಯಕ್ಷದ ವಿಷಯ. ಒಟ್ಟಿನಲ್ಲಿ ಸತ್ತುಹೋದವನ ಸ್ಥೂಲದೇಹವು ನಾಶಹೊಂದಿದರೂ ಆತನಿಗೆ ಇಹದಲ್ಲಿದ್ದ ಲಿಂಗಶರೀರವೇ ಪರಲೋಕದಲ್ಲಿಯೂ ಹಿಂಬಾಲಿಸುವುದರಿಂದ ಯಾವನು ಕರ್ತೃವೋ–ಆತನೇ ಭೋಕ್ತೃವು. ಕರ್ತೃ-ಭೋಕ್ತೃಗಳು ಬೇರೆ-ಬೇರೆ ಯಾಗುವುದಿಲ್ಲ–ಎಂಬುದನ್ನು ನಿಶ್ಚಯಿಸು. ಬುದ್ಧಿ, ಮನಸ್ಸು, ಇಂದ್ರಿಯ ಗಳು ಮತ್ತು ಇಂದ್ರಿಯವಿಷಯಗಳು–ಈ ಗುಣಗಳ ಪರಿಣಾಮರೂಪವಾದ ಲಿಂಗಶರೀರವು ಎಲ್ಲಿಯವರೆಗೆ ಇರುವುದೋ–ಅಲ್ಲಿಯವರೆಗೂ ಜೀವನ ದಲ್ಲಿ ಈ 'ನಾನು, ನನ್ನದು' ಎಂಬ ಭಾವವು ನಾಶಹೊಂದುವುದಿಲ್ಲ. ಸ್ಥೂಲ ದೇಹಕ್ಕೆ ಸಂಬಂಧಪಟ್ಟ ಅಹಂಕಾರ-ಮಮಕಾರಗಳು ಆತನಿಗೆ ತಪ್ಪುವುದಿಲ್ಲ. ಈ ಲಿಂಗಶರೀರವು ಅನಾದಿಯಾದುದು. ಗಾಢನಿದ್ರೆ, ಮೂರ್ಛೆ, ಅತ್ಯಂತ ದುಃಖ ಮತ್ತು ಮೃತ್ಯು, ತೀವ್ರವಾದ ಸನ್ನಿಪಾತಜ್ವರವೇ ಮುಂತಾದ ಸ್ಥಿತಿಗಳಲ್ಲಿ ಅಹಂಕಾರ-ಮಮಕಾರಗಳು ನಶಿಸಿಹೋಗಿರುತ್ತವೆಯೇ? ಎಂದರೆ– ಆಗಲೂ ಆ ಅಭಿಮಾನವು ಇದ್ದೇ ಇರುತ್ತದೆ. ಆಗ ಪ್ರಾಣಗಳಿಗೆ ದ್ವಾರವಾಗಿರುವ ಇಂದ್ರಿಯಗಳು ಲಯಹೊಂದಿರುವುದರಿಂದ ಅಹಂಕಾರ-ಮಮಕಾರಗಳು ಸ್ಫುರಿಸುವುದಿಲ್ಲ ; ಅಷ್ಟೇ. ಹನ್ನೊಂದು ಇಂದ್ರಿಯಗಳಿಂದ ಕೂಡಿದ ಈ ಲಿಂಗಶರೀರವು ಗರ್ಭದಲ್ಲಿರುವ ಪ್ರಾಣಿಗಳಲ್ಲಿಯೂ ಮತ್ತು ಬಾಲ್ಯಾವಸ್ಥೆಯಲ್ಲಿರುವ ಪ್ರಾಣಿಗಳಲ್ಲಿಯೂ ಇರುತ್ತದೆಯೇ? ಎಂದರೆ : ಆಗಲೂ ಅದು ಇದ್ದೇ ಇರುವುದು. ಅಮಾವಾಸ್ಯೆಯ ರಾತ್ರಿಯಲ್ಲಿ ಚಂದ್ರನು ಇದ್ದೇ ಇದ್ದರೂ ನಮಗೆ ಗೋಚರವಾಗುವುದಿಲ್ಲ. ಹಾಗೆಯೇ ಗರ್ಭದಶೆ ಮತ್ತು ಬಾಲ್ಯಾವಸ್ಥೆಗಳಲ್ಲಿಯೂ ಇದು ತೋರಿಬರುವುದಿಲ್ಲ. ಯೌವನಾವಸ್ಥೆಯಲ್ಲಿ ರುವ ಮನುಷ್ಯನಲ್ಲಿ ಸ್ಪಷ್ಟವಾಗಿ ತೋರಿಬರುವುದು. ಅಹಂಕಾರ-ಮಮಕಾರ ಗಳು ಆಗ ಸ್ಪಷ್ಟವಾಗಿ ಸ್ಫುರಿಸುತ್ತವೆ. ಕನಸಿನಲ್ಲಿ ಯಾವ ವಸ್ತುವೂ ಇಲ್ಲ ದಿದ್ದರೂ ಕನಸಿನ ಅನರ್ಥವು ಎಚ್ಚರಿಕೆ ಆಗುವವರೆಗೂ ತೊಲಗುವುದಿಲ್ಲ ವಷ್ಟೇ! ಹಾಗೆಯೇ ಈ ಪ್ರಪಂಚದ ವಸ್ತುಗಳು ವಾಸ್ತವವಾಗಿ ಅಸತ್ತಾಗಿ ದ್ದರೂ ಅವಿದ್ಯೆಗೆ ವಶನಾಗಿರುವ ಜೀವನು ಅವುಗಳನ್ನು ಚಿಂತಿಸುತ್ತಿರುವನು. ಆದ್ದರಿಂದ ಆತನಿಗೆ ಹುಟ್ಟು-ಸಾವುಗಳ ರೂಪವಾದ ಈ ಸಂಸಾರವು ತೊಲಗು ವುದಿಲ್ಲ. ಲಿಂಗಶರೀರವು ಎಲ್ಲಿಯವರೆಗೆ ಇರುವುದೋ–ಅಲ್ಲಿಯವರೆಗೂ

ಸ್ಥೂಲಶರೀರದ ಅಭಿಮಾನವು ಹೋಗುವುದಿಲ್ಲ ಮತ್ತು ಸ್ಥೂಲಶರೀರದ ಅಭಿಮಾನವು ಇರುವವರೆಗೂ ಸಂಸಾರನಿವೃತ್ತಿಯಾಗುವುದಿಲ್ಲ.* ಹೀಗೆ ಪಂಚತನ್ಮಾತ್ರೆಗಳು, ತ್ರಿಗುಣಗಳು, ಏಕಾದಶೇಂದ್ರಿಯಗಳು ಮತ್ತು ಪಂಚ ಪ್ರಾಣಗಳು–ಇವುಗಳ ಸಮುದಾಯವನ್ನೇ ಲಿಂಗಶರೀರವೆಂದು ಕರೆಯುತ್ತಾರೆ. ಈ ಲಿಂಗದೇಹವು ಚೇತನದಿಂದ ಕೂಡಿದಾಗ 'ಜೀವ' ಎನಿಸಿಕೊಳ್ಳುವುದು. ಜೀವನು ನಾನಾಸ್ಥೂಲಶರೀರಗಳನ್ನು ಪಡೆಯುವುದೂ, ಬಿಡುವುದೂ, ಭಯ-ಸುಖ, ದುಃಖ–ಮುಂತಾದ ಭಾವಗಳನ್ನು ಹೊಂದುವುದೂ ಈ ಲಿಂಗಶರೀರದಿಂದಲೇ. (ಶ್ಲೋಕ 66-75)

ಯಥಾ ತೃಣಜಲೂಕೇಯಂ ನಾಪಯಾತ್ಯಪಯಾತಿ ಚ ।
ನ ತ್ಯಜೇನ್ಮ್ರಿಯಮಾಣೋಽಪಿ ಪ್ರಾಗ್ದೇಹಾಭಿಮತಿಂ ಜನಃ ॥೭೬॥

ಯಾವದನ್ಯಂ ನ ವಿನ್ದೇತ ವ್ಯವಧಾನೇನ ಕರ್ಮಣಾಮ್ ।
ಮನ ಏವ ಮನುಷ್ಯೇನ್ದ್ರ ಭೂತಾನಾಂ ಭವಭಾವನಮ್ ॥೭೭॥

ಜಿಗಣೆಯ ಹುಳುವು ಒಂದು ಹುಲ್ಲಿನಿಂದ ಮತ್ತೊಂದು ಹುಲ್ಲಿಗೆ ಹತ್ತುವಾಗ ಮುಂದಿನ ಹುಲ್ಲನ್ನು ಗಟ್ಟಿಯಾಗಿ ಹಿಡಿದುಕೊಳ್ಳುವವರೆಗೂ ಹಿಂದಿನ ಹುಲ್ಲನ್ನು ಬಿಡುವುದಿಲ್ಲ. ಹಾಗೆಯೇ ಜೀವನು ಮತ್ತೊಂದು ಶರೀರವು ಸಿಕ್ಕುವವರೆಗೂ ಹಿಂದಿನ ದೇಹದ ಅಭಿಮಾನವನ್ನು ಬಿಡುವುದಿಲ್ಲ. ಮನಃಪ್ರಧಾನವಾದ ಈ ಲಿಂಗಶರೀರವೇ ಅಥವಾ ಮನಸ್ಸೇ ಜೀವನ ಜನ್ಮ–ಮುಂತಾದುವುಗಳಿಗೆ ಕಾರಣವು.

ಯದಾಕ್ಷೈಶ್ಚರಿತಾನ್ಧ್ಯಾಯನ್ಕರ್ಮಾಣ್ಯಾಚಿನುತೇಽಸಕೃತ್ ।
ಸತಿ ಕರ್ಮಣ್ಯವಿದ್ಯಾಯಾಂ ಬನ್ಧಃ ಕರ್ಮಣ್ಯನಾತ್ಮನಃ ॥೭೮॥

---

* ಕಾಮ್ಯಕರ್ಮಗಳನ್ನು ಮಾಡುವವನು ಕನಸಿನಲ್ಲಿ ಸ್ತ್ರೀಯನ್ನು ಕಂಡರೆ ಆತನಿಗೆ ಏಳಿಗೆಯುಂಟಾಗುವುದು. ಕರಿಯ ಹಲ್ಲುಗಳಿರುವವನನ್ನು ಕಂಡರೆ ಮರಣವುಂಟಾಗುವುದು. 'ಯದಾ ಕರ್ಮಸು ಕಾಮ್ಯೇಷು ಸ್ತ್ರೀಯಂ ಪಶ್ಯತಿ ಸಮೃದ್ಧಿಂ ತತ್ರ ಜಾನೀಯಾತ್ ತಸ್ಮಿಂಶ್ಚ ಸ್ವಪ್ನದರ್ಶನೇ । ಅಥ ಸ್ವಪ್ನೇ ಪುರುಷಂ ಕೃಷ್ಣದನ್ತಂ ಪಶ್ಯತಿ ಸ ಏನಂ ಹನ್ತಿ॥' (ವೀರರಾಘವೀಯ) (ಶ್ಲೋಕ ೭೩)

ಹೀಗೆ ಜೀವನು–ಇಂದ್ರಿಯಗಳು ಅನುಭವಿಸಿದ ವಿಷಯಗಳನ್ನೇ ಕುರಿತು ಧ್ಯಾನಿಸುತ್ತಾ ಕರ್ಮಗಳನ್ನು ಮಾಡುತ್ತಿರುವಾಗ ಆ ಕರ್ಮಗಳೇ ಆತನಿಗೆ ಮತ್ತೊಂದು ಶರೀರವು ಬರುವುದಕ್ಕೆ ಕಾರಣವಾಗುವುದು. ಅನಾತ್ಮಗಳಾದ ದೇಹ ಮುಂತಾದುವುಗಳಿಗೆ ಕರ್ಮಗಳುಂಟಾಗುವುದಕ್ಕೆ ಅವಿದ್ಯೆಯೇ ಕಾರಣವು. ಆ ಅವಿದ್ಯೆಯಿಂದ ಜೀವನು ಬಂಧನಕ್ಕೆ ಸಿಕ್ಕಿಹಾಕಿಕೊಳ್ಳುವನು.

ಅತಸ್ತದಪವಾದಾರ್ಥಂ ಭಜ ಸರ್ವಾತ್ಮನಾ ಹರಿಮ್ ।
ಪಶ್ಯಂಸ್ತದಾತ್ಮಕಂ ವಿಶ್ವಂ ಸ್ಥಿತ್ಯುತ್ಪತ್ತ್ಯಪ್ಯಯಾ ಯತಃ ॥೭೯॥

ಆದುದರಿಂದ ಆ ಅವಿದ್ಯೆಯನ್ನೂ ಮತ್ತು ಅದರ ಫಲವಾದ ಕರ್ಮದ ಸಂಕೋಲೆಗಳನ್ನೂ ಕಳೆದುಕೊಳ್ಳುವುದಕ್ಕಾಗಿ ಜಗತ್ತಿನ ಹುಟ್ಟು ಮುಂತಾದುವುಗಳಿಗೆ ಕಾರಣನಾಗಿರುವ ಶ್ರೀಹರಿಯನ್ನು ಸರ್ವಭಾವದಿಂದಲೂ ಆರಾಧಿಸು. ವಿಶ್ವವೆಲ್ಲವೂ ಆ ಭಗವದಾತ್ಮಕವೆಂದು ಭಾವಿಸು."*

ಮೈತ್ರೇಯರು ಹೇಳುತ್ತಾರೆ :

"ಅಯ್ಯಾ ವಿದುರ! ಭಾಗವತೋತ್ತಮರಾದ ನಾರದಮಹರ್ಷಿಗಳು

---

* 'ಭಕ್ತಿಃ ಕೃಷ್ಣೇ ದಯಾ ಜೀವೇಷ್ವಕುಂಠಜ್ಞಾನಮಾತ್ಮನಿ ।
ಯದಿ ಸ್ಯಾದಾತ್ಮನೋ ಭೂಯಾದಪವರ್ಗಸ್ತು ಸಂಸೃತೇಃ ॥'

ಗುರುಗಳಲ್ಲಿಯೂ–ಪರಿಪೂರ್ಣನಾದ ಶ್ರೀಹರಿಯಲ್ಲಿಯೂ–ತಾರತಮ್ಯಕ್ಕೆ ಅನುಗುಣವಾಗಿ ಭಕ್ತಿ, ಸಕಲಭೂತಗಳಲ್ಲಿಯೂ ದಯೆ ಮತ್ತು ಸ್ವಸ್ವರೂಪಜ್ಞಾನ–ಇವುಗಳು ಇದ್ದರೆ ಸಂಸಾರದಿಂದ ಬಿಡುಗಡೆಯುಂಟಾಗುವುದು.

'ಅದೃಷ್ಟಂ ದೃಷ್ಟವನ್ನಂಕ್ಷ್ಯೇತ್ ಭೂತಂ ಸ್ವಪ್ನವದನ್ಯಥಾ ।
ಭೂತಂ ಭವದ್ಭವಿಷ್ಯಚ್ಚ ಸುಪ್ತಂ ಸರ್ವರಹೋರಹಃ ॥'

ಭೂತ-ಭವಿಷ್ಯದ್ವರ್ತಮಾನಗಳೆಂಬ ಕಾಲತ್ರಯಕ್ಕೆ ಸೇರಿದ ಈ ಜಗತ್ತು ಸ್ವಪ್ನಪದಾರ್ಥದಂತೆ ಅನಿತ್ಯವಾಗಿದೆ. ಕಣ್ಣಿಗೆ ಕಾಣುವ ಕೃಷಿಯೇ ಮುಂತಾದುವುಗಳಂತೆ–ಅದೃಷ್ಟವಾದ ಸ್ವರ್ಗವೇ ಮುಂತಾದುವುಗಳು ನಶ್ವರಗಳು. ಗುರೂಪದೇಶದಿಂದ ಮಾತ್ರವೇ ಗಮ್ಯವಾಗಿ ರಹಸ್ಯತಮವಾಗಿರುವ ಪರತತ್ತ್ವವೇ ಸತ್ಯವು–ಎಂಬ ನಿತ್ಯಾನಿತ್ಯವಸ್ತುವಿವೇಕದಿಂದ ವೈರಾಗ್ಯ, ಭಕ್ತಿ, ದಯೆ, ಆತ್ಮಜ್ಞಾನಗಳೇ ಮುಂತಾದ ಮೋಕ್ಷಕಾರಣಗಳಾದ ಸಾಧನಸಾಮಗ್ರಿಗಳು ಇದ್ದರೆ ಮುಕ್ತಿಯು ಕೈಗೆ ಸಿಕ್ಕುವುದು.

(ವಿಜಯಧ್ವಜೀಯ) (ಶ್ಲೋಕ ೭೯)

ಹೀಗೆ ಪ್ರಾಚೀನಬರ್ಹಿಮಹಾರಾಜನಿಗೆ ಜೀವ ಮತ್ತು ಈಶ್ವರರ ಸ್ವರೂಪ ವನ್ನು ಮನವರಿಕೆ ಮಾಡಿಕೊಟ್ಟು, ಆತನ ಅನುಮತಿಯನ್ನು ಪಡೆದು ಸಿದ್ಧ ಲೋಕಕ್ಕೆ ದಯಮಾಡಿಸಿದರು. ಅನಂತರ ಆ ರಾಜನು ಪ್ರಜೆಗಳನ್ನು ಸೃಷ್ಟಿಸಿ ಸಲಹುವ ಹೊಣೆಯನ್ನು ತನ್ನ ಪುತ್ರರಿಗೆ ಒಪ್ಪಿಸಿ, ತಪಸ್ಸನ್ನಾಚರಿಸುವುದಕ್ಕಾಗಿ ಕಪಿಲಮಹರ್ಷಿಗಳ ಆಶ್ರಮಕ್ಕೆ ಹೊರಟುಹೋದನು. ಅಲ್ಲಿ ಆ ವೀರವರನು ಏಕಾಗ್ರವಾದ ಮನಸ್ಸಿನಿಂದ ಗೋವಿಂದನ ಅಡಿದಾವರೆಗಳನ್ನು ಭಕ್ತಿಯಿಂದ ಭಜಿಸುತ್ತಾ ವಿರಕ್ತನಾಗಿ ಶ್ರೀಭಗವಂತನ ಸಾಮ್ಯರೂಪವಾದ ಮುಕ್ತಿಯನ್ನು ಪಡೆದನು. ಎಲೈ ಪುಣ್ಯಶಾಲಿಯಾದ ವಿದುರನೇ! ದೇವರ್ಷಿಗಳಾದ ನಾರದರು ಹಾಡಿದ ಈ ಪರೋಕ್ಷವೇದಾಂತವನ್ನು ಶ್ರವಣಮಾಡಿಸುವ ಮತ್ತು ಶ್ರವಣಮಾಡುವ ಸುಕೃತಿಗಳು ಲಿಂಗಶರೀರದಿಂದ ಬಿಡುಗಡೆಯನ್ನು ಹೊಂದುವರು. (ಶ್ಲೋಕ 80-83)

ಏತನ್ಮುಕುನ್ದಯಶಸಾ ಭುವನಂ ಪುನಾನಂ
ದೇವರ್ಷಿವರ್ಯಮುಖನಿಃಸೃತಮಾತ್ಮಶೌಚಮ್ ।
ಯಃ ಕೀರ್ತ್ಯಮಾನಮಧಿಗಚ್ಛತಿ ಪಾರಮೇಷ್ಠ್ಯಂ
ನಾಸ್ಮಿನ್ಭವೇ ಭ್ರಮತಿ ಮುಕ್ತಸಮಸ್ತಬನ್ಧಃ ॥೮೪॥

ದೇವರ್ಷಿಶ್ರೇಷ್ಠರಾದ ನಾರದರ ಮುಖಪದ್ಮದಿಂದ ಹೊರಹೊಮ್ಮಿ ಶ್ರೀಮುಕುಂದನ ಕೀರ್ತಿಯಿಂದ ಕೂಡಿರುವ ಕಾರಣದಿಂದ ಮೂರು ಲೋಕ ಗಳನ್ನೂ ಪವಿತ್ರಗೊಳಿಸುವ ಮತ್ತು ಅಂತಃಕರಣವನ್ನೂ ಶುದ್ಧಗೊಳಿಸುವ ಈ ಆತ್ಮಜ್ಞಾನವು ಪರಮಪದವನ್ನು ಪ್ರಕಾಶಗೊಳಿಸುವುದು. ಈ ಕಥಾಮೃತವನ್ನು ಕೇಳುವವನು ಮತ್ತು ಹೇಳುವವನು ಎಲ್ಲ ಕಟ್ಟುಗಳಿಂದಲೂ ಬಿಡುಗಡೆ ಹೊಂದುವನು. ಆತನಿಗೆ ಈ ಸಂಸಾರಚಕ್ರದಲ್ಲಿ ಸುತ್ತಾಟವಿರುವುದಿಲ್ಲ.

ಮಹಾತ್ಮನಾದ ವಿದುರನೇ! ಪುರಂಜನನ ಉಪಾಖ್ಯಾನವೆಂಬ ರೂಪ ಕದ ಮೂಲಕ ಪರೋಕ್ಷರೂಪದಲ್ಲಿ ಉಪದೇಶಮಾಡಲ್ಪಟ್ಟಿರುವ ಈ ಅದ್ಭುತ ವಾದ ಆಧ್ಯಾತ್ಮಶಾಸ್ತ್ರವನ್ನು ನಾನು ಶ್ರೀಗುರುಗಳ ಕೃಪೆಯಿಂದ ಪಡೆದೆನು. ಇದರ ತಾತ್ಪರ್ಯವನ್ನರಿತರೆ ಬುದ್ಧಿಯುಕ್ತನಾದ ಜೀವನ ದೇಹಾಭಿಮಾನವು

ತೊಲಗುವುದು ಮತ್ತು ಪರಲೋಕದಲ್ಲಿ ಜೀವನಿಗೆ ಕರ್ಮಫಲಭೋಗವು ಹೇಗೆ ಆಗುವುದು?–ಎಂಬ ವಿಷಯವನ್ನು ಕುರಿತ ಸಂಶಯವೂ ಪರಿಹಾರ ಹೊಂದುವುದು."* (ಶ್ಲೋಕ 85)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಚತುರ್ಥಸ್ಕಂಧದ ೨೯ನೆಯ ಅಧ್ಯಾಯವು ಮುಗಿಯಿತು.

ಚತುರ್ಥಸ್ಕಂಧ ೩೦ನೆಯ ಅಧ್ಯಾಯ

ಪ್ರಚೇತಸರಿಗೆ ಮಹಾವಿಷ್ಣುವಿನಿಂದ ವರಪ್ರದಾನ : ಮಾರಿಷೆ (ವಾರ್ಕ್ಷಿ) ಯೊಡನೆ ವಿವಾಹ

ಹೀಗೆ ಪ್ರಾಚೀನಬರ್ಹಿಯು ನಾರದರಿಂದ ಅಧ್ಯಾತ್ಮವಿವೇಕವನ್ನು ಪಡೆದು ಮುಕ್ತಿಹೊಂದಿದ ಕಥೆಯನ್ನು ಕೇಳಿದ ಬಳಿಕ ಮಹಾತ್ಮನಾದ ವಿದುರನು ಮೈತ್ರೇಯಮಹರ್ಷಿಗಳಲ್ಲಿ ಹೀಗೆ ಪ್ರಾರ್ಥನೆಮಾಡಿದನು :

ಯೇ ತ್ವಯಾಭಿಹಿತಾ ಬ್ರಹ್ಮನ್ಸುತಾಃ ಪ್ರಾಚೀನಬರ್ಹಿಷಃ ।
ತೇ ರುದ್ರಗೀತೇನ ಹರಿಂ ಸಿದ್ಧಿಮಾಪುಃ ಪ್ರತೋಷ್ಯ ಕಾಮ್ ॥೧॥

ಕಿಂ ಬಾರ್ಹಸ್ಪತ್ಯೇಹ ಪರತ್ರ ವಾಥ
ಕೈವಲ್ಯನಾಥಪ್ರಿಯಪಾರ್ಶ್ವವರ್ತಿನಃ ।
ಆಸಾದ್ಯ ದೇವಂ ಗಿರಿಶಂ ಯದೃಚ್ಛಯಾ
ಪ್ರಾಪುಃ ಪರಂ ನೂನಮಥ ಪ್ರಚೇತಸಃ ॥೨॥

"ಮುನಿಶ್ರೇಷ್ಠರೇ! ತಾವು ಈವರೆಗೂ ವರ್ಣನೆಮಾಡಿದ ಪ್ರಾಚೀನ ಬರ್ಹಿಮಹಾರಾಜನ ಪುತ್ರರಾದ ಪ್ರಚೇತಸರು ರುದ್ರಗೀತಸ್ತೋತ್ರದ

---

* ಪುರಂಜನನೆಂದರೆ ಜೀವ. ಆತನಿಗೆ ಇಂದ್ರಿಯಗಳು, ಪ್ರಾಣಗಳು, ಮನಸ್ಸು ಮತ್ತು ಬುದ್ಧಿ–ಎಂಬುವು ಸೂಕ್ಷ್ಮ ಅಥವಾ ಲಿಂಗಶರೀರ. ರಕ್ತ-ಮಾಂಸ ಮುಂತಾದುವುಗಳ ಸಮುದಾಯ ಸ್ಥೂಲಶರೀರ. ಜೀವನು ಸೂಕ್ಷ್ಮಶರೀರದೊಡನೆಯೇ ಒಂದು ಶರೀರವನ್ನು ಬಿಟ್ಟು ಮತ್ತೊಂದು ಶರೀರವನ್ನು ಪ್ರವೇಶಿಸುವನು. ಅವನಿಗೆ ಬುದ್ಧಿಯೆಂಬ ಅವಿದ್ಯೆಯಿಂದ ವಿಷಯಾಸಕ್ತಿಯುಂಟಾಗಿ ಸಂಸಾರಬಂಧನವುಂಟಾಗುವುದು. ಅವನಲ್ಲಿರುವ ಅಂತರ್ಯಾಮಿಯಾಗಿರುವ ಪರಮಕರುಣಾಳುವಾದ ಈಶ್ವರನ ಅನುಗ್ರಹದಿಂದ ಸಂಸಾರದ ನಿವೃತ್ತಿಯುಂಟಾಗುವುದು.

ಮೂಲಕ ಶ್ರೀಹರಿಯನ್ನು ಸ್ತುತಿಸಿ ಯಾವ ಸಿದ್ಧಿಯನ್ನು ಪಡೆದರು? ಬೃಹಸ್ಪತಿಶಿಷ್ಯರೇ! ಮೋಕ್ಷಾಧಿಪತಿಯಾದ ಮಹಾವಿಷ್ಣುವಿಗೆ ಪ್ರಿಯತಮನಾದ ಮಹಾದೇವನನ್ನು ಆಕಸ್ಮಿಕವಾಗಿ ಕಂಡು ಆತನ ಸಾನ್ನಿಧ್ಯಭಾಗ್ಯವನ್ನು ಪಡೆದ ಪ್ರಚೇತಸರು ಪರಮಪದವನ್ನು ಹೊಂದಿದರು–ಎಂದು ಹೇಳಿದಿರಲ್ಲವೇ! ಅವರು ಈ ಮೋಕ್ಷಪ್ರಾಪ್ತಿಗೆ ಮೊದಲು ಇಹಲೋಕ-ಪರಲೋಕಗಳಿಗೆ ಸಂಬಂಧಿಸಿದಂತೆ ಯಾವ-ಯಾವ ಸಿದ್ಧಿಗಳನ್ನು ಸಂಪಾದಿಸಿದರು?–ಎಂಬುದನ್ನು ನನಗೆ ತಿಳಿಸೋಣವಾಗಲಿ.”

ಮೈತ್ರೇಯರು ಹೇಳುತ್ತಾರೆ :

‘ಪ್ರಜಾಸಂತಾನವನ್ನು ಪಡೆಯಿರಿ’–ಎಂದು ತಂದೆಯು ಮಾಡಿದ್ದ ಆಜ್ಞೆಯನ್ನು ಶಿರಸಾವಹಿಸಿ ಪ್ರಚೇತಸರು ಸಮುದ್ರದೊಳಗೆ ನಿಂತು ರುದ್ರಗೀತಮಹಾಮಂತ್ರವನ್ನು ಜಪಿಸುತ್ತಾ ಆ ಜಪಯಜ್ಞದಿಂದಲೂ ಮತ್ತು ತಪಸ್ಸಿನಿಂದಲೂ *ಪುರಂಜನನಾದ ಶ್ರೀಹರಿಯನ್ನು ಸಂತೋಷಪಡಿಸಿದರು. ಹೀಗೆ ಅವರು ತಪಸ್ಸಿನಲ್ಲಿ ಹತ್ತು ಸಾವಿರ ವರ್ಷಗಳು ಕಳೆಯಲು–ಪುರಾಣಪುರುಷನಾದ ಶ್ರೀಮನ್ನಾರಾಯಣನು ತನ್ನ ಶಾಂತವಾದ ಕಾಂತಿಚಂದ್ರಿಕೆಯಿಂದ ಅವರ ತಪಸ್ಸಿನ ತಾಪವನ್ನು ಕಳೆಯುತ್ತಾ ತನ್ನ ಸೌಮ್ಯವಾದ ದಿವ್ಯಮಂಗಳವಿಗ್ರಹದಿಂದ ಅವರ ಮುಂದೆ ಕಾಣಿಸಿಕೊಂಡನು. ಗರುತ್ಮಂತನ ಹೆಗಲಿನ ಮೇಲೆ ಕುಳಿತು ಬಿಜಯಮಾಡಿಸಿದ್ದ ಶ್ಯಾಮಸುಂದರನಾದ ಸ್ವಾಮಿಯು ಮೇರುಪರ್ವತದ ಶಿಖರದಲ್ಲಿ ಕಂಗೊಳಿಸುವ ಮುಗಿಲಿನಂತೆ ಮೆರೆಯುತ್ತಿದ್ದನು. ಪರಮಾತ್ಮನ ಪ್ರಭಾಪುಂಜವು ಎಲ್ಲ ದಿಕ್ಕುಗಳ ಕತ್ತಲೆ

---

* ಪುರಂಜನಶಬ್ದವನ್ನು ಶರೀರನಿವಾಸಿಯಾದ ಜೀವ–ಎಂಬ ಅರ್ಥದಲ್ಲಿ ಪುರಂಜನೋಪಾಖ್ಯಾನದಲ್ಲಿ ನಿರೂಪಿಸಿದೆ. ಇಲ್ಲಿ ಪರಮಾತ್ಮನು ಹೇಗೆ ಪುರಂಜನನಾದನು? ಎಂದರೆ : ಪುರಂಜನನಾಗಿರುವ ಜೀವನ ರಕ್ಷಣೆಗಾಗಿ ಆತನಲ್ಲಿ ಅಂತರ್ಯಾಮಿಯಾಗಿ ತಾನೂ ಆ ಶರೀರವೆಂಬ ಪುರದಲ್ಲಿ ಇರುವುದರಿಂದ ಆತನೂ ಪುರಂಜನನೆನಿಸುತ್ತಾನೆ. ‘ದ್ವಾಸುಪರ್ಣಾ ಸಯುಜಾ ಸಖಾಯೌ’ ‘ಅಜೌ ಹೃಧಿಷ್ಠಿತೌ’ ಎಂಬ ಶಾಸ್ತ್ರವಾಕ್ಯಗಳಂತೆ ಜೀವ ಮತ್ತು ಪರಮಾತ್ಮ–ಇಬ್ಬರೂ ಈ ಶರೀರವೃಕ್ಷದಲ್ಲಿರುವ ಪಕ್ಷಿಗಳೇ ತಾನೇ! ಪುರಂಜನ ಶಬ್ದಕ್ಕೆ ಶರೀರವೆಂಬ ಪುರವನ್ನು ನಿರ್ಮಾಣಮಾಡಿದ ಶ್ರೀಭಗವಂತ–ಎಂದೂ ಅರ್ಥ ಮಾಡುವುದುಂಟು. (ಶ್ಲೋಕ ೩)

ಯನ್ನೂ ಹೊಡೆದಟ್ಟುವಂತಿತ್ತು. ಶ್ರೀದೇಹದ ಮೇಲುಭಾಗ ಮತ್ತು ಕೆಳ ಭಾಗಗಳಲ್ಲಿ ಪೀತಾಂಬರಗಳೂ, ಕಂಠದಲ್ಲಿ ಕೌಸ್ತುಭಮಣಿಯೂ ಶೋಭಿಸು ತ್ತಿದ್ದುವು. ಥಳ-ಥಳಿಸುತ್ತಿದ್ದ ಸ್ವರ್ಣ-ರತ್ನಾಭರಣಗಳ ಕಾಂತಿಯಿಂದ ಕೆನ್ನೆ-ಕದಪುಗಳೂ ಮುಖಕಮಲಗಳೂ ತೊಳ-ತೊಳಗಿ ಬೆಳಗುತ್ತಿದ್ದುವು. ತಲೆಯ ಮೇಲೆ ರತ್ನಕಿರೀಟವೂ–ಎಂಟು ಭುಜಗಳಲ್ಲಿಯೂ ಎಂಟು ದಿವ್ಯಾ ಯುಧಗಳೂ ಹೊಳೆಯುತ್ತಿದ್ದುವು. ದೇವತೆಗಳೂ, ಮುನಿಗಳೂ ಮತ್ತು ಪಾರ್ಷದರೂ ಸ್ವಾಮಿಯನ್ನು ಸೇವಿಸುತ್ತಿದ್ದರು. ಗರುಡದೇವರು ಕಿನ್ನರರಂತೆ ತಮ್ಮ ಸಾಮವೇದಮಯವಾದ ರೆಕ್ಕೆಗಳ ಗಂಭೀರಧ್ವನಿಗಳಿಂದ ದೇವದೇವನ ಕೀರ್ತಿಯನ್ನು ಗಾನಮಾಡುತ್ತಿದ್ದರು. ಪ್ರಭುವಿನ ಪುಷ್ಟವಾದ ಎಂಟು ನಿಡುದೋಳುಗಳ ಮಧ್ಯದಲ್ಲಿ ಶ್ರೀಲಕ್ಷ್ಮೀದೇವಿಯೊಡನೆ ಸ್ಪರ್ಧಿಸುತ್ತಿದ್ದ ವನಮಾಲೆಯು ಮೆರೆಯುತ್ತಿತ್ತು. ಹೀಗೆ ಒಪ್ಪುತ್ತಿದ್ದ ಆದಿಪುರುಷನಾದ ಶ್ರೀಮನ್ನಾರಾಯಣನು ತನ್ನಲ್ಲಿ ಶರಣಾಗತರಾಗಿದ್ದ ಪ್ರಾಚೀನಬರ್ಹಿಯ ಪುತ್ರರ ಮೇಲೆ ಕರುಣಾಮೃತದೃಷ್ಟಿಯನ್ನು ಹರಿಸುತ್ತಾ ಮೇಘದಂತೆ ಗಂಭೀರವಾದ ಧ್ವನಿಯಿಂದ ಅವರನ್ನು ಕುರಿತು ಹೀಗೆಂದನು : (ಶ್ಲೋಕ 3-7)

“ರಾಜಕುಮಾರರೇ! ನಿಮಗೆ ಮಂಗಳವಾಗಲಿ. ನಿಮಗಿಷ್ಟವಾದ ವರ ವನ್ನು ಬೇಡಿರಿ. ಪೂರ್ಣವಾದ ಹೃದಯೈಕ್ಯದಿಂದಕೂಡಿ ಏಕಧರ್ಮವನ್ನು ಪಾಲಿಸುತ್ತಿರುವ ನಿಮ್ಮ ಈ ಸೌಹಾರ್ದವು ನನಗೆ ಸಂತೋಷವನ್ನುಂಟು ಮಾಡಿದೆ. ಪ್ರತಿದಿನವೂ ಸಾಯಂಕಾಲದಲ್ಲಿ ನಿಮ್ಮನ್ನು ಯಾವನು ಸ್ಮರಿಸು ತ್ತಾನೆಯೋ–ಆತನಿಗೆ ನಿಮ್ಮಂತೆಯೇ ಸಹೋದರರಲ್ಲಿ ಎಲ್ಲರೂ ಏಕಾ ತ್ಮರೋ ಎಂಬಂತೆ–ಪರಸ್ಪರಸೌಹಾರ್ದವೂ ಮತ್ತು ಸಮಸ್ತಪ್ರಾಣಿಗಳ ಲ್ಲಿಯೂ ಸ್ನೇಹವೂ ಉಂಟಾಗುವುದು ಮತ್ತು ಯಾರು ಪ್ರತಿದಿನವೂ ಸಾಯಂಕಾಲ ಪ್ರಾತಃಕಾಲಗಳಲ್ಲಿ ಏಕಾಗ್ರವಾದ ಚಿತ್ತದಿಂದ ನನ್ನನ್ನು ರುದ್ರಗೀತ ದಿಂದ ಸ್ತುತಿಸುವರೋ–ಅವರಿಗೆ ನಾನು ಅಭೀಷ್ಟವಾದ ವರಗಳನ್ನೂ, ಶುದ್ಧವೂ ಸುಮಂಗಳವೂ ಆದ ಬುದ್ಧಿಯನ್ನೂ ಅನುಗ್ರಹಿಸುವೆನು. ನೀವು ಸಂತೋಷದಿಂದ ತಂದೆಯ ಆಜ್ಞೆಯನ್ನು ಶಿರಸಾವಹಿಸಿದ್ದೀರಿ. ಆದುದರಿಂದ ನಿಮ್ಮ ಕಮನೀಯವಾದ ಕೀರ್ತಿಯು ಸಮಸ್ತಲೋಕಗಳಲ್ಲಿಯೂ ಹಬ್ಬಿ

ಹರಡುವುದು. ನಿಮಗೆ ಅತ್ಯಂತವಿಖ್ಯಾತನಾಗುವ ಒಬ್ಬ ಸುಪುತ್ರನು ಜನಿಸುವನು. ಆತನು ಬ್ರಹ್ಮದೇವರಿಗೆ ಸ್ವಲ್ಪವೂ ಕಡಿಮೆಯಿಲ್ಲದ ಗುಣಗಳಿಂದ ಬೆಳಗುತ್ತಾ ತನ್ನ ಸಂತಾನದಿಂದ ಮೂರು ಲೋಕಗಳನ್ನೂ ತುಂಬುವನು. ರಾಜಕುಮಾರರೇ! ತಪೋನಿಷ್ಠನಾಗಿದ್ದ ಕಂಡುಮಹರ್ಷಿಯನ್ನು ಕಂಡು ಆತನ ತಪಸ್ಸನ್ನು ಕೆಡಿಸಲು ಇಂದ್ರನು 'ಪ್ರಮ್ಲೋಚಾ' ಎಂಬ ಅಪ್ಸರೆಯನ್ನು ಕಳುಹಿಸಿದಾಗ ಆಕೆಯಲ್ಲಿ ಆ ಮಹರ್ಷಿಗೆ ಕಮಲಲೋಚನೆಯಾದ ಒಂದು ಕನ್ಯಾರತ್ನವು ಜನಿಸಿತು. ಆ ಅಪ್ಸರೆಯು ಮಗುವನ್ನು ಅಲ್ಲಿಯೇ ಬಿಟ್ಟು ಸ್ವರ್ಗಲೋಕಕ್ಕೆ ಹೊರಟುಹೋಗಲು, ಅಲ್ಲಿದ್ದ ವೃಕ್ಷಗಳೆಲ್ಲಾ ಸೇರಿ ಆ ಕನ್ಯೆಯನ್ನು ಪಾಲಿಸಿ ಪೋಷಣೆಮಾಡಿದುವು. ಆ ಮಗುವು ಹಸಿವಿನಿಂದ ಪೀಡಿತವಾಗಿ ಅಳತೊಡಗಿದಾಗ ಓಷಧಿಗಳ ಅರಸನಾದ ಚಂದ್ರನು ಕರುಣೆಯಿಂದ ಅದರ ಬಾಯಿಯಲ್ಲಿ ಅಮೃತವನ್ನು ಸುರಿಸುವ ತನ್ನ ತೋರುಬೆರಳನ್ನು ಸವಿಯುವುದಕ್ಕಾಗಿ ಇರಿಸಿದನು. ನಿಮ್ಮ ತಂದೆಯು ಈಗ ನನ್ನ ಆರಾಧನೆ ಯಲ್ಲಿ ಆಸಕ್ತನಾಗಿದ್ದಾನೆ. ನಿಮಗೆ ಸಂತಾನವನ್ನು ಪಡೆಯಬೇಕೆಂಬ ಆಜ್ಞೆ ಯನ್ನು ಕೊಟ್ಟುಹೋಗಿದ್ದಾನೆ. ಆದುದರಿಂದ ನಿಮಗೆ ಸಮಾನವಾದ ಧರ್ಮ ಮತ್ತು ಸ್ವಭಾವಗಳನ್ನೇ ಹೊಂದಿರುವ ಆ ಸುಂದರಿಯಾದ ಕನ್ಯೆಯು ನಿಮ್ಮೆಲ್ಲರಿಗೂ ಪತ್ನಿಯಾಗಿ ನಿಮ್ಮೆಲ್ಲರಲ್ಲೂ ಸಮಾನವಾದ ಅನುರಾಗವನ್ನು ಹೊಂದುವಳು. ನೀವು ನನ್ನ ಕೃಪೆಯಿಂದ ಹತ್ತು ಲಕ್ಷದಿವ್ಯವರ್ಷಗಳ ಕಾಲ ಪೂರ್ಣಬಲಶಾಲಿಗಳಾಗಿದ್ದು ನಾನಾಪ್ರಕಾರವಾದ ಪಾರ್ಥಿವಭೋಗಗಳನ್ನೂ ಮತ್ತು ದಿವ್ಯಭೋಗಗಳನ್ನೂ ಅನುಭವಿಸುವಿರಿ. ಕಡೆಗೆ ನನ್ನನ್ನು ಕುರಿತ ನಿಶ್ಚಲವಾದ ಭಕ್ತಿಯಿಂದ ನಿಮ್ಮ ಹೃದಯದ ಸಮಸ್ತವಾಸನೆಗಳೆಂಬ ದೋಷಗಳೂ ದಗ್ಧವಾಗಿ, ಪೂರ್ಣಶುದ್ಧರಾದ ನೀವು ಇಹಲೋಕ ಮತ್ತು ಪರಲೋಕಗಳ ನರಕಸದೃಶಗಳಾದ ಎಲ್ಲ ಭೋಗಗಳಿಂದಲೂ ವಿರಕ್ತರಾಗಿ ನನ್ನ ಪರಮಧಾಮಕ್ಕೆ ಬಂದುಬಿಡುವಿರಿ. ಯಾರು ಭಗವದರ್ಪಣಬುದ್ಧಿಯಿಂದಲೇ ಕರ್ಮಗಳನ್ನು ಆಚರಿಸುತ್ತಾರೆಯೋ ಮತ್ತು ತಮ್ಮ ಎಲ್ಲ ಕಾಲವನ್ನೂ ನನ್ನ ವಿಷಯವಾದ ಕಥೆಯ ಕೀರ್ತನಸ್ಮರಣೆಗಳಲ್ಲಿಯೇ ಕಳೆಯುತ್ತಾರೆಯೋ–ಅವರು ಗೃಹಸ್ಥಾಶ್ರಮದಲ್ಲಿಯೇ ಇದ್ದರೂ ಅವರಿಗೆ ಗೃಹವು

ಬಂಧನಕ್ಕೆ ಕಾರಣವಾಗುವುದಿಲ್ಲ. ಅವರು ಪ್ರತಿದಿನವೂ ನನ್ನ ಲೀಲೆಗಳನ್ನೇ ಕೇಳುತ್ತಿರುತ್ತಾರೆ. ಆದುದರಿಂದ ಬ್ರಹ್ಮಾದಿಗಳಾದ ಜ್ಞಾನೋಪದೇಶಕರ ಮೂಲಕ ಆ ಶ್ರೋತೃಗಳ ಹೃದಯಗಳಲ್ಲಿ ಜ್ಞಾನಸ್ವರೂಪನಾದ ಪರಬ್ರಹ್ಮನಾದ ನಾನು ಪ್ರತಿದಿನವೂ ಹೊಸಬನಾಗಿರುವಂತೆ ಬೆಳಗುತ್ತಿರುತ್ತೇನೆ. ನನ್ನನ್ನು ಹೊಂದಿದ ಬಳಿಕ ಜೀವಗಳಿಗೆ ಶೋಕವಾಗಲೀ, ಮೋಹವಾಗಲೀ, ಹರ್ಷವಾಗಲೀ ಇರುವುದಿಲ್ಲ."

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

"ಸಕಲಪುರುಷಾರ್ಥಗಳಿಗೂ ಆಶ್ರಯನಾಗಿ, ಸರ್ವರಿಗೂ ಸ್ನೇಹಿತನಾಗಿರುವ ಶ್ರೀಹರಿಯು ಹೀಗೆ ಅಪ್ಪಣೆಕೊಡಿಸಲು ಆತನ ದರ್ಶನದಿಂದಲೇ ರಜೋಗುಣ-ತಮೋಗುಣಗಳ ಕೊಳೆಗಳನ್ನು ಕಳೆದುಕೊಂಡಿದ್ದ ಪ್ರಚೇತಸರು ಕೈಗಳನ್ನು ಜೋಡಿಸಿಕೊಂಡು ಗದ್ಗದವಾದ ವಾಣಿಯಿಂದ ಆತ ನನ್ನು ಸ್ತುತಿಸುತ್ತಾ ಹೀಗೆ ವಿಜ್ಞಾಪಿಸಿದರು : (ಶ್ಲೋಕ 8-21)

ನಮೋ ನಮಃ ಕ್ಲೇಶವಿನಾಶನಾಯ
ನಿರೂಪಿತೋದಾರಗುಣಾಹ್ವಯಾಯ ।
ಮನೋವಚೋವೇಗಪುರೋಜವಾಯ
ಸರ್ವಾಕ್ಷಮಾರ್ಗೈರಗತಾಧ್ವನೇ ನಮಃ ॥೨೨॥

"ಭಕ್ತರ ಕ್ಲೇಶಗಳನ್ನು ದೂರಮಾಡುವ ಭಗವಂತನೇ! ನಿನಗೆ ನಮೋ ನಮಃ. ವೇದಗಳಿಂದ ಹೊಗಳಲ್ಪಟ್ಟ ಉದಾರವಾದ ಗುಣಗಳಿಂದಲೂ, ನಾಮಗಳಿಂದಲೂ ಭೂಷಿತನಾದ ನಿನಗೆ ನಮಸ್ಕಾರವು. ಮನಸ್ಸು ಮತ್ತು ಮಾತುಗಳ ವೇಗಗಳನ್ನು ಮೀರಿಸಿದ ವೇಗವುಳ್ಳವನಾಗಿ ಎಲ್ಲ ಇಂದ್ರಿಯಗಳ ಗತಿಗಳಿಂದಲೂ ಹೊರಗೆ ಬೆಳಗುತ್ತಿರುವ ಸ್ವರೂಪವುಳ್ಳ ನಿನಗೆ ಮತ್ತೆ ಮತ್ತೆ ನಮಸ್ಕಾರಗಳು.

ಶುದ್ಧಾಯ ಶಾನ್ತಾಯ ನಮಃ ಸ್ವನಿಷ್ಠಯಾ
ಮನಸ್ಯಪಾರ್ಥಂ ವಿಲಸದ್ದ್ವಯಾಯ ।
ನಮೋ ಜಗತ್ಸ್ಥಾನಲಯೋದಯೇಷು
ಗೃಹೀತಮಾಯಾಗುಣವಿಗ್ರಹಾಯ ॥೨೩॥

ಸ್ವಸ್ವರೂಪದಲ್ಲಿ ನೆಲೆಗೊಂಡಿರುವುದರಿಂದ ಸದಾ ಶುದ್ಧನಾಗಿ ಶಾಂತನಾಗಿರುವವನೂ, ಪರಮಾರ್ಥವಲ್ಲದಿರುವ ದ್ವೈತವನ್ನು ಮನಸ್ಸಿನಲ್ಲಿ ತೋರುತ್ತಿರುವವನೂ, ಸೃಷ್ಟಿ-ಸ್ಥಿತಿ-ಲಯಗಳಿಂದಾಗಿ ಮಾಯೆಯ ಗುಣಗಳನ್ನು ಸ್ವೀಕರಿಸಿ ತ್ರಿಮೂರ್ತಿಸ್ವರೂಪದಿಂದ ಬೆಳಗುತ್ತಿರುವವನೂ ಆಗಿರುವ ನಿನಗೆ ನಮೋ ನಮಃ.*

ನಮೋ ವಿಶುದ್ಧಸತ್ತ್ವಾಯ ಹರಯೇ ಹರಿಮೇಧಸೇ ।
ವಾಸುದೇವಾಯ ಕೃಷ್ಣಾಯ ಪ್ರಭವೇ ಸರ್ವಸಾತ್ವತಾಮ್ ॥೨೪॥

ಶುದ್ಧಸತ್ತ್ವಸ್ವರೂಪನೂ, ಸಂಸಾರವನ್ನು ದೂರಮಾಡುವ ಜ್ಞಾನವುಳ್ಳವನೂ, ವಸುದೇವನಂದನನೂ, ಸಮಸ್ತಭಾಗವತರ ಪ್ರಭುವೂ ಆಗಿರುವ ಶ್ರೀಹರಿ–ಕೃಷ್ಣನಿಗೆ ನಮಸ್ಕಾರವು.

ನಮಃ ಕಮಲನಾಭಾಯ ನಮಃ ಕಮಲಮಾಲಿನೇ ।
ನಮಃ ಕಮಲಪಾದಾಯ ನಮಸ್ತೇ ಕಮಲೇಕ್ಷಣ ॥೨೫॥

ನಾಭಿಯಲ್ಲಿ (ಜಗತ್ಕಾರಣವಾದ) ಕಮಲವುಳ್ಳವನೂ, ಕೊರಳಿನಲ್ಲಿ ಕಮಲಕುಸುಮಗಳ ಮಾಲೆಯುಳ್ಳವನೂ, ಕಮಲವನ್ನು ಹೋಲುವ

---

* 'ಮನಸ್ಯಪಾರ್ಥೇ ವಿಲಸದ್ವ್ವಯಾತ್ಮನೇ' ಎಂದು ಪಾಠಾಂತರವು, ಸ್ವರೂಪದ ಜ್ಞಾನವಿಲ್ಲದಿದ್ದರೂ ಕೂಡ ಶ್ರೀಭಗವಂತನ ಅನುಗ್ರಹದಿಂದ ಯಾರ ಮನಸ್ಸಿನಲ್ಲಿ ಪರಸ್ಪರವಾಗಿ ವಿಲಕ್ಷಣಗಳಾಗಿರುವ ದೇಹ ಮತ್ತು ಆತ್ಮ ಎಂಬ ಎರಡರ ಜ್ಞಾನವು ಉಂಟಾಗುವುದೋ–ಅಂತಹ ಭಕ್ತರಿಗೆ ಪ್ರಿಯನಾಗಿರುವ ದೇವನಿಗೆ–ಎಂದು ಭಾವವು.

'ಸ್ವಸ್ವರೂಪಜ್ಞಾನವಿಧುರೇ ಮನಸಿ ಭಗವತ್ಪ್ರಸಾದವಶಾತ್ ದೇಹಾತ್ಮಜ್ಞಾನ ಸಂಪನ್ನಾ ಇತ್ಯರ್ಥಃ । ಅಪಗತಪುರುಷಾರ್ಥೇ ಮನಸಿ ಪರಸ್ಪರವೈಲಕ್ಷಣ್ಯೇನ ಸ್ಫುರತ್ ದೇಹಾತ್ಮನೋಃ ದ್ವಯಾಯ ॥' (ವೀರರಾಘವೀಯ)

ಯಾರ ಚಿತ್ತವು ಸ್ಥಿರವಾಗಿಲ್ಲವೋ–ಅವರಿಗೆ ಶ್ರೀಹರಿಗಿಂತಲೂ ಎರಡನೆಯ ಸ್ವತಂತ್ರವಾದ ವಸ್ತುವು ಇದೆಯೆಂದು ತೋರುವುದು. ಸ್ಥಿರಚಿತ್ತರಾದವರಿಗಾದರೋ ಎಲ್ಲವೂ ಶ್ರೀಹರಿಗೆ ಅಧೀನವೆಂದು ತೋರುವುದು.

ಅನವಸ್ಥಿತಬುದ್ಧೀನಾಂ ದ್ವಿತೀಯಂ ದೃಶ್ಯತೇ ಹರೇಃ ।
ಸಮ್ಯಕ್ ಸುಸ್ಥಿತಬುದ್ಧೀನಾಂ ಇದಂ ಸರ್ವಂ ಹರೇರ್ವಶಮ್ ॥

ವಿಲಸದ್ವ್ವಯಾಯ–ತಸ್ಮಿನ್ ಸಮಾಧಾನರಹಿತೇ ಮನಸಿ ವಿಲಸದ್ವ್ವಯಾಯ = ಪ್ರಕಟಿತ ಸ್ವತಂತ್ರವಸ್ತುದ್ವಯಾಯ. (ವಿಜಯಧ್ವಜೀಯ) (ಶ್ಲೋಕ ೨೩)

ಅಡಿಗಳುಳ್ಳವನೂ, ಕಮಲವನ್ನು ಹೋಲುವ ಕಣ್ಣುಗಳುಳ್ಳವನೂ ಆದ ನಿನಗೆ ನಮಸ್ಕಾರವು.

ನಮಃ ಕಮಲಕಿಞ್ಜಲ್ಕಪಿಶಙ್ಗಾಮಲವಾಸಸೇ ।
ಸರ್ವಭೂತನಿವಾಸಾಯ ನಮೋಽಯುಂಕ್ಷ್ಯ ಹಿ ಸಾಕ್ಷಿಣೇ ॥೨೬॥

ಕಮಲಕುಸುಮದ ಕೇಸರದಂತೆ ಹೊಳೆಯುತ್ತಿರುವ ಸ್ವಚ್ಛವಾದ ಪೀತಾಂಬರದಿಂದ ಮೆರೆಯುತ್ತಿರುವವನೂ, ಸರ್ವಭೂತಗಳಿಗೂ ಆಶ್ರಯನಾಗಿ ಸರ್ವಸಾಕ್ಷಿಯಾಗಿ ಬೆಳಗುತ್ತಿರುವವನೂ ಆದ ಸ್ವಾಮಿಗೆ ನಮಸ್ಕಾರಗಳನ್ನು ಅರ್ಪಿಸುತ್ತೇನೆ.

ರೂಪಂ ಭಗವತಾ ತ್ವೇತದಶೇಷಕ್ಲೇಶಸಂಕ್ಷಯಮ್ ।
ಆವಿಷ್ಕೃತಂ ನಃ ಕ್ಲಿಷ್ಟಾನಾಂ ಕಿಮನ್ಯದನುಕಮ್ಪಿತಮ್ ॥೨೭॥

ಅವಿದ್ಯೆ, ಅಸ್ಮಿತೆ, ರಾಗ-ದ್ವೇಷಗಳೇ ಮುಂತಾದ ಎಲ್ಲ ಕ್ಲೇಶಗಳನ್ನೂ ಪೂರ್ಣವಾಗಿ ಕಳೆದುಹಾಕುವಂತಹ ದಿವ್ಯಸ್ವರೂಪವಾದ ಸಂದರ್ಶನವನ್ನು ಕ್ಲೇಶಗಳಿಂದ ಪೀಡಿತರಾಗಿರುವ ನಮಗೆ ಮಾಡಿಸಿದೆಯಲ್ಲಾ! ಇದಕ್ಕಿಂತಲೂ ಮಿಗಿಲಾದ ವರವು ಬೇರೇನು ಬೇಕು, ಭಗವಂತ!

ಏತಾವತ್ತ್ವಂ ಹಿ ವಿಭುಭಿರ್ಭಾವ್ಯಂ ದೀನೇಷು ವತ್ಸಲೈಃ ।
ಯದನುಸ್ಮರ್ಯತೇ ಕಾಲೇ ಸ್ವಬುದ್ಧ್ಯಾಭದ್ರರನ್ಧನ ॥೨೮॥

ಯೇನೋಪಶಾನ್ತಿರ್ಭೂತಾನಾಂ ಕ್ಷುಲ್ಲಕಾನಾಮಪೀಹತಾಮ್ ।
ಅನ್ತರ್ಹಿತೋಽನ್ತರ್ಹೃದಯೇ ಕಸ್ಮಾನ್ನೋ ವೇದ ನಾಶಿಷಃ ॥೨೯॥

ಅಮಂಗಳವನ್ನು ತಡೆಗಟ್ಟುವ ಮಂಗಳತಮಸ್ವರೂಪನೇ! ದೀನರಲ್ಲಿ ವಾತ್ಸಲ್ಯವುಳ್ಳ ಪ್ರಭುಗಳು ದೀನಜರನ್ನು 'ಇವರು ನಮ್ಮವರು'–ಎಂದು ಸಕಾಲದಲ್ಲಿ ಸ್ಮರಿಸಿಕೊಳ್ಳುವುದೇ ಪರಮಾನುಗ್ರಹವು. ಅದರಿಂದಲೇ ಅವರಿಗೆ ಶಾಂತಿಯುಂಟಾಗುವುದು. ವಿಷಯಗಳಲ್ಲಿಯೇ ಆಸಕ್ತಿಯುಳ್ಳ ಅತ್ಯಂತ ಕ್ಷುದ್ರವಾದ ಪ್ರಾಣಿಗಳ ಹೃದಯಗಳಲ್ಲಿ ಅಂತರ್ಯಾಮಿಯಾಗಿ ಬೆಳಗುತ್ತಿರುವ ಪ್ರಭುವು ನೀನು. ಹೀಗಿರುವಾಗ ನಿನ್ನನ್ನು ಉಪಾಸನೆಮಾಡುತ್ತಿರುವ ಭಕ್ತರ ಹೃದಯಗಳಲ್ಲಿ ಏನು ಕಾಮನೆಗಳಿವೆಯೆಂಬುದು ನಿನಗೆ ತಿಳಿಯದೇ ಇರುವುದೇ?

ಅಸಾವೇವ ವರೋಽಸ್ಮಾಕಮೀಪ್ಸಿತೋ ಜಗತಃ ಪತೇ ।
ಪ್ರಸನ್ನೋ ಭಗವಾನ್ಯೇಷಾಮಪವರ್ಗಗುರುರ್ಗತಿಃ ॥೩೦॥

ಓ ಜಗದೀಶ್ವರನೇ! ಮೋಕ್ಷಮಾರ್ಗವನ್ನು ತೋರಿಸುವ ಗುರುವರ್ಯನೇ! ನೀನು ಸ್ವಯಂ ಪುರುಷಾರ್ಥವೇ ಆಗಿದ್ದೀಯೆ. ಇಂತಹ ನೀನು ನಮ್ಮಲ್ಲಿ ಪ್ರಸನ್ನನಾಗಿರುವಾಗ ಇದಕ್ಕಿಂತಲೂ ಹೆಚ್ಚಾಗಿ ನಮಗೆ ಬೇರೇನು ಬೇಕು? ನಿನ್ನ ಪ್ರಸನ್ನತೆಯೊಂದೇ ನಮಗೆ ಅಭೀಷ್ಟವಾದ ವರವಲ್ಲವೇ!

ವರಂ ವೃಣೀಮಹೇಽಥಾಪಿ ನಾಥ ತ್ವತ್ಪರತಃ ಪರಾತ್ ।
ನ ಹ್ಯನನ್ತಸ್ತ್ವದ್ವಿಭೂತೀನಾಂ ಸೋಽನನ್ತ ಇತಿ ಗೀಯಸೇ ॥೩೧॥

ಆದರೂ ಪರಾತ್ಪರನಾದ ನಿನ್ನ ಆಣತಿಯಂತೆ ನಿನ್ನಲ್ಲಿ ವರವನ್ನು ಬೇಡುತ್ತೇವೆ. ಆದರೆ ಅನಂತನೆಂದು ಗಾನಮಾಡಲ್ಪಡುತ್ತಿರುವ ನಿನ್ನ ವಿಭೂತಿಗಳಿಗೆ ಪಾರವೇ ಇಲ್ಲ. ಇಂತಹ ನಿನ್ನಲ್ಲಿ ಯಾವ ವರವನ್ನು ಬೇಡಬೇಕೋ ನಮಗೆ ತಿಳಿಯದಾಗಿದೆ.

ಪಾರಿಜಾತೇಽಞ್ಜಸಾ ಲಬ್ಧೇ ಸಾರಙ್ಗೋಽನ್ಯನ್ನ ಸೇವತೇ ।
ತ್ವದಙ್ಘ್ರಿಮೂಲಮಾಸಾದ್ಯ ಸಾಕ್ಷಾತ್ಕಿಂ ಕಿಂ ವೃಣೀಮಹಿ ॥೩೨॥

ದುಂಬಿಗೆ ಅನಾಯಾಸವಾಗಿ ಪಾರಿಜಾತವೃಕ್ಷವು ಸಿಕ್ಕಿ–ಅದರ ಮಕರಂದದ ಸವಿಯು ದೊರೆತಿರುವಾಗ–ಅದು ಬೇರೆ ವೃಕ್ಷವನ್ನು ಬಯಸುವುದೇ? ಹಾಗೆಯೇ ನಿನ್ನ ಪಾದಮೂಲದ ಆಸರೆಯು ಸಿಕ್ಕಿರುವಾಗ ನಾವು ಬೇರಾವ ವರವನ್ನು ಬೇಡೋಣ?

ಯಾವತ್ತೇ ಮಾಯಯಾ ಸ್ಪೃಷ್ಟಾ ಭ್ರಮಾಮ ಇಹ ಕರ್ಮಭಿಃ ।
ತಾವದ್ಭವತ್ಪ್ರಸಙ್ಗಾನಾಂ ಸಙ್ಗಃ ಸ್ಯಾನ್ನೋ ಭವೇ ಭವೇ ॥೩೩॥

ನಾವು ನಿನ್ನಲ್ಲಿ ಇಷ್ಟನ್ನು ಮಾತ್ರ ಬೇಡುತ್ತೇವೆ. ಭಗವಂತನೇ! ನಿನ್ನ ಮಾಯೆಗೆ ಮರುಳಾಗಿ ನಾವು ಕರ್ಮಾನುಸಾರವಾಗಿ ಈ ಸಂಸಾರದಲ್ಲಿ ಎಲ್ಲಿಯವರೆಗೆ ಅಲೆದಾಡುತ್ತಿರುವೆವೋ–ಅಲ್ಲಿಯವರೆಗೂ ಪ್ರತಿಜನ್ಮದಲ್ಲಿಯೂ ನಮಗೆ ನಿನ್ನ ಭಕ್ತರ ಸಂಗವು ದೊರಕುತ್ತಿರಲಿ.

ತುಲಯಾಮ ಲವೇನಾಪಿ ನ ಸ್ವರ್ಗಂ ನಾಪುನರ್ಭವಮ್ ।
ಭಗವತ್ಸಙ್ಗಿಸಙ್ಗಸ್ಯ ಮರ್ತ್ಯಾನಾಂ ಕಿಮುತಾಶಿಷಃ ॥೩೪॥

ಸ್ವರ್ಗದ ಸಾಮ್ರಾಜ್ಯವನ್ನಾಗಲೀ, ಮೋಕ್ಷವನ್ನೇ ಆಗಲೀ–ನಾವು ಭಗವದ್ಭಕ್ತರ ಕ್ಷಣಕಾಲದ ಸಹವಾಸಕ್ಕೂ ಸಾಟಿಯೆಂದು ಪರಿಗಣಿಸುವುದಿಲ್ಲ. ಹೀಗಿರುವಾಗ ಅತ್ಯಲ್ಪವಾಗಿ ತುಚ್ಛವಾದ ಮಾನುಷಭೋಗಗಳನ್ನು ಕುರಿತು ಹೇಳುವುದಾದರೂ ಏನಿದೆ?

ಯತ್ರೇಡ್ಯನ್ತೇ ಕಥಾ ಮೃಷ್ಟಾಸ್ತೃಷ್ಣಾಯಾಃ ಪ್ರಶಮೋ ಯತಃ ।
ನಿರ್ವೈರಂ ಯತ್ರ ಭೂತೇಷು ನೋದ್ವೇಗೋ ಯತ್ರ ಕಶ್ಚನ ॥೩೫॥

ಭಗವದ್ಭಕ್ತರ ಸಮಾಜದಲ್ಲಿ ಸದಾ ಶ್ರೀಭಗವಂತನ ಮಧುರತಮವಾದ ಕಥೆಗಳ ಕೀರ್ತನೆ ಮತ್ತು ಅನುಸಂಧಾನಗಳೇ ಆಗುತ್ತಿರುತ್ತವೆ. ಅವುಗಳನ್ನು ಕೇಳಿದ ಮಾತ್ರದಿಂದಲೇ ಭೋಗದ ಆಶಾಪಾಶಗಳು ಅಡಗಿಹೋಗುವುವು. ಅಲ್ಲಿ ಪ್ರಾಣಿಗಳಲ್ಲಿ ಯಾವುದೇ ಬಗೆಯ ವಿರೋಧ ಅಥವಾ ಉದ್ವೇಗಗಳೂ ಇರುವುದಿಲ್ಲ.

ಯತ್ರ ನಾರಾಯಣಃ ಸಾಕ್ಷಾದ್ಭಗವಾನ್ನ್ಯಾಸಿನಾಂ ಗತಿಃ ।
ಸಂಸ್ತೂಯತೇ ಸತ್ಕಥಾಸು ಮುಕ್ತಸಙ್ಗೈಃ ಪುನಃ ಪುನಃ ॥೩೬॥

ಆ ಕೂಟಗಳಲ್ಲಿ ಒಳ್ಳೆಯ ಕಥಾಪ್ರಸಂಗಗಳ ಮೂಲಕ ನಿಷ್ಕಾಮ ಭಾವದಿಂದ ವಿರಕ್ತರಾದ ಸಂನ್ಯಾಸಿಗಳಿಗೆ ಅಥವಾ ಶ್ರೀಭಗವಂತನಲ್ಲಿ ಸರ್ವ ವನ್ನೂ, ಸಮರ್ಪಣೆಮಾಡಿರುವ ವಿರಕ್ತರಿಗೆ ಏಕಮಾತ್ರ ಆಶ್ರಯನಾಗಿರುವ ಸಾಕ್ಷಾತ್ ಶ್ರೀಮನ್ನಾರಾಯಣನ ಗುಣಗಾನವೇ ಅಡಿಗಡಿಗೂ ಆಗುತ್ತಿರು ವುದು.

ತೇಷಾಂ ವಿಚರತಾಂ ಪದ್ಭ್ಯಾಂ ತೀರ್ಥಾನಾಂ ಪಾವನೇಚ್ಛಯಾ ।
ಭೀತಸ್ಯ ಕಿಂ ನ ರೋಚೇತ ತಾವಕಾನಾಂ ಸಮಾಗಮಃ ॥೩೭॥

ನಿನ್ನ ಆ ಭಕ್ತಶ್ರೇಷ್ಠರು ತೀರ್ಥಗಳನ್ನು ಪವಿತ್ರಗೊಳಿಸುವ ಉದ್ದೇಶ ದಿಂದಲೇ ಭೂಮಿಯ ಮೇಲೆ ಕಾಲ್ನಡಿಗೆಯಿಂದ ಸಂಚರಿಸುತ್ತಿರುತ್ತಾರೆ. ಅಂತಹ ಮಹಾತ್ಮರ ಸಮಾಗಮವು ಸಂಸಾರಭೀತನಾದ ಯಾವ ಮನುಷ್ಯ ನಿಗೆ ತಾನೇ ರುಚಿಸುವುದಿಲ್ಲ?

ವಯಂ ತು ಸಾಕ್ಷಾದ್ಭಗವನ್ಭವಸ್ಯ
ಪ್ರಿಯಸ್ಯ ಸಖ್ಯುಃ ಕ್ಷಣಸಙ್ಗಮೇನ ।
ಸದುಶ್ಚಿಕಿತ್ಸ್ಯಸ್ಯ ಭವಸ್ಯ ಮೃತ್ಯೋ-
ರ್ಭಿಷಕ್ತಮಂ ತ್ವಾದ್ಯ ಗತಿಂ ಗತಾಃ ಸ್ಮಃ ॥೩೮॥

ಓ ಭಗವಂತನೇ! ನಿನಗೆ ಪ್ರಿಯನಾದ ಭಗವಾನ್ ಶ್ರೀಶಂಕರನ ಕ್ಷಣ ಕಾಲದ ಸಮಾಗಮದಿಂದಲೇ ಇಂದು ನಮಗೆ ನಿನ್ನ ಸಾಕ್ಷಾತ್ತಾದ ದರ್ಶನದ ಭಾಗ್ಯವು ಒದಗಿದೆ. ಚಿಕಿತ್ಸೆಮಾಡಲು ಬಹಳ ಕಷ್ಟವಾದ ಹುಟ್ಟು-ಸಾವುಗಳೆಂಬ ರೋಗಕ್ಕೆ ಶ್ರೇಷ್ಠತಮನಾದ ವೈದ್ಯನು ನೀನಲ್ಲವೇ! ಆದುದರಿಂದ ನಾವು ನಿನ್ನನ್ನೇ ಆಶ್ರಯಿಸಿದ್ದೇವೆ.

ಯನ್ನಃ ಸ್ವಧೀತಂ ಗುರವಃ ಪ್ರಸಾದಿತಾ
ವಿಪ್ರಾಶ್ಚ ವೃದ್ಧಾಶ್ಚ ಸದಾನುವೃತ್ತ್ಯಾ ।
ಆರ್ಯಾ ನತಾಃ ಸುಹೃದೋ ಭ್ರಾತರಶ್ಚ
ಸರ್ವಾಣಿ ಭೂತಾನ್ಯನಸೂಯಯೈವ ॥೩೯॥

ಯನ್ನಃ ಸುತಪ್ತಂ ತಪ ಏತದೀಶ
ನಿರನ್ಧಸಾಂ ಕಾಲಮದಭ್ರಮಪ್ಸು ।
ಸರ್ವಂ ತದೇತತ್ಪುರುಷಸ್ಯ ಭೂಮ್ನೋ
ವೃಣೀಮಹೇ ತೇ ಪರಿತೋಷಣಾಯ ॥೪೦॥

ಪ್ರಭೋ! ನಾವು ವೇದ-ಶಾಸ್ತ್ರಾದಿಗಳನ್ನು ಚೆನ್ನಾಗಿ ಅಧ್ಯಯನ ಮಾಡಿರುವುದು ; ನಿರಂತರವಾದ ಸೇವಾ-ಶುಶ್ರೂಷೆಗಳಿಂದ ಗುರುಗಳನ್ನೂ, ಬ್ರಾಹ್ಮಣರನ್ನೂ, ವೃದ್ಧರನ್ನೂ ಪ್ರಸನ್ನಗೊಳಿಸಿರುವುದು ; ಅಸೂಯೆಯನ್ನು ಬಿಟ್ಟು ಶ್ರೇಷ್ಠಪುರುಷರನ್ನೂ, ಸ್ನೇಹಿತವರ್ಗವನ್ನೂ, ಬಂಧುವರ್ಗವನ್ನೂ ಹಾಗೂ ಸಮಸ್ತಪ್ರಾಣಿಗಳನ್ನೂ ನಮಸ್ಕರಿಸಿರುವುದು ಮತ್ತು ಅನ್ನಾಹಾರಾದಿಗಳನ್ನು ಬಿಟ್ಟು ದೀರ್ಘಕಾಲದವರೆಗೆ ನೀರಿನಲ್ಲಿ ನಿಂತು ತಪಸ್ಸು ಮಾಡಿರುವುದು–ಇವೆಲ್ಲವೂ ಸರ್ವವ್ಯಾಪಕನೂ, ಪುರುಷೋತ್ತಮನೂ ಆದ ನಿನ್ನ ಸಂತೋಷಕ್ಕೆ ಕಾರಣವಾಗಲಿ–ಎಂದಿಷ್ಟೇ ವರವನ್ನು ನಿನ್ನಿಂದ ಬೇಡುತ್ತೇವೆ.

ಮನುಃ ಸ್ವಯಮ್ಭೂರ್ಭಗವಾನ್ಭವಶ್ಚ
ಯೇಽನ್ಯೇ ತಪೋಜ್ಞಾನವಿಶುದ್ಧಸತ್ತ್ವಾಃ ।
ಅದೃಷ್ಟಪಾರಾ ಅಪಿ ಯನ್ಮಹಿಮ್ನಃ
ಸ್ತುವನ್ತ್ಯಥೋ ತ್ವಾತ್ಮಸಮಂ ಗೃಣೀಮಃ ॥೪೧॥

ಜೀಯಾ! ಸ್ವಾಯಂಭುವಮನು, ಸ್ವಯಂ ಬ್ರಹ್ಮದೇವರು, ಭಗವಂತನಾದ ಶ್ರೀಶಂಕರ ಮತ್ತು ತಪಸ್ಸು-ಜ್ಞಾನಗಳಿಂದ ಶುದ್ಧಚಿತ್ತರಾದ ಇತರ ಮಹಾಪುರುಷರು–ನಿನ್ನ ಮಹಿಮೆಯ ಪಾರವನ್ನು ಹೊಂದದೇ ಇದ್ದರೂ–ನಿರಂತರವಾಗಿ ನಿನ್ನ ಸ್ತುತಿಯನ್ನು ಮಾಡುತ್ತಾ ಬಂದಿದ್ದಾರೆ. ಆದುದರಿಂದ ನಾವೂ ಕೂಡ ನಮ್ಮ ಬುದ್ಧಿಗೆ ತಕ್ಕಂತೆ ನಿನ್ನ ಕೀರ್ತಿಗಾನವನ್ನು ಮಾಡುತ್ತೇವೆ.

ನಮಃ ಸಮಾಯ ಶುದ್ಧಾಯ ಪುರುಷಾಯ ಪರಾಯ ಚ ।
ವಾಸುದೇವಾಯ ಸತ್ತ್ವಾಯ ತುಭ್ಯಂ ಭಗವತೇ ನಮಃ ॥೪೨॥

ನೀನು ಸರ್ವಸಮನು, ಶುದ್ಧಸ್ವರೂಪನು ಮತ್ತು ಪರಮಪುರುಷನು. ಇಂತಹ ಸತ್ತ್ವಮೂರ್ತಿಯಾದ, ಭಗವಂತನಾದ ವಾಸುದೇವನೇ! ನಿನಗೆ ನಮೋ ನಮಃ."

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

"ವಿದುರನೇ! ಕೇಳು. ಪ್ರಚೇತಸರು ಹೀಗೆ ಶ್ರೀಭಗವಂತನನ್ನು ಸ್ತೋತ್ರಮಾಡಲು–ಶರಣಾಗತವತ್ಸಲನಾದ ಶ್ರೀಭಗವಂತನು ಪ್ರಸನ್ನನಾಗಿ 'ತಥಾಸ್ತು' 'ಹಾಗೆಯೇ ಆಗಲಿ'–ಎಂದು ಹೇಳಿ ಅನುಗ್ರಹಮಾಡಿದನು. ಅಪ್ರತಿಹತವಾದ ಪ್ರಭಾವವುಳ್ಳ ಶ್ರೀಹರಿಯ ಆ ಮಧುರವಾದ ಮೂರ್ತಿಯ ದರ್ಶನದಿಂದ ಪ್ರಚೇತಸರ ಕಣ್ಣುಗಳಿಗೆ ಇನ್ನೂ ತೃಪ್ತಿಯಾಗಿರಲೇ ಇಲ್ಲ. ಹಾಗೂ ಅವರಿಗೆ ಆತನನ್ನು ಕಳುಹಿಸಿಕೊಡಲು ಇಷ್ಟವೇ ಇರಲಿಲ್ಲ. ಆದರೂ ಶ್ರೀಭಗವಂತನು ತನ್ನ ಧಾಮಕ್ಕೆ ದಯಮಾಡಿಸಿಯೇ ಬಿಟ್ಟನು.

ಅದಾದನಂತರ ಪ್ರಚೇತಸರು ಸಮುದ್ರಜಲದಿಂದ ಹೊರಗೆ ಬಂದು ನೋಡಲು, ಇಡೀ ಭೂಮಂಡಲವನ್ನು–ಸ್ವರ್ಗದ ಮಾರ್ಗವನ್ನು ತಡೆಯುತ್ತಿವೆಯೋ ಎಂಬಂತೆ–ಮಿತಿಮೀರಿ ಎತ್ತರವಾಗಿ ಬೆಳೆದ ವೃಕ್ಷಗಳು ಮುಚ್ಚಿ

ಬಿಟ್ಟಿರುವುದನ್ನು ಕಂಡರು. ಅದನ್ನು ನೋಡಿ ಅವರಿಗೆ ವೃಕ್ಷಗಳ ಮೇಲೆ ಮಿತಿಮೀರಿದ ಕೋಪವುಂಟಾಯಿತು. ಆಗ ಅವರು ಭೂಮಿಯನ್ನು ಮರ ಮತ್ತು ಬಳ್ಳಿಗಳಿಂದ ಶೂನ್ಯವನ್ನಾಗಿ ಮಾಡಬೇಕೆಂದು ಸಂಕಲ್ಪಿಸಿ, ಪ್ರಳಯ ಕಾಲದಲ್ಲಿ ಕಾಲಾಗ್ನಿರುದ್ರದೇವರಂತೆ ತಮ್ಮ ಬಾಯಿಂದ ಪ್ರಚಂಡವಾದ ವಾಯುವನ್ನೂ ಮತ್ತು ಅಗ್ನಿಯನ್ನೂ ಹೊರಗೆ ಬಿಟ್ಟರು. ಅವರು ಹೀಗೆ ಸಮಸ್ತವೃಕ್ಷಗಳನ್ನೂ ಸುಟ್ಟು ಭಸ್ಮಮಾಡುತ್ತಿರುವುದನ್ನು ಕಂಡು ಬ್ರಹ್ಮದೇವರು ಅಲ್ಲಿಗೆ ಬಂದು ಪ್ರಾಚೀನಬರ್ಹಿಪುತ್ರರಿಗೆ ಯುಕ್ತಿಪೂರ್ವಕವಾಗಿ ತಿಳಿವಳಿಕೆ ನೀಡಿ ಅವರ ಕೋಪವನ್ನು ಶಾಂತಗೊಳಿಸಿದರು.

ಆಗ ಅಲ್ಲಿ ಅಳಿದುಳಿದಿದ್ದ ವೃಕ್ಷಗಳು ಹೆದರಿಕೊಂಡು ಬ್ರಹ್ಮದೇವರ ಆಣತಿಯಂತೆ ತಮ್ಮಲ್ಲಿದ್ದ ಮಾರಿಷಾ (ವಾರ್ಕ್ಷೀ) ಎಂಬ ಕನ್ಯೆಯನ್ನು ತಂದು ಪ್ರಚೇತಸರಿಗೆ ಸಮರ್ಪಿಸಿದುವು. ಪ್ರಚೇತಸರು ಬ್ರಹ್ಮದೇವರ ಆದೇಶದಂತೆ ಆ ಮಾರಿಷೆಯನ್ನು ವಿವಾಹಮಾಡಿಕೊಂಡರು. ಶ್ರೀಮಹಾದೇವನನ್ನು ತಿರಸ್ಕರಿಸಿದ ಕಾರಣ ತನ್ನ ದೇಹವನ್ನು ತ್ಯಜಿಸಿದ್ದ ಬ್ರಹ್ಮಪುತ್ರನಾದ ದಕ್ಷನು ಆಕೆಯ ಗರ್ಭದಲ್ಲಿ ಜನಿಸಿದನು. ಆ ದಕ್ಷನೇ ಕಾಲಕ್ರಮದಲ್ಲಿ ಹಿಂದಿದ್ದ ಸೃಷ್ಟಿಯು ನಶಿಸಿಹೋಗಿ ಚಾಕ್ಷುಷಮನ್ವಂತರವು ಬಂದಾಗ ಶ್ರೀಭಗವಂತನ ಪ್ರೇರಣೆಯಂತೆ ಇಷ್ಟಾನುಸಾರವಾಗಿ ಹೊಸ ಪ್ರಜೆಗಳನ್ನು ಸೃಷ್ಟಿಸಿದನು. ಆತನು ಹುಟ್ಟುವಾಗಲೇ ತನ್ನ ತೇಜಸ್ಸಿನಿಂದ ಎಲ್ಲ ತೇಜಸ್ವಿಗಳ ತೇಜಸ್ಸನ್ನೂ ಸೆಳೆದುಕೊಳ್ಳುತ್ತಿದ್ದನು. ಕರ್ಮಗಳನ್ನು ಆಚರಿಸುವುದರಲ್ಲಿ ಅತ್ಯಂತ ದಕ್ಷನಾಗಿದ್ದುದರಿಂದ (ಕುಶಲನಾಗಿದ್ದುದರಿಂದ) 'ದಕ್ಷ' ಎಂದು ಆತನಿಗೆ ಹೆಸರಾಯಿತು. ಬ್ರಹ್ಮದೇವರು ಆತನನ್ನು ಪ್ರಜಾಪತಿಗಳಿಗೆಲ್ಲಾ ಅಧಿಪತಿ ಯನ್ನಾಗಿ ಪಟ್ಟಾಭಿಷೇಕಮಾಡಿ ಸೃಷ್ಟಿಯನ್ನು ರಕ್ಷಿಸಲು ಆದೇಶವನ್ನಿತ್ತರು. ಆಗ ಆತನು ಮರೀಚಿಯೇ ಮುಂತಾದ ಇತರ ಎಲ್ಲ ಪ್ರಜಾಪತಿಗಳನ್ನೂ ಅವರವರ ಕಾರ್ಯಗಳಲ್ಲಿ ನೇಮಕಮಾಡಿದನು." (ಶ್ಲೋಕ 43-51)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಚತುರ್ಥಸ್ಕಂಧದ ೩೦ನೆಯ ಅಧ್ಯಾಯವು ಮುಗಿಯಿತು.

ನಾರದರ ಉಪದೇಶದಿಂದ ಪ್ರಚೇತಸರಿಗೆ ಪರಮಪದಪ್ರಾಪ್ತಿ

ಮೈತ್ರೇಯರು ಹೇಳುತ್ತಾರೆ :

ತತ ಉತ್ಪನ್ನವಿಜ್ಞಾನಾ ಆಶ್ವಧೋಕ್ಷಜಭಾಷಿತಮ್ ।
ಸ್ಮರನ್ತ ಆತ್ಮಜೇ ಭಾರ್ಯಾಂ ವಿಸೃಜ್ಯ ಪ್ರಾವ್ರಜನ್ಗೃಹಾತ್ ॥೧॥

ಎಲೈ ಭಾಗವತಶ್ರೇಷ್ಠನೇ! ಕೇಳು. ಹತ್ತು ಲಕ್ಷ ದಿವ್ಯವರ್ಷಗಳ ಕಾಲ ಪಾರ್ಥಿವ ಮತ್ತು ದಿವ್ಯವಾದ ಭೋಗಗಳನ್ನು ಅನುಭವಿಸಿದನಂತರ ಮಹಾನುಭಾವರಾದ ಪ್ರಚೇತಸರಿಗೆ ವಿವೇಕ ವಿಜ್ಞಾನವುಂಟಾಯಿತು. ಶ್ರೀಭಗವಂತನ ಮಾತುಗಳು ಅವರ ನೆನಪಿಗೆ ಬಂದುವು. ಆಗ ಅವರು ತಮ್ಮ ಪತ್ನಿಯಾದ ಮಾರಿಷೆಯನ್ನು ಪುತ್ರನ ರಕ್ಷಣೆಯಲ್ಲಿರಿಸಿ ಒಡನೆಯೇ ಅರಮನೆಯಿಂದ ಹೊರಟುಬಿಟ್ಟರು.

ಅವರು ಪಶ್ಚಿಮದಿಕ್ಕಿನಲ್ಲಿ ಹಿಂದೆ ಜಾಜಲಿಮಹರ್ಷಿಯು ಸಿದ್ಧಿಯನ್ನು ಪಡೆದಿದ್ದ ಸಮುದ್ರತೀರಪ್ರದೇಶವನ್ನು ತಲುಪಿ–'ಸಮಸ್ತಭೂತಗಳಲ್ಲಿಯೂ ಒಂದೇ ಆತ್ಮತತ್ತ್ವವು ಬೆಳಗುತ್ತಿದೆ'–ಎಂಬ ಜ್ಞಾನವನ್ನು ಉಂಟುಮಾಡುವ ಆತ್ಮವಿಚಾರರೂಪವಾದ ಬ್ರಹ್ಮಸತ್ರವನ್ನು ಮಾಡಲು ಸಂಕಲ್ಪಿಸಿ ಕುಳಿತುಕೊಂಡರು. ಅವರು ಪ್ರಾಣ, ಮನಸ್ಸು, ಮಾತು ಮತ್ತು ದೃಷ್ಟಿಗಳನ್ನು ವಶಪಡಿಸಿಕೊಂಡು, ಶರೀರವನ್ನು ಅಲುಗಾಡದಂತೆ ಸ್ಥಿರವಾಗಿಯೂ ನೇರವಾಗಿಯೂ ಇರಿಸಿಕೊಂಡು, ಆಸನಜಯವನ್ನು ಸಾಧಿಸಿ ಚಿತ್ತವನ್ನು ವಿಶುದ್ಧವಾದ ಪರಬ್ರಹ್ಮದಲ್ಲಿ ಒಂದುಗೂಡಿಸಿದರು. ಆ ಸ್ಥಿತಿಯಲ್ಲಿದ್ದಾಗ ಅವರಿಗೆ ದೇವತೆಗಳು ಮತ್ತು ಅಸುರರು ಇಬ್ಬರಿಗೂ ವಂದನೀಯರಾದ ನಾರದ ಮಹರ್ಷಿಗಳ ದರ್ಶನವಾಯಿತು. ಅವರು ದಯಮಾಡಿಸಿದುದನ್ನು ಕಂಡು ಪ್ರಚೇತಸರು ಎದ್ದು ನಿಂತು ನಮಸ್ಕಾರಮಾಡಿ, ಆದರ-ಸತ್ಕಾರಪೂರ್ವಕ ವಾಗಿ ದೇಶ-ಕಾಲಗಳಿಗೆ ತಕ್ಕಂತೆ ಅವರನ್ನು ಪೂಜೆಮಾಡಿದರು. ನಾರದರು ಸುಖಾಸೀನರಾಗಲು, ಪ್ರಚೇತಸರು ಅವರಲ್ಲಿ ಹೀಗೆ ವಿಜ್ಞಾಪನೆಮಾಡಿದರು :

"ದೇವರ್ಷಿಗಳೇ! ತಮಗೆ ಸ್ವಾಗತವು. ಮಹಾಭಾಗ್ಯವಿಶೇಷದಿಂದಲೇ ನಮಗೆ ತಮ್ಮ ದರ್ಶನಭಾಗ್ಯವು ಲಭಿಸಿತು. ತಮ್ಮ ಲೋಕಸಂಚಾರವು ಸೂರ್ಯದೇವರ ಲೋಕಸಂಚಾರಕ್ಕೆ ಸಮನಾದುದು. ಸಮಸ್ತಜೀವಗಳಿಗೂ ಪ್ರಕಾಶವನ್ನು ಅನುಗ್ರಹಿಸಿ ಅಭಯಪ್ರದಾನಮಾಡುವುದಕ್ಕಾಗಿಯೇ ತಾವಿಬ್ಬರೂ ಸಂಚರಿಸುತ್ತಿರುವಿರಲ್ಲವೇ! ಪ್ರಭುದೇವರೇ! ಭಗವಂತನಾದ ಶ್ರೀಶಂಕರನೂ ಮತ್ತು ಶ್ರೀಮಹಾವಿಷ್ಣುಭಗವಂತನೂ ನಮಗೆ ಉಪದೇಶ ಮಾಡಿದ್ದ ಜ್ಞಾನವನ್ನು ನಾವು ಗೃಹಸ್ಥಧರ್ಮಗಳ ಸೇವನೆಯಲ್ಲಿ ಬಹುಕಾಲ ಇದ್ದುದರಿಂದ ಸಾಮಾನ್ಯವಾಗಿ ಮರೆತುಬಿಟ್ಟಂತಾಗಿದೆ. ಆದುದರಿಂದ ತಾವು ನಮ್ಮ ಹೃದಯಗಳಲ್ಲಿ ಆ ಪರಮಾರ್ಥತತ್ತ್ವದ ಸಾಕ್ಷಾತ್ಕಾರವನ್ನು ಮಾಡಿಸುವ ಅಧ್ಯಾತ್ಮಜ್ಞಾನವನ್ನು ಮತ್ತೆ ಬೆಳಗಿಸಿರಿ. ಇದರಿಂದ ನಾವು ದಾಟಲು ಬಹಳ ಕಷ್ಟವಾಗಿರುವ ಸಂಸಾರಸಾಗರವನ್ನು ಸುಲಭವಾಗಿ ದಾಟುವೆವು."

ಮೈತ್ರೇಯರು ಹೇಳುತ್ತಾರೆ :

ಸರ್ವದಾ ಶ್ರೀಕೃಷ್ಣಪರಮಾತ್ಮನಲ್ಲಿಯೇ ನೆಟ್ಟ ಚಿತ್ತವುಳ್ಳವರಾಗಿದ್ದ ಭಗವನ್ಮಯರಾದ ನಾರದಮಹರ್ಷಿಗಳು ಪ್ರಚೇತಸರ ವಿಜ್ಞಾಪನೆಯನ್ನು ಕೇಳಿ ಹೀಗೆಂದರು : (ಶ್ಲೋಕ 2-8)

ಪ್ರಚೇತಸರಿಗೆ ನಾರದರ ಉಪದೇಶ :

ತಜ್ಜನ್ಮ ತಾನಿ ಕರ್ಮಾಣಿ ತದಾಯುಸ್ತನ್ಮನೋ ವಚಃ ।
ನೃಣಾಂ ಯೇನೇಹ ವಿಶ್ವಾತ್ಮಾ ಸೇವ್ಯತೇ ಹರಿರೀಶ್ವರಃ ॥೯॥

"ಎಲೈ ರಾಜರೇ! ಈ ಲೋಕದಲ್ಲಿ ಯಾವುದರಿಂದ ಸರ್ವಾತ್ಮನೂ ಸರ್ವೇಶ್ವರನೂ ಆದ ಶ್ರೀಹರಿಯ ಸೇವೆಯಾಗುವುದೋ–ಆ ಜನ್ಮ, ಆ ಕರ್ಮ, ಆ ಆಯುಸ್ಸು, ಆ ಮನಸ್ಸು ಮತ್ತು ಆ ಮಾತುಗಳೇ ಸಫಲವಾದವುಗಳು.

ಕಿಂ ಜನ್ಮಭಿಸ್ತ್ರಿಭಿರ್ವೇಹ ಶೌಕ್ಲ ಸಾವಿತ್ರಯಾಜ್ಞಿಕೈಃ ।
ಕರ್ಮಭಿರ್ವಾ ತ್ರಯೀಪ್ರೋಕ್ತೈಃ ಪುಂಸೋಽಪಿ ವಿಬುಧಾಯುಷಾ ॥
ಶ್ರುತೇನ ತಪಸಾ ವಾ ಕಿಂ ವಚೋಭಿಶ್ಚಿತ್ತವೃತ್ತಿಭಿಃ ।
ಬುದ್ಧ್ಯಾ ವಾ ಕಿಂ ನಿಪುಣಯಾ ಬಲೇನೇನ್ದ್ರಿಯರಾಧಸಾ ॥೧೧॥

ಕಿಂ ವಾ ಯೋಗೇನ ಸಾಂಖ್ಯೇನ ನ್ಯಾಸಸ್ವಾಧ್ಯಾಯೋರಪಿ ।
ಕಿಂ ವಾ ಶ್ರೇಯೋಭಿರನ್ಯೈಶ್ಚ ನ ಯತ್ರಾತ್ಮಪ್ರದೋ ಹರಿಃ ॥೧೨॥

ಆತ್ಮಾನುಭವವನ್ನು ಕರುಣಿಸುವ ಶ್ರೀಹರಿಯು ಯಾವುದರಿಂದ ದೊರಕುವುದಿಲ್ಲವೋ-ಅಂತಹ ಜನ್ಮದಿಂದಾಗಲೀ-ಯಜ್ಞೋಪವೀತ ಸಂಸ್ಕಾರ, ಗಾಯತ್ರಿಯ ಉಪದೇಶ, ಯಜ್ಞದೀಕ್ಷೆಗಳೆಂಬ ಮೂರು ಸಂಸ್ಕಾರ ಗಳಿಂದಾಗಲೀ-ವೇದೋಕ್ತಕರ್ಮಗಳಿಂದಾಗಲೀ-ದೇವಮಾನದ ಪೂರ್ಣಾ ಯುಷ್ಯದಿಂದಲೇ ಆಗಲೀ-ಶಾಸ್ತ್ರಜ್ಞಾನದಿಂದಾಗಲೀ-ತಪಸ್ಸಿನಿಂದಾಗಲೀ-ಮಾತಿನ ಚಾತುರ್ಯದಿಂದಾಗಲೀ-ಅದ್ಭುತವಾದ ಚಿತ್ತವೃತ್ತಿಗಳಿಂದಾಗಲೀ-ಸ್ಮರಣಶಕ್ತಿಯಿಂದಾಗಲೀ-ಸೂಕ್ಷ್ಮವಾದ ಬುದ್ಧಿಯಿಂದಾಗಲೀ-ಬಲದಿಂದಾ ಗಲೀ-ಇಂದ್ರಿಯಪಾಟವದಿಂದಾಗಲೀ-ಯೋಗದಿಂದಾಗಲೀ-ಸಾಂಖ್ಯ ದಿಂದಾಗಲೀ ಸಂನ್ಯಾಸದಿಂದಾಗಲೀ-ವೇದಾಧ್ಯಯನ, ವ್ರತ, ವೈರಾಗ್ಯಗಳೇ ಮುಂತಾದ ಇತರ ಶ್ರೇಯಃಸಾಧನೆಯ ಉಪಾಯಗಳಿಂದಾಗಲೀ-ಮನುಷ್ಯ ನಿಗೆ ಆಗುವ ಪ್ರಯೋಜನವಾದರೂ ಏನು?

ಶ್ರೇಯಸಾಮಪಿ ಸರ್ವೇಷಾಮಾತ್ಮಾ ಹ್ಯವಧಿರರ್ಥತಃ ।
ಸರ್ವೇಷಾಮಪಿ ಭೂತಾನಾಂ ಹರಿರಾತ್ಮಾತ್ಮದಃ ಪ್ರಿಯಃ ॥೧೩॥

ಯಥಾ ತರೋರ್ಮೂಲನಿಷೇಚನೇನ
ತೃಪ್ಯನ್ತಿ ತತ್ಸ್ಕನ್ಧಭುಜೋಪಶಾಖಾಃ ।
ಪ್ರಾಣೋಪಹಾರಾಚ್ಚ ಯಥೇನ್ದ್ರಿಯಾಣಾಂ
ತಥೈವ ಸರ್ವಾರ್ಹಣಮಚ್ಯುತೇಜ್ಯಾ ॥೧೪॥

ವಾಸ್ತವವಾಗಿ ಎಲ್ಲ ಶ್ರೇಯಸ್ಸುಗಳಿಗೂ ಆತ್ಮನೇ ಅವಧಿಯು. ಆತ್ಮ ಜ್ಞಾನವನ್ನು ದಯಪಾಲಿಸುವ ಶ್ರೀಹರಿಯೇ ಎಲ್ಲ ಪ್ರಾಣಿಗಳಿಗೂ ಪ್ರಿಯ ತಮನಾಗಿರುವ ಆ ಆತ್ಮನು. ವೃಕ್ಷದ ಬುಡಕ್ಕೆ ನೀರನ್ನು ಹಾಯಿಸಿದರೆ ಹೇಗೆ ಅದರ ಕಾಂಡ, ಶಾಖೆ, ಉಪಶಾಖೆಗಳೆಲ್ಲಕ್ಕೂ ತೃಪ್ತಿಯುಂಟಾಗು ವುದೋ- ಪ್ರಾಣಕ್ಕೆ ಅನ್ನ-ಪಾನೀಯಗಳಿಂದ ತೃಪ್ತಿಯನ್ನುಂಟುಮಾಡಿದರೆ ಹೇಗೆ ಎಲ್ಲ ಇಂದ್ರಿಯಗಳಿಗೂ ತೃಪ್ತಿಯುಂಟಾಗುವುದೋ-ಹಾಗೆಯೇ

(ಸರ್ವಮೂಲನಾಗಿರುವ) ಅಚ್ಯುತನ್ನು ಪೂಜಿಸಿದರೆ ಅದರಿಂದ ಸರ್ವರ ಆರಾಧನೆಯೂ ಆಗುವುದು.

ಯಥೈವ ಸೂರ್ಯಾತ್ಪ್ರಭವನ್ತಿ ವಾರಃ
ಪುನಶ್ಚ ತಸ್ಮಿನ್ಪ್ರವಿಶನ್ತಿ ಕಾಲೇ ।
ಭೂತಾನಿ ಭೂಮೌ ಸ್ಥಿರಜಙ್ಗಮಾನಿ
ತಥಾ ಹರಾವೇವ ಗುಣಪ್ರವಾಹಃ ॥೧೫॥

ನೀರೆಲ್ಲವೂ ಹೇಗೆ ಮಳೆಗಾಲದಲ್ಲಿ ಸೂರ್ಯನಿಂದಲೇ ಉಂಟಾಗಿ ಬೇಸಗೆಯಲ್ಲಿ ಆತನ ಕಿರಣಗಳಲ್ಲಿಯೇ ಹೋಗಿ ಸೇರಿಕೊಳ್ಳುವುದೋ, ಚರಾಚರವಾದ ಸಮಸ್ತಭೂತಗಳೂ ಹೇಗೆ ಭೂಮಿಯಿಂದಲೇ ಉತ್ಪನ್ನವಾಗಿ ಕಡೆಗೆ ಭೂಮಿಯಲ್ಲಿಯೇ ಹೋಗಿ ಸೇರಿಕೊಳ್ಳುತ್ತವೆಯೋ–ಹಾಗೆಯೇ ಗುಣಪ್ರವಾಹಕ್ಕೆ ಸೇರಿದ ಈ ಚೇತನಾಚೇತನಾತ್ಮಕವಾದ ಸಮಸ್ತ ಪ್ರಪಂಚವೂ ಶ್ರೀಹರಿಯಿಂದಲೇ ಉತ್ಪನ್ನವಾಗಿ ಆ ಶ್ರೀಹರಿಯಲ್ಲಿಯೇ ಲಯ ಹೊಂದುವುದು.

ಏತತ್ಪದಂ ತಜ್ಜಗದಾತ್ಮನಃ ಪರಂ
ಸಕೃದ್ವಿಭಾತಂ ಸವಿತುರ್ಯಥಾ ಪ್ರಭಾ ।
ಯಥಾಸವೋ ಜಾಗ್ರತಿ ಸುಪ್ತಶಕ್ತಯೋ
ದ್ರವ್ಯಕ್ರಿಯಾಜ್ಞಾನಭಿದಾಭ್ರಮಾತ್ಯಯಃ ॥೧೬॥

ಪರಮಾತ್ಮನ ಆ ಪರಮಪದವು ದ್ರವ್ಯಭೇದ-ಕ್ರಿಯಾಭೇದ-ಜ್ಞಾನ ಭೇದಗಳೆಂಬ ಮುಬ್ಬಗೆಯ ಭ್ರಮೆಗಳನ್ನೂ ಮೀರಿ ಏಕರೂಪವಾಗಿ ನಿರ್ವಿಕಾರವಾಗಿದೆ. ಸೂರ್ಯನ ಪ್ರಭೆಯಂತೆ ಒಮ್ಮೆ ಬೆಳಗಿ ಒಮ್ಮೆ ಮರೆ ಯಾಗುವ ಈ ಅನಿತ್ಯವಾದ ಜಗತ್ತು ನಿತ್ಯವಾಗಿ ನಿರ್ವಿಕಾರವಾಗಿರುವ ಆ ಬ್ರಹ್ಮಪದದಿಂದಲೇ ಹೊರಹೊಮ್ಮಿ ಅಲ್ಲಿಯೇ ಮರೆಯಾಗುವುದು. ಸುಷುಪ್ತಿ (ಗಾಢನಿದ್ರೆ) ಯಲ್ಲಿ ಶಕ್ತಿಲಯವನ್ನು ಹೊಂದಿರುವ ಇಂದ್ರಿಯ ಗಳು ಎಚ್ಚರದ ಸ್ಥಿತಿಯಿಲ್ಲಿ ಪ್ರಕಟಹೊಂದುವಂತೆ–ಪ್ರಳಯದಲ್ಲಿ ಪರಮಾತ್ಮ

ನಲ್ಲಿ ಸೇರಿಕೊಂಡು ಶಕ್ತಿಲಯವನ್ನು ಹೊಂದಿರುವ ಈ ಜಗತ್ತು ಸೃಷ್ಟಿಕಾಲ ದಲ್ಲಿ ಪರಮಾತ್ಮನಿಂದ ಹೊರಬರುವುದು.*

ಯಥಾ ನಭಸ್ಯಭ್ರತಮಃಪ್ರಕಾಶಾ
ಭವನ್ತಿ ಭೂಪಾ ನ ಭವನ್ತ್ಯನುಕ್ರಮಾತ್ ।
ಏವಂ ಪರೇ ಬ್ರಹ್ಮಣಿ ಶಕ್ತಯಸ್ತ್ವಮೂ
ರಜಸ್ತಮಃಸತ್ತ್ವಮಿತಿ ಪ್ರವಾಹಃ ॥೧೭॥

ಎಲೈ ನೃಪತಿಗಳೇ! ಮೋಡ, ಕತ್ತಲೆ ಮತ್ತು ಬೆಳಕು–ಇವು ಮೂರೂ ಕ್ರಮವಾಗಿ ಆಕಾಶದಲ್ಲಿ ಪ್ರಕಟಗೊಂಡು ಅದರಲ್ಲಿಯೇ ಲಯಹೊಂದು ವುವು. ಆದರೆ ಇವುಗಳಿಂದ ಆಕಾಶವು ಲಿಪ್ತವಾಗುವುದಿಲ್ಲವಲ್ಲವೇ! ಹಾಗೆಯೇ ಈ ಸತ್ತ್ವಮಯ, ರಜೋಮಯ ಮತ್ತು ತಮೋಮಯಶಕ್ತಿಗಳು ಪರಮಾತ್ಮನಿಂದ ಪ್ರಕಟಗೊಂಡು ಆತನಲ್ಲಿಯೇ ಕೆಲವೊಮ್ಮೆ ಲಯಹೊಂದು

---

* ಈ ಜಗತ್ತು ಸರ್ವಶಾಸ್ತ್ರಪ್ರಸಿದ್ಧವಾಗಿ ಸರ್ವೋಪಾಧಿರಹಿತವಾಗಿರುವ ಶ್ರೀಭಗವಂತನ ಸ್ವರೂಪವೇ ಆಗಿದೆ. ಸೂರ್ಯನ ಪ್ರಭೆಯು ಹೇಗೆ ಸೂರ್ಯನಿಂದ ಬೇರೆಯಲ್ಲವೋ– ಹಾಗೆಯೇ ಗಂಧರ್ವನಗರದಂತೆ ಕೆಲವೊಮ್ಮೆ ಪ್ರಕಾಶಿಸುವ ಈ ಜಗತ್ತು ಆ ಶ್ರೀಭಗವಂತನಿಂದ ಬೇರೆಯಲ್ಲ. ಇಂದ್ರಿಯಗಳು ಜಾಗ್ರದವಸ್ಥೆಯಲ್ಲಿ ಕ್ರಿಯಾಶೀಲ ವಾಗಿದ್ದರೂ ಸುಷುಪ್ತಿಯಲ್ಲಿ ಅವುಗಳ ಶಕ್ತಿಗಳು ಲಯಹೊಂದಿಬಿಡುವಂತೆ–ಈ ಜಗತ್ತು ಸೃಷ್ಟಿಕಾಲದಲ್ಲಿ ಶ್ರೀಭಗವಂತನಿಂದ ಪ್ರಕಟವಾಗಿ ಪ್ರಳಯಕಾಲಬಂದಾಗ ಆತನಲ್ಲಿಯೇ ಲಯಿಸಿಬಿಡುವುದು. ಸ್ವರೂಪದೃಷ್ಟಿಯಿಂದ ಹೇಳುವುದಾದರೆ–ಶ್ರೀಭಗವಂತನಲ್ಲಿ ದ್ರವ್ಯ, ಕ್ರಿಯೆ ಮತ್ತು ಜ್ಞಾನಗಳೆಂಬ ಮುಬ್ಬಗೆಯ ಅಹಂಕಾರಕಾರ್ಯಗಳಾಗಲೀ, ಅವುಗಳ ನಿಮಿತ್ತದಿಂದ ಉಂಟಾಗುವ ಭೇದಭ್ರಮದ ಇರುವಿಕೆಯಾಗಲೀ ಇಲ್ಲವೇ ಇಲ್ಲ. (ಶ್ರೀಧರೀಯ)

ಹಿಂದಿನ ಶ್ಲೋಕದಲ್ಲಿ ಪರಮಾತ್ಮನ ಸರ್ವಕಾರಣತ್ವವನ್ನು ಪ್ರತಿಪಾದಿಸಿ ಈ ಶ್ಲೋಕದಲ್ಲಿ ಆತನ ಸರ್ವಾತ್ಮತೆಯನ್ನು ನಿರೂಪಿಸಲಾಗಿದೆ. ಈ ಜಗತ್ತೆಂಬುದು ಪರಮಾತ್ಮನ ಶ್ರೇಷ್ಠವಾದ ವಾಸಸ್ಥಾನವಾಗಿದೆ ; ಆತನಿಗೆ ಶರೀರಭೂತವಾಗಿದೆ. ಸೂರ್ಯನ ಪ್ರಭೆಯು ಸೂರ್ಯನಿಂದ ಬೇರ್ಪಡದೇ ಆತನ ವಿಶೇಷಣವಾಗಿರುವಂತೆ–ಈ ಜಗತ್ತು ಪರಮಾತ್ಮನ ಅಪೃಥಕ್ ಸಿದ್ಧವಾದ ವಿಶೇಷಣವಾಗಿ ಆತನಿಗೆ ಶರೀರಭೂತವಾಗಿದೆ. ಸೃಷ್ಟಿಯಲ್ಲಿ ಸ್ಥೂಲವಾಗಿ ಬೆಳಕಿಗೆ ಬಂದು ಸಂಹಾರದಶೆಯಲ್ಲಿ ಸೂಕ್ಷ್ಮತಮವಾಗಿದ್ದು ಬೆಳಕಿಗೆ ಬಾರದೇ ಇರುವ ಈ ಜಗತ್ತು ಜಗದಾತ್ಮನಾದ ಆತನ ಶರೀರವಾಗಿದೆ. ಇಂದ್ರಿಯಗಳು ಜಾಗ್ರದವಸ್ಥೆಯಲ್ಲಿ ವ್ಯಾಪಾರ

ವುವು. ಈ ಗುಣಪ್ರವಾಹವು ಹೀಗೆಯೇ ಹರಿಯುತ್ತಿರುತ್ತದೆ. ಆದರೆ ಆಕಾಶದಂತೆ ಅಸಂಗನಾಗಿರುವ ಪರಮಾತ್ಮನಲ್ಲಿ ಯಾವ ವಿಕಾರವೂ ಉಂಟಾಗುವುದಿಲ್ಲ.

ತೇನೈಕಮಾತ್ಮಾನಮಶೇಷದೇಹಿನಾಂ
ಕಾಲಂ ಪ್ರಧಾನಂ ಪುರುಷಂ ಪರೇಶಮ್ ।
ಸ್ವತೇಜಸಾ ಧ್ವಸ್ತಗುಣಪ್ರವಾಹ-
ಮಾತ್ಮೈಕಭಾವೇನ ಭಜಧ್ವಮದ್ಧಾ ॥೧೯॥

ಆದುದರಿಂದ ನೀವು–ಬ್ರಹ್ಮಾದಿ ಸಕಲದೇಹಿಗಳಿಗೂ ಆತ್ಮನಾಗಿ, ಸ್ವಾಮಿಯಾಗಿ, ಕಾಲವೂ-ಪ್ರಕೃತಿಯೂ-ಪುರುಷನೂ-ಪರಮೇಶ್ವರನೂ ಆಗಿ ತನ್ನ ತೇಜಸ್ಸಿನಿಂದ ತ್ರಿಗುಣಪ್ರವಾಹವನ್ನು ಧ್ವಂಸಮಾಡುವ ತ್ರಿಗುಣಾತೀತನಾದ ಆ ಶ್ರೀಹರಿಯನ್ನೇ ಆತ್ಮೈಕಭಾವನೆಯಿಂದ ಸಾಕ್ಷಾತ್ತಾಗಿ ಭಜಿಸಿರಿ.*

ಮಾಡುತ್ತವೆ. ದ್ರವ್ಯ (ಪಂಚಭೂತಗಳು) ಮತ್ತು ಜ್ಞಾನೇಂದ್ರಿಯ–ಕರ್ಮೇಂದ್ರಿಯಗಳು ಇವುಗಳ ಸಂಘಟಿತವಾದ ದೇವ-ಮನುಷ್ಯಾದಿ ದೇಹಾತ್ಮಭ್ರಮೆಯನ್ನು ಮೀರಿರುವ ಸುಷುಪ್ತಿಯಲ್ಲಿ ಮರೆಯಾಗುತ್ತವೆ. ಹಾಗೆಯೇ ಈ ಜಗತ್ತು ಸೃಷ್ಟಿಯಲ್ಲಿ ಪ್ರಕಟಗೊಂಡು ಪ್ರಳಯದಲ್ಲಿ ಮರೆಯಾಗಿ ಕಾಣಿಸದೇ ಹೋಗುವುದು. ಜಗತ್ತು ಕಾಣಿಸಿಕೊಳ್ಳುವುದು ಮತ್ತು ಕಾಣಿಸಿಕೊಳ್ಳದೇ ಇರುವುದಕ್ಕೆ ಕಾರಣ ಅದರ ಆವಿರ್ಭಾವ (ಪ್ರಾಕಟ್ಯ) ಮತ್ತು ತಿರೋಧಾನ (ಅಪ್ರಾಕಟ್ಯ) ಗಳು ಕಾರಣವೇ ಹೊರತು ದ್ರವ್ಯದ ಅನಿತ್ಯತೆಯಲ್ಲ.
(ವೀರರಾಘವೀಯ)

* ಪರಮಾತ್ಮನೇ ಸರ್ವಕಾರಣನು. ನಿಮಿತ್ತಕಾರಣವಾದ ಕಾಲವೂ ಅವನೇ. ಉಪಾದಾನಕಾರಣವಾದ ಪ್ರಕೃತಿಯೂ ಆತನೇ. ಕರ್ತೃವಾದ ಪುರುಷನೂ ಆತನೇ. ಹೀಗೆ ತ್ರಿತಯಾತ್ಮಕನಾದ ಸರ್ವಕಾರಣನು ಶ್ರೀಹರಿ. (ಶ್ರೀಧರೀಯ)

ಪರಮಾತ್ಮನು 'ಕಾಲ'–ಎಂದರೆ : ಕಾಲಶರೀರಕ. 'ಪ್ರಧಾನ'–ಎಂದರೆ : ಪ್ರಕೃತಿಶರೀರಕ ಮತ್ತು 'ಪುರುಷ'–ಎಂದರೆ : ಜೀವಶರೀರಕನು. ಸ್ವಪ್ರಕಾಶದಿಂದ ಗುಣಪ್ರವಾಹವನ್ನು ಧ್ವಂಸಮಾಡಿದವನು ಪರಮಾತ್ಮ. ಶ್ರೀಭಗವಂತನು ಪ್ರಕೃತಿಗೆ ನಿಯಾಮಕನಾಗಿರುವುದರಿಂದ ಆತನಿಗೆ ಪ್ರಕೃತಿಸಂಬಂಧವೇ ಹೊರತು ಜೀವನಂತೆ ಪ್ರಕೃತಿವಶತ್ವದಿಂದಲ್ಲ..... ಆತ್ಮೈಕಭಾವೇನ–ಸರ್ವಾತ್ಮಕನೆಂಬ ಭಾವದಿಂದ ಎಲ್ಲ ಆತ್ಮಗಳಿಗೂ ಆತನೊಬ್ಬನೇ ಅಂತರಾತ್ಮನು ಎಂಬ ಭಾವದಿಂದ. (ವೀರರಾಘವೀಯ)

ದಯಯಾ ಸರ್ವಭೂತೇಷು ಸನ್ತುಷ್ಟ್ಯಾ ಯೇನ ಕೇನ ವಾ ।
ಸರ್ವೇನ್ದ್ರಿಯೋಪಶಾನ್ತ್ಯಾ ಚ ತುಷ್ಯತ್ಯಾಶು ಜನಾರ್ದನಃ ॥೧೯॥

ಸಮಸ್ತಭೂತಗಳಲ್ಲಿಯೂ ದಯೆಯನ್ನು ತೋರುವಿಕೆ, ಏನು ಸಿಕ್ಕುತ್ತದೆಯೋ ಎಷ್ಟು ಸಿಕ್ಕುತ್ತದೆಯೋ ಅದರಿಂದಲೇ–ಅಷ್ಟರಿಂದಲೇ ಸಂತೋಷಪಡುವಿಕೆ ಮತ್ತು ಸರ್ವೇಂದ್ರಿಯಗಳನ್ನೂ ವಿಷಯಗಳಿಂದ ಹಿಂದಿರುಗಿಸಿ ಶಾಂತಗೊಳಿಸುವಿಕೆ–ಈ ಮೂರನ್ನು ಬೆಳೆಸಿಕೊಂಡರೆ ಶೀಘ್ರದಲ್ಲಿಯೇ ಶ್ರೀಜನಾರ್ದನನು ಪ್ರಸನ್ನನಾಗುತ್ತಾನೆ.*

ಅಪಹತಸಕಲೈಷಣಾಮಲಾತ್ಮ–
ನ್ಯವಿರತಮೇಧಿತಭಾವನೋಪಹೂತಃ ।

ಮುಖ್ಯಪ್ರಾಣನ ಅನುಗ್ರಹದಿಂದ ಇಂದ್ರಿಯಗಳು ಜ್ಞಾನಕ್ಕೋಸ್ಕರ ಪುರುಷನನ್ನು ಎಚ್ಚರಿಸುವ ಉದ್ಯೋಗವನ್ನು ಮಾಡಿದಾಗ ಎಚ್ಚರಗೊಂಡ ಯೋಗಿಗೆ ಜ್ಞಾನವುಂಟಾಗಿ ದ್ರವ್ಯಾದಿ ಭ್ರಮೆಯು ತೊಲಗಿ ಭಗವತ್ಸ್ವರೂಪವು ಪ್ರಕಾಶಿಸುತ್ತದೆ. ಸೂರ್ಯನ ಪ್ರಭೆಯು ಸೂಕ್ಷ್ಮವಾಗಿದ್ದರೂ ಸಕಲಪದಾರ್ಥಗಳನ್ನೂ ಬೆಳಗಿಸುವಂತೆ–ಆ ಜ್ಞಾನವು ಜಗದಾತ್ಮನಾದ ಶ್ರೀಹರಿಯ ಪಾದ (ಸ್ಥಾನ) ವನ್ನು ಬೆಳಗಿಸುವುದು. ಇಲ್ಲಿ ದ್ರವ್ಯಭ್ರಮೆ ಎಂದರೆ : ದೇಹಾತ್ಮಭಾವಭ್ರಮೆ. 'ನಾನೇ ಕರ್ತೃವು' ಎಂಬುದು ಕ್ರಿಯಾಭ್ರಮೆ ಮತ್ತು 'ಈ ಇಂದ್ರಿಯಗಳು ನನ್ನವು' ಎಂಬುದು ಕಾರಕಭ್ರಮೆ. ಈ ಮುಬ್ಬಗೆಯ ಭ್ರಮೆಗಳು ತೊಲಗಿದಾಗ ಉಪನಿಷದ್ವೇದ್ಯನಾದ ಪ್ರಪಂಚಸ್ವಾಮಿಯಾದ ಶ್ರೀಹರಿಯ ಪದವು ಬೆಳಕಿಗೆ ಬರುವುದು.
(ವಿಜಯಧ್ವಜೀಯ) (ಶ್ಲೋಕ ೧೬)

ಆತ್ಮೈಕಭಾವೇನ–ವಿಷ್ಣುವೊಬ್ಬನೇ ಪೂರ್ಣನು ; ಬೇರಾವನೂ ಇಲ್ಲ ಎಂಬ ಲಕ್ಷಣದ ಆತ್ಮೈಕಭಾವನೆಯಿಂದ, ಆತ್ಮೈಕಭಾವ ಎಂದರೆ : ಆತ್ಮೈಕ್ಯವಲ್ಲ. 'ಪೂರ್ಣೋ ವಿಷ್ಣುಃ ಸ ಏವೈಕಃ ಇತಿ ಭಾವೋ ಯ ಈರಿತಃ । ಆತ್ಮೈಕಭಾವ ಇತಿ ತಂ ವಿದುರ್ಬ್ರಹ್ಮಾತ್ಮದರ್ಶಿನಃ ॥ ' ಎಂಬ ವಚನದಂತೆ 'ವಿಷ್ಣುವೊಬ್ಬನೇ ಪೂರ್ಣನು' ಎಂಬುದೇ ಆತ್ಮೈಕಭಾವನೆಯು. (ವಿಜಯಧ್ವಜೀಯ) (ಶ್ಲೋಕ ೧೮)

---

* ನಿರಸ್ತಸಙ್ಕಲ್ಪವಿಕಲ್ಪಮದ್ವಯಂ ದ್ವಯಾಪವಾದೋ ಪರಮೋಪಲಂಭನಮ್ । ಅನಾದಿಮಧ್ಯಾನ್ತಮಜಸ್ರನಿರ್ವೃತಿಂ ಸಂಜ್ಞಪ್ತಿಮಾತ್ರಂ ಭಜತಾಮುಯಾ ದೃಶಾ ॥ ಎಂದು ಅತಿರಿಕ್ತಶ್ಲೋಕವನ್ನು ವೀರರಾಘವೀಯ-ವಿಜಯಧ್ವಜೀಯ ಪಾಠಗಳಲ್ಲಿ ನೋಡುತ್ತೇವೆ.
(ಶ್ಲೋಕ ೧೯)

ನಿಜಜನವಶಗತ್ವಮಾತ್ಮನೋಽಯ-
ನ್ನ ಸರತಿ ಛಿದ್ರವದಕ್ಷರಃ ಸತಾಂ ಹಿ ॥೨೦॥

ಅಕ್ಷರನಾದ (ಅವಿನಾಶಿಯಾದ) ಶ್ರೀಹರಿಯು–ಯಾರ ಅಂತಃಕರಣವು ಹೆಂಡತಿಯ ಆಸೆ, ಹಣದ ಆಸೆಗಳೇ ಮುಂತಾದ ಕಾಮನೆಗಳ ವಾಸನೆಗಳು ತೊಡೆದುಹೋಗಿರುವುದರಿಂದ ಪರಿಶುದ್ಧವಾಗಿದೆಯೋ–ಅಂತಹ ಸಂತರ ಹೃದಯಕ್ಕೆ ನಿರಂತರವಾಗಿ ವೃದ್ಧಿಹೊಂದುತ್ತಿರುವ ಧ್ಯಾನದಿಂದ ಸೆಳೆಯಲ್ಪಟ್ಟವನಾಗಿ ದಯಮಾಡಿಸಿ, ತಾನು ಭಕ್ತಪರಾಧೀನನೆಂಬುದನ್ನು ಅನ್ವರ್ಥಗೊಳಿಸುತ್ತಾ ಹೃದಯಾಕಾಶದಂತೆ ಅಲ್ಲಿಂದ ಸರಿಯದೇ ಅಲ್ಲಿಯೇ ನೆಲೆಗೊಳ್ಳುವನು.

ನ ಭಜತಿ ಕುಮನೀಷಿಣಾಂ ಸ ಇಜ್ಯಾಂ
ಹರಿರಧನಾತ್ಮಧನಪ್ರಿಯೋ ರಸಜ್ಞಃ ।
ಶ್ರುತಧನಕುಲಕರ್ಮಣಾಂ ಮದೈರ್ಯೇ
ವಿದಧತಿ ಪಾಪಮಕಿಞ್ಚನೇಷು ಸತ್ಸು ॥೨೧॥

ಆ ಭಗವಂತನು ತನ್ನನ್ನೇ (ಭಗವಂತನನ್ನೇ) ಸರ್ವಸ್ವವೆಂದು ಭಾವಿಸುವ, ಭೌತಿಕಶ್ರೀಮಂತಿಕೆಯಿಲ್ಲದ ಮನುಷ್ಯರ ಮೇಲೆಯೇ ಪ್ರೀತಿಯನ್ನು ತೋರಿಸುತ್ತಾನೆ. ಉಳಿದ ಧನವಿಲ್ಲದ, ಆತ್ಮಧನರೇ ಆಗಿರುವವರ ಮೇಲೆಯೇ ಯಾವಾಗಲೂ ಆತನ ಪ್ರೇಮವು ಹರಿಯುವುದು. ಏಕೆಂದರೆ : ಆತನು ಪರಮರಸಜ್ಞನು. ನಿರ್ವ್ಯಾಜಭಕ್ತಿಯುಳ್ಳ ಆ ಅನನ್ಯಭಕ್ತರ ಭಕ್ತಿಯಲ್ಲಿ ಎಷ್ಟು ಮಾಧುರ್ಯವಿದೆಯೆಂಬುದನ್ನು ಆತನು ಚೆನ್ನಾಗಿ ಬಲ್ಲನು. ವಿದ್ಯಾ ಮದ, ಧನಮದ, ಕುಲಮದ ಮತ್ತು ಕರ್ಮಮದ–ಇವುಗಳಿಂದ ಕೊಬ್ಬಿ ಅಕಿಂಚನರಾದ ಸಾಧುಜನರನ್ನು ತಿರಸ್ಕಾರಮಾಡುವ, ಸಾಧುಗಳಲ್ಲಿ ಪಾಪವನ್ನು ಆಚರಿಸುವ ದುರ್ಬುದ್ಧಿಗಳ ಪೂಜೆಯನ್ನು ಆತನು ಸ್ವೀಕರಿಸುವುದೇ ಇಲ್ಲ.

ಶ್ರಿಯಮನುಚರತೀಂ ತದರ್ಥಿನಶ್ಚ
ದ್ವಿಪದಪತೀನ್ವಿಬುಧಾಂಶ್ಚ ಯತ್ಸ್ವಪೂರ್ಣಃ ।
ನ ಭಜತಿ ನಿಜಭೃತ್ಯವರ್ಗತನ್ತ್ರಃ
ಕಥಮಮುಮುದ್ವಿಸೃಜೇತ್ಪುಮಾನ್ ಕೃತಜ್ಞಃ ॥೨೨॥

ಭಗವಂತನಾದ ಶ್ರೀಹರಿಯು ಆಪ್ತಕಾಮನೂ–ಸ್ವಾನಂದಪರಿಪೂರ್ಣನೂ ಆಗಿರುವುದರಿಂದ ಆತನು ತನ್ನನ್ನು ನಿರಂತರವಾಗಿ ಸೇವಿಸುತ್ತಿರುವ ಶ್ರೀಲಕ್ಷ್ಮೀದೇವಿಯನ್ನಾಗಲೀ, ಆ ಸಂಪತ್ತನ್ನು ಬಯಸುವ ರಾಜರನ್ನಾಗಲೀ ಅಥವಾ ದೇವತೆಗಳನ್ನೇ ಆಗಲೀ–ಯಾರನ್ನೂ ಅಪೇಕ್ಷಿಸಿ ಸೇವಿಸುವುದಿಲ್ಲ. ಅವನಿಗೆ ಯಾರಿಂದಲೂ ಏನೂ ಆಗಬೇಕಾಗಿಲ್ಲ. ಆದರೂ ಅವನು ತನ್ನ ಭಕ್ತರಿಗೆ ಮಾತ್ರ ಅಧೀನನಾಗಿದ್ದಾನೆ. ಆಹಾ! ಇಂತಹ ಕರುಣಾಸಾಗರನಾದ ಸ್ವಾಮಿಯನ್ನು–ಕೃತಜ್ಞನಾದ ಯಾವ ಮನುಷ್ಯನು ತಾನೇ–ಸ್ವಲ್ಪಹೊತ್ತಾದರೂ ಬಿಟ್ಟಿರಲು ಸಾಧ್ಯವಾಗುವುದು?"*

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

"ಭಗವಂತರಾದ ನಾರದಮಹರ್ಷಿಗಳು ಪ್ರಚೇತಸರಿಗೆ ಹೀಗೆ ಉಪದೇಶಮಾಡಿ ಇನ್ನೂ ಅನೇಕ ಭಗವತ್ಕಥೆಗಳನ್ನೂ ಅವರಿಗೆ ಹೇಳಿದರು. ಅನಂತರ ಅವರು ಬ್ರಹ್ಮಲೋಕಕ್ಕೆ ಹೊರಟುಹೋದರು. ಪ್ರಚೇತಸರೂ ಕೂಡ ಆ ಮಹರ್ಷಿಗಳ ಮುಖಕಮಲದಿಂದ ಜಗತ್ತಿನ ಸರ್ವಪಾಪಗಳನ್ನೂ ತೊಳೆದುಹಾಕುವ ಭಗವಚ್ಚರಿತ್ರೆಗಳನ್ನು ಕೇಳಿ ಶ್ರೀಭಗವಂತನ ಅಡಿದಾವರೆ

---

* ನಿಜಭೃತ್ಯವರ್ಗತಂತ್ರಃ –ಎಂಬ ಪದವು ಜಯಸ್ತಂಭದ ಪ್ರಕಟಣೆಗೋಸ್ಕರ ಕೊಡಲ್ಪಟ್ಟಿದೆಯೆಂದು ತಿಳಿಯಬೇಕು. ಇಲ್ಲದಿದ್ದರೆ ಶ್ರೀಲಕ್ಷ್ಮೀದೇವಿಯೇ ಮುಂತಾದವರನ್ನು ಅವರು ಭಕ್ತರೇ ಅಲ್ಲ ಎಂದು ಪ್ರತ್ಯೇಕಿಸುವ ಪ್ರಸಂಗವು ಬರುವುದು. ಅದು ಯುಕ್ತವಲ್ಲ. ತನ್ನ ಮನದಲ್ಲಿ ತುಲಸಿಗಳಿಂದ ಪರಮಾತ್ಮನನ್ನು ಅರ್ಚಿಸುತ್ತೇನೆ–ಎಂಬಲ್ಲಿ ಸುಖಾತ್ಮಕಭಕ್ತಿಯಿಂದ ಶ್ರೀಲಕ್ಷ್ಮೀದೇವಿಯ ಪೂಜಾವಿಧಾನವು ಹೇಳಲ್ಪಟ್ಟಿದೆಯೆಂಬುದನ್ನು ಗಮನಿಸಬೇಕು. ಈ ಶ್ಲೋಕದನಂತರ : **ಭವತಾಂ ವಂಶಧುರ್ಯೋಽಟಿಭೂತ್ ಧ್ರುವಶ್ಚಿತ್ರರಥಃ ಸ್ವರಾಟ್ । ಗುರುದಾರವಚೋಬಾಣೈಃ ನಿರ್ಭಿನ್ನಹೃದಯೋಽರ್ಭಕಃ॥ ತ್ಯಕ್ತ್ವಾ ಸ್ತ್ರೈಣಂ ಚ ತಂ ಗಚ್ಛನ್ ದೃಷ್ಟೋ ಮೇ ಪಥ್ಯುದಾರಧೀಃ । ಪಞ್ಚವರ್ಷೋ ಮದಾದೇಶೈಃ ಸಂರಾಧ್ಯ ಪುರುಷೇಶ್ವರಮ್ ॥ ತತ್ಪರಂ ಸರ್ವಧಿಷ್ಣ್ಯೇಭ್ಯೋ ಮಾಯಾಧಿಷ್ಠಿತಮಾರುಹತ್ । ಮುನಯೋಽದ್ಯಾಪ್ಯುದೀಕ್ಷನ್ತೇ ಪರಂ ನಾ ಪುರವಾಜ್ ನೃಪಾಃ । ತಂ ಯೂಯಂ ಸರ್ವಭೂತಾನಾಮನ್ತರ್ಯಾಮಿಣ - ಮೀಶ್ವರಮ್ । ರುದ್ರಾದಿಷ್ಟೋಪದೇಶೇನ ಭಜಧ್ವಂ ಭವನುತ್ತಯೇ॥** ಎಂಬ ಈ ನಾಲ್ಕು ಶ್ಲೋಕಗಳು ವಿಜಯಧ್ವಜೀಯಪಾಠದಲ್ಲಿ ಕಂಡುಬರುತ್ತವೆ. (ಶ್ಲೋಕ ೨೨)

ಗಳನ್ನು ಧ್ಯಾನಿಸತೊಡಗಲಾಗಿ–ಕೊನೆಗೆ ಅವರು ಭಗವಂತನ ಧಾಮವನ್ನೂ ಸೇರಿಕೊಂಡುಬಿಟ್ಟರು. ಹೀಗೆ ನಾನು ನಿನಗೆ ನಿನ್ನ ಕೇಳಿಕೆಯಂತೆ ಶ್ರೀನಾರದರು ಮತ್ತು ಪ್ರಚೇತಸರಿಗೆ ನಡೆದ ಭಗವತ್ಕಥಾರೂಪವಾದ ಸಂಭಾಷಣೆಯನ್ನು ತಿಳಿಸಿದ್ದೇನಪ್ಪಾ, ವಿದುರ!"

ಶ್ರೀಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಹೇಳುತ್ತಾರೆ :

"ರಾಜೇಂದ್ರನೇ! ಇಲ್ಲಿಯವರೆಗೆ ನಾನು ನಿನಗೆ ಸ್ವಾಯಂಭುವಮನುವಿನ ಸುಪುತ್ರನಾದ ಉತ್ತಾನಪಾದನ ವಂಶವನ್ನು ವರ್ಣನೆಮಾಡಿದೆನು. ಇನ್ನು ಮುಂದೆ ಆತನ ಮತ್ತೊಬ್ಬ ಸುಪುತ್ರ ಪ್ರಿಯವ್ರತನ ವಂಶವನ್ನೂ ವರ್ಣಿಸುತ್ತೇನೆ; ಕೇಳು :

ಪ್ರಿಯವ್ರತಮಹಾರಾಜನು ಶ್ರೀನಾರದಮಹರ್ಷಿಗಳಿಂದ ಆತ್ಮಜ್ಞಾನದ ಉಪದೇಶವನ್ನು ಪಡೆದರೂ ಕೂಡ ಭೂಮಿಯನ್ನು ಆಳುತ್ತಾ ರಾಜ್ಯ ಸೌಖ್ಯವನ್ನು ಕೆಲಕಾಲ ಅನುಭವಿಸಿದನು. ಕೊನೆಗೆ ಇಡೀ ಭೂಮಿಯನ್ನು ತನ್ನ ಸುಪುತ್ರರಿಗೆ ಹಂಚಿಕೊಟ್ಟು ಶ್ರೀಭಗವಂತನ ಪರಮಧಾಮವನ್ನು ಹೊಂದಿಬಿಟ್ಟನು. ನೃಪಶ್ರೇಷ್ಠನೇ! ಮೈತ್ರೇಯಮಹರ್ಷಿಗಳ ಬಾಯಿಂದ ಶ್ರೀಭಗವಂತನ ಕಲ್ಯಾಣಗುಣಗಳ ಅನುವಾದದಿಂದ ಕೂಡಿದ ಪವಿತ್ರತಮವಾದ ಕಥೆಯನ್ನು ಕೇಳಿ ಭಾಗವತೋತ್ತಮನಾದ ವಿದುರನಿಗೆ ಭಕ್ತಿಭಾವವು ಉಕ್ಕೇರಿ ಬಂದು ಆತನ ಕಣ್ಣುಗಳಿಂದ ಪವಿತ್ರವಾದ ಕಣ್ಣೀರಿನ ಧಾರೆ ಹರಿದು ಬರತೊಡಗಿತು. ಆ ಮಹಾತ್ಮನು ಹೃದಯದಲ್ಲಿ ಭಗವಂತನ ಶ್ರೀಚರಣಗಳನ್ನು ನೆನೆಯುತ್ತಾ ತನ್ನ ತಲೆಯನ್ನು ಮೈತ್ರೇಯರ ಅಡಿದಾವರೆಗಳಲ್ಲಿರಿಸಿ ಹೀಗೆ ವಿಜ್ಞಾಪಿಸಿದನು :

"ಮಹಾಯೋಗಿವರ್ಯರೇ! ತಾವು ಎಂತಹ ಕರುಣಾಮಯರು! ಇಂದು ತಾವು ನನ್ನನ್ನು ಭೌತಿಕಸಂಪತ್ತಿಲ್ಲದ, ಅಕಿಂಚನರಿಗೆ ಸರ್ವಸ್ವವಾಗಿರುವ, ಶ್ರೀಹರಿಯು ಬೆಳಗುತ್ತಿರುವ ಅಜ್ಞಾನಾಂಧಕಾರದ ದಡವನ್ನು ಮುಟ್ಟಿಸಿದಿರಲ್ಲಾ!"

ಶುಕಮಹರ್ಷಿಗಳು ಹೇಳುತ್ತಾರೆ :

"ಪರೀಕ್ಷಿತ! ಪ್ರಭುವೇ! ಭಾಗವತೋತ್ತಮನಾದ ವಿದುರನು

ಮೈತ್ರೇಯರಲ್ಲಿ ಹೀಗೆ ಕೃತಜ್ಞತಾಪೂರ್ಣವಾದ ಮಾತುಗಳನ್ನು ಅರಿಕೆ ಮಾಡಿಕೊಂಡು ಅವರಿಗೆ ನಮಸ್ಕರಿಸಿ, ಅವರ ಅಪ್ಪಣೆಯನ್ನು ಪಡೆದು ಪ್ರಶಾಂತಚಿತ್ತನಾಗಿ ತನ್ನ ಬಂಧುಜನರನ್ನು ನೋಡಲು ಹಸ್ತಿನಾಪುರಕ್ಕೆ ಹೊರಟುಹೋದನು. (ಶ್ಲೋಕ 23-30)

ಏತದ್ಯಃ ಶೃಣುಯಾದ್ರಾಜನ್ರಾಜ್ಞಾಂ ಹರ್ಯರ್ಪಿತಾತ್ಮನಾಮ್ ।
ಆಯುರ್ಧನಂ ಯಶಃ ಸ್ವಸ್ತಿ ಗತಿಮೈಶ್ವರ್ಯಮಾಪ್ನುಯಾತ್ ॥

ನೃಪತಿಶ್ರೇಷ್ಠನೇ! ಶ್ರೀಹರಿಗೆ ತಮ್ಮನ್ನು ಸಮರ್ಪಣೆಮಾಡಿಕೊಂಡ ಭಕ್ತಶ್ರೇಷ್ಠರಾದ ಈ ರಾಜರ ಪವಿತ್ರವಾದ ಚರಿತ್ರೆಯನ್ನು ಕೇಳುವ ಸುಕೃತಿಯಾದ ಮನುಷ್ಯನು ದೀರ್ಘಾಯುಸ್ಸು, ಧನ, ಕೀರ್ತಿ, ಕ್ಷೇಮ, ಸದ್ಗತಿ ಮತ್ತು ಐಶ್ವರ್ಯಗಳನ್ನ ಪಡೆಯುವನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಚತುರ್ಥಸ್ಕಂಧದ ೩೧ನೆಯ ಅಧ್ಯಾಯವು ಮುಗಿಯಿತು.

--

ಚತುರ್ಥಸ್ಕಂಧವು ಮುಗಿಯಿತು.

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವನ್ತು ॥

ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ।
ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸನ್ತು ನಿರ್ಭಯಾಃ ॥

ಅಪುತ್ರಾಃ ಪುತ್ರಿಣಃ ಸನ್ತು ಪುತ್ರಿಣಃ ಸನ್ತು ಪೌತ್ರಿಣಃ ।
ಅಧನಾಃ ಸಧನಾಃ ಸನ್ತು ಜೀವನ್ತು ಶರದಾಂ ಶತಮ್ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತು ತೇ ॥

ಶ್ರೀಕೃಷ್ಣಾರ್ಪಣಮಸ್ತು ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು
ಓಂ ತತ್ಸತ್

ಶ್ರೀಮಹಾಗಣಪತಯೇ ನಮಃ ಶ್ರೀಮಹಾಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ॐ

ಶ್ರೀಮದ್ಭಾಗವತ

ಜನ್ಮಾದ್ಯಸ್ಯ ಯತೋಽನ್ವಯಾದಿತರತಶ್ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮ ಹೃದಾ ಯ ಆದಿಕವಯೇ ಮುಹ್ಯನ್ತಿ ಯತ್ಸೂರಯಃ ।
ತೇಜೋವಾರಿಮೃದಾಂ ಯಥಾ ವಿನಿಮಯೋ ಯತ್ರ ತ್ರಿಸರ್ಗೋಽಮೃಷಾ
ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ ಸತ್ಯಂ ಪರಂ ಧೀಮಹಿ ॥

ಪಂಚಮಸ್ಕಂಧ ೧ನೆಯ ಅಧ್ಯಾಯ

ಪ್ರಿಯವ್ರತನ ಚರಿತ್ರೆ

ಪ್ರಿಯವ್ರತಮಹಾರಾಜನು ಅಧ್ಯಾತ್ಮವಿದ್ಯೆಯನ್ನು ಪಡೆದನಂತರ ಚಕ್ರವರ್ತಿಯಾಗಿ ಭೂಮಂಡಲವನ್ನು ಆಳುತ್ತಿದ್ದು ಕಡೆಗೆ ವೈರಾಗ್ಯದಿಂದ ಮುಕ್ತಿಯನ್ನು ಪಡೆದನು–ಎಂದು ಶುಕಮಹರ್ಷಿಗಳು ಹೇಳಿದುದನ್ನು ಕೇಳಿ ಪರೀಕ್ಷಿದ್ರಾಜರನಿಗೆ ಅಚ್ಚರಿಯಾಯಿತು. ಆ ಬಗೆಗೆ ಮನಸ್ಸಿನಲ್ಲಿ ಉಂಟಾದ ಸಂಶಯವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಆತನು ಮಹರ್ಷಿಗಳು ಹೀಗೆ ಅರಿಕೆಮಾಡಿಕೊಂಡನು :

ಪ್ರಿಯವ್ರತೋ ಭಾಗವತಃ ಆತ್ಮಾರಾಮಃ ಕಥಂ ಮುನೇ ।
ಗೃಹೇಽರಮತ ಯನ್ಮೂಲಃ ಕರ್ಮಬನ್ಧಃ ಪರಾಭವಃ ॥೧॥

“ಮಹಾತ್ಮರೇ! ಗೃಹಸ್ಥಾಶ್ರಮದಲ್ಲಿ ಸಿಕ್ಕಿಹಾಕಿಕೊಂಡ ಮನುಷ್ಯನು ಸ್ವಸ್ವರೂಪವನ್ನು ಮರೆತು ಕರ್ಮಗಳ ಕಟ್ಟಿಗೆ ಸಿಲುಕಿಕೊಳ್ಳುವನು. ಹೀಗಿರುವಾಗ ಪರಮಭಾಗವತೋತ್ತಮನೂ, ಆತ್ಮಾರಾಮನೂ ಆಗಿದ್ದ ಪ್ರಿಯವ್ರತಮಹಾರಾಜನಿಗೆ ಆ ಆಶ್ರಮದಲ್ಲಿ ಅಭಿರುಚಿಯು ಹೇಗೆ ಉಂಟಾಯಿತು ?

ಬ್ರಹ್ಮರ್ಷಿಶ್ರೇಷ್ಠರೇ! ಇಂತಹ ನಿಸ್ಸಂಗರಾದ ಮಹಾಪುರುಷರಿಗೆ ಹೀಗೆ

ಗೃಹಸ್ಥಾಶ್ರಮದಲ್ಲಿ ಆಸಕ್ತಿಯುಂಟಾಗುವುದು ನಿಶ್ಚಯವಾಗಿಯೂ ಉಚಿತ ವಲ್ಲ. ಪುಣ್ಯಕೀರ್ತಿಯಾದ ಶ್ರೀಹರಿಯ ಚರಣಾರವಿಂದಗಳ ಶೀತಲವಾದ ನೆರಳಿನಲ್ಲಿ ಆಸರೆಪಡೆದು ಪ್ರಶಾಂತವಾದ ಚಿತ್ತವುಳ್ಳ ಮಹಾಪುರುಷರಿಗೆ ಕುಟುಂಬವೇ ಮುಂತಾದುವುಗಳಲ್ಲಿ ಎಂದಿಗೂ ಅಭಿನಿವೇಶ-ಆಸಕ್ತಿಗಳು ಉಂಟಾಗುವುದಿಲ್ಲ. ಈ ವಿಷಯದಲ್ಲಿ ಯಾವ ಸಂದೇಹವೂ ಇಲ್ಲ. ಹೀಗಿರು ವಾಗ ಪ್ರಿಯವ್ರತಮಹಾರಾಜನು ಹೆಂಡಿರು-ಮಕ್ಕಳು-ಮನೆಗಳೇ ಮುಂತಾ ದುವುಗಳಲ್ಲಿ ಆಸಕ್ತನಾಗಿದ್ದರೂ ಹೇಗೆ ಸಿದ್ಧಿಯನ್ನು ಪಡೆದನು? ಆತನಿಗೆ ಶ್ರೀಕೃಷ್ಣಪರಮಾತ್ಮನಲ್ಲಿ ನಿಶ್ಚಲವಾದ ಭಕ್ತಿಯು ಹೇಗೆ ಉಂಟಾಯಿತು? ಈ ಎಲ್ಲ ವಿಷಯಗಳ ಬಗೆಗೆ ನನಗೆ ಸಂದೇಹವುಂಟಾಗಿದೆ. ತಾವು ಕೃಪೆಯಿಟ್ಟು ಅದನ್ನು ಪರಿಹರಿಸಬೇಕು."

ಶುಕಮಹರ್ಷಿಗಳು ಆತನಿಗೆ ಹೇಳುತ್ತಾರೆ :

"ಮಹಾರಾಜ! ನೀನು ಹೇಳಿದುದು ಸರಿಯಾಗಿಯೇ ಇದೆ. ಆದರೆ ನೀನು ಒಂದು ವಿಷಯವನ್ನು ಗಮನಿಸಬೇಕು. ಯಾರ ಚಿತ್ತವು ಪುಣ್ಯಕೀರ್ತಿ ಯಾದ ಶ್ರೀಹರಿಯ ಪರಮಮಧುರವಾದ ಚರಣಕಮಲಗಳ ಮಕರಂದ ರಸವನ್ನು ಸವಿಯುವುದರಲ್ಲಿಯೇ ತತ್ಪರವಾಗಿದೆಯೋ–ಅವರು ಯಾವು ದಾದರೂ ಅಡ್ಡಿ-ಆತಂಕಗಳಿಂದ ತಡೆಯುಂಟಾದರೂ ಕೂಡ ಭಗವದ್ಭಕ್ತ ಶಿರೋಮಣಿಗಳಾದ ಪರಮಹಂಸರಿಗೆ ಪ್ರಿಯನಾಗಿರುವ ಭಗವಂತನಾದ ಶ್ರೀವಾಸುದೇವನ ಕಥಾಶ್ರವಣವೆಂಬ ಪರಮಕಲ್ಯಾಣಮಯವಾದ ಮಾರ್ಗ ವನ್ನು ಸಾಮಾನ್ಯವಾಗಿ ಬಿಡಲಾರರು. ಎಲೈ ರಾಜನೇ! ಆ ರಾಜಕುಮಾರ ನಾದ ಪ್ರಿಯವ್ರತನು ಪರಮಭಾಗವತೋತ್ತಮನು. ಶ್ರೀನಾರದಮಹರ್ಷಿ ಗಳ ಅಡಿದಾವರೆಗಳನ್ನು ಸೇವೆಮಾಡಿದ್ದರಿಂದ ಸಹಜವಾಗಿಯೇ ಪರಮಾರ್ಥ ತತ್ತ್ವದ ಜ್ಞಾನವು ಆತನಿಗೆ ಉಂಟಾಗಿತ್ತು. ಅದರಿಂದ ಅವನು ನಿರಂತರವಾಗಿ ಬ್ರಹ್ಮಾಭ್ಯಾಸದಲ್ಲಿ ಜೀವನವನ್ನು ಕಳೆಯುವ ನಿಯಮವುಳ್ಳ ಬ್ರಹ್ಮಸತ್ರವೆಂಬ ಅಧ್ಯಾತ್ಮದೀಕ್ಷೆಯನ್ನು ಇನ್ನೇನು ತೆಗೆದುಕೊಳ್ಳಬೇಕು ಎನ್ನುವಷ್ಟರಲ್ಲಿ–ಆತನ ತಂದೆ ಸ್ವಾಯಂಭುವಮನುವು ಆತನಲ್ಲಿ ಭೂಮಂಡಲವನ್ನು ಪಾಲಿಸಲು ಬೇಕಾದ ಎಲ್ಲ ಶ್ರೇಷ್ಠಗುಣಗಳೂ ಇರುವುದನ್ನು ಗಮನಿಸಿ 'ನೀನು ರಾಜನಾಗಿ ರಾಜ್ಯವನ್ನಾಳಬೇಕು'–ಎಂದು ಆತನಿಗೆ ಆಜ್ಞೆಯನ್ನಿತ್ತನು. ಆದರೆ

ಪ್ರಿಯವ್ರತನು ಆಗಲೇ ಅಖಂಡವಾದ ಸಮಾಧಿಯೋಗದ ಮೂಲಕ ತನ್ನ ಎಲ್ಲ ಇಂದ್ರಿಯಗಳನ್ನೂ ಮತ್ತು ಕ್ರಿಯೆಗಳನ್ನೂ ಭಗವಂತನಾದ ಶ್ರೀವಾಸುದೇವನ ಚರಣಗಳಲ್ಲಿ ಸಮರ್ಪಿಸಿಬಿಟ್ಟಿದ್ದನು. ಆದುದರಿಂದ ಆತನು ತಂದೆಯ ಆಜ್ಞೆಯನ್ನು ಉಲ್ಲಂಘಿಸುವುದು ಅನುಚಿತವಾಗಿದ್ದರೂ ರಾಜಪದವಿಯನ್ನು ಸ್ವೀಕರಿಸಲಿಲ್ಲ. ರಾಜ್ಯಾಧಿಕಾರವು ಬಂದೊಡನೆಯೇ ಹೆಂಡಿರು-ಮಕ್ಕಳೇ ಮುಂತಾದ ಅಸತ್ಪ್ರಪಂಚವು ಆತ್ಮಸ್ವರೂಪವನ್ನು ಮುಚ್ಚಿಬಿಡುವುದು ; ಆ ಚಿಂತೆಯಲ್ಲಿ ಪರಮಾರ್ಥತತ್ತ್ವವು ಮರೆತುಹೋಗುವುದು–ಎಂದು ಭಾವಿಸಿ ಆ ಪದವಿಯನ್ನು ನಿರಾಕರಿಸಿದನು. ಅನಂತರ ಈ ಗುಣಮಯವಾದ ಪ್ರಪಂಚವನ್ನು ಬೆಳೆಯಿಸಬೇಕೆಂಬ ವಿಚಾರವನ್ನೇ ಸದಾ ವಿಚಾರಮಾಡುತ್ತಿರುವ, ಎಲ್ಲ ಜೀವಗಳ ಅಭಿಪ್ರಾಯವನ್ನೂ ಬಲ್ಲವರಾದ ಭಗವಂತರಾದ ಬ್ರಹ್ಮದೇವರಿಗೆ ಆ ಪ್ರಿಯವ್ರತನ ಮನಃಪ್ರವೃತ್ತಿಯೇ ನೆಂಬುದು ತಿಳಿಯಿತು. ಆಗ ಅವರು ಮೂರ್ತಾಕಾರವನ್ನು ತಳೆದ ನಾಲ್ಕು ವೇದಗಳಿಂದಲೂ, ಮರೀಚಿಯೇ ಮುಂತಾದ ಪಾರ್ಷದರಿದಲೂ ಒಡಗೂಡಿ ತಮ್ಮ ಲೋಕದಿಂದ ಆತನು ಇದ್ದ ಜಾಗಕ್ಕೆ ಇಳಿದು ಬಂದರು. ಆಕಾಶದಲ್ಲಿ ಅಲ್ಲಲ್ಲಿ ವಿಮಾನವನ್ನೇರಿದ್ದ ಇಂದ್ರಾದಿ ದೇವತಾಮುಖ್ಯರು ಮಾರ್ಗದಲ್ಲಿ ಅವರನ್ನು ಪೂಜಿಸಿದರು. ಮಾರ್ಗದಲ್ಲಿ ಗುಂಪು-ಗುಂಪಾಗಿ ಬಂದಿದ್ದ ಸಿದ್ಧರೂ, ಗಂಧರ್ವರೂ, ಸಾಧ್ಯರೂ, ಚಾರಣರೂ ಮತ್ತು ಮುನಿಜನರೂ ಅವರನ್ನು ಸ್ತೋತ್ರಮಾಡಿದರು. ಈ ರೀತಿಯಲ್ಲಿ ಹೆಜ್ಜೆ-ಹೆಜ್ಜೆಗೂ ಆದರ- ಸಮ್ಮಾನಗಳನ್ನು ಸ್ವೀಕರಿಸುತ್ತಾ, ಗಂಧಮಾದನಪರ್ವತದ ತಪ್ಪಲನ್ನು ಬೆಳಗಿಸುತ್ತಾ ಬ್ರಹ್ಮದೇವರು ಪ್ರಿಯವ್ರತನ ಬಳಿಗೆ ದಯಮಾಡಿಸಿದರು. ಪ್ರಿಯವ್ರತನಿಗೆ ಆತ್ಮವಿದ್ಯೆಯನ್ನು ಉಪದೇಶಮಾಡುವುದಕ್ಕಾಗಿ ಶ್ರೀನಾರದ ಮಹರ್ಷಿಗಳೂ ಅಲ್ಲಿಗೆ ದಯಮಾಡಿಸಿದ್ದರು. ಬ್ರಹ್ಮದೇವರು ಆ ಜಾಗವನ್ನು ತಲುಪಿದಾಗ ಅವರ ಹಂಸವಾಹನವನ್ನು ಕಂಡು ತಂದೆಯಾದ ಬ್ರಹ್ಮದೇವರೇ ಬಂದಿದ್ದಾರೆ ಎಂದು ತಿಳಿದುಕೊಂಡು ನಾರದರು ಸ್ವಾಯಂಭುವಮನು ಮತ್ತು ಪ್ರಿಯವ್ರತರೊಡನೆ ಒಡನೆಯೇ ಎದ್ದು ನಿಂತರು. ಎಲ್ಲರೂ ಅವರಿಗೆ ಕೈಜೋಡಿಸಿ ನಮಸ್ಕಾರಮಾಡಿದರು.

ಎಲೈ ಭರತಕುಲಪುಂಗವನೇ! ನಾರದಮುನಿಗಳು ಶ್ರೀಭಗವಂತನ

ಪ್ರಜಾವಾತ್ಸಲ್ಯವೇ ಮುಂತಾದ ಕಲ್ಯಾಣಗುಣಗಳನ್ನೂ, ಅವತಾರ ಮಹಿಮೆಯನ್ನೂ, ಅಗ್ಗಳಿಕೆಯನ್ನೂ ವೇದಸೂಕ್ತಗಳಿಂದ ಹೊಗಳುತ್ತಿರಲು–ಆ ಆದಿಪುರುಷನು ಅವರ ಸತ್ಕಾರವನ್ನು ಸ್ವೀಕರಿಸಿ ಪ್ರಿಯವ್ರತನನ್ನು ವಾತ್ಸಲ್ಯ ದಿಂದ ನೋಡುತ್ತಾ ಕಿರುನಗೆಯಿಂದ ಕೂಡಿ ಆತನಿಗೆ ಹೀಗೆಂದರು :

"ಮಗು ಪ್ರಿಯವ್ರತ! ನಾನು ನಿನಗೆ ಸತ್ಯವಾದ ಸಿದ್ಧಾಂತದ ಮಾತನ್ನು ಹೇಳುತ್ತೇನೆ ; ಸಾವಧಾನವಾಗಿ ಕೇಳು. ಅಪ್ರಮೇಯನಾದ ಶ್ರೀಹರಿಯೇ ನನ್ನ ಮೂಲಕ ಈ ಮಾತನ್ನಾಡಿಸುತ್ತಿದ್ದಾನೆ. ಆದುದರಿಂದ ಅಸೂಯಾರಹಿತನಾಗಿ ಗುಣದಲ್ಲಿ ದೋಷವನ್ನೆಣಿಸದೇ ನೀನು ಆತನ ಆದೇಶವನ್ನು ತೆಗೆದುಕೊಳ್ಳಬೇಕು. ಆತನ ಆದೇಶವನ್ನು ನೀನು ಮಾತ್ರವೇ ಏಕೆ?–ನಾನೂ, ಮಹಾದೇವನೂ, ನಿನ್ನ ತಂದೆಯಾದ ಸ್ವಾಯಂಭುವಮನುವೂ ಮತ್ತು ನಿನ್ನ ಗುರುವಾದ ಈ ನಾರದನೂ–ಎಲ್ಲರೂ ಪಾಲಿಸಬೇಕು. ಎಲ್ಲರೂ ಆತನ ಆಜ್ಞೆಯ ಪ್ರಕಾರವಾಗಿ ಆತನಿಗೆ ಪರಾಧೀನರಾಗಿ ನಡೆಯುತ್ತಿರುವವರೇ ; ನಡೆಯಬೇಕಾದವರೇ. ಆ ಶ್ರೀಭಗವಂತನ ಕಟ್ಟಲೆಯನ್ನು ಯಾವನೇ ದೇಹಿಯೂ ತಪಸ್ಸಿನಿಂದಾಗಲೀ, ವಿದ್ಯೆಯಿಂದಾಗಲೀ, ಯೋಗಬಲದಿಂದಾಗಲೀ ಅಥವಾ ಬುದ್ಧಿಬಲದಿಂದಾಗಲೀ, ಹಾಗೂ ಧರ್ಮದ ಶಕ್ತಿಯಿಂದಾಗಲೀ ಅಥವಾ ಬೇರೊಬ್ಬನ ಸಹಾಯದಿಂದಾಗಲೀ–ಯಾವುದರಿಂದಲೂ ಹೇಗೂ ಮೀರುವುದಕ್ಕಾಗುವುದಿಲ್ಲ. ವತ್ಸ! ಆ ಅವ್ಯಕ್ತನಾಗಿರುವ ಈಶ್ವರನು ದಯಪಾಲಿಸಿರುವ ಶರೀರವನ್ನು ಧರಿಸಿಯೇ ಎಲ್ಲ ಜೀವಿಗಳೂ ಸದಾ ಹುಟ್ಟು, ಸಾವು, ಶೋಕ, ಮೋಹ, ಭಯ ಮತ್ತು ಸುಖ-ದುಃಖಗಳನ್ನು ಭೋಗಿಸುತ್ತಾರೆ. ಹಾಗೂ ಈ ಶರೀರದ ಮೂಲಕವಾಗಿಯೇ ಮೋಕ್ಷವನ್ನು ಸಾಧಿಸುತ್ತಾರೆ.

(ಶ್ಲೋಕ 2-13)

ಯದ್ವಾಚಿ ತನ್ತ್ಯಾಂ ಗುಣಕರ್ಮದಾಮಭಿಃ
ಸುದುಸ್ತರೈರ್ವತ್ಸ ವಯಂ ಸುಯೋಜಿತಾಃ ।
ಸರ್ವೇ ವಹಾಮೋ ಬಲಿಮೀಶ್ವರಾಯ
ಪ್ರೋತಾ ನಸೀವ ದ್ವಿಪದೇ ಚತುಷ್ಪದಃ ॥14॥

ಮೂಗುದಾರ ಹಾಕಲ್ಪಟ್ಟಿರುವ ಪಶುಗಳು ಮನುಷ್ಯರ ಭಾರವನ್ನು

ಹೇಗೆ ಹೊರುತ್ತವೆಯೋ–ಹಾಗೆಯೇ ನಾವೆಲ್ಲರೂ ಆತನ ವಾಣಿಯಾದ ವೇದವೆಂಬ ಹಗ್ಗದಲ್ಲಿರುವ ತ್ರಿಗುಣಗಳು, ಅವುಗಳಿಗೆ ತಕ್ಕ ಕರ್ಮಗಳು ಮತ್ತು ಬ್ರಾಹ್ಮಣಾದಿ ವಾಕ್ಯಗಳು–ಎಂಬ ಮುಪ್ಪುರಿಯಿಂದ ಬಲವಾಗಿ ಕಟ್ಟಲ್ಪಟ್ಟು ಆತನ ಇಚ್ಛೆಗೆ ಅನುಗುಣವಾಗಿಯೇ ಕರ್ಮಗಳಲ್ಲಿ ತೊಡಗಿ ಅವುಗಳ ಮೂಲಕ ಆತನ ಸೇವೆಯನ್ನು ಮಾಡುತ್ತಿದ್ದೇವೆ.

ವತ್ಸ! ನಮ್ಮ ಗುಣ ಮತ್ತು ಕರ್ಮಗಳಿಗೆ ಅನುಸಾರವಾಗಿ ಪ್ರಭುವು ನಮ್ಮನ್ನು ಯಾವ ಯೋನಿಯಲ್ಲಿ ಹಾಕಿದ್ದಾನೆಯೋ ಅದನ್ನೇ ಸ್ವೀಕರಿಸಿ, ನಾವು ಅವನು ಹೇಗೆ ವ್ಯವಸ್ಥೆಮಾಡಿದ್ದಾನೆಯೋ ಅದಕ್ಕೆ ಅನುಗುಣವಾಗಿಯೇ ಸುಖವನ್ನೋ ದುಃಖವನ್ನೋ ಅನುಭವಿಸುತ್ತೇವೆ. ಕುರುಡನು ಕಣ್ಣುಳ್ಳವನಿಂದ ನಡೆಸಲ್ಪಡುವಂತೆ–ಅಜ್ಞಾನಿಗಳೂ, ಅಶಕ್ತರೂ ಆದ ನಾವು ಆತನಿಂದಲೇ ನಡೆಸಲ್ಪಡುತ್ತಿದ್ದೇವೆ. ಶರೀರವನ್ನು ಪಡೆಯುವ ವಿಷಯದಲ್ಲಿ ಮಾತ್ರವಲ್ಲದೇ ವಿಷಯಗಳನ್ನು ಭೋಗಿಸುವ ವಿಷಯದಲ್ಲಿಯೂ ನಾವು ಅಸ್ವತಂತ್ರರಾಗಿದ್ದೇವೆ. ಅಜ್ಞಾನಿಗಳು ಮಾತ್ರವಲ್ಲ ; ಜೀವನ್ಮುಕ್ತರೂ ಕೂಡ ಭಗವಂತನಿಗೆ ಪರತಂತ್ರರೇ ಆಗಿದ್ದಾರೆ. ಅವರೂ ಆ ಶ್ರೀಭಗವಂತನ ಇಚ್ಛೆಯಂತೆ ಪ್ರಾರಬ್ಧಕರ್ಮವನ್ನನು ಭವಿಸುತ್ತಾ ದೇಹವನ್ನು ಧರಿಸಿರಬೇಕಾಗುತ್ತದೆ. ಮನುಷ್ಯನು–ಕನಸು ಕಳೆದ ನಂತರವೂ ಕನಸಿನಲ್ಲಿ ಅನುಭವಿಸಿದ ಪದಾರ್ಥಗಳನ್ನು ಸ್ಮರಿಸುವಂತೆ–ಅವರು ಅಭಿಮಾನರಹಿತರಾಗಿ ಆ ಪ್ರಾರಬ್ಧ ಕರ್ಮಫಲಗಳನ್ನು ಅನುಭವಿಸುತ್ತಾ ದೇಹಧಾರಿಗಳಾಗಿರಬೇಕಾಗುತ್ತದೆ. ಆದರೆ ಅವರಿಗೆ ಜನ್ಮಾಂತರಗಳನ್ನುಂಟ ುಮಾಡುವ ಕರ್ಮಗಳಾಗಲೀ, ಕರ್ಮಗಳ ವಾಸನೆಗಳಾಗಲೀ ಇರುವುದಿಲ್ಲ. ಅಂತೂ ಪ್ರಾರಬ್ಧಕರ್ಮವನ್ನಾದರೂ ಅವರೂ ಅಸ್ವತಂತ್ರರಾಗಿ ಅನುಭವಿಸಲೇಬೇಕು. (ಶ್ಲೋಕ 15-16)

ಭಯಂ ಪ್ರಮತ್ತಸ್ಯ ವನೇಷ್ವಪಿ ಸ್ಯಾ-
ದ್ಯತಃ ಸ ಆಸ್ತೇ ಸಹಷಟ್ಸಪತ್ನಃ ।
ಜಿತೇನ್ದ್ರಿಯಸ್ಯಾತ್ಮರತೇರ್ಬುಧಸ್ಯ
ಗೃಹಾಶ್ರಮಃ ಕಿಂ ನು ಕರೋತ್ಯವದ್ಯಮ್ ॥೧೭॥

ಸಂಸಾರದಲ್ಲಿ ಇದ್ದು ಭೋಗವನ್ನನುಭವಿಸುತ್ತಿರುವವನಿಗೆ ಅಭಿ ಮಾನವು ಹೇಗೆ ತೊಲಗುವುದು? ಮೋಕ್ಷವು ಹೇಗೆ ದೊರೆಯುವುದು?

ಅದಕ್ಕಾಗಿ ಅರಣ್ಯಕ್ಕೆ ಹೋಗಿ ನಿವೃತ್ತಿಧರ್ಮದಲ್ಲಿರಬೇಕಲ್ಲವೇ? ಎಂದರೆ : ಅಜಾಗರೂಕನಾದವನು ಅಂದರೆ–ಇಂದ್ರಿಯಗಳನ್ನು ಜಯಿಸದೇ ಇದ್ದವನು ಅರಣ್ಯಕ್ಕೆ ಹೋಗಿ ನೆಲೆಸಿದರೂ ಆತನಿಗೆ ಭಯವು ತಪ್ಪುವುದಿಲ್ಲ. ಏಕೆಂದರೆ; ಕಾಮ-ಕ್ರೋಧಗಳೇ ಮುಂತಾದ ಆರು ಶತ್ರುಗಳು ಆತನೊಡನೆ ಇದ್ದೇ ಇರುವುವು. ಇಂದ್ರಿಯಗಳನ್ನು ಗೆದ್ದು ತನ್ನ ಆತ್ಮದಲ್ಲಿಯೇ ರಮಿಸುತ್ತಿರುವ ಜ್ಞಾನಿಗೆ ಗೃಹಸ್ಥಾಶ್ರಮವೂ ಯಾವ ಕೆಡುಕನ್ನೂ ಉಂಟು ಮಾಡುವುದಿಲ್ಲ.

ಯಃ ಷಟ್ಸಪತ್ನಾನ್ವಿಜಿಗೀಷಮಾಣೋ
ಗೃಹೇಷು ನಿರ್ವಿಶ್ಯ ಯತೇತ ಪೂರ್ವಮ್ ।
ಅತ್ಯೇತಿ ದುರ್ಗಾಶ್ರಿತ ಊರ್ಜಿತಾರೀನ್
ಕ್ಷೀಣೇಷು ಕಾಮಂ ವಿಚರೇದ್ವಿಪಶ್ಚಿತ್ ॥೧೮॥

ಆ ಆರು ಶತ್ರುಗಳನ್ನು ಜಯಿಸಲು ಬಯಸುವವನು–ದುರ್ಗವನ್ನು ಆಶ್ರಯಿಸಿ ಶತ್ರುಗಳನ್ನು ಜಯಿಸುವ ರಾಜನಂತೆ–ಮೊದಲು ಗೃಹದಲ್ಲಿ ನೆಲೆಸಿ ಅದರ ರಕ್ಷಣೆಯಲ್ಲಿದ್ದು ಆ ಒಳಶತ್ರುಗಳನ್ನು ಗೆಲ್ಲಬೇಕು. ಆ ಶತ್ರುಗಳು ಬಲಗುಂದಿದನಂತರ ಜ್ಞಾನಿಯು ತನ್ನ ಇಷ್ಟಬಂದಂತೆ ಸಂಚರಿಸಬಹುದು. ಗೃಹಸ್ಥಾಶ್ರಮವು ಅರಿಷಡ್ವರ್ಗಗಳನ್ನು ಜಯಿಸಲು ನೆಲೆಯಾಗಿ ಸಹಾಯ ಮಾಡುವ ದುರ್ಗದಂತೆ–ಎಂದು ಭಾವಿಸಿ ನೀನು ಅದನ್ನು ಮೊದಲು ಸ್ವೀಕರಿಸಬೇಕು.

ತ್ವಂ ತ್ವಬ್ಜನಾಭಾಙ್ಘ್ರಿಸರೋಜಕೋಶ-
ದುರ್ಗಾಶ್ರಿತೋ ನಿರ್ಜಿತಷಟ್ಸಪತ್ನಃ ।
ಭುಂಕ್ಷ್ವೇಹ ಭೋಗಾನ್ಪುರುಷಾತಿದಿಷ್ಟಾ-
ನ್ವಿಮುಕ್ತಸಙ್ಗಃ ಪ್ರಕೃತಿಂ ಭಜಸ್ವ ॥೧೯॥

ನೀನು ಸ್ವಾಮಿಯಾದ ಪದ್ಮನಾಭನ ಅಡಿದಾವರೆಗಳೆಂಬ ದುರ್ಗವನ್ನು ಆಶ್ರಯಿಸಿ ಈಗಾಗಲೇ ಆ ಶತ್ರುಗಳನ್ನು ಜಯಿಸಿಬಿಟ್ಟಾಗಿದೆ. ಆದರೂ ಆ ಪುರಾಣಪುರುಷನು ದಯಪಾಲಿಸುವ ಭೋಗಗಳನ್ನು ಅನುಭವಿಸು. ಅನಂತರ ನಿಸ್ಸಂಗನಾಗಿ ನಿನ್ನ ಸ್ವಸ್ವರೂಪದಲ್ಲಿ ನೆಲೆಗೊಳ್ಳುವೆಯಂತೆ."

ಶ್ರೀಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಹೇಳುತ್ತಾರೆ :

"ಮೂರು ಲೋಕಗಳ ಗುರುಗಳಾದ, ಭಗವಂತರಾದ ಬ್ರಹ್ಮದೇವರು ಹೀಗೆ ಹೇಳಲು, ಪರಮಭಾಗವತನಾದ ಪ್ರಿಯವ್ರತನು ಆ ದೇವದೇವನ ಮುಂದೆ ತಾನು ಅತಿಚಿಕ್ಕವನು–ಎಂದು ಅರಿತು ವಿನಯದಿಂದ ತಲೆಬಾಗಿಸಿ ಕೊಂಡು ಅತ್ಯಂತಗೌರವದಿಂದ 'ಅಪ್ಪಣೆ' ಎಂದು ಬ್ರಹ್ಮದೇವರ ಆಜ್ಞೆಯನ್ನು ಶಿರಸಾವಹಿಸಿದನು. ಸ್ವಾಯಂಭುವಮನುವು ಪ್ರಸನ್ನನಾಗಿ ಭಗವಂತರಾದ ಬ್ರಹ್ಮದೇವರನ್ನು ಯಥಾವಿಧಿಯಾಗಿ ಪೂಜಿಸಿದನು. ಅನಂತರ ಗುರು-ಶಿಷ್ಯರಾದ ಶ್ರೀನಾರದ ಮತ್ತು ಪ್ರಿಯವ್ರತರು ಮನಸ್ಸನ್ನು ಕೊಂಕು ಮಾಡಿಕೊಳ್ಳದೇ, ಸರಳಭಾವದಿಂದ ನೋಡುತ್ತಿರಲು–ಬ್ರಹ್ಮದೇವರು ಶಬ್ದವ್ಯವಹಾರಕ್ಕೆ ಸಿಲುಕದೇ, ಮನಸ್ಸನ್ನೂ ಮಾತನ್ನೂ ಮೀರಿ ತನಗೆ ಆಶ್ರಯವಾಗಿರುವ ಪರಬ್ರಹ್ಮವನ್ನು ಧ್ಯಾನಿಸುತ್ತಾ ತಮ್ಮ ಲೋಕಕ್ಕೆ ದಯಮಾಡಿಸಿಬಿಟ್ಟರು. ಹೀಗೆ ಬ್ರಹ್ಮದೇವರ ದಯೆಯಿಂದ ತಮ್ಮ ಉದ್ದೇಶವು ಈಡೇರಲು ಸ್ವಾಯಂಭುವಮನುವು ಸಂತೃಪ್ತನಾಗಿ ಶ್ರೀನಾರದ ಮಹರ್ಷಿಗಳನ್ನು ಒಡಂಬಡಿಸಿ ತನ್ನ ಪುತ್ರನಾದ ಪ್ರಿಯವ್ರತಕುಮಾರನಿಗೆ ಅಖಂಡಭೂಮಂಡಲದ ಆಧಿಪತ್ಯವನ್ನು ವಹಿಸಿ, ಇಂದ್ರಿಯವಿಷಯಗಳೆಂಬ ವಿಷಜಾಲಕ್ಕೆ ಸಮುದ್ರದಂತಿರುವ ಸಂಸಾರದ ಆಸೆಯನ್ನು ಬಿಟ್ಟು ಪೂರ್ಣ ವಿರಕ್ತಿಯಿಂದ ಶಾಂತಿಯನ್ನು ಪಡೆದನು.*

---

* ಇಲ್ಲಿ ಸಾರಾರ್ಥಬೋಧಿನೀವ್ಯಾಖ್ಯಾನದಲ್ಲಿ ಕೆಳಕಂಡ ನಿಯಮವನ್ನು ಗಮನಿಸಿದೆ ; ತನ್ನ ಹಿರಿಯ ಮಗನಾದ ಪ್ರಿಯವ್ರತನು ಬಾಲ್ಯದಿಂದಲೂ ವಿರಕ್ತನೇ ಆಗಿದ್ದುದನ್ನು ಮನಗಂಡು ಸ್ವಾಯಂಭುವಮನುವು ಅಖಂಡಭೂಮಂಡಲಾಧಿಪತ್ಯವನ್ನು ಉತ್ತಾನಪಾದ ನಿಗೆ ವಹಿಸಿದನೆಂದು ಕೇಳಿದ್ದೇವೆ. ಹೀಗಿರುವಾಗ ವಿರಕ್ತನಾಗಿದ್ದ ಪ್ರಿಯವ್ರತನನ್ನು ಆತನು ಗೃಹಸ್ಥಾಶ್ರಮ-ರಾಜ್ಯಾಧಿಪತ್ಯಗಳನ್ನು ಸ್ವೀಕರಿಸಲು ಏಕೆ ಪ್ರಯತ್ನಿ ಸಿದನು?–ಎಂದರೆ : ಮನುವಿನ ಆಜ್ಞೆಯಂತೆ ಉತ್ತಾನಪಾದನೇ ರಾಜನಾಗಿ ಆತನ ವಂಶಸ್ಥರೇ ಆತನ ನಂತರ ರಾಜ್ಯವನ್ನು ಆಳುತ್ತಿದ್ದರು. ಆ ವಂಶಪರಂಪರೆಯು ಪ್ರಚೇತಸರವರೆಗೂ ಮುಂದುವರಿಯಿತು. ಆದರೆ ಪ್ರಚೇತಸರ ಪುತ್ರನಾದ ದಕ್ಷನು ತನ್ನ ಹಿಂದಿನ ಜನ್ಮದ ಪ್ರಜಾಪತಿಯ ಪಟ್ಟವನ್ನು ಪಡೆಯಲು ಅರಣ್ಯಕ್ಕೆ ತೆರಳಿದನು. ಆಗ ರಾಜ್ಯವು ಅನಾಯಕವಾಗಿತ್ತು. ಅದಕ್ಕಾಗಿ ಮನುವು ಬೇರೆ ನಿರ್ವಾಹವಿಲ್ಲದೇ ತನ್ನ ಹಿರಿಯ ಮಗನಾದ ಪ್ರಿಯವ್ರತನನ್ನೇ ರಾಜನಾಗಲು ಒಡಂಬಡಿಸಲು ಪ್ರಯತ್ನಪಟ್ಟು

ಹೀಗೆ ಆ ಪ್ರಿಯವ್ರತಭೂಪತಿಯು ಶ್ರೀಭಗವಂತನ ಇಚ್ಛೆಯಿಂದ ರಾಜ್ಯವನ್ನಾಳುವ ಕಾರ್ಯದಲ್ಲಿ ನಿಯುಕ್ತನಾದನು. ಸಮಸ್ತಜಗತ್ತನ್ನೂ ಬಂಧನದಿಂದ ಬಿಡಿಸಲು ಪರಮಸಮರ್ಥವಾಗಿರುವ ಆದಿಪುರುಷನಾದ ಶ್ರೀಭಗವಂತನ ಅಡಿದಾವರೆಗಳನ್ನು ನಿರಂತರವಾಗಿ ಧ್ಯಾನಮಾಡುತ್ತಿದ್ದುದ ರಿಂದ ರಾಗಾದಿ ಕಶ್ಮಲಗಳೆಲ್ಲವೂ ತೊಳೆದುಹೋಗಲಾಗಿ ಆತನ ಹೃದಯವು ಅತ್ಯಂತಶುದ್ಧವಾಗಿಬಿಟ್ಟಿತು. ಆದರೂ ಆತನು ಹಿರಿಯರ ಮಾನವನ್ನು ಕಾಪಾಡುವುದಕ್ಕೋಸ್ಕರ ಭೂಮಿಯನ್ನು ಆಳತೊಡಗಿದನು. ಅನಂತರ ಆತನು ಪ್ರಜಾಪತಿಯಾದ ವಿಶ್ವಕರ್ಮನ ಪುತ್ರಿ ಬರ್ಹಿಷ್ಮತ್ರಿಯನ್ನು ವಿವಾಹ ಮಾಡಿಕೊಂಡು ಆಕೆಯಲ್ಲಿ ಹತ್ತು ಮಂದಿ ಪುತ್ರರನ್ನು ಪಡೆದನು. ಅವರೆಲ್ಲರೂ ಶೀಲ, ಗುಣ, ಕರ್ಮನಿಷ್ಠೆ ಮತ್ತು ಪರಾಕ್ರಮಗಳಲ್ಲಿ ತಂದೆಗೆ ಸಮಾನ ರಾಗಿದ್ದರು. ಆ ಪುತ್ರರನಂತರ ಅವರ ತಂಗಿಯಾಗಿ 'ಊರ್ಜಸ್ವತೀ' ಎಂಬ ಕನ್ಯೆಯನ್ನು ಪ್ರಿಯವ್ರತನು ಪಡೆದನು. ಆಗ್ನೀಧ್ರ, ಇಧ್ಮಜಿಹ್ವ, ಯಜ್ಞಬಾಹು, ಮಹಾವೀರ, ಹಿರಣ್ಯರೇತಸ, ಘೃತಪೃಷ್ಠ, ಸವನ, ಮೇಧಾತಿಥಿ, ವೀತಿ ಹೋತ್ರ ಮತ್ತು ಕವಿ–ಎಂಬುವರೇ ಪ್ರಿಯವ್ರತಮಹಾರಾಜನ ಅಗ್ನಿನಾಮಕ ರಾದ ಹತ್ತು ಮಂದಿ ಪುತ್ರರು. ಆ ಪುತ್ರರಲ್ಲಿ ಕವಿ, ಮಹಾವೀರ ಮತ್ತು ಸವನ–ಎಂಬ ಮೂವರೂ ನೈಷ್ಠಿಕಬ್ರಹ್ಮಚಾರಿಗಳಾದರು. ಅವರು ಬಾಲ್ಯ ದಿಂದಲೇ ಆತ್ಮವಿದ್ಯೆಯನ್ನೂ ಅಭ್ಯಾಸಮಾಡುತ್ತಾ ಕೊನೆಗೆ ಸಂನ್ಯಾಸಾಶ್ರಮ ವನ್ನು ಸ್ವೀಕರಿಸಿಬಿಟ್ಟರು. ನಿವೃತ್ತಿಧರ್ಮನಿಷ್ಠರಾದ ಆ ಮಹರ್ಷಿಗಳು– ಸಂನ್ಯಾಸಾಶ್ರಮದಲ್ಲೇ ಇದ್ದ ಎಲ್ಲ ಜೀವಗಳಿಗೂ ಆಶ್ರಯರಾಗಿ, ಭವ ಬಂಧನದಿಂದ ಹೆದರಿದ ಜನರಿಗೆ ಆಸರೆನೀಡುವ ಭಗವಂತನಾದ ಶ್ರೀವಾಸು ದೇವನ ಪರಮಸುಂದರವಾದ ಚರಣಾರವಿಂದಗಳನ್ನು ನಿರಂತರವಾಗಿ ಧ್ಯಾನ

ವಿಫಲನಾಗಿ ಬ್ರಹ್ಮದೇವರ ಮೂಲಕ ಆತನಿಗೆ ಹೇಳಿಸಿ ಆತನನ್ನು ರಾಜನನ್ನಾಗಿಸಿದನು. ಅನಂತರ ಪ್ರಿಯವ್ರತನೂ ಆತನ ವಂಶಸ್ಥರೂ ಸೇರಿ ಐದನೆಯ ಮನ್ವಂತರದವರೆಗೂ ರಾಜ್ಯವನ್ನಾಳಿದರು. ಆರನೆಯ ಮನ್ವಂತರದ ಆರಂಭದಲ್ಲಿಯೂ ತಪಸ್ಸನ್ನು ಮುಗಿಸಿಕೊಂಡು ಬಂದ ದಕ್ಷನು ಪ್ರಜಾಸೃಷ್ಟಿಯನ್ನು ಮಾಡಿದನು. ಆದುದರಿಂದ ಸ್ವಾಯಂಭುವಮನುವಿನ ಅಧಿಕಾರವು ಚಾಕ್ಷುಷಮನ್ವಂತರದವರೆಗೂ ಇದ್ದಿತು.

ಮಾಡುತ್ತಿದ್ದರು. ಅದರಿಂದುಂಟಾದ ಶ್ರೇಷ್ಠವಾದ ಅಖಂಡಭಕ್ತಿಯೋಗದಿಂದ ಅವರ ಅಂತಃಕರಣವು ಪೂರ್ಣವಾಗಿ ಶುದ್ಧವಾಗಿಬಿಟ್ಟಿತು. ಅದರಲ್ಲಿ ಶ್ರೀಭಗವಂತನು ಆವಿರ್ಭವಿಸಲಾಗಿ–ದೇಹವೇ ಮುಂತಾದ ಉಪಾಧಿಯು ತೊಲಗಿಹೋಯಿತು. ಅವರು ಎಲ್ಲ ಜೀವಗಳಿಗೂ ಆತ್ಮಭೂತನಾದ ಶ್ರೀಪರಮಾತ್ಮನಲ್ಲಿ ತಾದಾತ್ಮ್ಯವನ್ನು ಪಡೆದುಕೊಂಡರು. ಪ್ರಿಯವ್ರತ ಮಹಾರಾಜನಿಗೆ ಮತ್ತೊಬ್ಬ ಮಡದಿಯಲ್ಲಿ ಉತ್ತಮ, ತಾಮಸ ಮತ್ತು ರೈವತ–ಎಂಬ ಮೂವರು ಪುತ್ರರು ಜನಿಸಿದರು. ಅವರು ಕ್ರಮವಾಗಿ ಉತ್ತಮ, ತಾಮಸ ಮತ್ತು ರೈವತಗಳೆಂಬ ಮನ್ವಂತರಗಳಿಗೆ ಅಧಿಪತಿ ಗಳಾದರು. (ಶ್ಲೋಕ 20-24)

ಹೀಗೆ ಕವಿಯೇ ಮುಂತಾದ ಮೂವರು ಪುತ್ರರು ನಿವೃತ್ತಿಧರ್ಮಪರಾ ಯಣರಾದ ಬಳಿಕ ಪ್ರಿಯವ್ರತಮಹಾರಾಜನು ಹನ್ನೊಂದು ಅರ್ಬುದವರ್ಷ ಗಳವರೆಗೂ ಭೂಮಿಯನ್ನು ಆಳುತ್ತಿದ್ದನು. ಆತನು ಧರ್ಮದ್ರೋಹಿಗಳಿಗೆ ಸಿಂಹಸ್ವಪ್ನವಾಗಿದ್ದನು. ಅಖಂಡಪುರುಷಾರ್ಥಮಯವೂ ವೀರ್ಯನಿಧಿಯೂ ಆಗಿದ್ದ ತನ್ನ ಭುಜಗಳಿಂದ ಆತನು ಬಿಲ್ಲಿನ ನಾಣನ್ನೆಳೆದು ಟಂಕಾರಮಾಡಿ ದೊಡನೆಯೇ ಧರ್ಮದ್ರೋಹಿಗಳು ಗಡ-ಗಡನೆ ನಡುಗಿ ಎಲ್ಲಿಯೋ ಅವಿತು ಕೊಂಡುಬಿಡುತ್ತಿದ್ದರು. ಪ್ರಾಣವಲ್ಲಭೆಯಾಗಿದ್ದ ಬರ್ಹಿಷ್ಮತಿಯ, ದಿನ-ದಿನವೂ ಅತಿಶಯವಾಗುವಂತೆ ತನ್ನನ್ನು ಎದುರುಗೊಂಡು ತನ್ನೊಡನೆ ಭೋಗವಿಲಾಸಗಳಲ್ಲಿ ರಮಿಸುವುದು, ಸ್ತ್ರೀಸಹಜವಾದ ಹಾವ-ಭಾವಗಳನ್ನು ತೋರುವುದು, ಲಜ್ಜೆಯಿಂದ ಸಂಕೋಚಗೊಂಡ ಕಿರುನಗೆಯಿಂದ ಕೂಡಿದ ದೃಷ್ಟಿಯನ್ನು ಬೀರುವುದು, ಮನಸ್ಸಿಗೆ ರುಚಿಸುವ ವಿನೋದಗಳನ್ನು ಮಾಡು ವುದು–ಇವೇ ಮುಂತಾದುವುಗಳಿಂದ ಆಕೆಗೆ ವಶನಾಗಿ ವಿವೇಕಹೀನನಾದವ ನಂತೆ–ಆತ್ಮಸ್ವರೂಪವನ್ನು ಮರೆತವನಂತೆ–ಭೋಗಗಳನ್ನು ಅನುಭವಿಸು ತ್ತಿದ್ದರೂ ವಾಸ್ತವವಾಗಿ ಆತನಿಗೆ ಅವುಗಳಲ್ಲಿ ಆಸಕ್ತಿಯಿರಲೇ ಇಲ್ಲ.

ಒಂದು ಬಾರಿ ಆತನು–ಸೂರ್ಯನು ಸಮೇರುಪರ್ವತವನ್ನು ಪ್ರದ ಕ್ಷಿಣೆಮಾಡುತ್ತಾ ಲೋಕಾಲೋಕದವರೆಗೆ ಭೂಮಿಯ ಒಂದು ಭಾಗವನ್ನು ನೋಡಿದಾಗ–ಅದರಲ್ಲಿ ಅರ್ಧಭಾಗಕ್ಕೆ ಮಾತ್ರ ಪ್ರಕಾಶವು ಬೀಳುತ್ತಿದ್ದು

ಉಳಿದ ಅರ್ಧಭಾಗದಲ್ಲಿ ಕತ್ತಲೆಯು ಹರಡಿರುವುದನ್ನು ಗಮನಿಸಿದನು. ಅದು ಆತನ ಮನಸ್ಸಿಗೆ ಹಿಡಿಸಲಿಲ್ಲ. 'ನಾನು ರಾತ್ರಿಯನ್ನು ಹಗಲನ್ನಾಗಿ ಬದಲಾಯಿಸುವೆನು'–ಎಂದು ಸಂಕಲ್ಪಮಾಡಿ, ಆತನು ಸೂರ್ಯನಂತೆಯೇ ವೇಗಶಾಲಿಯಾಗಿದ್ದ ಒಂದು ಜ್ಯೋತಿರ್ಮಯವಾದ ರಥವನ್ನು ಏರಿ ಎರಡನೆಯ ಸೂರ್ಯನಂತೆ ಆತನು ಹಿಂದೆ-ಹಿಂದೆಯೇ ಹೋಗುತ್ತಾ ಭೂಮಿಯನ್ನು ಏಳು ಬಾರಿ ಪ್ರದಕ್ಷಿಣೆಮಾಡಿದನು. ಶ್ರೀಭಗವಂತನನ್ನು ಉಪಾಸನೆಮಾಡಿದ್ದರಿಂದ ಆತನಿಗೆ ಇಂತಹ ಅಲೌಕಿಕವಾದ ಪ್ರಭಾವವು ಬಹಳ ಹೆಚ್ಚಾಗಿ ಉಂಟಾಗಿತ್ತು. ಆ ಸಮಯದಲ್ಲಿ ಆತನ ರಥದ ಚಕ್ರಗಳು ಮಾಡಿದ ಗೆರೆ-ಗುರುತುಗಳೇ ಏಳು ಸಮುದ್ರಗಳಾದುವು. ಅವುಗಳಿಂದ ಭೂಮಿಯಲ್ಲಿ ಕ್ರಮವಾಗಿ ಜಂಬೂ, ಪ್ಲಕ್ಷ, ಶಾಲ್ಮಲಿ, ಕುಶ, ಕ್ರೌಂಚ, ಶಾಕ ಮತ್ತು ಪುಷ್ಕರಗಳೆಂಬ ಏಳು ದ್ವೀಪಗಳುಂಟಾದುವು. ಅವುಗಳಲ್ಲಿ ಮುಂದು-ಮುಂದಿನ ದ್ವೀಪವು ಹಿಂದು-ಹಿಂದಿನ ದ್ವೀಪಕ್ಕೆ ಎರಡರಷ್ಟು ವಿಸ್ತಾರವಾಗಿದ್ದು ಅವು ಸಮುದ್ರದ ಹೊರಭಾಗದಲ್ಲಿ ಭೂಮಿಯ ನಾಲ್ಕು ಕಡೆಗಳಲ್ಲಿಯೂ ಹರಡಿಕೊಂಡಿವೆ. ಸಪ್ತಸಮುದ್ರಗಳು ಕ್ರಮವಾಗಿ ಉಪ್ಪು ನೀರು, ಕಬ್ಬಿನರಸ, ಮದ್ಯರಸ, ತುಪ್ಪ, ಹಾಲು, ಮೊಸರು ಮತ್ತು ಶುದ್ಧೋದಕಗಳಿಂದ ತುಂಬಿವೆ. ಆ ಏಳು ಸಮುದ್ರಗಳೂ–ಏಳು ದ್ವೀಪ ಗಳಿಗೂ ಕಂದಕಗಳಂತಿದ್ದು ತಮ್ಮ-ತಮ್ಮೊಳಗೆ ಇರುವ ದ್ವೀಪಕ್ಕೆ ಸಮನಾದ ವಿಸ್ತಾರವನ್ನು ಹೊಂದಿವೆ. ಅವುಗಳಲ್ಲಿ ಒಂದೊಂದೂ ಕ್ರಮವಾಗಿ ಪ್ರತ್ಯೇಕ-ಪ್ರತ್ಯೇಕವಾಗಿ ಸಪ್ತದ್ವೀಪಗಳನ್ನು ಹೊರಗಿನಿಂದ ಸುತ್ತುವರಿದಿವೆ. ಮಹಾ ರಾಜ ಪ್ರಿಯವ್ರತನು ತನಗೆ ವಿಧೇಯರಾಗಿದ್ದ ಆಗ್ನೀಧ್ರ, ಇಧ್ಮಜಿಹ್ವ, ಯಜ್ಞಬಾಹು, ಹಿರಣ್ಯರೇತಸ, ಘೃತಪೃಷ್ಠ, ಮೇಧಾತಿಥಿ ಮತ್ತು ವೀತಿ ಹೋತ್ರರೆಂಬ ಏಳು ಮಂದಿ ಪುತ್ರರನ್ನೂ ಕ್ರಮವಾಗಿ ಆ ಏಳು ದ್ವೀಪಗಳಲ್ಲಿ ಒಂದೊಂದಕ್ಕೆ ಒಬ್ಬೊಬ್ಬನನ್ನು ರಾಜನನ್ನಾಗಿ ಮಾಡಿದನು. ತನ್ನ ಕನ್ಯೆ ಯಾಗಿದ್ದ ಊರ್ಜಸ್ವತಿಯನ್ನು ಶುಕ್ರಾಚಾರ್ಯರಿಗೆ ವಿವಾಹಮಾಡಿ ಕೊಟ್ಟನು. ಊರ್ಜಸ್ವತೀ ಮತ್ತು ಶುಕ್ರಾಚಾರ್ಯರ ಪುತ್ರಿಯಾಗಿ ಜನಿಸಿ ದವಳೇ ದೇವಯಾನಿಯು. ಪ್ರಿಯವ್ರತಮಹಾರಾಜನಿಗೆ ಇಷ್ಟೆಲ್ಲಾ ಪುರು ಷಾರ್ಥವು ಹೇಗೆ ಸಿದ್ಧಿಸಿತು? ಎಂದರೆ : ಶ್ರೀಭಗವಂತನ ಅಡಿದಾವರೆಗಳ

ಧೂಳಿನ ಪ್ರಭಾವದಿಂದ. ಶರೀರದ ಹಸಿವು, ಬಾಯಾರಿಕೆ, ಶೋಕ, ಮೋಹ, ಮುಪ್ಪು, ಮರಣ–ಎಂಬ ಆರು ಗುಣಗಳನ್ನು ಅಥವಾ ಮನಸ್ಸಿನಿಂದೊಡ ಗೂಡಿದ ಆರು ಇಂದ್ರಿಯಗಳನ್ನು ಯಾರು ಗೆದ್ದುಕೊಂಡಿದ್ದಾರೆಯೋ– ಅಂತಹ ಭಗವದ್ಭಕ್ತರಿಗೆ ಇಂತಹ ಪುರುಷಾರ್ಥವು ಸಿದ್ಧಿಸುವುದರಲ್ಲಿ ಅಚ್ಚರಿಯೇನೂ ಇಲ್ಲ. ಏಕೆಂದರೆ : ಎಲ್ಲ ವರ್ಣಗಳಿಂದಲೂ ಹೊರಗೆ ಹಾಕಲ್ಪಟ್ಟ ನೀಚಯೋನಿಯ ಮನುಷ್ಯರೂ ಕೂಡ ಶ್ರೀಭಗವಂತನ ದಿವ್ಯನಾಮವನ್ನು ಒಂದು ಬಾರಿ ಉಚ್ಚರಿಸಿದರೆ ಸಾಕು–ಅವರಿಗೆ ಒಡನೆಯೇ ಸಂಸಾರಬಂಧನ ದಿಂದ ಬಿಡುಗಡೆಯುಂಟಾಗುವುದು.

ಹೀಗೆ ಎಣೆಯಿಲ್ಲದ ಪರಾಕ್ರಮದಿಂದ ಸಂಪನ್ನನಾಗಿದ್ದ ಪ್ರಿಯವ್ರತ ಮಹಾರಾಜನು ತಾನು ದೇವರ್ಷಿನಾರದರ ಅಡಿದಾವರೆಗಳಲ್ಲಿ ಶರಣಾಗತ ನಾಗಿ ಪರಮಾತ್ಮ ತತ್ತ್ವವನ್ನು ಅರಿತಿದ್ದರೂ ಮತ್ತೆ ದೈವವಶದಿಂದ ಪ್ರಪಂಚಕ್ಕೆ ಸಿಕ್ಕಿಹಾಕಿಕೊಂಡಿದ್ದರಿಂದ ನೆಮ್ಮದಿ ಕಳೆದುಕೊಂಡವನಂತೆ ಆಗಿದ್ದುದನ್ನು ಒಮ್ಮೆ ಗಮನಿಸಿ ವಿರಕ್ತನಾಗಿ ಮನಸ್ಸಿನಲ್ಲಿ–'ಅಯ್ಯೋ! ನಾನು ಎಂತಹ ತಪ್ಪನ್ನು ಮಾಡಿದೆನು? ವಿಷಯಾಸಕ್ತನಾದ ನನ್ನನ್ನು ಇಂದ್ರಿಯಗಳು ಅವಿದ್ಯೆಯಿಂದುಂಟಾದ ವಿಷಮಯವಾದ ವಿಷಯಗಳೆಂಬ ಹಾಳುಬಾವಿ ಯಲ್ಲಿ ತಳ್ಳಿಬಿಟ್ಟಿವೆಯಲ್ಲಾ! ಸಾಕು! ಸಾಕು! ಇದು ತುಂಬಾ ಹೆಚ್ಚಾಯಿತು. ಅಕಟಾ! ನಾನು ಹೆಂಗಸಿನ ಆಟದ ಮೃಗವಾಗಿಬಿಟ್ಟೆನು. ಆಕೆಯು ನನ್ನನ್ನು ಕಪಿಯಂತೆ ಕುಣಿಸಿದಳು. ನನಗೆ ಧಿಕ್ಕಾರವು!'–ಎಂದು ತನ್ನನ್ನು ನಿಂದಿಸಿಕೊಂಡನು. ಪರಮಾರಾಧ್ಯನಾಗಿದ್ದ ಶ್ರೀಹರಿಯ ಕೃಪೆಯಿಂದ ಅವನಲ್ಲಿ ವಿವೇಕವೃತ್ತಿಯು ಎಚ್ಚರಗೊಂಡಿತು. ಆಗ ಆತನು ಇಡೀ ಭೂಮಂಡಲವನ್ನು ವಿಧೇಯರಾಗಿದ್ದ ತನ್ನ ಏಳು ಮಂದಿ ಪುತ್ರರಿಗೆ ಯೋಗ್ಯವಾದ ರೀತಿಯಲ್ಲಿ ಹಂಚಿಕೊಟ್ಟುಬಿಟ್ಟನು. ತಾನು ಅಲ್ಲಿಯವರೆಗೆ ಯಾರೊಡನೆ ಬಗೆ-ಬಗೆಯ ಭೋಗಗಳನ್ನು ಅನುಭವಿಸಿದ್ದನೋ–ಆ ರಾಣಿ ಯನ್ನೂ, ಅಂತೆಯೇ ಸಾಮ್ರಾಜ್ಯಲಕ್ಷ್ಮಿಯನ್ನೂ ಮೃತದೇಹದಂತೆ ತ್ಯಜಿಸಿ ಹೃದಯದಲ್ಲಿ ವೈರಾಗ್ಯವನ್ನು ತಾಳಿ ಶ್ರೀಭಗವಂತನ ದಿವ್ಯಕಥೆಗಳನ್ನು ಚಿಂತಿ ಸುತ್ತಾ ಅದರ ಪ್ರಭಾವದಿಂದ ದೇವರ್ಷಿನಾರದರು ತನಗೆ ಉಪದೇಶ ಮಾಡಿದ್ದ ಮಾರ್ಗವನ್ನು ಮತ್ತೆ ಅನುಸರಿಸತೊಡಗಿದನು. ಆ ಮಹಾರಾಜ

ಪ್ರಿಯವ್ರತನ ಮಹಿಮೆಯ ವಿಷಯದಲ್ಲಿ ಈ ಪ್ರಶಂಸಾಶ್ಲೋಕಗಳು ಪ್ರಸಿದ್ಧ ವಾಗಿವೆ : (ಶ್ಲೋಕ 25-38)

ಪ್ರಿಯವ್ರತಕೃತಂ ಕರ್ಮ ಕೋ ನು ಕುರ್ಯಾದ್ವಿನೇಶ್ವರಮ್ ।
ಯೋ ನೇಮಿನಿಮ್ನೈರಕರೋಚ್ಛಾಯಾಂ ಘ್ನನ್ಸಪ್ತ ವಾರಿಧೀನ್ ॥

ಭೂಸಂಸ್ಥಾನಂ ಕೃತಂ ಯೇನ ಸರಿದ್ಗಿರಿವನಾದಿಭಿಃ ।
ಸೀಮಾ ಚ ಭೂತನಿರ್ವೃತ್ಯೈ ದ್ವೀಪೇ ದ್ವೀಪೇ ವಿಭಾಗಶಃ ॥೪೦॥

ಭೌಮಂ ದಿವ್ಯಂ ಮಾನುಷಂ ಚ ಮಹಿತ್ವಂ ಕರ್ಮಯೋಗಜಮ್ ।
ಯಶ್ಚಕ್ರೇ ನಿರಯೌಪಮ್ಯಂ ಪುರುಷಾನುಜನಪ್ರಿಯಃ ॥೪೧॥

ಪ್ರಿಯವ್ರತಮಹಾರಾಜನು ಮಾಡಿದ ಮಹಿಮೆಯ ಕರ್ಮಗಳನ್ನು ಸರ್ವಶಕ್ತಿಶಾಲಿಯಾದ ಈಶ್ವರನನ್ನು ಹೊರತು ಬೇರೆ ಯಾವನು ತಾನೇ ಮಾಡಬಲ್ಲನು? ಆತನು ರಾತ್ರಿಯ ಕಗ್ಗತ್ತಲನ್ನೇ ಧ್ವಂಸಮಾಡಲು ಪ್ರಯತ್ನಿಸುತ್ತಾ ತನ್ನ ರಥಚಕ್ರದ ಪಟ್ಟಿಯಿಂದಾದ ಗೆರೆ-ಗುರುತುಗಳಿಂದಲೇ ಸಪ್ತಸಮುದ್ರಗಳನ್ನು ನಿರ್ಮಿಸಿದನಲ್ಲವೇ? ಪ್ರಾಣಿಗಳ ಸಂರಕ್ಷಣೆಗಾಗಿ ಇಡೀ ಭೂಮಂಡಲವನ್ನು ದ್ವೀಪಗಳ ಮೂಲಕ ವಿಭಾಗಮಾಡಿ ಪ್ರತಿಯೊಂದು ದ್ವೀಪದಲ್ಲಿಯೂ ಬೇರೆ-ಬೇರೆ ನದಿಗಳು, ಅರಣ್ಯಗಳು, ಪರ್ವತಗಳು ಮುಂತಾದುವುಗಳಿಂದ ಎಲ್ಲೆ-ಕಟ್ಟುಗಳನ್ನು ನಿಶ್ಚಯಗೊಳಿಸಿದನು. ಭಗವದ್ಭಕ್ತಶಿರೋಮಣಿಗಳಾದ ನಾರದಮಹರ್ಷಿಗಳ ನೆಚ್ಚಿನ ಭಕ್ತನಾಗಿದ್ದನು. ಪಾತಾಳಲೋಕ, ದೇವಲೋಕ ಮತ್ತು ಭೂಲೋಕಗಳ ಐಶ್ವರ್ಯವನ್ನೂ, ಕರ್ಮಗಳಿಂದಲೂ ಯೋಗದಿಂದಲೂ ಸಂಪಾದಿಸಿದ್ದ ಐಶ್ವರ್ಯವನ್ನೂ ನರಕಕ್ಕೆ ಎಣೆಯೆಂದು ಭಾವಿಸಿದ ವೈರಾಗ್ಯಚಕ್ರವರ್ತಿಯಾಗಿದ್ದನು."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಪಂಚಮಸ್ಕಂಧದ ೧ನೆಯ ಅಧ್ಯಾಯವು ಮುಗಿಯಿತು.

ಪಂಚಮಸ್ಕಂಧ ೨ನೆಯ ಅಧ್ಯಾಯ

ಆಗ್ನೀಧ್ರನ ಚರಿತ್ರೆ

ಶ್ರೀಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಹೇಳುತ್ತಾರೆ :

ಏವಂ ಪಿತರಿ ಸಮ್ಪ್ರವೃತ್ತೇ ತದನುಶಾಸನೇ ವರ್ತಮಾನ ಆಗ್ನೀಧ್ರೋ ಜಮ್ಬೂದ್ವೀಪೌಕಸಃ ಪ್ರಜಾ ಔರಸವದ್ಧರ್ಮಾವೇಕ್ಷ ಮಾಣಃ ಪರ್ಯಗೋಪಾಯತ್ ||೧||

"ರಾಜೇಂದ್ರನೇ! ಕೇಳು : ತಂದೆಯಾದ ಪ್ರಿಯವ್ರತಮಹಾರಾಜನು ತಪೋನಿಷ್ಠನಾಗಿ ಬ್ರಹ್ಮೀಭೂತನಾದ ಬಳಿಕ ಮಹಾರಾಜ ಆಗ್ನೀಧ್ರನು ಆತನ ಆಜ್ಞೆಯನ್ನು ಅನುಸರಿಸುತ್ತಾ ಜಂಬೂದ್ವೀಪದ ಪ್ರಜೆಗಳನ್ನು ಧರ್ಮಾನು ಸಾರವಾಗಿ ತನ್ನ ಔರಸಪುತ್ರರಂತೆ ಪಾಲಿಸತೊಡಗಿದರು.

ಒಂದು ಬಾರಿ ಆತನು ಪಿತೃಋಣವನ್ನು ತೀರಿಸಿ ಪಿತೃಲೋಕವನ್ನು ಗಳಿಸುವುದಕ್ಕಾಗಿ ಸತ್ಪುತ್ರನನ್ನು ಪಡೆಯುವ ಇಚ್ಛೆಯಿಂದ ಪೂಜೆಯ ಸಾಮಗ್ರಿಗಳೆಲ್ಲವನ್ನೂ ಸಂಗ್ರಹಿಸಿಕೊಂಡು ಸುರಸುಂದರಿಯರ ಕ್ರೀಡಾಸ್ಥಳ ವಾದ ಮಂದರಪರ್ವತದ ಕಣಿವೆಗೆ ಹೋಗಿ ಅಲ್ಲಿ ತಪೋನಿಷ್ಠನಾಗಿ ಏಕಾಗ್ರ ವಾದ ಚಿತ್ತದಿಂದ ಪ್ರಜಾಪತಿಗಳಿಗೆಲ್ಲಾ ಪತಿಗಳಾದ ಬ್ರಹ್ಮದೇವರನ್ನು ಆರಾ ಧಿಸತೊಡಗಿದನು. ಆದಿದೇವರಾದ ಭಗವಂತರಾದ ಬ್ರಹ್ಮದೇವರಿಗೆ ಆತನ ಅಭಿಲಾಷೆಯು ತಿಳಿಯಿತು. ಆದ್ದರಿಂದ ಅವರು ತಮ್ಮ ಸಭೆಯಲ್ಲಿ ಗಾನಸೇವೆ ಯನ್ನು ಮಾಡುತ್ತಿದ್ದ ಪೂರ್ವಚಿತ್ತಿಯೆಂಬ ಅಪ್ಸರೆಯನ್ನು ಆತನ ಬಳಿಗೆ ಕಳುಹಿಸಿದರು. ಆಗ್ನೀಧ್ರನ ಆಶ್ರಮದ ಬಳಿ ಒಂದು ಅತಿರಮಣೀಯವಾದ ಉಪವನವಿತ್ತು. ಆ ಉದ್ಯಾನವನದಲ್ಲಿ ಬಗೆ-ಬಗೆಯ ಬತ್ತದ ಸಸಿಗಳಿಗೆ ಮತ್ತು ಮರಗಳ ಕೊಂಬೆಗಳಿಗೆ ಹೊಂಬಣ್ಣದ ಬಳ್ಳಿಗಳು ಹಬ್ಬಿಕೊಂಡಿ ದ್ದುವು. ಅವುಗಳ ಮೇಲೆ ನವಿಲು-ಗಿಳಿಗಳೇ ಮುಂತಾದ ಪಕ್ಷಿದಂಪತಿಗಳು ಕುಳಿತು ಇಂಪಾಗಿ ಧ್ವನಿಮಾಡುತ್ತಿದ್ದುವು. ಅವುಗಳ ಷಡ್ಜವೇ ಮುಂತಾದ ಧ್ವನಿಗಳನ್ನು ಕೇಳಿ ಸ್ಫೂರ್ತಿಗೊಂಡ ನೀರುಕೋಳಿ, ಕಾರಂಡವ, ಕಲಹಂಸ ಗಳೇ ಮುಂತಾದ ನೀರುಹಕ್ಕಿಗಳು ಬಗೆ-ಬಗೆಯಾಗಿ ಕಲ-ಕಲನಿನಾದವನ್ನು ಮಾಡುತ್ತಿದ್ದುವು. ಆ ಮಧುರಧ್ವನಿಯು ಅಲ್ಲಿಯ ಕಮಲಪುಷ್ಪಗಳಿಂದ

ರಮಣೀಯವಾದ ನಿರ್ಮಲವಾದ ಸರೋವರದಲ್ಲಿ ಪ್ರತಿಧ್ವನಿಯನ್ನು ಮೊಳಗಿಸುತ್ತಿತ್ತು. ಪೂರ್ವಚಿತ್ತಿಯು ಇಂತಹ ಕಮನೀಯವಾದ ಉಪವನಕ್ಕೆ ಬಂದು ಅಲ್ಲಿ ಸಂಚರಿಸತೊಡಗಿದಳು. ಆಗ ಆ ರಾಜನು ಸುಂದರವಾದ ಮಂದಗಮನದಿಂದ ಹೆಜ್ಜೆಹಾಕುತ್ತಾ ವೈಯ್ಯಾರದಿಂದ ಸಂಚಾರಮಾಡು ತ್ತಿದ್ದ ಆ ರಮಣೀಮಣಿಯ ಪಾದಗಳಲ್ಲಿ ಅಡಿಗಡಿಗೂ ಝಣ-ಝಣಿ ಸುತ್ತಿದ್ದ ಕಾಲ್ಗಡಗಗಳ ಇಂಪಾದ ನಾದವನ್ನು ಕೇಳಿ, ಸಮಾಧಿಯೋಗದಿಂದ ಮುಚ್ಚಿಕೊಂಡಿದ್ದ, ಕಮಲದ ಮೊಗ್ಗಿನಂತೆ ಮನೋಹರವಾಗಿದ್ದ ತನ್ನ ಕಣ್ಣುಗಳನ್ನು ಕೊಂಚ ತೆರೆದುನೋಡಲು–ಆತನಿಗೆ ಆ ಅಪ್ಸರೆಯು ಕಾಣಿಸಿದಳು. ಆ ರಮಣಿಯು ಹೆಣ್ಣು ದುಂಬಿಯಂತೆ ಒಂದೊಂದು ಹೂವಿನ ಬಳಿಗೂ ಹೋಗಿ ಅದನ್ನು ಮೂಸಿನೋಡುತ್ತಾ, ದೇವತೆಗಳ ಮತ್ತು ಮನುಷ್ಯರ ಮನಸ್ಸು ಮತ್ತು ಕಣ್ಣುಗಳೆರಡಕ್ಕೂ ಆಹ್ಲಾದವನ್ನುಂಟು ಮಾಡುತ್ತಿದ್ದ ವಿಲಾಸಪೂರ್ಣವಾದ ಮೆಲ್ನಡಿಗೆಯಿಂದಲೂ, ಕ್ರೀಡೆಯ ಚಾಪಲ್ಯದಿಂದಲೂ, ಲಜ್ಜೆಯಿಂದಲೂ, ವಿನಯದಿಂದಲೂ ಕೂಡಿದ ಓರೆ ನೋಟದಿಂದಲೂ, ಸುಮಧುರವಾದ ವಾಣಿಯಿಂದಲೂ ಮತ್ತು ಚೆಲುವಿನ ನೆಲೆಯಾದ ಸರ್ವಾವಯವಗಳಿಂದಲೂ–ಮನುಷ್ಯರ ಮನಸ್ಸಿನಲ್ಲಿ ಕಾಮ ದೇವನು ಪ್ರವೇಶಮಾಡಲು ದ್ವಾರದಂತೆ ಎಡೆಮಾಡಿಕೊಡುತ್ತಿದ್ದಳು. ಆ ಸುಂದರಿಯು ನಗು-ನಗುತ್ತಾ ಮಾತನಾಡತೊಡಗಿದಾಗ ಆಕೆಯ ಮುಖ ದಿಂದ ಅಮೃತಮಯವಾಗಿ ಮದವನ್ನುಂಟುಮಾಡುವ ಜೇನು ಒಸರು ವಂತಿತ್ತು. ಮುಖಕಮಲದ ಪರಿಮಳದಿಂದ ಮತ್ತೇರಿದ ದುಂಬಿಗಳು ಆ ಮುಖಕಮಲವನ್ನು ಮುತ್ತುತ್ತಿರಲು–ತನ್ನನ್ನು ಅವುಗಳಿಂದ ರಕ್ಷಿಸಿಕೊಳ್ಳಲು ಬೇಗ-ಬೇಗನೆ ಹೆಜ್ಜೆಹಾಕುತ್ತಿರುವಾಗ ಸ್ತನಕಲಶಗಳೂ, ಕೇಶಪಾಶಗಳೂ ನಡುವಿನ ಒಡ್ಯಾಣವೂ ಚಲಿಸುತ್ತಿದ್ದುವು. ಇಂತಹ ಸೊಬಗಿನಿಂದ ಕೂಡಿದ್ದ ಆಕೆಯನ್ನು ಕಂಡೊಡನೆಯೇ–ಭಗವಂತನಾದ ಮನ್ಮಥನು ತನ್ನ ಹೃದಯವನ್ನು ಹೊಗಲು–ಆತನಿಗೆ ಪರವಶನಾಗಿ ಆ ಆಗ್ನೀಧ್ರನು ಏನು ಮಾಡುವುದಕ್ಕೂ ತೋರದೇ ಜಡನಂತಾಗಿ ಆಕೆಗೆ ಹೀಗೆಂದನು : (ಶ್ಲೋಕ 2-6)

"ಓ ಮುನಿವರ್ಯನೇ! ನೀನು ಯಾರು? ಈ ಪರ್ವತದ ಮೇಲೆ ಏನು ಮಾಡಬೇಕೆಂದಿರುವೆ? ನೀನು ಪರದೇವತೆಯಾದ ನಾರಾಯಣನ

ವಿಶೇಷವಾದ ಮಾಯೆಯಲ್ಲ ತಾನೇ? ಸ್ನೇಹಿತನೇ! ನೀನು (ಈ ಹುಬ್ಬುಗಳ ರೂಪದಲ್ಲಿ) ನಾಣೇ ಇಲ್ಲದ ಎರಡು ಧನುಸ್ಸುಗಳನ್ನು ಏಕೆ ಧರಿಸಿದ್ದೀಯೇ? ಇವುಗಳಿಂದ ನಿನಗೆ ಏನಾದರೂ ಪ್ರಯೋಜನವುಂಟೇ ಅಥವಾ ಈ ಸಂಸಾರ ವೆಂಬ ಅರಣ್ಯದಲ್ಲಿ ಇವುಗಳಿಂದ ನನ್ನಂತಹ ಮದಿಸಿದ ಮೃಗಗಳನ್ನು ಬೇಟೆಯಾಡಲು ಬಯಸುತ್ತಿರುವೆಯಾ? ನಿನ್ನ ಈ (ಕಡೆಗಣ್ಣುಗಳ ನೋಟ ವೆಂಬ) ಬಾಣಗಳು ಎಷ್ಟು ಚೂಪಾಗಿ ಚೆಲುವಾಗಿವೆ! ಇಲ್ಲಿ ಈ ಅರಣ್ಯದಲ್ಲಿ ಓಡಾಡುತ್ತಾ ನೀನು ಇವುಗಳನ್ನು ಯಾರ ಮೇಲೆ ಪ್ರಯೋಗಿಸಬೇಕೆಂದಿ ರುವೆ? ಇಲ್ಲಿ ನಿನ್ನನ್ನು ಎದುರಿಸುವವನು ಯಾರೂ ಕಂಡುಬರುವುದಿಲ್ಲ. ಇಂತಹ ನಿನ್ನ ಪರಾಕ್ರಮವು ಜಡವಾದ ಬುದ್ಧಿಯುಳ್ಳ ನಮ್ಮಂತಹ ವರಿಗೂ ಕಲ್ಯಾಣವನ್ನುಂಟುಮಾಡಲಿ! (ದುಂಬಿಗಳ ಕಡೆ ನಿರ್ದೇಶಿಸಿ :) ಭಗವಂತನಾದ ಋಷಿವರ್ಯನೇ! ನಿನ್ನ ಸುತ್ತಲೂ ಅಧ್ಯಯನ ಮಾಡುತ್ತಿರುವ ಈ ಶಿಷ್ಯರು ನಿರಂತರವಾಗಿ ರಹಸ್ಯಪೂರ್ಣವಾದ ಸಾಮ ವೇದವನ್ನು ಗಾನಮಾಡುತ್ತಾ ಶ್ರೀಭಗವಂತನನ್ನು ಸ್ತುತಿಸುತ್ತಿರುವರಲ್ಲವೇ? ಋಷಿಗಣಗಳು ವೇದಗಳ ಶಾಖೆಗಳನ್ನು ಅನುಸರಿಸುವಂತೆಯೇ–ಇವೆಲ್ಲವೂ ನಿನ್ನ ತುರುಬಿನಿಂದ ಜಾರುತ್ತಿರುವ ಹೂವುಗಳನ್ನು ಸೇವಿಸುತ್ತಾ ಆನಂದ ಪಡುತ್ತಿವೆಯಲ್ಲಾ! (ಆಕೆಯ ಕಾಲಂದುಗೆಗಳ ಕಡೆ ಕೈ ತೋರಿಸಿ) ಎಲೈ ಬ್ರಾಹ್ಮಣೋತ್ತಮನೇ! ನಿನ್ನ ಪಾದಗಳೆಂಬ ಪಂಜರದಲ್ಲಿ ತಿತ್ತಿರಿಪಕ್ಷಿಗಳಂತೆ ಅಡಗಿಸಿಕೊಂಡಿರುವ ಈ ರತ್ನಗಳ ರೂಪವು ಹೊರತೋರದೇ ಶಬ್ದವು ಮಾತ್ರ ಕೇಳಿಬರುತ್ತಿದೆಯಲ್ಲಾ! (ಆಕೆಯ ಒಡ್ಯಾಣಸಹಿತವಾದ ಪೀತಾಂಬರ ದಲ್ಲಿ ಅಲಗುಗಳ ಕಾಂತಿಯನ್ನು ಉತ್ಪ್ರೇಕ್ಷಿಸುತ್ತಾ) ಎಲೈ ಗೆಳೆಯನೇ! ನಿನ್ನ ನಿತಂಬಗಳ ಮೇಲೆ ಈ ಕದಂಬಕುಸುಮಗಳ ಕಾಂತಿಯು ಎಲ್ಲಿಂದ ಬಂದಿತು? ಇವುಗಳ ಮೇಲಂತೂ (ರನ್ನದ ಒಡ್ಯಾಣವೆಂಬ) ಜ್ವಾಲೆಗಳ ಮಂಡಲವೇ ತೊಳ-ತೊಳಗಿ ಬೆಳಗುತ್ತಿದೆ! ಆದರೆ ನಿನ್ನ ನಾರುಮಡಿಯ ಉಡಿಗೆಯೆಲ್ಲಿ?–ಎಂಬುದೇ ಪ್ರಶ್ನೆಯಾಗಿದೆ. (ಕೇಸರಿಕುಂಕುಮದಿಂದ ಮಂಡಿತವಾಗಿದ್ದ ಕುಚಗಳನ್ನು ನಿರ್ದೇಶಿಸುತ್ತಾ) ದ್ವಿಜವರ್ಯನೇ! ಅತಿ ಸುಂದರವಾಗಿ ನಿನ್ನ ಎದೆಯಲ್ಲಿ ಕಂಗೊಳಿಸುತ್ತಿರುವ ಈ ಎರಡು ಕೊಂಬು ಗಳಲ್ಲಿ ಏನು ತುಂಬಿದೆ? ಅವಶ್ಯವಾಗಿಯೂ ಇವುಗಳಲ್ಲಿ ಬಹಳ ಅಮೂಲ್ಯ

ವಾದ ರತ್ನಗಳು ತುಂಬಿರಬೇಕು. ಅದಕ್ಕೇ ನಿನ್ನ ನಡುವು ಕೃಶವಾಗಿದ್ದರೂ ಅದರಿಂದ ಇವುಗಳ ಭಾರವನ್ನು ಹೊತ್ತುಕೊಂಡಿದ್ದೀಯೆ! ಇವುಗಳನ್ನು ಕಂಡು ನನ್ನ ದೃಷ್ಟಿಯು ಅಲ್ಲೇ ನೆಟ್ಟುಹೋಗಿದೆ. ಎಲೈ ಸುಭಗನೇ! ಮತ್ತೊಂದು ವಿಷಯವನ್ನು ಕೇಳುತ್ತೇನೆ. ಈ ಕೊಂಬುಗಳ ಮೇಲೆ ನೀನು ಕೆಂಪು ಬಣ್ಣದ ಯಾವುದೋ ಲೇಪವನ್ನು ಹಚ್ಚಿಕೊಂಡಿದ್ದೀಯಲ್ಲಾ! ಅದು ಏನು? ಅದರ ಸುವಾಸನೆಯಿಂದ ನನ್ನ ಇಡೀ ಆಶ್ರಮವೇ ಘಮ-ಘಮಿಸುತ್ತಿದೆಯಲ್ಲಾ! ಮಿತ್ರವರೇಣ್ಯನೇ! ನಿನ್ನ ಸ್ವಂತ ದೇಶ ಯಾವುದೆಂಬುದನ್ನು ನನಗೆ ತೋರಿಸು. ಅಲ್ಲಿಯ ನಿವಾಸಿಗಳು ತಮ್ಮ ವಕ್ಷಃಸ್ಥಳದ ಮೇಲೆ ನಮ್ಮಂತಹ ಪ್ರಾಣಿಗಳ ಚಿತ್ತವನ್ನು ಕಲಕುವ ಅದ್ಭುತವಾದ ವಸ್ತುಗಳನ್ನೂ, ಮುಖದಲ್ಲಿ ವಿಚಿತ್ರವಾದ ಹಾವ-ಭಾವ, ವಿಲಾಸ, ಸವಿಮಾತು ಮತ್ತು ಅಧರಾಮೃತದಂತಹ ಅದ್ಭುತವಾದ ವಸ್ತುಗಳನ್ನೂ ಹೊತ್ತಿರುವ ಅಂಗೋಪಾಂಗಗಳಿಂದ ಕಂಗೊಳಿಸುತ್ತಿರಬೇಕು. ಪ್ರಿಯನೇ! ಯಾವ ವಸ್ತುವನ್ನು ತಿನ್ನುವುದರಿಂದ ನಿನ್ನ ಮುಖದಿಂದ ಈ ಸುವಾಸನೆಯು ಹೊರಹೊಮ್ಮುತ್ತಿದೆ? ನಿನ್ನ ಆಹಾರವು ಯಾವುದು? ನೀನು ಮಹಾವಿಷ್ಣುದೇವರ ಕಳೆಯಾಗಿರಬೇಕು. ಅದಕ್ಕೇ ನಿನ್ನ ಕಿವಿಗಳಲ್ಲಿ ಮೀನುಗಳಂತಹ ರತ್ನಘಟಿತವಾದ ಇಂತಹ ಮಕರಕುಂಡಲಗಳೂ ಥಳ-ಥಳಿಸುತ್ತಿವೆ. ಚಲಿಸುತ್ತಿರುವ ಮೀನುಗಳಂತೆ ಹೊಳೆಯುವ ಕಣ್ಣುಗಳಿಂದಲೂ, ಹಂಸದಂತೆ ಕಂಗೊಳಿಸುತ್ತಿರುವ ಸುಲಿಹಲ್ಲುಗಳಿಂದಲೂ, ಹಣೆಯಲ್ಲಿ ಒಪ್ಪುತ್ತಿರುವ ಭ್ರಮರಗಳನ್ನು ಹೋಲುವ ಮುಂಗುರುಳುಗಳಿಂದಲೂ ನಿನ್ನ ಈ ಮುಖವು ಸುಂದರವಾದ ಸರೋವರವನ್ನು ಸರಿಹೋಲುತ್ತಿದೆ. ನಿನ್ನ ಕರಕಮಲಗಳಿಂದ ಹೊಡೆದು ಪುಟಹಾರಿಸುತ್ತಿರುವ ಈ ಆಟದ ಚೆಂಡು ದಿಕ್ಕು-ವಿದಿಕ್ಕುಗಳಲ್ಲಿ ಓಡಾಡುತ್ತಾ ನನ್ನ ಕಣ್ಣುಗಳನ್ನು ಚಂಚಲಗೊಳಿಸುತ್ತಿದೆ. ಮನಸ್ಸಿನಲ್ಲೂ ಗಲಿ-ಬಿಲಿಯನ್ನುಂಟುಮಾಡುತ್ತಿದೆ. ಕೊಂಕಾದ ಜಡೆಕೂದಲು ಬಿಚ್ಚಿಹೋಗಿರುವುದನ್ನು ನೀನು ಗಮನಿಸುತ್ತಿಲ್ಲವಲ್ಲಾ! ಅರೇ! ಈ ಧೂರ್ತನಾದ ವಾಯುವು ಬಾರಿ-ಬಾರಿಗೂ ನಿನ್ನ ನೀವಿಯನ್ನು ಹಾರಿಸಲು ಪ್ರಯತ್ನಿಸುತ್ತಿರುವನಲ್ಲಾ! ತಪೋಧನನೇ! ತಪಸ್ವಿಗಳ ತಪಸ್ಸನ್ನು ಭ್ರಷ್ಟಗೊಳಿಸುವ ಈ ಅನುಪಮವಾದ ರೂಪ-ಲಾವಣ್ಯಗಳನ್ನು ನೀನು ಯಾವ ತಪಸ್ಸಿನ ಪ್ರಭಾವದಿಂದ

ಪಡೆದಿರುವೆ? ಮಿತ್ರನೇ! ಇಲ್ಲಿ ಬಾ! ಕೆಲವು ದಿನಗಳ ಕಾಲ ನನ್ನೊಡನೆ ಇದ್ದು ತಪಸ್ಸುಮಾಡು ಅಥವಾ ವಿಶ್ವವನ್ನು ಸೃಷ್ಟಿಯಿಂದ ವಿಸ್ತಾರಗೊಳಿಸಬೇಕೆಂಬ ಇಚ್ಛೆಯಿಂದ ಬ್ರಹ್ಮದೇವರೇ ನನ್ನ ಮೇಲೆ ಹೀಗೆ ಕೃಪೆಮಾಡಿರಬಹುದೇ? ನಿಜವಾಗಿಯೂ ನೀನು–ಬ್ರಹ್ಮದೇವರು ನನಗೆ ದಯಪಾಲಿಸಿ ರುವ ವರಪ್ರಸಾದವೇ ಆಗಿದ್ದೀಯೆ. ಈಗ ನಾನು ನಿನ್ನನ್ನು ಬಿಡಲಾರೆನು. ನನ್ನ ಮನಸ್ಸು ಮತ್ತು ಕಣ್ಣುಗಳು ನಿನ್ನಲ್ಲಿ ನೆಟ್ಟುಹೋಗಿ ಬೇರೆಲ್ಲೂ ಹೋಗಲು ಬಯಸುತ್ತಿಲ್ಲ. ಮನೋಹರವಾದ ಕೊಂಬುಗಳುಳ್ಳವಳೇ! ನಿನ್ನ ಮನಸ್ಸು ಬಂದೆಡೆಗೆ ನನ್ನನ್ನು ಕರೆದುಕೊಂಡು ಹೋಗು. ನಾನು ನಿನ್ನನ್ನು ಅನುಸರಿಸಿ ವ್ರತಮಾಡುವವನು ; ನಿನ್ನ ಅನುಚರನು. ನಿನ್ನ ಈ ಮಂಗಳ ಮಯರಾದ ಸಖಿಯರೂ ನಮ್ಮೊಡನೆ ಇರಲಿ."* (ಶ್ಲೋಕ 7-16)

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

"ಎಲೈ ಭರತಕುಲಮಣಿಯೇ! ದೇವತೆಗಳಂತೆ ಅತಿಬುದ್ಧಿ ಶಾಲಿಯೂ, ಸ್ತ್ರೀಯರನ್ನು ಪ್ರಸನ್ನಗೊಳಿಸುವುದರಲ್ಲಿ ಅತಿಕುಶಲನೂ ಆದ ಆಗ್ನೀಧ್ರನು ಈ ರೀತಿಯಲ್ಲಿ ರತಿಚಾತುರ್ಯದಿಂದ ಕೂಡಿದ ಸವಿಮಾತು ಗಳಿಂದ ಆ ಅಪ್ಸರೆಯನ್ನು ಒಲಿಸಿಕೊಂಡು ಸಂತೋಷಪಡಿಸಿದನು. ವೀರಾಧಿ ವೀರರಿಗೆ ನಾಯಕನಾದ ಆ ಆಗ್ನೀಧ್ರನ ಬುದ್ಧಿ, ಶೀಲ, ರೂಪ, ವಯಸ್ಸು, ಕಾಂತಿ ಮತ್ತು ಔದಾರ್ಯಗಳಿಂದ ಸೆಳೆಯಲ್ಪಟ್ಟ ಆ ಪೂರ್ವಚಿತ್ತಿಯು ಆ ಜಂಬೂದ್ವೀಪಾಧಿಪತಿಯೊಡನೆ ಅನೇಕ ಸಾವಿರ ವರ್ಷಗಳವರೆಗೆ ಪೃಥಿವಿ ಮತ್ತು ಸ್ವರ್ಗಗಳ ಭೋಗಗಳನ್ನು ಅನುಭವಿಸುತ್ತಿದ್ದಳು. ನೃಪಶ್ರೇಷ್ಠನಾದ ಆಗ್ನೀಧ್ರನು ಆಕೆಯಲ್ಲಿ ನಾಭಿ, ಕಿಂಪುರುಷ, ಹರಿವರ್ಷ, ಇಲಾವೃತ, ರಮ್ಯಕ, ಹಿರಣ್ಮಯ, ಕುರು, ಭದ್ರಾಶ್ವ ಮತ್ತು ಕೇತುಮಾಲರೆಂಬ ಒಂಬತ್ತು ಮಂದಿ ಪುತ್ರರನ್ನು ಪಡೆದನು.

---

* 'ಚಿತ್ತಂ ಯತಃ ಪ್ರತಿಸರನ್ತು ಶಿವಾಃ ಸಚಿವ್ಯಃ' –ಎಂದು ಮೂಲ. ಇದಕ್ಕೆ ನಿನ್ನ ಸುತ್ತಲೂ ಇರುವ ಹೆಣ್ಣುನರಿಗಳು ಪ್ರದಕ್ಷಿಣವಾಗಿ ಬಂದು ನಮಗೆ ಒಳ್ಳೆಯ ಶಕುನವನ್ನುಂಟುಮಾಡಲಿ–ಎಂದೂ ಇದಕ್ಕೆ ಭಾಷಾಂತರ ಮಾಡುವುದುಂಟು. ಶಿವಾ– ಎಂದರೆ : ಹೆಣ್ಣುನರಿ ಎಂದೂ ಅರ್ಥವಾಗುತ್ತದೆ. ಆದರೆ ಈ ಅರ್ಥವು ಇಲ್ಲಿ ಚೆನ್ನಾಗಿ ಹೊಂದುವುದಿಲ್ಲ. (ಶ್ಲೋಕ ೧೬)

ಪೂರ್ವಚಿತ್ತಿಯು ಹೀಗೆ ವರ್ಷಕ್ಕೆ ಒಬ್ಬೊಬ್ಬನಂತೆ ಒಂಬತ್ತು ಮಂದಿ ಪುತ್ರರನ್ನು ಹಡೆದು ಅವರನ್ನು ಆಗ್ನೀಧ್ರನ ಅರಮನೆಯಲ್ಲಿಯೇ ಬಿಟ್ಟು ತಾನು ಬ್ರಹ್ಮಲೋಕಕ್ಕೆ ತೆರಳಿ ಅಲ್ಲಿ ಬ್ರಹ್ಮದೇವರ ಸೇವೆಯಲ್ಲಿ ತೊಡಗಿದಳು. ಆಗ್ನೀಧ್ರನ ಆ ಪುತ್ರರು ತಾಯಿಯ ಅನುಗ್ರಹದಿಂದ ಸ್ವಾಭಾವಿಕವಾಗಿಯೇ ಸುಂದರಸುದೃಢದೇಹ - ಪರಾಕ್ರಮಗಳಿಂದ ಸಂಪನ್ನರಾಗಿದ್ದರು. ಆಗ್ನೀಧ್ರನು ಜಂಬೂದ್ವೀಪವನ್ನು ವಿಂಗಡಿಸಿ, ಆಯಾ ಪುತ್ರರ ಹೆಸರಿನಿಂದಲೇ ಕರೆಯಲ್ಪಟ್ಟ ಒಂಬತ್ತು ವರ್ಷ (ಭೂಖಂಡ) ಗಳನ್ನಾಗಿ ಮಾಡಿ ಅವುಗಳನ್ನು ಆಯಾ ಪುತ್ರರಿಗೆ ಒಪ್ಪಿಸಿದನು. ಆಗ ಅವರೆಲ್ಲರೂ ತಮ್ಮ ತಮ್ಮ ವರ್ಷಗಳಲ್ಲಿ ಆಧಿಪತ್ಯವನ್ನು ಅನುಭವಿಸತೊಡಗಿದರು. ಆಗ್ನೀಧ್ರಮಹಾರಾಜನಿಗೆ ಪ್ರತಿ ದಿನವೂ ಭೋಗಗಳನ್ನು ಅನುಭವಿಸುತ್ತಿದ್ದರೂ ಅವುಗಳಿಂದ ತೃಪ್ತಿಯೇ ಉಂಟಾಗಲಿಲ್ಲ. ಆತನು ಆ ಅಪ್ಸರೆಯನ್ನೇ ಪರಮಪುರುಷಾರ್ಥವೆಂದು ಭಾವಿಸಿಕೊಂಡಿದ್ದನು. ಆದ್ದರಿಂದ ಪರಲೋಕದಲ್ಲಿಯೂ ಭೋಗದ ಆಸೆಯನ್ನೇ ಹೊಂದಿದ್ದ ಆತನು ವೈದಿಕಕರ್ಮಗಳನ್ನು ಆಚರಿಸಿ– ಪಿತೃದೇವತಾಗಣಗಳು ತಮ್ಮ ಸುಕೃತಗಳಿಗೆ ಅನುಸಾರವಾಗಿ ಬಗೆ-ಬಗೆಯ ಸುಖ-ಭೋಗಗಳನ್ನು ಅನುಭವಿಸುತ್ತಿರುವ ದಿವ್ಯಲೋಕವನ್ನು ಪಡೆದು ಕೊಂಡನು. ತಂದೆಯು ಪರಲೋಕಕ್ಕೆ ತೆರಳಿದನಂತರ ನಾಭಿಯೇ ಮುಂತಾದ ಸೋದರರು ಮೇರುವಿನ ಪುತ್ರಿಯರಾಗಿದ್ದ ಮೇರುದೇವೀ, ಪ್ರತಿರೂಪಾ, ಉಗ್ರದಂಷ್ಟ್ರೀ, ಲತಾ, ರಮ್ಯಾ, ಶ್ಯಾಮಾ, ನಾರೀ, ಭದ್ರಾ ಮತ್ತು ದೇವವೀತಿ–ಎಂಬ ಒಂಬತ್ತು ಮಂದಿ ಕನ್ಯೆಯರನ್ನು ವಿವಾಹ ಮಾಡಿಕೊಂಡರು. (ಶ್ಲೋಕ 17-23)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗತ
ದಲ್ಲಿ ಪಂಚಮಸ್ಕಂಧದ ಎರಡನೆಯ ಅಧ್ಯಾಯವು ಮುಗಿಯಿತು.

ಪಂಚಮಸ್ಕಂಧ ೩ನೆಯ ಅಧ್ಯಾಯ

ನಾಭಿಮಹಾರಾಜನ ಚರಿತ್ರೆ

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ನಾಭಿರಪತ್ಯಕಾಮೋऽಪ್ರಜಯಾ ಮೇರುದೇವ್ಯಾ ಭಗವನ್ತಂ ಯಜ್ಞಪುರುಷಮವಹಿತಾತ್ಮಾಯಜತ ॥೧॥

"ರಾಜೇಂದ್ರನೇ! ಕೇಳು. ಆಗ್ನೀಧ್ರನ ಪುತ್ರನಾದ ನಾಭಿಮಹಾರಾಜನಿಗೆ ಸಂತಾನವಿರಲಿಲ್ಲ. ಆದ್ದರಿಂದ ಆತನು ಅಪುತ್ರವತಿಯಾಗಿದ್ದ ತನ್ನ ಪತ್ನೀ ಮೇರುದೇವಿಯೊಡನೆ ಪುತ್ರಕಾಮನೆಯಿಂದ ಏಕಾಗ್ರವಾದ ಮನಸ್ಸಿನಿಂದ ಭಗವಂತನಾದ ಯಜ್ಞಪುರುಷನನ್ನು ಆರಾಧಿಸಿದನು.

ಯಜ್ಞದಲ್ಲಿ ದೇಶ, ಕಾಲ, ಮಂತ್ರ, ಋತ್ವಿಜರು, ದಕ್ಷಿಣೆ ಮತ್ತು ವೇದೋಕ್ತವಾದ ವಿಧಾನ–ಎಂಬ ಎಲ್ಲ ಸಾಧನಗಳು ಇದ್ದರೂ ಶ್ರೀಭಗವಂತನನ್ನು ಸಾಧಾರಣವಾಗಿ ಅವುಗಳಿಂದ ಹೊಂದಲು ಶಕ್ಯವಿಲ್ಲ. ಆದರೂ ಆತನು ಭಕ್ತವತ್ಸಲನಾದುದರಿಂದ ಭಾಗವತಶ್ರೇಷ್ಠನಾದ ಆ ನಾಭಿ ಮಹಾರಾಜನು ಶ್ರದ್ಧೆಯಿಂದ ವಿಧಿಪೂರ್ವಕವಾಗಿ ಯಜ್ಞದಿಂದ ಆರಾಧನೆ ಮಾಡಿದಾಗ–ಶ್ರೀಭಗವಂತನು ಆ ಭಕ್ತನ ಅಭೀಷ್ಟವನ್ನು ಈಡೇರಿಸಲು ಇಚ್ಛಿಸಿದನು. ಯಜ್ಞದಲ್ಲಿ ಪ್ರವರ್ಗ್ಯವೆಂಬ ಕರ್ಮವು ಆಚರಿಸಲ್ಪಡುತ್ತಿದ್ದಾಗ ಪ್ರಭುವು ಕಣ್ಮನಗಳಿಗೆ ಹಬ್ಬವಾಗಿರುವ ಅವಯವಗಳಿಂದ ಕೂಡಿ ಅತ್ಯಂತ ಸುಂದರವಾಗಿ ಹೃದಯವನ್ನು ಸೂರೆಗೊಳ್ಳುವ ತನ್ನ ದಿವ್ಯಮಂಗಳವಿಗ್ರಹ ದೊಡನೆ ಅಲ್ಲಿ ಪ್ರಕಟಗೊಂಡನು. ಶ್ರೀಸ್ವಾಮಿಯು ಹೊಂಬಣ್ಣದ ಪೀತಾಂ ಬರವನ್ನು ಧರಿಸಿದ್ದನು. ಆತನ ವಕ್ಷಃಸ್ಥಲದಲ್ಲಿ ಸುಮನೋಹರವಾದ ಶ್ರೀವತ್ಸದ ಗುರುತು ಶೋಭಿಸುತ್ತಿತ್ತು. ಭುಜಗಳು ಶಂಖ-ಚಕ್ರ-ಗದೆ-ಪದ್ಮಗಳನ್ನು ಧರಿಸಿ ಮೆರೆಯುತ್ತಿದ್ದುವು. ಕೊರಳಿನಲ್ಲಿ ವನಮಾಲೆಯೂ ಮತ್ತು ಕೌಸ್ತುಭಮಣಿಯೂ ರಾರಾಜಿಸುತ್ತಿದ್ದುವು. ಆತನ ಇಡೀ ಶರೀರವು ಅಂಗ-ಪ್ರತ್ಯಂಗಗಳ ಕಾಂತಿಯನ್ನು ಹೆಚ್ಚಿಸುತ್ತಿದ್ದ ಕಿರಣಜಾಲಗಳಿಂದ ಮಂಡಿತವಾಗಿ ಮಣಿಮಯವಾಗಿದ್ದ ಕಿರೀಟ, ಕುಂಡಲ, ಕಂಕಣ, ಉಡಿದಾರ, ಹಾರ, ತೋಳ್ಬಲೆ, ಕಾಲಂದುಗೆಗಳೇ ಮುಂತಾದ ಭೂಷಣಗಳಿಂದ ಭೂಷಿತವಾಗಿ

ಕಂಗೊಳಿಸುತ್ತಿತ್ತು. ಇಂತಹ ಪರಮತೇಜಸ್ವಿಯಾದ ಚತುರ್ಭುಜನಾದ ಪರಮಪುರುಷನ ಶ್ರೀಮೂರ್ತಿಯನ್ನು ಪ್ರತ್ಯಕ್ಷವಾಗಿ ಕಂಡೊಡನೆಯೇ ಋತ್ವಿಜರು, ಸದಸ್ಯರು ಮತ್ತು ಯಜಮಾನ ಮುಂತಾದ ಎಲ್ಲರೂ– ಧನರಾಶಿಯ ನಿಧಿಯನ್ನು ಪಡೆದ ಕಡುಬಡವನಂತೆ–ಪರಮಾನಂದದಿಂದ ಹಿರಿ-ಹಿರಿ ಹಿಗ್ಗಿದರು. ಅನಂತರ ಎಲ್ಲರೂ ತಲೆಯನ್ನು ತಗ್ಗಿಸಿ ಅತ್ಯಂತ ಆದರದಿಂದ ಪ್ರಭುವನ್ನು ಅರ್ಘ್ಯಾದಿಗಳಿಂದ ಆರಾಧಿಸಿದರು. ಆಗ ಅಲ್ಲಿದ್ದ ಋತ್ವಿಜರು ಸ್ವಾಮಿಯನ್ನು ಹೀಗೆ ಸ್ತುತಿಸಿದರು : (ಶ್ಲೋಕ 2-3)

ಅರ್ಹಸಿ ಮುಹುರುರ್ಹತ್ತಮಾರ್ಹಣಮಸ್ಮಾಕಮನುಪಥಾನಾಂ ನಮೋ ನಮ ಇತ್ಯೇತಾವತ್ಸದುಪಶಿಕ್ಷಿತಂ ಕೋऽರ್ಹತಿ ಪುಮಾ-ನ್ಪ್ರಕೃತಿಗುಣವ್ಯತಿಕರಮತಿರನೀಶ ಈಶ್ವರಸ್ಯ ಹರಸ್ಯ ಪ್ರಕೃತಿ-ಪುರುಷಯೋರರ್ವಾಕ್ತನಾಭಿರ್ನಾಮರೂಪಾಕೃತಿಭೀ ರೂಪ-ನಿರೂಪಣಮ್ ॥೪॥

"ಎಲೈ ಪೂಜ್ಯತಮನಾದ ಪ್ರಭುವೇ! ನಿನ್ನನ್ನೇ ಅನುಸರಣೆಮಾಡು ತ್ತಿರುವ ಭಕ್ತರಾದ ನಮಗೆ ನೀನು ಮತ್ತೆ-ಮತ್ತೆ ಪೂಜನೀಯನಾಗಿದ್ದೀಯೆ. ಆದರೆ ನಿನ್ನನ್ನು ಪೂಜಿಸಲು ನಾವೇನು ಬಲ್ಲೆವು? ಮಹಾಪುರುಷರು ನಮಗೆ ನಿನ್ನನ್ನು ಕುರಿತು 'ನಮೋನಮಃ' ಎಂಬುದನ್ನು ಮಾತ್ರ ಕಲಿಸಿಕೊಟ್ಟಿದ್ದಾರೆ. ನಮ್ಮ ಈ ವಂದನೆಯನ್ನೇ ವಿಧಿಪೂರ್ವಕವಾದ ಪೂಜೆಯೆಂದು ಸ್ವೀಕರಿಸು. ಸ್ವಾಮಿಯೇ! ನೀನು ಪ್ರಕೃತಿಯನ್ನೂ ಪುರುಷನನ್ನೂ ಮೀರಿ ಅವರುಗಳಿಗೆ ನಿಯಾಮಕನಾಗಿರುವವನು. ಅಪ್ರಾಕೃತನಾಗಿರುವ ಸಾಕ್ಷಾತ್ ಪರಮೇಶ್ವರನು. ಹೀಗಿರುವಾಗ ಪ್ರಾಕೃತವಾದ ಗುಣಗಳ ಕಾರ್ಯವಾಗಿರುವ ಈ ಪ್ರಪಂಚದಲ್ಲಿ ಬುದ್ಧಿಯು ಸಿಕ್ಕಿಹಾಕಿಕೊಂಡಿರುವುದರಿಂದ ನಿನ್ನ ಗುಣಗಳನ್ನು ಗಾನ ಮಾಡಲು ಅತ್ಯಂತ ಅಸಮರ್ಥನಾಗಿರುವ ಯಾವ ಪುರಷನು ತಾನೇ ಪ್ರಾಕೃತವಾದ ನಾಮ, ರೂಪ ಮತ್ತು ಆಕೃತಿಗಳ ಮೂಲಕ ನಿನ್ನ ಸ್ವರೂಪ ವನ್ನು ನಿರೂಪಿಸಿಯಾನು?

ಸಕಲಜನನಿಕಾಯವೃಜಿನನಿರಸನಶಿವತಮಪ್ರವರಗುಣಗಣೈ-ಕದೇಶಥನಾದೃತೇ ॥೫॥

ನಿನ್ನ ಅನಂತವಾದ ಪರಮಕಲ್ಯಾಣಪೂರ್ಣವಾದ ಗುಣಗಳು ಎಲ್ಲ ಜನರ ದುಃಖಗಳನ್ನೂ ಹೋಗಲಾಡಿಸುವುವು. ಅವುಗಳನ್ನು ವರ್ಣಿಸಲು ಪ್ರಯತ್ನಿಸುವುದು ಮಹಾಸಾಹಸವೇ ಸರಿ. ಹಾಗೆ ಸಾಹಸಮಾಡುವವನೂ ಕೂಡ ಅವುಗಳ ಒಂದು ಅತ್ಯಲ್ಪಭಾಗವನ್ನು ಮಾತ್ರ ವರ್ಣಿಸಲು ಶಕ್ತನಾಗುವನು.

ಪರಿಜನಾನುರಾಗವಿವರಚಿತಶಬಲಸಂಶಬ್ದಸಲಿಲಸಿತಕಿಸಲಯ-ತುಲಸಿಕಾದೂರ್ವಾಙ್ಕುರೈರಪಿ ಸಮ್ಭೃತಯಾ ಸಪರ್ಯಯಾ ಕಿಲ ಪರಮ ಪರಿತುಷ್ಯಸಿ ॥೬॥

ಆದರೆ ಪ್ರಭುವೇ! ನಿನ್ನ ದಯೆಯನ್ನು ಹೇಗೆ ವರ್ಣಿಸೋಣ? ಭಕ್ತರು ಪ್ರೇಮದಿಂದ ಗದ್ಗದವಾದ ಕಂಠದಿಂದ ಸ್ತುತಿಸುತ್ತಾ ನೀರು, ಶುದ್ಧವಾದ ಎಲೆಚಿಗುರು, ತುಲಸಿ ಮತ್ತು ಗರಿಕೆಗಳೇ ಮುಂತಾದ ಸಾಮಾನ್ಯವಾಗಿರುವ ಸಾಮಗ್ರಿಗಳಿಂದ ಪೂಜೆಮಾಡಿದರೂ ನೀನು ಅತ್ಯಂತವಾಗಿ ಸಂತೋಷಪಡುವೆ.*

ಅಥಾನಯಾಪಿ ನ ಭವತ ಇಜ್ಯಯೋರುಭಾರಭರಯಾ ಸಮುಚಿತಮರ್ಥಮಿಹೋಪಲಭಾಮಹೇ ॥೭॥

ಭಕ್ತಿಯೊಂದು ಇಲ್ಲದೇ ಇದ್ದ ಪಕ್ಷದಲ್ಲಿ ದ್ರವ್ಯ-ಫಲಗಳೇ ಮಂತಾದ ಎಷ್ಟು ಯಜ್ಞಸಂಭಾರಗಳನ್ನು ಸಂಗ್ರಹಿಸಿ ಸರ್ವಾಂಗಸಹಿತವಾಗಿ ಯಜ್ಞಗಳನ್ನು ಮಾಡಿದರೂ ಅವುಗಳಿಂದ ನಿನಗೆ ಕೊಂಚವೂ ಪ್ರಯೋಜನವಿಲ್ಲವೆಂದು ನಾವು ಬಲ್ಲೆವು.

ಆತ್ಮನ ಏವಾನುಸವನಮಞ್ಜಸಾವ್ಯತಿರೇಕೇಣ ಬೋಭೂಯ-ಮಾನಾಶೇಷಪುರುಷಾರ್ಥಸ್ವರೂಪಸ್ಯ ಕಿನ್ತು ನಾಥಾಶಿಷ ಆಶಾಸಾನಾ-ನಾಮೇತದಭಿಸಂರಾಧನಮಾತ್ರಂ ಭವಿತುಮರ್ಹತಿ ॥೮॥

ಆದರೂ ತನಗೆ ತಾನೇ ಸದಾ ಸಂಪೂರ್ಣವಾಗಿ ಬೆಳಗುತ್ತಿರುವ ಸಂಪೂರ್ಣಪುರುಷಾರ್ಥಸ್ವರೂಪವಾದ ಯಾವ ಪರಮಾನಂದವುಂಟೋ–

---

* **ಹೋಲಿಕೆ :– ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।**
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ॥
(ಶ್ರೀಗೀತಾ ಅಧ್ಯಾಯ ೯) (ಶ್ಲೋಕ ೭)

ಆ ಪರಮಾನಂದದ ಸಾಕ್ಷಾತ್ ಸ್ವರೂಪವೇ ನೀನು. ಪೂರ್ಣಕಾಮನೂ ನಿತ್ಯ ತೃಪ್ತನೂ ಆಗಿರುವ ನಿನಗೆ ಈ ಪೂಜಾದಿಗಳಿಂದ ಯಾವ ಪ್ರಯೋಜನವೂ ಇಲ್ಲ. ಆದರೂ ಬಗೆ-ಬಗೆಯ ಕಾಮನೆಗಳಿಂದ ತುಂಬಿದ ಸಕಾಮಭಕ್ತರಾದ ನಮಗೆ ನಿನ್ನನ್ನು ಕುರಿತ ಈ ಯಜ್ಞವೇ ಮುಂತಾದ ಕರ್ಮಗಳೇ ತಕ್ಕ ಇಷ್ಟಾರ್ಥಸಾಧನಗಳಾಗಬೇಕು.

ತದ್ಯಥಾ ಬಾಲಿಶಾನಾಂ ಸ್ವಯಮಾತ್ಮನಃ ಶ್ರೇಯಃ ಪರಮ ವಿದುಷಾಂ ಪರಮಪರಮಪುರುಷಪ್ರಕರ್ಷಕರುಣಯಾ ಸ್ವಮಹಿ- ಮಾನಂ ಚಾಪವರ್ಗಾಖ್ಯಮುಪಕಲ್ಪಯಿಷ್ಯನ್ ಸ್ವಯಂ ನಾಪಚಿತ ಏವೇತರವದಿಹೋಪಲಕ್ಷಿತಃ ॥೯॥

ನೀನು ಬ್ರಹ್ಮದೇವರೇ ಮುಂತಾದ ಪರಮಪುರುಷರಿಗಿಂತಲೂ ಪರಮಶ್ರೇಷ್ಠನಾದವನು. ಆದರೂ ನಮಗೆ ಯಾವುದು ಕಲ್ಯಾಣಕ್ಕೆ ಸಾಧನ ವೆಂಬುದನ್ನು ಅರಿಯದೇ, ಯಥಾವಿಧಿಯಾಗಿ ಯಜ್ಞವನ್ನೂ ಮಾಡದೇ ಇರುವ ನಮ್ಮಲ್ಲಿ ದಯೆತೋರಿ ನಮಗೆ ಮೋಕ್ಷವೆಂಬ ಪರಮಪದವನ್ನೂ ಮತ್ತು ನಾವು ಬಯಸುವ ಇತರ ಇಷ್ಟಾರ್ಥಗಳನ್ನು ಈಡೇರಿಸುವುದಕ್ಕಾಗಿ ಇತರ ಸಾಮಾನ್ಯರಾದ ಯಜ್ಞಸಂದರ್ಶಕರಂತೆ ಈ ಯಜ್ಞಕ್ಕೆ ದಯಮಾಡಿಸಿ ದರ್ಶನಭಾಗ್ಯವನ್ನು ನೀಡಿದ್ದೀಯೆ.

ಅಥಾಯಮೇವ ವರೋ ಹ್ಯರ್ಹತ್ತಮ ಯರ್ಹಿ ಬರ್ಹಿಷಿ ರಾಜರ್ಷೇರ್ವರದರ್ಷಭೋ ಭವಾನ್ನಿಜಪುರುಷೇಕ್ಷಣವಿಷಯ ಆಸೀತ್ ॥೧೦॥

ಓ ಪೂಜ್ಯತಮನಾದ ಪರಮಾತ್ಮನೇ! ನೀನು ಬ್ರಹ್ಮದೇವರೇ ಮುಂತಾದ ಎಲ್ಲ ವರಪ್ರದರಲ್ಲಿಯೂ ಶ್ರೇಷ್ಠತಮನೇ ಆಗಿದ್ದರೂ–ಈ ರಾಜರ್ಷಿಯಾದ ನಾಭಿಯ ಯಜ್ಞಶಾಲೆಯಲ್ಲಿ ಪ್ರಕಟಗೊಂಡಿರುವೆಯಲ್ಲಾ! ಇದೇ ನಮಗೆ ದೊಡ್ಡ ವರವಾಗಿರುವಾಗ ಇದಕ್ಕಿಂತಲೂ ಮಿಗಿಲಾಗಿ ಬೇರಾವ ವರವನ್ನು ನಾವುನಿನ್ನಲ್ಲಿ ಬೇಡೋಣ?

ಅಸಙ್ಗನಿಶಿತಜ್ಞಾನಾನಲವಿಧೂತಾಶೇಷಮಲಾನಾಂ ಭವತ್ಸ್ವ- ಭಾವಾನಾಮಾತ್ಮಾರಾಮಾಣಾಂ ಮುನೀನಾಮನವರತಪರಿಗುಣಿತ- ಗುಣಗಣಪರಮಮಙ್ಗಲಾಯನಗುಣಗಣಕಥನೋಽಸಿ ॥೧೧॥

ಪ್ರಭೋ! ನಿನ್ನ ಗುಣಗಣಗಳ ಗಾನವು ಪರಮಕಲ್ಯಾಣಮಯವಾದುದು. ವೈರಾಗ್ಯದಿಂದ ಹೊತ್ತಿಸಲ್ಪಟ್ಟ ಜ್ಞಾನವೆಂಬ ಅಗ್ನಿಯಿಂದ ತಮ್ಮ ಅಂತಃಕರಣದ ರಾಗ-ದ್ವೇಷಾದಿ ಸಮಸ್ತದೋಷಗಳನ್ನೂ ಸುಟ್ಟು ಹಾಕಿಕೊಂಡು ನಿನ್ನಂತೆಯೇ ಪ್ರಶಾಂತಸ್ವಭಾವರಾಗಿರುವ ಆತ್ಮಾರಾಮರಾದ ಮುನಿಗಳೂ ಕೂಡ ನಿರಂತರವಾಗಿ ಆ ಗುಣಗಳನ್ನೇ ಗಾನಮಾಡುತ್ತಿರುವರಲ್ಲವೇ? ನಿನ್ನ ದರ್ಶನವು ದುರ್ಲಭವಾದರೂ ಆ ಗುಣಕೀರ್ತನೆಯನ್ನು ಮಾಡಬಹುದು.

ಅಥ ಕಥಂಚಿತ್ಸ್ಖಲನಕ್ಷುತ್ಪತನಜೃಮ್ಭಣದುರವಸ್ಥಾನಾದಿಷು ವಿವಶಾನಾಂ ನಃ ಸ್ಮರಣಾಯ ಜ್ವರಮರಣದಶಾಯಾಮಪಿ ಸಕಲ-ಕಶ್ಮಲನಿರಸನಾನಿ ತವ ಗುಣಕೃತನಾಮಧೇಯಾನಿ ವಚನಗೋಚರಾಣಿ ಭವನ್ತು ||೧೨||

ಆದರೆ ನೀನು ನಮಗೆ ನಿನ್ನ ದರ್ಶನವನ್ನೇ ದಯಪಾಲಿಸಿದ್ದೀಯೆ. ಕೆಳಗೆ ಬೀಳುವುದು, ಎಡವುವುದು, ಸೀನುವುದು, ಆಕಳಿಸುವುದು, ಮಹಾ ಸಂಕಟಕ್ಕೆ ಒಳಗಾಗುವುದು, ಜ್ವರಕ್ಕೆ ತುತ್ತಾಗುವುದು, ಮರಣಕ್ಕೆ ಗುರಿಯಾಗುವುದು–ಇವೇ ಮುಂತಾದ ಸಮಯಗಳಲ್ಲಿ ನಿನ್ನ ಸ್ಮರಣೆ ಬರುವುದು ಸಾಧ್ಯವಾಗದೇ ಇದ್ದರೂ–ಸಕಲವಾದ ಕಶ್ಮಲಗಳನ್ನೂ ನಾಶಪಡಿಸುವ 'ಭಕ್ತಬಂಧುವೇ! ದೀನವತ್ಸಲನೇ!' ಎಂಬಿವೇ ಮುಂತಾದ ನಿನ್ನ ದಿವ್ಯ ನಾಮಗಳನ್ನು ಆಗ ನಾವು ಉಚ್ಚರಿಸುವುದಕ್ಕಾದರೂ ಶಕ್ಯವಾಗಲಿ–ಇಷ್ಟು ವರವನ್ನು ಮಾತ್ರ ನಾವು ಈಗ ನಿನ್ನಲ್ಲಿ ಬೇಡುತ್ತೇವೆ.

ಕಿಞ್ಚಾಯಂ ರಾಜರ್ಷಿರಪತ್ಯಕಾಮಃ ಪ್ರಜಾಂ ಭವಾದೃಶೀ-ಮಾಶಾಸಾನ ಈಶ್ವರಮಾಶಿಷಾಂ ಸ್ವರ್ಗಾಪವರ್ಗಯೋರಪಿ ಭವನ್ತ-ಮುಪಧಾವತಿ ಪ್ರಜಾಯಾಮರ್ಥಪ್ರತ್ಯಯೋ ಧನದಮಿವಾಧನಃ ಫಲೀಕರಣಮ್ ||೧೩||

ಇದಲ್ಲದೇ ನಮ್ಮದು ಇನ್ನೂ ಒಂದು ಪ್ರಾರ್ಥನೆಯುಂಟು, ಪ್ರಭುವೇ! ಈ ರಾಜರ್ಷಿನಾಭಿಯು ಸಂತಾನವನ್ನು ಬಯಸುತ್ತಾ ನಿನ್ನಂತಹ ಪುತ್ರನೇಬೇಕು-ಎಂಬುದಾಗಿ ಆಸೆಪಡುತ್ತಿದ್ದಾನೆ. ನೀನು ಸರ್ವಫಲಪ್ರದನೂ,

ಸ್ವರ್ಗ-ಮೋಕ್ಷಗಳನ್ನು ಕೊಡಬಲ್ಲವನೂ ಆಗಿದ್ದೀಯೆ. ಆದರೆ ಕಡುಬಡವನಾದವನು ಕೊಡುಗೈಯುಳ್ಳ ಧನಿಕನ ಬಳಿಗೆ ಹೋದರೂ ಆತನಿಂದ ಹೊಟ್ಟು, ನುಚ್ಚು, ಬತ್ತಗಳನ್ನೇ ಬೇಡುವಂತೆ–ಈ ರಾಜರ್ಷಿಯು ಸಂತಾನವೇ ಪರಮಪುರುಷಾರ್ಥವೆಂದು ತಿಳಿದು ಸರ್ವೇಶ್ವರನಾದ ನಿನ್ನನ್ನು ಅದಕ್ಕೋಸ್ಕರವೇ ಆರಾಧನೆಮಾಡುತ್ತಿದ್ದಾನೆ.

ಕೋವಾ ಇಹ ತೇಽಪರಾಜಿತೋಽಪರಾಜಿತಯಾ ಮಾಯಯಾ–ನವಸಿತಪದವ್ಯಾನಾವೃತಮತಿರ್ವಿಷಯವಿಷರಯಾನಾವೃತ–ಪ್ರಕೃತಿರನುಪಾಸಿತಮಹಚ್ಚರಣಃ ॥೧೪॥

ಇದರಲ್ಲಿ ಅಚ್ಚರಿಯೇನೂ ಇಲ್ಲ. ಎಲೈ ಪರಾವರನಾದ ಪರಮಾತ್ಮನೇ! ನಿನ್ನ ಮಾಯೆಯು ಯಾರಿಗೂ ತೋರಿಸದೇ ಇರುವ ಮಹಾಶಕ್ತಿಯುಳ್ಳದ್ದು. ಅದಕ್ಕೆ ಮರುಳಾಗದವರಾರು? ಅದರಿಂದ ಪಾರಾಗಬಲ್ಲವರಾರು? ಮಹಾಪುರುಷರ ಪಾದಾರವಿಂದಗಳ ಆಶ್ರಯವನ್ನು ಪಡೆಯದೇ ಇದ್ದ ಯಾವನೂ ಅದಕ್ಕೆ ವಶನಾಗದೇ ಇರಲಾರನು ; ತನ್ನ ಬುದ್ಧಿಯ ಮೇಲೆ ಅದರ ತೆರೆಯು ಬೀಳದಂತೆ ಮಾಡಲಾರನು. ವಿಷಯವೆಂಬ ವಿಷದ ವೇಗದಿಂದ ತನ್ನ ಸ್ವಭಾವವು ದೂಷಿತವಾಗದಂತೆ ಮಾಡಿಕೊಳ್ಳಲಾರನು.

ಯದು ಹ ವಾವ ತವ ಪುನರದಭ್ರಕರ್ತರಿಹ ಸಮಾಹೂತ–ಸ್ತತ್ರಾರ್ಥಧಿಯಾಂ ಮನ್ದಾನಾಂ ನಸ್ತದ್ಯದ್ದೇವಹೇಲನಂ ದೇವ– ದೇವಾರ್ಹಸಿ ಸಾಮ್ಯೇನ ಸರ್ವಾನ್ಪ್ರತಿವೋಢುಮವಿದುಷಾಮ್ ॥

ಓ ದೇವದೇವನೇ! ನೀನು ಭಕ್ತರ ಮಹಾ-ಮಹಾಕಾರ್ಯಗಳನ್ನೂ ಮಾಡಿಕೊಡುವ ಸರ್ವಶಕ್ತನು. ಮಂದಮತಿಗಳಾದ ನಾವು ಕಾಮನೆಗೆ ವಶರಾಗಿ ಈ ಅಲ್ಪಕಾರ್ಯಕ್ಕಾಗಿ ನಿನ್ನನ್ನು ಆವಾಹನೆಮಾಡಿ ನಿನಗೆ ಅಗೌರವ ತೋರಿದ್ದೇವೆ. ಆದರೆ ನೀನು ಸಮದರ್ಶಿಯಾದುದರಿಂದ, ಅಜ್ಞಾನಿಗಳಾದ ನಮ್ಮ ಈ ದಿಟ್ಟತನವನ್ನು ಕ್ಷಮಿಸಬೇಕು, ಭಗವಂತನೇ!”

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

“ಎಲೈ ರಾಜನೇ! ವರ್ಷಾಧಿಪತಿಯಾದ ನಾಭಿಮಹಾರಾಜನ ಪೂಜ್ಯ

ರಾದ ಋತ್ವಿಜರು ಪ್ರಭುವಿನ ಅಡಿಗಳಿಗೆ ಎರಗಿ ಹೀಗೆ ಪ್ರಾರ್ಥನೆಮಾಡಲು– ದೇವದೇವೋತ್ತಮನಾದ ಶ್ರೀಭಗವಂತನು ಕರುಣೆಯಿಂದ ಹೀಗೆ ಅಪ್ಪಣೆ ಕೊಡಿಸಿದನು :

"ಎಲೈ ಋಷಿಗಳೇ! ನೀವು ಸತ್ಯವಾದಿಗಳಾದ ಮಹಾತ್ಮರು. ಆದರೆ ರಾಜರ್ಷಿ ನಾಭಿಗೆ ನನ್ನಂತಹ ಪುತ್ರನು ಹುಟ್ಟಬೇಕು–ಎಂದು ದುರ್ಲಭವಾದ ವರವನ್ನು ಬೇಡಿದಿರಲ್ಲಾ! ನನಗೆ ಎಣೆಯಾದವನು ಯಾವನಿದ್ದಾನೆ? ನನಗೆ ನಾನೇ ಎಣೆಯು. ಹೀಗೆ ದುರ್ಲಭವಾದ ವರವನ್ನು ಬೇಡುತ್ತಿದ್ದರೂ ಬ್ರಾಹ್ಮಣರ ಮಾತು ಸುಳ್ಳಾಗಬಾರದು. ಅವರು ನನ್ನ ಮುಖವೇ ಆಗಿದ್ದಾರೆ. ಆದ್ದರಿಂದ ನಾನೇ ನನ್ನ ಅಂಶಕಲೆಯಿಂದ ಈ ಆಗ್ನೀಧ್ರಪುತ್ರನ ಮನೆಯಲ್ಲಿ ಅವತರಿಸುವೆನು. ನಾನೇ ಏಕೆ ಅವತರಿಸಬೇಕೆಂದರೆ : ನನಗೆ ಸಮಾನ ರಾದವರು ಬೇರಾರೂ ಇಲ್ಲದಿರುವ ಕಾರಣದಿಂದ."

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

"ಶ್ರೀಭಗವಂತನು ಮಹಾರಾಣಿ ಮೇರುದೇವಿಯು ಕೇಳುತ್ತಿರು ವಾಗಲೇ ಆಕೆಯ ಪತಿಗೆ ಹೀಗೆ ಅಪ್ಪಣೆಕೊಡಿಸಿ ಅಂತರ್ಧಾನಹೊಂದಿದನು. ಎಲೈ ವಿಷ್ಣುಭಕ್ತ ಪರೀಕ್ಷಿತನೇ! ಹೀಗೆ ಯಜ್ಞದಲ್ಲಿ ಮಹರ್ಷಿಗಳಿಂದ ಪ್ರಸನ್ನ ಗೊಳಿಸಲ್ಪಟ್ಟ ಶ್ರೀಭಗವಂತನು ನಾಭಿಮಹಾರಾಜನಿಗೆ ಪ್ರಿಯವನ್ನುಂಟು ಮಾಡುವುದಕ್ಕಾಗಿ ಆತನ ಅಂತಃಪುರದಲ್ಲಿ ಮಹಾರಾಣಿ ಮೇರುದೇವಿಯ ಗರ್ಭದಲ್ಲಿ ಶ್ರಮಣ (ದಿಗಂಬರ) ಸಂನ್ಯಾಸಿಗಳ ಮತ್ತು ನೈಷ್ಠಿಕಬ್ರಹ್ಮ ಚರ್ಯವುಳ್ಳ ಮುನಿಗಳ ಧರ್ಮವನ್ನು ಪ್ರಕಟಪಡಿಸುವುದಕ್ಕಾಗಿ ತನ್ನ ಶುದ್ಧಸತ್ತ್ವಮಯವಾದ ವಿಗ್ರಹದಿಂದ ಆವಿರ್ಭವಿಸಿದನು.

(ಶ್ಲೋಕ 16-20)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಪಂಚಮಸ್ಕಂಧದ ೩ನೆಯ ಅಧ್ಯಾಯವು ಮುಗಿಯಿತು.

ಋಷಭದೇವರ ಮಹಿಮೆ : ರಾಜ್ಯಶಾಸನ

ಶ್ರೀಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಹೇಳುತ್ತಾರೆ :

ಅಥ ಹ ತಮುತ್ಪತ್ತ್ಯೈವಾಭಿವ್ಯಜ್ಯಮಾನಭಗವಲ್ಲಕ್ಷಣಂ ಸಾಮ್ಯೋಪಶಮವೈರಾಗ್ಯೈಶ್ವರ್ಯಮಹಾವಿಭೂತಿಭಿರನುದಿನಮೇಧ - ಮಾನಾನುಭಾವಂ ಪ್ರಕೃತಯಃ ಪ್ರಜಾ ಬ್ರಾಹ್ಮಣಾ ದೇವತಾ- ಶ್ಚಾವನಿತಲಸಮವನಾಯಾತಿತರಾಂ ಜಗೃಧುಃ ॥೧॥

ತಸ್ಯ ಹ ವಾ ಇತ್ಥಂ ವರ್ಷ್ಮಣಾ ವರೀಯಸಾ ಬೃಹಚ್ಛ್ಲೋಕೇನ ಚೌಜಸಾ ಬಲೇನ ಶ್ರಿಯಾ ಯಶಸಾ ವೀರ್ಯಶೌರ್ಯಾಭ್ಯಾಂ ಚ ಪಿತಾ ಋಷಭ ಇತೀದಂ ನಾಮ ಚಕಾರ ॥೨॥

"ಎಲೈ ರಾಜೇಂದ್ರನೇ! ಕೇಳು : ಭಗವಂತನಾದ ನಾರಾಯಣನು ನಾಭಿರಾಜನ ಪುತ್ರನಾಗಿ ಮೇರುದೇವಿಯ ಗರ್ಭದಲ್ಲಿ ಅವತರಿಸಿದನಷ್ಟೇ! ಆ ಪುತ್ರನು ಹುಟ್ಟಿನಿಂದಲೇ ಭಗವಂತನಾದ ನಾರಾಯಣನ ಚಿಹ್ನೆಗಳಾದ ಶಂಖ, ಚಕ್ರ, ವಜ್ರ, ಅಂಕುಶ–ಮುಂತಾದುವುಗಳಿಂದ ಅಲಂಕೃತನಾಗಿದ್ದು ದನ್ನೂ–ಶಾಂತಿ, ಸಮತೆ, ವೈರಾಗ್ಯ ಮತ್ತು ಐಶ್ವರ್ಯಗಳೇ ಮುಂತಾದ ದಿವ್ಯ ಲಕ್ಷಣಗಳಿಂದ ದಿನೇ-ದಿನೇ ವೃದ್ಧಿಹೊಂದುತ್ತಿರುವುದನ್ನೂ ಗಮನಿಸಿ ಮಂತ್ರಿ ಪುರೋಹಿತರೇ ಮುಂತಾದ ಪ್ರಕೃತಿಗಳಿಗೂ, ಪ್ರಜೆಗಳಿಗೂ, ಬ್ರಾಹ್ಮಣರಿಗೂ ಮತ್ತು ದೇವತೆಗಳಿಗೂ ಆತನೇ ಮುಂದೆ ರಾಜನಾಗಿ ಭೂಮಿಯನ್ನು ಆಳಬೇಕೆಂಬ ಉತ್ಕಟವಾದ ಅಭಿಲಾಷೆಯುಂಟಾಯಿತು. ನಾಭಿರಾಜನು ಆ ಶಿಶುವಿನ ಸುಂದರವೂ, ಸುಲಕ್ಷಣವೂ, ಸುದೃಢವೂ ಆದ ದೇಹವನ್ನೂ– ತೇಜಸ್ಸು, ಯಶಸ್ಸು, ಬಲ, ಐಶ್ವರ್ಯ, ಪರಾಕ್ರಮ, ಶೌರ್ಯ, ವೀರ್ಯಗಳೇ ಮುಂತಾದ ಗುಣಸಂಪತ್ತಿನ ಗುರುತುಗಳನ್ನೂ ಕಂಡು ಅದಕ್ಕೆ 'ಋಷಭ' (ಶ್ರೇಷ್ಠ) ಎಂದು ನಾಮಕರಣಮಾಡಿದನು.

ಆತನ ಗುಣ, ಸಂಪತ್ತು ಮತ್ತು ಮಹಿಮೆಗಳನ್ನು ಕಂಡು ಅಸೂಯೆ ಗೊಂಡು ಆತನೊಡನೆ ಸ್ಪರ್ಧಿಸಲು ಪ್ರಯತ್ನಪಡುತ್ತಾ ಭಗವಂತನಾದ ಇಂದ್ರನು ಆತನ ರಾಜ್ಯದಲ್ಲಿ ಮಳೆಯನ್ನು ಸುರಿಸಲಿಲ್ಲ. ಆಗ ಯೋಗೇಶ್ವರ

ನಾದ ಭಗವಾನ್ ಋಷಭಸ್ವಾಮಿಯು ಆತನ ಮೂರ್ಖತೆಯನ್ನು ಕಂಡು ನಗುತ್ತಾ ತನ್ನ ಯೋಗಮಾಯೆಯ ಪ್ರಭಾವದಿಂದ ಅಜನಾಭವೆಂದು ಹೆಸರುಳ್ಳ ತನ್ನ ಭಾರತವರ್ಷದಲ್ಲಿ ಹೇರಳವಾಗಿ ಮಳೆಯು ಸುರಿಯುವಂತೆ ಮಾಡಿದನು. ತನ್ನ ಇಚ್ಛೆಗೆ ಅನುಗುಣವಾದ ಶ್ರೇಷ್ಠಪುತ್ರನು ದೊರಕಿದುದನ್ನು ಕಂಡು ನಾಭಿಮಹಾರಾಜನಿಗೆ ಪರಮಾನಂದವಾಯಿತು. ತನ್ನ ಸಂಕಲ್ಪದಿಂದಲೇ ಮನುಷ್ಯಶರೀರವನ್ನು ಧರಿಸಿದ್ದ ಆ ಪುರಾಣಪುರುಷನ ಮಾಯಾವಿಲಾಸಕ್ಕೆ ಮರುಳಾಗಿ ಆತನು ಆ ಶಿಶುವನ್ನು ಪ್ರೀತಿಯಿಂದ ಮುದ್ದಿಸುತ್ತಾ 'ಅಪ್ಪ, ಮಗು!'–ಎಂದು ಮೃದುವಾಗಿ ಗದ್ಗದಕಂಠದಿಂದ ಕರೆಯುತ್ತಾ ಸುಖಸಾಗರದಲ್ಲಿ ಓಲಾಡುತ್ತಿದ್ದನು. ಮಂತ್ರಿಮಂಡಲವೂ, ನಾಗರಿಕರೂ ಮತ್ತು ರಾಷ್ಟ್ರದ ಜನತೆಯೂ ಆ ಋಷಭಕುಮಾರನಲ್ಲಿ ಪರಮಾನುರಾಗಹೊಂದಿದ್ದುದನ್ನು ಕಂಡು ನಾಭಿಮಹಾರಾಜನು ಧರ್ಮ ಮರ್ಯಾದೆಯ ರಕ್ಷಣೆಗಾಗಿ ಆತನಿಗೆ ರಾಜ್ಯಾಭಿಷೇಕಮಾಡಿ, ಆತನನ್ನು ಬ್ರಾಹ್ಮಣರ ವಶಕ್ಕೆ ಒಪ್ಪಿಸಿ, ಪತ್ನಿಯಾದ ಮೇರುದೇವಿಯೊಡನೆ ಬದರಿಕಾಶ್ರಮಕ್ಕೆ ತೆರಳಿ, ಯಾರಿಗೂ ಉದ್ವೇಗವನ್ನುಂಟುಮಾಡದಿರುವ ಅಹಿಂಸಾವೃತ್ತಿಯಿಂದ ಕೂಡಿ, ಕುಶಲತೆಯಿಂದ ತೀವ್ರವಾದ ತಪಸ್ಸನ್ನಾಚರಿಸಿ ಸಮಾಧಿಯೋಗವನ್ನು ಸಾಧಿಸಿ, ಶ್ರೀಭಗವಂತನಾದ ವಾಸುದೇವನ ನರ-ನಾರಾಯಣರೂಪವನ್ನು ಆರಾಧಿಸುತ್ತಾ, ಕಾಲವು ಪಕ್ವವಾದಾಗ ಆ ಶ್ರೀಭಗವಂತನ ಪರಮಸಾಮ್ಯರೂಪವಾದ ಮುಕ್ತಿಯನ್ನು ಪಡೆದುಬಿಟ್ಟನು. ಪಾಂಡುನಂದನನೇ! ಆ ನಾಭಿರಾಜನ ಮಹಿಮೆಯನ್ನು ಕೊಂಡಾಡುವ ಪ್ರಸಿದ್ಧವಾದ ಶ್ಲೋಕಗಳನ್ನು ಕೇಳು : (ಶ್ಲೋಕ 3-5)

ಕೋ ನು ತತ್ಕರ್ಮ ರಾಜರ್ಷೇರ್ನಾಭೇರನ್ವಾಚರೇತ್ಪುಮಾನ್ ।
ಅಪತ್ಯತಾಮಗಾದ್ಯಸ್ಯ ಹರಿಃ ಶುದ್ಧೇನ ಕರ್ಮಣಾ ॥೬॥

ಬ್ರಹ್ಮಣ್ಯೋಽನ್ಯಃ ಕುತೋ ನಾಭೇರ್ವಿಪ್ರಾ ಮಙ್ಗಲಪೂಜಿತಾಃ ।
ಯಸ್ಯ ಬರ್ಹಿಷಿ ಯಜ್ಞೇಶಂ ದರ್ಶಯಾಮಾಸುರೋಜಸಾ ॥೭॥

'ರಾಜಶ್ರೇಷ್ಠನಾದ ನಾಭಿಯ ಉದಾರವಾದ ಕರ್ಮಗಳನ್ನು ಆಚರಿಸಲು ಬೇರೆ ಯಾರಿಗೆ ತಾನೇ ಸಾಧ್ಯವಾಗುವುದು? ಆತನ ವಿಶುದ್ಧವಾದ

ಕರ್ಮಗಳಿಂದ ಸಂತುಷ್ಟನಾಗಿ ಸಾಕ್ಷಾತ್ ಶ್ರೀಹರಿಯೇ ಆತನಿಗೆ ಪುತ್ರನಾಗಿ ಜನಿಸಿದನಲ್ಲವೇ! ಆ ನಾಭಿಮಹಾರಾಜನಿಗೆ ಸಮಾನನಾದ ಬ್ರಾಹ್ಮಣ ಭಕ್ತನು ಬೇರಾವನುಂಟು? ಆತನ ಮಂಗಳಕರ್ಮ-ಪೂಜಾದಿಗಳಿಂದ ಸಂತುಷ್ಟರಾದ ಬ್ರಾಹ್ಮಣಶ್ರೇಷ್ಠರು ತಮ್ಮ ಮಂತ್ರಬಲದಿಂದ ಯಜ್ಞ ಶಾಲೆಯಲ್ಲಿ ಆತನಿಗೆ ಸಾಕ್ಷಾತ್ ಶ್ರೀಮಹಾವಿಷ್ಣುವಿನ ದರ್ಶನವನ್ನೇ ಮಾಡಿಸಿದರಲ್ಲವೇ!'

ಭಗವಂತನಾದ ಋಷಭದೇವನು ತನ್ನ ದೇಶವಾದ ಅಜನಾಭಖಂಡ ವನ್ನು ಕರ್ಮಭೂಮಿಯೆಂದು ಮಾನ್ಯಮಾಡಿ ಲೋಕಸಂಗ್ರಾಹಕ್ಕಾಗಿ ಕೊಂಚ ಕಾಲ ಗುರುಕುಲವಾಸವನ್ನು ಮಾಡಿದನು. ಗುರುದೇವರಿಗೆ ಯಥೋಚಿತ ವಾದ ದಕ್ಷಿಣೆಯನ್ನು ಸಮರ್ಪಿಸಿ ಗೃಹಸ್ಥಾಶ್ರಮವನ್ನು ಸ್ವೀಕರಿಸಲು ಅವರ ಅನುಮತಿಯನ್ನು ಪಡೆದನು. ಅನಂತರ ಜನರಿಗೆ ಗೃಹಸ್ಥಾಶ್ರಮದ ಆದರ್ಶವನ್ನು ತೋರಿಸುವುದಕ್ಕಾಗಿ, ದೇವರಾಜನಾದ ಇಂದ್ರನು ತನಗೆ ಕನ್ಯಾದಾನವಾಗಿ ಕೊಟ್ಟ ಜಯಂತೀ ಎಂಬುವಳನ್ನು ವಿವಾಹಮಾಡಿಕೊಂಡು ಶ್ರೌತ ಮತ್ತು ಸ್ಮಾರ್ತಗಳೆಂಬ ಎರಡೂ ಬಗೆಯ ಶಾಸ್ತ್ರೀಯಕರ್ಮಗಳನ್ನು ಆಚರಿಸುತ್ತಾ ಜಯಂತೀದೇವಿಯಲ್ಲಿ ತನಗೆ ಸಮಾನವಾದ ಗುಣಸಂಪತ್ತಿ ನಿಂದ ಅಲಂಕೃತರಾಗಿದ್ದ ನೂರು ಮಂದಿ ಪುತ್ರರನ್ನು ಪಡೆದನು. ಮಹಾ ಯೋಗಿ ಭರತನು–ಆ ನೂರು ಮಂದಿಯಲ್ಲಿ ಎಲ್ಲರಿಗಿಂತಲೂ ಹಿರಿಯವ ನಾಗಿ ಗುಣಗಳಲ್ಲಿಯೂ ಶ್ರೇಷ್ಠತಮನಾಗಿದ್ದನು. ಆ ಭರತನ ಹೆಸರಿನಿಂದಲೇ ಈ ಅಜನಾಭಖಂಡಕ್ಕೆ 'ಭಾರತವರ್ಷ' ಎಂಬ–ನಾಮಧೇಯವು ಬಂದಿತು. ಆತನಿಗಿಂತಲೂ ಕಿರಿಯರಾದ ಕುಶಾವರ್ತ, ಇಳಾವರ್ತ, ಬ್ರಹ್ಮಾವರ್ತ, ಮಲಯ, ಕೇತು, ಭದ್ರಸೇನ, ಇಂದ್ರಸ್ಪೃಕ್, ವಿದರ್ಭ ಮತ್ತು ಕೀಕಟ–ಎಂಬ ಒಂಬತ್ತು ಮಂದಿಗಳು ಉಳಿದವರಿಗಿಂತಲೂ ಹಿರಿಯರೂ ಶ್ರೇಷ್ಠರೂ ಆಗಿದ್ದರು. ಅವರಿಗಿಂತಲೂ ಕಿರಿಯವರಾಗಿದ್ದ ಕವಿ, ಹರಿ, ಅಂತರಿಕ್ಷ ಪ್ರಬುದ್ಧ, ಪಿಪ್ಪಲಾಯನ, ಆವಿರ್ಹೋತ್ರ, ದ್ರುಮಿಲ, ಚಮಸ ಮತ್ತು ಕರಭಾಜನ–ಎಂಬ ಒಂಬತ್ತು ಮಂದಿ ರಾಜಕುಮಾರರೂ ಭಾಗವತಧರ್ಮ ವನ್ನು ಪ್ರಚಾರಮಾಡಿದ ಭಗವದ್ಭಕ್ತಶಿರೋಮಣಿಗಳು. ಶ್ರೀಭಗವಂತನ ಮಹಿಮೆಯಿಂದ ಮಹಿಮಾನ್ವಿತರಾಗಿ ಪರಮಶಾಂತಿಯಿಂದ ಸಂಪನ್ನರಾಗಿದ್ದ

ಆ ಮಹಾತ್ಮರ ಪವಿತ್ರವಾದ ಚರಿತ್ರವನ್ನು ಮುಂದೆ ನಾರದ-ವಸುದೇವಸಂವಾದದ ಪ್ರಕರಣದಲ್ಲಿ* ಹೇಳುವೆನು. ಆ ಒಂಬತ್ತು ಮಂದಿಗಿಂತಲೂ ಕಿರಿಯರಾಗಿದ್ದ ಜಯಂತಿಯ ಎಂಬತ್ತೊಂದು ಮಂದಿ ಪುತ್ರರು ತಂದೆಗೆ ವಿಧೇಯರಾಗಿ, ಅತ್ಯಂತ ವಿನಯಶಾಲಿಗಳಾಗಿ, ಮಹಾವೇದಜ್ಞರಾಗಿ ನಿರಂತರವಾಗಿ ಯಜ್ಞಗಳನ್ನು ಆಚರಿಸುತ್ತಿದ್ದರು. ಅವರು ಪುಣ್ಯಕರ್ಮಗಳ ಅನುಷ್ಠಾನದಿಂದ ಶುದ್ಧರಾಗಿ ಬ್ರಾಹ್ಮಣ್ಯವನ್ನು ಪಡೆದುಕೊಂಡರು.[1] ಭಗವಾನ್ ಋಷಭದೇವರು ಭಗವದವತಾರವಾಗಿ ಆತ್ಮತಂತ್ರರಾಗಿದ್ದವರು. ಎಂದಿಗೂ ಯಾವ ಅನರ್ಥಪರಂಪರೆಗೂ ಸಿಲುಕದೇ ಕೇವಲ ಆನಂದಾನುಭವಸ್ವರೂಪ ದಲ್ಲಿಯೇ ನೆಲೆಗೊಂಡಿದ್ದವರು. ಹೀಗೆ ಸಾಕ್ಷಾತ್ ಈಶ್ವರಸ್ವರೂಪರೇ ಆಗಿದ್ದರೂ ಅಜ್ಞಾನಿಗಳಂತೆ ಕರ್ಮಗಳನ್ನು ಆಚರಿಸುತ್ತಾ, ಕಾಲಾನುಸಾರವಾಗಿ ಆಚರಿಸಲು ಒದಗಿದ ಧರ್ಮಗಳನ್ನೂ ಅನುಷ್ಠಾನಮಾಡುತ್ತಾ ಅದರ ತತ್ತ್ವವನ್ನರಿಯದ ಜನರಿಗೆ ಆ ಬಗೆಗೆ ಶಿಕ್ಷಣವನ್ನು ನೀಡುತ್ತಿದ್ದರು. ಜೊತೆಯಲ್ಲಿಯೇ ಸರ್ವಸಮರೂ, ಶಾಂತರೂ, ಸುಹೃದರೂ, ಕಾರುಣಿಕರೂ ಆಗಿದ್ದು ಧರ್ಮ, ಅರ್ಥ, ಯಶಸ್ಸು, ಸಂತಾನ, ಭೋಗಸುಖ ಮತ್ತು ಮೋಕ್ಷ ವನ್ನು ಸಂಗ್ರಹಿಸುತ್ತಾ ಜನರನ್ನು ಗೃಹಸ್ಥಾಶ್ರಮಧರ್ಮದಲ್ಲಿ ನಿಯಮಿಸುತ್ತಿ ದ್ದರು. ಕೃತಕೃತ್ಯರಾಗಿದ್ದ ಆ ಮಹಾತ್ಮರು ಇದನ್ನೆಲ್ಲಾ ಏಕೆ ಆಚರಿಸುತ್ತಿದ್ದರೆಂದರೆ :

(ಶ್ಲೋಕ 8-14)

ಯದ್ಯಚ್ಛೀರ್ಷಣ್ಯಾಚರಿತಂ ತತ್ತದನುವರ್ತತೇ ಲೋಕಃ ॥೧೫॥

ಲೋಕದ ಜನರಿಗೆ ಆದರ್ಶವನ್ನು ತೋರುವುದಕ್ಕಾಗಿ. ಮಹಾಪುರುಷರು ಹೇಗೆ ಆಚರಿಸುತ್ತಾರೆಯೋ–ಅದನ್ನೇ ಇತರ ಜನರೂ ಅನುಸರಿಸುತ್ತಾರಲ್ಲವೇ![2]

---

* ಈ ವಿಷಯವು ಏಕಾದಶಸ್ಕಂಧದಲ್ಲಿ ಬರುವುದು.

[1] ಇಲ್ಲಿ 'ಬ್ರಾಹ್ಮಣಾ ಬಭೂವುಃ'–ಬ್ರಾಹ್ಮಣರಾದರು ಎಂದರೆ : ಯಜನ, ಯಾಜನಗಳೇ ಮುಂತಾದ ಬ್ರಾಹ್ಮಣಕರ್ಮಗಳಲ್ಲಿ ನಿಷ್ಠರಾಗಿದ್ದುದರಿಂದ ಬ್ರಾಹ್ಮಣರೆಂದು ಹೆಸರು ಪಡೆದರು. (ವಿಜಯಧ್ವಜೀಯ) (ಶ್ಲೋಕ ೧೩)

[2] ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥ (ಶ್ರೀಗೀತಾ)
(ಶ್ಲೋಕ ೧೫)

ಧರ್ಮಗಳ ಸಾರರೂಪವಾದ ವೇದಗಳ ಗೂಢರಹಸ್ಯಗಳನ್ನು ತಾವೇ ಚೆನ್ನಾಗಿ ಅರಿತಿದ್ದರೂ ಬ್ರಾಹ್ಮಣರು ತಿಳಿಸಿದ ವಿಧಿಯಂತೆ ಸಾಮ-ದಾನಗಳೇ ಮುಂತಾದ ನೀತಿಗೆ ಅನುಸಾರವಾಗಿಯೇ ಜನರನ್ನು ಪಾಲಿಸುತ್ತಿದ್ದರು. ಶಾಸ್ತ್ರಗಳ ಮತ್ತು ಶಾಸ್ತ್ರಜ್ಞರಾದ ಬ್ರಾಹ್ಮಣರ ಉಪದೇಶಗಳಂತೆ ಬೇರೆ ಬೇರೆ ದೇವತೆಗಳನ್ನು ಉದ್ದೇಶಿಸಿ ದ್ರವ್ಯ, ದೇಶ, ಕಾಲ, ಆಯುಸ್ಸು, ಶ್ರದ್ಧೆ ಮತ್ತು ಋತ್ವಿಜರೇ ಮುಂತಾದ ಯಜ್ಞಸಂಪತ್ತಿನಿಂದ ಕೂಡಿದ ಎಲ್ಲ ಯಜ್ಞಗಳನ್ನೂ ನೂರು ಬಾರಿ ಆಚರಿಸಿದರು.* ಭಗವಂತರಾದ ಋಷಭದೇವರ ರಾಜ್ಯಾಡಳಿತದ ಕಾಲದಲ್ಲಿ ಭಾರತ (ಅಜನಾಭ) ವರ್ಷದ ಜನರು ತಮ್ಮ ಪ್ರಭುವಿನ ವಿಷಯದಲ್ಲಿ ಪ್ರತಿದಿನವೂ ಬೆಳೆಯುತ್ತಿದ್ದ ಪ್ರೀತಿ-ಸ್ನೇಹಗಳನ್ನು ಮಾತ್ರವೇ ಬಯಸುತ್ತಿದ್ದರು. ಯಾವುದೇ ಕಾರಣದಿಂದಲೂ ಯಾವ ಕಾಲ ದಲ್ಲೂ ಕಂಡವರ ಪದಾರ್ಥಗಳನ್ನು ಬಯಸುತ್ತಿರಲಿಲ್ಲ. ಅವುಗಳನ್ನು ಆಕಾಶಪುಷ್ಪವೇ ಮುಂತಾದುವುಗಳಂತೆ ಭಾವಿಸಿ, ಅವುಗಳ ಮೇಲೆ ದೃಷ್ಟಿಯನ್ನು ಹರಿಸುತ್ತಿರಲಿಲ್ಲ. ಪೂಜ್ಯರಾದ ಋಷಭದೇವರು ದೇಶದಲ್ಲಿ ಸಂಚರಿಸುತ್ತಾ ಒಮ್ಮೆ ಬ್ರಹ್ಮಾವರ್ತದೇಶಕ್ಕೆ ದಯಮಾಡಿಸಿದರು. ಅಲ್ಲಿ ಅವರು ಮಹಾತ್ಮರಾದ ಬ್ರಹ್ಮರ್ಷಿಗಳ ಮಹಾಸಭೆಯಲ್ಲಿ ಎಲ್ಲ ಪ್ರಜೆಗಳ ಎದುರಿಗೆ ಎಲ್ಲರೂ ಕೇಳುವಂತೆ ಜಿತೇಂದ್ರಿಯರೂ, ವಿನಯಶಾಲಿಗಳೂ, ಪಿತೃಭಕ್ತಿಸಂಪನ್ನರೂ ಆಗಿದ್ದ ತನ್ನ ಪುತ್ರರನ್ನು ಕುರಿತು ಹೀಗೆ ಉಪದೇಶ ಮಾಡಿದನು.

(ಶ್ಲೋಕ 16-19)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಪಂಚಮಸ್ಕಂಧದ ೪ನೆಯ ಅಧ್ಯಾಯವು ಮುಗಿಯಿತು.

---

* ಯಜ್ಞದ ದ್ರವ್ಯಗಳು–ಚರು-ಪುರೋಡಾಶ ಮುಂತಾದುವು. ಯಜ್ಞದೇಶ-ಯಜ್ಞವನ್ನಾಚರಿಸಲು ಸಮವಾದ ಸ್ಥಳ. ಕಾಲ-ವಸಂತ ಮುಂತಾದ ಪ್ರಶಸ್ತಕಾಲ. ಶ್ರದ್ಧೆ-ಕರ್ಮಗಳಿಂದ ಫಲವುಂಟಾಗುವುದು ಎಂಬ ಶ್ರದ್ಧೆ. ಋತ್ವಿಜರು - ವೇದ - ಶಾಸ್ತ್ರನಿಪುಣರಾಗಿ ಜಿತೇಂದ್ರಿಯರಾದ ಋತ್ವಿಕ್ಕುಗಳು. (ಶ್ಲೋಕ ೧೭)

ಪಂಚಮಸ್ಕಂಧ ೫ನೆಯ ಅಧ್ಯಾಯ

ಋಷಭದೇವರು ಪುತ್ರರಿಗೆ ಮಾಡಿದ ಉಪದೇಶ: ಋಷಭದೇವರು ಅವಧೂತರಾದುದು

ಋಷಭದೇವರು ಹೇಳುತ್ತಾರೆ :

ನಾಯಂ ದೇಹೋ ದೇಹಭಾಜಾಂ ನೃಲೋಕೇ
ಕಷ್ಟಾನ್ಕಾಮಾನರ್ಹತೇ ವಿಡ್ಭುಜಾಂ ಯೇ ।
ತಪೋ ದಿವ್ಯಂ ಪುತ್ರಕಾ ಯೇನ ಸತ್ತ್ವಂ
ಶುದ್ಧ್ಯೇದ್ಯಸ್ಮಾದ್ಬ್ರಹ್ಮಸೌಖ್ಯಂ ತ್ವನನ್ತಮ್ ॥೧॥

"ಎಲೈ ಪುತ್ರರೇ! ಮನುಷ್ಯಲೋಕದಲ್ಲಿ ಈ ಮನುಷ್ಯಶರೀರವೆಂಬುದು ದೇಹಿಗಳಿಗೆ ದುಃಖಮಯವಾದ ವಿಷಯಸುಖಗಳನ್ನು ಅನುಭವಿಸುವುದಕ್ಕೆ ಮಾತ್ರವೇ ಇದೆಯೆಂದು ತಿಳಿಯಬೇಡಿರಿ. ಆ ಭೋಗಗಳನ್ನು ಅಮೇಧ್ಯವನ್ನು ಭಕ್ಷಿಸುವ ಹಂದಿ, ನಾಯಿ ಮುಂತಾದುವುಗಳೂ ಅನುಭವಿಸುತ್ತವೆಯಲ್ಲವೇ? ಅಂತಃಕರಣದ ಶುದ್ಧಿಯನ್ನು ಪಡೆಯಲು ದಿವ್ಯವಾದ ತಪಸ್ಸನ್ನು ಆಚರಿಸುವುದಕ್ಕಾಗಿಯೇ ಈ ದೇಹವಿರುವುದು. ಏಕೆಂದರೆ : ಅದರಿಂದಲೇ ಅನಂತವಾದ ಬ್ರಹ್ಮಾನಂದವು ದೊರೆಯುವುದು.

ಮಹತ್ಸೇವಾಂ ದ್ವಾರಮಾಹುರ್ವಿಮುಕ್ತೇ-
ಸ್ತಮೋದ್ವಾರಂ ಯೋಷಿತಾಂ ಸಙ್ಗಿಸಙ್ಗಮ್ ।
ಮಹಾನ್ತಸ್ತೇ ಸಮಚಿತ್ತಾಃ ಪ್ರಶಾನ್ತಾ
ವಿಮನ್ಯವಃ ಸುಹೃದಃ ಸಾಧವೋ ಯೇ ॥೨॥

ಮಹಾಪುರುಷರ ಸೇವೆಯು ಮುಕ್ತಿಗೆ ದ್ವಾರವೆಂದೂ, ಸ್ತ್ರೀಲಂಪಟರಾಗಿರುವ ಕಾಮುಕರ ಸಂಗವು ನರಕಕ್ಕೆ ದ್ವಾರವೆಂದೂ ಶಾಸ್ತ್ರಗಳು ಹೇಳುತ್ತವೆ. ಅಂತಹ ಮಹಾಪುರುಷರು ಯಾರೆಂದರೆ–ಸಮಚಿತ್ತರೂ, ಪ್ರಶಾಂತರೂ, ಕ್ರೋಧರಹಿತರೂ, ಸರ್ವರಿಗೂ ಹಿತವನ್ನು ಚಿಂತಿಸುವವರೂ, ಸದಾಚಾರಸಂಪನ್ನರೂ ಆಗಿರುವ ಸಾಧುಗಳು.

ಆ ಸಾಧುಮಹಾತ್ಮರು ಸರ್ವೇಶ್ವರನಾಗಿರುವ ನನ್ನನ್ನು ಕುರಿತ

ಪ್ರೇಮವನ್ನೇ ಏಕೈಕಪುರುಷಾರ್ಥವನ್ನಾಗಿ ಭಾವಿಸುವರು. ಕೇವಲ ದೇಹೇಂದ್ರಿಯಗಳಲ್ಲಿ ಲಂಪಟರಾಗಿ ಅವುಗಳನ್ನೇ ಕುರಿತು ಚರ್ಚೆಮಾಡುವ ಜನರಲ್ಲಿಯೂ ಮತ್ತು ಹೆಂಡಿರು-ಮಕ್ಕಳು, ಹಣ–ಮುಂತಾದ ಸಾಮಗ್ರಿಗಳಿಂದ ಕೂಡಿರುವ ಮನೆಗಳಲ್ಲಿಯೂ ಅವರಿಗೆ ರುಚಿಯಿರುವುದಿಲ್ಲ. ತಮ್ಮ ಶರೀರಯಾತ್ರೆಗೆ ಎಷ್ಟು ಬೇಕೋ ಅಷ್ಟು ಮಾತ್ರ ಅವರು ಲೌಕಿಕದಲ್ಲಿ ತೊಡಗುವರು. ಮನುಷ್ಯನು ನಿಜವಾಗಿಯೂ ಇಂದ್ರಿಯಗಳನ್ನು ತೃಪ್ತಿಪಡಿಸುವುದಕ್ಕೋಸ್ಕರವೇ ಪ್ರಮಾದವಶನಾಗಿ ಕೆಟ್ಟಕೆಲಸಗಳನ್ನು ಮಾಡುತ್ತಾನೆ. ಇದು ನನಗೆ ಸರಿಯೆನಿಸುವುದಿಲ್ಲ. ಏಕೆಂದರೆ : ಆತ್ಮನಿಗೆ ಇದರಿಂದಲೇ ದುಷ್ಟವೂ, ದುಃಖಕರವೂ ಆದ ಶರೀರವು ಬರುವುದು. ಕೆಟ್ಟಕರ್ಮಗಳನ್ನು ಮಾಡಬಾರದು ಎಂದಾದರೆ–ಪುಣ್ಯಕರ್ಮಗಳನ್ನೇ ಮಾಡುತ್ತಿದ್ದರೆ ಸಾಕೇ? ಆ ಪುಣ್ಯಕರ್ಮಗಳ ಆಚರಣೆಯಿಂದಲೇ ಪರಮಪುರುಷಾರ್ಥವು ಸಿದ್ಧಿಸುವುದೇ? ಎಂದರೆ–ಹಾಗೂ ಇಲ್ಲ. ಜೀವನು ಎಲ್ಲಿಯವರೆಗೆ ಆತ್ಮತತ್ತ್ವವನ್ನು ತಿಳಿಯಲು ಬಯಸಿ ಅದಕ್ಕಾಗಿ ಪ್ರಯತ್ನಿಸುವುದಿಲ್ಲವೋ–ಅಲ್ಲಿಯವರೆಗೂ ಆತನು ಅಜ್ಞಾನಕ್ಕೆ ವಶನಾಗಿರುತ್ತಾನೆ ; ಆತ್ಮವು ಅವನಿಗೆ ಮರೆಯಾಗಿರುತ್ತದೆ. ಆತನು ಪುಣ್ಯಕರ್ಮಗಳನ್ನು ಮಾಡಿದರೂ ಆತನ ಮನಸ್ಸು ಕರ್ಮಗಳ ಲ್ಲಿಯೇ ಆಸಕ್ತವಾಗಿರುವುದು. ಆತ್ಮಜ್ಞಾನದ ಕಡೆ ಅವನು ಇಣುಕಿ ಕೂಡ ನೋಡುವುದಿಲ್ಲ. ಕರ್ಮದ ವಾಸನೆಗಳೇ ಆತನ ಮನಸ್ಸಿನಲ್ಲಿ ಅಂಟಿಕೊಂಡಿರುತ್ತವೆ. ಆದುದರಿಂದ ಆತನಿಗೆ ಅನಿಷ್ಟವಾದ ಶರೀರ ಬಂಧನವು ಬಂದೇ ಬರುವುದು. ಹೀಗೆ ಅವಿದ್ಯೆಯಿಂದ ಆತ್ಮಸ್ವರೂಪವು ಮುಚ್ಚಿಹೋಗುವುದರಿಂದ ಕರ್ಮವಾಸನೆಗಳಿಗೆ ವಶನಾದ ಮನುಷ್ಯನ ಚಿತ್ತವು ಆತನನ್ನು ಮತ್ತೆ ಕರ್ಮಗಳಲ್ಲಿಯೇ ತೊಡಗಿಸುವುದು. ಆದುದರಿಂದ ವಾಸುದೇವನಾದ ನನ್ನಲ್ಲಿ ಭಕ್ತಿಯೋಗವು ಎಲ್ಲಿಯವರೆಗೆ ಉಂಟಾಗುವು ದಿಲ್ಲವೋ–ಅಲ್ಲಿಯವರೆಗೂ ಮನುಷ್ಯನಿಗೆ ದೇಹಯೋಗವು ತಪ್ಪುವುದಿಲ್ಲ. ತ್ರಿಗುಣಗಳ ವ್ಯಾಪಾರವು ಅವಿದ್ಯೆಯಿಂದ ಬಂದಿದ್ದು, ಹಾಗೂ ಅಸಾಧು ವಾದುದು ಎಂದು ತಿಳಿಯಬೇಕು. ತನ್ನ ಪುರುಷಾರ್ಥದಲ್ಲಿ ಎಚ್ಚರದಪ್ಪಿದ ಮನುಷ್ಯನು ವಿವೇಕದೃಷ್ಟಿಯನ್ನು ಪಡೆದು ಅದನ್ನು ಅಸಾಧು ಎಂದು ಎಲ್ಲಿಯವರೆಗೆ ತಿಳಿಯುವುದಿಲ್ಲವೋ–ಅಲ್ಲಿಯವರೆಗೂ ಆತ್ಮಸ್ವರೂಪದ

ನೆನಪು ಕಳೆದುಹೋಗಿರುವುದರಿಂದ ಆತನು ಅಜ್ಞಾನಕ್ಕೆ ವಶನಾಗಿ ವಿಷಯ ಪ್ರಧಾನವಾದ ಮನೆ ಮುಂತಾದುವುಗಳಲ್ಲೇ ಆಸಕ್ತನಾಗಿದ್ದು ಬಗೆ-ಬಗೆಯ ತಾಪತ್ರಯಕ್ಕೆ ಒಳಗಾಗುವನು. ಪ್ರತಿಮನುಷ್ಯನಿಗೂ ದೇಹಾಭಿಮಾನವೆಂಬ ಸೂಕ್ಷ್ಮವಾದ ಗಂಟು ಇರುತ್ತದೆ. ಸ್ತ್ರೀ-ಪುರುಷರ ದಾಂಪತ್ಯಭಾವವೆಂಬುದು ಅವರ ಹೃದಯಗಳನ್ನು ಸೇರಿಸುವ ಮತ್ತೊಂದು ಸ್ಥೂಲವಾದ ಮತ್ತು ಕತ್ತರಿಸಲಾಗದ ಗಂಟು. ಮೊದಲನೆಯ ಗಂಟಿನ ಜೊತೆಗೆ ಮನೆ-ಮಠ-ಮಡದಿ-ಮಕ್ಕಳು-ಹಣ ಮುಂತಾದುವುಗಳಲ್ಲಿ 'ನಾನು-ನನ್ನದು' ಎಂಬ ಮೋಹವೂ ಸೇರಿಕೊಳ್ಳುವುದು. ಕರ್ಮವಾಸನೆಗಳಿಂದುಂಟಾದ ಈ ದೃಢವಾದ ಹೃದಯದ ಗಂಟು ಯಾವಾಗ ಸಡಿಲವಾಗುವುದೋ–ಆಗ ಈ ದಾಂಪತ್ಯಭಾವದಿಂದುಂಟಾದ ಅಭಿಮಾನವೂ ತೊಲಗುವುದು ಮತ್ತು ಸಂಸಾರಕ್ಕೆ ಕಾರಣವಾಗಿರುವ (ಶರೀರಾತ್ಮಭಾವವೆಂಬ) ಅಹಂಕಾರವನ್ನು ತೊರೆದು ಜೀವನು ಎಲ್ಲ ಬಂಧನಗಳನ್ನೂ ಕಳೆದುಕೊಂಡು ಪರಮಪದ ವನ್ನೂ ಹೊಂದುವನು. ವತ್ಸರೇ! ಸಂಸಾರಸಾಗರವನ್ನು ದಾಟುವುದರಲ್ಲಿ ಕುಶಲನಾಗಿ ಧೈರ್ಯ, ಉದ್ಯಮ ಮತ್ತು ಸತ್ತ್ವಗುಣಗಳಿಂದ ಕೂಡಿದ ಮನುಷ್ಯನು ಅಹಂಕಾರರೂಪವಾದ ಲಿಂಗಶರೀರವನ್ನು ತೊರೆಯಬೇಕು. ಯಾವ ಯಾವ ಸಾಧನಗಳಿಂದ ಆ ಲಿಂಗಶರೀರವನ್ನು ಆತನು ಲಯಗೊಳಿಸಲು ಸಾಧ್ಯವಾಗುವುದು ಎಂದರೆ : ಸರ್ವರಿಗೂ ಆತ್ಮನಾಗಿ ಅವಿದ್ಯೆಯ ಸಂಬಂಧವೇ ಇಲ್ಲದೇ ಹಂಸಸ್ವರೂಪಿಯಾಗಿ ಸರ್ವರಿಗೂ ಹಿತೋಪದೇಶಕನಾಗಿ ಆದಿಗುರುವಾಗಿರುವ ನನ್ನಲ್ಲಿ ಭಕ್ತಿಯನ್ನಿಟ್ಟು ನನ್ನಲ್ಲಿ ಪರಾಯಣನಾಗುವುದರಿಂದ ; ಆಸೆಯನ್ನು ಬಿಟ್ಟು ವೈರಾಗ್ಯದಲ್ಲಿರುವುದರಿಂದ ; ಸುಖ-ದುಃಖಗಳೇ ಮುಂತಾದ ದ್ವಂದ್ವಗಳನ್ನು ಸಹಿಸಿಕೊಳ್ಳುವುದರಿಂದ ; ಜೀವವು ಪ್ರತಿಯೊಂದು ಯೋನಿಯಲ್ಲಿಯೂ ದುಃಖವನ್ನೇ ಅನುಭವಿಸಬೇಕಾಗುವುದು ಎಂಬುದನ್ನು ಪರಿಶೀಲನೆಮಾಡುವುದರಿಂದ ; ತತ್ತ್ವಜಿಜ್ಞಾಸೆಯಿಂದ ; ತಪಸ್ಸಿನಿಂದ ಸಕಾಮಕರ್ಮಗಳನ್ನು ತ್ಯಜಿಸುವುದರಿಂದ ; ನನಗೋಸ್ಕರವೇ ಕರ್ಮಗಳನ್ನು ಆಚರಿಸುವುದರಿಂದ ; ನನ್ನ ಕಥೆಗಳನ್ನು ಪ್ರತಿದಿನವೂ ಕೇಳುತ್ತಿರುವುದರಿಂದ ; ನನ್ನ ಭಕ್ತರ ಸಹವಾಸದಿಂದ ಮತ್ತು ಗುಣಗಳನ್ನು ಸಂಕೀರ್ತನೆಮಾಡುವುದರಿಂದ ; ವೈರವನ್ನು ತ್ಯಜಿಸುವುದರಿಂದ ; ಸಮತಾಬುದ್ಧಿಯಿಂದ ; ಶಾಂತಿಯಿಂದ ; ದೇಹದಲ್ಲಿಯೂ ಮತ್ತು ಮನೆ

ಮುಂತಾದುವುಗಳಲ್ಲಿಯೂ ಅಹಂಕಾರ-ಮಮಕಾರಗಳನ್ನು ತ್ಯಜಿಸುವ ಇಚ್ಛೆಯಿಂದ ; ಅಧ್ಯಾತ್ಮಯೋಗವನ್ನು ಅನುಸಂಧಾನಮಾಡುವುದರಿಂದ ; ಏಕಾಂತಸೇವನೆಯಿಂದ ಪ್ರಾಣ-ಇಂದ್ರಿಯ-ಮನಸ್ಸುಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದರಿಂದ ; ಶಾಸ್ತ್ರಗಳಲ್ಲಿಯೂ, ಸತ್ಪುರುಷರ ವಚನಗಳಲ್ಲಿಯೂ ಶ್ರದ್ಧೆಯನ್ನಿಟ್ಟುಕೊಳ್ಳುವುದರಿಂದ ; ಪೂರ್ಣವಾದ ಬ್ರಹ್ಮಚರ್ಯದಿಂದ ; ಕರ್ತವ್ಯಗಳ ವಿಷಯದಲ್ಲಿ ನಿರಂತರವಾಗಿ ಸಾವಧಾನವಾಗಿರುವುದರಿಂದ ; ವಾಣಿಯನ್ನು ಹತೋಟಿಯಲ್ಲಿಟ್ಟುಕೊಳ್ಳುವುದರಿಂದ ; ಎಲ್ಲೆಲ್ಲಿಯೂ ನನ್ನ ಇರುವಿಕೆಯನ್ನು ನೋಡುವುದರಿಂದ ; ಅನುಭವಜ್ಞಾನಸಹಿತವಾದ ತತ್ತ್ವವಿಚಾರದಿಂದ ಮತ್ತು ಸಮಾಧಿಯೋಗದಿಂದ. ಮನುಷ್ಯನು ಸಾವಧಾನವಾಗಿದ್ದು ಅವಿದ್ಯೆಯಿಂದುಂಟಾಗಿರುವ ಹೃದಯದ ಗಂಟಿನ ರೂಪವಾದ ಕಟ್ಟನ್ನು ಶಾಸ್ತ್ರೋಕ್ತವಾದ ರೀತಿಯಲ್ಲಿ ಈ ನಾನಾಸಾಧನಗಳಿಂದ ಪೂರ್ಣವಾಗಿ ಕತ್ತರಿಸಿಹಾಕಬೇಕು. ಏಕೆಂದರೆ : ಇದೇ ಕರ್ಮಸಂಸ್ಕಾರಗಳು ವಾಸಮಾಡುವ ಜಾಗವು. ಹೀಗೆ ಕತ್ತರಿಸಿಹಾಕಿದ ಬಳಿಕ ಅದಕ್ಕೆ ಸಹಾಯ ಮಾಡಿದ ಸಾಧನಗಳನ್ನೂ ತ್ಯಜಿಸಿಬಿಡಬೇಕು. ಯಾವನು ನನ್ನ ಲೋಕವನ್ನು ಪಡೆಯುವುದನ್ನೇ ಅಥವಾ ನನ್ನ ಅನುಗ್ರಹವನ್ನೇ ಪರಮಪುರುಷಾರ್ಥವನ್ನಾಗಿ ತಿಳಿದುಕೊಂಡಿದ್ದಾನೆಯೋ–ಆತನು ರಾಜನಾಗಿದ್ದರೆ ತಿಳಿವಳಿಕೆಯಿಲ್ಲದ ತನ್ನ ಪ್ರಜೆಗಳಿಗೆ–ಗುರುವು ಶಿಷ್ಯರಿಗೂ ಮತ್ತು ತಂದೆಯು ತನ್ನ ಪುತ್ರರಿಗೂ ಹೇಗೋ ಹಾಗೆ–ಪ್ರೀತಿಯಿಂದ ಶಿಕ್ಷಣವನ್ನು ನೀಡಬೇಕು. ಅವರೇನಾದರೂ ಅಜ್ಞಾನದಿಂದ ಆ ಶಿಕ್ಷಣಕ್ಕೆ ಅನುಗುಣವಾಗಿ ನಡೆಯದೇ ಕರ್ಮವನ್ನೇ ಪರಮಪುರುಷಾರ್ಥವೆಂದು ಭಾವಿಸಿಕೊಂಡರೂ–ಅವರ ಮೇಲೆ ಸಿಟ್ಟುಮಾಡಿಕೊಳ್ಳದೇ ಅವರಿಗೆ ಮೃದುವಾಗಿ ತಿಳಿವಳಿಕೆಯನ್ನು ನೀಡಿ ಕಾಮ್ಯಕರ್ಮಗಳಲ್ಲಿ ಅವರು ತೊಡಗದಂತೆ ಮಾಡಬೇಕು. ಅವರನ್ನು ವಿಷಯಾಸಕ್ತಿಯಿಂದ ಕೂಡಿದ ಕಾಮ್ಯಕರ್ಮಗಳಲ್ಲಿ ತೊಡಗಿಸುವುದೂ ಒಂದೇ ; ಕುರುಡನನ್ನು ತಿಳಿದೂ ತಿಳಿದೂ ಹಳ್ಳದಲ್ಲಿ ತಳ್ಳುವುದೂ ಒಂದೇ. ಇದರಿಂದ ಏನು ಪುರುಷಾರ್ಥವು ತಾನೇ ಸಿದ್ಧಿಸೀತು? ತಮಗೆ ನಿಜವಾಗಿಯೂ ಕಲ್ಯಾಣವು ಯಾವುದರಿಂದ ಆಗುತ್ತದೆ–ಎಂಬುದು ಜನರಿಗೆ ತಿಳಿಯದು. ಅದಕ್ಕಾಗಿಯೇ ಅವರು ಬಗೆ-ಬಗೆಯ ಭೋಗಕಾಮನೆಗಳಲ್ಲಿ ಸಿಕ್ಕಿಹಾಕಿಕೊಂಡು

ತುಚ್ಛವಾದ ಕ್ಷಣಿಕಸುಖಕ್ಕೋಸ್ಕರ ಪರಸ್ಪರವಾಗಿ ವೈರವನ್ನು ಸಾಧಿಸುತ್ತಾರೆ ಮತ್ತು ನಿರಂತರವಾಗಿ ವಿಷಯಭೋಗಗಳಿಗಾಗಿಯೇ ಪ್ರಯತ್ನಮಾಡುತ್ತಾರೆ. ಈ ವೈರ-ವಿರೋಧಗಳಿಂದಾಗಿ ನರಕವೇ ಮುಂತಾದ ಅನಂತವಾದ ಘೋರದುಃಖಗಳುಂಟಾಗುವುದೆಂಬುದನ್ನು ಆ ಮೂರ್ಖರು ಅರಿಯರು. ಹಳ್ಳ-ಕೊಳ್ಳಗಳಿಗೆ ಬೀಳಿಸುವ ತಪ್ಪುದಾರಿಯಲ್ಲಿ ಕುರುಡನೊಬ್ಬನು ಹೋಗುತ್ತಿರುವುದನ್ನು ಕಂಡಾಗ ಕಣ್ಣುಳ್ಳ ಯಾವ ಮನುಷ್ಯನೂ ಆತನನ್ನು ಅಲ್ಲಿಗೆ ಹೋಗಲು ಬಿಡುವುದಿಲ್ಲ. ಹಾಗೆಯೇ ಅಜ್ಞಾನಿಯು ಅವಿದ್ಯೆಯಲ್ಲಿ ಸಿಕ್ಕಿಹಾಕಿಕೊಂಡು ದುಃಖದ ಕಡೆಗೆ ಹೋಗುತ್ತಿರುವುದನ್ನು ಕಂಡಾಗ ಯಾವ ದಯಾಳುವಾದ ಜ್ಞಾನಿಯು ತಾನೇ ತಿಳಿದೂ ತಿಳಿದೂ ಆತನನ್ನು ಆ ತಪ್ಪು ದಾರಿಯಲ್ಲಿ ಹೋಗಲು ಬಿಡುವನು ಅಥವಾ ಅದರಲ್ಲಿ ಹೋಗಲು ಪ್ರೇರಣೆ ನೀಡಿಯಾನು? ನಿನಗೆ ಪ್ರಿಯನಾದ ಶಿಷ್ಯನಿಗೆ ಅಥವಾ ನೆಂಟನಿಗೆ ಅಥವಾ ಭಕ್ತನಿಗೆ ಭಗವದ್ಭಕ್ತಿಯನ್ನು ಉಪದೇಶಮಾಡಿ ಆತನನ್ನು ಮೃತ್ಯುವಿನ ದವಡೆ ಯಿಂದ ಕಾಪಾಡದೇ ಇರುವ ಗುರುವು ನಿಜವಾಗಿಯೂ ಗುರುವಲ್ಲ ; ನೆಂಟರಿಷ್ಟರು ನಿಜವಾಗಿಯೂ ನೆಂಟರಿಷ್ಟರಲ್ಲ ; ತಂದೆಯು ನಿಜವಾಗಿಯೂ ತಂದೆಯಲ್ಲ ; ತಾಯಿಯು ನಿಜವಾಗಿಯೂ ತಾಯಿಯಲ್ಲ ; ದೈವವು ನಿಜ ವಾಗಿಯೂ ದೈವವಲ್ಲ ಮತ್ತು ಪತಿಯು ನಿಜವಾಗಿಯೂ ಪತಿಯಲ್ಲ. ಎಲೈ ಪುತ್ರರೇ! ನನ್ನ ಸಂಕಲ್ಪದಿಂದ ನಾನು ಸ್ವೀಕರಿಸಿರುವ ಈ ಅವತಾರಶರೀರದ ರಹಸ್ಯವು ಸಾಧಾರಣಮನುಷ್ಯರ ಬುದ್ಧಿಗೆ ಎಟುಕುವುದಿಲ್ಲ. ಧರ್ಮಕ್ಕೆ ನೆಲೆಯಾಗಿರುವ ಶುದ್ಧಸತ್ತ್ವವೇ ನನ್ನ ಹೃದಯವು. ಅಧರ್ಮವನ್ನು ಬಹಳ ಹಿಂದೆ ಬೀಳುವಂತೆ ಬಹಳ ದೂರಕ್ಕೆ ಒತ್ತರಿಸಿ ಬಿಟ್ಟಿದ್ದೇನೆ. ಆದುದರಿಂದಲೇ ಜನರು ನನ್ನನ್ನು ಋಷಭನೆಂದು ಕರೆಯುತ್ತಾರೆ. ನೀವೆಲ್ಲರೂ ನನ್ನ ಶುದ್ಧ ಸತ್ತ್ವಮಯವಾದ ಹೃದಯದಿಂದ ಹುಟ್ಟಿದ್ದೀರಿ. ಆದುದರಿಂದ ಧರ್ಮವನ್ನೇ ಅವಲಂಬಿಸಿ ಮಾತ್ಸರ್ಯವನ್ನು ತೊರೆದು ಹಿರಿಯಣ್ಣನಾದ ಭರತಕುಮಾರ ನನ್ನು ಸೇವಿಸಿರಿ. ಆತನ ಸೇವೆಯನ್ನು ನೀವು ಮಾಡಿದರೆ ಅದು ನನ್ನನ್ನು ಕುರಿತು ಮಾಡಿದ ಸೇವೆಯೇ ಆಗುವುದು ಮತ್ತು ಹೀಗೆ ಪ್ರಜಾಪಾಲಕನಾದ ಭರತನನ್ನು ಸೇವೆಮಾಡಿದರೆ ನೀವು ಪ್ರಜೆಗಳನ್ನು ಭರಿಸಿದಂತೆಯೇ ಆಗು ವುದು. ಪ್ರಾಣಿಗಳಲ್ಲಿ ಕೆಳಮಟ್ಟದ ಇತರ ಭೂತಗಳಿಗಿಂತಲೂ ಲತಾ-ವೃಕ್ಷ

ಗಳು ಶ್ರೇಷ್ಠ. ಸ್ಥಾವರ (ನಿಂತಿರುವ) ಜೀವಿಗಳಿಗಿಂತಲೂ ಜಂಗಮ (ಓಡಾಡುವ) ಜೀವಿಗಳು ಶ್ರೇಷ್ಠ. ಆ ಜಂಗಮಜೀವಿಗಳಲ್ಲಿಯೂ ಹುಳು-ಹುಪ್ಪಟೆಗಳಿಗಿಂತಲೂ ಜ್ಞಾನವುಳ್ಳ ಪಶುಗಳು ಶ್ರೇಷ್ಠ. ಆ ಪಶುಗಳಿಗಿಂತಲೂ ಮನುಷ್ಯರು ಉತ್ತಮರು. ಆ ಮನುಷ್ಯರಿಗಿಂತಲೂ ಪ್ರಮಥಗಣಗಳೂ, ಪ್ರಮಥಗಣಗಳಿಗಿಂತಲೂ ಗಂಧರ್ವರೂ, ಗಂಧರ್ವರಿಗಿಂತಲೂ ಸಿದ್ಧರೂ, ಸಿದ್ಧರಿಗಿಂತಲೂ ದೇವತೆಗಳ ಅನುಯಾಯಿಗಳಾದ ಕಿನ್ನರಾದಿಗಳೂ ಶ್ರೇಷ್ಠರು. ಆ ಕಿನ್ನರರಿಗಿಂತಲೂ ಅಸುರರು ಉತ್ತಮರು. ಅಸುರರಿಗಿಂತಲೂ ದೇವತೆಗಳು ಶ್ರೇಷ್ಠರು. ಉಳಿದ ದೇವತೆಗಳಿಗಿಂತಲೂ ಇಂದ್ರನು ಶ್ರೇಷ್ಠನು. ಇಂದ್ರನಿಗಿಂತಲೂ ಬ್ರಹ್ಮದೇವರ ಪುತ್ರರಾದ ದಕ್ಷಾದಿ ಪ್ರಜಾಪತಿಗಳು ಶ್ರೇಷ್ಠರು. ಬ್ರಹ್ಮದೇವರ ಪುತ್ರರಲ್ಲೂ ರುದ್ರದೇವರು ಶ್ರೇಷ್ಠರು. ಆ ರುದ್ರ ದೇವರು ಬ್ರಹ್ಮದೇವರ ವೀರ್ಯ (ಸಂತಾನ) ವಾಗಿರುವುದರಿಂದ ಬ್ರಹ್ಮ ದೇವರು ಅವರಿಗಿಂತಲೂ ಉತ್ತಮರು. ಬ್ರಹ್ಮದೇವರು ನನ್ನಿಂದ ಜನಿಸಿ ನನ್ನ ಉಪಾಸನೆಯನ್ನು ಮಾಡುವುದರಿಂದ ನಾನು ಆ ಬ್ರಹ್ಮದೇವರಿಗಿಂತಲೂ ಶ್ರೇಷ್ಠನಾಗಿದ್ದೇನೆ. ಆದರೆ ಬ್ರಾಹ್ಮಣರು ಇಂತಹ ನನಗೂ ಪೂಜ್ಯತಮ ರಾಗಿರುವುದರಿಂದ ಅವರೇ ಸರ್ವಶ್ರೇಷ್ಠರು." (ಶ್ಲೋಕ 3 -22)

ಅನಂತರ ಸಭೆಯಲ್ಲಿ ದಯಮಾಡಿಸಿದ್ದ ಬ್ರಾಹ್ಮಣರನ್ನು ಸಂಬೋಧಿಸಿ ಋಷಭದೇವರು ಹೀಗೆಂದರು :

"ಎಲೈ ವಿಪ್ರಗಣಗಳೇ! ಇತರ ಯಾವ ಪ್ರಾಣಿಗಳೂ ಬ್ರಾಹ್ಮಣರಿಗೆ ಸಾಟಿಯೇ ಅಲ್ಲವೆಂದು ನಾನು ತಿಳಿಯುತ್ತೇನೆ. ಹೀಗಿರುವಾಗ ಬ್ರಾಹ್ಮಣರಿ ಗಿಂತಲೂ ಉತ್ತಮರಾದ ಪ್ರಾಣಿಗಳು ಯಾರೂ ಇಲ್ಲವೆಂಬುದನ್ನು ಬೇರೆ ಹೇಳಬೇಕೇ? ಜನರು ಶ್ರದ್ಧಾಪೂರ್ವಕವಾಗಿ ಬ್ರಾಹ್ಮಣರ ಬಾಯಲ್ಲಿ ಸಮರ್ಪಿ ಸುವ ಅನ್ನವೇ ಮುಂತಾದ ಆಹುತಿಯನ್ನು ನಾನು ಅತ್ಯಂತಪ್ರಸನ್ನತೆ ಯಿಂದ ಸ್ವೀಕರಿಸುತ್ತೇನೆ. ಅಗ್ನಿಹೋತ್ರದಲ್ಲಿ ಹೋಮಮಾಡಿದ ಆಹುತಿ ಯನ್ನು ಸ್ವೀಕರಿಸುವುದಕ್ಕಿಂತಲೂ ಹೆಚ್ಚು ಪ್ರಸನ್ನತೆಯಿಂದ ಅದನ್ನು ಅಂಗೀ ಕರಿಸುತ್ತೇನೆ. ಯಾರು ಈ ಲೋಕದಲ್ಲಿ ಪುರಾತನವೂ, ಸುಂದರವೂ ಆದ ವೇದವೆಂಬ ನನ್ನ ಮೂರ್ತಿಯನ್ನು ಅಧ್ಯಯನವೇ ಮುಂತಾದುವುಗಳ ಮೂಲಕ ಧರಿಸಿಕೊಂಡಿದ್ದಾರೆಯೋ ಮತ್ತು ಪರಮಪವಿತ್ರವಾದ ಸತ್ತ್ವಗುಣ,

ಶಮ, ದಮ, ಸತ್ಯ, ಅನುಗ್ರಹ, ತಪಸ್ಸು, ತಾಳ್ಮೆ ಮತ್ತು ಜ್ಞಾನಾನುಭವ ಗಳೆಂಬ ಅಷ್ಟಗುಣಗಳಿಂದ ಸಂಪನ್ನರಾಗಿದ್ದಾರೆಯೋ–ಅಂತಹ ಬ್ರಾಹ್ಮಣರಿ ಗಿಂತಲೂ ಬೇರಾರು ತಾನೇ ಶ್ರೇಷ್ಠರು? ನಾನು ಬ್ರಹ್ಮಾದಿಗಳಿಗಿಂತಲೂ ಶ್ರೇಷ್ಠನು ಮತ್ತು ಅನಂತನು. ಸ್ವರ್ಗ ಮತ್ತು ಮೋಕ್ಷಗಳನ್ನೂ ಕೊಡುವ ಸಾಮರ್ಥ್ಯವುಳ್ಳವನು. ಆದರೆ ನನ್ನ ಅಕಿಂಚನರಾದ ಭಕ್ತರು ಎಷ್ಟು ನಿಃಸ್ಪೃಹರಾಗಿರುತ್ತಾರೆಂದರೆ–ಅವರು ನನ್ನಿಂದಲೂ ಯಾವಾಗಲೂ ಏನನ್ನೂ ಬಯಸುವುದಿಲ್ಲ, ಇನ್ನು ರಾಜ್ಯವೇ ಮುಂತಾದ ಇಂತರ ವಸ್ತುಗಳ ಬಯಕೆ ಅವರಿಗೆ ಹೇಗೆ ತಾನೇ ಬಂದೀತು? (ಶ್ಲೋಕ 23-25)

ಸರ್ವಾಣಿ ಮದ್ಧಿಷ್ಣ್ಯತಯಾ ಭವದ್ಭಿ-
ಶ್ಚರಾಣಿ ಭೂತಾನಿ ಸುತಾ ಧ್ರುವಾಣಿ ।
ಸಮ್ಭಾವಿತವ್ಯಾನಿ ಪದೇ ಪದೇ ವೋ
ವಿವಿಕ್ತದೃಗ್ಭಿಸ್ತದು ಹಾರ್ಹಣಂ ಮೇ ॥೨೬॥

ಎಲೈ ಪುತ್ರರೇ! ಸ್ಥಾವರ ಮತ್ತು ಜಂಗಮಗಳೆನಿಸಿದ ಸಮಸ್ತ ಭೂತಗಳೂ ನನ್ನ ಶರೀರವೇ ಎಂದು ಭಾವಿಸಿ ಶುದ್ಧವಾದ ಬುದ್ಧಿಯಿಂದ ಹೆಜ್ಜೆ-ಹೆಜ್ಜೆಗಳಲ್ಲಿಯೂ ಅವುಗಳ ಸೇವೆಮಾಡಿರಿ. ಎಲ್ಲದರಲ್ಲೂ ನನ್ನ ಭಾವವನ್ನಿಡಿರಿ ; ಅದೇ ನನ್ನ ಆರಾಧನೆಯು.

ಮನೋವಚೋದೃಕ್ಕರಣೇಹಿತಸ್ಯ
ಸಾಕ್ಷಾತ್ಕೃತಂ ಮೇ ಪರಿಬರ್ಹಣಂ ಹಿ ।
ವಿನಾ ಪುಮಾನ್ಯೇನ ಮಹಾವಿಮೋಹಾ-
ತ್ಕೃತಾನ್ತಪಾಶಾನ್ನ ವಿಮೋಕ್ತುಮೀಶೇತ್ ॥೨೭॥

ಮನಸ್ಸು, ಮಾತು, ದೃಷ್ಟಿ ಮತ್ತು ಇತರ ಇಂದ್ರಿಯಗಳ ಕರ್ಮ ಗಳೆಲ್ಲಕ್ಕೂ ನನ್ನ ಆರಾಧನೆಯೇ ಫಲವೆಂದು ತಿಳಿಯಿರಿ. ಹೀಗೆ ಎಲ್ಲ ಕರ್ಮ ಗಳನ್ನೂ ನನಗೆ ಅರ್ಪಣೆಮಾಡದಿರುವ ಮನುಷ್ಯನು ತನ್ನನ್ನು ಮಹಾ ಮೋಹಮಯವಾದ ಕಾಲಪಾಶದಿಂದ ಬಿಡಿಸಿಕೊಳ್ಳಲಾರನು."

ಶ್ರೀಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಹೇಳುತ್ತಾರೆ :

"ಮಹಾರಾಜ! ಋಷಭದೇವನ ಆ ಪುತ್ರರೆಲ್ಲರೂ ಸ್ವತಃ ಎಲ್ಲ ರೀತಿ

ಗಳಿಂದಲೂ ಸುಶಿಕ್ಷಿತರೇ ಆಗಿದ್ದರು. ಆದರೂ ಎಲ್ಲ ಜನರಿಗೂ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಮಹಾನುಭಾವನೂ, ಪರಮಸುಹೃದನೂ, ಭಗವಂತನೂ ಆದ ಋಷಭದೇವನು ಅವರಿಗೆ ಸಭೆಯಲ್ಲಿ ಹೀಗೆ ಉಪದೇಶ ಮಾಡಿದನು.

ಋಷಭದೇವನ ನೂರು ಮಂದಿ ಪುತ್ರರಲ್ಲಿ ಭರತನು ಎಲ್ಲರಿಗಿಂತಲೂ ಹಿರಿಯನೂ, ಶ್ರೀಭಗವಂತನ ಪರಮಭಕ್ತನೂ, ಭಗವದ್ಭಕ್ತರಿಗೆ ಆಶ್ರಯನೂ ಆಗಿದ್ದನು. ಋಷಭಸ್ವಾಮಿಯು ಭೂಮಿಯನ್ನು ಪಾಲಿಸುವುದಕ್ಕಾಗಿ ಆತನಿಗೆ ಸಾಮ್ರಾಜ್ಯಪಟ್ಟಾಭಿಷೇಕವನ್ನು ಮಾಡಿ, ತಾನು ಶಮ-ದಮಾದಿ ಸಂಪನ್ನರಾದ ನಿವೃತ್ತಿಧರ್ಮಪರಾಯಣರಾದ ಮಹಾಮುನಿಗಳಿಗೆ ಭಕ್ತಿ, ಜ್ಞಾನ ಮತ್ತು ವೈರಾಗ್ಯರೂಪವಾದ ಪರಮಹಂಸೋಚಿತವಾದ ಧರ್ಮದ ಬಗೆಗೆ ಶಿಕ್ಷಣನೀಡುವ ಉದ್ದೇಶದಿಂದ ಆಹವನೀಯವೇ ಮುಂತಾದ ವೈದಿಕಾಗ್ನಿಗಳನ್ನು ತನ್ನಲ್ಲಿಯೇ ಆರೋಪಣೆಮಾಡಿಕೊಂಡು, ಅತ್ಯಂತವಿರಕ್ತಿಯ ವೃತ್ತಿಯನ್ನು ಕೈಗೊಂಡನು. ಆತನು ಶರೀರಧಾರಣೆಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ತೆಗೆದುಕೊಂಡು ಉಳಿದುದನ್ನೆಲ್ಲಾ ಮನೆಯಲ್ಲಿಯೇ ಬಿಟ್ಟು ಹೊರಟನು. ಉಡಿಗೆಗಳನ್ನೂ ತೆಗೆದುಹಾಕಿ ದಿಗಂಬರನಾಗಿ ಕೆದರಿದ ತಲೆಗೂದಲುಗಳಿಂದ ಕೂಡಿ ಹುಚ್ಚನಂತೆ ಕಾಣುತ್ತಾ ಬ್ರಹ್ಮಾವರ್ತದೇಶದಿಂದ ಹೊರಟುಹೋದನು. ಆತನು ಸಂಪೂರ್ಣಮೌನವ್ರತವನ್ನು ಧರಿಸಿದವನಾಗಿ ಯಾರೂ ಮಾತನಾಡಿಸಿದರೂ ಮಾತನಾಡದೇ ಮೂರ್ಖನಂತೆಯೂ, ಕುರುಡನಂತೆಯೂ, ಕಿವುಡನಂತೆಯೂ, ಮೂಗನಂತೆಯೂ, ಪಿಶಾಚದಂತೆಯೂ, ಹುಚ್ಚನಂತೆಯೂ ವರ್ತಿಸುತ್ತಾ ಅವಧೂತನಾಗಿ ಇಷ್ಟಬಂದಲ್ಲಿ ಸುತ್ತಾಡತೊಡಗಿದನು. ಕೆಲವೊಮ್ಮೆ ನಗರಗಳಿಗೋ, ಹಳ್ಳಿಗಳಿಗೋ ಹೋದರೆ, ಕೆಲವೊಮ್ಮೆ ಗಣಿಗಳಿಗೋ, ರೈತರ ವಸತಿಗಳಿಗೋ, ತೋಟಗಳಿಗೋ, ಬೆಟ್ಟದ ಬಳಿಯ ಹಳ್ಳಿಗಳಿಗೋ, ಸೇನಾಶಿಬಿರಗಳಿಗೋ, ಗೋಶಾಲೆಗಳಿಗೋ, ಗೊಲ್ಲರ ಕೇರಿಗಳಿಗೋ, ಯಾತ್ರಿಕರು ತಂಗುವ ಎಡೆಗಳಿಗೋ ಹೋಗುತ್ತಿದ್ದನು. ಕೆಲವು ವೇಳೆ ಪರ್ವತಗಳಲ್ಲೂ, ಕಾಡುಗಳಲ್ಲೂ, ಋಷ್ಯಾಶ್ರಮಗಳಲ್ಲೂ ಸಂಚರಿಸುತ್ತಿದ್ದನು. ಆತನು ಯಾವುದೇ ಮಾರ್ಗದಲ್ಲಿ ಹೋದರೂ–ನೊಣಗಳು ಅರಣ್ಯದಲ್ಲಿ ಸಂಚರಿಸುವ ಆನೆ

ಯನ್ನು ಮುತ್ತುವಂತೆ–ಮೂರ್ಖರೂ, ದುಷ್ಟರೂ, ಪುಂಡರೂ ಆತನನ್ನು ಹಿಂಬಾಲಿಸಿ ಮುತ್ತಿಗೆ ಹಾಕಿ ಆತನಿಗೆ ಕಿರುಕುಳಕೊಡತೊಡಗಿದರು. ಕೆಲವರು ಆತನನ್ನು ಹೆದರಿಸುತ್ತಿದ್ದರು. ಕೆಲವರು ಹೊಡೆಯುತ್ತಿದ್ದರು. ಕೆಲವರು ಆತನ ಮೇಲೆ ಮೂರ್ತವಿಸರ್ಜನೆಮಾಡುತ್ತಿದ್ದರು. ಆತನ ಮೇಲೆ ಕೆಲವರು ಉಗುಳುತ್ತಿದ್ದರು. ಕೆಲವರು ಮಣ್ಣುಹೆಂಟೆಗಳನ್ನು ಎಸೆಯುತ್ತಿದ್ದರು. ಕೆಲವರು ಮಲವನ್ನೂ, ಧೂಳನ್ನೂ ಎರಚುತ್ತಿದ್ದರು. ಕೆಲವರು ಅಪಾನವಾಯುವನ್ನು ಬಿಡುತ್ತಿದ್ದರು. ಕೆಲವರು ಮನಸ್ವಿಯಾಗಿ ಬೈದು ತಿರಸ್ಕಾರಮಾಡುತ್ತಿದ್ದರು. ಆದರೆ ಆತನು ಯಾವುದನ್ನೂ ಲಕ್ಷ್ಯಮಾಡದೇ ಉದಾಸೀನನಾಗಿರುತ್ತಿದ್ದನು. ಏಕೆಂದರೆ : ಆತನು ಈ ಅಸತ್ತಾದ ಶರೀರದಲ್ಲಿ ಅಹಂಕಾರ-ಮಮಕಾರಗಳನ್ನು ಸಂಪೂರ್ಣವಾಗಿ ತೊರೆದು, ಕಾರ್ಯ-ಕಾರಣರೂಪವಾದ ಜಗತ್ತಿಗೆಲ್ಲಾ ಸಾಕ್ಷಿಯಾಗಿ ಸರ್ವಾತೀತನಾಗಿರುವ ಪರಮಾತ್ಮನಲ್ಲಿ ನೆಲೆಯನ್ನು ಪಡೆದಿದ್ದನು. ಅಖಂಡವಾದ ಚಿತ್ತವೃತ್ತಿಯಿಂದ ಒಬ್ಬಂಟಿಗನಾಗಿ ತಾನೇತಾನಾಗಿ ಭೂಮಿಯ ಮೇಲೆ ಸಂಚರಿಸುತ್ತಿದ್ದನು. ಋಷಭದೇವನು ಆಗಲೂ ಸುಂದರಸುಕುಮಾರವಾದ ದೇಹಸಂಪತ್ತಿನಿಂದ ಕೂಡಿದ್ದನು. ಆತನ ಕೈಕಾಲುಗಳು, ಎದೆ, ನಿಡುದೋಳುಗಳು, ಹೆಗಲು, ಕೊರಳು, ಮುಖ–ಮುಂತಾದ ಸರ್ವಾಂಗಗಳೂ ಅತ್ಯಂತಕೋಮಲವಾಗಿದ್ದುವು. ಆತನ ಸಹಜಸುಂದರವಾದ ಮುಖವು ಮಧುರಮಂದಹಾಸದಿಂದ ಮತ್ತೂ ಮನೋಹರವಾಗಿ ಕಣ್ಮನಗಳನ್ನು ಸೆಳೆಯುತ್ತಿತ್ತು. ನೇತ್ರಗಳು ಹೊಸ ಕಮಲದಳಗಳಂತೆ ರಮಣೀಯವಾಗಿ ವಿಶಾಲವಾಗಿ ಕೊಂಚ ಕೆಂಬಣ್ಣದಿಂದ ಕೂಡಿ ಶೀತಲವೂ, ಸಂತಾಪಹರವೂ ಆದ ಕಣ್ಣುಗುಡ್ಡೆಗಳಿಂದ ಕಂಗೊಳಿಸುತ್ತಿದ್ದುವು. ಕೆನ್ನೆ, ಕಿವಿ ಮತ್ತು ಮೂಗುಗಳು ಸಮಾನವಾಗಿದ್ದು ಸೌಂದರ್ಯದ ರಸದೌತಣವನ್ನು ಮಾಡಿಸುತ್ತಿದ್ದುವು. ಇವೆಲ್ಲದರ ಜೊತೆಗೆ ಆತನ ಕಿರುನಗೆಯ ಬೆಡಗಿನಿಂದ ಕೂಡಿದ ಮುಖಾರವಿಂದದ ಕಾಂತಿಯನ್ನು ಕಂಡು ಪುರನಾರಿಯರ ಮನಸ್ಸು ಕಾಮದೇವನ ಆಕ್ರಮಣಕ್ಕೆ ಒಳಗಾಗುತ್ತಿತ್ತು. ಆದರೂ ಮುಖದ ಮುಂದೆ ಜೋಲಾಡುತ್ತಿದ್ದ, ಉದ್ದವಾದ, ಬೂದು ಬಣ್ಣದ, ಕೊಂಕು ಕೂದಲುಗಳ ಭಾರದಿಂದಲೂ ಆತನು ಗ್ರಹಹಿಡಿದವನಂತೆ ಮರುಳು-ಮರುಳಾಗಿಯೂ ಕಾಣುತ್ತಿದ್ದನು.

'ಈ ಜನರೆಲ್ಲರೂ ಯೋಗಕ್ಕೆ ವಿಘ್ನವನ್ನುಂಟುಮಾಡುವವರು. ಆದರೆ ಇವರಿಗೆ ಪ್ರತೀಕಾರಮಾಡಬಾರದು. ಇವರ ಮುತ್ತಿಗೆಗೆ ಸಿಕ್ಕಲೂಬಾರದು. ಇದಕ್ಕೆ ಒಂದೇ ಉಪಾಯ–ಜುಗುಪ್ಸಿತವಾಗಿ ಎಲ್ಲರಿಗೂ ಹೇವರಿಕೆಯನ್ನುಂಟು ಮಾಡುವ ರೀತಿಯಲ್ಲಿ ವರ್ತಿಸುವುದು'–ಎಂದು ಋಷಭಸ್ವಾಮಿಯು ನಿಶ್ಚಯಿಸಿದನು. ಅದರಂತೆ ಹೆಬ್ಬಾವಿನ ವರ್ತನೆಯನ್ನು ಸರಿಹೋಲುವ 'ಅಜಗರ ವೃತ್ತಿ' ಎಂಬ ಜೀವನಸರಣಿಯನ್ನು ಹಿಡಿದನು. ಮಲಗಿಕೊಂಡೇ ತಿನ್ನುವುದು, ಕುಡಿಯುವುದು, ಅಗಿಯುವುದು ಮತ್ತು ಮಲ-ಮೂತ್ರವಿಸರ್ಜನೆ ಮಾಡುವುದು ಮುಂತಾದುವನ್ನು ಮಾಡತೊಡಗಿದನು. ತಾನು ವಿಸರ್ಜನೆ ಮಾಡಿದ ಮಲದಲ್ಲಿಯೇ ಹೊರಳಾಡುತ್ತಾ ಅದನ್ನು ಮೈಗೆಲ್ಲಾ ಬಳಿದುಕೊಳ್ಳುತ್ತಿದ್ದನು. ಆದರೆ ಅಲ್ಲಿ ಒಂದು ಅದ್ಭುತ! ಆತನ ಮಲದಲ್ಲಿ ದುರ್ವಾಸನೆಯ ಲೇಶವೂ ಇಲ್ಲದೆ ಸುಗಂಧವೇ ತುಂಬಿತ್ತು. ಆ ಸುಗಂಧವನ್ನು ತೆಗೆದುಕೊಂಡು ಗಾಳಿಯು ಆತನ ಸುತ್ತಲೂ ಹತ್ತು ಯೋಜನದಷ್ಟು ಜಾಗದಲ್ಲಿ ಪರಿಮಳವನ್ನು ಬೀರುತ್ತಿತ್ತು. ಹೀಗೆಯೇ ಆ ಯೋಗೀಂದ್ರನಾದ ಋಷಭದೇವನು ಗೋವುಗಳು, ಜಿಂಕೆಗಳು, ಕಾಗೆಗಳು ಮುಂತಾದುವುಗಳ ಆಚರಣೆಯನ್ನು ಅನುಸರಿಸುತ್ತಾ ಕೆಲವೊಮ್ಮೆ ನಡೆಯುತ್ತಿರುವಾಗಲೂ, ಕೆಲವೊಮ್ಮೆ ನಿಂತಿರುವಾಗಲೂ, ಕೆಲವೊಮ್ಮೆ ಕುಳಿತಿರುವಾಗಲೂ, ಕೆಲವೊಮ್ಮೆ ಮಲಗಿರುವಾಗಲೂ, ಆಹಾರ-ಪಾನೀಯಗಳನ್ನು ತಿನ್ನುತ್ತಾ, ಕುಡಿಯುತ್ತಾ, ಮಲ-ಮೂತ್ರವಿಸರ್ಜನೆಮಾಡುತ್ತಿದ್ದನು. ಎಲೈ ರಾಜೇಂದ್ರನೇ! ಹೀಗೆ ಋಷಭದೇವನು ಸರ್ವಸ್ವವನ್ನೂ ತ್ಯಾಗಮಾಡಿದ ಪರಮಹಂಸ ಅವಧೂತರ ವೃತ್ತಿಯನ್ನು ಕಲಿಸಿಕೊಡುವುದಕ್ಕಾಗಿ ಬಗೆ-ಬಗೆಯ ಯೋಗಚರ್ಯೆಗಳನ್ನು ತೋರಿದನು. ತನ್ನೊಳಗೆ ತಾನು ನಿರಂತರವಾಗಿ ಸರ್ವೋತ್ತಮವಾದ ಬ್ರಹ್ಮಾನಂದವನ್ನು ಅನುಭವಿಸುತ್ತಿದ್ದನು. ಸಮಸ್ತಪ್ರಾಣಿಗಳಿಗೂ ಯಾವನು ಆತ್ಮನಾಗಿದ್ದಾನೆಯೋ–ಆತನಿಗೂ ಮತ್ತು ತನಗೆ ಆತ್ಮಸ್ವರೂಪನಾಗಿರುವ ಶ್ರೀವಾಸುದೇವಭಗವಂತನಿಗೂ ಯಾವುದೇ ರೀತಿಯ ಭೇದವೂ ಇಲ್ಲವೆಂಬುದು ಆತನ ಅನುಭವದ ದರ್ಶನವಾಗಿತ್ತು. ಸಮಸ್ತಪುರುಷಾರ್ಥಗಳ ಪೂರ್ಣತೆಯನ್ನೂ ತನ್ನ ಆ ಆನಂದದಲ್ಲಿ ಆತನು ಅನುಭವಿಸಿದನು. ಆಗ ಆಕಾಶಗಮನ–ಮನೋವೇಗಗಳಿಂದ ಇಷ್ಟಬಂದಲ್ಲಿಗೆ ತನ್ನ ಶರೀರವನ್ನು

ತಲುಪಿಸುವ ಶಕ್ತಿ, ಅಂತರ್ಧಾನಹೊಂದುವ ಸಿದ್ಧಿ, ಪರಕಾಯಪ್ರವೇಶ, ದೂರಶ್ರವಣ, ದೂರದರ್ಶನ–ಇವೇ ಮುಂತಾದ ಎಲ್ಲ ಸಿದ್ಧಿಗಳೂ ತಾವಾಗಿಯೇ ಆತನ ಸೇವೆಯನ್ನು ಮಾಡಲು ಹತ್ತಿರಬಂದುವು. ಆದರೆ ಆತನು ಆ ಯಾವ ಸಿದ್ಧಿಯನ್ನೂ ಮನಸ್ಸಿನಲ್ಲಿ ಆಶಿಸಲಿಲ್ಲ; ಆದರಿಸಲಿಲ್ಲ; ಅಭಿನಂದಿಸಲಿಲ್ಲ." (ಶ್ಲೋಕ 28-35)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಪಂಚಮಸ್ಕಂಧದ ೫ನೆಯ ಅಧ್ಯಾಯವು ಮುಗಿಯಿತು.

ಪಂಚಮಸ್ಕಂಧ ೬ನೆಯ ಅಧ್ಯಾಯ

ಋಷಭದೇವನ ದೇಹತ್ಯಾಗ

ಯೋಗೀಶ್ವರನಾದ ಋಷಭದೇವನು–ಆಕಾಶಗಮನವೇ ಮುಂತಾದ ಸಿದ್ಧಿಗಳು ತಾವಾಗಿಯೇ ಸೇವೆಗೆ ಬಂದರೂ ಅವುಗಳನ್ನು ಆದರಿಸಲಿಲ್ಲ– ಎಂಬ ಮಾತನ್ನು ಕೇಳಿ ಪರೀಕ್ಷಿದ್ರಾಜನ ಮನಸ್ಸಿನಲ್ಲಿ ಒಂದು ಸಣ್ಣ ಸಂಶಯ ವುಂಟಾಯಿತು. ಅದರ ಪರಿಹಾರಕ್ಕಾಗಿ ಆತನು ಶುಕಮಹರ್ಷಿಗಳನ್ನು ಹೀಗೆ ಪ್ರಶ್ನಿಸಿದನು :

ನ ನೂನಂ ಭಗವ ಆತ್ಮಾರಾಮಾಣಾಂ ಯೋಗಸಮೀರಿತ-ಜ್ಞಾನಾವಭರ್ಜಿತಕರ್ಮಬೀಜಾನಾಮೈಶ್ವರ್ಯಾಣಿ ಪುನಃ ಕ್ಲೇಶದಾನಿ ಭವಿತುಮರ್ಹನ್ತಿ ಯದೃಚ್ಛಯೋಪಗತಾನಿ ||೧||

"ಮುನಿವರ್ಯರೇ! ಅಷ್ಟಾಂಗಯೋಗವೆಂಬ ವಾಯುವಿನಿಂದ ಹುಟ್ಟಿದ ಜ್ಞಾನವೆಂಬ ಅಗ್ನಿಯಲ್ಲಿ ಯಾರ ರಾಗಾದಿ ಕರ್ಮಬೀಜಗಳು ಸುಟ್ಟುಹೋಗಿವೆಯೋ–ಅಂತಹ ಆತ್ಮಾರಾಮರಾದ ಮುನಿವರ್ಯರಿಗೆ ದೈವ ವಶದಿಂದ ಅಣಿಮಾ, ಮಹಿಮಾ ಮುಂತಾದ ಸಿದ್ಧಿಗಳು ತಾವಾಗಿಯೇ ದೊರಕಿದರೂ ಅವು ಅವರಿಗೆ ರಾಗ-ದ್ವೇಷಗಳೇ ಮುಂತಾದ ಕ್ಲೇಶಗಳನ್ನು ಖಂಡಿತವಾಗಿಯೂ ಉಂಟುಮಾಡುವುದಿಲ್ಲ. ಆದರೂ ಭಗವಂತನಾದ ಋಷಭದೇವನು ಆ ಸಿದ್ಧಿಗಳನ್ನು ಏಕೆ ಸ್ವೀಕರಿಸಲಿಲ್ಲ?"

ಶುಕಮಹರ್ಷಿಗಳು ಆತನಿಗೆ ಹೀಗೆ ಉತ್ತರನೀಡಿ ಋಷಭದೇವನ ಮುಂದಿನ ವೃತ್ತಾಂತವನ್ನು ನಿರೂಪಣೆಮಾಡಿದರು : “ನೀನು ಹೇಳಿದ್ದು ಸರಿಯಾಗಿದೆ, ರಾಜೇಂದ್ರ! ಆದರೆ ಚಂಚಲವಾದ ಮನಸ್ಸನ್ನು ಬುದ್ಧಿಶಾಲಿಗಳು ನಂಬುವುದಿಲ್ಲ. ಧೂರ್ತನಾದ ಬೇಡನು–ಮೃಗಗಳು ತನ್ನ ಬಲೆಯಲ್ಲಿ ಬಂದು ಬಿದ್ದು ತನ್ನ ಹಿಡಿತದಲ್ಲಿದ್ದರೂ–ಅವುಗಳ ಮೇಲೆ ಭರವಸೆಯನ್ನಿಡುವುದಿಲ್ಲವಷ್ಟೇ! ಹಾಗೆಯೇ ಬುದ್ಧಿವಂತರಾದವರು ಈ ಚಂಚಲವಾದ ಚಿತ್ತದ ಮೇಲೆ ಭರವಸೆಯನ್ನಿಡುವುದಿಲ್ಲ. ಈ ಪ್ರಸಿದ್ಧವಾದ ಶ್ಲೋಕಗಳು ಇದೇ ಅಭಿಪ್ರಾಯವನ್ನೇ ಸಾರುತ್ತವೆ.

ನ ಕುರ್ಯಾತ್ಕರ್ಹಿಚಿತ್ಸಖ್ಯಂ ಮನಸಿ ಹ್ಯನವಸ್ಥಿತೇ ।
ಯದ್ವಿಶ್ರಮ್ಭಾಚ್ಚಿರಾಚ್ಚೀರ್ಣಂ ಚಸ್ಕನ್ದ ತಪ ಐಶ್ವರಮ್ ॥೩॥

ನಿತ್ಯಂ ದದಾತಿ ಕಾಮಸ್ಯಚ್ಛಿದ್ರಂ ತಮನು ಯೇಽರಯಃ ।
ಯೋಗಿನಃ ಕೃತಮೈತ್ರಸ್ಯ ಪತ್ಯುರ್ಜಾಯೇವ ಪುಂಶ್ಚಲೀ ॥೪॥

ಕಾಮೋ ಮನ್ಯುರ್ಮದೋ ಲೋಭಃ ಶೋಕಮೋಹಭಯಾದಯಃ ।
ಕರ್ಮಬನ್ಧಶ್ಚ ಯನ್ಮೂಲಃ ಸ್ವೀಕುರ್ಯಾತ್ಕೋ ನು ತದ್ಬುಧಃ ॥೫॥

‘ಈ ಚಂಚಲವಾದ ಚಿತ್ತದಲ್ಲಿ ಎಂದಿಗೂ ಸ್ನೇಹ-ನಂಬಿಕೆಗಳನ್ನಿಡಬಾರದು. ಇದರಲ್ಲಿ ನಂಬಿಕೆಯನ್ನಿಟ್ಟಿದ್ದರಿಂದಲೇ ಬಹುಮಂದಿ ಯೋಗೀಶ್ವರರು ತಾವು ಚಿರಕಾಲದಿಂದ ಸಂಪಾದಿಸಿದ್ದ ತಪಸ್ಸನ್ನು ಕಳೆದುಕೊಂಡರು. ಅವರ ತಪಶ್ಶಕ್ತಿಯು ಕ್ಷಯಹೊಂದಿತು.* ವ್ಯಭಿಚಾರಿಣಿಯಾದ ಹೆಂಗಸು–ಜಾರಪುರುಷರಿಗೆ ಅವಕಾಶವನ್ನು ಕೊಟ್ಟು ತನ್ನಲ್ಲಿ ನಂಬಿಕೆಯನ್ನಿಟ್ಟಿರುವ

* ಮೋಹಿನೀವೇಷಧಾರಿಯಾದ ವಿಷ್ಣುವಿನ ರೂಪವನ್ನು ಕಂಡು ಶಿವನಿಗೆ ವೀರ್ಯಸ್ಖಲನವಾಯಿತು. ಆತನ ರೇತಸ್ಸು ಭೂಮಿಯಲ್ಲಿ ಎಲ್ಲೆಲ್ಲಿ ಬಿದ್ದಿತೋ–ಆ ಜಾಗಗಳೆಲ್ಲವೂ ಬೆಳ್ಳಿಯ ಗಣಿಗಳಾದುವು. ಆ ಮಹಾತ್ಮನು ಶೀಘ್ರದಲ್ಲೇ ಸಂಯಮವನ್ನು ತಂದುಕೊಂಡು ಕಶ್ಮಲವನ್ನು ನೀಗಿದನು–ಎಂಬ ಅರ್ಥದ ಕಥೆಯು ಶ್ರೀಮದ್ಭಾಗವತದ ಎಂಟನೇ ಸ್ಕಂಧ ಶ್ಲೋಕ ೩೧-೩೫ರಲ್ಲಿ ಬರುವುದು. ‘ತಸ್ಯಾನುಧಾವತೋರೇತಶ್ಚಸ್ಕನ್ದಾಮೋಘರೇತಸಃ ..... ಸಂನ್ಯವರ್ತತ ಕಶ್ಮಲಾನ್ ’ ಪ್ರಕೃತ ಶ್ಲೋಕವು ಆ ಘಟನೆಯನ್ನೇ ಉದಾಹರಿಸುತ್ತದೆ– ಎಂಬ ಅಭಿಪ್ರಾಯದಿಂದ ಗೋರಖ್‌ಪುರ್ ಸಂಸ್ಕರಣದಲ್ಲಿ ಈ ಮನಸ್ಸಿನಲ್ಲಿ ನಂಬಿಕೆಯನ್ನಿಟ್ಟಿದ್ದರಿಂದಲೇ ಸ್ವಾಮಿ ಮಹಾದೇವನು ಶ್ರೀಭಗವಂತನ ಮೋಹಿನಿಯ ರೂಪದಲ್ಲಿ ಆಸಕ್ತನಾಗಿ

ಪತಿಯನ್ನು ಅವರ ಮೂಲಕ ಹೇಗೆ ಕೊಲ್ಲಿಸುವಳೋ–ಹಾಗೆಯೇ ಯೋಗಿಯು ತನ್ನ ಚಿತ್ತದ ಮೇಲೆ ವಿಶ್ವಾಸವನ್ನಿಟ್ಟರೆ ಆ ಮನಸ್ಸು ಕಾಮಕ್ಕೂ, ಅದರ ಜೊತೆಗಾರರಾದ ಕ್ರೋಧವೇ ಮುಂತಾದುವುಗಳಿಗೂ ಆ ಯೋಗಿಯ ಮೇಲೆ ಆಕ್ರಮಣಮಾಡಲು ಅವಕಾಶವನ್ನು ಒದಗಿಸಿಕೊಟ್ಟು ಆತನನ್ನು ನಷ್ಟ-ಭ್ರಷ್ಟನನ್ನಾಗಿ ಮಾಡಿಬಿಡುವುದು. ಕಾಮ-ಕ್ರೋಧ-ಮದ-ಲೋಭ ಶೋಕ-ಮೋಹ ಮತ್ತು ಭಯಗಳೇ ಮುಂತಾದ ಶತ್ರುಗಳಿಗೂ ಮತ್ತು ಕರ್ಮಗಳ ಕಟ್ಟಿಗೂ ಮೂಲವಾದುದು ಈ ಮನಸ್ಸೇ. ಇದರ ಮೇಲೆ ಯಾವ ಬುದ್ಧಿವಂತನು ತಾನೇ ಭರವಸೆಯನ್ನು ಇಡಲು ಸಾಧ್ಯ?

ಇದೇ ರೀತಿಯಲ್ಲಿ ಶ್ರೀಭಗವಂತನಾದ ಋಷಭದೇವನು ಇಂದ್ರನೇ ಮುಂತಾದ ಸಮಸ್ತಲೋಕಪಾಲಕರಿಗೂ ಕೂಡ ಅಲಂಕಾರವಾಗಿದ್ದರೂ ಮೂರ್ಖಮನುಷ್ಯನಂತೆ ಅವಧೂತರಿಗೆ ಸರಿಹೋಲುವ ಬಗೆ-ಬಗೆಯ ವೇಷ-ಭಾಷೆ ಮತ್ತು ಆಚರಣೆಗಳಿಂದ ತನ್ನ ದಿವ್ಯಪ್ರಭಾವವನ್ನು ಮರೆಮಾಚಿ ಕೊಂಡಿದ್ದನು. ಕೊನೆಗೆ ಆತನು ಯೋಗಿಗಳಿಗೆ ದೇಹತ್ಯಾಗದ ವಿಧಿಯನ್ನು ಕಲಿಸುವುದಕ್ಕಾಗಿ ತನ್ನ ಶರೀರವನ್ನು ತ್ಯಜಿಸಲು ಬಯಸಿದನು. ತನ್ನ ಅಂತಕರಣದಲ್ಲಿ ಅಭೇದರೂಪದಲ್ಲಿ ನೆಲೆಗೊಂಡಿರುವ ಪರಮಾತ್ಮನನ್ನು ಅಭಿನ್ನರೂಪದಿಂದ ನೋಡುತ್ತಾ ವಾಸನೆಗಳ ಅನುವೃತ್ತಿಯನ್ನು ಬಿಟ್ಟು ಲಿಂಗದೇಹದ ಅಭಿಮಾನವನ್ನು ಪೂರ್ಣವಾಗಿ ತೊರೆದಿದ್ದನು. ಆದರೂ ಯಾವುದೋ ಯೋಗಮಾಯೆಯ ವಾಸನೆಯಿಂದ ಉಂಟಾದ ಅಭಿಮಾನದ

ಚಿರಕಾಲದಿಂದ ಸಂಪಾದಿಸಿದ್ದ ತನ್ನ ತಪಸ್ಸನ್ನು ಕ್ಷೀಣಿಸಿಕೊಂಡನು–ಎಂಬ ಅನುವಾದ ಮಾಡಿರುತ್ತಾರೆ.

ಶ್ರೀಧರೀಯದಲ್ಲಿಯೂ ಈ ಅಭಿಪ್ರಾಯವಿದೆ. 'ವಿಷ್ಣೋರ್ಮೋಹಿನೀರೂಪದರ್ಶನೇನ ಈಶ್ವರಸ್ಯ ಬಹುಕಾಲಸಂಚಿತಂ ತಪಃ ಸುಸ್ರಾವ' ಇದಲ್ಲದೇ ಸೌಭರಿಯೇ ಮುಂತಾದವರು ಸಮರ್ಥರಾಗಿದ್ದರೂ ಅವರ ತಪಸ್ಸು ಕ್ಷಯಹೊಂದಿತು–ಎಂಬ ಪರ್ಯಾಯದ ಅರ್ಥವನ್ನು ಕೊಟ್ಟಿದೆ.

ವೀರರಾಘವೀಯದಂತೆ : ಈ ಮನಸ್ಸಿನ ಮೇಲೆ ನಂಬಿಕೆಯನ್ನಿಟ್ಟರೆ 'ಐಶ್ವರಂ ತಪಃ' ಎಂದರೆ : ನಾರಾಯಣನನ್ನು ಕುರಿತ ಉಪಾಸನೆಯು ಕ್ಷಯಹೊಂದುತ್ತದೆ ಎಂದು ಅನುವಾದವಾಗುತ್ತದೆ. ನಾವು ಈ ಶ್ಲೋಕವು ಎಲ್ಲ ಯೋಗಿಗಳಿಗೂ ಅನ್ವಯಿಸುವಂತೆ ಭಾಷಾಂತರಿಸಿದ್ದೇವೆ. (ಶ್ಲೋಕ ೩)

ಆಭಾಸದಿಂದ ಪ್ರೇರಿತವಾಗಿ ಆತನ ದೇಹವು ಭೂಮಿಯಲ್ಲಿ ಸಂಚರಿಸುತ್ತಿತ್ತು.* ಅಂತಹ ಸ್ಥಿತಿಯಲ್ಲಿ ಆತನು ಭೂಮಂಡಲದಲ್ಲಿ ಸುತ್ತುತ್ತಾ ದೈವವಶದಿಂದ ಕೊಂಕ, ವೆಂಕ, ಕುಟಕಗಳೆಂಬ ದಕ್ಷಿಣಕನ್ನಡದೇಶಗಳಿಗೆ ಹೋಗಿ ಕುಟಕಗಿರಿಯ ಉಪವನದಲ್ಲಿ ಬಾಯಿಗೆ ಕಲ್ಲುಗಳನ್ನು ಹಾಕಿಕೊಂಡು ಅವುಗಳನ್ನು ಮೆಲ್ಲುತ್ತಾ ಕೂದಲನ್ನು ಕೆದರಿಕೊಂಡು ಹುಚ್ಚನಂತೆ ದಿಗಂಬರನಾಗಿ ತಿರುಗಾಡತೊಡಗಿದನು. ಅದೇ ಸಮಯದಲ್ಲಿ ಬಿರುಗಾಳಿಯೊಂದು ಭರ್ರನೆ ಬೀಸಿ ಬಿದಿರುಮೆಳೆಗಳ ತಿಕ್ಕಾಟದಿಂದ ಹುಟ್ಟಿದ ಕಾಡುಗಿಚ್ಚು ಭುಗಿಲೆದ್ದು ಕೆಂಪು ಬಣ್ಣದ ಜ್ವಾಲೆಗಳಿಂದ ಇಡೀ ಅರಣ್ಯವನ್ನೂ ಮತ್ತು ಅಲ್ಲಿ ಸಂಚರಿಸುತ್ತಿದ್ದ ಋಷಭದೇವನ ಪವಿತ್ರವಾದ ದೇಹವನ್ನೂ ಕಬಳಿಸಿ ಭಸ್ಮ ಮಾಡಿಬಿಟ್ಟಿತು.

(ಶ್ಲೋಕ 6-8)

ಎಲೈ ರಾಜನೇ! ಕಲಿಯುಗದಲ್ಲಿ ಅಧರ್ಮವು ವೃದ್ಧಿಹೊಂದುತ್ತಿರುವಾಗ ಕೊಂಕ, ವೆಂಕ ಮತ್ತು ಕುಟಕದೇಶಗಳಿಗೆ ಅಧಿಪತಿಯಾದ ಮಂದಮತಿಯಾದ ಒಬ್ಬ ರಾಜನು–ಶ್ರೀಋಷಭದೇವನ, ಆಶ್ರಮಧರ್ಮಗಳನ್ನು ಮೀರಿದ ಆಚರಣೆಯ ವೃತ್ತಾಂತವನ್ನು ಕೇಳಿ, ತಾನು ಅದಕ್ಕೆ ಅಧಿಕಾರಿಯಾಗಿಲ್ಲದಿದ್ದರೂ ಅದನ್ನು ಅನುಕರಿಸುತ್ತಾ ನಿರ್ಭಯನಾಗಿ ಸ್ವಧರ್ಮವನ್ನು ಬಿಟ್ಟು ಪಾಷಂಡಧರ್ಮದ ಮಾರ್ಗವನ್ನು ಪ್ರಚಾರಮಾಡುವನು. ಅದರಿಂದ ಪ್ರಭಾವಿತರಾಗಿ ದೇವಮಾಯೆಯಿಂದ ಮರುಳುಗೊಂಡ ಅನೇಕಮನುಷ್ಯರು ಶಾಸ್ತ್ರವಿಹಿತವಾದ ತಮ್ಮ ಶೌಚ-ಆಚಾರಗಳನ್ನು ಬಿಟ್ಟುಬಿಡುವರು. ವೇದವನ್ನೂ, ಬ್ರಾಹ್ಮಣರನ್ನೂ, ಯಜ್ಞಪುರುಷನನ್ನೂ ನಿಂದಿಸತೊಡಗುವರು. ಹಾಗೂ ವೇದವಿರುದ್ಧವಾದ ಅಂಧಪರಂಪರೆಯಿಂದ ಪ್ರೋತ್ಸಾಹಿತರಾಗಿ ಅದರಲ್ಲಿಯೇ ವಿಶ್ವಾಸವನ್ನಿಟ್ಟು ಸ್ವೇಚ್ಛೆಯಿಂದ ವರ್ತಿಸುತ್ತಾ ತಾವಾಗಿಯೇ ಅಂಧತಮಸ್ಸಿನಲ್ಲಿ ಬೀಳುತ್ತಾರೆ. ಅದು ಪತನಕ್ಕೆ ಕಾರಣವಾಗುವುದು. ಶ್ರೀಭಗವಂತನು ರಜೋಗುಣದಿಂದ ತುಂಬಿರುವ ಜನರಿಗೆ ಮೋಕ್ಷಮಾರ್ಗದ

---

* ದೇಹಾಭಿಮಾನವು ನಿಂತುಹೋದರೂ ಅಭಿಮಾನದ ಆಭಾಸದಿಂದ ದೇಹವು ಕೊಂಚಕಾಲ ವ್ಯಾಪಾರಮಾಡುವುದುಂಟು. ಇದಕ್ಕೆ ಉದಾಹರಣೆ : ಕುಂಬಾರನು ಚಕ್ರವನ್ನು ತಿರುಗಿಸುವುದು ನಿಲ್ಲಿಸಿಬಿಟ್ಟರೂ ಹಿಂದಿನ ಭ್ರಮಣದ ವೇಗವು ಮುಗಿಯುವವರೆಗೂ ಹಳೆಯ ಸಂಸ್ಕಾರದಿಂದ ಆ ಚಕ್ರವು ಕೊಂಚಕಾಲ ತಿರುಗುತ್ತಿರುವುದು. (ಶ್ಲೋಕ ೭)

ಶಿಕ್ಷಣವನ್ನು ಕೊಡಲು ಈ ಋಷಭಾವತಾರವನ್ನು ಮಾಡಿದನು. ಈ ಅವತಾರದ ದಿವ್ಯಗುಣಗಳನ್ನು ವರ್ಣಿಸುವ ಈ ಶ್ಲೋಕಗಳನ್ನು ವಿದ್ವಾಂಸರು ಹಾಡುತ್ತಾ ಬಂದಿದ್ದಾರೆ. (ಶ್ಲೋಕ 9-12)

ಅಹೋ ಭುವಃ ಸಪ್ತಸಮುದ್ರವತ್ಯಾ
ದ್ವೀಪೇಷು ವರ್ಷೇಷ್ವಧಿಪುಣ್ಯಮೇತತ್ ।
ಗಾಯನ್ತಿ ಯತ್ರತ್ಯಜನಾ ಮುರಾರೇಃ
ಕರ್ಮಾಣಿ ಭದ್ರಾಣ್ಯವತಾರವನ್ತಿ ॥೧೩॥

ಆಹಾ! ಏಳು ಸಮುದ್ರಗಳಿಂದ ಕೂಡಿರುವ ಈ ಭೂಮಿಯ ಸಮಸ್ತ ದ್ವೀಪಗಳಲ್ಲಿಯೂ ವರ್ಷಗಳಲ್ಲಿಯೂ ಈ ಭಾರತವರ್ಷವು ಎಂತಹ ಪುಣ್ಯ ತಮವಾದ ಭೂಮಿಯಾಗಿದೆ! ಇಲ್ಲಿಯ ಜನರು ಶ್ರೀಹರಿಯ ಋಷಭಾವ ತಾರದ ಚರಿತ್ರೆಗಳನ್ನು ಗಾನಮಾಡುತ್ತಿರುವರು.

ಅಹೋ ನು ವಂಶೋ ಯಶಸಾವದಾತಃ
ಪ್ರೈಯವ್ರತೋ ಯತ್ರ ಪುಮಾನ್ಪುರಾಣಃ ।
ಕೃತಾವತಾರಃ ಪುರುಷಃ ಆದ್ಯಃ
ಚಚಾರ ಧರ್ಮಂ ಯದಕರ್ಮಹೇತುಮ್ ॥೧೪॥

ಅದರಲ್ಲಿಯೂ ಪ್ರಿಯವ್ರತಮಹಾರಾಜನ ವಂಶವು ಶುಭ್ರವಾದ ಕೀರ್ತಿಯಿಂದ ಕೂಡಿ ಅತ್ಯಂತಪವಿತ್ರವಾಗಿದೆ. ಅದರಲ್ಲಿಯೇ ಪುರಾಣ ಪುರುಷನಾದ ಆದಿನಾರಾಯಣನು ಋಷಭನೆಂಬ ಹೆಸರಿನಿಂದ ಅವತಾರ ಮಾಡಿ ಮೋಕ್ಷಕ್ಕೆ ಸಾಧನವಾದ ಪರಮಹಂಸಧರ್ಮವನ್ನು ಆಚರಣೆಮಾಡಿ ದನು.

ಕೋ ನ್ವಸ್ಯ ಕಾಷ್ಠಾಮಪರೋಽನುಗಚ್ಛೇ-
ನ್ಮನೋರಥೇನಾಪ್ಯಭವಸ್ಯ ಯೋಗೀ ।
ಯೋ ಯೋಗಮಾಯಾಃ ಸ್ಪೃಹಯತ್ಯುದಸ್ತಾ
ಹ್ಯಸತ್ತಯಾ ಯೇನ ಕೃತಪ್ರಯತ್ನಾಃ ॥೧೫॥

ಮಹಾಮಹಿಮನಾದ, ಜನ್ಮರಹಿತನಾದ ಋಷಭದೇವನ ಅಸಾಧಾರಣವಾದ ನಡವಳಿಕೆಯನ್ನು ಇತರ ಯೋಗಿಗಳು ಮನಸ್ಸಿನಿಂದಲೂ ಮುಟ್ಟಲಾರರು. ಏಕೆಂದರೆ : ಯೋಗಿಗಳು–ಯಾವ ಯೋಗಸಿದ್ಧಿಗಳಿಗಾಗಿ ಆಸೆಪಡುತ್ತಾ ನಿರಂತರವಾಗಿ ಪ್ರಯತ್ನಮಾಡುವರೋ–ಆ ಸಿದ್ಧಿಗಳೆಲ್ಲವೂ

ತಾವಾಗಿಯೇ ಸೇವಿಸಲು ಬಂದರೂ ಆ ಮಹಾತ್ಮನು ಅವುಗಳನ್ನು ಅಸತ್ತೆಂದು ಭಾವಿಸಿ ನಿರಾಕರಿಸಿಬಿಟ್ಟನು.

ಭರತಸತ್ತಮನೇ! ಹೀಗೆ ನಾನು ನಿನಗೆ ಸಮಸ್ತವೇದಗಳು, ಲೋಕಗಳು, ದೇವತೆಗಳು, ಬ್ರಾಹ್ಮಣರು ಮತ್ತು ಗೋವುಗಳು–ಇವರೆಲ್ಲರಿಗೂ ಪರಮಗುರುವಾದ ಶ್ರೀಭಗವಂತನಾದ ಋಷಭದೇವನ ಪರಿಶುದ್ಧವಾದ ಚರಿತ್ರೆಯನ್ನು ವರ್ಣಿಸಿರುವೆನು. ಇದು ಮನುಷ್ಯರ ಸಮಸ್ತಪಾಪಗಳನ್ನೂ ಕಳೆಯುವ ಚರಿತ್ರೆಯು. ಪರಮಮಂಗಳಕರವಾದ ಈ ಪವಿತ್ರಚರಿತ್ರೆಯನ್ನು ಏಕಾಗ್ರವಾದ ಚಿತ್ತದಿಂದ ಶ್ರದ್ಧಾಪೂರ್ವಕವಾಗಿ ನಿರಂತರವಾಗಿ ಕೇಳುವ ಮನುಷ್ಯರಿಗೂ ಶ್ರೀಭಗವಂತನಾದ ವಾಸುದೇವನಲ್ಲಿ ಅನನ್ಯವಾದ ಭಕ್ತಿಯುಂಟಾಗುವುದು. ವಿವೇಕಿಗಳು ಬಗೆ-ಬಗೆಯ ಪಾಪಗಳಿಂದ ತುಂಬಿರುವ ಸಾಂಸಾರಿಕತಾಪಗಳಿಂದ ಬೆಂದು-ನೊಂದಿರುವ ತಮ್ಮ ಅಂತಃಕರಣವನ್ನು ಈ ಭಕ್ತಿರಸವಾಹಿನಿಯಲ್ಲಿಯೇ ನಿರಂತರವಾಗಿ ಮೀಯಿಸುವರು. ಅದರಿಂದ ಅವರಿಗೆ ದೊರೆಯುವ ಪರಮಶಾಂತಿಯು ವರ್ಣನಾತೀತವಾದುದು. ಅದು ಎಷ್ಟು ಆನಂದಮಯವಾಗಿರುತ್ತದೆಯೆಂದರೆ–ಅದನ್ನು ಪಡೆದ ಸುಕೃತಿಗಳು ತಾನಾಗಿಯೇ ಒದಗಿಬರುವ ಮೋಕ್ಷವೆಂಬ ಪುರುಷಾರ್ಥವನ್ನು ಕೂಡ ಆದರಿಸುವುದಿಲ್ಲ. ಶ್ರೀಭಗವಂತನಿಗೆ ಸ್ವಕೀಯರಾಗಿದ್ದರಿಂದಲೇ ಅವರ ಸಮಸ್ತಪುರುಷಾರ್ಥಗಳೂ ಈಡೇರುತ್ತವೆ. ಶ್ರೀಕೃಷ್ಣಪರಮಾತ್ಮನಿಗೆ ನೀವೂ ಮತ್ತು ಯದುವಂಶಿಗಳೂ ಅಂತಹ ಸ್ವಜನರಾಗಿದ್ದೀರಿ. (ಶ್ಲೋಕ 16-17)

ರಾಜನ್ಪತಿರ್ಗುರುರಲಂ ಭವತಾಂ ಯದೂನಾಂ
ದೈವಂ ಪ್ರಿಯಃ ಕುಲಪತಿಃ ಕ್ವ ಚ ಕಿಙ್ಕರೋ ವಃ ।
ಅಸ್ತ್ವೇವಮಙ್ಗ ಭಗವಾನ್ಭಜತಾಂ ಮುಕುನ್ದೋ
ಮುಕ್ತಿಂ ದದಾತಿ ಕರ್ಹಿಚಿತ್ಸ್ಮ ನ ಭಕ್ತಿಯೋಗಮ್ ॥

ಆ ಭಗವಂತನು ನಿಮಗೆ ಪಾಲಕನೂ, ಗುರುವೂ, ಇಷ್ಟದೈವವೂ, ಪ್ರೀತಿಯ ಗೆಳೆಯನೂ ಮತ್ತು ಕುಲಪತಿಯೂ ಆಗಿದ್ದನು. ಇಷ್ಟು ಮಾತ್ರವಲ್ಲದೇ ಕೆಲವೊಮ್ಮೆ ನಿಮ್ಮ ಆಜ್ಞೆಯನ್ನು ನಿರ್ವಹಿಸುವ ಸೇವಕನೂ ಆಗಿದ್ದನಲ್ಲವೇ? ಹೀಗೆಯೇ ಶ್ರೀಭಗವಂತನು ತನ್ನನ್ನು ಭಜಿಸುವ ಇತರ ಭಕ್ತರಿಗೂ ಈ ಉಪಕಾರಗಳನ್ನಲ್ಲದೇ ಮುಕ್ತಿಯನ್ನೂ ದಯಪಾಲಿಸುವನು. ಆದರೆ

ಅದಕ್ಕೂ ಅತಿಶಯವಾಗಿರುವ ಭಕ್ತಿಯೋಗವನ್ನು ಮಾತ್ರ ಸುಲಭವಾಗಿ ಕೊಡುವುದಿಲ್ಲ.

ನಿತ್ಯಾನುಭೂತನಿಜಲಾಭನಿವೃತ್ತತೃಷ್ಣಃ
ಶ್ರೇಯಸ್ಯತದ್ರಚನಯಾ ಚಿರಸುಪ್ತಬುದ್ಧೇಃ ।
ಲೋಕಸ್ಯ ಯಃ ಕರುಣಯಾಭಯಮಾತ್ಮಲೋಕ-
ಮಾಖ್ಯಾನ್ನಮೋ ಭಗವತೇ ಋಷಭಾಯ ತಸ್ಮೈ ॥೧೯॥

ನಿರಂತರವಾಗಿ ಆತ್ಮಾನುಭವದಲ್ಲಿ ಮುಳುಗಿದವನಾಗಿ ಅಸಂತೃಪ್ತಿಯಿಂದ ಉಳಿದ ಎಲ್ಲ ಕಾಮನೆಗಳನ್ನೂ ಕಳೆದುಕೊಂಡವನಾಗಿದ್ದ ಯಾವ ಕೃತಕೃತ್ಯನಾದ ಮಹಾಪುರುಷನು ನಿರಂತರವಾಗಿ ವಿಷಯಭೋಗಗಳಲ್ಲಿ ಮುಳುಗಿ ತಮ್ಮ ವಾಸ್ತವಿಕವಾದ ಶ್ರೇಯಸ್ಸನ್ನು ಮರೆತು ನಿದ್ರಿಸುತ್ತಿದ್ದ ಜನರಲ್ಲಿ ದಯೆತೋರಿ ಅವರಿಗೆ ನಿರ್ಭಯವಾದ ಆತ್ಮಸ್ವರೂಪವನ್ನು ಉಪದೇಶಮಾಡಿದನೋ–ಆ ಭಗವಂತನಾದ ಋಷಭದೇವನಿಗೆ ನಮಸ್ಕಾರವು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಪಂಚಮಸ್ಕಂಧದ ೬ನೆಯ ಅಧ್ಯಾಯವು ಮುಗಿಯಿತು.

ಪಂಚಮಸ್ಕಂಧ ೭ನೆಯ ಅಧ್ಯಾಯ

ಭರತೋಪಾಖ್ಯಾನ

ಶ್ರೀಶುಕಮುನಿಗಳು ಪರೀಕ್ಷಿದ್ರಾಜನಿಗೆ ಹೇಳುತ್ತಾರೆ :

“ಅಯ್ಯಾ ರಾಜೇಂದ್ರನೇ! ಋಷಭದೇವನ ಚರಿತ್ರೆಯನ್ನು ಇಲ್ಲಿಯವರೆಗೂ ವರ್ಣಿಸಿದೆನು. ಇನ್ನು ಆತನ ಪುತ್ರನಾದ ಮಹಾತ್ಮನಾದ ಭರತನ ಉಪಾಖ್ಯಾನವನ್ನು ಹೇಳುತ್ತೇನೆ ; ಕೇಳು :

ಭರತಸ್ತು ಮಹಾಭಾಗವತೋ ಯದಾ ಭಗವತಾವನಿತಲಪರಿಪಾಲನಾಯ ಸಂಚಿನ್ತಿತಸ್ತದನುಶಾಸನಪರಃ ಪಞ್ಚಜನೀಂ ವಿಶ್ವರೂಪದುಹಿತರಮುಪಯೇಮೇ ॥೧॥

ಮಹಾಭಾಗವತೋತ್ತಮನಾದ ಭರತನಿಗೆ ಭಗವಂತನಾದ ಋಷಭದೇವನಿಂದ ಭೂಮಂಡಲವನ್ನು ಪಾಲಿಸಬೇಕೆಂಬ ಆಜ್ಞೆಯು ಬರಲು ಆತನು

ಅದನ್ನು ಶಿರಸಾವಹಿಸಿ ವಿಶ್ವರೂಪನ ಪುತ್ರಿಯಾದ ಪಂಚಜನೀ ಎಂಬುವಳನ್ನು ಮದುವೆಮಾಡಿಕೊಂಡನು.

ತಾಮಸಾಹಂಕಾರವು ಶಬ್ದವೇ ಮುಂತಾದ ಐದು ತನ್ಮಾತ್ರೆಗಳನ್ನು ಪಡೆಯುವಂತೆ–ಆ ಮಹಾತ್ಮನು ಪಂಚಜನಿಯಲ್ಲಿ ಸಂಪೂರ್ಣವಾಗಿ ತನಗೆ ಸಮಾನರಾಗಿದ್ದ ಸುಮತಿ, ರಾಷ್ಟ್ರಭೃತ್, ಸುದರ್ಶನ, ಆವರಣ ಮತ್ತು ಧೂಮ್ರಕೇತು–ಎಂಬ ಐವರು ಪುತ್ರರನ್ನು ಪಡೆದನು. ಅಜನಾಭವೆಂದು ಕರೆಯಲ್ಪಡುತ್ತಿದ್ದ ಈ ವರ್ಷಕ್ಕೆ ಭರತಚಕ್ರವರ್ತಿಯ ಕಾಲದಿಂದಾರಂಭಿಸಿ ಆತನ ಸಂಬಂಧದಿಂದಾಗಿ 'ಭರತವರ್ಷ' ಎಂದು ಹೆಸರಾಯಿತು. ಮಹಾ ಪ್ರಾಜ್ಞನಾದ ಆ ಭರತಸಾರ್ವಭೌಮನು ತಮ್ಮ ತಮ್ಮ ಕರ್ಮಗಳ ಆಚರಣೆ ಯಲ್ಲಿ ತೊಡಗಿದ್ದ ಪ್ರಜೆಗಳನ್ನು–ತನ್ನ ತಂದೆ, ತಾತಂದಿರಂತೆ ತಾನೂ ಸ್ವಧರ್ಮಾಚರಣೆಯಲ್ಲಿ ನಿರತನಾಗಿದ್ದು, ಅತ್ಯಂತವಾತ್ಸಲ್ಯದಿಂದ ಪಾಲನೆ ಮಾಡುತ್ತಿದ್ದನು. ಆತನು ಹೋತಾ, ಅಧ್ವರ್ಯು, ಉದ್ಗಾತಾ ಮತ್ತು ಬ್ರಹ್ಮ–ಎಂಬ ನಾಲ್ವರು ಋತ್ವಿಜರಿಂದ ನಡೆಸಲ್ಪಡಬೇಕಾದ ಚಾತು ರ್ಹೋತ್ರವೆಂಬ ಕರ್ಮವಿಧಿಯಂತೆ ಅಗ್ನಿಹೋತ್ರ, ದರ್ಶ, ಪೂರ್ಣಮಾಸ, ಚಾತುರ್ಮಾಸ್ಯ, ಪಶು ಮತ್ತು ಸೋಮಗಳೆಂಬ ಯಜ್ಞಗಳನ್ನು ಅವುಗಳ ಪ್ರಕೃತಿ ಮತ್ತು ವಿಕೃತಿ* ಎಂಬ ಎರಡು ಪ್ರಕಾರಗಳಲ್ಲಿಯೂ ಆಯಾ ಕಾಲಗಳಲ್ಲಿ ಶ್ರದ್ಧಾಪೂರ್ವಕವಾಗಿ ಆಚರಿಸಿ ಯಜ್ಞರೂಪನಾದ ಶ್ರೀಭಗವಂತನನ್ನು ಆರಾಧಿಸಿದನು. ಈ ರೀತಿಯಲ್ಲಿ ಅಂಗಗಳು ಮತ್ತು ಕ್ರಿಯೆಗಳಿಂದ ಕೂಡಿದ ಬೇರೆ ಬೇರೆ ಯಜ್ಞಗಳನ್ನು ಅನುಷ್ಠಾನಮಾಡುವಾಗ ಅಧ್ವರ್ಯುವು ಆಹುತಿಯನ್ನು ಸಮರ್ಪಿಸುವುದಕ್ಕಾಗಿ ಹವಿಸ್ಸನ್ನು ಕೈಯಲ್ಲಿ ಎತ್ತಿಕೊಂಡೊಡ ನೆಯೇ ಭರತನು ಆ ಯಜ್ಞದಿಂದ ಒದಗುವ ಪುಣ್ಯಫಲಗಳನ್ನು ಯಜ್ಞ ಪುರುಷನಾದ, ಭಗವಂತನಾದ ಶ್ರೀವಾಸುದೇವನಿಗೇ ಸಮರ್ಪಣೆಮಾಡಿ ಬಿಡುತ್ತಿದ್ದನು. 'ಯಜ್ಞದಲ್ಲಿ ಬರುವ ಇಂದ್ರನೇ ಮುಂತಾದ ದೇವತೆ

---

* ಅಗ್ನಿಹೋತ್ರಾದಿ ಯಜ್ಞಗಳಲ್ಲಿ ಪ್ರಕೃತಿ ಮತ್ತು ವಿಕೃತಿ ಎಂದು ಎರಡು ಪ್ರಕಾರ ಗಳುಂಟು. ಸಂಪೂರ್ಣವಾದ ಅಂಗಗಳಿಂದ ಕೂಡಿದ ಕ್ರತುಗಳಿಗೆ 'ಪ್ರಕೃತಿ' ಎಂದೂ, ಎಲ್ಲ ಅಂಗಗಳೂ ಪೂರ್ಣವಾಗಿಲ್ಲದೇ ಯಾವುದಾದರೂ ಅಂಗದ ಕೊರತೆ ಇರುವ ಕ್ರತುಗಳನ್ನು 'ವಿಕೃತಿ' ಎಂದೂ ಕರೆಯುತ್ತಾರೆ. (ಶ್ಲೋಕ ೫)

ಗಳೆಲ್ಲರಿಗೂ ಆ ಪರಮಾತ್ಮನೇ ಪ್ರಕಾಶಕನು. ಯಜ್ಞದ ಮಂತ್ರಗಳಿಂದ ವಾಸ್ತವವಾಗಿ ಪ್ರತಿಪಾದಿಸಲ್ಪಡುವವನೂ ಆತನೇ. ಆ ದೇವತೆಗಳಿಗೆಲ್ಲಾ ಅಂತರ್ಯಾಮಿಯಾಗಿ, ನಿಯಾಮಕನಾಗಿರುವುದರಿಂದ ಮುಖ್ಯಕರ್ತೃವೂ, ಪ್ರಧಾನದೇವನೂ ಆತನೇ'–ಎಂದು ಭಾವಿಸುತ್ತಿದ್ದನು. ಹೀಗೆ ತಾನು ಮಾಡಿದ ಯಜ್ಞಗಳನ್ನು ಭಗವದರ್ಪಣಮಾಡುವಿಕೆಯೆಂಬ ಕುಶಲತೆಯಿಂದ ಕೂಡಿ, ಹೃದಯದ ರಾಗ-ದ್ವೇಷಾದಿ ಕಶ್ಮಲಗಳನ್ನು ತೊಳೆದುಕೊಂಡು, ಅವನು ಯಜ್ಞಭೋಕ್ತೃಗಳಾದ ಸೂರ್ಯನೇ ಮುಂತಾದ ದೇವತೆಗಳನ್ನು ಶ್ರೀಭಗವಂತನ ನೇತ್ರವೇ ಮುಂತಾದ ಅವಯವಗಳಲ್ಲಿ ಧ್ಯಾನಮಾಡು ತ್ತಿದ್ದನು. ಈ ರೀತಿಯ ಕರ್ಮಶುದ್ಧಿಯಿಂದ ಆತನ ಅಂತಃಕರಣವು ಪರಿಶುದ್ಧ ವಾಯಿತು. ಆಗ ಆತನಿಗೆ–ಶ್ರೀವತ್ಸ, ಕೌಸ್ತುಭ, ವನಮಾಲೆ, ಚಕ್ರ, ಶಂಖ ಮತ್ತು ಗದೆಗಳೇ ಮುಂತಾದ ದಿವ್ಯಾಭರಣಗಳು ಮತ್ತು ದಿವ್ಯಾಯುಧ ಗಳಿಂದ ಶೋಭಿಸುತ್ತಾ ನಾರದರೇ ಮುಂತಾದ ತನ್ನ ಭಕ್ತರ ಹೃದಯಗಳಲ್ಲಿ ಚಿತ್ರದಂತೆ ನಿಶ್ಚಲನಾಗಿ ನೆಲೆಸಿರುವವನಾಗಿ, ಅಂತರ್ಯಾಮಿರೂಪದಲ್ಲಿ ಬೆಳಗುತ್ತಾ ಹೃದಯಾಕಾಶದಲ್ಲಿಯೇ ಕಾಣಿಸಿಕೊಳ್ಳುವ ಬ್ರಹ್ಮಸ್ವರೂಪನೂ, ಮಹಾಪುರುಷಲಕ್ಷಣಸಂಪನ್ನನೂ ಆಗಿರುವ ಭಗವಂತನಾದ ಶ್ರೀವಾಸುದೇವ ನಲ್ಲಿ ದಿನ-ದಿನವೂ ವೇಗದಿಂದ ವೃದ್ಧಿಹೊಂದುವ ಶ್ರೇಷ್ಠವಾದ ಭಕ್ತಿಯು ಉಂಟಾಯಿತು. (ಶ್ಲೋಕ 2-7)

ಈ ರೀತಿಯಲ್ಲಿ ಒಂದು ಕೋಟಿ ವರ್ಷಗಳು ಕಳೆಯಲು, ಆತನಿಗೆ ರಾಜಭೋಗದ ಪ್ರಾರಬ್ಧಕರ್ಮವು ಕ್ಷೀಣಿಸಿಹೋಯಿತು–ಎಂಬ ತಿಳಿವಳಿಕೆ ಯುಂಟಾಗಿ ಆತನು ತಾನು ಭೋಗಿಸಿದ ವಂಶಪರಂಪರಾಗತವಾದ ತನ್ನ ಸಂಪತ್ತನ್ನು ಯಥೋಚಿತವಾಗಿ ತನ್ನ ಪುತ್ರರಿಗೆ ಹಂಚಿಕೊಟ್ಟುಬಿಟ್ಟನು. ಅನಂತರ ಸರ್ವಸಂಪತ್ತುಗಳಿಂದಲೂ ತುಂಬಿದ ತನ್ನ ಅರಮನೆಯನ್ನೂ ಬಿಟ್ಟು ಹೊರಬಂದು ಪುಲಹಾಶ್ರಮಕ್ಕೆ ಹೊರಟುಹೋದನು. ಆ ಪುಲಹಾ ಶ್ರಮವು ಶ್ರೀಭಗವಂತನ ಅನುಗ್ರಹಶಕ್ತಿಗೆ ಪಾತ್ರವಾದುದು. ಅಲ್ಲಿ ವಾಸ ಮಾಡುವ ಭಕ್ತರ ಮೇಲೆ ಶ್ರೀಭಗವಂತನಿಗೆ ಅದ್ಭುತವಾದ ವಾತ್ಸಲ್ಯವಿದೆ. ಆತನು ಇಂದಿಗೂ ಕೂಡ ಅವರಿಗೆ ಇಷ್ಟದೇವತೆಯ ರೂಪದಲ್ಲಿ ದೊರೆಯು ತ್ತಾನೆ. ಅಲ್ಲಿ ಚಕ್ರನದೀ (ಗಂಡಕೀ) ಎಂಬ ಪ್ರಸಿದ್ಧವಾದ ನದಿಯು ಮೇಲೆ

ಮತ್ತು ಕೆಳಗೆ ಎರಡೂ ಕಡೆಗಳಲ್ಲಿಯೂ ನಾಭಿಯಂತಹ ಗುರುತುಗಳನ್ನು ಹೊಂದಿರುವ ಚಕ್ರಾಕಾರವಾದ ಶಾಲಗ್ರಾಮಶಿಲೆಗಳೊಡನೆ ಎಲ್ಲ ಕಡೆಗಳಿಂದಲೂ ಋಷಿಗಳ ಆಶ್ರಮಗಳನ್ನು ಪವಿತ್ರಗೊಳಿಸುತ್ತಿದೆ.

(ಶ್ಲೋಕ 8-10)

ಆ ಪುಲಹಾಶ್ರಮದ ಉಪವನದಲ್ಲಿ ಭರತನು ಏಕಾಂತವಾದ ಜಾಗದಲ್ಲಿ ಒಬ್ಬಂಟಿಗನಾಗಿದ್ದು ಅನೇಕಪ್ರಕಾರವಾದ ಪತ್ರ, ಪುಷ್ಪ, ತುಲಸೀದಳ, ಜಲ ಮತ್ತು ಗೆಡ್ಡೆ-ಗೆಣಸುಗಳೇ ಮುಂತಾದ ನೈವೇದ್ಯಗಳಿಂದ ಶ್ರೀಭಗವಂತನನ್ನು ಆರಾಧಿಸುತ್ತಿದ್ದನು. ಅದರಿಂದ ಅವನ ಅಂತಃಕರಣವು ಎಲ್ಲ ವಿಷಯಾಭಿಲಾಷೆಗಳನ್ನೂ ಕಳೆದುಕೊಂಡು ಪ್ರಶಾಂತವಾಯಿತು ಮತ್ತು ಆತನಿಗೆ ಪರಮಾನಂದವುಂಟಾಯಿತು. ಈ ರೀತಿಯಲ್ಲಿ ಆ ಭರತನು ನಿಯಮಪೂರ್ವಕವಾಗಿ ಶ್ರೀಭಗವಂತನ ಕೈಂಕರ್ಯವನ್ನು ಮಾಡತೊಡಗಲು ಆತನ ಪ್ರೇಮದ ವೇಗವು ಹೆಚ್ಚುತ್ತಾ ಹೃದಯವು ಕರಗಿ ಶಾಂತವಾಯಿತು. ಆನಂದದ ಪ್ರಬಲವಾದ ವೇಗದಿಂದ ದೇಹದಲ್ಲಿ ರೋಮಾಂಚನವುಂಟಾಯಿತು. ಅತ್ಯಂತ ಕುತೂಹಲದಿಂದ ಆನಂದಬಾಷ್ಪಗಳು ಹರಿದು ಬಂದ ಕಣ್ಣಳ ನೋಟವು ಮಂದವಾಯಿತು. ಕಡೆಗೆ ತನ್ನ ಪ್ರಿಯತಮನ ಕೆಂಪಾದ ಅಡಿದಾವರೆಗಳ ಧ್ಯಾನದಿಂದ ಭಕ್ತಿಯೋಗವು ಸಿದ್ಧಿಸಿತು. ಪರಮಾನಂದದಿಂದ ತುಂಬಿದ ಹೃದಯವೆಂಬ ಆಳವಾದ ಸರೋವರದಲ್ಲಿ ಬುದ್ಧಿಯು ಮುಳುಗಿಹೋಗಿದ್ದರಿಂದ ನಿಯಮಪೂರ್ವಕವಾಗಿ ಮಾಡುತ್ತಿದ್ದ ಶ್ರೀಭಗವಂತನ ಪೂಜೆಯೂ ಆತನಿಗೆ ಮರೆತುಹೋಯಿತು. ಹೀಗೆ ಆತನು ಭಗವತ್ಸೇವೆಯ ನಿಯಮದಲ್ಲಿಯೇ ತತ್ಪರನಾಗಿರುತ್ತಿದ್ದನು. ದೇಹದಲ್ಲಿ ಜಿಂಕೆಯ ಚರ್ಮವನ್ನು ಧರಿಸುತ್ತಿದ್ದನು. ತ್ರಿಕಾಲಗಳಲ್ಲಿಯೂ ಸ್ನಾನಮಾಡಿ ನೆನೆಯುತ್ತಲೇ ಇದ್ದುದರಿಂದ ಕೇಶಗಳು ಬೂದುಬಣ್ಣದ ಗುಂಗುರುಗೂದಲುಗಳಿಂದ ಕೂಡಿದ್ದರೂ ಆತನು ಅತ್ಯಂತಸುಂದರವಾಗಿ ಕಾಣಿಸುತ್ತಿದ್ದನು. ಉದಯಗೊಂಡ ಸೂರ್ಯಮಂಡಲದಲ್ಲಿ ಸೂರ್ಯಸಂಬಂಧವಾದ ಋಕ್ಕುಗಳ ಮೂಲಕ ಜ್ಯೋತಿರ್ಮಯ-ಪರಮಪುರುಷ-ಭಗವಂತನಾದ ಶ್ರೀಮನ್ನಾರಾಯಣನನ್ನು ಆರಾಧನೆಮಾಡುತ್ತಾ ಈ ರೀತಿಯಲ್ಲಿ ಹೇಳತೊಡಗಿದನು :

(ಶ್ಲೋಕ 11-13)

ಪರೋರಜಃ ಸವಿತುರ್ಜಾತವೇದೋ
ದೇವಸ್ಯ ಭರ್ಗೋ ಮನಸೇದಂ ಜಜಾನ ।
ಸುರೇತಸಾದಃ ಪುನರಾವಿಶ್ಯ ಚಷ್ಟೇ
ಹಂಸಂ ಗೃಧ್ರಾಣಂ ನೃಷದ್ರಿಙ್ಗಿರಾಮಿಮಃ ॥೧೪॥

"ಶ್ರೀಭಗವಂತನಾದ ಸೂರ್ಯದೇವನ ಕರ್ಮಫಲಪ್ರದವಾದ ತೇಜಸ್ಸು ಪ್ರಕೃತಿಯಿಂದ ಹೊರಗೆ ಬೆಳಗುತ್ತಿದೆ. ತನ್ನ ಸಂಕಲ್ಪದ ಮೂಲಕ ಈ ಜಗತ್ತನ್ನು ಆತನು ಸೃಷ್ಟಿಸಿದ್ದಾನೆ. ಅನಂತರ ತನ್ನ ಅಂತರ್ಯಾಮಿರೂಪದಿಂದ ಈ ಜೀವನದಲ್ಲಿ ಪ್ರವೇಶಮಾಡಿ ತನ್ನ ಚಿತ್ತಶಕ್ತಿಯ ಮೂಲಕ ವಿಷಯಾಸಕ್ತಿಯುಳ್ಳ ಜೀವಿಗಳನ್ನು ಸಂರಕ್ಷಣೆಮಾಡುತ್ತಾನೆ. ನಾನು ಬುದ್ಧಿ ಪ್ರವರ್ತಕವಾದ ಸೂರ್ಯನಾರಾಯಣರೂಪಿಯಾದ ಅದೇ ತೇಜಸ್ಸನ್ನು ಶರಣುಹೊಂದುವೆನು."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಪಂಚಮಸ್ಕಂಧದ ೭ನೆಯ ಅಧ್ಯಾಯವು ಮುಗಿಯಿತು.

ಪಂಚಮಸ್ಕಂಧ ೮ನೆಯ ಅಧ್ಯಾಯ

ಭರತನು ಜಿಂಕೆಯ ಮೋಹಕ್ಕೆ ಸಿಲುಕಿ ಜಿಂಕೆಯ ಯೋನಿಯಲ್ಲಿ ಜನ್ಮ ತಾಳುವುದು : ಶಾಲಗ್ರಾಮಶಿಲೆಯಲ್ಲಿ ಮೃಗಶರೀರವನ್ನು ವಿಸರ್ಜಿಸಿದುದು

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಏಕದಾ ತು ಮಹಾನದ್ಯಾಂ ಕೃತಾಭಿಷೇಕನೈಯಮಿಕಾ-ವಶ್ಯಕೋ ಬ್ರಹ್ಮಾಕ್ಷರಮಭಿಗೃಣಾನೋ ಮುಹೂರ್ತತ್ರಯಮುದ- ಕಾನ್ತ ಉಪವಿವೇಶ ॥೧॥

ಒಂದು ದಿನ ಮಹಾತ್ಮನಾದ ಭರತನು ಗಂಡಕೀಮಹಾನದಿಯಲ್ಲಿ ಸ್ನಾನಮಾಡಿ ನಿತ್ಯ-ನೈಮಿತ್ತಿಕಾದಿ ಆಹ್ನಿಕಗಳನ್ನು ಮುಗಿಸಿಕೊಂಡು ಪ್ರಣವವನ್ನು ಜಪಿಸುತ್ತಾ ಮೂರು ಮುಹೂರ್ತಗಳ ಕಾಲದವರೆಗೆ ನದಿಯ ಧಾರೆಯ ಬಳಿಯೇ ಕುಳಿತಿದ್ದನು.

ಅದೇ ಸಮಯಕ್ಕೆ ಒಂದು ಹೆಣ್ಣುಹುಲ್ಲೆಯು ಬಾಯಾರಿಕೆಯಿಂದ ಪೀಡಿತವಾಗಿ ನೀರುಕುಡಿಯಲಿಕ್ಕಾಗಿ ಒಂಟಿಯಾಗಿಯೇ ಆ ನದಿಯ ತೀರಕ್ಕೆ ಬಂದಿತು. ಅಲ್ಲಿ ನೀರು ಕುಡಿಯುತ್ತಿರುವಾಗ ಇದ್ದಕ್ಕಿದ್ದಂತೆ ಲೋಕ ಭಯಂಕರವಾದ ಒಂದು ಸಿಂಹಗರ್ಜನೆಯು ಕೇಳಿಸಿತು. ಜಿಂಕೆಯು ಸ್ವಭಾವ ವಾಗಿಯೇ ಅಂಜಿಕೆಯುಳ್ಳ ಜಾತಿಯ ಪ್ರಾಣಿ. ಆದುದರಿಂದ ಅದು ಆ ಮೊದಲೇ ಚಕಿತದೃಷ್ಟಿಯಿಂದ ದಿಕ್ಕು-ದಿಕ್ಕುಗಳಿಗೂ ಕಣ್ಣು ಹೊರಳಿಸಿ ನೋಡುತ್ತಿತ್ತು. ಆಗ ಆ ಭೀಕರವಾದ ಅಬ್ಬರವನ್ನು ಕೇಳಿದೊಡನೆಯೇ ಗಾಬರಿಗೊಂಡು ಎದೆಯು ಡವಗುಟ್ಟುತ್ತಿರಲು, ಬಾಯಾರಿಕೆಯು ತಣಿಯು ವುದಕ್ಕೆ ಮೊದಲೇ ಪ್ರಾಣಭಯದಿಂದ ನದಿಯನ್ನು ದಾಟಲೆಂದು ಛಂಗನೆ ಮೇಲೆ ಹಾರಿತು. ಅದು ಗರ್ಭಧರಿಸಿದ್ದ ಜಿಂಕೆಯಾದ್ದರಿಂದ ಮೇಲೆ ಹಾರಿ ದಾಗ ಭಯದಿಂದ ಅದರ ಗರ್ಭವು ತನ್ನ ಜಾಗದಿಂದ ಜಾರಿ ಯೋನಿದ್ವಾರ ದಿಂದ ಹೊರಬಂದು ನದಿಯ ಪ್ರವಾಹದಲ್ಲಿ ಬಿದ್ದುಬಿಟ್ಟಿತು. ಹಾಗೆ ಗರ್ಭ ಭಾರವು ಬಿದ್ದುಹೋದ ಆಯಾಸದಿಂದಲೂ, ಸಿಂಹದ ಭಯದಿಂದಲೂ ಅತಿ ಪೀಡಿತವಾದ ಆ ಜಿಂಕೆಯು ತನ್ನ ಹಿಂಡನ್ನಗಲಿ ಓಡುತ್ತಾ ಒಂದು ಗುಹೆಯಲ್ಲಿ ಬಿದ್ದು ಸತ್ತುಹೋಯಿತು. ಆಗ ಆ ಬಡಪಾಯಿಯಾದ ಜಿಂಕೆಯ ಮರಿಯು ತನ್ನ ಬಂಧುಗಳನ್ನಗಲಿ ನದಿಯ ಪ್ರವಾಹದಲ್ಲಿ ಕೊಚ್ಚಿಹೋಗುತ್ತಿರು ವುದನ್ನು ಕಂಡು ರಾಜರ್ಷಿಯಾದ ಭರತನಿಗೆ ಕರುಣೆಯುಂಟಾಗಿ ಆತನು ತಬ್ಬಲಿಯಾದ ಆ ಮರಿಯನ್ನು ಆತ್ಮೀಯತೆಯಿಂದ ಮೇಲಕ್ಕೆ ಎತ್ತಿಕೊಂಡು ಬಂದನು. ಆತನಿಗೆ ಆ ಮರಿಯ ಮೇಲೆ ದಿನ-ದಿನಕ್ಕೂ ಮಮತೆಯು ಹೆಚ್ಚತೊಡಗಿತು. ಆತನು ಪ್ರತಿದಿನವೂ ಅದಕ್ಕೆ ಆಹಾರ-ಪಾನೀಯಗಳನ್ನು ಒದಗಿಸುವುದು, ಅದನ್ನು ಹುಲಿ ಮುಂತಾದುವುಗಳಿಂದ ರಕ್ಷಿಸುವುದು, ಮೈದಡವಿ ಮುದ್ದುಮಾಡುವುದು–ಮುಂತಾದ ಚಿಂತೆಗಳಲ್ಲಿಯೇ ಮುಳುಗ ತೊಡಗಿದನು. ಕೆಲವೇ ದಿನಗಳಲ್ಲಿ ಆತನ ಯಮ, ನಿಯಮ, ಭಗವ ತ್ಪೂಜೆಗಳೇ ಮುಂತಾದ ಆವಶ್ಯಕವಾದ ವಿಧಿಗಳು ಒಂದೊಂದಾಗಿ ಬಿಟ್ಟು ಹೋಗುತ್ತಾ ಬಂದು ಕೊನೆಗೆ ಎಲ್ಲವೂ ಬಿಟ್ಟೇಹೋದುವು. ಆತನು ಹೀಗೆ ವಿಚಾರಮಾಡತೊಡಗಿದನು : "ಆಹಾ! ಈ ಬಡಪಾಯಿಯಾದ ಜಿಂಕೆಯ ಮರಿಯು ಶ್ರೀಭಗವಂತನ ಕಾಲಚಕ್ರದ ವೇಗದಿಂದ ತನ್ನ ಹಿಂಡನ್ನೂ,

ಗೆಳೆಯರನ್ನೂ, ನೆಂಟರಿಷ್ಟರನ್ನೂ ಅಗಲಿ ಕೊನೆಗೆ ತನ್ನ ಆಸರೆಗೆ ಬಂದು ಸೇರಿತಲ್ಲಾ! ಈಗ ಇದು ನನ್ನನ್ನೇ ತನ್ನ ತಾಯಿಯೆಂದೂ, ತಂದೆಯೆಂದೂ, ಬಂಧು-ಬಳಗವೆಂದೂ, ಹಿಂಡಿನ ಗೆಳೆಯನೆಂದೂ ತಿಳಿದುಕೊಂಡಿದೆ. ನನ್ನನ್ನು ಬಿಟ್ಟು ಇದಕ್ಕೆ ಬೇರಾರ ಪರಿಚಯವೂ ಇಲ್ಲ ಮತ್ತು ನನ್ನಲ್ಲಿ ಪೂರ್ಣ ವಾದ ನಂಬಿಕೆಯೂ ಇದಕ್ಕೆ ಉಂಟಾಗಿದೆ. ಶರಣುಬಂದವರನ್ನು ಕೈಬಿಡು ವುದು ಮಹಾದೋಷವೆಂದು ನನಗೆ ತಿಳಿದಿದೆ. ಆದುದರಿಂದ ನನ್ನಲ್ಲಿ ಶರಣಾ ಗತವಾಗಿರುವ ಈ ಪ್ರಾಣಿಯನ್ನು ನಾನು ಎಲ್ಲ ದೋಷಬುದ್ಧಿಯನ್ನೂ ಬಿಟ್ಟು ಸಾಕಿ-ಸಲಹಿ ಮುದ್ದಿಸುತ್ತಾ ಬೆಳೆಸಬೇಕು. ನಿಶ್ಚಯವಾಗಿಯೂ ಶಾಂತ ಸ್ವಭಾವದವರೂ, ದೀನರಕ್ಷಕರೂ ಆದ ಪರೋಪಕಾರಿಗಳಾದ ಸಜ್ಜನರು ಇಂತಹ ಶರಣಾಗತರನ್ನು ರಕ್ಷಿಸುವುದಕ್ಕಾಗಿ ದೊಡ್ಡ-ದೊಡ್ಡ ಸ್ವಾರ್ಥಗಳನ್ನೂ ಕಡೆಗಣಿಸಬೇಕಾಗುತ್ತದೆ." (ಶ್ಲೋಕ 2-10)

ಹೀಗೆ ಆ ಹುಲ್ಲೆಯ ಮರಿಯಲ್ಲಿ ವ್ಯಾಮೋಹವು ಹೆಚ್ಚಿದ್ದರಿಂದ ಆತನ ಮನಸ್ಸು ಕೂರುವಾಗಲೂ, ಮಲಗುವಾಗಲೂ, ನಿಲ್ಲುವಾಗಲೂ, ಆಹಾರ ವನ್ನು ಸೇವಿಸುವಾಗಲೂ ಸದಾ ಅದನ್ನೇ ಕುರಿತು ಯೋಚಿಸುತ್ತಾ ಸ್ನೇಹ ಪಾಶಕ್ಕೆ ಕಟ್ಟುಬಿದ್ದಿತ್ತು. ದರ್ಭೆ-ಸಮಿತ್ತು, ಪತ್ರ-ಪುಷ್ಪ, ಗೆಡ್ಡೆ-ಗೆಣಸು ಗಳನ್ನು ತರುವುದಕ್ಕೆ ಹೋದಾಗಲೂ ಆತನು–ತೋಳ, ನಾಯಿಗಳು ಮುತ್ತ ಬಹುದೆಂಬ ಭಯದಿಂದ ಅದನ್ನೂ ಜೊತೆಯಲ್ಲಿಯೇ ಅರಣ್ಯಕ್ಕೆ ಕರೆದು ಕೊಂಡು ಹೋಗುತ್ತಿದ್ದನು. ದಾರಿಯಲ್ಲಿ ಅಲ್ಲಲ್ಲಿ ಆ ಹುಲ್ಲೆಯ ಮರಿಯು ಮೃದುವಾದ ಗರಿಕೆ ಮುಂತಾದುವುಗಳನ್ನು ಕಂಡು ಮುಗ್ಧಭಾವದಿಂದ ಅದರಲ್ಲಿಯೇ ಆಸಕ್ತವಾಗಿ ಮೊಂಡುಬಿದ್ದಾಗ–ಭರತನು ಅತ್ಯಂತಪ್ರೇಮ ಪೂರ್ಣವಾದ ಹೃದಯದಿಂದ ಅದನ್ನು ತನ್ನ ಹೆಗಲಿನ ಮೇಲೆ ಏರಿಸಿ ಕೊಳ್ಳುತ್ತಿದ್ದನು. ಹೀಗೆಯೇ ಅದನ್ನು ತೊಡೆಯ ಮೇಲೆ ಹತ್ತಿಸಿಕೊಳ್ಳು ವುದು ಮತ್ತು ಹೃದಯದಲ್ಲಿ ತಬ್ಬಿಕೊಂಡು ಮುದ್ದುಮಾಡುವುದು–ಇವು ಗಳಿಂದಲೂ ಆತನಿಗೆ ತುಂಬಾ ಸಂತೋಷವುಂಟಾಗುತ್ತಿತ್ತು. ನಿತ್ಯನೈಮಿತ್ತಿಕ ಕರ್ಮಗಳನ್ನು ಆಚರಿಸುತ್ತಿರುವಾಗಲೂ ಭರತಚಕ್ರವರ್ತಿಯು ನಡು-ನಡುವೆ ಎದ್ದು ಆ ಮರಿಯನ್ನು ನೋಡಲು ಹೋಗುತ್ತಿದ್ದನು. ಆಗ ಅದನ್ನು ಕಣ್ಣಿನಿಂದ ಕಂಡಾಗಲೇ ಆತನ ಮನಸ್ಸಿಗೆ ನೆಮ್ಮದಿಯುಂಟಾಗುತ್ತಿತ್ತು.

ಆಗ ಆತನು 'ಮಗೂ! ನಿನಗೆ ಎಲ್ಲೆಲ್ಲಿಯೂ ಮಂಗಳವುಂಟಾಗಲಿ'–ಎಂದು ಅದಕ್ಕೆ ಶುಭವನ್ನು ಹಾರೈಸುತ್ತಿದ್ದನು. ಕೆಲವೊಮ್ಮೆ ಅದು ಏನಾದರೂ ಕಣ್ಣಿಗೆ ಕಾಣದೇ ಹೋದರೆ–ಹಣವನ್ನು ಕಳೆದುಕೊಂಡ ಕೃಪಣನಂತೆ–ಮನಸ್ಸಿನಲ್ಲಿ ತುಂಬಾ ಕಳವಳಗೊಂಡು ಅದರ ಅಗಲಿಕೆಯಿಂದ ಕಡುನೊಂದವನಾಗಿ ಮೋಹಾವೇಶಗೊಂಡು ದುಃಖದಲ್ಲಿ ಮುಳುಗಿ ಹೀಗೆ ಉದ್ಗರಿಸುತ್ತಿದ್ದನು : "ಅಯ್ಯೋ! ತಾಯಿಯಿಲ್ಲದ ಆ ನನ್ನ ಕಂದನು ಅನಾರ್ಯನೂ ಪುಣ್ಯರಹಿತನೂ ಆದ ನನ್ನಲ್ಲಿ ನಂಬಿಕೆಯನ್ನಿಟ್ಟು, ನನ್ನನ್ನು ತನ್ನವನೆಂದು ಭಾವಿಸಿ, ಸತ್ಪುರುಷರಂತೆ ನಾನು ಮಾಡಿದ ಅಪರಾಧಗಳನ್ನು ಮರೆತು ಹಿಂದಿರುಗಿ ಬರುವನು ತಾನೇ! ಆತನು ಈ ಆಶ್ರಮದ ಉಪವನಕ್ಕೆ ಹಿಂದಿರುಗಿ ಶ್ರೀಭಗವಂತನ ಕೃಪೆಯಿಂದ ಸುರಕ್ಷಿತವಾಗಿ ಯಾವ ವಿಘ್ನವೂ ಇಲ್ಲದೇ ಹಸಿರುಪಚ್ಚೆ ಹುಲ್ಲುಗಳನ್ನು ಮೇಯುತ್ತಿರುವುದನ್ನು ನಾನು ಕಾಣುವೆನು ತಾನೇ! ಯಾವುದಾದರೂ ತೋಳವೋ, ನಾಯಿಯೋ, ಹಿಂಡಿನಲ್ಲಿ ಓಡಾಡುವ ಹಂದಿಯೇ ಮುಂತಾದ ಪ್ರಾಣಿಗಳೋ, ಒಂಟಿಯಾಗಿ ಸಂಚರಿಸುವ ಹುಲಿಯೇ ಮುಂತಾದ ಪ್ರಾಣಿಗಳೋ–ಅದನ್ನು ತಿಂದುಹಾಕಿಲ್ಲ ತಾನೇ! ಅಯ್ಯೋ! ಇದೇನಿದು! ಇಡೀ ಜಗತ್ತಿನ ಕ್ಷೇಮಕ್ಕಾಗಿ ಪ್ರಕಟಗೊಳ್ಳುವ ವೇದತ್ರಯಸ್ವರೂಪನಾದ ಭಗವಂತನಾದ ಸೂರ್ಯನು ಮುಳುಗಲು ಬಯಸುತ್ತಿದ್ದಾನೆ. ಆದರೂ ಆ ತಾಯಿ ಜಿಂಕೆಯು ನನ್ನಲ್ಲಿ ನ್ಯಾಸವಾಗಿ ಇಟ್ಟುಹೋಗಿರುವ ನಿಧಿಯು ಇನ್ನೂ ಹಿಂದಿರುಗಿ ಬರಲಿಲ್ಲವಲ್ಲಾ! ಆ ಹರಿಣರಾಜಕುಮಾರನು ಪುಣ್ಯಹೀನನಾದ ನನ್ನ ಬಳಿಗೆ ಬಂದು ತನ್ನ ವಯಸ್ಸಿಗೂ, ಜಾತಿಗೂ ಉಚಿತವಾದ ಬಗೆ-ಬಗೆಯ ಮನೋ ಹರವಾದ ಆಟ-ಪಾಟಗಳಿಂದ ಸಜ್ಜನರ ಶೋಕವನ್ನು ದೂರಮಾಡುತ್ತಾ ನನ್ನನ್ನು ಆನಂದಗೊಳಿಸುವನು ತಾನೇ! ಆಹಾ! ನಾನೇನಾದರೂ ಪ್ರೀತಿಯ ಕೋಪದಿಂದ ಆಟಕ್ಕಾಗಿ ಸುಳ್ಳು-ಸುಳ್ಳಾಗಿ ಸಮಾಧಿಯಲ್ಲಿರುವ ನೆಪದಿಂದ ಕಣ್ಣುಗಳನ್ನು ಮುಚ್ಚಿಕೊಂಡು ಕುಳಿತುಕೊಂಡರೆ–ಆತನು ಚಕಿತವಾದ ಚಿತ್ತದಿಂದ ನನ್ನ ಬಳಿಗೆ ಬಂದು ನೀರಿನ ತೊಟ್ಟಿನಂತೆ ಮೃದುವಾದ ತನ್ನ ಎಳೆಯ ಕೊಂಬುಗಳ ತುದಿಯಿಂದ ಹೇಗೆ ನನ್ನ ಅಂಗಗಳನ್ನೂ ಕೆರೆಯತೊಡಗುತ್ತಿದ್ದನು! ನಾನು ಯಾವಾಗಲಾದರೂ ದರ್ಭೆಗಳ ಮೇಲೆ

ಹೋಮ-ಹವನಗಳ ಸಾಮಗ್ರಿಗಳನ್ನು ಇಟ್ಟಿರುವಾಗ ಆತನು ಅವುಗಳನ್ನು ಹಲ್ಲಿನಿಂದ ಎಳೆದು ಅಪವಿತ್ರಗೊಳಿಸಿದರೆ ನಾನು ಅವನನ್ನು ಗದರಿಸುತ್ತಿದ್ದೆನು. ಆಗ ಆತನು ತುಂಬಾ ಭಯ-ಭೀತನಾಗಿ ಒಡನೆಯೇ ತನ್ನ ಜಿಗಿದಾಟವನ್ನು ಬಿಟ್ಟು ಋಷಿಕುಮಾರನಂತೆ ಎಲ್ಲ ಇಂದ್ರಿಯಗಳನ್ನೂ ತಡೆದು ಸುಮ್ಮನೆ ಕುಳಿತಕೊಂಡುಬಿಡುತ್ತಿದ್ದನು.'' (ಶ್ಲೋಕ 11-22)

ಭೂಮಿಯ ಮೇಲೆ ಆ ಜಿಂಕೆಯ ಮರಿಯ ಹೆಜ್ಜೆಗಳ ಗುರುತುಗಳೇನಾದರೂ ಕಾಣಿಸಿದರೆ ಆ ರಾಜರ್ಷಿಯು ಹೀಗೆ ಉದ್ಗರಿಸುತ್ತಿದ್ದನು : ‟ಓಹೋ! ಈ ಭೂದೇವಿಯು ಎಂತಹ ತಪಸ್ಸು ಮಾಡಿದಳೋ! ಅದಕ್ಕೇ ಈಕೆಯು ಜಿಂಕೆಯ ಮರಿಯೆಂಬ ಮಹಾಧನವನ್ನು ಕಳೆದುಕೊಂಡು ಕಳವಳಗೊಂಡು ದೀನನಾಗಿರುವ ನನಗೆ ಅದರ ಸುಂದರವೂ, ಸುಖಕರವೂ ಆದ ಗೊರಸುಗಳುಳ್ಳ ಪುಟ್ಟಪಾದಚಿಹ್ನೆಗಳಿಂದ ಆ ದ್ರವ್ಯವು (ಜಿಂಕೆಮರಿಯು) ದೊರಕುವ ಮಾರ್ಗವನ್ನು ತೋರಿಸುತ್ತಿದ್ದಾಳೆ ಮತ್ತು ತಾನೂ ಸ್ವರ್ಗ-ಮೋಕ್ಷಗಳನ್ನು ಬಯಸುವ ದ್ವಿಜರಿಗೆ ಯಜ್ಞಾನುಷ್ಠಾನದ ಸ್ಥಳವನ್ನು* ಸೂಚಿಸುವ ಆ ಪವಿತ್ರವಾದ ಪಾದಚಿಹ್ನೆಗಳಿಂದ ಅಲಂಕೃತಳಾಗಿದ್ದಾಳೆ.'' (ಚಂದ್ರನಲ್ಲಿ ಜಿಂಕೆಯಂತೆ ಕಪ್ಪಾಗಿರುವ ಗುರುತನ್ನು ಕಂಡು ಅದನ್ನೇ ತನ್ನ ಪ್ರೀತಿಯ ಜಿಂಕೇಮರಿಯೆಂದು ಭಾವಿಸಿ) ‟ಸಿಂಹದ ಭಯದಿಂದ ಪ್ರಾಣ ಕಳೆದುಕೊಂಡ ತಾಯಿಯುಳ್ಳ ಆ ಜಿಂಕೆಯ ಮರಿಯೇ ಈಗ ನನ್ನ ಆಶ್ರಮವನ್ನು ಅಗಲಿಹೋಗಿದೆ. ಆದ್ದರಿಂದ ಅದನ್ನು 'ಅಯ್ಯೋ ಪಾಪ, ಅನಾಥ ಶಿಶು!' ಎಂದು ಭಾವಿಸಿ ದೀನವತ್ಸಲನಾದ ಈ ನಕ್ಷತ್ರರಾಜನಾದ ಚಂದ್ರನು ದಯೆಯಿಂದ ಅದನ್ನು ರಕ್ಷಿಸುತ್ತಿದ್ದಾನೆ''–ಎಂದು ಆ ಮರುಕಗೊಂಡ ರಾಜರ್ಷಿಯು ಹೇಳುತ್ತಿದ್ದನು. (ಮತ್ತೆ ಚಂದ್ರನ ತಂಪಾದ ಕಿರಣಗಳಿಂದ ಆಹ್ಲಾದಿತನಾಗಿ) ‟ಅಥವಾ ಹೀಗೂ ಇರಬಹುದು. ಪುತ್ರರ ಅಗಲಿಕೆಯೆಂಬ

---

* ಕೃಷ್ಣಮೃಗವು ಎಲ್ಲಿ ಧಾರಾಳವಾಗಿ ಸಂಚರಿಸುವುದೋ– ಅದು ಯಜ್ಞದ ಅನುಷ್ಠಾನಕ್ಕೆ ಮತ್ತು ಧರ್ಮಶ್ರವಣಕ್ಕೆ ಯೋಗ್ಯವಾದ ಸ್ಥಳ ಎಂದು ಶಾಸ್ತ್ರಗಳು ಹೇಳುತ್ತವೆ. 'ಮಿಥಿಲಾಸ್ಥಃ ಯೋಗೀನ್ದ್ರಃ ಕ್ಷಣಂ ಧ್ಯಾತ್ವಾಬ್ರವೀನ್ಮುನೀನ್ । ಯಸ್ಮಿನ್ ದೇಶೇ ಮೃಗಃ ಕೃಷ್ಣಃ ತಸ್ಮಿನ್ ಧರ್ಮಾನ್ನಿಬೋಧತ ॥' (ಯಾಜ್ಞವಲ್ಕ್ಯಸ್ಮೃತಿ) (ಶ್ಲೋಕ ೨೩)

ಕಾಡುಗಿಚ್ಚಿನ ವಿಷಮವಾದ ಜ್ವಾಲೆಯಿಂದ ಹೃದಯಕಮಲವು ಸುಟ್ಟು ಹೋಗುತ್ತಿದ್ದುದರಿಂದ ನಾನು ಒಂದು ಜಿಂಕೆಯ ಮರಿಯ ಆಧಾರವನ್ನು ಪಡೆದಿದ್ದೆನು. ಈಗ ಅದು ಹೊರಟುಹೋಗಿರುವುದರಿಂದ ನನ್ನ ಹೃದಯವು ಮತ್ತೆ ಸುಟ್ಟುಹೋಗಲು ಆರಂಭವಾಗಿದೆ. ಆದುದರಿಂದ ಈ ಚಂದ್ರದೇವನು ತನ್ನ ಶೀತಲವೂ, ಶಾಂತವೂ, ಸ್ನೇಹಪೂರ್ಣವೂ ಆದ ಮುಖಾರವಿಂದ ರಸರೂಪವಾದ ಅಮೃತಮಯವಾದ ಕಿರಣಗಳಿಂದ ನನ್ನನ್ನು ಶಾಂತಗೊಳಿಸುತ್ತಿದ್ದಾನೆ"–ಎಂದು ಹೇಳಿಕೊಳ್ಳುತ್ತಿದ್ದನು. ಹೀಗೆ ಈಡೇರಿಸಲು ಅಸಂಭವವಾದ ಬಗೆ-ಬಗೆಯ ಮನೋರಥಗಳಿಂದ ಆ ರಾಜರ್ಷಿಯ ಮನಸ್ಸು ಕಳವಳದಿಂದ ತುಂಬಿ, ಆತನು ಜಿಂಕೆಯ ಮರಿಯ ರೂಪದಲ್ಲಿ ಕಾಣಿಸಿಕೊಂಡ ಪ್ರಾರಬ್ಧಕರ್ಮದಿಂದ ಶ್ರೀಭಗವಂತನ ಆರಾಧನೆಯ ರೂಪವಾದ ಕರ್ಮಗಳಿಂದಲೂ, ಯೋಗಾನುಷ್ಠಾನದಿಂದಲೂ ಜಾರಿಬಿಟ್ಟನು. ಮೋಕ್ಷಮಾರ್ಗಕ್ಕೆ ಸಾಕ್ಷಾತ್ತಾಗಿ ಅಡ್ಡಿಯಾಗುವುದೆಂದು ಭಾವಿಸಿ ಬಿಡುವುದಕ್ಕೆ ಅತಿ ಕಷ್ಟವಾಗಿದ್ದ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಪುತ್ರರೇ ಮುಂತಾದವರನ್ನೂ ತೊರೆದು ಬಂದಿದ್ದ ಆ ರಾಜರ್ಷಿಗೆ ಬೇರೆ ಜಾತಿಯ ಪ್ರಾಣಿಯಾದ ಜಿಂಕೆಯ ಮರಿಯಲ್ಲಿ ಇಂತಹ ಆಸಕ್ತಿಯುಂಟಾದುದಕ್ಕೆ ಪ್ರಾರಬ್ಧಕರ್ಮವಲ್ಲದೇ ಮತ್ತಾವ ಕಾರಣವಿದ್ದೀತು? ಹೀಗೆ ಆತನು ವಿಘ್ನಗಳಿಗೆ ವಶನಾಗಿ ಯೋಗಸಾಧನೆಯಿಂದ ಭ್ರಷ್ಟನಾದನು. ಆ ಜಿಂಕೆಯ ಮರಿಯನ್ನು ಸಾಕುವುದು, ಸಲಹುವುದು, ಪೋಷಿಸುವುದು, ಮುದ್ದುಮಾಡುವುದು–ಇವುಗಳಲ್ಲೇ ತತ್ಪರನಾಗಿದ್ದು ಆತ್ಮಸ್ವರೂಪವನ್ನು ಮರೆತುಬಿಟ್ಟನು. ಅದೇ ಸಮಯದಲ್ಲಿ ಯಾರಿಗೂ ತಪ್ಪಿಸಿಕೊಳ್ಳಲು ಅಸಾಧ್ಯವಾದ ಬಲಶಾಲಿಯೂ, ವೇಗಶಾಲಿಯೂ ಆದ ಕಾಲವು–ಇಲಿಯ ಬಿಲಕ್ಕೆ ಹಾವು ನುಗ್ಗುವಂತೆ–ಆ ರಾಜರ್ಷಿಯನ್ನು ಆಕ್ರಮಿಸಿತು. ಆಗಲೂ ತನ್ನ ಬಳಿ ಪುತ್ರನಂತೆ ಶೋಕಾತುರವಾಗಿ ಕುಳಿತಿದ್ದ ಆ ಜಿಂಕೆಯ ಮರಿಯನ್ನೇ ನೋಡುತ್ತಾ ಅದರಲ್ಲಿಯೇ ನೆಟ್ಟ ಮನಸ್ಸಿನಿಂದ ಆ ರಾಜರ್ಷಿಯು ಆ ಜಿಂಕೆಯನ್ನೂ ಮತ್ತು ತನ್ನ ಶರೀರವನ್ನೂ ಎರಡನ್ನೂ ತೊರೆದು ಹೋದನು. ಕೊನೆಯ ಸಮಯದಲ್ಲಿ ಜಿಂಕೆಯ ಭಾವನೆಯೇ ಚಿತ್ತದಲ್ಲಿ ತುಂಬಿದ್ದರಿಂದ ಅದಕ್ಕೆ ತಕ್ಕಂತೆ ಆತನು ಮರುಹುಟ್ಟಿನಲ್ಲಿ ಜಿಂಕೆಯ ದೇಹವನ್ನೇ ಪಡೆದು ಜನಿಸಿದನು. ಆದರೆ ಆತನು

ಹಿಂದಿನ ಜನ್ಮದಲ್ಲಿ ಆತ್ಮಸಾಧನೆಯನ್ನು ಪೂರ್ಣವಾಗಿ ಮಾಡಿದ್ದರಿಂದ ಆತನಿಗೆ ಪೂರ್ವಜನ್ಮದ ನೆನಪು ಹಾಗೆಯೇ ಉಳಿಯಿತು. ಆ ಜಿಂಕೆಯ ಯೋನಿಯಲ್ಲಿದ್ದಾಗಲೂ ಆತನಿಗೆ ಹಿಂದೆ ಮಾಡಿದ್ದ ಶ್ರೀಭಗವಂತನ ಆರಾಧನೆಯ ಪ್ರಭಾವದಿಂದ ತನ್ನ ಈ ಜಿಂಕೆಯ ಜನ್ಮಕ್ಕೆ ಕಾರಣವೇನೆಂಬುದನ್ನು ತಿಳಿದು ಆತನು ಅತ್ಯಂತಪಶ್ಚಾತ್ತಾಪದಿಂದ–"ಅಯ್ಯೋ! ಎಂತಹ ಅನಿಷ್ಟವಾಯಿತು! ನಾನು ಸಂಯಮಶೀಲರಾದ ಮಹಾನುಭಾವರ ದಾರಿಯಿಂದ ಜಾರಿದೆನಲ್ಲಾ! ಧೈರ್ಯದಿಂದ ಎಲ್ಲ ಬಗೆಯ ಆಸಕ್ತಿಗಳನ್ನೂ ತೊರೆದು ಏಕಾಂತವೂ, ಪವಿತ್ರವೂ ಆದ ಅರಣ್ಯಕ್ಕೆ ಬಂದಿದ್ದವನು ನಾನು. ಅಲ್ಲಿ ವಾಸ ಮಾಡುತ್ತಾ ಚಿತ್ತವನ್ನು ಸರ್ವಭೂತಾತ್ಮನಾದ ಶ್ರೀವಾಸುದೇವನಲ್ಲಿ ನೆಲೆಗೊಳಿಸಿ, ಆತನ ಗುಣಗಳ ಶ್ರವಣ-ಮನನ ಮತ್ತು ಸಂಕೀರ್ತನೆಗಳಲ್ಲಿ ತೊಡಗಿಸಿ, ಆತನ ಆರಾಧನೆ-ಸ್ಮರಣೆ ಮುಂತಾದುವುಗಳಲ್ಲಿಯೇ ಪ್ರತಿಯೊಂದು ಕ್ಷಣವನ್ನೂ ಪೂರ್ಣವಾಗಿ ಸ್ಥಿರಗೊಳಿಸಿದ್ದೆನು. ಆದರೆ ಅಜ್ಞಾನಿಯಾದ ನನ್ನ ಅದೇ ಮನಸ್ಸು ಅಕಸ್ಮಾತ್ತಾಗಿ ಒಂದು ಹುಲ್ಲೆಯ ಬೆನ್ನು ಹತ್ತಿ ನನ್ನ ಗುರಿಯಿಂದ ಜಾರಿಬಿಟ್ಟೆನಲ್ಲಾ!"–ಎಂದು ಸಂತಾಪಭರಿತನಾದನು.

ಮೃಗರೂಪವನ್ನು ಧರಿಸಿದ್ದ ರಾಜರ್ಷಿ ಭರತನು ಹೀಗೆ ತನ್ನ ಮನಸ್ಸಿನಲ್ಲಿ ಎಚ್ಚರಗೊಂಡಿದ್ದ ವೈರಾಗ್ಯಭಾವನೆಯನ್ನು ಗುಟ್ಟಾಗಿ ಇಟ್ಟುಕೊಂಡು ತನ್ನ ತಾಯಿಯಾಗಿದ್ದ ಜಿಂಕೆಯನ್ನು ತೊರೆದು ತಾನು ಹುಟ್ಟಿದ ಜಾಗವಾಗಿದ್ದ ಕಾಲಂಜರಪರ್ವತದಿಂದ ಮತ್ತೆ ಶಾಂತಸ್ವಭಾವರಾದ ಮುನಿಗಳಿಗೆ ಪ್ರಿಯವಾದ ಅದೇ ಶ್ರೀಭಗವತ್‌ಕ್ಷೇತ್ರವಾದ ಸಾಲಿಗ್ರಾಮತೀರ್ಥದಲ್ಲಿದ್ದ ಪುಲಹಮಹರ್ಷಿಯ ಆಶ್ರಮಕ್ಕೆ ಬಂದು ಸೇರಿದನು. ಅಲ್ಲಿ ವಾಸವಾಗಿದ್ದಾಗಲೂ ಆತನು ಕಾಲವನ್ನೇ ಎದುರುನೋಡುತ್ತಿದ್ದನು. 'ಆಸಕ್ತಿ' ಎಂದರೆ ಆತನಿಗೆ ಭಯವಾಗುತ್ತಿತ್ತು. ಅಲ್ಲಿ ಆತನು ಒಣಎಲೆ, ಹುಲ್ಲು, ಪೊದೆ–ಮುಂತಾದುವುಗಳಿಂದ ಜೀವನವನ್ನು ನಿರ್ವಹಿಸುತ್ತಾ ತನಗೆ ಮೃಗಯೋನಿಯನ್ನುಂಟುಮಾಡಲು ಕಾರಣವಾಗಿದ್ದ ಪ್ರಾರಬ್ಧಕರ್ಮವು ಅಳಿಯುವ ಕಾಲವನ್ನೇ ನಿರೀಕ್ಷಿಸುತ್ತಿದ್ದನು. ಕೊನೆಗೆ ಆತನು ತನ್ನ ಶರೀರದ ಅರ್ಧ

ಭಾಗವನ್ನು ಗಂಡಕೀನದಿಯಲ್ಲಿ ಮುಳುಗಿಸಿಕೊಂಡಿದ್ದು ಆ ಜಿಂಕೆಯ ದೇಹವನ್ನು ತ್ಯಜಿಸಿಬಿಟ್ಟನು. (ಶ್ಲೋಕ 23-31)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಪಂಚಮಸ್ಕಂಧದ ೮ನೆಯ ಅಧ್ಯಾಯವು ಮುಗಿಯಿತು.

ಪಂಚಮಸ್ಕಂಧ ೯ನೆಯ ಅಧ್ಯಾಯ

ಬ್ರಾಹ್ಮಣಕುಲದಲ್ಲಿ ಭರತನ ಜನನ : ಜಡನಂತೆ ಆಚರಣೆ

ಶ್ರೀಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಹೇಳುತ್ತಾರೆ :

ಅಥ ಕಸ್ಯಚಿದ್ದ್ವಿಜವರಸ್ಯಾಙ್ಗಿರಃಪ್ರವರಸ್ಯ ಶಮದಮತಪಃ - ಸ್ವಾಧ್ಯಾಯಾಧ್ಯಯನತ್ಯಾಗಸಂತೋಷತಿತಿಕ್ಷಾಪ್ರಶ್ರಯವಿದ್ಯಾನಸೂಯಾತ್ಮ - ಜ್ಞಾನಾನನ್ದಯುಕ್ತಸ್ಯಾತ್ಮಸದೃಶಶ್ರುತಶೀಲಾಚಾರರೂಪೌದಾರ್ಯಗುಣಾ ನವ ಸೋದರ್ಯಾ ಅಙ್ಗಜಾ ಬಭೂವು- ರ್ಮಿಥುನಂ ಚ ಯವೀಯಸ್ಯಾಂ ಭಾರ್ಯಾಯಾಮ್ ॥೧॥

"ರಾಜೇಂದ್ರನೇ! ಮುಂದೇನಾಯಿತೆಂಬುದನ್ನು ಹೇಳುತ್ತೇನೆ ; ಕೇಳು. ಆಂಗಿರಸಗೋತ್ರದಲ್ಲಿ ಶಮ, ದಮ, ತಪಸ್ಸು, ಅಧ್ಯಯನ, ತ್ಯಾಗ, ಸಂತೋಷ, ಸಹನೆ, ವಿನಯ, ಕರ್ಮವಿದ್ಯೆ, ಅಸೂಯೆ ಇಲ್ಲದಿರುವಿಕೆ, ಆತ್ಮಜ್ಞಾನ ಮತ್ತು ಅನಂದಗಳೆಂಬ ಎಲ್ಲ ಸದ್ಗುಣಗಳಿಂದಲೂ ಸಂಪನ್ನನಾಗಿದ್ದ ಒಬ್ಬ ಬ್ರಾಹ್ಮಣಶ್ರೇಷ್ಠನಿದ್ದನು. ಆತನ ಹಿರಿಯ ಹೆಂಡತಿಯಲ್ಲಿ ವಿದ್ಯೆ, ಶೀಲ, ಆಚಾರ, ರೂಪ ಮತ್ತು ಔದಾರ್ಯಗಳೇ ಮುಂತಾದ ಗುಣ ಗಳಿಂದ ಆತನಿಗೆ ಸಮಾನರಾಗಿದ್ದ ಒಂಬತ್ತು ಮಂದಿ ಪುತ್ರರು ಜನಿಸಿದರು. ಕಿರಿಯ ಮಡದಿಯಲ್ಲಿ ಒಬ್ಬ ಪುತ್ರನೂ ಮತ್ತು ಒಬ್ಬಳು ಕನ್ಯೆಯೂ ಹುಟ್ಟಿದರು.

ಆ ಇಬ್ಬರು ಮಕ್ಕಳಲ್ಲಿ ಪುತ್ರನಾಗಿದ್ದವನು ಪರಮಭಾಗವತಶಿರೋಮಣಿಯೂ ರಾಜರ್ಷಿಶ್ರೇಷ್ಠನೂ ಆಗಿದ್ದ ಭರತನು. 'ಆತನು ಜಿಂಕೆಯ ದೇಹವನ್ನು ತೊರೆದು ಕೊನೆಯ ಜನ್ಮದಲ್ಲಿ ಹೀಗೆ ಬ್ರಾಹ್ಮಣನಾಗಿ ಹುಟ್ಟಿದನು'– ಎಂದು ಮಹಾಪುರುಷರು ಹೇಳುತ್ತಾರೆ. ಆ ಹುಟ್ಟಿನಲ್ಲಿಯೂ ಭರತನಿಗೆ

ಶ್ರೀಭಗವಂತನ ಕೃಪೆಯಿಂದ ತನ್ನ ಹಿಂದಿನ ಜನ್ಮಪರಂಪರೆಯ ನೆನಪು ಮುಂದುವರಿಯಿತು. ಆದ್ದರಿಂದ ಆತನು–'ತನ್ನ ಯೋಗಕ್ಕೆ ಮತ್ತೆ ವಿಘ್ನವು ಒದಗದಿರಲಿ'–ಎಂದು ತನ್ನ ಜನರ ಸಹವಾಸಮಾಡುವುದಕ್ಕೂ ಬಹು ಮಟ್ಟಿಗೆ ಹೆದರುತ್ತಿದ್ದನು. ಯಾವನ ಸ್ಮರಣೆ ಮತ್ತು ಗುಣಸಂಕೀರ್ತನೆಗಳನ್ನು ಸದಾ ಮಾಡುತ್ತಿರುವುದರಿಂದ ಸಕಲಕರ್ಮಬಂಧನಗಳೂ ಕತ್ತರಿಸಿ ಹೋಗುತ್ತವೆಯೋ–ಆ ಶ್ರೀಭಗವಂತನ ಅಡಿದಾವರೆಗಳನ್ನೇ ತನ್ನ ಹೃದಯ ದಲ್ಲಿ ಸದಾ ಧರಿಸಿಕೊಂಡು ಇತರರ ದೃಷ್ಟಿಗೆ ತನ್ನನ್ನು ಹುಚ್ಚನಂತೆಯೂ, ಮೂರ್ಖನಂತೆಯೂ, ಕುರುಡನಂತೆಯೂ, ಕಿವುಡನಂತೆಯೂ ತೋರ್ಪ ಡಿಸಿಕೊಳ್ಳುತ್ತಿದ್ದನು. ತಂದೆಗಾದರೋ ತನ್ನ ಇತರ ಮಕ್ಕಳಲ್ಲಿ ಎಷ್ಟು ಪ್ರೀತಿ ಯಿತ್ತೋ–ಅಷ್ಟೇ ಸ್ನೇಹವು ಭರತಕುಮಾರನಲ್ಲಿಯೂ ಇದ್ದಿತು. ಆದುದ ರಿಂದ ಆ ವಿಪ್ರವರ್ಯನು ಹುಚ್ಚನಂತೆಯೇ ಕಾಣಿಸುತ್ತಿದ್ದ ಆ ಹುಡುಗ ನಿಗೂ ಶಾಸ್ತ್ರಾನುಸಾರವಾಗಿ ಸಮಾವರ್ತನದವರೆಗೆ ವಿವಾಹಪೂರ್ವಭಾವಿ ಯಾದ ಸಂಸ್ಕಾರಗಳೆಲ್ಲವನ್ನೂ ಮಾಡಬೇಕೆಂಬ ಮನಸ್ಸಿನಿಂದ ಆತನಿಗೆ ಉಪನಯನಸಂಸ್ಕಾರವನ್ನು ಮಾಡಿದನು. ಹುಡುಗನಿಗೆ ಇಷ್ಟವಿಲ್ಲದಿದ್ದರೂ ತಂದೆಯು ಶಾಸ್ತ್ರವಿಧಿಗೆ ಅನುಸಾರವಾಗಿ ಶೌಚ, ಆಚಮನಗಳೇ ಮುಂತಾದ ಎಲ್ಲ ಆವಶ್ಯಕಕರ್ಮಗಳನ್ನೂ–ತನ್ನ ಕರ್ತವ್ಯವೆಂಬ ಭಾವನೆಯಿಂದ– ನೆರವೇರಿಸಿದನು. ಆದರೆ ಭರತನು ತನ್ನ ತಂದೆಯ ಎದುರಿನಲ್ಲಿಯೇ ಆತನ ಉಪದೇಶಕ್ಕೆ ವಿರುದ್ಧವಾಗಿ ಆಚರಿಸುತ್ತಿದ್ದನು. ವರ್ಷಾಕಾಲದಲ್ಲಿ ಆತನಿಗೆ ವೇದಾಧ್ಯಯನವನ್ನು ಪ್ರಾರಂಭಿಸಬೇಕೆಂಬುದು ತಂದೆಯ ಇಚ್ಛೆಯಾಗಿತ್ತು. ಆದರೆ ವಸಂತ ಮತ್ತು ಗ್ರೀಷ್ಮರ್ತುಗಳ ನಾಲ್ಕು ತಿಂಗಳು ಹೇಳಿಕೊಟ್ಟರೂ ಭರತನಿಗೆ ಪ್ರಣವ ಮತ್ತು ಗಾಯತ್ರೀಶಿರಸ್ಸಿನಿಂದ ಕೂಡಿದ ತ್ರಿಪದಾ ಗಾಯತ್ರೀಮಂತ್ರವನ್ನು ಕೂಡ ಚೆನ್ನಾಗಿ ಕಲಿಸಲಾಗಲಿಲ್ಲ. ಆದರೂ ತಂದೆಗೆ ಆ ಬಾಲಕನ ಮೇಲೆ ತನ್ನ ಆತ್ಮದಲ್ಲಿರುವಷ್ಟೇ ಪ್ರೇಮವು ತುಂಬಿತ್ತು. ಆದ್ದರಿಂದ ಆತನಿಗೆ ಕಲಿಯುವ ಪ್ರವೃತ್ತಿಯೇ ಇಲ್ಲದಿದ್ದರೂ–'ಪುತ್ರನಿಗೆ ಒಳ್ಳೆಯ ರೀತಿಯಲ್ಲಿ ಶಿಕ್ಷಣನೀಡಬೇಕು'–ಎಂಬ ಅನುಚಿತವಾದ ಆಗ್ರಹ ದಿಂದ ಆತನಿಗೆ ಶೌಚ, ವೇದಾಧ್ಯಯನ, ವ್ರತ, ನಿಯಮ, ಗುರುವಿನ ಮತ್ತು ಅಗ್ನಿಯ ಸೇವೆ–ಇವೇ ಮುಂತಾದ ಬ್ರಹ್ಮಚರ್ಯಾಶ್ರಮದ ಆವಶ್ಯಕವಾದ

ನಿಯಮಗಳ ಬಗೆಗೆ ಶಿಕ್ಷಣವನ್ನು ಕೊಡುತ್ತಲೇ ಇದ್ದನು. ಆದರೆ ಪುತ್ರನನ್ನು ಶಿಕ್ಷಿತನನ್ನಾಗಿ ಮಾಡುವುದಕ್ಕಾಗದೇ ಅದಕ್ಕೆ ಮೊದಲೇ ತನ್ನ ಇಷ್ಟಾರ್ಥವು ಈಡೇರದೇ ಮನೆಯ ಕೆಲಸಗಳಲ್ಲಿ ತೊಡಗಿರುತ್ತಾ ಅಸಾವಧಾನತೆಯಿಂದಿರುವಾಗಲೇ ಆತನು ಸ್ವರ್ಗಸ್ಥನಾಗಿಬಿಟ್ಟನು. ಆಗ ಆತನ ಕಿರಿಯ ಹೆಂಡತಿಯು ತನ್ನ ಬಸುರಿನಲ್ಲಿ ಹುಟ್ಟಿದ ಇಬ್ಬರು ಬಾಲಕರನ್ನು ತನ್ನ ಸವತಿಗೆ ಒಪ್ಪಿಸಿ ತಾನೂ ಸಹಗಮನಮಾಡಿ ಪತಿಲೋಕವನ್ನು ಸೇರಿಬಿಟ್ಟಳು. (ಶ್ಲೋಕ 2-7)

ಭರತನ ಒಡಹುಟ್ಟಿದವರೆಲ್ಲರೂ ಕರ್ಮಕಾಂಡವನ್ನೇ ಸರ್ವಶ್ರೇಷ್ಠವನ್ನಾಗಿ ತಿಳಿದುಕೊಂಡಿದ್ದವರೂ, ಬ್ರಹ್ಮಜ್ಞಾನರೂಪವಾದ ಪರಾವಿದ್ಯೆಯ ಪರಿಚಯವೇ ಇಲ್ಲದವರೂ, ಭರತನ ಪ್ರಭಾವವನ್ನು ಅರಿಯದವರೂ ಆಗಿದ್ದರು. ಆದುದರಿಂದ ಅವರು ಆತನನ್ನು ಶುದ್ಧಮೂರ್ಖನೆಂದೇ ಭಾವಿಸಿದ್ದರು. ತಂದೆಯು ಪರಲೋಕವಾಸಿಯಾದನಂತರ ಅವರು ಆತನಿಗೆ ಓದು-ಬರಹಗಳನ್ನು ತಿಳಿಸಿಕೊಡುವ ಬಗೆಗೆ ಯಾವ ಆಗ್ರಹವನ್ನೂ ಮಾಡಲಿಲ್ಲ. ಆ ಮಹಾತ್ಮನಿಗೆ ಮಾನ-ಅವಮಾನಗಳ ಭಾವನೆಯೇ ಇರಲಿಲ್ಲ. ಆದುದರಿಂದ ಪ್ರಾಕೃತರಾದ ನರಪಶುಗಳು ತನ್ನನ್ನು ಹುಚ್ಚ, ಮೂರ್ಖ ಅಥವಾ ಕಿವುಡ ಎಂದು ತಿರಸ್ಕಾರದಿಂದ ಕರೆದರೆ ಆತನು ಅದಕ್ಕೆ ಅನುರೂಪವಾಗಿಯೇ ಮಾತನಾಡುತ್ತಿದ್ದನು. ಯಾರಾದರೂ ತನ್ನಿಂದ ಏನೇ ಕೆಲಸವನ್ನು ಮಾಡಿಸಿಕೊಳ್ಳಲು ಬಯಸಿದರೂ ಅವರ ಇಚ್ಛೆಗೆ ತಕ್ಕಂತೆ ಆತನು ಆ ಕೆಲಸವನ್ನು ಮಾಡಿಕೊಡುತ್ತಿದ್ದನು. ಕೂಲಿ ಇಲ್ಲದ ಬಿಟ್ಟಿಯ ಕೆಲಸವನ್ನಾಗಲೀ, ಕೂಲಿಯ ಕೆಲಸವನ್ನಾಗಲೀ ಯಾರಾದರೂ ಮಾಡಲು ಬೇಡಿದರೆ– ಅವರನ್ನು ಏನೂ ಕೇಳದೇ ಅವರು ಸ್ವಲ್ಪವೋ, ಹೆಚ್ಚಾಗಿಯೋ ಎಷ್ಟು ಕೊಟ್ಟರೆ ಅಷ್ಟನ್ನು, ಒಳ್ಳೆಯ ಅನ್ನವೋ ಅಥವಾ ಕೆಟ್ಟ ಅನ್ನವೋ ಏನು ಕೊಟ್ಟರೆ ಅದನ್ನು, ನಾಲಿಗೆಯ ರುಚಿಯನ್ನೇ ಗಮನಿಸದೇ ತಿಂದು ಆ ಕೆಲಸವನ್ನು ನೆರವೇರಿಸುತ್ತಿದ್ದನು. ಸ್ವತಸ್ಸಿದ್ಧವಾದ ಕೇವಲ ಜ್ಞಾನಾನಂದ ಸ್ವರೂಪವಾದ ಆತ್ಮಜ್ಞಾನವು ಆತನಿಗೆ ಉಂಟಾಗಿದ್ದರಿಂದ ಶೀತ, ಉಷ್ಣ, ಮಾನ, ಅವಮಾನ–ಮುಂತಾದ ದ್ವಂದ್ವಗಳಿಂದುಂಟಾದ ಸುಖ-ದುಃಖಾದಿಗಳಲ್ಲಿ ದೇಹಾಭಿಮಾನದ ಸ್ಫೂರ್ತಿಯೇ ಆತನಿಗೆ ಉಂಟಾಗು

ತ್ತಿರಲಿಲ್ಲ. ಚಳಿಯೇನು, ಮಳೆಯೇನು, ಸೆಕೆಯೇನು, ಬಿರುಗಾಳಿಯೇನು–ಈ ಯಾವುದನ್ನೂ ಗಮನಿಸದೇ ಗೂಳಿಯಂತೆ ಬರಿಮೈಯಲ್ಲಿ ಎಲ್ಲೆಂದರಲ್ಲಿ ಮಲಗಿಕೊಳ್ಳುತ್ತಿದ್ದನು. ಆದರೆ ಆತನ ಅಂಗಾಂಗಗಳೆಲ್ಲವೂ ಹೃಷ್ಟ-ಪುಷ್ಟ ವಾಗಿ ದೃಢವಾಗಿದ್ದುವು. ಆತನು ಬರೀ ನೆಲದ ಮೇಲೆಯೇ ಬಿದ್ದುಕೊಂಡಿರು ತ್ತಿದ್ದನು. ಯಾವಾಗಲೂ ಎಣ್ಣೆ ಹಚ್ಚಿಕೊಳ್ಳುತ್ತಿರಲಿಲ್ಲ. ಸ್ನಾನವನ್ನೂ ಮಾಡುತ್ತಿರಲಿಲ್ಲ. ಆದ್ದರಿಂದ ದೇಹಕ್ಕೆ ಕೊಳೆಯು ಸದಾ ಮೆತ್ತಿಕೊಂಡಿರು ತ್ತಿತ್ತು. ಅದರಿಂದ ಆ ಮಹಾತ್ಮನ ಬ್ರಹ್ಮತೇಜಸ್ಸು–ಧೂಳು ಮುಚ್ಚಿ ಕೊಂಡಿರುವ ಅಮೂಲ್ಯವಾದ ಮಣಿ-ಮಾಣಿಕ್ಯದಂತೆ ಮರೆಯಾಗಿತ್ತು. ನಡುವಿಗೆ ಒಂದು ಕೊಳಕುಬಟ್ಟೆಯನ್ನು ಮಾತ್ರವೇ ಸುತ್ತಿಕೊಂಡಿರುತ್ತಿದ್ದನು. ಆತನ ಯಜ್ಞೋಪವೀತವೂ ತುಂಬಾ ಕೊಳಕಾಗಿತ್ತು. ಆದ್ದರಿಂದ ಅಜ್ಞಾನಿಗಳು ಆತನ ಯಜ್ಞೋಪವೀತವನ್ನು ನೋಡಿ–'ಈತನು ಯಾವನೋ ಒಬ್ಬ ಬ್ರಾಹ್ಮಣನು, ಆದರೆ ಅಧಮಬ್ರಾಹ್ಮಣನು'–ಎಂದು ಮೊದಲಾಗಿ ಹೇಳುತ್ತಿದ್ದರು. ಆದರೆ ಭರತನು ಅದಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳದೇ ಯಥೇಚ್ಛವಾಗಿ ಓಡಾಡುತ್ತಿದ್ದನು. ಇತರರ ಮನೆಗಳಲ್ಲಿ ಕೆಲಸವನ್ನು ಮಾಡಿ ಹೊಟ್ಟೆಹೊರೆಯುವುದನ್ನು ಕಂಡು ಭರತನ ಸೋದರರು ಆತನನ್ನು ಕೆಸರುಗದ್ದೆಯ ಕೆಲಸಕ್ಕೆ ನೇಮಿಸಲು–ಆ ಮಹಾತ್ಮನು ಅದನ್ನೂ ಮಾಡತೊಡಗಿದನು. ಆದರೆ ಆತನಿಗೆ ಗದ್ದೆಯ ಭೂಮಿಯು ಸಮತಲವಾಗಿದೆಯೇ? ಅಥವಾ ಹಳ್ಳ-ತಿಟ್ಟುಗಳಿಂದ ಕೂಡಿದೆಯೇ? ಚಿಕ್ಕ ದಾಗಿದೆಯೇ ಅಥವಾ ದೊಡ್ಡದಾಗಿದೆಯೇ?–ಎಂಬುದರ ಕಡೆಗೆ ಸ್ವಲ್ಪವೂ ಗಮನವಿರಲಿಲ್ಲ. ಸಹೋದರರು ಆತನಿಗೆ ನುಚ್ಚನ್ನಾಗಲೀ, ಹಿಂಡಿಯನ್ನಾ ಗಲೀ, ತೌಡುಜಳ್ಳುಗಳನ್ನಾಗಲೀ, ಹಳತುಹೋದ ಉದ್ದಿನಕಾಳುಗಳನ್ನಾಗಲೀ, ಪಾತ್ರೆಯಲ್ಲಿ ಅಂಟಿಕೊಂಡಿದ್ದ ಸೀದುಹೋದ ಆಹಾರವನ್ನಾಗಲೀ ತಿನ್ನಲು ಕೊಡುತಿದ್ದರು. ಆದರೆ ಆ ಸಾಧುವು ಅವೆಲ್ಲವನ್ನೂ ಅಮೃತವೆಂದೇ ಭಾವಿಸಿ ತಿನ್ನುತ್ತಿದ್ದನು. (ಶ್ಲೋಕ 8-11)

ಹೀಗೆಯೇ ಇರುವಾಗ ಒಂದು ಬಾರಿ ಅಧರ್ಮಿಷ್ಠರಾದ ದರೋಡೆ ಗಾರರ ತಂಡದ ನಾಯಕನೊಬ್ಬನು–'ತನಗೆ ಪುತ್ರನು ಹುಟ್ಟಲಿ'–ಎಂಬ ಹರಕೆ ಯಿಂದ ಅದಕ್ಕಾಗಿ ಭದ್ರಕಾಳಿಗೆ ನರಬಲಿಯನ್ನು ಕೊಡುವುದಾಗಿ ಸಂಕಲ್ಪ

ಮಾಡಿದನು. ಆತನು ಬಲಿಕೊಡುವುದಕ್ಕಾಗಿ ಹಿಡಿದುಹಾಕಿದ್ದ ಒಂದು ಮನುಷ್ಯರೂಪದ ಪಶುವು ದೈವವಶದಿಂದ ಸೆರೆಯಿಂದ ತಪ್ಪಿಸಿಕೊಂಡು ಓಡಿಹೋಯಿತು. ಆ ಪಶುವನ್ನು ಹುಡುಕಲು ನಾಯಕನ ಸೇವಕರು ನಾಲ್ಕು ಕಡೆಗಳಲ್ಲಿಯೂ ಓಡಾಡಿದರು. ಆದರೆ ಕಗ್ಗತ್ತಲೆ ಕವಿದಿದ್ದ ಅರ್ಧರಾತ್ರಿಯಲ್ಲಿ ಆ ಪಶುವು ಎಲ್ಲಿಯೂ ಸಿಕ್ಕಲಿಲ್ಲ. ಅದೇ ಸಮಯದಲ್ಲಿ ದೈವಯೋಗದಿಂದ ಅವರ ದೃಷ್ಟಿಯು ಅಕಸ್ಮಾತ್ತಾಗಿ ಹೊಲ-ಗದ್ದೆಗಳನ್ನು ಜಿಂಕೆ-ಹಂದಿಗಳೇ ಮುಂತಾದ ಪ್ರಾಣಿಗಳಿಂದ ರಕ್ಷಿಸುವುದಕ್ಕೋಸ್ಕರ ವೀರಾಸನದಲ್ಲಿ ಕುಳಿತಿದ್ದ ಆ ಆಂಗಿರಸಗೋತ್ರದ ಬ್ರಾಹ್ಮಣಕುಮಾರ ಭರತನ ಮೇಲೆ ಬಿದ್ದಿತು. 'ಇದು ತುಂಬಾ ಒಳ್ಳೆಯ ಲಕ್ಷಣಗಳಿಂದ ಕೂಡಿದ ಪಶುವಾಗಿದೆ. ಇದರಿಂದ ನಿಜವಾಗಿಯೂ ನಮ್ಮ ಒಡೆಯನ ಕಾರ್ಯವು ನೆರವೇರುವುದು'–ಎಂಬ ಭಾವನೆಯಿಂದ ಅವರ ಮುಖವು ಪರಮಾನಂದದಿಂದ ಅರಳಿತು. ಒಡನೆಯೇ ಅವರು ಆತನನ್ನು ಹಗ್ಗಗಳಿಂದ ಕಟ್ಟಿ ಚಂಡೀದೇವಿಯ ದೇವಾಲಯಕ್ಕೆ ಒಯ್ದರು. ಅನಂತರ ಆ ಕಳ್ಳರು ತಮ್ಮ ಪದ್ಧತಿಯಂತೆ ಆತನಿಗೆ ವಿಧಿಪೂರ್ವಕವಾಗಿ ಸ್ನಾನಮಾಡಿಸಿ, ಹೊಸಬಟ್ಟೆಗಳನ್ನು ಉಡಿಸಿ, ಬಗೆ-ಬಗೆಯ ಒಡವೆಗಳಿಂದಲೂ, ಗಂಧವೇ ಮುಂತಾದ ಲೇಪಗಳಿಂದಲೂ, ಮಾಲೆ, ತಿಲಕ ಮುಂತಾದುವುಗಳಿಂದಲೂ ಅಲಂಕಾರಮಾಡಿದರು. ಅನಂತರ ಧೂಪ, ದೀಪ, ಮಾಲೆ, ಅರಳು, ಎಲೆ, ಧಾನ್ಯದ ಮೊಳಕೆ ಮತ್ತು ಹಣ್ಣು–ಮುಂತಾದ ಪೂಜಾಸಾಮಗ್ರಿಗಳೊಡನೆ ಬಲಿದಾನದ ವಿಧಿಯಂತೆ ಹಾಡುಗಳನ್ನು ಹಾಡುತ್ತಾ ದೇವಿಯನ್ನು ಸ್ತುತಿಸುತ್ತಾ ಮೃದಂಗ-ಡೋಲು ಮುಂತಾದ ವಾದ್ಯಗಳನ್ನು ಮೊಳಗಿಸಿ ಶಬ್ದಮಾಡುತ್ತಾ ಮಹಾವೈಭವದಿಂದ ಆ ನರಪಶುವನ್ನು ಭದ್ರಕಾಳಿಯ ಮುಂದೆ ತಲೆಬಾಗಿಸಿ ಕುಳ್ಳಿರಿಸಿದರು. ಅನಂತರ ಆ ತಂಡದ ನಾಯಕನ ಪುಂಡನಾದ ಪುರೋಹಿತನು ಆ ನರಪಶುವಿನ ರಕ್ತದಿಂದ ದೇವಿಯನ್ನು ತೃಪ್ತಿಪಡಿಸುವುದಕ್ಕೋಸ್ಕರ ದೇವೀಮಂತ್ರಗಳಿಂದ ಅಭಿಮಂತ್ರಿಸಲ್ಪಟ್ಟ ಒಂದು ತೀಕ್ಷ್ಣವಾದ ಕತ್ತಿಯನ್ನು ಎತ್ತಿಕೊಂಡನು. ಅವರು ಮೊದಲೇ ದರೋಡೆಗಾರರಾಗಿ ಸ್ವಾಭಾವಿಕವಾಗಿಯೇ ರಜೋಗುಣಪ್ರವೃತ್ತಿಯುಳ್ಳವರು. ಅಲ್ಲದೇ ಹಣದ ಅಹಂಕಾರದಿಂದ ಅವರ ಚಿತ್ತವು ಮತ್ತೂ ಮತ್ತೇರಿತ್ತು. ಆ ಸಮಯದಲ್ಲಿ ಅವರು ಶ್ರೀಭಗವಂತನ

ಅಂಶಸ್ವರೂಪನಾದ ಒಬ್ಬ ಬ್ರಾಹ್ಮಣೋತ್ತಮನನ್ನು ತಿರಸ್ಕರಿಸಿ ಮನಸೋ ಇಚ್ಛೆಯಿಂದ ದುರ್ಮಾರ್ಗದ ಕಡೆಗೆ ಮುನ್ನುಗ್ಗಿದ್ದರು. ಆದರೆ ಅಂತಹ ಸಮಯಗಳಲ್ಲಿ ಶಾಸ್ತ್ರಗಳಲ್ಲಿ ಬ್ರಾಹ್ಮಣನ ವಧೆಯನ್ನು ಪೂರ್ಣವಾಗಿ ನಿಷೇಧ ಮಾಡಿದೆ. ಅದರ ಮೇಲೂ ಈತನು ಸಾಧಾರಣಬ್ರಾಹ್ಮಣನಾಗಿರಲಿಲ್ಲ. ಪರಬ್ರಹ್ಮಭಾವವನ್ನೇ ಪಡೆದಿದ್ದ, ವೈರರಹಿತನಾಗಿ ಸಮಸ್ತಪ್ರಾಣಿಗಳಲ್ಲಿಯೂ ಸೌಹಾರ್ದವನ್ನು ಹೊಂದಿದ್ದ ಬ್ರಹ್ಮರ್ಷಿಕುಮಾರನು. ಆತನನ್ನೇ ಇವರು ಬಲಿಕೊಡಲು ಹೊರಟಿದ್ದರು. ಆ ಭಯಂಕರವಾದ ಕುಕರ್ಮವನ್ನು ಕಂಡು, ಭದ್ರಕಾಳೀದೇವಿಯ ಶರೀರದಲ್ಲಿ ತಡೆಯಲು ಅಸಾಧ್ಯವಾದ ಭರತನ ಬ್ರಹ್ಮ ತೇಜಸ್ಸಿನ ತಾಪವು ತುಂಬಿ ಆಕೆಯು ಇದ್ದಕ್ಕಿದ್ದಂತೆಯೇ ಮೂರ್ತಿಯನ್ನು ಒಡೆದುಕೊಂಡು ಬಂದು ಅಲ್ಲಿ ಪ್ರಕಟವಾಗಿಬಿಟ್ಟಳು. ಕಡುರೋಷದಿಂದಲೂ, ಅಸಹನೆಯಿಂದಲೂ ಆಕೆಯ ಹುಬ್ಬುಗಳು ಮೇಲೆದ್ದು ಗಂಟುಹಾಕಿಕೊಂಡಿದ್ದುವು. ಕರಾಳವಾದ ಕೋರೆದಾಡೆಗಳು ಹೊರಗೆ ಚಾಚಿಕೊಂಡಿದ್ದುವು. ಜೊತೆಗೆ ಕಣ್ಣುಗಳೂ ಕಡುಕೆಂಪಾಗಿ ಆಕೆಯ ಮುಖವು ಅತ್ಯಂತಭೀಕರ ವಾಗಿದ್ದುದು. ಆಕೆಯ ಆ ಕರಾಳವಾದ ರೂಪವನ್ನು ನೋಡಿ ಆಕೆಯು ಈ ಜಗತ್ತನ್ನೇ ಸಂಹರಿಸಿಬಿಡುವಳೋ ಎಂಬಂತೆ ಕಾಣುತ್ತಿದ್ದಳು. ದೇವಿಯು ರೋಷಾವೇಶದಿಂದ ಗಟ್ಟಿಯಾಗಿ ಅಟ್ಟಹಾಸಮಾಡಿ ಪುರೋಹಿತನ ಕೈಯ್ಯಿಂದ ಅಭಿಮಂತ್ರಿತವಾಗಿದ್ದ ಆ ಖಡ್ಗವನ್ನು ಕಿತ್ತುಕೊಂಡು ಅದರಿಂದಲೇ ಆ ಎಲ್ಲ ಪಾಪಿಗಳ ತಲೆಗಳನ್ನೂ ಕಡಿದು ಹಾರಿಸಿಬಿಟ್ಟಳು ಮತ್ತು ತನ್ನ ಗಣಗಳೊಡನೆ ಆ ದುಷ್ಟರ ಕುತ್ತಿಗೆಗಳಿಂದ ಹರಿಯುತ್ತಿದ್ದ ಬಿಸಿ-ಬಿಸಿರಕ್ತರೂಪದ ಮದ್ಯವನ್ನು ಕುಡಿದು ಹುಚ್ಚೇರಿ ಗಟ್ಟಿಯಾಗಿ ಹಾಡುತ್ತಾ ಕುಣಿದುಕುಪ್ಪಳಿಸುತ್ತಾ ಅವರ ತಲೆ ಬುರುಡೆಗಳನ್ನು ಚೆಂಡಾಡಿದಳು. (ಶ್ಲೋಕ 12-18)

ಏವಮೇವ ಖಲು ಮಹದಭಿಚಾರಾತಿಕ್ರಮಃ ಕಾರ್ತ್ಸ್ನ್ಯೇನಾ-ತ್ಮನೇ ಫಲತಿ ॥೧೯॥

ಮಹಾಪುರುಷರಿಗೆ ಅತ್ಯಾಚಾರದ ಅಪಚಾರವನ್ನೆಸಗಿದರೆ ಅದು ಹೀಗೆಯೇ ಅದನ್ನು ಮಾಡಿದವನ ಮೇಲೆಯೇ ಬಂದು ಎರುಗುವುದು. ಇದು ಸತ್ಯ.

ನ ವಾ ಏತದ್ವಿಷ್ಣುದತ್ತ ಮಹದದ್ಭುತಂ ಯದಸಮ್ಭ್ರಮಃ ಸ್ವಶಿರಶ್ಛೇದನ ಆಪತಿತೇಽಪಿ ವಿಮುಕ್ತದೇಹಾದ್ಯಾತ್ಮಭಾವಸುದೃಢ-ಹೃದಯಗ್ರನ್ಥೀನಾಂ ಸರ್ವಸತ್ತ್ವಸುಹೃದಾತ್ಮನಾಂ ನಿರ್ವೈರಾಣಾಂ ಸಾಕ್ಷಾದ್ಭಗವತಾನಿಮಿಷಾರಿವರಾಯುಧೇನಾಪ್ರಮತ್ತೇನ ತೈಸ್ತೈರ್ಭಾವೈಃ ಪರಿರಕ್ಷ್ಯಮಾಣಾನಾಂ ತತ್ಪಾದಮೂಲಮಕುತಶ್ಚಿದ್ಭಯಮುಪಸೃತಾನಾಂ ಭಾಗವತಪರಮಹಂಸಾನಾಮ್ ॥೨೦॥

ವಿಷ್ಣುದತ್ತಮಹಾರಾಜ! ದೇಹಾಭಿಮಾನವೆಂಬ ದೃಢವಾದ ಹೃದ ಯದ ಗಂಟು ಬಿಚ್ಚಿಹೋಗಿ, ಸಮಸ್ತಪ್ರಾಣಿಗಳಿಗೂ ಗೆಳೆಯನಾಗಿ, ಆತ್ಮಭೂತನಾಗಿ ವೈರರಹಿತನಾಗಿರುವ ಯಾರನ್ನು ಶ್ರೀಭಗವಂತನೇ–ಭದ್ರ ಕಾಳಿಯೇ ಮುಂತಾದ ನಾನಾರೂಪಗಳನ್ನು ಧರಿಸಿ-ಎಂದಿಗೂ ಗುರಿತಪ್ಪ ದಿರುವ ಕಾಲಚಕ್ರವೆಂಬ ಶ್ರೇಷ್ಠವಾದ ಶಸ್ತ್ರದಿಂದ ರಕ್ಷಿಸುತ್ತಾನೆಯೋ, ಯಾರು ಶ್ರೀಭಗವಂತನ ನಿರ್ಮಲವಾದ ಅಡಿದಾವರೆಗಳ ಆಸರೆಯನ್ನು ಪಡೆದಿರು ವರೋ–ಅಂತಹ ಭಗವದ್ಭಕ್ತಶಿರೋಮಣಿಗಳಾದ ಪರಮಹಂಸರಿಗೆ ತಮ್ಮ ತಲೆಯು ಕತ್ತರಿಸಿಹೋಗುವ ಕಾಲವು ಬಂದರೂ ಯಾವ ರೀತಿಯ ಕಳವಳವೂ ಉಂಟಾಗುವುದಿಲ್ಲವೆಂಬುದರಲ್ಲಿ ಅದ್ಭುತವೇನೂ ಇಲ್ಲ."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಪಂಚಮಸ್ಕಂಧದ ೯ನೆಯ ಅಧ್ಯಾಯವು ಮುಗಿಯಿತು.

ಪಂಚಮಸ್ಕಂಧ ೧೦ನೆಯ ಅಧ್ಯಾಯ

ಜಡಭರತ ಮತ್ತು ರಹೂಗಣರಾಜರ ಭೇಟಿ

ಶ್ರೀಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಜಡಭರತನ ಉಪಾಖ್ಯಾನ ವನ್ನು ಮುಂದುವರಿಸುತ್ತಾ ಹೀಗೆಂದರು :

ಅಥ ಸಿನ್ಧುಸೌವೀರಪತೇ ರಹೂಗಣಸ್ಯ ವ್ರಜತ ಇಕ್ಷುಮತ್ಯಾ- ಸ್ತಟೇ ತತ್ಕುಲಪತಿನಾ ಶಿಬಿಕಾವಾಹಪುರುಷಾನ್ವೇಷಣಸಮಯೇ ದೈವೇನೋಪಸಾದಿತಃ ಸ ದ್ವಿಜವರ ಉಪಲಬ್ಧ ಏಷ ಪೀವಾಯುವಾ ಸಂಹನನಾಙ್ಗೋ ಗೋಖರವದ್ಧುರಂ ವೋಢುಮಲಮಿತಿ ಪೂರ್ವ-

ವಿಷ್ಟಿಗೃಹೀತೈಃ ಸಹ ಗೃಹೀತಃ ಪ್ರಸಭಮತದರ್ಹ ಉವಾಹ ಶಿಬಿಕಾಂ ಸ ಮಹಾನುಭಾವಃ ॥೧॥

"ಮಹಾರಾಜನೇ! ಕೇಳು. ಒಂದು ಸಲ ಸಿಂಧು-ಸೌವೀರದೇಶಗಳ ಒಡೆಯನಾಗಿದ್ದ ರಹೂಗಣಮಹಾರಾಜನು ಪಲ್ಲಕ್ಕಿಯನ್ನೇರಿ ಹೋಗುತ್ತಿದ್ದಾಗ ದಾರಿಯಲ್ಲಿ ಇಕ್ಷುಮತೀನದಿಯ ತೀರದಲ್ಲಿ ಪಲ್ಲಕ್ಕಿಹೊರುವ ಬೋಯಿಗಳ ನಾಯಕನಿಗೆ ಒಬ್ಬ ಬೋಯಿಯ ಆವಶ್ಯಕತೆಯು ಒದಗಿತು. ಅದಕ್ಕಾಗಿ ಬೋಯಿಗಳನ್ನು ಹುಡುಕುತ್ತಿರುವಾಗ ದೈವವಶದಿಂದ ಆತನಿಗೆ ಬ್ರಾಹ್ಮಣಶ್ರೇಷ್ಠನಾದ ಆ ಜಡಭರತನು ಸಿಕ್ಕಿದನು. "ಈ ಮನುಷ್ಯನು ಹೃಷ್ಟ-ಪುಷ್ಟನಾಗಿ ದೃಢಕಾಯನಾಗಿದ್ದಾನೆ. ತರುಣನಾಗಿದ್ದಾನೆ. ಇವನ ಅಂಗಗಳೂ ಗಟ್ಟಿ-ಮುಟ್ಟಾಗಿವೆ. ಆದ್ದರಿಂದ ಈತನು ಎತ್ತು-ಕತ್ತೆಗಳಂತೆ ಭಾರವನ್ನು ಚೆನ್ನಾಗಿ ಹೊರಬಲ್ಲನು'–ಎಂದು ಯೋಚಿಸಿ ಆತನು ಬಿಟ್ಟೀ ಕೆಲಸಕ್ಕೆ ಸಿಕ್ಕಿಕೊಂಡಿದ್ದ ಇತರ ಬೋಯಿಗಳ ಜೊತೆಗೆ ಭರತನನ್ನೂ ಬಲಾತ್ಕಾರವಾಗಿ ಹಿಡಿದುಕೊಂಡು ಆತನ ಮೇಲೆ ಪಲ್ಲಕ್ಕಿಯನ್ನು ಹೊರೆಸಿಬಿಟ್ಟನು. ಮಹಾತ್ಮನಾದ ಭರತನು ಯಾವ ರೀತಿಯಲ್ಲಿಯೂ ಇಂತಹ ಕೆಲಸಕ್ಕೆ ಯೋಗ್ಯನಾಗಿರಲಿಲ್ಲ. ಆದರೂ ಆತನು ಏನೂ ಮರುಮಾತನ್ನಾಡದೇ ಸುಮ್ಮನೇ ಪಲ್ಲಕ್ಕಿಯನ್ನು ಹೊತ್ತು ನಡೆದನು.

ಬ್ರಾಹ್ಮಣಶ್ರೇಷ್ಠನು ಇತರ ಬೋಯಿಗಳೊಡನೆ ಹೊಂದಿಕೆಯಾಗುವಂತೆ ಸರಿಯಾಗಿ ಹೆಜ್ಜೆಗಳನ್ನಿಡುತ್ತಿರಲಿಲ್ಲ. ತನ್ನ ಕಾಲುಗಳ ಕೆಳಗೆ ಸಿಕ್ಕಿ ಹಾಕಿಕೊಂಡು ಯಾವುದೇ ಪ್ರಾಣಿಯೂ ಹಿಂಸೆಗೊಳಗಾಗದಿರಲೆಂದು ಆ ಮಹಾತ್ಮನು ಮುಂದು-ಮುಂದಕ್ಕೆ ಒಂದು ಬಾಣದಷ್ಟು ದೂರ ನೆಲವನ್ನು ನೋಡಿಕೊಂಡು ಅಡಿಯಿಡುತ್ತಿದ್ದನು. ಹೀಗೆ ಬೋಯಿಗಳ ನಡಿಗೆಯಲ್ಲಿ ಸಮತೆಯು ಬರದೇ ಅಡ್ಡಾದಿಡ್ಡಿಯಾದದ್ದರಿಂದ ಪಲ್ಲಕ್ಕಿಯು ಹೇಗೋ-ಹೇಗೋ ಅಳ್ಳಾಡತೊಡಗಿ ಒಳಗಿದ್ದ ರಾಜನಿಗೆ ತೊಂದರೆಯಾಗಲು ಆತನು ಆ ಪಲ್ಲಕ್ಕಿಹೊರುವವರನ್ನು–'**ವೋಢಾರಃ! ಸಾಧ್ವತಿಕ್ರಮತ ಕಿಮಿತಿ ವಿಷಮಮುಹ್ಯತೇ ಯಾನಮ್?**' 'ಎಲೈ ಬೋಯಿಗಳೇ! ಸರಿಯಾಗಿ ನಡೆಯಿರಿ. ಏಕೆ ಪಲ್ಲಕ್ಕಿಯನ್ನು ಮೇಲಕ್ಕೂ ಕೆಳಕ್ಕೂ ಮಾಡುತ್ತಾ ಹೆಜ್ಜೆ

ಹಾಕುತ್ತಿದ್ದೀರಿ?’–ಎಂದು ಆಕ್ಷೇಪಿಸಿದನು. ರಾಜನ ಆ ಆಕ್ಷೇಪವಾಕ್ಯವನ್ನು ಕೇಳಿ ತಮಗೆ ಶಿಕ್ಷೆಯಾದೀತೆಂದು ಹೆದರಿ ಬೋಯಿಗಳು–‘ಮಹಾಪ್ರಭುಗಳೇ! ನಾವೇನೂ ಮೈಮರೆತಿಲ್ಲ. ತಮ್ಮ ನಿಯಮ-ಮರ್ಯಾದೆಗಳಿಗೆ ಅನುಗುಣವಾಗಿ ಸರಿಯಾಗಿಯೇ ಪಲ್ಲಕ್ಕಿಯನ್ನು ಸಾಗಿಸುತ್ತಿದ್ದೇವೆ. ಆದರೆ ಈ ಹೊಸ ಬೋಯಿಯು ಈಗ ತಾನೇ ಪಲ್ಲಕ್ಕಿಯನ್ನು ಹೊರಲು ನೇಮಿಸಲ್ಪಟ್ಟಿದ್ದರೂ ಬೇಗ-ಬೇಗನೆ ನಡೆಯುತ್ತಿಲ್ಲ. ನಾವು ಈತನೊಡನೆ ಪಲ್ಲಕ್ಕಿಯನ್ನು ಹೊರಲಾರೆವು’–ಎಂದು ಆತನಲ್ಲಿ ವಿಜ್ಞಾಪಿಸಿದರು. ಬೋಯಿಗಳ ಆ ದೀನವಾದ ಮಾತುಗಳನ್ನು ಕೇಳಿ ರಹೂಗಣರಾಜನು ಹೀಗೆ ಯೋಚನೆಮಾಡಿದನು : “ಸಂಸರ್ಗದಿಂದುಂಟಾಗುವ ದೋಷವು ಒಬ್ಬನಲ್ಲಿ ಇದ್ದರೂ ಆತನೊಡನೆ ಸಂಬಂಧವನ್ನಿಟ್ಟುಕೊಂಡಿರುವ ಎಲ್ಲ ಮನುಷ್ಯರಿಗೂ ಹರಡುವುದು. ಆದುದರಿಂದ ಇದಕ್ಕೆ ಪ್ರತೀಕಾರವನ್ನು ಮಾಡದೇ ಇದ್ದರೆ ಎಲ್ಲ ಬೋಯಿಗಳ ನಡೆಯೂ ಕೆಟ್ಟುಹೋಗುವುದು.’ ಈ ರೀತಿಯಲ್ಲಿ ಯೋಚಿಸಿದ ರಾಜನಿಗೆ ಸ್ವಲ್ಪ ಕೋಪವೂ ಉಂಟಾಯಿತು. ಆ ರಹೂಗಣರಾಜನು ಮಹಾಪುರುಷರ ಸೇವೆಮಾಡಿದ್ದವನು. ಆದರೂ ಕ್ಷತ್ರಿಯಸ್ವಭಾವಕ್ಕೆ ವಶವಾದ ಆತನ ಬುದ್ಧಿಯನ್ನು ಬಲಾತ್ಕಾರವಾಗಿ ರಜೋಗುಣವು ಆಕ್ರಮಿಸಿಕೊಂಡಿತು. ಆಗ ಆತನು–ಬೂದಿಯಿಂದ ಮುಚ್ಚಲ್ಪಟ್ಟಿದ್ದ ಬೆಂಕಿಯಂತೆ ಬ್ರಹ್ಮತೇಜಸ್ಸು ಪ್ರಕಟವಾಗದೇ ಮರೆಗೊಂಡಿದ್ದ ಆ ಬ್ರಾಹ್ಮಣಶ್ರೇಷ್ಠನನ್ನು ಕುರಿತು ‘ಅಯ್ಯೋ ಪಾಪ! ನಿನಗೆ ತುಂಬಾ ಆಯಾಸವಾಗಿರಬೇಕು. ಯಾರ ಸಹಾಯವೂ ಇಲ್ಲದೇ ಬಹುದೂರ ಬಹುಕಾಲದವರೆಗೂ ನೀನೊಬ್ಬನೇ ಪಲ್ಲಕ್ಕಿಯನ್ನು ಹೊತ್ತು ಬಂದಿರುವೆ! ನಿನ್ನ ದೇಹವೂ ಅಷ್ಟೇನೂ ದಪ್ಪವಾಗಿಲ್ಲ. ಅಂಗಗಳೂ ದೃಢವಾಗಿಲ್ಲ. ಜೊತೆಗೆ ಮುಪ್ಪೂ ನಿನ್ನನ್ನೂ ಆಕ್ರಮಿಸಿ ಅದುಮಿಹಾಕಿದೆಯಲ್ಲವೇ?’–ಎಂದು ವ್ಯಂಗ್ಯವಾಗಿ ನುಡಿದನು. ಹೀಗೆ ಬಹಳಷ್ಟು ಕಟಕಿಯನ್ನು ರಾಜನು ನುಡಿದರೂ ಭರತಮಹಾಮುನಿಯು ಹಿಂದಿನಂತೆಯೇ ಸುಮ್ಮನೆ ಪಲ್ಲಕ್ಕಿಯನ್ನು ಹೊತ್ತು ನಡೆಯುತ್ತಿದ್ದನು. ರಾಜನ ಮಾತುಗಳನ್ನು ಆತನು ಸ್ವಲ್ಪವೂ ಕೆಟ್ಟುದಾಗಿ ಭಾವಿಸಲಿಲ್ಲ. ಏಕೆಂದರೆ : ಪಂಚಭೂತಗಳು, ಇಂದ್ರಿಯಗಳು ಮತ್ತು ಅಂತಃಕರಣಗಳ ಸಮುದಾಯವಾದ

ಆ ತನ್ನ ಕೊನೆಯ ಶರೀರವು ಅವಿದ್ಯೆಯ ಕಾರ್ಯವೇ ಆಗಿದೆಯೆಂದು ಆತನು ಅರಿತಿದ್ದನು. ಬಗೆ-ಬಗೆಯ ಅಂಗಗಳಿಂದ ಕೂಡಿರುವಂತೆ ಕಾಣಿಸುತ್ತಿದ್ದರೂ ಅದು ವಸ್ತುವೇ ಅಲ್ಲವೆಂದು ತಿಳಿದುಕೊಂಡಿದ್ದ ಆತನು ಅದರಲ್ಲಿ 'ನಾನು-ನನ್ನದು'–ಎಂಬ ಸುಳ್ಳುಭಾವನೆಯನ್ನು ಸಂಪೂರ್ಣವಾಗಿ ನೀಗಿ ಬ್ರಹ್ಮಭೂತನೇ ಆಗಿಬಿಟ್ಟಿದ್ದನು. ತಾನು ಅಷ್ಟು ಹೇಳಿದರೂ ಪಲ್ಲಕ್ಕಿಯು ಸರಿಯಾಗಿ ಹೋಗದೇ ಇರುವುದನ್ನು ಕಂಡು ರಾಜನು ಕ್ರೋಧದಿಂದ ಕೆಂಡವನ್ನು ಕಾರುತ್ತಾ ಆ ಭರತಮುನಿಯನ್ನು–'ಎಲ್ಲವೋ! ಇದೇನಿದು? ನೀನು ಜೀವಂತನಾಗಿದ್ದರೂ ಸತ್ತಿರುವೆಯಾ? ನನ್ನನ್ನು ತಿರಸ್ಕರಿಸಿ ನನ್ನ ಆಜ್ಞೆಯನ್ನು ಉಲ್ಲಂಘಿಸಿದ್ದೀಯೆ. ದಂಡಪಾಣಿಯಾದ ಯಮಧರ್ಮ ರಾಜನು ಜನರಿಗೆ ಅಪಾರಾಧಕ್ಕಾಗಿ ಶಿಕ್ಷೆಯನ್ನು ಕೊಡುವಂತೆ–ಪೊಗರಿನಿಂದ ಸೊಕ್ಕಿರುವ ನಿನಗೆ ನಾನು ಇದೋ ತಕ್ಕ ಚಿಕಿತ್ಸೆಯನ್ನು ಮಾಡುತ್ತೇನೆ. ಆಗ ನಿನಗೆ ಬುದ್ಧಿಯು ಸರಿಹೋಗುವುದು'–ಎಂದು ಗದರಿಸಿದನು.

ಹೀಗೆ ತಾನು ರಾಜನೆಂಬ ದುರಭಿಮಾನದಿಂದ ಕೂಡಿ ರಹೂಗಣನು ಮನಬಂದಂತೆ ಮಾತುಗಳನ್ನಾಡಿದನು. ತನ್ನನ್ನು ಮಹಾಪಂಡಿತನೆಂದು ಭಾವಿಸಿಕೊಂಡು ರಜೋಗುಣ-ತಮೋಗುಣಗಳಿಂದ ಕೂಡಿದ ಅಹಂಕಾರಕ್ಕೆ ವಶನಾಗಿ, ಶ್ರೀಭಗವಂತನ ಅನನ್ಯವಾದ ಪ್ರೇಮಕ್ಕೆ ಪಾತ್ರನಾಗಿದ್ದ, ಭಕ್ತಶ್ರೇಷ್ಠನಾದ ಭರತಮಹಾಮುನಿಯನ್ನು ತಿರಸ್ಕಾರಮಾಡಿದನು. ಯೋಗೇಶ್ವರರ ನಡೆಯು ಹೇಗಿರುತ್ತದೆ?–ಎಂಬುದರ ಪರಿಚಯವೇ ಆತನಿಗೆ ಸ್ವಲ್ಪವೂ ಇರಲಿಲ್ಲ. ಆತನ ಆ ಅಪಕ್ವವಾದ ಬುದ್ಧಿಯನ್ನು ನೋಡಿ, ಸಮಸ್ತಪ್ರಾಣಿಗಳಲ್ಲಿಯೂ ಸೌಹಾರ್ದತುಂಬಿದ ಆತ್ಮವುಳ್ಳವನಾಗಿ ಬ್ರಹ್ಮದಲ್ಲಿ ನೆಲೆಗೊಂಡಿದ್ದ ಆ ಬ್ರಾಹ್ಮಣೋತ್ತಮನು ನಸುನಕ್ಕು ಯಾವ ಬಗೆಯ ಅಭಿಮಾನವೂ ಇಲ್ಲದೇ ಆ ರಾಜನಿಗೆ ಹೀಗೆಂದನು : (ಶ್ಲೋಕ 2-8)

ತ್ವಯೋದಿತಂ ವ್ಯಕ್ತಮವಿಪ್ರಲಬ್ಧಂ
ಭರ್ತುಃ ಸ ಮೇ ಸ್ಯಾದ್ಯದಿ ವೀರ ಭಾರಃ ।
ಗನ್ತುರ್ಯದಿ ಸ್ಯಾದಧಿಗಮ್ಯಮಧ್ವಾ
ಪೀವೇತಿ ರಾಶೌ ನ ವಿದಾಂ ಪ್ರವಾದಃ ॥೯॥

"ಎಲೈ ವೀರನೇ! ನೀನು ಹೇಳಿದ್ದು ಸ್ಪಷ್ಟವಾಗಿದೆ. ಅದರಲ್ಲಿ ಮೋಸ

ವೇನೂ ಇಲ್ಲ. ಆದರೆ–“ಅಯ್ಯೋ ಪಾಪ! ನಿನಗೆ ಹೊರೆಯನ್ನು ಹೊತ್ತು ತುಂಬಾ ಭಾರವಾಗಿದೆ’–ಎಂದು ನನ್ನನ್ನು ಕುರಿತು ನೀನು ಹೇಳಿದ್ದು ಸರಿಯಲ್ಲ. ಏಕೆಂದರೆ : ನಾನು ಯಾವ ಹೊರೆಯನ್ನೂ ಹೊತ್ತಿಲ್ಲ. ಹೊರೆಯನ್ನು ಹೊತ್ತವನಿಗೆ ತಾನೇ ಭಾರವಾಗುವುದು? ‘ಮಾರ್ಗದಲ್ಲಿ ತುಂಬಾ ದೂರ ನಡೆದು ದಣಿವಾಗಿದೆ’–ಎಂದು ನನ್ನ ಬಗೆಗೆ ಹೇಳಿದ್ದು ಸರಿಯಲ್ಲ. ಏಕೆಂದರೆ : ನಾನು ತಲುಪಬೇಕಾದ ವಸ್ತುವು ಯಾವುದೂ ಇಲ್ಲ. ಯಾವುದಾದರೂ ವಸ್ತುವನ್ನು ತಲುಪಲು ಹೋಗುವವನಿಗೆ ತಾನೇ ಮಾರ್ಗವು ಬೇಕಾಗಿರುವುದು? ‘ನೀನು ದಪ್ಪನಾಗಿಲ್ಲ. ಕೃಶನಾಗಿದ್ದೀಯೆ ಪಾಪ!’–ಎಂದು ನನ್ನನ್ನು ಕುರಿತು ಹೇಳಿದ್ದೂ ಸರಿಹೊಂದುವುದಿಲ್ಲ. ಏಕೆಂದರೆ : ಈ ಹೊರೆಯ ಭಾರ, ನಡಿಗೆಯ ಮಾರ್ಗ, ದಪ್ಪನಾಗಿರುವಿಕೆ– ಮುಂತಾದುವುಗಳೆಲ್ಲಾ ಶರೀರಕ್ಕೆ ಮಾತ್ರವೇ ಅನ್ವಯಿಸುತ್ತವೆ. ಆತ್ಮನಿಗೆ ಅವು ಹೊಂದುವುದಿಲ್ಲ. ಆದುದರಿಂದ ಜ್ಞಾನಿಗಳು ಆತ್ಮನನ್ನು ಕುರಿತು ತಿಳಿಸುವಾಗ ಆ ವರ್ಣನೆಯನ್ನು ಮಾಡುವುದಿಲ್ಲ.

ಸ್ಥೌಲ್ಯಂ ಕಾರ್ಶ್ಯಂ ವ್ಯಾಧಯ ಆಧಯಶ್ಚ
ಕ್ಷುತ್ತೃಡ್ಭಯಂ ಕಲಿರಿಚ್ಛಾ ಜರಾ ಚ ।
ನಿದ್ರಾ ರತಿರ್ಮನ್ಯುರಹಂಮದಃ ಶುಚೋ
ದೇಹೇನ ಜಾತಸ್ಯ ಹಿ ಮೇ ನ ಸನ್ತಿ ॥೧೦॥

ದಪ್ಪನಾಗಿರುವಿಕೆ, ತೆಳ್ಳಗಿರುವಿಕೆ, ದೈಹಿಕ-ಮಾನಸಿಕರೋಗಗಳು, ಹಸಿವು-ಬಾಯಾರಿಕೆಗಳು, ಭಯ, ಧೈರ್ಯ, ಇಚ್ಛೆ, ಮುಪ್ಪು, ನಿದ್ರೆ, ಸ್ತ್ರೀ-ಪುರುಷರತಿ, ಕ್ರೋಧ, ದೈನ್ಯ, ಅಹಂಕಾರದ ಮದ ಮತ್ತು ದುಃಖಗಳು–ಈ ಎಲ್ಲವೂ ದೇಹಾಭಿಮಾನಸಹಿತವಾಗಿ ಹುಟ್ಟಿದವನಿಗೆ ಮಾತ್ರವೇ ಇರುವುವು. ಲೇಶಮಾತ್ರವೂ ದೇಹಾಭಿಮಾನವಿಲ್ಲದೇ ಇರುವ ನನ್ನನ್ನು ಕುರಿತು ‘ನೀನು ಸ್ಥೂಲನಾಗಿದ್ದೀಯೆ, ಕೃಶನಾಗಿಲ್ಲ’–ಎಂದು ಮೊದಲಾಗಿ ಏಕೆ ವಕ್ರೋಕ್ತಿಯನ್ನು ಹೇಳಿದೆ?

ಜೀವನ್ಮೃತತ್ವಂ ನಿಯಮೇನ ರಾಜ-
ನ್ನಾದ್ಯನ್ತವದ್ಯದ್ವಿಕೃತಸ್ಯ ದೃಷ್ಟಮ್ ।

ಸ್ವಸ್ವಾಮ್ಯಭಾವೋ ಧ್ರುವ ಈಡ್ಯ ಯತ್ರ
ತರ್ಹ್ಯುಚ್ಯತೇಽಸೌ ವಿಧಿಕೃತ್ಯಯೋಗಃ ॥೧೧॥

'ಬದುಕಿದ್ದರೂ ಸತ್ತವನು'–ಎಂದು ನನ್ನ ವಿಷಯವಾಗಿ ನೀನು ನಿಂದೆಯನ್ನು ನುಡಿದೆ. ಆದರೆ ಎಲೈ ರಾಜೇಂದ್ರನೇ! ಈ ಬದುಕುವುದು ಮತ್ತು ಸಾಯುವುದು ನನಗೊಬ್ಬನಿಗೇ ಅನ್ವಯಿಸುವ ವಿಷಯವಲ್ಲ. ವಿಕಾರ ಹೊಂದುವ ಎಲ್ಲ ಪದಾರ್ಥಗಳೂ ಬದುಕು-ಸಾವುಗಳನ್ನು ಹೊಂದಿವೆ. ಏಕೆಂದರೆ : ಅವೆಲ್ಲಕ್ಕೂ ಆದಿ-ಅಂತ್ಯಗಳುಂಟು. ಎಲೈ ಯಶಸ್ವಿಯೇ! ನೀನು ನನ್ನ ಸ್ವಾಮಿಯಾಗಿ, ನಾನು ನಿನ್ನ ಸೇವಕನಾಗಿರುವುದರಿಂದ–ನಾನು ನಿನ್ನ ಸೇವೆಮಾಡುವುದು ಕರ್ತವ್ಯ ಎಂದು ನೀನು ಭಾವಿಸಿ ಹೇಳಿದ್ದೂ ಸರಿಯಲ್ಲ. ಏಕೆಂದರೆ : ಈ ಸ್ವಾಮಿ-ಸೇವಕಭಾವವು ಸ್ಥಿರವಾಗಿದ್ದರೆ ನೀನು ಹೇಳಿದ್ದು ಸರಿಯಾಗುತ್ತಿತ್ತು. ಆದರೆ ಈ ಸ್ವಾಮಿ-ಸೇವಕಭಾವವೇ ಸ್ಥಿರವಲ್ಲ. ಈಗ ಸ್ವಾಮಿಯಾಗಿರುವವನು ಇನ್ನೊಮ್ಮೆ ಸೇವಕನಾಗಬಹುದು.

ವಿಶೇಷಬುದ್ಧೇರ್ವಿವರಂ ಮನಾಕ್ಚ
ಪಶ್ಯಾಮ ಯನ್ನ ವ್ಯವಹಾರತೋಽನ್ಯತ್ ।
ಕ ಈಶ್ವರಸ್ತತ್ರ ಕಿಮೀಶಿತವ್ಯಂ
ತಥಾಪಿ ರಾಜನ್ಕರವಾಮ ಕಿಂ ತೇ ॥೧೨॥

ಆದರೂ ಈಗ ನೀನು ನನಗೆ ಅರಸನಾಗಿ ನಾನು ನಿನ್ನ ಪ್ರಜೆಯಾಗಿರುವುದರಿಂದ ನಾನು ನಿನ್ನ ಸೇವೆಯನ್ನು ಮಾಡಬೇಕೆಂದು ನೀನು ಭಾವಿಸುವುದೂ ವಾಸ್ತವವಾಗಿ ಸರಿಯಲ್ಲ. ಏಕೆಂದರೆ : ಈ ರಾಜ ಮತ್ತು ಪ್ರಜೆ ಎಂಬ ಬುದ್ಧಿಗೆ ವ್ಯವಹಾರವು ಮಾತ್ರವೇ ಕಾರಣ. ಅದನ್ನು ಬಿಟ್ಟು ಬೇರಾವ ಕಾರಣವೂ ಸ್ವಲ್ಪವೂ ಇಲ್ಲ. ಪರಮಾರ್ಥದೃಷ್ಟಿಯಿಂದ ಸೇವಕನಾರು? ರಾಜನಾರು? ಆದರೂ ನಿನಗೆ ರಾಜತ್ವದ ಅಭಿಮಾನವಿದ್ದರೆ ಹೇಳು. ನಾನು ನಿನಗೆ ಏನು ಸೇವೆಮಾಡಲಿ?

ಉನ್ಮತ್ತಮತ್ತಜಡವತ್ಸ್ವಸಂಸ್ಥಾಂ
ಗತಸ್ಯ ಮೇ ವೀರ ಚಿಕಿತ್ಸಿತೇನ ।
ಅರ್ಥಃ ಕಿಯಾನ್ಭವತಾ ಶಿಕ್ಷಿತೇನ
ಸ್ತಬ್ಧಪ್ರಮತ್ತಸ್ಯ ಚ ಪಿಷ್ಟಪೇಷಃ ॥೧೩॥

"ಹುಚ್ಚಿನ ಅಮಲಿನಲ್ಲಿರುವ ನಿನಗೆ ತಕ್ಕ ಚಿಕಿತ್ಸೆಮಾಡಿ ಸರಿಪಡಿಸುವೆನು'–ಎಂದು ನನಗೆ ನುಡಿದೆಯಷ್ಟೇ! ನಿನ್ನ ಶಿಕ್ಷೆ-ಚಿಕಿತ್ಸೆಗಳಿಂದ ನನಗೆ ಯಾವ ಪ್ರಯೋಜನವೂ ಇಲ್ಲ. ಏಕೆಂದರೆ : ಬ್ರಹ್ಮಭಾವವನ್ನು ಪಡೆದು ವಿವೇಕಿಯಾಗಿರುವ ನಾನು ಹುಚ್ಚನಂತೆಯೂ, ಜಡನಂತೆಯೂ ಲೋಕಕ್ಕೆ ಕಾಣಿಸಿಕೊಳ್ಳುತ್ತಿದ್ದೇನೆ. ಇಂತಹ ನನಗೆ ದಂಡನೆಯ ಚಿಕಿತ್ಸೆಯನ್ನು ಮಾಡುವುದರಿಂದ ನಿನಗೇನು ಲಾಭ? ಮೂರ್ಖನನ್ನೂ, ಹುಚ್ಚನನ್ನೂ ಯಾವ ಚಿಕಿತ್ಸೆಯೂ ಯಾವ ದಂಡನೆಯೂ ಸರಿಪಡಿಸಲಾರದು. ನಾನೂ ನಿಜವಾಗಿಯೂ ಮೂರ್ಖನೋ, ಹುಚ್ಚನೋ ಆಗಿದ್ದರೆ ಆಗಲೂ ನೀನು ಕೊಡುವ ಶಿಕ್ಷಣಚಿಕಿತ್ಸೆಯು–ಹಿಟ್ಟನ್ನು ಮತ್ತೆ ಹಿಟ್ಟುಮಾಡಿದಂತೆ ವ್ಯರ್ಥ ಪ್ರಯತ್ನವೇ ಆಗುವುದಲ್ಲವೆ!"

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

"ಎಲೈ ಪರೀಕ್ಷಿತನೇ! ಕೇಳು. ಜಡಭರತಮಹಾಮುನಿಯು ರಾಜ ನಿಗೆ ಯಥಾರ್ಥವಾದ ತತ್ತ್ವವನ್ನು ಉಪದೇಶಮಾಡುತ್ತಾ ಇಷ್ಟು ಉತ್ತರ ಕೊಟ್ಟು ಮೌನವನ್ನು ತಾಳಿದನು. ದೇಹಾತ್ಮಬುದ್ಧಿಗೆ ಕಾರಣವಾದ ಅಜ್ಞಾನವನ್ನು ನೀಗಿದ್ದ ಮಹಾತ್ಮನು ಆ ಜಡಭರತ. ಆದ್ದರಿಂದ ಇಷ್ಟನ್ನು ಮಾತ್ರ ಹೇಳಿ ಆ ಜ್ಞಾನಿಶ್ರೇಷ್ಠನು ತನ್ನ ಪ್ರಾರಬ್ಧಕರ್ಮವನ್ನು ಕ್ಷಯಗೊಳಿಸುವುದಕ್ಕಾಗಿ ಮತ್ತೆ ಹಿಂದಿನಂತೆಯೇ ಪಲ್ಲಕ್ಕಿಯನ್ನು ಹೆಗಲಿನ ಮೇಲೆ ಹೊರತೊಡಗಿದನು. ಸಿಂಧು-ಸೌವೀರಪತಿಯಾದ ರಹೂಗಣರಾಜನೂ ಸತ್ಪುರುಷನೇ. ಉತ್ತಮವಾದ ಶ್ರದ್ಧೆಯನ್ನು ಹೊಂದಿದ್ದರಿಂದ ಆತನು ತತ್ತ್ವ ಜಿಜ್ಞಾಸೆಗೆ ಉತ್ತಮಾಧಿಕಾರಿಯೇ ಆಗಿದ್ದನು. ಅನೇಕಯೋಗಶಾಸ್ತ್ರಗಳಿಂದ ಸಮರ್ಥಿತವಾಗಿ ಹೃದಯದ ಅಜ್ಞಾನಗ್ರಂಥಿಯನ್ನು ಕತ್ತರಿಸುವ ಶಕ್ತಿಯನ್ನು ಹೊಂದಿದ್ದ ಆ ಬ್ರಾಹ್ಮಣೋತ್ತಮನ ವಚನವನ್ನು ಕೇಳಿ ಆ ರಾಜನು ಒಡನೆಯೇ ಪಲ್ಲಕ್ಕಿಯಿಂದ ಇಳಿದುಬಂದನು. ರಾಜತ್ವದ ಮದವು ಪೂರ್ಣವಾಗಿ ಇಳಿದು ಹೋಗಿ ಆತನು ಭರತಮುನೀಂದ್ರನ ಅಡಿಗಳಲ್ಲಿ ಮುಡಿಯನ್ನಿಟ್ಟು ತನ್ನ ಅಪರಾಧಕ್ಕಾಗಿ ಆತನಲ್ಲಿ ಕ್ಷಮೆಯನ್ನು ಬೇಡುತ್ತಾ ಹೀಗೆಂದನು :

"ಎಲೈ ಮಹಾತ್ಮರೇ! ವೇಷಾಂತರದಲ್ಲಿ ಸಂಚರಿಸುತ್ತಿರುವ ತಾವು

ಯಾರು? ಯಜ್ಞೋಪವೀತವನ್ನು ಧರಿಸಿರುವುದರಿಂದ ತಾವು ಬ್ರಾಹ್ಮಣರಿರಬೇಕು. ಆದರೆ ಬರೀ ಬ್ರಾಹ್ಮಣರಲ್ಲ. ಜ್ಞಾನಿಶ್ರೇಷ್ಠರಾದ ಯಾರೋ ಅವಧೂತರಿರಬೇಕು. ದತ್ತಾತ್ರೆಯರೇ ಮುಂತಾದ ಅವಧೂತರಲ್ಲಿ ತಾವು ಯಾರು? ಯಾರ ಪುತ್ರರು? ತಮ್ಮ ಜನ್ಮಸ್ಥಳ ಯಾವುದು? ಇಲ್ಲಿಗೆ ತಾವು ಹೇಗೆ ಪಾದಗಳನ್ನು ಬೆಳೆಯಿಸಿದಿರಿ? ನಮಗೆ ಮಂಗಳವನ್ನುಂಟು ಮಾಡುವುದಕ್ಕಾಗಿ ತಾವು ದಯಮಾಡಿಸಿದ್ದರೆ—ಶುದ್ಧಸತ್ತ್ವಮೂರ್ತಿಯಾದ ಭಗವಂತನಾದ ಸಾಕ್ಷಾತ್ ಕಪಿಲದೇವರೇ ತಾವಲ್ಲ ತಾನೇ? ನಾನು ಇಂದ್ರನ ವಜ್ರಾಯುಧಕ್ಕೆ ಹೆದರುವುದಿಲ್ಲ. ಮಹಾದೇವನ ತ್ರಿಶೂಲಕ್ಕೂ ಭಯ ಪಡುವುದಿಲ್ಲ. ಯಮರಾಜನ ದಂಡದಿಂದಲೂ ನನಗೆ ಅಂಜಿಕೆಯಿಲ್ಲ. ಅಗ್ನಿ, ಸೂರ್ಯ, ಚಂದ್ರ, ವಾಯು ಮತ್ತು ಕುಬೇರರ ಅಸ್ತ್ರ-ಶಸ್ತ್ರಗಳೂ ನನಗೆ ಭೀತಿಯನ್ನುಂಟುಮಾಡುವುದಿಲ್ಲ. ಆದರೆ ಬ್ರಾಹ್ಮಣಕುಲಕ್ಕೆ ಅವಮಾನ ವಾದರೆ ಅದಕ್ಕೆ ತುಂಬಾ ಭಯಪಡುತ್ತೇನೆ. ಆದ್ದರಿಂದ ಜ್ಞಾನಶಕ್ತಿಗಳು ಪೂರ್ಣವಾಗಿದ್ದರೂ ಅವುಗಳನ್ನು ಹೊರಪಡಿಸದೇ ಮೂಢರಂತೆ ಕಾಣುತ್ತಾ ಯಾರ ಸಂಗಕ್ಕೂ ಸೇರದೇ ಒಂಟಿಯಾಗಿ ಸಂಚಾರಮಾಡುತ್ತಿರುವ ತಾವು ಯಾರು? ತಮ್ಮ ಆಳವೇನು? ಎಂಬುದು ತಿಳಿಯುತ್ತಿಲ್ಲ. ಯೋಗ ತತ್ತ್ವದಿಂದ ಸಂಪನ್ನವಾಗಿರುವ ತಮ್ಮ ಮಾತುಗಳು ಬುದ್ಧಿಯಿಂದ ಎಷ್ಟು ಆಲೋಚಿಸಿ ದರೂ ಅರ್ಥವಾಗುತ್ತಿಲ್ಲ. ನನ್ನ ಸಂದೇಹವು ಹೋಗುತ್ತಿಲ್ಲ. ಈ ಲೋಕದಲ್ಲಿ ಶರಣುಹೊಂದುವುದಕ್ಕೆ ಯೋಗ್ಯವಾದ ಏಕೈಕ ವಸ್ತು ಯಾವುದು?—ಎಂಬುದನ್ನು ಕೇಳುವುದಕ್ಕಾಗಿ ನಾನು ಆತ್ಮಜ್ಞಾನಿಗಳಾದ ಮುನಿಗಳಿಗೆಲ್ಲಾ ಪರಮಗುರುಗಳಾಗಿ ಜ್ಞಾನಕಲೆಯಿಂದ ಅವತಾರ ಮಾಡಿರುವ ಸಾಕ್ಷಾತ್ ಶ್ರೀಹರಿಯಾಗಿರುವ ಭಗವಾನ್ ಕಪಿಲಮುನಿಗಳ ಬಳಿಗೆ ಹೋಗುತ್ತಿದ್ದೇನೆ. ಲೋಕಗಳ ಸ್ಥಿತಿಯನ್ನು ನೋಡುವುದಕ್ಕೋಸ್ಕರ ತಮ್ಮ ರೂಪವನ್ನು ಮರೆಸಿಕೊಂಡು ಓಡಾಡುತ್ತಿರುವ ಆ ಕಪಿಲಮುನಿಗಳೇ ತಾವು? ದಯೆಯಿಟ್ಟು ತಿಳಿಸೋಣವಾಗಲಿ. ಗೃಹದಲ್ಲಿ ಆಸಕ್ತನಾಗಿರುವ ಕುರುಡುಬುದ್ಧಿಯುಳ್ಳವನಿಗೆ ಯೋಗೇಶ್ವರರ ಗತಿಯನ್ನು ಹೇಗೆ ತಾನೇ ತಿಳಿಯಲು ಸಾಧ್ಯವಾದೀತು? (ಶ್ಲೋಕ 4-20)

'ನಾನು ಯಾವ ಹೊಣೆಯನ್ನೂ ಹೊರುತ್ತಿಲ್ಲ ; ಯಾವ ಶ್ರಮವೂ

ನನಗೆ ಆಗುತ್ತಿಲ್ಲ ; ನನಗೆ ನಡಿಗೆಯ ಮಾರ್ಗವೇ ಇಲ್ಲ'–ಎಂದು ತಾವು ಹೇಳೋಣವಾಯಿತು. ಅದು ಹೇಗೆಂಬುದು ತಿಳಿಯುತ್ತಿಲ್ಲ. ಯುದ್ಧವೇ ಮುಂತಾದ ಕರ್ಮಗಳನ್ನು ಮಾಡಿದಾಗ ನನಗೆ ಶ್ರಮವುಂಟಾಗಿದೆ. ಆಗ ಶ್ರಮವನ್ನು ನಾನು ಅನುಭವಿಸಿದ್ದೇನೆ. ಆದುದರಿಂದ ಹೊರೆಯನ್ನು ಹೊತ್ತಿರುವುದರಿಂದಲೂ ದಾರಿ ನಡೆದಿರುವುದರಿಂದಲೂ ತಮಗೂ ಆಯಾಸವಾಗಿರಬೇಕು–ಎಂಬುದನ್ನು ನಾನು ಊಹಿಸುತ್ತೇನೆ. ವ್ಯವಹಾರ ಮಾರ್ಗವೂ ಸತ್ಯವೆಂದೇ ನಾನು ತಿಳಿಯುತ್ತೇನೆ. ಏಕೆಂದರೆ : ಅದರಿಂದ ಅರ್ಥವು ಸಿದ್ಧಿಸುತ್ತದೆ. ಸುಳ್ಳು-ಸುಳ್ಳಾದ ಮಡಕೆಯಿಂದ ನೀರು ತರುವುದೇ ಮುಂತಾದ ಕಾರ್ಯಗಳು ಸಿದ್ಧಿಸಲಾರವಲ್ಲವೇ? ಹಾಗೆಯೇ ವ್ಯವಹಾರ ಮಾರ್ಗವು ಅಸತ್ಯವಾಗಿದ್ದರೆ ಅದರಿಂದ ಅರ್ಥಸಿದ್ಧಿಯಾಗುತ್ತಲೇ ಇರಲಿಲ್ಲ. ಆತ್ಮನಿಗೆ ಸ್ವರೂಪತಃ ಸುಖ-ದುಃಖಗಳು ಇಲ್ಲದಿದ್ದರೂ ದೇಹಸಂಬಂಧದಿಂದ ಸುಖ-ದುಃಖಗಳು ಉಂಟಾಗಲೇಬೇಕು. ಉದಾಹರಣೆಗೆ : ಒಲೆಯಲ್ಲಿ ಬೆಂಕಿಯು ಉರಿಯುತ್ತಿರುವಾಗ ಅದರ ಮೇಲೆ ಪಾಯಸಾನ್ನವನ್ನು ಪಾಕ ಮಾಡುವುದಕ್ಕಾಗಿ ಇಟ್ಟಾಗ ಅಗ್ನಿಯಿಂದ ಮೊದಲು ಪಾತ್ರೆಯು ಕಾಯುವುದು. ಅನಂತರ ಅದರಲ್ಲಿರುವ ಹಾಲು ಕುದಿಯುವುದು. ಬಳಿಕ ಅದರಲ್ಲಿರುವ ಅಕ್ಕಿಯ ಹೊರಭಾಗವೂ, ಕೊನೆಗೆ ಅದರ ಒಳಭಾಗವೂ ಬೆಂದು ಪಕ್ವವಾಗುವುದಲ್ಲವೇ? ಉಪಾಧಿಯ ಸಂಬಂಧದಿಂದ ಪಾತ್ರೆಯ ಒಳಗಿರುವ ಅಕ್ಕಿಗೂ ಬಿಸಿಯು ತಟ್ಟಿ ಅದು ಪಕ್ವವಾಗುವುದಲ್ಲವೇ? ಹಾಗೆಯೇ ದೇಹ, ಇಂದ್ರಿಯ, ಪ್ರಾಣ ಮತ್ತು ಮನಸ್ಸುಗಳ ಸಾನ್ನಿಧ್ಯದಿಂದ ಅವುಗಳ ಧರ್ಮಗಳಾದ ಶ್ರಮ–ಮುಂತಾದುವುಗಳ ಅನುಭವವೂ ಆತ್ಮನಿಗೆ ಆಗಲೇಬೇಕು. (ಶ್ಲೋಕ 21-22)

ಶಾಸ್ತಾಭಿಗೋಪ್ತಾ ನೃಪತಿಃ ಪ್ರಜಾನಾಂ
ಯಃ ಕಿಙ್ಕರೋ ವೈ ನ ಪಿನಷ್ಟಿ ಪಿಷ್ಟಮ್ ।
ಸ್ವಧರ್ಮಮಾರಾಧನಮಚ್ಯುತಸ್ಯ
ಯದೀಹಮಾನೋ ವಿಜಹಾತ್ಯಘೌಘಮ್ ॥೨೩॥

ರಾಜನು ಚಿಕಿತ್ಸೆಯ ರೂಪದಲ್ಲಿ ಅಪರಾಧಿಗಳಿಗೆ ದಂಡಾದಿಗಳನ್ನು ವಿಧಿಸುವುದು ವ್ಯರ್ಥವೆಂದು ತಾವು ಹೇಳಿದಿರಿ. ಆದರೆ ರಾಜನೆಂಬುವನು

ಪ್ರಜೆಗಳ ಶಾಸನಮಾಡುವುದು, ರಕ್ಷಣೆಮಾಡುವುದು–ಇವುಗಳಿಗಾಗಿಯೇ ನೇಮಿಸಲ್ಪಟ್ಟಿರುವ ದಾಸನು. ಹಾಗೆ ಮಾಡುವುದು ಆತನ ಸ್ವಧರ್ಮವಾಗಿದೆ. ಆತನು ಹುಚ್ಚರು, ಮೂರ್ಖರು ಮುಂತಾದವರಿಗೆ ದಂಡನೆಯನ್ನು ವಿಧಿಸುವುದು–ಹಿಟ್ಟನ್ನು ಮತ್ತೆ ಹಿಟ್ಟುಮಾಡುವಂತಹ ವ್ಯರ್ಥದ ಪ್ರಯತ್ನವಾಗುವುದಿಲ್ಲ. ಏಕೆಂದರೆ : ಧರ್ಮವನ್ನು ಆಚರಿಸುವುದು ಶ್ರೀಭಗವಂತನ ಸೇವೆಯೇ ಆಗಿದೆ. ಅದನ್ನು ಆಚರಿಸುವವನು ತನ್ನ ಸಮಗ್ರವಾದ ಪಾಪರಾಶಿಯನ್ನೂ ನೀಗಿಬಿಡುತ್ತಾನೆ.

ದೀನಬಂಧುಗಳಾದ ಮಹಾನುಭಾವರೇ! ನಾನು ರಾಜನೆಂಬ ಅಭಿಮಾನದ ಅಮಲಿನಲ್ಲಿ ತಮ್ಮಂತಹ ಪರಮಸಾಧುಗಳ ತಿರಸ್ಕಾರವನ್ನು ಮಾಡಿದ್ದೇನೆ. ತಾವು ಕೃಪಾದೃಷ್ಟಿಯನ್ನು ಹರಿಸಿ ನಾನು ಈ ಸಜ್ಜನ ತಿರಸ್ಕಾರವೆಂಬ ಪಾಪದಿಂದ ಬಿಡುಗಡೆಹೊಂದುವಂತೆ ಮಾಡಿರಿ. ತಾವೇನೋ ದೇಹಾಭಿಮಾನರಹಿತರು. ವಿಶ್ವಬಂಧುವಾದ ಸ್ವಾಮಿ ಶ್ರೀವಿಷ್ಣು ವಿನ ಅನನ್ಯಭಕ್ತರು. ಎಲ್ಲದರಲ್ಲಿಯೂ ಸಮದೃಷ್ಟಿಯನ್ನು ಹೊಂದಿರುವುದ ರಿಂದ ಮಾನ ಅಥವಾ ಅಪಮಾನಗಳಿಂದುಂಟಾಗುವ ಯಾವುದೇ ವಿಕಾರ ವನ್ನೂ ಹೊಂದದೇ ಇರುವವರು. ಆದರೂ ನನ್ನಂತಹವನು–ಶೂಲಪಾಣಿ ಯಾದ ಮಹೇಶ್ವರನಂತೆ ಸಮರ್ಥನಾಗಿದ್ದರೂ–ಮಹಾತ್ಮರಿಗೆ ಅವಮಾನ ಮಾಡಿದರೆ ಆ ದೋಷದಿಂದ ಸ್ವಲ್ಪಕಾಲದಲ್ಲಿಯೇ ನಾಶಹೊಂದಬೇಕಾಗುವುದು.”

(ಶ್ಲೋಕ 24-25)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಪಂಚಮಸ್ಕಂಧದ ೧೦ನೆಯ ಅಧ್ಯಾಯವು ಮುಗಿಯಿತು.

ಪಂಚಮಸ್ಕಂಧ ೧೧ನೆಯ ಅಧ್ಯಾಯ

ರಹೂಗಣನಿಗೆ ಭರತಮುನಿಯ ಜ್ಞಾನೋಪದೇಶ

ರಹೂಗಣಮಹಾರಾಜನು ವಿನಯದಿಂದ ಅರಿಕೆಮಾಡಿಕೊಂಡ ಸಂದೇಹಗಳಿಗೆ ಉತ್ತರವನ್ನು ನೀಡುತ್ತಾ ಭರತಮುನಿಯು ಹೀಗೆಂದನು :

ಅಕೋವಿದಃ ಕೋವಿದವಾದವಾದಾ-
ನ್ವದಸ್ಯಥೋ ನಾತಿವಿದಾಂ ವರಿಷ್ಠಃ ।
ನ ಸೂರಯೋ ಹಿ ವ್ಯವಹಾರಮೇನಂ
ತತ್ತ್ವಾವಮರ್ಶೇನ ಸಹಾಮನನ್ತಿ ॥೧॥

“ಎಲೈ ರಾಜನೇ! ನೀನು ಪಂಡಿತನಲ್ಲದಿದ್ದರೂ ಪಂಡಿತರಂತೆ ಪ್ರೌಢವಾದ ವಾದ-ವಿವಾದಗಳ ಮಾತುಗಳನ್ನಾಡುತ್ತಿದ್ದೀಯೆ. ಇಷ್ಟರಿಂದಲೇ ನೀನು ಜ್ಞಾನಿಶ್ರೇಷ್ಠನಾಗುವುದಿಲ್ಲ. ತತ್ತ್ವಜ್ಞಾನಿಗಳು ಅವಿಚಾರಕ್ಕೆ ಮಾತ್ರವೇ ರಮಣೀಯವಾಗಿ ಕಾಣುವ ಈ ಸ್ವಾಮಿ, ಸೇವಕ–ಮುಂತಾದ ವ್ಯವಹಾರಗಳನ್ನು ಪರಮಾರ್ಥದೊಡನೆ ಸೇರಿಸಿ ಹೇಳುವುದಿಲ್ಲ.*

ತಥೈವ ರಾಜನ್ನುರುಗಾರ್ಹಮೇಧ-
ವಿತಾನವಿದ್ಯೋರುವಿಜೃಮ್ಭಿತೇಷು ।
ನ ವೇದವಾದೇಷು ಹಿ ತತ್ತ್ವವಾದಃ
ಪ್ರಾಯೇಣ ಶುದ್ಧೋ ನು ಚಕಾಸ್ತಿ ಸಾಧುಃ ॥೨॥

ಗೃಹಸ್ಥಜನರಿಗೆ ಉಚಿತವಾಗಿರುವ–ಯಜ್ಞವಿಧಿಯ ವಿಸ್ತಾರದಲ್ಲಿಯೇ ಹೆಚ್ಚಾಗಿ ಆಸಕ್ತವಾಗಿರುವ ವೈದಿಕಕರ್ಮಕಾಂಡದ ಬಗೆಗೂ–ಇದೇ ಮಾತನ್ನೇ ಹೇಳಬೇಕಾಗುವುದು. ಪರಿಶುದ್ಧವಾದ ತತ್ತ್ವಜ್ಞಾನದ ಅಭಿವ್ಯಕ್ತಿಯು ಸಾಮಾನ್ಯವಾಗಿ ಆ ವೇದವಾದಗಳಲ್ಲಿಯೂ ಪೂರ್ಣವಾಗಿ ಆಗಿಲ್ಲ, ರಾಜನೇ![1]

ನ ತಸ್ಯ ತತ್ತ್ವಗ್ರಹಣಾಯ ಸಾಕ್ಷಾ-
ದ್ವರೀಯಸೀರಪಿ ವಾಚಃ ಸಮಾಸನ್ ।

---

* ರಹೂಗಣರಾಜನು ಭರತಮುನಿಯ ಮಾತುಗಳನ್ನು ತಪ್ಪಾಗಿ ಅರ್ಥಮಾಡಿಕೊಂಡಿದ್ದಾನೆ. ‘ನಡಿಗೆ, ಆಯಾಸ, ಸ್ಥೂಲತ್ವವೇ ಮುಂತಾದ ಧರ್ಮಗಳು ಸತ್ಯವಾಗಿದ್ದರೂ–ಅವು ವಾಸ್ತವವಾಗಿ ಶರೀರಧರ್ಮಗಳಾಗಿ ಶರೀರದಲ್ಲಿವೆಯೇ ಹೊರತು ಆತ್ಮನಲ್ಲಿಲ್ಲ’–ಎಂದು ಮುನಿಯು ಹೇಳಿದ್ದಕ್ಕೆ ರಾಜನು–‘ಪ್ರಪಂಚವು ಸತ್ಯವಲ್ಲ ;

---

[1] ಇಲ್ಲಿ ವೇದದ ಪೂರ್ವಭಾಗವಾದ ಕರ್ಮಕಾಂಡವನ್ನು ತತ್ತ್ವಪ್ರತಿಪಾದಕವಲ್ಲವೆಂದು ಏಕೆ ಕಡೆಗಣಿಸಿದೆ?–ಎಂದರೆ : ವೇದಾಂಗಶಾಸ್ತ್ರವನ್ನು ಪ್ರಶಂಸೆಮಾಡುವುದಕ್ಕಾಗಿ.

ಸ್ವಪ್ನೇ ನಿರುಕ್ತ್ಯಾ ಗೃಹಮೇಧಿಸೌಖ್ಯಂ
ನ ಯಸ್ಯ ಹೇಯಾನುಮಿತಂ ಸ್ವಯಂ ಸ್ಯಾತ್ ॥೩॥

ಈ ಗೃಹಸ್ಥಜನೋಚಿತವಾದ ಸುಖಗಳು ಕನಸಿನಂತೆ ಹೇಯವೆಂದು ಯಾವನಿಗೆ ತಿಳಿಯುವುದಿಲ್ಲವೋ–ಆತನಿಗೆ ತತ್ತ್ವಜ್ಞಾನವನ್ನುಂಟುಮಾಡುವುದಕ್ಕೆ ಶ್ರೇಷ್ಠತಮವಾದ ಉಪನಿಷದ್ವಾಣಿಗಳಿಗೂ ಸಾಧ್ಯವಿಲ್ಲ.

ಯಾವನ್ಮನೋ ರಜಸಾ ಪೂರುಷಸ್ಯ
ಸತ್ತ್ವೇನ ವಾ ತಮಸಾ ವಾನುರುದ್ಧಮ್ ।
ಚೇತೋಭಿರಾಕೂತಿಭಿರಾತನೋತಿ
ನಿರಙ್ಕುಶಂ ಕುಶಲಂ ಚೇತರಂ ವಾ ॥೪॥

ರಾಜೇಂದ್ರನೇ! ಮನಸ್ಸು ತ್ರಿಗುಣಗಳನ್ನು ದಾಟುವವರೆಗೂ ಮನುಷ್ಯನಿಗೆ ತತ್ತ್ವಜ್ಞಾನವುಂಟಾಗುವುದಿಲ್ಲ. ಎಲ್ಲ ಕರ್ಮಬಂಧನಗಳಿಗೂ

ಮಿಥ್ಯೆ'–ಎಂದು ಅಪಾರ್ಥಮಾಡಿಕೊಂಡು ಪ್ರಪಂಚವು ಸತ್ಯವೇ ಅಲ್ಲದೇ? ಎಂದು ಆಕ್ಷೇಪಮಾಡಿದ್ದಾನೆ. ಜೀವರಲ್ಲಿ ಸ್ವಾಮಿ, ಭೃತ್ಯ ಮುಂತಾದ ಭೇದವು ಶರೀರದ ಉಪಾಧಿಯಿಂದ ಬಂದದ್ದು ಎಂದು ಭರತಮುನಿಯು ಹೇಳಿದ್ದನ್ನು ಅಪಾರ್ಥಮಾಡಿಕೊಂಡು ಆ ಭೇದವು ಔಪಾಧಿಕವಲ್ಲ, ಸ್ವಾಭಾವಿಕವೇ ಆಗಿದೆ–ಎಂದು ವಾದಿಸುತ್ತಿದ್ದಾನೆ. ಅದಕ್ಕಾಗಿ ಭರತಮುನಿಯು ಆತನಿಗೆ– 'ಅಯ್ಯಾ ರಾಜನೇ! ಆಧ್ಯಾತ್ಮಪರಿಶೀಲನೆಯಿಂದ ಜೀವ, ಈಶ್ವರ ಮತ್ತು ಪ್ರಕೃತಿಗಳ ಯಾಥಾತ್ಮ್ಯವನ್ನು ತಿಳಿದ ಜ್ಞಾನಿಗಳಿಗೆ ದೇಹಾತ್ಮಭ್ರಾಂತಿಯಿಂದ ಉಂಟಾದ ಈ ವ್ಯವಹಾರದಲ್ಲಿ 'ಇದು ಅಸತ್'–ಎಂಬ ತಿಳಿವಳಿಕೆಯೂ ಇತರರಿಗೆ 'ಇದು ಸತ್ಯ' ಎಂಬ ಭಾವನೆಯೂ ಇರುತ್ತದೆ–ಎಂದು ಇಲ್ಲಿ ಬೋಧಿಸುತ್ತಾನೆ. '**ದೇಹಗತಾನಾಂ ಪರಿಶ್ರಮ-ಗಮನ-ಸೌಥಿಲ್ಯಾದೀನಾಂ ಸತ್ಯನಾಮೇವ ದೇಹಾತ್ಮಭ್ರಾನ್ತ್ಯಾ ಆತ್ಮನಿಪ್ರವೇಯಮಾನಾನಾಮಪಿ ಆತ್ಮನಿ ಅಭಾವೇ ನಿರಾಕ್ಷೇಪೇ ಮಯಾ ಅಭಿಹಿತೇ ಪ್ರಪಂಚಮಿಥ್ಯಾತ್ವಂ ಮಯಾ ಅಭಿಹಿತಂ**

ಪಾಮರರ ವ್ಯವಹಾರಗಳನ್ನು ಜನರು ಸತ್ಯವೆಂದು ತಿಳಿಯುವುದಕ್ಕೆ ಜೀವ, ಈಶ್ವರ ಮತ್ತು ಪ್ರಕೃತಿಗಳ ಸ್ವರೂಪವನ್ನು ಪ್ರತಿಪಾದಿಸುವ ವೇದಾಂತದ ಅರ್ಥವನ್ನು ವಿಚಾರಮಾಡದೇ ಇರುವುದೇ ಕಾರಣ. **ತತ್ರ ತೇಷಾಂ ತದಭಿಮಾನೇ ಹೇತುಃ ತತ್ತ್ವತ್ರಯಸ್ವರೂಪಸ್ವಭಾವಪ್ರತಿಪಾದಕವೇದಾನ್ತಶಾಸ್ತ್ರಾರ್ಥಪರಿಶೀಲನಮೇವೇತಿವಕ್ತುಂ ತಾವದ್ವೇದಾನ್ತಶಾಸ್ತ್ರಸ್ತುತಯೇ ಪೂರ್ವಭಾಗಸ್ಯ ಅತತ್ತ್ವಾವೇದಕತ್ವಮಾಹ**

(ವೀರರಾಘವೀಯ) (ಶ್ಲೋಕ ೨)

ಮನಸ್ಸೇ ಕಾರಣವು. ಅದು ಎಲ್ಲಿಯವರೆಗೆ ಸತ್ತ್ವಗುಣ, ರಜೋಗುಣ ಅಥವಾ ತಮೋಗುಣಗಳಿಗೇ ಅಧೀನವಾಗಿರುವುದೋ–ಅಲ್ಲಿಯವರೆಗೂ ನಿರಂಕುಶ ವಾಗಿ ಆತನ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳಿಂದ ಶುಭಾಶುಭ ಕರ್ಮಗಳನ್ನು ಮಾಡಿಸುತ್ತಲೇ ಇರುತ್ತದೆ.

ಸ ವಾಸನಾತ್ಮಾ ವಿಷಯೋಪರಕ್ತೋ
ಗುಣಪ್ರವಾಹೋ ವಿಕೃತಃ ಷೋಡಶಾತ್ಮಾ ।
ಬಿಭ್ರತ್ಪೃಥಙ್ನಾಮಭಿ ರೂಪಭೇದ-
ಮನ್ತರ್ಬಹಿಷ್ಟ್ವಂ ಚ ಪುರೈಸ್ತನೋತಿ ॥೫॥

ಈ ಮನಸ್ಸೆಂಬುದು ಭೂತಗಳು ಮತ್ತು ಇಂದ್ರಿಯಗಳು ಎಂಬ ಹದಿನಾರು ಕಲೆಗಳಲ್ಲಿ ಅತಿಮುಖ್ಯವಾದುದು. ಇದು ಧರ್ಮ-ಅಧರ್ಮ ಗಳೆಂಬ ವಾಸನೆಗಳಿಂದ ಕೂಡಿ ವಿಷಯಗಳಲ್ಲಿ ಆಸಕ್ತವಾಗಿ ತ್ರಿಗುಣಗಳ ಪ್ರವಾಹಕ್ಕೆ ತಕ್ಕಂತೆ ವಿಕಾರಗೊಳ್ಳುವುದು ; ಬಗೆ-ಬಗೆಯ ಹೆಸರುಗಳಿಂದ ದೇವತೆಗಳು, ಮನುಷ್ಯರು ಮುಂತಾದ ರೂಪಗಳನ್ನು ಪಡೆದು ಶರೀರಭೇದ ದಿಂದ ಜೀವನಲ್ಲಿ ಉಚ್ಚ-ನೀಚಭಾವಗಳನ್ನು ತೋರ್ಪಡಿಸುವುದು.

ದುಃಖಂ ಸುಖಂ ವ್ಯತಿರಿಕ್ತಂ ಚ ತೀವ್ರಂ
ಕಾಲೋಪಪನ್ನಂ ಫಲಮಾವ್ಯನಕ್ತಿ ।

ಇತಿ ಭ್ರಾಮ್ಯನ್..... ಜೀವಾನಾಂ ಮಿಥಃ ಸ್ವಸ್ವಾಮಿಭಾವಸ್ಯ ಔಪಾಧಿಕತ್ವಂ ಕಥಿತೇ ಪುನಸ್ತಸ್ಯ ಸ್ವಾಭಾವಿಕತ್ವಾಭಿಮಾನೇನ ಸ್ವಸ್ಯ ದಂಡನೇತೃತ್ವಂ ಸಾಧಯನ್'
(ವೀರರಾಘವೀಯ)

ಪ್ರಪಂಚವು ಮಿಥ್ಯೆಯೆಂದು ಸಾಧಿಸುವುದಕ್ಕೆ ದೃಶ್ಯತ್ವವೇ ಮುಂತಾದ ಕಾರಣಗಳನ್ನು ಕೆಲವರು ಹೇಳುತ್ತಾರೆ. ಆದರೆ ಅವು ಹೇತುಗಳಲ್ಲ. ಹೇತುವಿನಂತೆ ತೋರುವ ಹೇತ್ವಾಭಾಸಗಳು. ಇಂತಹ ಹೇತ್ವಾಭಾಸಗಳನ್ನು ಹೇಳುವ ರಹೂಗಣರಾಜನು ತಾರ್ಕಿಕರಲ್ಲೇ ಪ್ರವೀಣನಲ್ಲ. ಹೀಗಿರುವಾಗ ಜ್ಞಾನಿಗಳಲ್ಲಿ ಗಟ್ಟಿಗನಲ್ಲವೆಂಬುದನ್ನು ಬೇರೆ ಹೇಳಬೇಕೇ? (ವಿಜಯಧ್ವಜೀಯ)

ಭರತಮುನಿಯು ರಹೂಗಣನ ಮಾತುಗಳನ್ನು ಬಾಲಭಾಷಿತಗಳೆಂದು ತಿರಸ್ಕರಿಸಿ ಪ್ರಾಸಂಗಿಕವಾಗಿ ಮನಸ್ಸೇ ಬಂಧ ಮತ್ತು ಮೋಕ್ಷಗಳೆರಡಕ್ಕೂ ಮುಖ್ಯಕಾರಣವೆಂದು ಪ್ರತಿಪಾದಿಸುವುದೇ ಈ ಅಧ್ಯಾಯದ ಆಶಯ. (ಸಿದ್ಧಾಂತಚಂದ್ರಿಕಾ) (ಶ್ಲೋಕ ೧)

ಆಲಿಙ್ಗ್ಯ ಮಾಯಾರಚಿತಾನ್ತರಾತ್ಮಾ
ಸ್ವದೇಹಿನಂ ಸಂಸೃತಿಚಕ್ರಕೂಟಃ ॥೬॥

ಮಾಯಾಮಯವಾದ ಈ ಮನಸ್ಸೇ ಸಂಸಾರಚಕ್ರಕ್ಕೆ ಮೂಲವಾಗಿದೆ. ತನ್ನ ದೇಹದಲ್ಲಿ ಅಭಿಮಾನವುಳ್ಳ ಜೀವನೊಡನೇ ಸೇರಿಕೊಂಡು ಆಯಾ ಕಾಲಕ್ಕೆ ಅನುಗುಣವಾಗಿ ಅವಶ್ಯವಾಗಿ ಬರುವ ಸುಖವನ್ನಾಗಲೀ, ದುಃಖವನ್ನಾಗಲೀ, ಮೋಹವನ್ನಾಗಲೀ ಜೀವನಿಗೆ ಉಂಟುಮಾಡುವುದು.

ತಾವಾನಯಂ ವ್ಯವಹಾರಃ ಸದಾವಿಃ
ಕ್ಷೇತ್ರಜ್ಞಸಾಕ್ಷ್ಯೋ ಭವತಿ ಸ್ಥೂಲಸೂಕ್ಷ್ಮಃ ।
ತಸ್ಮಾನ್ಮನೋ ಲಿಙ್ಗಮದೋ ವದನ್ತಿ
ಗುಣಾಗುಣತ್ವಸ್ಯ ಪರಾವರಸ್ಯ ॥೭॥

ಮನಸ್ಸೇ ಈ ಸಂಸಾರಕ್ಕೆ ಮೂಲವಾದುದು. ಈ ಸಂಸಾರವು– 'ನಾನು ದಪ್ಪ, ನಾನು ಸಣ್ಣ'–ಎಂದು ಹೊರಗಿನ ಆಕಾರಗಳ ವಿಷಯವಾದಾಗ ಸ್ಥೂಲವೆನಿಸುವುದು. 'ನಾನು ಇಚ್ಛಿಸುತ್ತೇನೆ ; ನಾನು ದ್ವೇಷಿಸುತ್ತೇನೆ ; ನಾನು ಸುಖಿಯು ; ನಾನು ದುಃಖಿಯು'–ಎಂದು ಒಳಗಿನ ಆಕಾರಗಳ ವಿಷಯವಾದಾಗ ಸೂಕ್ಷ್ಮವೆನಿಸುವುದು. ಹೀಗೆ ಜಾಗ್ರದವಸ್ಥೆ ಮತ್ತು ಸ್ವಪ್ನಾವಸ್ಥೆಗಳಲ್ಲಿ ಸ್ಥೂಲ ಮತ್ತು ಸೂಕ್ಷ್ಮರೂಪವಾಗಿರುವ ಈ ಸಂಸಾರವು ಸದಾ ಕ್ಷೇತ್ರಜ್ಞನಾಗಿರುವ (ಅಂದರೆ ಈ ಶರೀರವು ತನ್ನದು ಎಂಬ ಅಭಿಮಾನವನ್ನು ಹೊಂದಿರುವ) ಆತ್ಮನಿಗೆ ದೃಶ್ಯವಾಗಿರುವುದು. (ಆತ್ಮನು ಇದಕ್ಕೆ ನೋಡುವ ಸಾಕ್ಷಿಯಾಗಿರುತ್ತಾನೆ.) ಈ ಮನಸ್ಸು ತ್ರಿಗುಣಗಳೊಡನೆ ಸೇರಿದಾಗ ಸಂಸಾರವನ್ನುಂಟುಮಾಡುವುದು. ತ್ರಿಗುಣಗಳ ಸಂಬಂಧವನ್ನು ತೊರೆದಾಗ ತ್ರಿಗುಣಾತೀತವಾದ ಮೋಕ್ಷವನ್ನುಂಟುಮಾಡುವುದು. ಆದುದರಿಂದ ಬಂಧ ಮತ್ತು ಮೋಕ್ಷ–ಇವೆರಡಕ್ಕೂ ಮನಸ್ಸೇ ಕಾರಣವೆಂದು ಜ್ಞಾನಿಗಳು ಹೇಳುವರು.

ಗುಣಾನುರಕ್ತಂ ವ್ಯಸನಾಯ ಜನ್ತೋಃ
ಕ್ಷೇಮಾಯ ನೈರ್ಗುಣ್ಯಮಥೋ ಮನಃ ಸ್ಯಾತ್ ।
ಯಥಾ ಪ್ರದೀಪೋ ಘೃತವರ್ತಿಮಶ್ನನ್
ಶಿಖಾಃ ಸಧೂಮಾ ಭಜತಿ ಹ್ಯನ್ಯದಾ ಸ್ವಮ್ ।

ಪದಂ ತಥಾ ಗುಣಕರ್ಮಾನುಬದ್ಧಂ
ವೃತ್ತೀರ್ಮನಃ ಶ್ರಯತೇಽನ್ಯತ್ರ ತತ್ತ್ವಮ್ ॥೮॥

ದೀಪವು ತುಪ್ಪದ ಬತ್ತಿಯಲ್ಲಿ ಹೊತ್ತಿಕೊಂಡು ಉರಿಯುವಾಗ ಹೊಗೆಯಿಂದ ಕೂಡಿದ ಜ್ವಾಲೆಗಳನ್ನು ಉಗುಳುವುದು. ಬೇರೆ ಸಮಯದಲ್ಲಿ ಹೊಗೆಯನ್ನು ಉಗುಳದೇ ಸ್ವಸ್ವರೂಪವನ್ನು ತೋರುವುದಲ್ಲವೇ? ಹಾಗೆಯೇ ಪ್ರಾಣಿಗಳ ಮನಸ್ಸು-ತ್ರಿಗುಣಗಳೆಂಬ ಬತ್ತಿಯ ಕಾರ್ಯವಾದ ಪುಣ್ಯ-ಪಾಪ ಮುಂತಾದುವುಗಳಿಂದ ಕಲುಷಗೊಂಡು ಕಾಮ-ಕ್ರೋಧಗಳೇ ಮುಂತಾದ ವೃತ್ತಿಗಳನ್ನು ಪಡೆದು ಬಂಧನವನ್ನುಂಟುಮಾಡುವುದು. ಆ ತ್ರಿಗುಣಗಳಿಗೆ ಒಳಗಾಗದೇ ಇರುವಾಗ ಶುದ್ಧಸತ್ತ್ವಮಯವಾಗಿ ಕ್ಷೇಮರೂಪವಾದ ಮೋಕ್ಷವನ್ನುಂಟುಮಾಡುವುದು.

ಏಕಾದಶಾಸನ್ಮನಸೋ ಹಿ ವೃತ್ತಯ
ಆಕೂತಯಃ ಪಞ್ಚಧಿಯೋಽಭಿಮಾನಃ ।
ಮಾತ್ರಾಣಿ ಕರ್ಮಾಣಿ ಪುರಂ ಚ ತಾಸಾಂ
ವದನ್ತಿ ಹೈಕಾದಶ ವೀರ ಭೂಮೀಃ ॥೯॥

ಎಲೈ ವೀರವರನೇ! ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು ಮತ್ತು ಅಹಂಕಾರ–ಎಂಬ ಹನ್ನೊಂದೂ ಮನಸ್ಸಿನ ವೃತ್ತಿಗಳು ಮತ್ತು ಐದು ಬಗೆಯ ಕರ್ಮಗಳು, ಐದು ತನ್ಮಾತ್ರೆಗಳು ಮತ್ತು ಶರೀರ ಎಂಬ ಹನ್ನೊಂದೂ ಆ ವೃತ್ತಿಗಳಿಗೆ ಆಧಾರವಾಗಿರುವ ವಿಷಯಗಳೆಂದು ಹೇಳಲ್ಪಡುತ್ತವೆ.

ಗನ್ಧಾಕೃತಿಸ್ಪರ್ಶರಸಶ್ರವಾಂಸಿ
ವಿಸರ್ಗರತ್ಯರ್ತ್ಯಭಿಜಲ್ಪಶಿಲ್ಪಾಃ ।
ಏಕಾದಶಂ ಸ್ವೀಕರಣಂ ಮಮೇತಿ
ಶಯ್ಯಾಮಹಂ ದ್ವಾದಶಮೇಕ ಆಹುಃ ॥೧೦॥

ಇವುಗಳಲ್ಲಿ ಯಾವ ಯಾವುದು ಯಾವ ಯಾವುದಕ್ಕೆ ವಿಷಯ? ಎಂದರೆ : ಗಂಧ, ರೂಪ, ಸ್ಪರ್ಶ, ರಸ ಮತ್ತು ಶಬ್ದ ಎಂಬಿವು ಕ್ರಮವಾಗಿ ಘ್ರಾಣೇಂದ್ರಿಯ (ಮೂಗು), ನೇತ್ರೇಂದ್ರಿಯ (ಕಣ್ಣು) ತ್ವಗಿಂದ್ರಿಯ

(ಚರ್ಮ), ರಸನೇಂದ್ರಿಯ (ನಾಲಿಗೆ) ಮತ್ತು ಶ್ರವಣೇಂದ್ರಿಯ (ಕಿವಿ)– ಎಂಬ ಐದು ಜ್ಞಾನೇಂದ್ರಿಯಗಳ ವಿಷಯಗಳು. ಮಲವನ್ನು ವಿಸರ್ಜನೆ ಮಾಡುವುದು, ರತಿಸಂಭೋಗ, ನಡಿಗೆ, ಮಾತು, ಕೊಡುವುದು, ತೆಗೆದುಕೊಳ್ಳುವುದೇ ಮುಂತಾದ ಐದು ವ್ಯಾಪಾರಗಳು ಕ್ರಮವಾಗಿ ಗುದ, ಉಪಸ್ಥ, ಪಾದ, ನಾಲಿಗೆ, ಹಸ್ತ–ಎಂದು ಐದು ಕರ್ಮೇಂದ್ರಿಯಗಳ ವಿಷಯಗಳು. ಹಾಗೆಯೇ ಶರೀರವನ್ನು–'ಇದು ನನ್ನದು'–ಎಂದು ಅಭಿಮಾನಿಸುವುದು ಅಹಂಕಾರದ ವಿಷಯವು. ಕೆಲವರು ಅಹಂಕಾರವನ್ನು ಮನಸ್ಸಿನ ಹನ್ನೊಂದನೆಯ ವೃತ್ತಿಯೆಂದೂ ಮತ್ತು ಅದಕ್ಕೆ ಆಶ್ರಯವಾದ ಶರೀರವನ್ನು ಹನ್ನೆರಡನೆಯ ವೃತ್ತಿಯೆಂದೂ ತಿಳಿಯುತ್ತಾರೆ.

ದ್ರವ್ಯಸ್ವಭಾವಾಶಯಕರ್ಮಕಾಲೈ–
ರೇಕಾದಶಾಮೀ ಮನಸೋ ವಿಕಾರಾಃ ।
ಸಹಸ್ರಶಃ ಶತಶಃ ಕೋಟಿಶಶ್ಚ
ಕ್ಷೇತ್ರಜ್ಞತೋ ನ ಮಿಥೋ ನ ಸ್ವತಃ ಸ್ಯುಃ ॥೧೧॥

ಮನಸ್ಸಿನ ಈ ಹನ್ನೊಂದು ವೃತ್ತಿಗಳೂ ದ್ರವ್ಯ (ವಿಷಯ), ಸ್ವಭಾವ, ಆಶಯ (ಸಂಸ್ಕಾರ), ಕರ್ಮ ಮತ್ತು ಕಾಲಗಳ ಮೂಲಕ ನೂರಾರು, ಸಾವಿರಾರು ಮತ್ತು ಕೋಟ್ಯಂತರ ಭೇದಗಳಾಗಿ ಪರಿಣಾಮಹೊಂದುತ್ತವೆ. ಆದರೆ ಇವುಗಳಿಗೆ ಕ್ಷೇತ್ರಜ್ಞನಾದ ಆತ್ಮನ ಇರುವಿಕೆಯಿಂದಲೇ ಇರುವಿಕೆಯೇ ಹೊರತು ಸ್ವತಃ ಇರುವಿಕೆಯಿಲ್ಲ. ತಮ್ಮ ಪರಸ್ಪರವಾದ ಸೇರುವಿಕೆಯಿಂದಲೇ ಇರುವಿಕೆಯಿಲ್ಲ.

ಕ್ಷೇತ್ರಜ್ಞ ಏತಾ ಮನಸೋ ವಿಭೂತೀ–
ರ್ಜೀವಸ್ಯ ಮಾಯಾರಚಿತಸ್ಯ ನಿತ್ಯಾಃ ।
ಆವಿರ್ಹಿತಾಃ ಕ್ವಾಪಿ ತಿರೋಹಿತಾಶ್ಚ
ಶುದ್ಧೋ ವಿಚಷ್ಟೇ ಹ್ಯರಿಶುದ್ಧಕರ್ತುಃ ॥೧೨॥

ಈ ವೃತ್ತಿಗಳು ಕೆಲವೊಮ್ಮೆ (ಜಾಗ್ರದವಸ್ಥೆಯಲ್ಲಿ) ಪ್ರಕಟಗೊಳ್ಳುತ್ತವೆ ಮತ್ತೆ ಕೆಲವೊಮ್ಮೆ (ಸುಷುಪ್ತಿಯಲ್ಲಿ) ಮರೆಯಾಗುತ್ತವೆ. ಆದರೆ

ಪ್ರವಾಹರೂಪದಲ್ಲಿ ನಿತ್ಯವಾಗಿರುತ್ತವೆ. ಹೀಗಿದ್ದರೂ ಇವು ನಿತ್ಯಶುದ್ಧನಾಗಿರುವ ಕ್ಷೇತ್ರಜ್ಞನಿಗೆ* ಸ್ವತಃ ಸೇರಿದುವುಗಳಲ್ಲ. ಮಾಯಾರಚನೆಯುಳ್ಳವನಾಗಿ ಅಶುದ್ಧವಾದ ಕಾರ್ಯಗಳಲ್ಲಿಯೇ ಸಾಮಾನ್ಯವಾಗಿ ತೊಡಗಿರುವ ಜೀವನಿಗೆ ಸೇರಿದ ಮನಸ್ಸಿನ ವಿಭೂತಿಗಳು ಇವು. ಪರಿಶುದ್ಧನೂ, ಜ್ಞಾನಸ್ವರೂಪನೂ ಆದ ಕ್ಷೇತ್ರಜ್ಞಪರಮಾತ್ಮನು ಜೀವನ ಈ ಮನೋವೃತ್ತಿಗಳನ್ನು ಸಾಕ್ಷಿಯಾಗಿ ನೋಡುತ್ತಿರುತ್ತಾನೆ.

ಕ್ಷೇತ್ರಜ್ಞ ಆತ್ಮಾ ಪುರುಷಃ ಪುರಾಣಃ
ಸಾಕ್ಷಾತ್ಸ್ವಯಂಜ್ಯೋತಿರಜಃ ಪರೇಶಃ ।
ನಾರಾಯಣೋ ಭಗವಾನ್ವಾಸುದೇವಃ
ಸ್ವಮಾಯಯಾತ್ಮನ್ಯವಧೀಯಮಾನಃ ॥೧೩॥

ಈ ಕ್ಷೇತ್ರಜ್ಞನು ಪುರಾಣಪುರುಷನೂ, ಸ್ವಯಂಪ್ರಕಾಶನೂ, ಜನ್ಮರಹಿತನೂ, ಪರಮೇಶ್ವರನೂ, ಸರ್ವವ್ಯಾಪಕನೂ, ಸರ್ವನಿಯಾಮಕನೂ, ತನ್ನ ಮಾಯಾಶಕ್ತಿಯಿಂದ ಎಲ್ಲರ ಒಳಹೊಕ್ಕು ಎಲ್ಲರಿಗೂ ಆಶ್ರಯನೂ ಆಗಿರುವ ಭಗವಂತನಾದ ಸಾಕ್ಷಾತ್ ನಾರಾಯಣ ವಾಸುದೇವನೇ ಆಗಿದ್ದಾನೆ.

ಯಥಾನಿಲಃ ಸ್ಥಾವರಜಙ್ಗಮಾನಾ-
ಮಾತ್ಮಸ್ವರೂಪೇಣ ನಿವಿಷ್ಟ ಈಶೇತ್ ।
ಏವಂ ಪರೋಭಗವಾನ್ವಾಸುದೇವಃ
ಕ್ಷೇತ್ರಜ್ಞ ಆತ್ಮೇದಮನುಪ್ರವಿಷ್ಟಃ ॥೧೪॥

ವಾಯುದೇವನು ಇಡೀ ಸ್ಥಾವರ-ಜಂಗಮಪ್ರಾಣಿಗಳಲ್ಲಿ ಪ್ರಾಣರೂಪದಲ್ಲಿ ಒಳಹೊಕ್ಕು ಅವುಗಳನ್ನು ಪ್ರೇರಿಸುತ್ತಿರುವಂತೆಯೇ–ಪರಮೇಶ್ವರನಾದ ವಾಸುದೇವಭಗವಂತನು ಪರಮಾತ್ಮಸ್ವರೂಪನಾಗಿ ಈ ಇಡೀ ವಿಶ್ವವನ್ನು ಒಳಹೊಕ್ಕು ಕ್ಷೇತ್ರಜ್ಞರೂಪದಿಂದ ಎಲ್ಲಕ್ಕೂ ಸಾಕ್ಷಿಯಾಗಿ ಎಲ್ಲವನ್ನೂ ನಿಯಮಿಸುತ್ತಿದ್ದಾನೆ.

---

* ಕ್ಷೇತ್ರಜ್ಞರಲ್ಲಿ ಜೀವಾತ್ಮ-ಪರಮಾತ್ಮ–ಎಂದು ಎರಡು ವಿಧಗಳು. ಆ ಜೀವಾತ್ಮರಲ್ಲಿ ಬದ್ಧರು ಮತ್ತು ಮುಕ್ತರು–ಎಂದು ಎರಡು ಬಗೆಗಳು. ಮನಸ್ಸಿಗೆ ಅಧೀನನಾಗಿ ಮನಸ್ಸಿನ ಅಭಿಮಾನಹೊಂದಿರುವ ಜೀವಾತ್ಮನು ಬದ್ಧನೆಂದೂ, ಮನಸ್ಸಿಗೆ ವಶನಾಗದೇ

ನ ಯಾವದೇತಾಂ ತನುಭೃನ್ನರೇನ್ದ್ರ
ವಿಧೂಯ ಮಾಯಾಂ ವಯುನೋದಯೇನ ।
ವಿಮುಕ್ತಸಙ್ಗೋ ಜಿತಷಟ್ಸಪತ್ನೋ
ವೇದಾತ್ಮತತ್ತ್ವಂ ಭ್ರಮತೀಹ ತಾವತ್ ॥೧೫॥

ನ ಯಾವದೇತನ್ಮನ ಆತ್ಮಲಿಙ್ಗಂ
ಸಂಸಾರತಾಪಾವನಂ ಜನಸ್ಯ ।
ಯಚ್ಛೋಕಮೋಹಾಮಯರಾಗಲೋಭ-
ವೈರಾನುಬನ್ಧಂ ಮಮತಾಂ ವಿಧತ್ತೇ ॥೧೬॥

ರಾಜೇಂದ್ರನೇ! ಈ ಮನಸ್ಸೇ ಸಂಸಾರಕ್ಕೆ ಮೂಲವೆಂದು ತಿಳಿದು ಮಾಯಾ-ಮೋಹಗಳನ್ನು ತ್ಯಜಿಸಿ ಆತ್ಮತತ್ತ್ವವನ್ನು ತಿಳಿಯಬೇಕು. ಮನುಷ್ಯನು ಎಲ್ಲಿಯವರೆಗೆ ಜ್ಞಾನೋದಯದಿಂದ ಈ ಮಾಯೆಯನ್ನು ತಿರಸ್ಕರಿಸಿ ಎಲ್ಲ ಆಸಕ್ತಿಗಳನ್ನೂ ತೊರೆದು, ಕಾಮ-ಕ್ರೋಧಗಳೇ ಮುಂತಾದ ಆರು ಶತ್ರುಗಳನ್ನೂ ಜಯಿಸಿ ಪರಮಾತ್ಮತತ್ತ್ವವನ್ನು ತಿಳಿಯುವುದಿಲ್ಲವೋ– ಆತ್ಮಕ್ಕೆ ಗುರುತಾಗಿರುವ ಈ ಮನಸ್ಸನ್ನು ಸಂಸಾರದ ದುಃಖದ ಕ್ಷೇತ್ರವೆಂದು ತಿಳಿಯುವುದಿಲ್ಲವೋ–ಅಲ್ಲಿಯವರೆಗೂ ಆತನು ಈ ಸಂಸಾರದಲ್ಲಿ ಹೀಗೆಯೇ ಅಲೆದಾಡುತ್ತಿರುತ್ತಾನೆ. ಏಕೆಂದರೆ : ಆ ಚಿತ್ತವು ಆತನಿಗೆ ಶೋಕ, ಮೋಹ, ರೋಗ, ರಾಗ, ಲೋಭ ಮತ್ತು ವೈರಗಳೇ ಮುಂತಾದ ಸಂಸಾರಗಳನ್ನೂ ಮತ್ತು ಮಮತೆಯನ್ನೂ ವೃದ್ಧಿಪಡಿಸುತ್ತಲೇ ಇರುತ್ತದೆ.

ಭ್ರಾತೃವ್ಯಮೇನಂ ತದದಭ್ರವೀರ್ಯ-
ಮುಪೇಕ್ಷಯಾಧ್ಯೇಧಿತಮಪ್ರಮತ್ತಃ ।

ಮನೋಭಿಮಾನರಹಿತನಾಗಿರುವ ಶುದ್ಧನಾದ ಜೀವಾತ್ಮನಿಗೆ ಮುಕ್ತನೆಂದೂ ಹೆಸರು. ಮುಕ್ತನಾದ ಜೀವನು ಮನೋವೃತ್ತಿಗಳನ್ನು ಸಾಕ್ಷಿಯನ್ನಾಗಿ ನೋಡುತ್ತಾನೆಯೇ ಹೊರತು ಅವುಗಳಿಗೆ ಅಭಿಮಾನಿಯಾಗಿ ಅವುಗಳನ್ನು ತನ್ನವು ಎಂದು ಅನುಭವಿಸುವುದಿಲ್ಲ. ಆದುದರಿಂದ ಅವನು ಶುದ್ಧನಾಗಿ ಸಂಸಾರದಿಂದ ಮುಕ್ತನಾಗುವನು. ಅವುಗಳನ್ನು ಅಭಿಮಾನಿಸುವ ಅಶುದ್ಧಜೀವನು ಸಂಸಾರದಲ್ಲಿ ತೊಳಲಾಡುತ್ತಿರುವನು.

(ಸಾರಾರ್ಥದರ್ಶಿನೀ) (ಶ್ಲೋಕ ೧೨)

ಗುರೋರ್ಹರೇಶ್ಚರಣೋಪಾಸನಾಸ್ತ್ರೋ
ಜಹಿ ವ್ಯಲೀಕಂ ಸ್ವಯಮಾತ್ಮಮೋಷಮ್ * ॥೧೭॥

ಎಲೈ ವೀರನೇ! ಆತ್ಮಸ್ವರೂಪವನ್ನು ಮರೆಮಾಚುತ್ತಿರುವ ಈ ಮನಸ್ಸೆಂಬ ಕಳ್ಳನು ಮಹಾಬಲಶಾಲಿಯಾದ ನಿನ್ನ ಶತ್ರುವು. ನೀನು ಉಪೇಕ್ಷೆಮಾಡಿದ್ದರಿಂದ ಈತನ ಶಕ್ತಿ-ಸಾಮರ್ಥ್ಯಗಳು ಮತ್ತೂ ಹೆಚ್ಚಿಬಿಟ್ಟಿವೆ. ಆದುದರಿಂದ ನೀನು ಸಾವಧಾನವಾಗಿದ್ದು ಶ್ರೀಗುರುವಿನ ಮತ್ತು ಶ್ರೀಹರಿಯ ಉಪಾಸನೆಯೆಂಬ ಅಸ್ತ್ರದಿಂದ ಈತನನ್ನು ಸಂಹರಿಸಿಬಿಡಬೇಕು."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಪಂಚಮಸ್ಕಂಧದ ೧೧ನೆಯ ಅಧ್ಯಾಯವು ಮುಗಿಯಿತು.

---

* ಮುಕ್ತನೆಂದರೆ ಯಾರು? ಬದ್ಧನೆಂದರೆ ಯಾರು? ಸಾರಾರ್ಥದರ್ಶಿನಿಯಲ್ಲಿ ಹೀಗೆ ವಿವರಣೆಯಿದೆ : ಯಾವನು ಮುನಿಯಾಗಿ ಮನನಮಾಡುತ್ತಾ ಭಕ್ತಿಯೆಂಬ ಅಸ್ತ್ರದಿಂದ ಮನಸ್ಸಿನಲ್ಲಿರುವ ವಿಷಯಸಂಸ್ಕಾರಗಳನ್ನು ತೊಲಗಿಸಿ ಅವಿದ್ಯೆಯನ್ನು ಧ್ವಂಸಗೊಳಿಸಿ ಶ್ರೀಕೃಷ್ಣಪರಮಾತ್ಮನನ್ನು ಧ್ಯಾನಮಾಡುತ್ತಾನೆಯೋ–ಆತನೇ ಮುಕ್ತನು. ಯಾವನ ಮನಸ್ಸಿನಲ್ಲಿ ಭಕ್ತಿಯು ಪ್ರವೇಶಮಾಡದೇ ಮನಸ್ಸು ಕರ್ಮವಾಸನೆಗಳಿಂದ ನಾನಾ ವಿಧಗಳಾದ ವೃತ್ತಿಗಳನ್ನು ಆಶ್ರಯಿಸಿ ಅವಿದ್ಯೆಯನ್ನು ಬೆಳೆಯಿಸುವುದೋ–ಆತನೇ ಬದ್ಧನು.

ಭಕ್ತ್ಯಸ್ತ್ರೇಣ ತ್ಯಾಜಯಿತ್ವಾ ವಿಷಯಾನ್ ಸ್ವಮನೋ ಮುನಿಃ ।
ಧ್ವಸ್ತಾವಿದ್ಯೋ ಏವ ಧತ್ತೇ ಯಃ ಕೃಷ್ಣಂ ಮುಕ್ತಸ್ಸ ಉಚ್ಯತೇ ॥
ಭಕ್ತ್ಯಾಭಾವಾನ್ಮನೋ ವೃತ್ತೀರಾಶ್ರಯದ್ವಾಸನಾಮಯಃ ।
ಅವಿದ್ಯಾಂ ಯಸ್ಯ ಪುಷ್ಣಾತಿ ಸ ಪುಮಾನ್ ಬದ್ಧ ಉಚ್ಯತೇ ॥

(ಸಾರಾರ್ಥದರ್ಶಿನೀ) (ಶ್ಲೋಕ ೧೭)

ಪಂಚಮಸ್ಕಂಧ ೧೨ನೆಯ ಅಧ್ಯಾಯ

ರಹೂಗಣನ ಸಂಶಯಗಳಿಗೆ ಭರತಮುನಿಯ ಸಮಾಧಾನ

ಅನಂತರ ರಹೂಗಣಮಹಾರಾಜನು ಭರತಮುನಿಗೆ ನಮಸ್ಕರಿಸುತ್ತಾ ಆತನಲ್ಲಿ ಹೀಗೆ ಅರಿಕೆಮಾಡಿದನು :

ನಮೋ ನಮಃ ಕಾರಣವಿಗ್ರಹಾಯ
ಸ್ವರೂಪತುಚ್ಛೀಕೃತವಿಗ್ರಹಾಯ ।
ನಮೋಽವಧೂತ ದ್ವಿಜಬನ್ಧುಲಿಙ್ಗ-
ನಿಗೂಢನಿತ್ಯಾನುಭವಾಯ ತುಭ್ಯಮ್ ॥೧॥

“ಓ ಯೋಗೀಶ್ವರನೇ! ನಿನಗೆ ನಮಸ್ಕಾರವು, ನಮಸ್ಕಾರವು. ಪರಮಾನಂದಸ್ವರೂಪದ ಅನುಭವದಿಂದ ದೇಹಾಭಿಮಾನವನ್ನು ತೊರೆದವನಾಗಿ ದೇಹದಲ್ಲಿ ಉದಾಸೀನನಾಗಿದ್ದರೂ (ಲೋಕಾನುಗ್ರಹವೆಂಬ) ವಿಶೇಷ ಕಾರಣಕ್ಕಾಗಿ ದೇಹವನ್ನು ಧರಿಸಿ ಬಂದಿರುವ ನಿನಗೆ ನಮಸ್ಕಾರವು. ನಿತ್ಯಸ್ವರೂಪವನ್ನು ಸದಾ ಅನುಭವಿಸುತ್ತಿದ್ದರೂ ಆ ಅನುಭವವನ್ನು ಮರೆಮಾಚಿಕೊಂಡು ಒಬ್ಬ ಬ್ರಾಹ್ಮಣಾಧಮನ ವೇಷದಲ್ಲಿ ಕಾಣಿಸುತ್ತಿರುವ ಅವಧೂತಶಿಖಾಮಣಿಯಾದ ನಿನಗೆ ಮತ್ತೆ ಮತ್ತೆ ನಮಸ್ಕಾರವು.

ಎಲೈ ಬ್ರಾಹ್ಮಣಶ್ರೇಷ್ಠನೇ! ದೇಹಾಭಿಮಾನವೆಂಬ ವಿಷಸರ್ಪದಿಂದ ಕಚ್ಚಲ್ಪಟ್ಟು ವಿವೇಕದ ದೃಷ್ಟಿಯನ್ನು ಕಳೆದುಕೊಂಡಿರುವ ನನಗೆ ನಿನ್ನ ಮಾತುಗಳು ಜ್ವರದಿಂದ ಪೀಡಿತನಾದವನಿಗೆ ಒದಗುವ ದಿವ್ಯವಾದ ಔಷಧಿಯಂತೆಯೂ, ಬಿರುಬೇಗೆಯ ಬಿಸಿಲಿನಲ್ಲಿ ಬೆಂಡಾದವನಿಗೆ ದೊರೆಯುವ ಹಿಮಜಲದಂತೆಯೂ–ಹಿತಕರವೂ, ರುಚಿಕರವೂ ಆಗಿ ಮೃತಸಂಜೀವಿನಿಯಾಗಿವೆ. ಅಧ್ಯಾತ್ಮರಹಸ್ಯದ ಬಗೆಗೆ ನನಗೆ ಉಂಟಾಗಿರುವ ಸಂಶಯಗಳನ್ನು ಆಮೇಲೆ ಅರಿಕೆಮಾಡಿಕೊಳ್ಳುವೆನು. ಈಗ ನೀನು ನುಡಿದ ಅಧ್ಯಾತ್ಮಸಾರಾಮೃತಗರ್ಭಿತವಾದ ಮಾತುಗಳನ್ನು ಅರ್ಥಮಾಡಿಕೊಳ್ಳುವುದು ನನಗೆ ಕಷ್ಟವಾಗಿದೆ. ಅದನ್ನು ಸುಲಭವಾಗಿ ಅರ್ಥವಾಗುವಂತೆ ಮೊದಲು ಉಪದೇಶಮಾಡು. ನನಗೆ ಅದರಲ್ಲಿ ತುಂಬಾ ಕುತೂಹಲವಿದೆ. ಶ್ರದ್ಧೆಯಿದೆ.

ಎಲೈ ಯೋಗೇಶ್ವರನೇ! ‘(ಪಲ್ಲಕ್ಕಿಯ ಭಾರವನ್ನು ಹೊರುವ) ಕ್ರಿಯೆಯೂ ಮತ್ತು ಅದರಿಂದುಂಟಾಗುವ (ಆಯಾಸವೆಂಬುವ) ಫಲವೂ ಕಣ್ಣಿಗೆ ಕಾಣುತ್ತಿದ್ದರೂ ಅವು ಕೇವಲ ವ್ಯಾವಹಾರಿಕಗಳು ; ವಾಸ್ತವಿಕಗಳಲ್ಲ. ತತ್ತ್ವವಿಮರ್ಶೆಯನ್ನು ಮಾಡಿದಾಗ ಅವು ಹೊಂದಿಕೆಯಾಗುವುದಿಲ್ಲ’– ಎಂದು ನೀನು ಅಪ್ಪಣೆಕೊಡಿಸಿದೆಯಲ್ಲವೇ? ಅದು ನನಗೆ ಅರ್ಥವಾಗುತ್ತಿಲ್ಲ. ಅದರ ಅಭಿಪ್ರಾಯವೇನೆಂದು ತಿಳಿಯದೇ ನನ್ನ ಮನಸ್ಸು ಭ್ರಮಿಸುತ್ತಿದೆ. ಕೃಪೆಯಿಟ್ಟು ನಿನ್ನ ಆಶಯವನ್ನು ವಿವರಿಸುವವನಾಗು.”

ಭರತಮುನಿಯು ಆತನಿಗೆ ಉತ್ತರಿಸುತ್ತಾ ಹೀಗೆಂದನು :

“ಎಲೈ ಪೃಥಿವೀಪತಿಯೇ! ಈ ಭೂಮಿಯಲ್ಲಿರುವ ಸ್ಥಾವರ-ಜಂಗಮ ಗಳಾದ ಸಮಸ್ತಭೂಗಳೂ ಪೃಥಿವಿಯ ವಿಕಾರವೇ ಆಗಿವೆ. ಈ ದೇಹವು ಪೃಥಿವಿಯ ವಿಕಾರವು. ಕಲ್ಲುಬಂಡೆ ಮುಂತಾದುವೂ ಪೃಥಿವಿಯ ವಿಕಾರಗಳೇ. ಈ ಎರಡೂ ಜಡವಸ್ತುಗಳೇ. ಇವುಗಳಲ್ಲಿ ಒಂದು ಚಲಿಸುತ್ತಿರುವುದು, ಮತ್ತೊಂದು ಚಲಿಸುತ್ತಿಲ್ಲ–ಎಂಬುದನ್ನು ಬಿಟ್ಟು ಎರಡಕ್ಕೂ ಏನು ಭೇದವಿದೆ? ಯಾವುದೋ ಕಾರಣದಿಂದ ಇವುಗಳಲ್ಲಿ ಒಂದು ವಿಕಾರವು ಭೂಮಿಯ ಮೇಲೆ ನಡೆಯುತ್ತಿರುವುದರಿಂದ ಅದಕ್ಕೆ–‘ಭಾರವನ್ನು ಹೊರು ತ್ತಿರುವವನು’–ಎಂಬ ಹೆಸರು ಬಂದಿರಬಹುದು. ದೇಹದಲ್ಲಿ ಆತ್ಮಬುದ್ಧಿ ಯನ್ನಿಟ್ಟಿರುವುದೇ ಈ ವ್ಯವಹಾರಕ್ಕೆ ಕಾರಣವು. ಭಾರವನ್ನು ಹೊತ್ತಿರು ವವನು–ಎಂದು ಕರೆಸಿಕೊಳ್ಳಲ್ಪಡುತ್ತಿರುವ ಜಡವಸ್ತುವಾದ ದೇಹವೆಂಬ ವಿಕಾರದ್ರವ್ಯಕ್ಕೆ ಎರಡೂ ಹೆಜ್ಜೆಗಳೂ, ಹಿಮ್ಮಡಿಗಳೂ, ಅವುಗಳ ಮೇಲೆ ಮೇಗಾಲು–ಮಂಡಿಗಳೂ, ಅವುಗಳಿಗೂ ಮೇಲೆ ತೊಡೆಗಳೂ, ಸೊಂಟವೂ, ಎದೆಯೂ, ಕುತ್ತಿಗೆಯೂ, ಹೆಗಲುಗಳೂ ಮುಂತಾದ ಅಂಗಗಳೂ ಇವೆ. ಆ ಹೆಗಲಿನ ಮೇಲೆ ಮರದ ಪಲ್ಲಕ್ಕಿಯನ್ನು ಇರಿಸಿದೆ. ಇವೆಲ್ಲವೂ ಪೃಥಿವಿಯ ವಿಕಾರಗಳೇ. ಆ ಪಲ್ಲಕ್ಕಿಯೆಂಬ ಪೃಥಿವೀವಿಕಾರದಲ್ಲಿ ಸೌವೀರದೇಶದ ರಾಜ ಎಂದು ಕರೆಯಲ್ಪಡುವ ಒಂದು ಪೃಥಿವಿಯ ವಿಕಾರವಿದೆ. ಆ ವಿಕೃತ ಮಾಂಸಪಿಂಡದಲ್ಲಿ ‘ನಾನು’ ಎಂಬ ಅಭಿಮಾನವನ್ನು ಬೇರೂರಿಸಿಕೊಂಡು ನೀನು–‘ನಾನು ಸೌವೀರದೇಶದ ಅಧೀಶ್ವರನು’–ಎಂದು ದುಷ್ಟವಾದ ಮದ ದಿಂದ ಕೊಬ್ಬಿ ಕುರುಡನಾಗಿದ್ದೀಯೆ. ಹೀಗೆ ಅಭಿಮಾನಿಸುವುದರಿಂದಲೇ ನಿನ್ನ

ಶ್ರೇಷ್ಠತೆಯೇನೂ ಪ್ರಮಾಣಿತವಾಗುವುದಿಲ್ಲ. ವಾಸ್ತವವಾಗಿ ನೀನೊಬ್ಬ ಕಡು ಕ್ರೂರಿಯು. ಬಡಪಾಯಿಗಳೂ ದೀನ-ದರಿದ್ರರೂ ಆಗಿರುವ ಈ ಬೆಸ್ತರನ್ನು ಹಿಡಿದು ಬಿಟ್ಟಿಯಾಗಿ ಪಲ್ಲಕ್ಕಿಯನ್ನು ಹೊರುವ ಕೆಲಸಕ್ಕೆ ಹೂಡಿ ನಿರ್ದಯೆಯಿಂದ ಗೋಳಾಡಿಸುತ್ತಿರುವೆ. ಆದರೆ–'ಪ್ರಜಾಪಾಲನೆಯೇ ರಾಜನ ಮುಖ್ಯ ಧರ್ಮವು. ಅದರಂತೆ ನಾನು ಧರ್ಮದಿಂದ ಪ್ರಜೆಗಳನ್ನು ಪಾಲಿಸುತ್ತಿರುವ ಪ್ರಜಾವತ್ಸಲನಾದ ರಾಜನು'–ಎಂದು ಬಡಾಯಿಕೊಚ್ಚಿಕೊಳ್ಳುತ್ತಿದ್ದೀಯೆ. ಸಾಧು-ಸಜ್ಜನರ ಸಮಾಜದಲ್ಲಿ ಹೀಗೆ ಒಣಹೆಮ್ಮೆಯಿಂದ ಸಾರಲು ನಿನಗೆ ನಾಚಿಕೆಯಾಗುವುದಿಲ್ಲವೇ? ಇದೇ ರೀತಿಯಲ್ಲಿ 'ಪೃಥಿವೀ' ಎಂಬ ಶಬ್ದವನ್ನು ಈ ವಿಕಾರದಲ್ಲಿ ಬಳಸುವುದಕ್ಕೂ ವ್ಯವಹಾರವೇ ಕಾರಣ. ಆ ಹೆಸರೂ ಅದಕ್ಕೆ ವಾಸ್ತವವಲ್ಲ. ಏಕೆಂದರೆ : ಅದು ತನ್ನ ಉಪಾದಾನಕಾರಣವಾದ ಪರಮಾಣುಗಳಲ್ಲಿ ಲಯಹೊಂದಿಬಿಡುವುದು. ತನ್ನ ಸೇರುವೆಯಿಂದ ಪೃಥಿವೀ ಎಂಬ ಕಾರ್ಯದ ನಿರ್ಮಾಣಕ್ಕೆ ಕಾರಣವಾದ ದ್ರವ್ಯಕ್ಕೆ 'ಪರಮಾಣು' ಎಂಬ ಹೆಸರು ಬರುವುದಕ್ಕೂ ವ್ಯವಹಾರವೇ ಕಾರಣವು. ಅವಿದ್ಯೆಗೆ ವಶವಾದ ಮನಸ್ಸಿನಿಂದಲೇ ಆ ಪರಮಾಣುವು ನಿರ್ಮಿತವಾಗುವುದು. ಹೀಗೆಯೇ ಕೃಶ-ಸ್ಥೂಲ, ಚಿಕ್ಕದು-ದೊಡ್ಡದು, ಕಾರ್ಯ-ಕಾರಣ, ಚೇತನ-ಅಚೇತನ ಮುಂತಾದ ಗುಣಗಳಿಂದ ಕೂಡಿದ ಈ ಭೇದಪ್ರಪಂಚವನ್ನೂ–ದ್ರವ್ಯ, ಸ್ವಭಾವ, ಆಶಯ, ಕಾಲ ಮತ್ತು ಕರ್ಮ ಮೊದಲಾದ ನಾಮಧೇಯಗಳುಳ್ಳ ಶ್ರೀಭಗವಂತನ ಮಾಯೆಯ ಕಾರ್ಯವೆಂದೇ–ತಿಳಿದುಕೋ. ಪರಿಶುದ್ಧವೂ ಜ್ಞಾನಸ್ವರೂಪವೂ, ಪರಮಾರ್ಥವೂ, ವಿಕಾರರಹಿತವೂ, ನಿರಂತರವಾಗಿ ಒಳಗೂ-ಹೊರಗೂ ತುಂಬಿಕೊಂಡಿರುವುದೂ, ಪ್ರತ್ಯಗಾನಂದವೂ, ಪ್ರಶಾಂತವೂ ಆದ ಪರಬ್ರಹ್ಮಪರಮಾತ್ಮವೇ ಪರಮಸತ್ಯವು. ಅದನ್ನೇ 'ಭಗವಾನ್' ಎಂದೂ, 'ವಾಸುದೇವ' ಎಂಬುದಾಗಿಯೂ ಜ್ಞಾನಿಗಳು ಕರೆಯುತ್ತಾರೆ. ರಹೂಗಣನೇ! ಮಹಾಪುರುಷರ ಪಾದಧೂಳಿಯಿಂದ ಅಭಿಷೇಕಮಾಡಿಕೊಳ್ಳದೇ ಇದ್ದರೆ–ಕೇವಲ ತಪಸ್ಸು, ಯಜ್ಞಗಳೇ ಮುಂತಾದ ವೈದಿಕಕರ್ಮಗಳು, ಅನ್ನಾದಿ ದಾನಗಳು. ಅತಿಥಿಸೇವೆ, ದೀನದರಿದ್ರರ ಸೇವೆ ಎಂಬಿವೇ ಮುಂತಾದ ಗೃಹಸ್ಥೋಚಿತವಾದ ಧರ್ಮಗಳ ಅನುಷ್ಠಾನದಿಂದಾಗಲೀ–ವೇದಾಧ್ಯಯನದಿಂದಾಗಲೀ– ಜಲ, ಅಗ್ನಿ ಅಥವಾ ಸೂರ್ಯರೇ

ಮುಂತಾದವರ ಉಪಾಸನೆಯಿಂದಾಗಲೀ—ಈ ಯಾವುದೇ ಸಾಧನದಿಂದಾಗಲೀ—ಈ ಪರಮಾತ್ಮಜ್ಞಾನವು ಲಭಿಸುವುದಿಲ್ಲ. ಇದಕ್ಕೆ ಕಾರಣವೇನೆಂದರೆ : ಮಹಾಪುರುಷರ ಸಮಾಜದಲ್ಲಿ ಸದಾ ಪವಿತ್ರವಾದ ಕೀರ್ತಿಯುಳ್ಳ ಶ್ರೀಹರಿಯ ಗುಣಗಳ ವರ್ಣನೆಯೇ ನಡೆಯುತ್ತಿರುತ್ತದೆ. ಗ್ರಾಮ್ಯಸುಖಗಳ ಸಮಾಜವು ಅಲ್ಲಿಗೆ ಸುಳಿಯುವುದೇ ಇಲ್ಲ. ಅಂತಹ ಸಂತರ ಸಂಗದಲ್ಲಿ ಶ್ರೀಭಗವಂತನ ಕಥೆಗಳನ್ನು ನಿತ್ಯವೂ ಸೇವನೆಮಾಡುತ್ತಿದ್ದರೆ ಅದು ಮೋಕ್ಷವನ್ನು ಬಯಸುವ ಮನುಷ್ಯನ ಶುದ್ಧವಾದ ಬುದ್ಧಿಯನ್ನು ಶ್ರೀಭಗವಂತನಾದ ವಾಸುದೇವನಲ್ಲಿ ನೆಲೆಗೊಳಿಸುವುದು. 'ವಿಷಯಗಳಲ್ಲಿ ವೈರಾಗ್ಯವನ್ನು ಹೊಂದುವುದೇ ಜ್ಞಾನಕ್ಕೆ ಕಾರಣ'—ಎಂದು ಇಲ್ಲಿಯವರೆಗೂ ನಿರೂಪಣೆ ಮಾಡಿದೆನು. ಇನ್ನು ವಿಷಯದ ಸಂಗವು ಯೋಗದಿಂದ ಜಾರಿಸುತ್ತದೆ ಎಂಬುದನ್ನು ನಿರೂಪಿಸುತ್ತೇನೆ. ಇದಕ್ಕೆ ನಾನೇ ದೃಷ್ಟಾಂತವಾಗಿದ್ದೇನೆ. ಹಿಂದಿನ ಜನ್ಮದಲ್ಲಿ ನಾನು ಭರತನೆಂಬ ರಾಜನಾಗಿದ್ದೆನು. ಐಹಿಕ ಮತ್ತು ಆಮುಷ್ಮಿಕಳಾದ ಎಲ್ಲ ವಿಷಯಗಳ ದೆಸೆಯಿಂದ ವಿರಕ್ತನಾಗಿ ಶ್ರೀಭಗವಂತನ ಆರಾಧನೆಯಲ್ಲಿಯೇ ಆಗ ನಿರತನಾಗಿದ್ದೆನು. ಆದರೂ ಒಂದು ಜಿಂಕೆಯ ವಿಷಯದಲ್ಲಿ ಆಸಕ್ತಿ ಉಂಟಾಗಿದ್ದರಿಂದ ನಾನು ಪರಮಾರ್ಥದಿಂದ ಭ್ರಷ್ಟನಾಗಿ ಮುಂದಿನ ಜನ್ಮದಲ್ಲಿ ಜಿಂಕೆಯಾಗಿ ಹುಟ್ಟಬೇಕಾಯಿತು. ಆದರೆ ಭಗವಂತನಾದ ಶ್ರೀಕೃಷ್ಣನ ಆರಾಧನೆಯ ಪ್ರಭಾವದಿಂದ ನನಗೆ ಆ ಮೃಗಯೋನಿಯಲ್ಲಿಯೂ ಹಿಂದಿನ ಜನ್ಮದ ನೆನವು ಅಳಿಯಲಿಲ್ಲ. ಅದಕ್ಕೋಸ್ಕರವೇ ನಾನು ಈಗ ಜನರ ಸಹವಾಸಕ್ಕೆ ಹೆದರಿ ಯಾರ ಜೊತೆಗೂ ಸೇರದೇ ಯಾರಿಗೂ ತಿಳಿಯದಂತೆ ಸದಾ ಒಂಟಿಯಾಗಿಯೇ ಸಂಚರಿಸುತ್ತಿದ್ದೇನೆ. (ಶ್ಲೋಕ 2-15)

ತಸ್ಮಾನ್ನರೋಽಸಙ್ಗಸುಸಙ್ಗಜಾತ-
ಜ್ಞಾನಾಸಿನೇಹೈವ ವಿವೃಕ್ಣಮೋಹಃ ।
ಹರಿಂ ತದೀಹಾಕಥನಶ್ರುತಾಭ್ಯಾಂ
ಲಬ್ಧಸ್ಮೃತಿರ್ಯಾತ್ಯತಿಪಾರಮಧ್ವನಃ ॥೧೬॥

ಆದುದರಿಂದ ವಿವೇಕಿಯಾದ ಮನುಷ್ಯನು ಸಂಗರಹಿತನಾಗಿ ವಿರಕ್ತರಾಗಿರುವ ಸಾಧು-ಸಜ್ಜನರ ಸತ್ಸಂಗದಿಂದ ಉಂಟಾದ ಜ್ಞಾನವೆಂಬ ಕತ್ತಿ

ಯಿಂದ ಮೋಹದ ಕಟ್ಟನ್ನು ಕತ್ತರಿಸಿಹಾಕಿ, ಶ್ರೀಹರಿಯ ಕಥಾಶ್ರವಣ, ಕೀರ್ತನ, ಮನನ ಮುಂತಾದವುಗಳಿಂದ ಶ್ರೀಭಗವಂತನ ನಿರಂತರಸ್ಮೃತಿಯನ್ನು ಪಡೆದು ಸುಲಭವಾಗಿ ಸಂಸಾರದ ಮಾರ್ಗದ ಎಲ್ಲೆಯನ್ನು ದಾಟಿ ಶ್ರೀಭಗವಂತನನ್ನು ಹೊಂದುವನು."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಪಂಚಮಸ್ಕಂಧದ ೧೨ನೆಯ ಅಧ್ಯಾಯವು ಮುಗಿಯಿತು.

ಪಂಚಮಸ್ಕಂಧ ೧೩ನೆಯ ಅಧ್ಯಾಯ

ಭರತಮುನಿಯಿಂದ ಭವಾಟವಿಯ ವರ್ಣನೆ : ರಹೂಗಣರಾಜನ ಸಂಶಯಪರಿಹಾರ

ಅವಧೂತಶಿಖಾಮಣಿಯಾದ ಭರತಮಹಾಮುನಿಯು ರಹೂಗಣ ರಾಜನಿಗೆ ಅಧ್ಯಾತ್ಮತತ್ತ್ವವನ್ನು ಉಪದೇಶಮಾಡುತ್ತಿರುವಾಗ ಆತನಿಗೆ ಸಂಸಾರದಲ್ಲಿ ವೈರಾಗ್ಯವನ್ನುಂಟುಮಾಡುವುದಕ್ಕಾಗಿ ಸಂಸಾರವನ್ನು ಒಂದು ಮಹಾರಣ್ಯದ ರೂಪದಲ್ಲಿ ವರ್ಣಿಸುತ್ತಾ ಉಪದೇಶವನ್ನು ಹೀಗೆ ಮುಂದುವರಿಸಿದನು :

ದುರತ್ಯಯೇಽಧ್ವನ್ಯಜಯಾ ನಿವೇಶಿತೋ
ರಜಸ್ತಮಃಸತ್ತ್ವವಿಭಕ್ತಕರ್ಮದೃಕ್ ।
ಸ ಏಷ ಸಾರ್ಥೋಽರ್ಥಪರಃ ಪರಿಭ್ರಮ-
ನ್ಭವಾಟವೀಂ ಯಾತಿ ನ ಶರ್ಮ ವಿನ್ದತಿ ॥೧॥

"ಎಲೈ ರಾಜೇಂದ್ರನೇ! ಈ ಸಂಸಾರವನ್ನು ಒಂದು ದೊಡ್ಡಬೆಂಗಾಡ ನ್ನಾಗಿ ಭಾವಿಸು. ಪ್ರವೃತ್ತಿ (ಕರ್ಮಕಾಂಡ) ಮಾರ್ಗವೇ ಈ ಅರಣ್ಯಕ್ಕೆ ಒಯ್ಯುವ ದಾರಿಯು. ಶ್ರೀಭಗವಂತನ ಮಾಯೆಯು ಜೀವಸಮೂಹವೆಂಬ ವರ್ತಕಗಣವನ್ನು ಈ ದುಸ್ತರವಾದ ದಾರಿಗೆ ಎಳೆದು ತಂದುಬಿಟ್ಟಿದೆ. ವರ್ತಕ ಗಣವು ಧರ್ಮಾರ್ಥ-ಕಾಮಗಳೆಂಬ ಸಂಪತ್ತನ್ನು ಗಳಿಸುವ ಆಸೆಯಿಂದ ಇಲ್ಲಿಗೆ ಬಂದು ಸಾತ್ತ್ವಿಕ, ರಾಜಸ ಮತ್ತು ತಾಮಸಗಳೆಂದು ವಿಭಾಗಗೊಂಡ ಕರ್ಮಗಳಲ್ಲಿ ಅಲೆದಾಡುತ್ತಿದೆ. ಇಲ್ಲಿ ದಿಕ್ಕುಕಾಣದೇ ಅಲೆದಾಡುತ್ತಿರುವ ಈ

ವರ್ತಕಗಣವು ಇಷ್ಟಾರ್ಥಗಳು ಸಿದ್ಧಿಸದೇ ನೆಮ್ಮದಿಯೆಂಬ ಬಂಡವಾಳವನ್ನೂ ಕಳೆದುಕೊಂಡು ನರಳುತ್ತಿದೆ.

ಇಂದ್ರಿಯಗಳೆಂಬ ಆರು ಮಂದಿ ದರೋಡೆಗಾರರು ಇಲ್ಲಿ ಬಂದು ಕಾದಿರುತ್ತಾರೆ. ಇವರು ಬುದ್ಧಿಯೆಂಬ ಮೂರ್ಖನಾದ ನಾಯಕನ ನೇತೃತ್ವ ದಲ್ಲಿ ಇಲ್ಲಿಗೆ ಬಂದು, ತೊಳಲಾಡುತ್ತಿರುವ ವರ್ತಕರ ಮೇಲೆ ಬಿದ್ದು, ಬಲಾತ್ಕಾರದಿಂದ ಅವರ ಸಂಪತ್ತನ್ನು ಲೂಟಿಮಾಡಿಕೊಂಡು ಹೋಗುವರು. ಕುರಿಗಳು ಯಾವುದೋ ಜ್ಞಾನದಲ್ಲಿರುವಾಗ–ತೋಳಗಳು ಆ ಮಂದೆಗೆ ನುಗ್ಗಿ ಕುರಿಗಳನ್ನು ಎಳೆದುಕೊಂಡು ಹೋಗುವಂತೆಯೇ ಬಳಿಯಲ್ಲಿಯೇ ಇರುವ ತಂತ್ರಿಗಳಾದ ನರಿಗಳು ಕುರಿಗಳನ್ನು ದಾರಿಯಲ್ಲಿ ಅತ್ತಿತ್ತ ಸೆಳೆದಾಡುವು ದಿಲ್ಲವೇ? ಹಾಗೆಯೇ ತಂತ್ರಿಗಳಾಗಿ ಸವಿಮಾತನ್ನಾಡುವ ಹೆಂಡಿರು-ಮಕ್ಕಳೂ ಜೀವಿಗಳನ್ನು ವಿಷಯಮಾರ್ಗದಲ್ಲಿ ಸೆಳೆದಾಡುವರು. ಒತ್ತಾಗಿ ಬೆಳೆದಿರುವ ಕಾಮ್ಯಕರ್ಮಗಳೆಂಬ ಬಳ್ಳಿ-ಹುಲ್ಲು-ಪೊದೆಗಳಿಂದ ನಿಬಿಡವಾಗಿರುವ ಭೀಕರ ವಾದ ಅರಣ್ಯವಿದು. ಇಲ್ಲಿ ಜೀವಸಮೂಹವೆಂಬ ವರ್ತಕಗುಣವು ದುರ್ಜನ ರೆಂಬ ಕಾಡುನೊಣ-ಕಾಡುಸೊಳ್ಳೆಗಳಿಂದ ಕಚ್ಚಿಸಿಕೊಳ್ಳುತ್ತಾ ಸಂಕಟಪಡು ವುದು. ಆಸೆಯನ್ನು ಹೆಚ್ಚಿಸುವ ನಾನಾಶರೀರಗಳೆಂಬ ಥಳುಕಿನ ಗಂಧರ್ವ ನಗರಗಳನ್ನೂ* ಥಳಿ-ಥಳಿಸುವ ಚಿನ್ನ-ರನ್ನಗಳೆಂಬ ಕೊಳ್ಳಿ-ಪಿಶಾಚಿಗಳನ್ನೂ ವರ್ತಕಗಣಗಳು ಇಲ್ಲಿ ಕಾಣುತ್ತವೆ. ಅವುಗಳನ್ನು ಭೋಗಸ್ಥಾನ, ಭೋಗ ಸಾಧನಗಳೆಂದು ಭಾವಿಸಿ ಬವಣೆಗೆ ಒಳಗಾಗುವುದು. ಇಲ್ಲಿ ಮನೆ, ನೀರು, ಸಿರಿ-ಸಂಪತ್ತುಗಳು ಸಿಕ್ಕುತ್ತವೆಯೆಂಬ ಭ್ರಮೆಯಿಂದ ಈ ವ್ಯಾಪಾರಿಗಳು ಅಲ್ಲಲ್ಲಿ ಅಲೆದಾಡುತ್ತಿರುವಾಗ ರಾಗ-ವ್ಯಾಮೋಹರೂಪವಾದ ಭಾರೀ ಸುಂಟರಗಾಳಿಯು ಮೇಲೆದ್ದು ಎಲ್ಲ ದಿಕ್ಕುಗಳನ್ನೂ ಧೂಳಿನಿಂದ ಧೂಸರ

* ಗಂಧರ್ವನಗರ ಎಂದರೆ : ಮೋಹವನ್ನುಂಟುಮಾಡುವ ಅಸಂಭಾವಿತವಾದ ಕಲ್ಪನೆಗಳು. ಆಕಾಶದಲ್ಲಿ ಮೋಡಗಳು ಸೇರಿದಾಗ ಅವು ಕೆಲವೊಮ್ಮೆ ಆನೆಯಂತೆಯೂ, ಕೆಲವೊಮ್ಮೆ ಬೆಟ್ಟಗಳಂತೆಯೂ, ಕೆಲವೊಮ್ಮೆ ನಗರಗಳಂತೆಯೂ ಆಕರ್ಷಕವಾದ ರೂಪಗಳಲ್ಲಿ ಕಾಣಿಸುತ್ತದೆ. ಮನಸ್ಸಿಗೆ ಮೋಹವನ್ನುಂಟುಮಾಡುವುವು. ಇಂತಹ ಅಸತ್ಯವೂ ಮೋಹಕರವೂ ಆದ ರಚನೆಗೆ ಗಂಧರ್ವನಗರವೆಂದು ಹೆಸರು. (ಶ್ಲೋಕ ೩)

ಗೊಳಿಸಿ ಅವರ ಕಣ್ಣುಗಳಿಗೂ ಧೂಳನ್ನೆರಚಿ–ತಾವು ಯಾರು? ಎಲ್ಲಿದ್ದೇವೆ? ಎಲ್ಲಿಗೆ ಹೋಗಬೇಕು? ಎಂಬುದು ತಿಳಿಯದಂತೆ ಮೋಹದಿಗ್ಭ್ರಾಂತಿಯನ್ನುಂಟುಮಾಡುವುದು. ಈ ಕಾಡಿನಲ್ಲಿ ಹಿಂದೆಯೂ, ಮುಂದೆಯೂ ಕಾಡಿಸುವ ದುರ್ಜನರ ಬಿರುನುಡಿಗಳೆಂಬ ಝಿಲ್ಲೀಕ್ರಿಮಿಗಳ ಧ್ವನಿಯೂ, ಗೂಗೆಗಳ ಕೂಗೂ ಅಲ್ಲಲ್ಲಿ ಇವರ ಕಿವಿದೆರೆಗಳನ್ನು ಸೀಳುವುದು. ಹಸಿವನ್ನು ತಾಳಲಾರದೇ ಇವರು ಆಗಾಗ್ಗೆ ಪಾಪಿಜನರೆಂಬ ಪಾಪವೃಕ್ಷಗಳನ್ನು ಆಶ್ರಯಿಸಬೇಕಾಗುವುದು. ಬಾಯಾರಿಕೆ ಹೋಗುವುದೆಂಬ ಭ್ರಾಂತಿಯಿಂದ ವಿಷಯಸುಖಗಳೆಂಬ ಬಿಸಿಲ್ಗುದುರೆಗಳ ಕಡೆಗೆ ಓಡಿ ವ್ಯರ್ಥವಾಗಿ ಆಯಾಸಕ್ಕೆ ಒಳಗಾಗಬೇಕಾಗುವುದು. ಈ ಜೀವರೆಂಬ ವರ್ತಕರು ನೀರಿಲ್ಲದ ನದಿಗಳಲ್ಲಿ ಬಿದ್ದು ನಿರಾಶರಾಗಿ ಮೈನೋಯಿಸಿಕೊಳ್ಳುವ ಮೂರ್ಖರಂತೆ– ಪ್ರೇಮರಹಿತರಾದ ಹೆಂಗಸರ ಸಹವಾಸಮಾಡಿ ಕಾಮಸುಖವನ್ನು ಪಡೆಯದೇ ಧರ್ಮ-ಕರ್ಮಗಳನ್ನೂ ಕಳೆದುಕೊಳ್ಳುವರು. ಎಲ್ಲಿಯೂ ಅನ್ನವು ಸಿಕ್ಕದೇ ಇರುವಾಗ ತಮ್ಮ-ತಮ್ಮಲ್ಲಿಯೇ ಮತ್ತೊಬ್ಬರ ಅನ್ನಕ್ಕೆ ಕೈಯ್ಯೊಡ್ಡಬೇಕಾಗುವುದು. ಮನೆ-ಮಠಗಳೆಂಬ ಕಾಡುಗಿಚ್ಚಿನೊಳಗೆ ನುಗ್ಗಿ ತಾಪತ್ರಯಗಳಿಂದ ಬೆಂದು ಹೋಗಬೇಕಾಗುವುದು. ದುಷ್ಟರಾದ ರಾಜರೆಂಬ ಯಕ್ಷ-ರಾಕ್ಷಸರು ಈ ವರ್ತಕಗಣದ ಸಂಪತ್ತುಗಳನ್ನು ಸೂರೆಮಾಡಿಕೊಂಡು ಹೋಗುವರು. ತಮಗಿಂತಲೂ ಹೆಚ್ಚು ಬಲಶಾಲಿಗಳು ಬಂದು ಧನ-ಕನಕಗಳನ್ನು ಕಿತ್ತುಕೊಂಡು ಹೋದಾಗ ವರ್ತಕರು ಧೈರ್ಯ ಕಳೆದುಕೊಂಡು ಚಿಂತಾಸಾಗರದಲ್ಲಿ ಮುಳುಗುವರು. ಕೆಲವೊಮ್ಮೆ ತಮ್ಮ ಹೆಂಡಿರು-ಮಕ್ಕಳು-ಪರಿವಾರಗಳೆಂಬ ಗಂಧರ್ವನಗರದಲ್ಲಿ ಕ್ಷಣಕಾಲ ಸಂತೋಷಪಡುವರು. ಕಲ್ಪಿತವಾದ ಈ ಸಂತೋಷವೂ ಸುಖದ ಆಭಾಸವೇ ಹೊರತು ಸತ್ಯವೂ–ಶಾಶ್ವತವೂ ಆದ ಸುಖವಲ್ಲ. ವರ್ತಕರು ಅರಣ್ಯದಲ್ಲಿ ಬೆಟ್ಟಗಳನ್ನು ಹತ್ತಲು ಪ್ರಯತ್ನಿಸುತ್ತಾ ಕಲ್ಲು-ಮುಳ್ಳುಗಳಿಂದ ಕಾಲಿಗೆ ಹಿಂಸೆಯಾಗಿ ಖೇದಪಡುವಂತೆ ಸಾಂಸಾರಿಕ ಜೀವಿಗಳು ದುಷ್ಕರವಾದ ಕಾರ್ಯಗಳನ್ನು ಮಾಡಲು ಪ್ರಯತ್ನಿಸಿ ವಿಘ್ನಗಳಿಂದ ಅವು ಪೂರೈಸದಿರಲು ಕಳವಳಪಡುವರು. ಕುಟುಂಬವು ದೊಡ್ಡದಾಗಿ ಬೆಳೆದು ಜೀವಿಕೆಯು ನಡೆಯದೇ ಇದ್ದಾಗ ಹಸಿವಿನ ಬಾಧೆಯಿಂದ

ಹೆಂಡಿರು-ಮಕ್ಕಳ ಮೇಲೆ ರೇಗತೊಡಗುವರು. ಕೆಲವೊಮ್ಮೆ ಹೆಬ್ಬಾವಿನ ಬಾಯಿಗೆ ತುತ್ತಾಗಿ ಅರಣ್ಯದಲ್ಲಿ ಎಸೆಯಲ್ಪಟ್ಟು ಹೆಣದಂತೆ ಬಿದ್ದುಕೊಂಡಿರುವರು. ಕೆಲವೊಮ್ಮೆ ವಿಷಸರ್ಪಗಳಿಂದ ಕಚ್ಚಲ್ಪಟ್ಟು ವಿಷವೇರಿ ಕುರುಡರಂತೆ ಕಗ್ಗತ್ತಲೆಯ ಪಾಳುಬಾವಿಯಲ್ಲಿ ಜ್ಞಾನತಪ್ಪಿ ಬೀಳುವರು. ನಿದ್ರೆಯೇ ಸಂಸಾರಿ ಜೀವರನ್ನು ನುಂಗುವ ಹೆಬ್ಬಾವು. ದುರ್ಜನರೇ ಅವರನ್ನು ಕಚ್ಚುವ ವಿಷಸರ್ಪಗಳು ಮತ್ತು ಅಜ್ಞಾನವೇ ಕಗ್ಗತ್ತಲೇ ಪಾಳುಬಾವಿಯು. ಅರಣ್ಯದಲ್ಲಿ ಅಲೆದಾಡುವ ಆ ವರ್ತಕರು ಜೇನುತುಪ್ಪಕ್ಕಾಗಿ ಜೇನುಗೂಡಿನ ಬಳಿಗೆ ಹೋದಾಗ ಅಲ್ಲಿರುವ ಜೇನುನೊಣಗಳು ಅವರನ್ನು ಕಚ್ಚಿ ಪೀಡಿಸುವುವು. ಅತಿಕಷ್ಟಪಟ್ಟು ಜೇನುತುಪ್ಪವನ್ನು ಸಂಪಾದಿಸಿದರೂ ಅದನ್ನು ಇತರರು ಕಿತ್ತುಕೊಂಡು ಹೋಗುವರು ಮತ್ತು ಇವರ ಮಾನವೂ ಹೋಗು ವುದು. ಹಾಗೆಯೇ ಸಂಸಾರಕ್ಕೆ ಸಿಕ್ಕಿದ ಜೀವರು ಮತ್ತೊಬ್ಬರಿಗೆ ಸೇರಿದ ಸಂಪತ್ತಿಗೆ ಆಸೆಪಟ್ಟು ಅದನ್ನು ಕಿತ್ತುಕೊಳ್ಳಲು ಹೋದಾಗ ಇತರರಿಂದ ಪೆಟ್ಟು ತಿನ್ನಬೇಕಾಗುವುದು. ಆ ಸಂಪತ್ತನ್ನು ಅತಿಸಾಹಸದಿಂದ ಸಂಪಾದಿಸಿದರೂ ಅದನ್ನು ಇವರಿಗಿಂತಲೂ ಬಲಶಾಲಿಗಳಾದವರು ಬಲತ್ಕಾರದಿಂದ ಕಿತ್ತುಕೊಂಡು ಹೋಗುವರು. ಇವರು ಕೆಲವೊಮ್ಮೆ ಛಳಿ-ಬಿಸಿಲು-ಬಿರುಗಾಳಿ ಮತ್ತು ಮಳೆಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಅಸಮರ್ಥರಾಗುವರು. ಕೆಲವು ವೇಳೆ ಪರಸ್ಪರ ವ್ಯಾಪಾರದಿಂದ ಅಲ್ಪ-ಸ್ವಲ್ಪ ಹಣವನ್ನು ಗಳಿಸಿದರೂ ಹಣದ ಆಸೆಯಿಂದ ಇತರರಿಗೆ ಮೋಸಮಾಡಿ ಅವರಲ್ಲಿ ದ್ವೇಷವನ್ನು ಕಟ್ಟಿಕೊಳ್ಳಬೇಕಾಗುವುದು. ಒಮ್ಮೊಮ್ಮೆ ಹಣವನ್ನು ಕಳೆದುಕೊಂಡು ಹಾಸಿಗೆ, ಹೊದಿಕೆ, ಆಸನ, ಮನೆ, ವಾಹನ ಯಾವುದೂ ಇಲ್ಲದೇ ಅವುಗಳಿಗಾಗಿ ಇತರರನ್ನು ಬೇಡಬೇಕಾಗುವುದು. ಅವರು ಕೊಡದೇ ಹೋದರೆ ಅವು ಗಳನ್ನು ಹೇಗಾದರೂ ಕಸಿದುಕೊಳ್ಳುವ ಕಳ್ಳದೃಷ್ಟಿಯನ್ನಿಟ್ಟು ತಿರಸ್ಕಾರಕ್ಕೆ ಒಳಗಾಗಬೇಕಾಗುವುದು. ಹೀಗೆ ಪರಸ್ಪರವಾಗಿ ದ್ವೇಷವು ಬೆಳೆದರೂ ವ್ಯಾವಹಾರಿಕವಾದ ಕಾರಣಕ್ಕಾಗಿ ಅವರೊಡನೆ ಬಾಂಧವ್ಯವನ್ನು ಕಟ್ಟಿಕೊಂಡು ಹಣಕ್ಕಾಗಿ ಮಿತಿಮೀರಿದ ಆಯಾಸ-ದುಃಖ ದ್ವೇಷಾದಿಗಳನ್ನು ಅನುಭವಿಸುತ್ತಾ ಹೆಣದಂತೆ ಬದುಕಬೇಕಾಗುವುದು. ಎಲೈ ವೀರವರನೇ! ಆ ಕಾಡಿನಲ್ಲಿ ಸಿಕ್ಕಿಕೊಂಡು ಆ ವ್ಯಾಪಾರಿಗಳು ತಮ್ಮ ಜೊತೆಗಾರರಲ್ಲಿ ಸತ್ತುಹೋದವರನ್ನು

ಅಲ್ಲಿಯೇ ತೊರೆದು ಹೊಸದಾಗಿ ಹುಟ್ಟಿದವರನ್ನು ಜೊತೆಗೂಡಿಸಿಕೊಂಡು ಅಲ್ಲಿಂದ ಹೊರಬರುವುದಕ್ಕೆ ದಾರಿಯು ತಿಳಿಯದೇ ಅಲ್ಲಿಯೇ ಸುತ್ತಾಡುತ್ತಿರುವರು. ಹಾಗೆಯೇ ಸಂಸಾರಕ್ಕೆ ಸಿಲುಕಿದ ಜೀವರು ಮರಣಹೊಂದಿದ ಬಂಧುಗಳನ್ನು ತೊರೆದು ಅವರನ್ನು ಮರೆತು ಹೊಸ ಸಂಬಂಧಗಳನ್ನು ಬೆಳೆಸಿಕೊಂಡು ಅವರೊಡನೆ ಆನಂದಿಸುತ್ತಾ ಇಲ್ಲಿಯೇ ಸುತ್ತಾಡುತ್ತಿರುವರೇ ಹೊರತು ಇಲ್ಲಿಂದ ಹಿಂದಿರುಗಿದವರು ಮತ್ತು ಯೋಗಮಾರ್ಗವನ್ನು ಆಶ್ರಯಿಸಿದವರು ಒಬ್ಬರೂ ಕಂಡುಬರುವುದಿಲ್ಲ. ಮಹಾವೀರಾಧಿವೀರರಾಗಿ ದೊಡ್ಡ ದಿಗ್ಗಜಗಳನ್ನೂ ದಿಕ್ಪಾಲಕರನ್ನೂ ಗೆದ್ದವರು ಕೂಡ–'ಈ ಭೂಮಿಯು ನನ್ನದು, ಈ ರಾಜ್ಯವು ನನ್ನದು'–ಎಂಬ ಅಭಿಮಾನದಿಂದ ಪರಸ್ಪರ ದ್ವೇಷವನ್ನು ಸಾಧಿಸಿ ಯುದ್ಧಭೂಮಿಯಲ್ಲಿ ಮಡಿಯುವರೇ ಹೊರತು ಹಿಂಸೆಯನ್ನೂ, ವೈರವನ್ನೂ ತೊರೆದ ಮಹಾತ್ಮರು ಪಡೆಯುವ ಪರಮಾತ್ಮನ ಪರಮಪದವನ್ನು ಸಂಪಾದಿಸುವುದಿಲ್ಲ. ಈ ಭವಾಟವಿಯು ತುಂಬಾ ಮೋಹಕವಾದುದು. ಇದರಲ್ಲಿ ಅಲೆದಾಡುವ ವರ್ತಕರು ಒಮ್ಮೊಮ್ಮೆ ಇಲ್ಲಿರುವ ಸುಂದರಿಯರ ಸೊಗಸಾದ ತೋಳುಬಳ್ಳಿಗಳಲ್ಲಿ ಓಲಾಡುತ್ತಾ ಹಿಗ್ಗುವರು. ಅವರೊಡನಿರುವ ಮುದ್ದುಮಕ್ಕಳ ತೊದಲುನುಡಿಗಳೆಂಬ ಹಕ್ಕಿಗಳ ಮಧುರಧ್ವನಿಗೆ ಮನಸೋತು ನಲಿಯುವರು. ಕೆಲವೊಮ್ಮೆ ಸಿಂಹದಂತೆ ಭಯಂಕರವಾದ ಕಾಲಕ್ಕೆ ಹೆದರಿ ಅದರಿಂದ ತಪ್ಪಿಸಿಕೊಳ್ಳುವೆವೆಂಬ ಭ್ರಮೆಯಿಂದ ಪಾಷಂಡಮತಗಳೆಂಬ ಕೊಕ್ಕರೆ, ನೀರುಹಕ್ಕಿ, ಹದ್ದು ಗಳೊಡನೆ ಸ್ನೇಹಬೆಳೆಸುವರು. ಅವರು ಮೋಸಗಾರರೆಂಬುದು ತಿಳಿದು ಬರಲು–ಅವರನ್ನು ಬಿಟ್ಟು ಜ್ಞಾನಿಗಳೆಂಬ ಹಂಸಪಕ್ಷಿಗಳ ಸಮೂಹಕ್ಕೆ ಹೋಗಿ ಸೇರುವ ಇಷ್ಟವು ಇವರಿಗೆ ಉಂಟಾಗುತ್ತದೆ. ಆದರೂ ಅವರ ಸದಾಚಾರವು ಹಿಡಿಸದೇ, ಕಪಿಸದೃಶರಾದ ಕುತ್ಸಿತಕುಲ ಮತ್ತು ಜಾತಿಯವರೊಡನೆಯೇ ಸೇರಿಕೊಂಡು ಈ ಸಂಸಾರಿಜೀವರೆಂಬ ವರ್ತಕರು–ಆ ಜಾತಿಸ್ವಭಾವಕ್ಕೆ ತಕ್ಕಂತೆ ಇಂದ್ರಿಯಚೇಷ್ಟೆಗಳನ್ನು ಮಾಡುತ್ತಾ–ಇಂದ್ರಿಯಸುಖಗಳಲ್ಲಿಯೇ ಮುಳುಗಿ ತಮ್ಮ ಆಯುಸ್ಸಿನ ಕೊನೆಗಾಲ ಬಂದಿರುವುದನ್ನೂ ಮರೆತು ಬಿಡುವರು. ಹೀಗೆ ಕಪಿಜೀವಿಗಳಾಗಿ ದಾಂಪತ್ಯವೆಂಬ ಗಿಡ-ಮರಗಳಲ್ಲಿ ವಿಹರಿಸುತ್ತಾ ಹೆಂಡಿರು-ಮಕ್ಕಳ ಸ್ನೇಹಪಾಶಕ್ಕೆ ಕಟ್ಟುಬಿದ್ದು ಇಂದ್ರಿಯಭೋಗ

ವೀರ್ಯಸ್ಖಲನಗಳಿಂದ ಬಲಹೀನರಾಗಿ ಎಚ್ಚರದಪ್ಪಿ ರೋಗ-ರುಜಿನಗಳೆಂಬ ಬೆಟ್ಟದ ಗವಿಯಲ್ಲಿ ಬೀಳುವರು. ಹಾಗೆ ಬೀಳುತ್ತಿರುವಾಗ ಮೃತ್ಯುವೆಂಬ ಕಾಡಾನೆಯು ಮೇಲೆ ಬೀಳಲು ಬರುವುದನ್ನು ಕಂಡು ಹೆದರಿ ತಮ್ಮ ಪ್ರಾಚೀನ ಕರ್ಮವೆಂಬ ಬಳ್ಳಿಯನ್ನು ಆಸರೆಯೆಂದು ಹಿಡಿದು ನೇತಾಡುತ್ತಿರುವರು. ಎಲೈ ಪರಂತಪನೇ! ಹೀಗೆ ಕಾಡಿನಲ್ಲಿ ಸಿಲುಕಿದ ಜೀವನೆಂಬ ವರ್ತಕನು ಯಾವುದೋ ರೀತಿಯಲ್ಲಿ ಈ ಆಪತ್ತಿನಿಂದ ಬಿಡುಗಡೆಹೊಂದಿದರೂ ಮತ್ತೆ ಸಂಸಾರಿಗಳೆಂಬ ವರ್ತಕರ ಗುಂಪನ್ನೇ ಸೇರಿಕೊಳ್ಳುವನು. ಮಾಯೆಯ ಪ್ರೇರಣೆಯಿಂದ ಒಂದು ಬಾರಿ ಈ ಸಂಸಾರದ ಪ್ರವೃತ್ತಿಯೆಂಬ ಮಾರ್ಗಕ್ಕೆ ಬಂದುಬಿಟ್ಟರೆ ಇಲ್ಲಿಯೇ ಅಲೆದಾಡುತ್ತಾ ಇರಬೇಕಾಗುವುದು. 'ಈ ಅಜ್ಞಾನ ವಂಶದಿಂದ ನಾನು ಸಂಸಾರಿಯಾದೆನು'–ಎಂದು ತಿಳಿದು ಜ್ಞಾನಿಯಾದವ ನೊಬ್ಬನೂ ಇಲ್ಲವಪ್ಪಾ. (ಶ್ಲೋಕ 2-19)

ರಹೂಗಣ ತ್ವಮಪಿ ಹ್ಯಧ್ವನೋಽಸ್ಯ
ಸಂನ್ಯಸ್ತದಣ್ಡಃ ಕೃತಭೂತಮೈತ್ರಃ ।
ಅಸಜ್ಜಿತಾತ್ಮಾ ಹರಿಸೇವಯಾ ಶಿತಂ
ಜ್ಞಾನಾಸಿಮಾದಾಯ ತರಾತಿಪಾರಮ್ ॥೨೦॥

ಆದುದರಿಂದ, ಎಲೈ ರಹೂಗಣರಾಜನೇ! ಈ ಭವಾಟವಿಯ ಮಾರ್ಗದಲ್ಲಿ ಅಲೆದಾಡುತ್ತಿರುವ ನೀನೂ ಭೂತದ್ರೋಹವನ್ನು ಬಿಟ್ಟು ಸರ್ವ ಭೂತಗಳಲ್ಲಿಯೂ ದಯಾಪೂರ್ಣನಾಗು. ಪ್ರಾಣಿಗಳಿಗೆ ದಂಡನೆನೀಡುವ ಹಿಂಸೆಯನ್ನು ತೊರೆದು ಎಲ್ಲ ಪ್ರಾಣಿಗಳಿಗೂ ಮಿತ್ರನಾಗು. ವಿಷಯಗಳಲ್ಲಿ ಆಸಕ್ತನಾಗದೇ, ಶ್ರೀಹರಿಯ ಸೇವೆಯಿಂದ ಹರಿತವಾಗಿಸಲ್ಪಟ್ಟ ಜ್ಞಾನವೆಂಬ ಖಡ್ಗವನ್ನು ತೆಗೆದುಕೊಂಡು ಅಜ್ಞಾನವೆಂಬ ಮರಗಳ ತೋಪನ್ನು ಕತ್ತರಿಸಿ ಹಾಕಿ ಈ ಅರಣ್ಯಮಾರ್ಗದಿಂದ ಪಾರಾಗಿಬಿಡು."

ಭರತಮುನಿಯ ಈ ಉಪದೇಶಾಮೃತವನ್ನು ಕೇಳಿದ ರಹೂಗಣ ರಾಜನು ಕೃತಜ್ಞತೆ ತುಂಬಿದ ಹೃದಯದಿಂದ ಹೀಗೆ ವಿಜ್ಞಾಪಿಸಿದನು :

ಅಹೋ ನೃಜನ್ಮಾಖಿಲಜನ್ಮಶೋಭನಂ
ಕಿಂ ಜನ್ಮಭಿಸ್ತ್ವಪರೈರಪ್ಯಮುಷ್ಮಿನ್ ।

ನ ಯದ್ಧೃಷೀಕೇಶಯಶಃ ಕೃತಾತ್ಮನಾಂ
ಮಹಾತ್ಮನಾಂ ವಃ ಪ್ರಚುರಃ ಸಮಾಗಮಃ ॥೨೧॥

"ಅಹಾ! ಸಮಸ್ತಜನ್ಮಗಳಲ್ಲಿಯೂ ಈ ಮನುಷ್ಯಜನ್ಮವೇ ಅತ್ಯಂತ ಶ್ರೇಷ್ಠವಾದುದು. ಇತರ ಲೋಕಗಳಲ್ಲಿ ದೊರಕುವ ದೇವತೆಗಳ ಜನ್ಮವೇ ಮುಂತಾದ ಉತ್ಕೃಷ್ಟಜನ್ಮಗಳಿಂದಲೂ ಏನು ಮಹಾಲಾಭವಾದೀತು? ಅವುಗಳಲ್ಲಿ ಶ್ರೀಭಗವಂತನಾದ ಹೃಷಿಕೇಶನ ಕೀರ್ತಿಯಿಂದ ಪರಿಶುದ್ಧವಾದ ಅಂತಃಕರಣವುಳ್ಳ ನಿನ್ನಂತಹ ಮಹಾತ್ಮರ ಸಮಾಗಮವು ಹೆಚ್ಚಾಗಿ ಆದೀತೇ?

ನ ಹ್ಯದ್ಭುತಂ ತ್ವಚ್ಚರಣಾಬ್ಜರೇಣುಭಿ-
ರ್ಹತಾಂಹಸೋ ಭಕ್ತಿರಧೋಕ್ಷಜೇಽಮಲಾ ।
ಮೌಹೂರ್ತಿಕಾದ್ಯಸ್ಯ ಸಮಾಗಮಾಚ್ಚ ಮೇ
ದುಸ್ತರ್ಕಮೂಲೋಽಪಹತೋಽವಿವೇಕಃ ॥೨೨॥

ಎಲೈ ಮಹಾತ್ಮನೇ! ನಿನ್ನ ಅಡಿದಾವರೆಗಳ ಧೂಳನ್ನು ಸೇವನೆ ಮಾಡಿದ್ದರಿಂದ ಎಲ್ಲ ಪಾಪಸಂತಾಪಗಳನ್ನೂ ಕಳೆದುಕೊಂಡ ಮಹಾನುಭಾವರಿಗೆ ಮಹಾವಿಷ್ಣುವಿನಲ್ಲಿ ಪರಿಶುದ್ಧವಾದ ಭಕ್ತಿಯು ಲಭಿಸುವುದರಲ್ಲಿ ಅಚ್ಚರಿಯೇನೂ ಇಲ್ಲ. ನಿನ್ನೊಡನೆ ಎರಡು ಘಳಿಗೆಗಳ ಕಾಲ ಸತ್ಸಂಗಭಾಗ್ಯವನ್ನು ಪಡೆದ ಮಾತ್ರದಿಂದಲೇ ನನ್ನಲ್ಲಿದ್ದ ಕುತರ್ಕಮೂಲವಾದ ಅಜ್ಞಾನವೆಲ್ಲವೂ ನಾಶಹೊಂದಿತಲ್ಲವೇ? ಎಂತಹ ಮಹಾಮಹಿಮನು ನೀನು!

ನಮೋ ಮಹದ್ಭ್ಯೋಽಸ್ತು ನಮಃ ಶಿಶುಭ್ಯೋ
ನಮೋ ಯುವಭ್ಯೋ ನಮ ಆ ವಟುಭ್ಯಃ ।
ಯೇ ಬ್ರಾಹ್ಮಣಾ ಗಾಮವಧೂತಲಿಙ್ಗಾ-
ಶ್ಚರನ್ತಿ ತೇಭ್ಯಃ ಶಿವಮಸ್ತು ರಾಜ್ಞಾಮ್ ॥೨೩॥

ಬ್ರಹ್ಮಜ್ಞಾನಿಗಳಾದ ಮಹಾತ್ಮರು ಯಾವ ವಯಸ್ಸು, ಯಾವ ರೂಪಗಳಲ್ಲಿ ಸಂಚರಿಸುವರೋ ಹೇಳಲು ಸಾಧ್ಯವಿಲ್ಲ. ಆದುದರಿಂದ– ಬ್ರಹ್ಮಜ್ಞಾನಿಗಳಲ್ಲಿ ವಯೋವೃದ್ಧರಾದವರಿಗೆ ನಮಸ್ಕಾರವು. ಯುವಕರಿಗೂ ನಮಸ್ಕಾರವು. ವಟುಗಳಾಗಿರುವವರಿಗೂ ನಮಸ್ಕಾರವು. ಎಲ್ಲೆಡೆಗಳಿಂದಲೂ

ನಮಸ್ಕಾರವು. ತಮ್ಮ ನಿಜಸ್ವರೂಪವನ್ನು ಮರೆಮಾಚಿಕೊಂಡು ಅವಧೂತರ ವೇಷದಲ್ಲಿ ಭೂಮಿಯಲ್ಲಿ ಯಾರು ಸಂಚಾರಮಾಡುತ್ತಿದ್ದಾರೆಯೋ–ಅಂತಹ ಬ್ರಹ್ಮಜ್ಞಾನಿಶ್ರೇಷ್ಠರಾದ ಬ್ರಾಹ್ಮಣೋತ್ತಮರಿಗೆ ಮತ್ತೆ ಮತ್ತೆ ನಮಸ್ಕಾರಗಳು. ಐಶ್ವರ್ಯಮದದಿಂದ ಅಂತಹ ಮಹಾತ್ಮರನ್ನು ತಿರಸ್ಕರಿಸಿದ ನಮ್ಮಂತಹ ರಾಜರಿಗೆ ಅಂತಹ ಮಹಾತ್ಮರಿಂದ ನಿಗ್ರಹವುಂಟಾಗದಿರಲಿ ; ಅನುಗ್ರಹ ಕಲ್ಯಾಣವೇ ಆಗಲಿ."

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಎಲೈ ಉತ್ತರಾನಂದನನೇ! ಹೀಗೆ ಮಹಾನುಭಾವನಾದ ಆ ಬ್ರಹ್ಮರ್ಷಿಪುತ್ರನು–ಸಿಂಧುಸೌವೀರನರೇಶನು ತನಗೆ ಅಪಮಾನಮಾಡಿದು ದನ್ನೂ ಲೆಕ್ಕಿಸದೇ ಆತನಲ್ಲಿ ಕೃಪೆದೋರಿ ಆತನಿಗೆ ಆತ್ಮತತ್ತ್ವವನ್ನು ಉಪದೇಶ ಮಾಡಿದನು. ರಹೂಗಣರಾಜನು ಆಗ ದೀನಭಾವದಿಂದ ಆತನ ಅಡಿದಾವರೆ ಗಳಿಗೆ ನಮಸ್ಕಾರಮಾಡಿದನು. ಅನಂತರ ಅಲೆಗಳು ಅಡಗಿರುವ ತುಂಬು ಸಮುದ್ರದಂತೆ ಇಂದ್ರಿಯವ್ಯಾಪಾರಗಳನ್ನು ಒಳಗೆ ಅಡಗಿಸಿಕೊಂಡ ಪ್ರಶಾಂತ ಗಂಭೀರನಾದ ಆ ಭರತಮುನೀಂದ್ರನು ಮೌನಿಯಾಗಿ ಭೂಮಿಯಲ್ಲಿ ಸಂಚರಿಸುತ್ತಿದ್ದನು. ಆತನ ಸತ್ಸಂಗದಿಂದ ಸಿಂಧುಸೌವೀರಾಧಿಪತಿಯು ಪರ ಮಾತ್ಮತತ್ತ್ವಜ್ಞಾನವನ್ನು ಪಡೆದು ತನ್ನ ಅಂತಃಕರಣದಲ್ಲಿ ಅವಿದ್ಯೆಯಿಂದ ಆರೋಪಿತವಾಗಿದ್ದ ದೇಹಾತ್ಮಬುದ್ಧಿಯನ್ನು ತೊರೆದುಬಿಟ್ಟನು. ಎಲೈ ರಾಜೇಂದ್ರನೇ! ಭಗವಂತನನ್ನು ಆಶ್ರಯಿಸಿರುವ ಭಾಗವತೋತ್ತಮರನ್ನು ಯಾರು ಶರಣುಹೊಂದುತ್ತಾರೆಯೋ–ಅವರಿಗೆ ಇದೇ ಮಹಿಮೆಯುಂಟಾ ಗುವುದಪ್ಪಾ." ಹೀಗೆ ಭರತ-ರಹೂಗಣರ ಸಂಭಾಷಣೆಯಲ್ಲಿ ಶುಕಮಹರ್ಷಿ ಗಳು ಹೇಳಿದ ಭವಾಟವಿಯ ವರ್ಣನೆಯನ್ನು ಕೇಳಿದ ಪರೀಕ್ಷಿದ್ರಾಜನು– "ಪರಮಭಾಗವತೋತ್ತಮರಾದ ಮುನಿಶ್ರೇಷ್ಠರೇ! ಮಹಾಜ್ಞಾನಿಗಳಾದ ತಾವು ಮಹಾರೂಪಕದ ಮೂಲಕ ಪರೋಕ್ಷವಾದ ಮಾತುಗಳಿಂದ ಭವಾಟ ವಿಯ ಮಾರ್ಗವನ್ನು ವರ್ಣನೆಮಾಡಿರಿ. ಇದರ ರಹಸ್ಯವು ವಿವೇಕಿಗಳಿಗೆ ಮಾತ್ರವೇ ಗೋಚರವಾಗುವುದು. ಅಲ್ಪಬುದ್ಧಿಯುಳ್ಳ ಮನುಷ್ಯರಿಗೆ ಸುಲಭ ವಾಗಿ ಅರ್ಥವಾಗುವುದಿಲ್ಲ. ಆದುದರಿಂದ ತಾವು ಪಾಮರರಿಗೆ ಸುಲಭವಾಗಿ

ಅರ್ಥವಾಗುವಂತೆ ಈ ರಹಸ್ಯಪ್ರಬಂಧವನ್ನು ಸ್ಪಷ್ಟವಾಗಿ ಬಿಡಿಸಿ ಹೇಳ ಬೇಕು"–ಎಂದು ಮಹರ್ಷಿಗಳನ್ನು ಪ್ರಾರ್ಥಿಸಿದನು. (ಶ್ಲೋಕ 24-26)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಪಂಚಮಸ್ಕಂಧದ ೧೩ನೆಯ ಅಧ್ಯಾಯವು ಮುಗಿಯಿತು.

ಪಂಚಮಸ್ಕಂಧ ೧೪ನೆಯ ಅಧ್ಯಾಯ

ಶುಕಮುನಿಯ ಭವಾಟವೀಪ್ರಬಂಧದ ಪರಮಾರ್ಥವನ್ನು ಸ್ಪಷ್ಟಪಡಿಸಿದುದು

ಪರೀಕ್ಷಿದ್ರಾಜನ ಪ್ರಾರ್ಥನೆಯಂತೆ ಭವಾಟವಿಯ ಪ್ರಬಂಧದ ಪರಮಾರ್ಥವನ್ನು ವಿವರಿಸುತ್ತಾ ಶುಕಮುನೀಂದ್ರರು ಹೀಗೆಂದರು :

ಯ ಏಷ ದೇಹಾತ್ಮಮಾನಿನಾಂ ಸತ್ತ್ವಾದಿಗುಣವಿಶೇಷ-ವಿಕಲ್ಪಿತಕುಶಲಾಕುಶಲಮವಹಾರವಿನಿರ್ಮಿತವಿವಿಧದೇಹಾವಲಿಭಿ-ರ್ವಿಯೋಗಸಂಯೋಗಾದ್ಯನಾದಿಸಂಸಾರಾನುಭವಸ್ಯ ದ್ವಾರಭೂತೇನ ಷಡಿನ್ದ್ರಿಯವರ್ಗೇಣ ತಸ್ಮಿನ್ದುರ್ಗಾಧ್ವವದಸುಗಮೇಽಧ್ವನ್ಯಾಪತಿತ ಈಶ್ವರಸ್ಯ ಭಗವತೋ ವಿಷ್ಣೋರ್ವಶವರ್ತಿನ್ಯಾಮಾಯಯಾ ಜೀವಲೋಕೋಽಯಂ ಯಥಾ ವಣಿಕ್ಸಾರ್ಥೋಽಪರಃ ಸ್ವದೇಹನಿಷ್ಪಾದಿತಕರ್ಮಾನುಭವಃ ಶ್ಮಶಾನವದಶಿವತಮಾಯಾಂ ಸಂಸಾರಾಟವ್ಯಾಂ ಗತೋ ನಾದ್ಯಾಪಿ ವಿಫಲಬಹುಪ್ರತಿಯೋಗೇಹ-ಸ್ತತ್ತಾಪೋಪಶಮನೀಂ ಹರಿಗುರುಚರಣಾರವಿನ್ದಮಧುಕರಾನು-ಪದವೀಮವರುನ್ಧೇ ಯಸ್ಯಾಮು ಹವಾ ಏತೇ ಷಡಿನ್ದ್ರಿಯ-ನಾಮಾನಃ ಕರ್ಮಣಾ ದಸ್ಯವ ಏವ ತೇ ॥೧॥

"ಭಕ್ತಶ್ರೇಷ್ಠನೇ! ಕೇಳು. ಈ ಜೀವಸಮೂಹವು*–ಪಾರುಹೊಂದಲು ಅತಿಕಷ್ಟವಾಗಿರುವ ಈ ಸಂಸಾರದ ಮಾರ್ಗದಲ್ಲಿ ಬಂದು ಬೀಳುವುದಕ್ಕೆ–ಭಗ

---

* ಜೀವರಿಗೆ ಸಂಸಾರದ ಬಂಧನವುಂಟಾಗುವುದಕ್ಕೆ ಮಾಯೆಯೇ ಕಾರಣ ವಾಗಿದ್ದರೆ– ಸಂಸಾರದ ಮೋಕ್ಷಕ್ಕೂ ಮಾಯೆಯೇ ಕಾರಣವಾಗಲಿ. ಶ್ರೀಭಗವದನು ಗ್ರಹದ ಆವಶ್ಯಕತೆಯೇನು?–ಎಂಬ ಪ್ರಶ್ನೆಗೆ ಸಾರಾರ್ಥದರ್ಶಿನೀವ್ಯಾಖ್ಯಾನದಲ್ಲಿ ಹೀಗೆ

ವಂತನಾದ ಶ್ರೀಮಹಾವಿಷ್ಣುವಿನ ಮಾಯೆಯೇ ಕಾರಣವು. ತ್ರಿಗುಣಾತ್ಮಕ ವಾದ ಮಾಯೆಗೆ ಒಳಗಾಗಿ ದೇಹಾಭಿಮಾನವನ್ನು ಹೊಂದಿದ ಜೀವಗಳು ಆಯಾಗುಣಗಳಿಗೆ ತಕ್ಕಂತೆ ಶುಭಕರ್ಮಗಳನ್ನಾಗಲೀ, ಅಶುಭಕರ್ಮಗಳ ನ್ನಾಗಲೀ, ಶುಭಾಶುಭಮಿಶ್ರಕರ್ಮಗಳನ್ನಾಗಲೀ ಆಚರಿಸುತ್ತವೆ. ಆ ಕರ್ಮ ಗಳಿಂದ ನಾನಾದೇಹಗಳನ್ನು ಪಡೆಯುತ್ತಾ ಅವುಗಳಲ್ಲಿ ಆತ್ಮಾಭಿಮಾನವನ್ನು ಇಟ್ಟುಕೊಂಡು ಆ ದೇಹಸಂಯೋಗವಾದರೆ ಹಿಗ್ಗುತ್ತವೆ ; ದೇಹವಿಯೋಗ ವಾದರೆ ಕುಗ್ಗುತ್ತವೆ. ಈ ಚಕ್ರಕ್ಕೆ ಸಂಸಾರವೆಂದು ಹೆಸರು. ಈ ಸಂಸಾರದ ಅನುಭವಕ್ಕೆ ಮನಸ್ಸು ಮತ್ತು ಐದು ಜ್ಞಾನೇಂದ್ರಿಯಗಳೇ ದ್ವಾರಗಳು. ಅವು ಗಳಿಗೆ ಅಧೀನವಾಗಿ ಈ ಜೀವಸಮೂಹವು ದಾರಿಯನ್ನು ಮರೆತು ಭಯಂ ಕರವಾದ ಅರಣ್ಯದಲ್ಲಿ ಅಲೆದಾಡುತ್ತಾ ಹಣಸಂಪಾದನೆಯ ಲೋಭವುಳ್ಳ ವರ್ತಕಗಣದಂತೆ ಶ್ರೀಭಗವಂತನ ಮಾಯೆಯಿಂದ ಈ ಅರಣ್ಯಮಾರ್ಗಕ್ಕೆ ಒಯ್ಯಲ್ಪಟ್ಟು ಸಂಸಾರವೆಂಬ ಅರಣ್ಯವನ್ನು ಬಂದು ಸೇರುವುದು. ಇಲ್ಲಿ ಅಲೆ ದಾಡುತ್ತಾ ಈ ಜೀವಸಮೂಹವು ತನ್ನ ಶರೀರದಿಂದ ಮಾಡಿದ ಕರ್ಮಗಳ ಫಲವನ್ನು ಅನುಭವಿಸಬೇಕಾಗುವುದು. ಇಲ್ಲಿ ಅನೇಕವಿಘ್ನಗಳಿರುವುದರಿಂದ ಈ ವರ್ತಕರಿಗೆ ತಮ್ಮ ವ್ಯಾಪಾರದಲ್ಲಿ ಸಫಲತೆಯುಂಟಾಗುವುದಿಲ್ಲ. ಆದರೂ ಇವರು ಶ್ರಮವನ್ನು ಪರಿಹಾರಮಾಡುವ ಶ್ರೀಹರಿಯ ಮತ್ತು ಶ್ರೀಗುರು ದೇವರ ಅಡಿದಾವರೆಗಳ ಮಕರಂದವನ್ನು ಪಾನಮಾಡುವುದರಲ್ಲಿ ರಸಿಕ ರಾದ ಭಕ್ತರೆಂಬ ಭ್ರಮರಗಳ ಮಾರ್ಗವನ್ನು ಅನುಸರಿಸುವುದಿಲ್ಲ. 'ನಾದ್ಯಾಪಿ

ಉತ್ತರ ಹೇಳಿದೆ : ಶ್ರೀಭಗವಂತನ ಮಾಯೆಯು ದುಸ್ತರವಾಗಿದ್ದರೂ ಅದಕ್ಕೆ ಸ್ವಾತಂತ್ರ್ಯ ವಿಲ್ಲ. ಅದು ಭಗವಂತನಿಗೆ ಅಧೀನ. ಅದನ್ನು ಪ್ರಯೋಗಿಸುವ ಮತ್ತು ಉಪಸಂಹಾರಮಾಡುವ ಪೂರ್ಣಶಕ್ತಿಯು ಶ್ರೀಭಗವಂತನಿಗೇ ಇರುವುದು. ಅದಕ್ಕೆ ಶ್ರೀಗೀತೆಯಲ್ಲಿ–'ನನ್ನನ್ನು ಯಾರು ಶರಣುಹೊಂದುತ್ತಾರೆಯೋ ಅವರು ಈ ಮಾಯೆಯನ್ನು ದಾಟುವರು'–ಎಂದು ಸಾರಿದೆ.

ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ ।
ಮಾಮೇವ ಯೇ ಪ್ರಪದ್ಯನ್ತೇ ಮಾಯಾಮೇತಾಂ ತರನ್ತಿ ತೇ ॥

ಮಾಯೆಯನ್ನು ದಾಟಲು ಶ್ರೀಭಗವದನುಗ್ರಹವೇ ಕಾರಣ. ಜ್ಞಾನ-ಕರ್ಮಗಳೆರಡೂ ಸೇರಿ ಮೋಕ್ಷಕ್ಕೆ ಕಾರಣ–ಎಂಬ ಸಮುಚ್ಚಯವಾದವು ಇದರಿಂದ ನಿರಾಕೃತವಾಗುತ್ತದೆ.

(ಶ್ಲೋಕ ೧)

ವಿಫಲಬಹುಪ್ರತಿಯೋಗೇಹಃ ತತ್ತಾಪೋಪಶಮನೀಂ ಹರಿಗುರು ಚರಣಾರವಿನ್ದಮಧುಕರಾನುಪದವೀಮವರುನ್ಧೇ' ಈ ಸಂಸಾರವೆಂಬ ಅರಣ್ಯದಲ್ಲಿರುವ ಆರು ಮಂದಿ ಕಳ್ಳ–ದರೋಡೆಗಾರರು ಯಾರು? ಎಂದರೆ–ಮನಸ್ಸೂ ಸೇರಿದ ಆರು ಇಂದ್ರಿಯಗಳು. ದರೋಡೆಗಾರರ ಕಾರ್ಯವನ್ನು ಮಾಡುವುದರಿಂದ ಅವುಗಳನ್ನು ದರೋಡೆಗಾರರೆಂದು ಕರೆದಿದೆ.

ಮನುಷ್ಯನು ಶ್ರಮಪಟ್ಟು ಸಂಪಾದಿಸಿದ ಹಣವನ್ನು ಧರ್ಮಕಾರ್ಯಗಳಿಗೆ ಬಳಸಿದರೆ–ಅದು ಸದುಪಯೋಗವಾಗುತ್ತದೆ. ಆ ಧರ್ಮವನ್ನೇ ಸಾಕ್ಷಾತ್ತಾದ ಪರಮಪುರುಷನ ಶ್ರೀಭಗವಂತನ ಆರಾಧನೆಯ ರೂಪದಲ್ಲಿ ಆಚರಿಸಿದರೆ–ಅದು ಪರಲೋಕದಲ್ಲಿ ಮೋಕ್ಷಕ್ಕೆ ಕಾರಣವಾಗುವುದೆಂದು ಹೇಳುತ್ತಾರೆ. ಆದರೆ ಮನುಷ್ಯನ ಬುದ್ಧಿಯೆಂಬ ಸಾರಥಿಯು ವಿವೇಕಹೀನನಾಗಿ ಮನಸ್ಸು ಹತೋಟಿಯಲ್ಲಿ ಇರದೇ ಇದ್ದರೆ ಧರ್ಮಕ್ಕೆ ಉಪಯೋಗಿಸಬೇಕಾಗಿದ್ದ ಆತನ ಹಣವನ್ನು ಈ ಮನಸ್ಸೂ ಸೇರಿದ ಆರು ಇಂದ್ರಿಯಗಳು ದರ್ಶನ, ಸ್ಪರ್ಶ, ಶ್ರವಣ, ರುಚಿನೋಡುವಿಕೆ, ಮೂಸುವಿಕೆ, ಸಂಕಲ್ಪ-ವಿಕಲ್ಪಗಳನ್ನು ಮಾಡುವಿಕೆ, ನಿಶ್ಚಯಿಸುವಿಕೆ–ಎಂಬ ವೃತ್ತಿಗಳ ಮೂಲಕ ಗ್ರಾಮ್ಯವಾದ ಸುಖ-ಭೋಗಗಳಲ್ಲಿ ಸಿಕ್ಕಿಸಿ, ಅಪ್ರಾಮಾಣಿಕನೂ ಅಸಮರ್ಥನೂ ಆದ ನಾಯಕನನ್ನು ಅನುಸರಿಸಿ ಹೋಗುವ ಎಚ್ಚರತಪ್ಪಿದ ವರ್ತಕಗಣದ ಹಣವನ್ನು ಕಳ್ಳಕಾಕರು ಹೇಗೋ ಹಾಗೆ–ಲೂಟಿಮಾಡಿಬಿಡುತ್ತವೆ. ಈ ಇಂದ್ರಿಯಗಳೆಂಬ ಕಳ್ಳರು ಮಾತ್ರವಲ್ಲದೇ ಇನ್ನೂ ಹಲವಾರು ಮಂದಿ ಆ ಹಣವನ್ನು ಕಿತ್ತುಕೊಳ್ಳುತ್ತಾರೆ. ಅವರು ಯಾರೆಂದರೆ : ಹೆಂಡಿರು-ಮಕ್ಕಳು ಮುಂತಾದ ಕುಟುಂಬವರ್ಗದವರು. ಇವರು ಹೆಸರಿಗೆ ಕುಟುಂಬವರ್ಗದವರಾದರೂ ಇವರು ಮಾಡುವ ಕಾರ್ಯದ ದೃಷ್ಟಿಯಿಂದ ಅವರನ್ನು ತೋಳ-ನರಿಗಳಿಗೇ ಹೋಲಿಸಬೇಕು. ತೋಳಗಳು ಕುರಿಮೇಯಿಸುವವರ ರಕ್ಷಣೆಯಲ್ಲಿರುವ ಕುರಿಗಳನ್ನು ಎತ್ತಿಕೊಂಡು ಹೋಗುವಂತೆಯೇ ಈ ಕುಟುಂಬವರ್ಗದವರೂ ಧನಲೋಭವುಳ್ಳ ಕುಟುಂಬಿಯ ಹಣವನ್ನು ಆತನಿಗೆ ಕೊಡುವ ಇಷ್ಟವಿಲ್ಲದಿದ್ದರೂ ದೋಚಿಕೊಂಡು ಹೋಗುತ್ತಾರೆ. ಆತನ ಕಣ್ಣೆದುರಿಗೇ ದೋಚಿಕೊಂಡು ಹೋಗುತ್ತಾರೆ. ಹೊಲದಲ್ಲಿರುವ ಕಸ-ಕಡ್ಡಿಗಳ

ಬೀಜವನ್ನು ಸುಟ್ಟುಹಾಕದೇ ಇದ್ದರೆ ಆ ಹೊಲವನ್ನು ಪ್ರತಿವರ್ಷವೂ ಉತ್ತು ಹಸನುಮಾಡುತ್ತಿದ್ದರೂ ಮತ್ತೆ ಬೀಜವನ್ನು ನೆಡುವ ವೇಳೆಗೆ ಬಳ್ಳಿಗಳು ಪೊದರುಗಳು ಮತ್ತು ಕಳೆ-ಮೆಳೆಗಳು ಅಲ್ಲಿ ಒತ್ತಾಗಿ ತುಂಬಿಕೊಳ್ಳುತ್ತವೆ ಯಲ್ಲವೇ? ಹಾಗೆಯೇ ಈ ಸಂಸಾರವೂ ಕರ್ಮಕ್ಷೇತ್ರವು. ಇದರಲ್ಲಿ ಕರ್ಮ ಗಳನ್ನು ಎಂದಿಗೂ ಸಂಪೂರ್ಣವಾಗಿ ಕಿತ್ತುಹಾಕಲು ಸಾಧ್ಯವಿಲ್ಲ. ಏಕೆಂದರೆ : ಈ ಮನೆ ಎನ್ನುವುದು ಸಕಲಕಾಮನೆಗಳಿಗೂ ಪೆಟ್ಟಿಗೆಯಾಗಿದೆ. '**ಗೃಹಾಶ್ರಮಃ ಕರ್ಮಕ್ಷೇತ್ರಂ ಯಸ್ಮಿನ್ನ ಹಿ ಕರ್ಮಾಣ್ಯುತ್ಸೀದನ್ತಿ ಯದಯಂ ಕಾಮ-ಕರಣ್ಡ ಏಷ ಆವಸಥಃ**' ಕರ್ಮಗಳು ನಷ್ಟವಾದರೂ ಕರ್ಮವಾಸನೆಗಳು ಮಾತ್ರ ಹೋಗುವುದೇ ಇಲ್ಲ. ಈ ಗೃಹಸ್ಥಾಶ್ರಮದಲ್ಲಿರುವ ವ್ಯಕ್ತಿಗೆ ಹಣವು ಹೊರಗೆ ಓಡಾಡುವ ಪ್ರಾಣದಂತೆ ಪ್ರಿಯತಮವಾಗಿರುವುದು. ಅದನ್ನು ಕಾಡುನೊಣಗಳು, ಕಾಡುಸೊಳ್ಳೆಗಳು, ಮಿಡತೆಗಳು, ಹಕ್ಕಿಗಳು, ಕಳ್ಳಕಾಕರು ಮತ್ತು ಇವುಗಳಿಗೆ ಸಮನಾದ ಕ್ಷುದ್ರಜನರು ಕಸಿದುಕೊಂಡು ಹೋಗುತ್ತಿರು ವುದನ್ನು ಕಂಡು ಕಡುಸಂಕಟವಾಗುತ್ತಿದ್ದರೂ ಈತನು ಅವಿದ್ಯೆ, ಕಾಮ ಮತ್ತು ಕರ್ಮಗಳಿಗೆ ವಶನಾಗಿ ಗಂಧರ್ವನಗರದಂತಿರುವ ಈ ಅಸತ್ತಾದ ಪ್ರಪಂಚವನ್ನು ನಿತ್ಯಸತ್ಯವೆಂದೇ ಭಾವಿಸುತ್ತಿರುವನು. ಇದರಲ್ಲಿಯೇ ಪಾನ, ಭೋಜನ, ಕಾಮಸುಖಗಳೇ ಮುಂತಾದ ವ್ಯಸನಗಳಲ್ಲಿ ಆಸಕ್ತನಾಗಿ ಬಿಸಿಲ್ದೊರೆಯಂತಿರುವ ಹೂಮಾಲೆ-ಗಂಧಗಳೇ ಮುಂತಾದ ವಿಷಯಗಳನ್ನು ಅರಸುತ್ತಾ ಅವುಗಳನ್ನು ಹಿಂಬಾಲಿಸುವನು. ಛಳಿಯಿಂದ ಗಡ-ಗಡನೆ ನಡು ಗುತ್ತಿರುವ ಮನುಷ್ಯನು ಬೆಂಕಿಯನ್ನು ಸಂಪಾದಿಸಲು ಹೊರಟು ಕಾಡಿನಲ್ಲಿ ಓಡಾಡುವ ಕೊಳ್ಳಿಪಿಶಾಚಿಗಳನ್ನೇ ಬೆಂಕಿಯೆಂದು ಭ್ರಮಿಸಿ ಅವುಗಳ ಬಳಿಗೆ ಹೋಗಿ ಬೆಂಕಿಯೂ ಸಿಕ್ಕದೆ ಆ ಪಿಶಾಚಿಗಳ ಕೈಗೆ ಸಿಕ್ಕಿ ನಾಶಹೊಂದುವಂತೆ– ಈತನು ಚಿನ್ನದಂತೆ ಕೆಂಪಾಗಿರುವ ರಜೋಗುಣಕ್ಕೆ ವಶನಾಗಿ ಸಮಸ್ತದೋಷ ಗಳಿಗೂ ಆಕರವಾಗಿ ಅಗ್ನಿದೇವತೆಯ ಮಲವಾಗಿರುವ ಚಿನ್ನವನ್ನು ಸಂಪಾ ದಿಸುವೆನೆಂದು ಹೊರಟು ಚಿನ್ನವೂ ದೊರೆಯದೇ ಅನರ್ಥಕ್ಕೂ ಈಡಾಗು ವನು. ಕೆಲವೊಮ್ಮೆ ತನ್ನ ದೇಹಯಾತ್ರೆಗೆ ಬೇಕಾದ ಅನ್ನ, ನೀರು, ಹಣ ಮುಂತಾದುವುಗಳನ್ನು ಗಳಿಸಬೇಕೆಂದು ಈ ಅರಣ್ಯದಲ್ಲಿ ಅಲ್ಲಲ್ಲಿ ಅಲೆದಾಡು ವನು. ಇನ್ನೊಮ್ಮೆ ಸುಂಟರಗಾಳಿಯಂತೆ ಕಣ್ಣಿಗೆ ಮಣ್ಣೆರಚುವ ಹೆಣ್ಣಿಗೆ ಮರುಳಾಗಿ ಆಕೆಯ ತೊಡೆಯಲ್ಲಿ ಕುಳಿತು ಕಾಮರಾಗದಿಂದ ಕುರುಡನಾಗಿ

ಸತ್ಪುರುಷರ ಮರ್ಯಾದೆಯನ್ನೂ ಲೆಕ್ಕಿಸುವುದಿಲ್ಲ. ಆಗ ಆತನ ಕಣ್ಣುಗಳಲ್ಲಿ ರಜೋಗುಣವೆಂಬ ಧೂಳು ತುಂಬಿ ಬುದ್ಧಿಯು ಮಲಿನವಾಗಿ ಅಗ್ನಿ, ವರುಣರೇ ಮುಂತಾದ ದಿಗ್ದೇವತೆಗಳು ತನ್ನ ಎಲ್ಲ ಕರ್ಮಗಳಿಗೂ ಸಾಕ್ಷಿಗಳಾಗಿರುವುದೂ ಮರೆತುಹೋಗುವುದು. ಕೆಲವೊಮ್ಮೆ ಪರಮಾತ್ಮನ ಅನುಗ್ರಹದಿಂದ ಈ ಶಬ್ದ-ಸ್ಪರ್ಶ ವಿಷಯಗಳೆಲ್ಲವೂ ವ್ಯರ್ಥವೆಂದು ತಿಳಿದು ಬಂದರೂ ಅನಾದಿಕಾಲದಿಂದ ದೇಹದಲ್ಲಿ ಆತ್ಮಬುದ್ಧಿಯನ್ನಿಟ್ಟುಕೊಂಡಿದ್ದರಿಂದ ಆತನ ವಿವೇಕಬುದ್ಧಿಯು ನಷ್ಟವಾಗುವುದು ಮತ್ತು ಬಿಸಿಲ್ದೊರೆಗೆ ಸಮನಾಗಿರುವ ಶಬ್ದಾದಿ ವಿಷಯಗಳನ್ನು ಕುರಿತೇ ಓಡುವನು. ಇನ್ನೊಮ್ಮೆ ಗೂಗೆಯ ಕೂಗಿನಂತೆ ಎದುರಿನಲ್ಲೇ ಕಟುವಾಗಿ ಮಾತನಾಡುವ ಶತ್ರುಗಳ ಭಾಷಣವು ಆತನಿಗೆ ಕರ್ಣಶೂಲೆಯನ್ನುಂಟುಮಾಡುವುದು. ಕೆಲವೊಮ್ಮೆ ನೆಲಗೋಳಿಹುಳುಗಳ ಶಬ್ದದಂತೆ ಪರೋಕ್ಷವಾಗಿ ಬೆದರಿಕೆಯ ಮಾತುಗಳನ್ನಾಡಿ ಮನಸ್ಸನ್ನು ಸೀಳುವ ರಾಜರ ಭೀಕರವಾದ ಭಾಷಣದಿಂದ ಈತನು ಸಂಕಟಪಡುವನು. ಪೂರ್ವಪುಣ್ಯವನ್ನು ಕಳೆದುಕೊಂಡ ಈತನು ಬದುಕಿದ್ದರೂ ಸತ್ತವನಂತೆ ಆಗುವನು. ಕಡುಬಡವನಾಗಿ ದೈನ್ಯದಿಂದ ಕೂಡಿ ಇಹ-ಪರಜೀವನಗಳೆರಡಕ್ಕೂ ಸಾಧನವಾಗದಂತೆ ಹುಚ್ಚುಬೇವು, ಕಾಗೆಮೋರೆಯೇ ಮುಂತಾದ ಪಾಪವೃಕ್ಷಗಳಿಗೂ, ವಿಷದ ಬಳ್ಳಿ, ವಿಷದ ಬಾವಿಗಳಿಗೂ ಸಮನಾಗಿರುವ ಜಿಪುಣರಾದ ಹಣಗಾರರನ್ನು ಆಶ್ರಯಿಸಬೇಕಾಗುವುದು. ಮತ್ತೊಮ್ಮೆ ದುರ್ಜನರ ಸಂಗದಿಂದ ಬುದ್ಧಿಯನ್ನು ಕೆಡಿಸಿಕೊಂಡು ನೀರು ಬತ್ತಿಹೋದ ನದಿಯಲ್ಲಿ ದುಃಖಪಡುವ ದುರ್ಭಾಗ್ಯನಂತೆ–ಸತ್ಯರಸರಹಿತವಾಗಿ ಇಹ-ಪರಲೋಕಗಳೆರಡರಲ್ಲೂ ದುಃಖವನ್ನುಂಟುಮಾಡುವ ಪಾಷಂಡ ಮತಗಳಲ್ಲಿ ಸಿಕ್ಕಿಹಾಕಿಕೊಳ್ಳುವನು. ಹೀಗೆ ದುರ್ಮತಗಳನ್ನಾಶ್ರಯಿಸಿ ಭೂತ ಹಿಂಸೆಯೇ ಮುಂತಾದ ದುಷ್ಟಕಾರ್ಯಗಳನ್ನು ಮಾಡಿದರೂ ಹೊಟ್ಟೆಗೆ ಅನ್ನವು ಸಿಕ್ಕದೇ ಹೋದರೆ ತಂದೆ-ಮಗ ಮುಂತಾದ ಬಂಧುಗಳಲ್ಲಿ ಹುಲ್ಲು ಕಡ್ಡಿಯಷ್ಟು ದ್ರವ್ಯವು ಯಾರಲ್ಲಾದರೂ ಇದ್ದರೆ–ಅದನ್ನೂ ಅವರಿಂದ ಬಲವಂತದಿಂದ ಕಸಿದುಕೊಳ್ಳುವನು. ಹಾಗೂ ದ್ರವ್ಯವು ದೊರೆಯದೇ ಹೋದರೆ ತನ್ನ ತಂದೆ-ಮಕ್ಕಳನ್ನಾದರೂ ಅದಕ್ಕಾಗಿ ಪೀಡಿಸುವನು. ದ್ರವ್ಯಸಂಪಾದನೆಗೆ ಯಾವ ಪ್ರಯತ್ನವೂ ಸಫಲವಾಗದೇ ಹೋದರೆ ಪ್ರಿಯವಾದ ವಿಷಯಗಳಿಂದ ಶೂನ್ಯವಾಗಿ ಪರಿಣಾಮದಲ್ಲಿ ಸಂತಾಪವನ್ನೇ ಉಂಟುಮಾಡುವ

ಕಾಡುಗಿಚ್ಚಿನಂತಿರುವ ತನ್ನ ಮನೆಗೆ ಬಂದು ಇಷ್ಟಜನರ ಅಗಲಿಕೆಯೇ ಮುಂತಾದ ಶೋಕಾಗ್ನಿ–ಪಶ್ಚಾತ್ತಾಪರೂಪಗಳಾದ ದುಃಖಗಳನ್ನು ಅನುಭವಿಸ ಬೇಕಾಗುವುದು. ಶೋಕಾಗ್ನಿಯು ಭುಗಿಲೆದ್ದು ಇವನು ಸಂತಾಪ-ನಿರ್ವೇದ ಗಳನ್ನು ಅನುಭವಿಸಬೇಕಾಗುವುದು. ಇನ್ನೊಮ್ಮೆ ಕಾಲಪುರುಷರಂತೆ ಭಯಂಕರರಾದ ರಾಜಕುಲದವರೆಂಬ ರಾಕ್ಷಸರು ಈತನಿಗೆ ಪ್ರಾಣದಂತೆ ಪ್ರಿಯತಮವಾಗಿರುವ ಧನವನ್ನು ದೋಚುವರು. ಆಗ ಈತನು ಸತ್ತವನಂತೆ ಚೈತನ್ಯಹೀನನಾಗುವನು. ಮತ್ತೊಮ್ಮೆ ಕನಸಿನಲ್ಲಿ ಕಾಣುವ ತಂದೆ- ತಾತಂದಿರೇ ಮುಂತಾದವರಂತೆ ಮನೋರಥದಿಂದ ಕಲ್ಪಿತರಾಗಿರುವ ಸ್ವಜನರನ್ನೂ ನಿಜವೆಂದೇ ನಂಬಿ ಅವರ ಸಹವಾಸದಲ್ಲಿ ಕ್ಷಣಿಕವಾದ ಸುಖ ವನ್ನು ಅನುಭವಿಸುವನು. ಗೃಹಸ್ಥರಿಗೆ ವಿಹಿತವಾಗಿರುವ ಬಗೆ-ಬಗೆಯ ಕರ್ಮವಿಧಾನಗಳೇ ಮಹಾಪರ್ವತವು. ಈತನು ಕೆಲವೊಮ್ಮೆ ಅದರ ಶಿಖರವನ್ನೇರಬೇಕೆಂದು ಬಯಸಿ ಸಂಸಾರದಲ್ಲುಂಟಾಗುವ ವ್ಯಸನಗಳಿಂದ ಧೈರ್ಯಗುಂದಿ ಕಲ್ಲು-ಮುಳ್ಳುಗಳಿಂದ ತುಂಬಿದ ಭೂಮಿಯನ್ನು ಹೊಕ್ಕವ ನಂತೆ ದುಃಖದಲ್ಲಿ ಬೀಳುವನು. ಕೆಲವೊಮ್ಮೆ ಈತನು ಜಠರಾಗ್ನಿಯ ಜ್ವಾಲೆಯೆಂಬ ಹಸಿವಿನಿಂದ ಪೀಡಿತನಾಗಿ ತನ್ನ ಕುಟುಂಬದ ಮೇಲೆಯೇ ಎಗರಿಬೀಳುತ್ತಾನೆ. ಅನಂತರ ಈತನೇ ಮತ್ತೊಮ್ಮೆ ನಿದ್ರೆಯೆಂಬ ಹೆಬ್ಬಾವಿನ ಹಿಡಿತಕ್ಕೆ ಸಿಕ್ಕಿಬೀಳುತ್ತಾನೆ. ಆಗ ಅಜ್ಞಾನವೆಂಬ ಘೋರವಾದ ಕಗ್ಗತ್ತಲೆಯಲ್ಲಿ ಮುಳುಗಿ ಶೂನ್ಯವಾದ ಅರಣ್ಯದಲ್ಲಿ ಎಸೆಯಲ್ಪಟ್ಟ ಹೆಣದಂತೆ ಬಿದ್ದು ನಿದ್ರಿಸುತ್ತಿರುವನು. ಆಗ ಈತನಿಗೆ ಯಾವುದರ ಜ್ಞಾನವೂ ಇರುವುದಿಲ್ಲ. (ಶ್ಲೋಕ 2-20)

ಕೆಲವೊಮ್ಮೆ ದುರ್ಜನರೆಂಬ ವಿಷಸರ್ಪಗಳು ಈತನನ್ನು ಬಲವಾಗಿ ಕಚ್ಚಿ ತಿರಸ್ಕರಿಸುತ್ತವೆ. ಆಗ ಇತರರನ್ನು ಕಚ್ಚಲು ಸಾಧನವಾಗಿದ್ದ ಇವನ ಗರ್ವವೆಂಬ ಹಲ್ಲುಗಳು ಮುರಿದುಬೀಳುತ್ತವೆ. ಈತನಿಗೆ ಅಶಾಂತಿಯಿಂದ ನಿದ್ರೆಯು ಹತ್ತುವುದಿಲ್ಲ. ಮರ್ಮಸ್ಥಾನಗಳಲ್ಲಿ ಪೀಡೆಯುಂಟಾಗುವುದರಿಂದ ಕ್ಷಣ-ಕ್ಷಣಕ್ಕೂ ವಿವೇಕಶಕ್ತಿಯು ಕ್ಷೀಣಿಸುತ್ತಿರಲಾಗಿ–ಈತನು ಕೊನೆಗೆ ಕುರುಡನಂತೆ ನರಕವೆಂಬ ಪಾಳುಬಾವಿಯಲ್ಲಿ ಬಿದ್ದುಹೋಗುವನು. ಕೆಲವೊಮ್ಮೆ ವಿಷಯಸುಖಗಳೆಂಬ ಜೇನಿನ ಹನಿಗಳನ್ನು ಅರಸುತ್ತಾ ಈತನು

ಕಳ್ಳತನದಿಂದ ಪರಸ್ತ್ರೀಯರನ್ನೂ–ಪರಧನವನ್ನೂ ಆಕ್ರಮಿಸಲು ಹೋಗಿ ಅವುಗಳ ಯಜಮಾನರಿಂದಲೂ ಮತ್ತು ರಾಜರಿಂದಲೂ ಹೊಡೆದು ಸಾಯಿಸಲ್ಪಟ್ಟು, ಅನಂತವೂ ಅಪಾರವೂ ಆದ ನರಕದಲ್ಲಿ ಹೋಗಿ ಬೀಳುವನು. ಆದ್ದರಿಂದಲೇ ಪ್ರವೃತ್ತಿಮಾರ್ಗದಲ್ಲಿದ್ದು ನಡೆಸುವ ಲೌಕಿಕಕರ್ಮಗಳು ಮತ್ತು ವೈದಿಕಕರ್ಮಗಳು ಜೀವನನ್ನು ಸಂಸಾರಕ್ಕೇ ತಳ್ಳುತ್ತವೆಯೆಂದು ಹೇಳುತ್ತಾರೆ. ಈ ರಾಜರೇ ಮುಂತಾದವರ ಬಂಧನದಿಂದ ಅತಿ ಪ್ರಯಾಸದಿಂದ ತಪ್ಪಿಸಿಕೊಂಡರೂ ಕೂಡ ಸಂಸಾರಿಯಾದ ಜೀವನಿಗೆ ಕ್ಷೇಮದ ಭರವಸೆಯಿಲ್ಲ. ಏಕೆಂದರೆ : ಅಲ್ಲಿ ಈತನು ಅನ್ಯಾಯದಿಂದ ಗಳಿಸಿದ ಪರಸ್ತ್ರೀ-ಪರದ್ರವ್ಯಗಳನ್ನು ಮತ್ತೊಬ್ಬ ದೇವದತ್ತನು ಕಿತ್ತುಕೊಂಡು ಹೋಗುವನು ಮತ್ತು ಆತನಿಂದ ಮತ್ತೊಬ್ಬ ವಿಷ್ಣುಮಿತ್ರನು ಅವುಗಳನ್ನು ಕಸಿದುಕೊಂಡು ಹೋಗುವನು. ಹೀಗೆ ಆ ಭೋಗಗಳು ಒಬ್ಬರಿಂದ ಮತ್ತೊಬ್ಬರಿಗೆ ಹೋಗುತ್ತವೆಯೇ ಹೊರತು ಇಂತಹವನಲ್ಲಿಯೇ ಅವು ಇರುತ್ತವೆಯೆಂಬ ನಿಶ್ಚಯವಿಲ್ಲ. ಕೆಲವೊಮ್ಮೆ ಚಳಿ-ಗಾಳಿಗಳೇ ಮುಂತಾದ ಅನೇಕ ಆಧಿ ದೈವಿಕ, ಆಧಿಭೌತಿಕ ಮತ್ತು ಆಧ್ಯಾತ್ಮಿಕಗಳಾದ ತಾಪಗಳನ್ನು ನಿವಾರಿಸಲು ಕೈಲಾಗದೇ ಅಪಾರವಾದ ಚಿಂತೆಯಲ್ಲಿ ಮುಳುಗಿ ಮರುಗುತ್ತಿರುವನು. ಮತ್ತೊಮ್ಮೆ ಪರಸ್ಪರವಾಗಿ ಕ್ರಯ-ವಿಕ್ರಯಮಾಡುವಾಗ ಈತನು ಮತ್ತೊಬ್ಬನಿಂದ ಒಂದು ಕವಡೆಯನ್ನು ಅಥವಾ ಅದಕ್ಕಿಂತಲೂ ಕಡಿಮೆಯಷ್ಟು ಹಣವನ್ನು ಅಪಹರಿಸಿದರೂ–ಆ ಮೋಸಕ್ಕಾಗಿ ಅವನ ದ್ವೇಷಕ್ಕೆ ಪಾತ್ರನಾಗುವನು.

(ಶ್ಲೋಕ 21-26)

ಎಲೈ ರಾಜನೇ! ಈ ದಾರಿಯಲ್ಲಿ ಹಿಂದೆ ಹೇಳಿದ ವಿಘ್ನಗಳು ಮಾತ್ರವಲ್ಲದೇ ಸುಖ-ದುಃಖ, ರಾಗ-ದ್ವೇಷ, ಭಯ, ಗರ್ವ, ಪ್ರಮಾದ, ಹುಚ್ಚು, ಶೋಕ, ಮೋಹ, ಲೋಭ, ಮಾತ್ಸರ್ಯ, ಅಸೂಯೆ, ಅವಮಾನ, ಹಸಿವು-ಬಾಯಾರಿಕೆ, ಆಧಿ-ವ್ಯಾಧಿಗಳು, ಹುಟ್ಟು, ಮುಪ್ಪು, ಸಾವು–ಇವೇ ಮುಂತಾದ ಇನ್ನೂ ಹಲವಾರು ಉಪದ್ರವಗಳು ಇರುತ್ತವೆ. ಇಲ್ಲಿ ಅಲೆಯುತ್ತಿರುವ ಜೀವನು ಒಮ್ಮೆ ದೇವಮಾಯಾರೂಪಿಣಿಯಾದ ಹೆಣ್ಣಿನ ತೋಳುಗಳ ತೆಕ್ಕೆಯಲ್ಲಿ ಬಿದ್ದು ವಿವೇಕವನ್ನು ಕಳೆದುಕೊಳ್ಳುವನು. ಆಕೆಗಾಗಿಯೇ ಕ್ರೀಡಾಗೃಹ ಮುಂತಾದುವುಗಳನ್ನು ನಿರ್ಮಿಸಿಕೊಡುವ ಚಿಂತೆಯಲ್ಲಿ

ಮುಳುಗುವನು ಮತ್ತು ಆಕೆಯಲ್ಲಿ ಹುಟ್ಟಿದ ಗಂಡುಮಕ್ಕಳು, ಹೆಣ್ಣುಮಕ್ಕಳು ಮತ್ತು ಇತರ ಹೆಂಗಸರು–ಇವರ ಲಲ್ಲೆಯ ಮಾತುಗಳು, ಸವಿನೋಟಗಳು, ಚೇಷ್ಟೆಗಳು–ಇವುಗಳಲ್ಲಿ ಆಸಕ್ತನಾಗಿ, ಮನಸ್ಸು ಅವುಗಳಲ್ಲಿಯೇ ಸಿಕ್ಕಿಹಾಕಿ ಕೊಳ್ಳಲು ಇಂದ್ರಿಯಗಳ ಗುಲಾಮನಾಗಿ ಅಪಾರವಾದ ಅಜ್ಞಾನವೆಂಬ ಕಗ್ಗತ್ತಲೆಯ ನರಕದಲ್ಲಿ ಬಿದ್ದುಬಿಡುವನು. ಪರಮಾಣುವಿನಿಂದ ಹಿಡಿದು ಎರಡು ಪರಾರ್ಧಕಾಲಗಳವರೆಗೆ ಇರುವ ಕ್ಷಣ, ಘಳಿಗೆ–ಮುಂತಾದ ಅವ ಯವಗಳಿಂದ ಕೂಡಿದ ಕಾಲಚಕ್ರವೆಂಬುದು ಶ್ರೀಭಗವಂತನಾದ ಸಾಕ್ಷಾತ್ ಮಹಾವಿಷ್ಣುವಿನ ಆಯುಧವು. ಇದು ಸದಾ ಎಚ್ಚರವಾಗಿದ್ದು ನಿರಂತರವಾಗಿ ಸುತ್ತುತ್ತಿರುವುದು. ಕ್ಷಣ-ಕ್ಷಣಕ್ಕೂ ಬದಲಾಯಿಸುವ ಬಾಲ್ಯ, ಯೌವನಗಳೇ ಮುಂತಾದ ಅವಸ್ಥೆಗಳೆಲ್ಲವೂ ಇದರ ವೇಗಗಳೇ ಆಗಿವೆ. ಬ್ರಹ್ಮನಿಂದ ಹಿಡಿದು ಅತಿಕ್ಷುದ್ರವಾದ ಹುಲ್ಲಿನವರೆಗಿನ ಎಲ್ಲ ಭೂತಗಳನ್ನೂ ಇದು ಸಂಹರಿಸು ತ್ತಿರುವುದು. ಇದರ ಗತಿಯನ್ನು ಯಾರೂ ತಪ್ಪಿಸಲಾರರು. ಇದಕ್ಕೆ ಭಯ ಪಟ್ಟಾದರೂ ಈ ಸಂಸಾರಿಯಾದ ಜೀವನು–ಈ ಕಾಲಚಕ್ರವು ಯಾವನ ಸ್ವಂತ ಆಯುಧವಾಗಿದೆಯೋ–ಆ ಸಾಕ್ಷಾತ್ ಯಜ್ಞಪುರುಷನನ್ನು ಆರಾಧಿಸು ತ್ತಾನೆಯೇ? ಎಂದರೆ : ಇಲ್ಲ. ಆ ಶ್ರೀಭಗವಂತನನ್ನು ಆರಾಧಿಸದೇ ಈ ಮಂದಮತಿಯು ಪಾಷಂಡಿಗಳ ವಂಚನೆಗೆ ಸಿಕ್ಕಿ ಶಿಷ್ಟರಾದ ಆರ್ಯರ ಸಿದ್ಧಾಂತಕ್ಕೆ ಹೊರಗಾಗಿರುವ ಮತ್ತು ವೇದಬಾಹ್ಯವಾಗಿ ಅಪ್ರಾಮಾಣಿಕ ವಾಗಿರುವ ಆಗಮಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಕ್ಷುದ್ರದೇವತೆಗಳನ್ನು ಸಂಕೋಚದಿಂದ ಆರಾಧಿಸತೊಡಗುವನು. ತಾವೇ ಮೋಸಹೋದವರಾಗಿ ಇತರರನ್ನು ಮೋಸಗೊಳಿಸುವ ಈ ಪಾಷಂಡಿಗಳ ಮೋಸಕ್ಕೆ ಸಿಕ್ಕಿ ದುಃಖ ಗೊಂಡು ಮತ್ತೆ ವೈದಿಕರಾದ ಬ್ರಾಹ್ಮಣರನ್ನು ಮರೆಹೋಗುವನು. ಆದರೆ ಅವರು ಹೇಳುವಂತೆ ಉಪನಯನಾದಿ ಸಂಸ್ಕಾರಮಾಡಿಕೊಳ್ಳುವುದು ; ಅನಂತರ ಶ್ರೌತ-ಸ್ಮಾರ್ತಕರ್ಮಗಳಿಂದ ಶ್ರೀಭಗವಂತನಾದ ಯಜ್ಞಪುರುಷ ನನ್ನು ಆರಾಧಿಸುವುದು–ಇವೇ ಮುಂತಾದ ಶಾಸ್ತ್ರೋಕ್ತವಾದ ಆಚಾರಗಳು ಈತನಿಗೆ ಹಿಡಿಸುವುದಿಲ್ಲ. ಆದ್ದರಿಂದ ವೈದಿಕಾಚಾರಗಳಿಂದ ಶುದ್ಧಿಪಡೆಯದೇ ಇರುವುದರಿಂದ ಕಪಿಜಾತಿಯಂತೆ ಕೇವಲ ಕುಟುಂಬಪೋಷಣೆ ಮತ್ತು ಕಾಮ ಸೇವನೆಗಳನ್ನೇ ಸ್ವಭಾವವನ್ನಾಗಿ ಹೊಂದಿರುವ ಕೆಳಮಟ್ಟದ ಯೋನಿಗಳನ್ನು

ಪ್ರವೇಶಿಸುವನು. ಅಲ್ಲಿ ಅಡೆ-ತಡೆಯಿಲ್ಲದೇ ಸ್ವೇಚ್ಛೆಯಿಂದ ವಿಹರಿಸುವುದರಿಂದ ಅವನ ಬುದ್ಧಿಯು ಅತ್ಯಂತ ದೈನ್ಯವನ್ನು ಹೊಂದುವುದು. ಪರಸ್ಪರ ಮುಖಗಳನ್ನು ನೋಡುತ್ತಿರುವುದು ಇವೇ ಮುಂತಾದ ವಿಷಯವ್ಯಾಪಾರಗಳಲ್ಲಿಯೇ ತೊಡಗಿರುವ ಇವನಿಗೆ ಕಾಲದ ಪರಿವೆಯೇ ಇಲ್ಲದೇ ಸಾವಿನ ಸಮಯವೂ ಮರೆತುಹೋಗುವುದು. ವೃಕ್ಷಗಳಂತೆ ಐಹಿಕಸುಖಗಳ ಫಲ ವನ್ನು ಮಾತ್ರವೇ ಕೊಡುವ ಮನೆ-ಮನೆವಾರ್ತೆಗಳನ್ನೇ ಸುಖವೆಂದು ಭಾವಿಸಿ ಕಪಿಗಳಂತೆ ಹೆಂಡತಿ-ಮಕ್ಕಳು ಮುಂತಾದವರಲ್ಲಿಯೇ ಆಸಕ್ತನಾಗಿ ತನ್ನ ಇಡೀ ಸಮಯವನ್ನು ಮೈಥುನವೇ ಮುಂತಾದ ಇಂದ್ರಿಯಭೋಗಗಳಲ್ಲಿಯೇ ಕಳೆದು ಬಿಡುವನು. ಹೀಗೆ ಪ್ರವೃತ್ತಿಮಾರ್ಗದಲ್ಲಿ ಬಿದ್ದು ಸುಖ-ದುಃಖಗಳನ್ನು ಅನುಭವಿಸುತ್ತಾ ಈ ಜೀವನು ರೋಗವೆಂಬ ಗಿರಿಗುಹೆಯಲ್ಲಿ ಬಿದ್ದು ಅದರಲ್ಲಿರುವ ಮೃತ್ಯುವೆಂಬ ಮಹಾಗಜಕ್ಕೆ ಅಂಜಿ ನಡುಗುವನು. ಕೆಲವೊಮ್ಮೆ ಚಳಿ-ಗಾಳಿಗಳೇ ಮುಂತಾದ ಬಗೆ-ಬಗೆಯ ಆಧ್ಯಾತ್ಮಿಕ, ಆಧಿದೈವಿಕ ಮತ್ತು ಅಧಿಭೌತಿಕಗಳಾದ ದುಃಖಗಳನ್ನು ನಿವಾರಿಸಲು ಅಸಫಲನಾಗಿ ಅಪಾರವಾದ ವಿಷಯಗಳ ಚಿಂತೆಯಿಂದ ಕಳವಳಪಡುವನು. ಕೆಲವೊಮ್ಮೆ ಪರಸ್ಪರ ಕ್ರಯ-ವಿಕ್ರಯಗಳೇ ಮುಂತಾದ ವ್ಯಾಪಾರಗಳಿಂದ ತುಂಬಿ ಜಿಪುಣತನದಿಂದ ವರ್ತಿಸಿದಾಗ ಈತನಿಗೆ ಅಲ್ಪ-ಸ್ವಲ್ಪ ಹಣವು ಕೈಗೆ ಸಿಕ್ಕುವುದು. ಕೆಲವೊಮ್ಮೆ ಆ ಹಣವೂ ನಷ್ಟವಾಗಿ, ಈತನ ಕೈಯಲ್ಲಿ ಕುಡಿಯುವುದಕ್ಕಾಗಲೀ, ತಿನ್ನುವುದಕ್ಕಾಗಲೀ ಯಾವುದೂ ಇಲ್ಲದೇ ಇಷ್ಟಾರ್ಥವು ಈಡೇರದೇಹೋದಾಗ ಇವನು ಕಳ್ಳತನವೇ ಮುಂತಾದ ಕೆಟ್ಟ ಉಪಾಯಗಳಿಂದ ಸಂಪಾದನೆ ಮಾಡಲು ನಿಶ್ಚಯಿಸಬೇಕಾಗುವುದು. ಆಗ ಈತನು ಕಂಡ-ಕಂಡಲ್ಲಿ ಇತರರಿಂದ ಅಪಮಾನಕ್ಕೆ ಒಳಗಾಗಬೇಕಾಗುವುದು. ಹೀಗೆ ಹಣದ ಮೇಲಿನ ಆಸೆ-ಆಸಕ್ತಿಗಳಿಂದ ಆತನಿಗೆ ಇತರರೊಡನೆ ವೈರವುಂಟಾದರೂ ಹಿಂದಿನ ವಾಸನೆಗಳಿಗೆ ವಶನಾಗಿ ಅವರೊಡನೆ ಪುನಃ ಪರಸ್ಪರಸಂಬಂಧ ಬೆಳೆಸುವುದು ಮತ್ತು ಸಂಬಂಧ ಕಡಿದುಕೊಳ್ಳುವುದು—ಇವುಗಳನ್ನು ಮಾಡುತ್ತಿರುವನು. ಹೀಗೆ ಈ ಸಂಸಾರಮಾರ್ಗದಲ್ಲಿ ಅಲೆಯುತ್ತಿರುವ ಜೀವನಿಗೆ ಬಗೆ-ಬಗೆಯ ಕ್ಲೇಶಗಳೂ, ವಿಘ್ನಪೀಡೆಗಳೂ ಒದಗಿದರೂ ದಾರಿಯಲ್ಲಿ ತನ್ನ ಸಂಗಡಿಗರಲ್ಲಿ ಯಾವನಿಗಾದರೂ ಆಪತ್ತು ಒದಗಿದರೆ ಅಥವಾ ಯಾವನಾದರೂ ಸತ್ತು

ಹೋದರೆ ಇವನು ಆತನನ್ನು ಅಲ್ಲಿಯೇ ತೊರೆದುಬಿಡುವನು. ಹೊಸದಾಗಿ ಹುಟ್ಟಿದವರ ಜೊತೆಗೂಡಿ ಕೆಲವರಿಗಾಗಿ ಶೋಕಪಡುವನು. ಕೆಲವರ ದುಃಖ ವನ್ನು ನೋಡಿ ಮೂರ್ಛೆಬೀಳುವನು. ಕೆಲವರ ಅಗಲಿಕೆ ಉಂಟಾಗುವುದೆಂಬ ಶಂಕೆಯಿಂದ ಭಯಭೀತನಾಗುವನು. ಕೆಲವರೊಡನೆ ಜಗಳಮಾಡತೊಡಗು ವನು. ಯಾವುದಾದರೂ ವಿಪತ್ತು ಒದಗಿದರೆ ಗಟ್ಟಿಯಾಗಿ ಅಳುತ್ತಾ ಕೂಗಿ ಕೊಳ್ಳತೊಡಗುವನು. ತನ್ನ ಮನಸ್ಸಿಗೆ ಅನುಕೂಲವಾದ ಯಾವುದಾದರೂ ಮಾತು ಎಲ್ಲಾದರೂ ನಡೆದರೆ ಮಿತಿಮೀರಿ ಆನಂದಿಸುವನು. ಕೆಲವೊಮ್ಮೆ ಹಾಡತೊಡಗುವನು. ಕೆಲವೊಮ್ಮೆ ಹಾಗೆ ಅನುಕೂಲವಾಗಿ ಮಾತನಾಡಿದವರಿ ಗೋಸ್ಕರ ಬಂಧನಕ್ಕೆ ಸಿಲುಕುವುದಕ್ಕೂ ಹಿಂಜರಿಯುವುದಿಲ್ಲ. ಸಾಧುಜನರು ಈತನ ಬಳಿಗೆ ಸುಳಿಯುವುದೇ ಇಲ್ಲ. ಹೀಗೆ ಈತನು ನಿರಂತರವಾಗಿ ಸಂಸಾರದಲ್ಲಿ ಮುಂದುವರಿಯುತ್ತಲೇ ಇರುವನು. ಈ ಮಾರ್ಗದಲ್ಲಿ ಯಾತ್ರೆಗೆ ಪ್ರಾರಂಭದ ಗಡಿಯೂ ಮತ್ತು ಮಾರ್ಗವೂ ಮುಗಿಯುವ ಗಡಿಯೂ ಆಗಿರುವ ಪರಮಾತ್ಮನ ಬಳಿಗೆ ಈತನು ಎಂದೂ ಹಿಂದಿರುಗುವು ದಿಲ್ಲ. ಎಲ್ಲ ಬಗೆಯ ಭೂತದಂಡನೆಯನ್ನೂ ತ್ಯಜಿಸಿ ಅಹಿಂಸೆಯೇ ಮುಂತಾದ ಸಾಧನಗಳಿಂದ ಪ್ರಶಾಂತವಾದ ಚಿತ್ತವುಳ್ಳವರಾಗಿ ವಿಷಯಗಳಿಗೆ ವಿಮುಖರಾಗಿರುವ ಮಹಾತ್ಮರು ಮಾತ್ರವೇ ಯೋಗದಿಂದ ಯಾವ ಪರ ಮಾತ್ಮನ ಪ್ರಾಪ್ತಿಯನ್ನು ಅನುಭವಿಸುವರೋ ಆ ಯೋಗದ ರಹಸ್ಯವು ತಿಳಿ ಯದೇ ಇರುವುದರಿಂದ ಜೀವಸಮೂಹವು ಸಂಸಾರದ ಮಾರ್ಗವನ್ನು ದಾಟಲು ಸಾಧ್ಯವಾಗುತ್ತಿಲ್ಲ. ದಿಗ್ಗಜಗಳನ್ನು ಗೆದ್ದವರಾಗಿ ದೊಡ್ಡ-ದೊಡ್ಡ ಯಜ್ಞಗಳನ್ನು ಅನುಷ್ಠಾನಮಾಡಿರುವ ರಾಜರ್ಷಿಗಳಿಗೂ ಅಲ್ಲಿಯವರೆಗೂ ಗತಿಯು ಇರುವುದಿಲ್ಲ. ಯಾವ ಭೂಮಿಯನ್ನು ಬಿಟ್ಟು ಪರಲೋಕಕ್ಕೆ ತೆರಳ ಬೇಕಾಗುವುದೋ–ಆ ಭೂಮಿಗಾಗಿ ಯುದ್ಧಮಾಡುತ್ತಾ–'ಇದು ನನ್ನದು, ನನ್ನ ರಾಜ್ಯ'–ಎಂದು ಅಭಿಮಾನವನ್ನು ಬೆಳೆಸಿಕೊಂಡು ಯುದ್ಧದಲ್ಲಿ ಹತರಾಗಿ ರಾಜ್ಯಾದಿಗಳನ್ನು ಕಳೆದುಕೊಂಡು ಇವರು ಸಾಯುವರೇ ಹೊರತು ಸಂಸಾರವೆಂಬ ಅರಣ್ಯವನ್ನು ದಾಟಲಾರರು. ಈ ಜೀವವು ಪುಣ್ಯಕರ್ಮ ಗಳೆಂಬ ಬಳ್ಳಿಯನ್ನು ಆಶ್ರಯವನ್ನಾಗಿ ಪಡೆದು ಯಾವುದಾದರೂ ರೀತಿಯಲ್ಲಿ ಈ ಆಪತ್ತುಗಳಿಂದಲೂ ಮತ್ತು ನರಕದಿಂದಲೂ ಬಿಡುಗಡೆಯನ್ನು ಹೊಂದಿ

ದರೂ–ಅವರು ಮತ್ತೆ ಇದೇ ಪ್ರಕಾರ ಸಂಸಾರಮಾರ್ಗದಲ್ಲಿ ಅಲೆದಾಡುತ್ತಾ ಈ ಜನಸಮೂಹದಲ್ಲಿ ಸೇರಿಕೊಂಡುಬಿಡುವರು. ಸ್ವರ್ಗವೇ ಮುಂತಾದ ಊರ್ಧ್ವಲೋಕಗಳಿಗೆ ಹೋದವರಿಗೂ ಇದೇ ಗತಿಯಪ್ಪಾ!*

(ಶ್ಲೋಕ 27-41)

ಆರ್ಷಭಸ್ಯೇಹ ರಾಜರ್ಷೇರ್ಮನಸಾಪಿ ಮಹಾತ್ಮನಃ ।
ನಾನುವರ್ತ್ಮಾರ್ಹತಿ ನೃಪೋ ಮಕ್ಷಿಕೇವ ಗರುತ್ಮತಃ ॥೪೨॥

ನೊಣವು ಗರುಡನನ್ನು ಹಿಂಬಾಲಿಸಿ ಸ್ಪರ್ಧಿಸಲಾರದಲ್ಲವೇ? ಹಾಗೆಯೇ ಋಷಭಪುತ್ರನೂ ಮಹಾನುಭಾವನೂ ಆದ ರಾಜರ್ಷಿ ಭರತನ ದಾರಿಯನ್ನು ಇತರ ರಾಜರು ಮನಸ್ಸಿನಿಂದಲೂ ಅನುಸರಿಸಲಾರರು.

ಮಹಾರಾಜ ಪರೀಕ್ಷಿತ! ಆ ರಾಜರ್ಷಿಯಾದ ಋಷಭಪುತ್ರ (ಭರತ)ನ ವಿಷಯಲ್ಲಿ ಪಂಡಿತರು ಈ ಪ್ರಶಂಸೆಯ ಪದ್ಯಗಳನ್ನು ಹಾಡುತ್ತಾರೆ :

ಯೋ ದುಸ್ತ್ಯಜಾನ್ದಾರಸುತಾನ್ಸುಹೃದ್ರಾಜ್ಯಂ ಹೃದಿಸ್ಪೃಶಃ ।
ಜಹೌ ಯುವೈವ ಮಲವದುತ್ತಮಶ್ಲೋಕಲಾಲಸಃ ॥೪೩॥

ಪುಣ್ಯಶ್ಲೋಕನಾದ ಶ್ರೀಹರಿಯಲ್ಲಿ ಪರಮಾನುರಕ್ತನಾಗಿ ಯಾವ ಪರಮಭಾಗವತೋತ್ತಮನು ಇತರರಿಗೆ ತ್ಯಜಿಸಲು ಕಷ್ಟವಾಗಿರುವ ರಮಣೀಯರಾದ ಮಡದಿ-ಮಕ್ಕಳು, ಮಿತ್ರರು ಮತ್ತು ರಾಜ್ಯವೇ ಮುಂತಾದುವುಗಳನ್ನು ತರುಣನಾಗಿರುವಾಗಲೇ ಮಲದಂತೆ ತೊರೆದುಬಿಟ್ಟಿರುವನೋ–ಆ ಮಹಾತ್ಮನಾದ ಭರತನ ದಾರಿಯನ್ನು ಇತರ ರಾಜರು ಮನಸ್ಸಿನಿಂದಲೂ ಅನುಸರಿಸಲಾರರು.

ಯೋ ದುಸ್ತ್ಯಜಾನ್ ಕ್ಷಿತಿಸುತಸ್ವಜನಾರ್ಥದಾರಾನ್
ಪ್ರಾರ್ಥ್ಯಂ ಶ್ರಿಯಂ ಸುರವರ್ಯೈಃ ಸದಯಾವಲೋಕಾಮ್ ।
ನೈಚ್ಛನ್ನೃಪಸ್ತದುಚಿತಂ ಮಹತಾಂ ಮಧುದ್ವಿ-
ಟ್ಸೇವಾನುರಕ್ತಮನಸಾಮಭವೋಽಪಿ ಫಲ್ಗುಃ ॥೪೪॥

---

* ಹೋಲಿಕೆ :– "ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶನ್ತಿ' (ಶ್ರೀಗೀತಾ) (ಶ್ಲೋಕ ೪೧)

ತ್ಯಜಿಸಲು ಅತಿಕಷ್ಟವಾಗಿರುವ ಭೂಮಿ-ಕಾಣಿಗಳು, ಪುತ್ರರು, ಬಂಧು-ಬಳಗ, ಸಂಪತ್ತು, ಹೆಂಡಿರನ್ನೂ ಮತ್ತು ಯಾವಳ ದಯಾಕಟಾಕ್ಷಕ್ಕೆ ಬೀಳಬೇಕೆಂದು ದೊಡ್ಡ-ದೊಡ್ಡ ದೇವತೆಗಳೂ ಹಾತೊರೆಯುತ್ತಿರುವರೋ-ಅಂತಹ ಲಕ್ಷ್ಮಿಯನ್ನೂ ಯಾವನು ಲೇಶಮಾತ್ರವೂ ಇಚ್ಛಿಸಲಿಲ್ಲವೋ ಅಂತಹ ಮಹಾತ್ಮನಾದ ರಾಜರ್ಷಿ ಭರತನ ದಾರಿಯನ್ನು ಇತರ ರಾಜರು ಮನಸ್ಸಿನಿಂದಲೂ ಅನುಸರಿಸಲಾರರು. ಭರತನು ಹೀಗೆ ಅವುಗಳನ್ನು ಬಯಸದೇ ಇದ್ದುದು ನ್ಯಾಯವೇ ಆಗಿದೆ. ಏಕೆಂದರೆ : ಶ್ರೀಭಗವಂತನಾದ ಮಧುಸೂದನನ ಸೇವೆಯಲ್ಲಿ ಅನುರಕ್ತವಾದ ಚಿತ್ತವುಳ್ಳ ಮಹಾನು ಭಾವರ ದೃಷ್ಟಿಯಲ್ಲಿ ಮೋಕ್ಷವೂ ಕೂಡ ಅತಿತುಚ್ಛವಾದುದೇ.

ಯಜ್ಞಾಯ ಧರ್ಮಪತಯೇ ವಿಧಿನೈಪುಣಾಯ
ಯೋಗಾಯ ಸಾಂಖ್ಯಶಿರಸೇ ಪ್ರಕೃತೀಶ್ವರಾಯ ।
ನಾರಾಯಣಾಯ ಹರಯೇ ನಮ ಇತ್ಯುದಾರಂ
ಹಾಸ್ಯನ್ಮೃಗತ್ವಮಪಿ ಯಃ ಸಮುದಾಜಹಾರ ॥೪೫॥

ಮತ್ತು ಯಾವ ಮಹಾತ್ಮನು ಮೃಗದೇಹವನ್ನು ಪಡೆದಿದ್ದರೂ ಕೂಡ ಭಗವತ್ಪರಾಯಣನಾಗಿದ್ದು-"ಯಜ್ಞಮೂರ್ತಿಯೂ, ಧರ್ಮಸಂರಕ್ಷಕನೂ, ವಿಧಿಪೂರ್ವಕವಾದ ಅನುಷ್ಠಾನದಲ್ಲಿ ನಿಪುಣನೂ, ಯೋಗದಿಂದ ಹೊಂದಲ್ಪಡುವವನೂ, ಸಾಂಖ್ಯ(ಜ್ಞಾನ) ಪ್ರತಿಪಾದ್ಯನೂ, ಪ್ರಕೃತಿಗೆ ನಿಯಾಮಕನೂ ಆಗಿರುವ ಶ್ರೀಹರಿನಾರಾಯಣನಿಗೆ ನಮೋ ನಮಃ"-ಎಂದು ಆ ಮೃಗದೇಹವನ್ನು ತೊರೆಯುವಾಗಲೂ ಗಟ್ಟಿಯಾಗಿ ಶ್ರೀಭಗವಂತನನ್ನು ಸ್ತುತಿಸುತ್ತಿದ್ದನೋ-ಅಂತಹ ಮಹಾತ್ಮನಾದ ರಾಜರ್ಷಿ ಭರತನ ದಾರಿಯನ್ನು ಇತರ ರಾಜರು ಮನಸ್ಸಿನಿಂದಲೂ ಅನುಸರಿಸಲಾರರು.

ಎಲೈ ರಾಜೇಂದ್ರನೇ! ಹೀಗೆ ಭಾಗವತರು ಗೌರವದಿಂದ ಕೊಂಡಾಡುವ ಕಲ್ಯಾಣಗುಣಗಳಿಂದಲೂ ಕರ್ಮಗಳಿಂದಲೂ ಬೆಳಗುತ್ತಿದ್ದ ರಾಜರ್ಷಿಯಾದ ಭರತನ ಅತ್ಯಂತಮಂಗಳಕರವೂ, ಆಯುಸ್ಸು-ಧನಗಳನ್ನು ವೃದ್ಧಿಪಡಿಸುವುದೂ, ಲೋಕದಲ್ಲಿ ಸುಕೀರ್ತಿಯನ್ನು ಹೆಚ್ಚಿಸುವುದೂ ಮತ್ತು ಕೊನೆಯಲ್ಲಿ ಸ್ವರ್ಗವನ್ನೂ-ಮೋಕ್ಷವನ್ನೂ ದಯಪಾಲಿಸುವುದೂ ಆಗಿರುವ

ಪವಿತ್ರವಾದ ಚರಿತ್ರೆಯನ್ನು ಯಾವನು ಕೇಳುವನೋ ಅಥವಾ ಹೇಳುವನೋ ಮತ್ತು ಅಭಿನಂದಿಸುವನೋ–ಆತನ ಎಲ್ಲ ಇಷ್ಟಾರ್ಥಗಳೂ ತಾವಾಗಿಯೇ ಕೈಗೂಡುವುವು. ಮತ್ತಾರಿಂದಲೂ ಏನನ್ನೂ ಆತನು ಬಯಸುವುದಿಲ್ಲ, ಬಯಸಬೇಕಾಗಿಲ್ಲ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಪಂಚಮಸ್ಕಂಧದ ೧೪ನೆಯ ಅಧ್ಯಾಯವು ಮುಗಿಯಿತು.

ಪಂಚಮಸ್ಕಂಧ ೧೫ನೆಯ ಅಧ್ಯಾಯ

ಭರತನ ವಂಶದ ವರ್ಣನೆ

ಶ್ರೀಶುಕಮಹರ್ಷಿಯು ಪರೀಕ್ಷಿದ್ರಾಜನಿಗೆ ಹೇಳುತ್ತಾನೆ :

ಭರತಸ್ಯಾತ್ಮಜಃ ಸುಮತಿರ್ನಾಮಾಭಿಹಿತೋ ಯಮು ಹ ವಾವ ಕೇಚಿತ್ಪಾಖಣ್ಡಿನ ಋಷಭಪದವೀಮನುವರ್ತಮಾನಂ ಚಾನಾರ್ಯಾ ಅವೇದಸಮಾಮ್ನಾತಾಂ ದೇವತಾಂ ಸ್ವಮನೀಷಯಾ ಪಾಪೀಯಸ್ಯಾ ಕಲೌ ಕಲ್ಪಯಿಷ್ಯನ್ತಿ ॥೧॥

ಎಲೈ ರಾಜೇಂದ್ರನೇ! ಕೇಳು : ಭರತನ ಸುಪುತ್ರನು ಸುಮತಿ ಎಂಬುದನ್ನು ಹಿಂದೆಯೇ ಹೇಳಿಯಾಗಿದೆ. ಆತನು ಋಷಭದೇವರ ಮಾರ್ಗ ವನ್ನು ಅನುಸರಿಸಿದ ಮಹಾತ್ಮನಾದ ಅವಧೂತಶಿಖಾಮಣಿಯು. ಆದರೆ ಕಲಿಯುಗದಲ್ಲಿ ಕೆಲವು ಪಾಷಂಡಿಗಳು ತಮ್ಮ ದುರ್ಬುದ್ಧಿಯಿಂದ ಆತನನ್ನು ಅವೈದಿಕವಾದ ಒಂದು ದೇವತೆಯೆಂದು ಕಲ್ಪಿಸಿಕೊಳ್ಳುವರು.

ಆ ಸುಮತಿಮಹಾರಾಜನಿಗೆ ವೃದ್ಧಸೇನಾದೇವಿಯಲ್ಲಿ 'ದೇವತಾಜಿತ್' ಎಂಬ ಸುಪುತ್ರನು ಜನಿಸಿದನು. ದೇವತಾಜಿದ್ರಾಜನು ಆಸುರಿಯೆಂಬ ಪತ್ನಿಯ ಗರ್ಭದಲ್ಲಿ ದೇವದ್ಯುಮ್ನನೆಂಬ ಪುತ್ರನನ್ನು ಪಡೆದನು. ದೇವದ್ಯು ಮ್ನನು ಧೇನುಮತೀದೇವಿಯನ್ನು ವಿವಾಹಮಾಡಿಕೊಂಡು ಪರಮೇಷ್ಠಿ ಯೆಂಬ ಪುತ್ರನನ್ನು ಪಡೆದನು. ಆ ಪರಮೇಷ್ಠಿಯಿಂದ ಸುವರ್ಚಲಾದೇವಿ ಯಲ್ಲಿ ಪ್ರತೀಹನೆಂಬ ಪುತ್ರನು ಜನಿಸಿದನು. ಪ್ರತೀಹನೆಂಬ ಆ ರಾಜರ್ಷಿಯು ಹಲವಾರು ಮಂದಿ ಶಿಷ್ಯರಿಗೆ ಆತ್ಮವಿದ್ಯೆಯನ್ನು ಉಪದೇಶಮಾಡಿ ತಾನೂ ಜ್ಞಾನದಿಂದ ಶುದ್ಧನಾಗಿ ಮಹಾಪುರುಷನಾದ ಶ್ರೀಮನ್ನಾರಾಯಣನ

ಸಾಕ್ಷಾತ್ಕಾರದ ಅನುಭವವನ್ನು ಪಡೆದನು. ಪ್ರತೀಹನ ಮತ್ತೊಬ್ಬಳು ಪತ್ನಿಯಾದ ಸುವರ್ಚಲಾದೇವಿಯ ಗರ್ಭದಲ್ಲಿ ಪ್ರತಿಹರ್ತಾ, ಪ್ರಸ್ತೋತಾ ಮತ್ತು ಉದ್ಗತಾ ಎಂಬ ಮೂವರು ಪುತ್ರರು ಹುಟ್ಟಿದರು. ಅವರು ಯಜ್ಞವೇ ಮುಂತಾದ ಕರ್ಮಗಳಲ್ಲಿ ಅತ್ಯಂತನಿಷ್ಣಾತರಾಗಿದ್ದರು. ಅವರಲ್ಲಿ ಪ್ರತಿಹರ್ತನ ಪತ್ನಿಗೆ ಸ್ತುತಿ ಎಂದು ಹೆಸರು. ಆಕೆಯು ಅಜ ಮತ್ತು ಭೂಮಾ ಎಂಬ ಇಬ್ಬರು ಪುತ್ರರನ್ನು ಪಡೆದಳು. ಅವರಲ್ಲಿ ಭೂಮನಿಗೆ ಋಷಿಕುಲ್ಯಾ ಎಂಬ ಪತ್ನಿಯಲ್ಲಿ ಪ್ರಸ್ತಾವನೆಂಬ ಎಂಬ ಪುತ್ರನೂ ಜನಿಸಿದರು. ಪ್ರಸ್ತಾವನಿಗೆ ನಿಯುತ್ಸಾ ಎಂಬ ಪತ್ನಿಯಲ್ಲಿ ವಿಭು ಎಂಬ ಪುತ್ರನೂ ಜನಿಸಿದರು. ವಿಭುವಿಗೆ ರತಿಯ ಗರ್ಭದಲ್ಲಿ ಪೃಥುಷೇಣನೆಂಬ ಪುತ್ರನೂ, ಪೃಥುಷೇಣನಿಗೆ ಅಕೂತಿಯ ಹೊಟ್ಟೆಯಲ್ಲಿ ನಕ್ತನೆಂಬ ಪುತ್ರನೂ, ನಕ್ತನಿಗೆ ದ್ರುತಿಯ ಗರ್ಭದಲ್ಲಿ ಉದಾರಕೀರ್ತಿಯಾದ ರಾಜರ್ಷಿಶ್ರೇಷ್ಠನಾದ ಗಯನೂ ಜನಿಸಿದರು. ಆ ಗಯನನ್ನು ಜಗತ್ತಿನ ರಕ್ಷಣೆಗಾಗಿ ಸತ್ತ್ವಗುಣವನ್ನು ಸ್ವೀಕರಿಸಿರುವ ಭಗವಂತನಾದ ಸಾಕ್ಷಾತ್ ಮಹಾವಿಷ್ಣುವಿನ ಅಂಶವೆಂದು ತಿಳಿಯುತ್ತಾ ಸಂಯಮವೇ ಮುಂತಾದ ಶ್ರೇಷ್ಠಗುಣಗಳಿಂದ ಅಲಂಕೃತ ನಾಗಿದ್ದುದರಿಂದ ಆತನು ಮಹಾಪುರುಷರಲ್ಲಿ ಪರಿಗಣಿಸಲ್ಪಡುತ್ತಾನೆ. ಆ ಗಯಮಹಾರಾಜನು ಪ್ರಜೆಗಳ ಪಾಲನೆ, ಪೋಷಣೆ, ರಂಜನೆಗಳನ್ನು ಮಾಡುತ್ತಾ ಪ್ರೀತಿಯಿಂದ ಅವರನ್ನು ಲಾಲಿಸುತ್ತಾ, ಹಾಗೆಯೇ ಅವರ ಮೇಲೆ ಆಳ್ವಿಕೆಯನ್ನೂ ನಡೆಸುತ್ತಾ, ಬಗೆ-ಬಗೆಯ ಯಜ್ಞಗಳನ್ನು ಆಚರಿಸುತ್ತಾ, ನಿಷ್ಕಾಮಭಾವದಿಂದ ಕೇವಲ ಭಗವತ್ಪ್ರೀತಿಗಾಗಿ ತನ್ನ ಧರ್ಮಗಳನ್ನು ಆಚರಿಸುತ್ತಿದ್ದನು. ಅದರಿಂದ ಆತನು ಮಾಡುತ್ತಿದ್ದ ಎಲ್ಲ ಕರ್ಮಗಳೂ ಸರ್ವೋತ್ತಮನಾದ ಪರಮಪುರುಷ ಪರಮಾತ್ಮನಾದ ಶ್ರೀಹರಿಗೆ ಸಮರ್ಪಿತವಾಗಿ ಪರಮಾರ್ಥರೂಪವನ್ನು ಪಡೆದುವು. ಅಂತಹ ಕರ್ಮಾಚರಣೆಯಿಂದಲೂ ಮತ್ತು ಬ್ರಹ್ಮಜ್ಞರಾದ ಮಹಾಪುರುಷರ ಚರಣಗಳ ಸೇವೆಯಿಂದಲೂ ಆತನಿಗೆ ಭಕ್ತಿಯೋಗವುಂಟಾಗಲು, ಆತನು ನಿರಂತರವಾಗಿ ಶ್ರೀಭಗವಂತನನ್ನು ಧ್ಯಾನಿಸುತ್ತಾ ತನ್ನ ಚಿತ್ತವನ್ನು ಶುದ್ಧಪಡಿಸಿಕೊಂಡು ದೇಹವೇ ಮುಂತಾದ ಅನಾತ್ಮವಸ್ತುಗಳಲ್ಲಿ ಆತ್ಮಬುದ್ಧಿಯನ್ನು ತ್ಯಜಿಸಿ ಪರಬ್ರಹ್ಮಾತ್ಮಭಾವದ ಅನುಭವವನ್ನು ಪಡೆದನು.

ಇಷ್ಟೆಲ್ಲಾ ಇದ್ದರೂ ಆತನು ಯಾವ ಅಭಿಮಾನವೂ ಇಲ್ಲದೇ ಪೃಥಿವಿಯನ್ನು ಪಾಲಿಸುತ್ತಿದ್ದನು. (ಶ್ಲೋಕ 2-7)

ಪರೀಕ್ಷಿದ್ರಾಜನೇ! ಪ್ರಾಚೀನ ಇತಿಹಾಸವನ್ನು ಬಲ್ಲ ಮಹಾತ್ಮರು ರಾಜರ್ಷಿಯಾದ ಗಯನ ವಿಷಯದಲ್ಲಿ ಈ ಪ್ರಶಂಸಾ ಶ್ಲೋಕಗಳನ್ನು ಹಾಡಿದ್ದಾರೆ : (ಶ್ಲೋಕ 8)

ಗಯಂ ನೃಪಃ ಪ್ರತಿಯಾತಿ ಕರ್ಮಭಿ-
ರ್ಯಜ್ವಾಭಿಮಾನೀ ಬಹುವಿದ್ಧರ್ಮಗೋಪ್ತಾ ।
ಸಮಾಗತಶ್ರೀಃ ಸದಸಸ್ಪತಿಃ ಸತಾಂ
ಸತ್ಸೇವಕೋಽನ್ಯೋ ಭಗವತ್ಕಲಾಮೃತೇ ॥೯॥

“ಆಹಾ! ಈ ಗಯಮಹಾರಾಜನಿಗೆ ಸತ್ಕರ್ಮಾಚರಣೆಗಳಲ್ಲಿ ಸಾಟಿಯಾದವನು ಯಾವನಿದ್ದಾನೆ? ಶ್ರೀಗಯನು ಸಾಕ್ಷಾತ್ ಭಗವಂತನ ಕಲೆಯೇ ಆಗಿದ್ದಾನೆ. ಆತನನ್ನು ಬಿಟ್ಟು ಬೇರಾವನು ಈ ರೀತಿಯಲ್ಲಿ ಯಜ್ಞಗಳನ್ನು ಅನುಷ್ಠಾನಮಾಡುವನು? ಪ್ರಶಸ್ತವಾದ ಮನಸ್ಸುಳ್ಳವನೂ, ಬಹುಜ್ಞನೂ, ಧರ್ಮರಕ್ಷಕನೂ, ಲಕ್ಷ್ಮಿಗೆ ಪ್ರಿಯಪಾತ್ರನೂ, ಸಾಧುಸಮಾಜದ ಶಿರೋಮಣಿಯೂ, ಸತ್ಪುರುಷನೂ ನಿಜವಾದ ಸೇವಕನೂ–ಬೇರಾವನಿರಲು ಸಾಧ್ಯ? ಸತ್ಯಸಂಕಲ್ಪವುಳ್ಳ ಪರಮಸಾಧ್ವಿಯರಾದ ಶ್ರದ್ಧೆ, ಮೈತ್ರೀ ಮತ್ತು ದಯೆಗಳೇ ಮುಂತಾದ ದಕ್ಷಕನ್ಯೆಯರು ಗಂಗೆಯೇ ಮೊದಲಾದ ಮಹಾನದಿಗಳೊಡನೆ ಕೂಡಿ ಅತ್ಯಂತ ಪ್ರಸನ್ನತೆಯಿಂದ ಆತನಿಗೆ ಪಟ್ಟಾಭಿಷೇಕಮಾಡಿದ್ದರು ಮತ್ತು ಆತನು ಬಯಸದೇ ಇದ್ದರೂ ಭೂದೇವಿಯು ಆತನ ಗುಣಗಳಿಗೆ ಅಧೀನಳಾಗಿ ಆತನ ಪ್ರಜೆಗಳಿಗೆ–ಆಕಳು ತನ್ನ ಕರುವಿಗೆ ಅತಿಸ್ನೇಹದಿಂದ ಹಾಲನ್ನು ಕೊಡುವಂತೆ–ಹಣಕಾಸು-ರತ್ನಗಳೇ ಮುಂತಾದ ಎಲ್ಲ ಇಷ್ಟಾರ್ಥಗಳನ್ನೂ ಹೇರಳವಾಗಿ ಕೊಡುತ್ತಿದ್ದಳು. ಆತನಿಗೆ ಯಾವ ಕಾಮನೆಯೂ ಇರಲಿಲ್ಲ. ಆದರೂ ವೇದೋಕ್ತಕರ್ಮಗಳು ಆತನಿಗೆ ಎಲ್ಲ ಬಗೆಯ ಭೋಗಗಳನ್ನೂ ಕೊಡುತ್ತಿದ್ದುವು. ರಾಜರು ಯುದ್ಧರಂಗಗಳಲ್ಲಿ ಆತನ ಬಾಣಗಳಿಂದ ಸತ್ಕೃತರಾಗಿ ಆತನಿಗೆ ಬಗೆ-ಬಗೆಯ ಕಪ್ಪ-ಕಾಣಿಕೆಗಳನ್ನು ಸಮರ್ಪಿಸುತ್ತಿದ್ದರು ಮತ್ತು ಬ್ರಾಹ್ಮಣರು ದಕ್ಷಿಣೆಯೇ ಮುಂತಾದ

ಹಣಗಳಿಂದ ಸಂತುಷ್ಟರಾಗಿ ಆತನಿಗೆ ಪರಲೋಕದಲ್ಲಿ ದೊರೆಯುವಂತೆ ತಮ್ಮ ಧರ್ಮಫಲದ ಆರನೆಯ ಒಂದು ಭಾಗವನ್ನು ಕೊಡುತ್ತಿದ್ದರು.

(ಶ್ಲೋಕ 10-11)

ಯಸ್ಯಾಧ್ವರೇ ಭಗವಾನಧ್ವರಾತ್ಮಾ
ಮಘೋನಿ ಮಾದ್ಯತ್ಯುರುಸೋಮಪೀಥೇ ।
ಶ್ರದ್ಧಾವಿಶುದ್ಧಾಚಲಭಕ್ತಿಯೋಗ-
ಸಮರ್ಪಿತೇಜ್ಯಾಫಲಮಾಜಹಾರ ॥೧೨॥

ಇಂದ್ರನು ಅತ್ಯಧಿಕವಾಗಿ ಸೋಮಪಾನಮಾಡಿ ಮತ್ತೇರುವಂತೆ ಗಯನು ಅನೇಕ ಯಜ್ಞಗಳನ್ನು ಮಾಡಿದನು ಮತ್ತು ಆತನು ಅತ್ಯಂತ ಶ್ರದ್ಧೆಯಿಂದಲೂ, ಪರಿಶುದ್ಧವಾದ ನಿಶ್ಚಲಭಕ್ತಿಯಿಂದಲೂ ಸಮರ್ಪಣೆ ಮಾಡಿದ ಯಜ್ಞಫಲವನ್ನು ಭಗವಂತನಾದ ಯಜ್ಞಪುರುಷನು ಪ್ರತ್ಯಕ್ಷವಾಗಿ ಕಾಣಿಸಿಕೊಂಡು ಸ್ವೀಕಾರಮಾಡಿದನು.

ಯತ್ಪ್ರೀಣನಾದ್ಬರ್ಹಿಷಿ ದೇವತಿರ್ಯ-
ಙ್ಮನುಷ್ಯವೀರುತ್ತೃಣಮಾವಿರಿಞ್ಚಾತ್ ।
ಪ್ರೀಯೇತ ಸದ್ಯಃ ಸ ಹ ವಿಶ್ವಜೀವಃ
ಪ್ರೀತಃ ಸ್ವಯಂ ಪ್ರೀತಿಮಗಾದ್ಗಯಸ್ಯ ॥೧೩॥

ಯಾವಾತನು ತೃಪ್ತಿಗೊಂಡರೆ ಅದರಿಂದ ಬ್ರಹ್ಮದೇವರಿಂದ ಪ್ರಾರಂಭಿಸಿ ದೇವತೆಗಳು, ಮನುಷ್ಯರು, ಪಶು-ಪಕ್ಷಿಗಳು, ಗಿಡ-ಮರ-ಬಳ್ಳಿ ಹುಲ್ಲುಗಳೇ ಮುಂತಾದ ಸಮಸ್ತಜೀವಗಳೂ ಒಡನೆಯೇ ತೃಪ್ತಿಹೊಂದುತ್ತವೆಯೋ– ಅಂತಹ ವಿಶ್ವಾತ್ಮನಾದ ಶ್ರೀಹರಿಯು ನಿತ್ಯತೃಪ್ತನೇ ಆಗಿದ್ದರೂ ಆ ರಾಜರ್ಷಿಯಾದ ಗಯನ ಯಜ್ಞದಲ್ಲಿ ತೃಪ್ತಿಹೊಂದುತ್ತಿದ್ದನು. ಆದ್ದರಿಂದ ಬೇರಾವನಾದರೂ ವ್ಯಕ್ತಿಯು ಹೇಗೆ ತಾನೇ ಆತನಿಗೆ ಸಾಟಿಯಾದಾನು?"

ಆ ಗಯಮಹಾರಾಜನಿಗೆ ಗಯನ್ತಿಯೆಂಬ ಪತ್ನಿಯಲ್ಲಿ ಚಿತ್ರರಥ, ಸುಗತಿ ಮತ್ತು ಅವರೋಧನ ಎಂಬ ಮೂವರು ಪುತ್ರರು ಹುಟ್ಟಿದರು. ಅವರಲ್ಲಿ ಚಿತ್ರರಥನಿಗೆ ತನ್ನ ಪತ್ನಿಯಾದ ಊರ್ಣಾದೇವಿಯಿಂದ 'ಸಾಮ್ರಾಟ್' ಎಂಬ ಪುತ್ರನು ಜನಿಸಿದನು.

ಸಾಮ್ರಾಟನಿಗೆ ಉತ್ಕಲೆಯ ಗರ್ಭದಲ್ಲಿ ಮರೀಚಿಯೂ ಮರೀಚಿಗೆ ಬಿಂದುಮತಿಯಲ್ಲಿ ಬಿಂದಮಾನ್ ಎಂಬ ಪುತ್ರರೂ ಹುಟ್ಟಿದರು. ಆತನಿಗೆ ಸರಘಾ ಎಂಬ ಪತ್ನಿಯಲ್ಲಿ ಮಧುವೂ, ಮಧುವಿಗೆ ಸುಮನಳಲ್ಲಿ ವೀರವ್ರತನೂ, ವೀರವ್ರತನಿಗೆ ಭೋಜಾ ಎಂಬಾಕೆಯಲ್ಲಿ ಮಂಥು ಮತ್ತು ಪ್ರಮಂಥು ಎಂಬ ಇಬ್ಬರು ಪುತ್ರರೂ ಜನಿಸಿದರು. ಇವರಲ್ಲಿ ಮಂಥುವು ಸತ್ಯಾದೇವಿಯ ಬಸುರಿನಲ್ಲಿ ಭೌಮನನೆಂಬ ಪುತ್ರರನ್ನೂ ಭೌಮನನು ದೂಷಣಾದೇವಿಯ ಗರ್ಭದಲ್ಲಿ ತ್ವಷ್ಟನನ್ನೂ, ತ್ವಷ್ಟನು ವಿರೋಚನಾ ದೇವಿಯಲ್ಲಿ ವಿರಜನೆಂಬ ಪುತ್ರನನ್ನೂ, ವಿರಜನು ವಿಷೂಚಿಯೆಂಬ ಮಡದಿಯಲ್ಲಿ ಶತಜಿತುವೇ ಮುಂತಾದ ನೂರು ಮಂದಿ ಪುತ್ರರನ್ನೂ– ಒಬ್ಬಳು ಮಗಳನ್ನೂ ಪಡೆದನು. ವಿರಜನ ವಿಷಯದಲ್ಲಿ ಈ ಶ್ಲೋಕವು ಪ್ರಸಿದ್ಧವಾಗಿದೆ.

ಪ್ರೈಯವ್ರತಂ ವಂಶಮಿಮಂ ವಿರಜಶ್ಚರಮೋದ್ಭವಃ ।
ಅಕರೋದತ್ಯಲಂ ಕೀರ್ತ್ಯಾ ವಿಷ್ಣುಃ ಸುರಗಣಂ ಯಥಾ ॥೧೬॥

ಭಗವಂತನಾದ ವಿಷ್ಣುವು ದೇವತೆಗಳ ಕಾಂತಿಯನ್ನು ಹೆಚ್ಚಿಸು ವಂತೆಯೇ–ಆ ವಂಶದಲ್ಲಿ ಕಡೆಯಲ್ಲಿ ಹುಟ್ಟಿದ ರಾಜನಾದ ವಿರಜನು ಪ್ರಿಯವ್ರತನ ಕುಲವನ್ನು ತನ್ನ ಕೀರ್ತಿಯಿಂದ ಬೆಳಗಿದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಪಂಚಮಸ್ಕಂಧದ ೧೫ನೆಯ ಅಧ್ಯಾಯವು ಮುಗಿಯಿತು.

ಪಂಚಮಸ್ಕಂಧ ೧೬ನೆಯ ಅಧ್ಯಾಯ

ಭುವನಕೋಶದ ವರ್ಣನೆ

ಭರತವಂಶದ ವರ್ಣನೆಯನ್ನು ಶುಕಮಹರ್ಷಿಗಳಿಂದ ಕೇಳಿದ ಪರೀಕ್ಷಿದ್ರಾಜನು ಮಹರ್ಷಿಗಳಲ್ಲಿ ಹೀಗೆ ವಿಜ್ಞಾಪಿಸಿದನು :

ಉಕ್ತಸ್ತ್ವಯಾ ಭೂಮಣ್ಡಲಾಯಾಮವಿಶೇಷೋ ಯಾವ-ದಾದಿತ್ಯಸ್ತಪತಿ ಯತ್ರ ಚಾಸೌ ಜ್ಯೋತಿಷಾಂ ಗಣೈಶ್ಚನ್ದ್ರಮಾ ವಾ ಸಹ ದೃಶ್ಯತೇ ॥೧॥

ತತ್ರಾಪಿ ಪ್ರಿಯವ್ರತರಥಚರಣಪರಿಖಾತೈಃ ಸಪ್ತಭಿಃ ಸಪ್ತಸಿನ್ಧವ ಉಪಕ್ಲೃಪ್ತಾ ಯತ ಏತಸ್ಯಾಃ ಸಪ್ತದ್ವೀಪವಿಶೇಷವಿಕಲ್ಪಸ್ತ್ವಯಾ ಭಗವನ್ಖಲು ಸೂಚಿತ ಏತದೇವಾಖಿಲಮಹಂ ಮಾನತೋ ಲಕ್ಷಣತಶ್ಚ ಸರ್ವಂ ವಿಜಿಜ್ಞಾಸಾಮಿ

"ಮುನಿವರ್ಯರೇ! ಸೂರ್ಯನು ಎಲ್ಲಿಯವರೆಗೆ ಬೆಳಕನ್ನು ಬೀರುತ್ತಾನೆಯೋ ಮತ್ತು ನಕ್ಷತ್ರಗಣಸಮೇತನಾದ ಚಂದ್ರನು ಕಾಣಿಸುತ್ತಾನೆಯೋ–ಅಲ್ಲಿಯವರೆಗೂ ಇರುವ ಭೂಮಿಯ ವಿಸ್ತಾರ ಮುಂತಾದುವುಗಳನ್ನು ತಾವು ಸಂಕ್ಷೇಪವಾಗಿ ತಿಳಿಸಿರುವಿರಿ. ಈ ಭೂಮಿಯಲ್ಲಿಯೂ ಪ್ರಿಯವ್ರತಮಹಾರಾಜನ ರಥದ ಚಕ್ರಗಳು ಗೀರಿ ರಚಿಸಿದ ಕಂದಕಗಳಿಂದ ಸಪ್ತಸಮುದ್ರಗಳು ನಿರ್ಮಿತವಾಗಿ ಅವುಗಳಿಂದ ಭೂಮಂಡಲದಲ್ಲಿ ಸಪ್ತ ಸಮುದ್ರಗಳ ರಚನೆಯಾಯಿತು–ಎಂಬುದನ್ನೂ ಸೂಚಿಸಿದಿರಿ. ಅವುಗಳ ಅಳತೆ ವಿಸ್ತಾರಗಳೇನು? ಲಕ್ಷಣಗಳೇನು? ಮುಂತಾದುವನ್ನು ವಿವರವಾಗಿ ಕೇಳಲು ಬಯಸುತ್ತೇನೆ ; ಪೂಜ್ಯರೇ!

ಈ ಪ್ರಕೃತಿಯ ವಿವರಣೆಯನ್ನು ಈಗ ಏಕೆ ತಿಳಿದುಕೊಳ್ಳಬೇಕು? ಎಂದರೆ–ಇದು ಭಗವಂತನ ಗುಣಮಯವಾದ ಸ್ಥೂಲರೂಪವು. ಈ ಗುಣಮಯವಾದ ಸ್ಥೂಲರೂಪದಲ್ಲಿ ಮನಸ್ಸು ನೆಲೆಗೊಂಡರೆ ಅದು ಸೂಕ್ಷ್ಮತಮವೂ, ನಿರ್ಗುಣವೂ, ಸ್ವಯಂಪ್ರಕಾಶವೂ ಆಗಿ ವಾಸುದೇವ ಎಂದು ಕರೆಯಲ್ಪಡುವ ಪರಬ್ರಹ್ಮರೂಪದಲ್ಲಿಯೂ ನೆಲೆಸಲು ಯೋಗ್ಯವಾಗಬಹುದು. ಆದುದರಿಂದ ಅದನ್ನು ವಿವರಿಸೋಣವಾಗಲಿ, ಗುರುವರೇಣ್ಯರೇ!"

ಶುಕಮಹರ್ಷಿಗಳು ರಾಜನಿಗೆ ಹೀಗೆಂದರು :

"ಎಲೈ ಮಹಾರಾಜನೇ! ಭಗವಂತನ ಮಾಯೆಯ ಗುಣಗಳು ಅಳತೆಯನ್ನು ಮೀರಿವೆ. ಅವು ಎಷ್ಟು ವಿಸ್ತಾರವಾಗಿವೆ ಎಂದರೆ : ದೇವತೆಗಳ ಆಯುಸ್ಸನ್ನು ಪಡೆದರೂ ಮನಸ್ಸು ಮತ್ತು ಮಾತುಗಳಿಂದ ಅವುಗಳ ಮಹಿಮೆಯನ್ನೂ, ನಾಮ-ರೂಪಗಳಲ್ಲಿ ತಿಳಿಯಲು ಸಾಧ್ಯವಾಗಲಾರದು. ಆದುದರಿಂದ ಮುಖ್ಯವಾಗಿ ಭೂಗೋಳದ ನಾಮ, ರೂಪ, ಪ್ರಮಾಣ ಮತ್ತು ಲಕ್ಷಣವಿಶೇಷಗಳನ್ನು ವರ್ಣಿಸುವೆನು. ಸಪ್ತದ್ವೀಪಗಳು ಭೂಗೋಳ

ವೆಂಬ ಕಮಲಕ್ಕೆ ಕೋಶದಂತಿವೆ. ಅವುಗಳಲ್ಲಿ ಎಲ್ಲಕ್ಕಿಂತಲೂ ಒಳಗಿನ ಕೋಶವು ನಾವು ವಾಸಮಾಡುತ್ತಿರುವ ಈ ಜಂಬೂದ್ವೀಪ. ಇದರ ವಿಸ್ತಾರವು ಒಂದು ಲಕ್ಷ ಯೋಜನೆಗಳು. ಈ ದ್ವೀಪವು ಕಮಲಪತ್ರದಂತೆ ದುಂಡಗೆ ಸಮನಾಗಿದೆ. ಈ ಜಂಬೂದ್ವೀಪದೊಳಗೆ ಒಂಭತ್ತು ಸಾವಿರ ಯೋಜನ ಗಳಷ್ಟು ವಿಸ್ತಾರವುಳ್ಳ (ಇಳಾವೃತ, ಭರತವರ್ಷ, ಹರಿವರ್ಷ, ಕಿಂಪುರುಷ ವರ್ಷ, ರಮ್ಯಕವರ್ಷ, ಹಿರಣ್ಮಯವರ್ಷ, ಕುರುವರ್ಷ, ಭದ್ರಾಶ್ವವರ್ಷ ಮತ್ತು ಕೇತುಮಾಲವರ್ಷ ಎಂಬ) ಒಂಭತ್ತು ವರ್ಷ (ವಿಭಾಗ) ಗಳಿವೆ. ಈ ವರ್ಷಗಳು ನೀಲ, ಶ್ವೇತ, ಶೃಂಗವಂತ, ನಿಷಧ, ಹೇಮಕೂಟ, ಹಿಮಾಲಯ, ಮಾಲ್ಯವಂತ ಮತ್ತು ಗಂಧಮಾದನಗಳೆಂಬ ಎಂಟು ಕುಲಪರ್ವತ ಗಳಿಂದ ವಿಂಗಡಿಸಲ್ಪಟ್ಟಿವೆ. ಇವುಗಳ ನಟ್ಟನಡುವೆ ಇಳಾವೃತವೆಂಬ ಹತ್ತನೆಯ ವರ್ಷವಿದೆ. ಅದರ ಮಧ್ಯದಲ್ಲಿ ಭೂಗೋಳಕಮಲಕ್ಕೆ ಕರ್ಣಿಕೆಯಂತೆ ಬೆಳಗುತ್ತಿರುವ ಮಹಾಮೇರುಪರ್ವತವಿದೆ. ಈ ಕುಲಪರ್ವತ ಸಾರ್ವ ಭೌಮನು ಒಂದು ಲಕ್ಷ ಯೋಜನಗಳಷ್ಟು ಎತ್ತರವಾಗಿದ್ದು ಮೇಲಿನಿಂದ ಕೆಳಗಿನವರೆಗೆ ಪೂರ್ಣವಾಗಿ ಸುವರ್ಣಮಯನಾಗಿದ್ದಾನೆ. ಈ ಮಹಾ ಗಿರಿಯು ಶಿಖರದಲ್ಲಿ ಮೂವತ್ತೆರಡು ಸಾವಿರ ಯೋಜನಗಳಷ್ಟು ಅಗಲದಿಂದ ಕೂಡಿ ಕೆಳಗಡೆಯಲ್ಲಿ ಹದಿನಾರು ಸಾವಿರ ಯೋಜನಗಳಷ್ಟು ಭೂಮಿಯಲ್ಲಿ ಹೂತಿದೆ. ಅಂದರೆ ಭೂಮಿಯ ಹೊರಗೆ ಎಂಭತ್ತನಾಲ್ಕು ಸಾವಿರ ಯೋಜನ ಗಳಷ್ಟು ವಿಸ್ತಾರವಾಗಿ ಈ ಪರ್ವತವು ಕಾಣುವುದು. ಇಳಾವೃತವರ್ಷದ ಉತ್ತರದಲ್ಲಿ ಕ್ರಮವಾಗಿ ನೀಲಪರ್ವತ, ಶ್ವೇತಪರ್ವತ ಮತ್ತು ಶೃಂಗವಂತ ಪರ್ವತಗಳೆಂಬ ಮೂರು ಕುಲಪರ್ವತಗಳಿವೆ. ಅವು ರಮ್ಯಕ, ಹಿರಣ್ಮಯ ಮತ್ತು ಕುರು ಎಂಬ ವರ್ಷಗಳಿಗೆ ಎಲ್ಲೆಗಳಾಗಿವೆ ಮತ್ತು ಪೂರ್ವದಿಂದ ಪಶ್ಚಿಮದವರೆಗೆ ಲವಣಸಮುದ್ರದವರೆಗೆ ಹಬ್ಬಿವೆ. ಅವುಗಳಲ್ಲಿ ಪ್ರತಿ ಯೊಂದರ ವಿಸ್ತಾರವೂ ಎರಡು ಸಾವಿರ ಯೋಜನಗಳಷ್ಟಿವೆ. ಉದ್ದದಲ್ಲಿ ಮೊದ-ಮೊದಲನೆಯದಕ್ಕಿಂತಲೂ ಕಡೆ-ಕಡೆಯ ಪರ್ವತಗಳು ಹತ್ತನೆಯ ಭಾಗಕ್ಕಿಂತ ಅಧಿಕವಾಗಿ ಕಡಿಮೆಯಾಗುವುದು. ಎಲ್ಲದರ ಅಗಲ ಮತ್ತು ಎತ್ತರಗಳು ಮಾತ್ರ ಒಂದೇ ಸಮನಾಗಿವೆ. (ಶ್ಲೋಕ 3-8)

ಇದೇ ರೀತಿಯಲ್ಲಿ ಇಳಾವೃತವರ್ಷದ ದಕ್ಷಿಣದ ಕಡೆ ಕ್ರಮವಾಗಿ

ನಿಷಧ, ಹೇಮಕೂಟ ಮತ್ತು ಹಿಮಾಲಯಗಳೆಂಬ ಮೂರು ಪರ್ವತಗಳುಂಟು. ಇವೂ ಕೂಡ ನೀಲಾದಿ ಪರ್ವತಗಳಂತೆ ಪೂರ್ವ, ಪಶ್ಚಿಮವಾಗಿ ಹಬ್ಬಿ ಒಂದೊಂದೂ ಹತ್ತು ಸಾವಿರ ಯೋಜನಗಳಷ್ಟು ಎತ್ತರವಾಗಿವೆ. ಮತ್ತು ಕ್ರಮವಾಗಿ ಹರಿವರ್ಷ, ಕಿಂಪುರುಷವರ್ಷ ಮತ್ತು ಭರತವರ್ಷಗಳ ಗಡಿಯ ದುರ್ಗಗಳಂತಿವೆ. ಇಳಾವೃತವರ್ಷದ ಪೂರ್ವ ಮತ್ತು ಪಶ್ಚಿಮಗಳ ಕಡೆ ಉತ್ತರದಲ್ಲಿ ನೀಲಪರ್ವತ ಮತ್ತು ದಕ್ಷಿಣದಲ್ಲಿ ನಿಷಧಪರ್ವತದವರೆಗೆ ಹರಡಿರುವ ಗಂಧಮಾಧನ ಮತ್ತು ಮಾಲ್ಯವಂತ ಎಂಬ ಎರಡು ಪರ್ವತಗಳಿವೆ. ಇವು ಒಂದೊಂದೂ ಎರಡು ಸಾವಿರ ಯೋಜನಗಳಷ್ಟು ವಿಸ್ತಾರವಾಗಿದ್ದು ಭದ್ರಾಶ್ವವರ್ಷ ಮತ್ತು ಕೇತುಮಾಲವರ್ಷಗಳ ಗಡಿಯನ್ನು ನಿರ್ಧರಿಸುತ್ತವೆ. ಇವುಗಳಲ್ಲದೇ ಮಂದರ, ಮೇರುಮಂದರ, ಸುಪಾರ್ಶ್ವ ಮತ್ತು ಕುಮುದ ಎಂಬ, ಹತ್ತು ಸಾವಿರ ಯೋಜನಗಳಷ್ಟು ಎತ್ತರ ಮತ್ತು ಅಷ್ಟೇ ವಿಸ್ತಾರವುಳ್ಳ ನಾಲ್ಕು ಪರ್ವತಗಳು ಮೇರುಪರ್ವತಕ್ಕೆ ನಾಲ್ಕು ಕಡೆಗಳಲ್ಲಿಯೂ ಆಧಾರಸ್ತಂಭಗಳಂತೆ ಕಂಗೊಳಿಸುತ್ತಿವೆ. ಈ ನಾಲ್ಕು ಗಿರಿಗಳಲ್ಲಿಯೂ ಕ್ರಮವಾಗಿ ಅತಿ ದೊಡ್ಡದಾದ ಮಾವು, ನೇರಳೆ, ಈಚಲು ಮತ್ತು ಆಲದ ಮರಗಳಿವೆ. ಆ ವೃಕ್ಷಗಳಲ್ಲಿ ಒಂದೊಂದೂ ಹನ್ನೊಂದು ಸಾವಿರ ಯೋಜನಗಳಷ್ಟು ಎತ್ತರವಾಗಿದ್ದು ವೃಕ್ಷಗಳ ಕೊಂಬೆಗಳ ವಿಸ್ತಾರವೂ ಅಷ್ಟೇ ಆಗಿವೆ. ಇವುಗಳ ದಪ್ಪ ನೂರು-ನೂರು ಯೋಜನಗಳಷ್ಟಿದೆ. ಎಲೈ ಭರತಕುಲಮಣಿಯೇ! ಈ ಪರ್ವತಗಳ ಮೇಲೆ ಕ್ರಮವಾಗಿ ಹಾಲು, ಜೇನು ತುಪ್ಪ ಕಬ್ಬಿನರಸ ಮತ್ತು ಸಿಹಿನೀರುಗಳಿಂದ ತುಂಬಿರುವ ನಾಲ್ಕು ಸರೋವರಗಳೂ ಇವೆ. ಇವುಗಳನ್ನು ಸೇವನೆಮಾಡುವ ಯಕ್ಷ-ಕಿನ್ನರರೇ ಮುಂತಾದ ಉಪದೇವಗಣಗಳಿಗೆ ಸ್ವಾಭಾವಿಕವಾಗಿಯೇ ಯೋಗಸಿದ್ಧಿಗಳುಂಟಾಗಿರುತ್ತವೆ. ಇವಲ್ಲದೇ ಕ್ರಮವಾಗಿ ನಂದನ, ಚೈತ್ರರಥ, ವೈಭ್ರಾಜಕ ಮತ್ತು ಸರ್ವತೋಭದ್ರ ಎಂಬ ಹೆಸರುಗಳುಳ್ಳ ನಾಲ್ಕು ದಿವ್ಯವಾದ ಉಪವನಗಳೂ ಈ ಗಿರಿಗಳ ಮೇಲೆ ಕಂಗೊಳಿಸುತ್ತಿವೆ. ಇವುಗಳಲ್ಲಿ ಮುಖ್ಯರಾದ ದೇವತಾಗಣಗಳು ಸುರಸುಂದರಿಯರಿಗೆ ನಾಯಕರಾಗಿ ಅವರೊಡನೆ ಕ್ರೀಡಿಸುತ್ತಿರುತ್ತಾರೆ. ಆಗ ಗಂಧರ್ವರೇ ಮುಂತಾದ ಉಪದೇವತೆಗಳ ಗಣಗಳು ಈ ದೇವತೆಗಳನ್ನು ಸ್ತುತಿಸುತ್ತಿರುತ್ತಾರೆ. ಮಂದರಗಿರಿಯ ತಪ್ಪಲಿನಲ್ಲಿರುವ ಹನ್ನೊಂದು ಸಾವಿರ

ಯೋಜನ ಎತ್ತರದ ಆ ಮಾವಿನ ಮರದಿಂದ ಗಿರಿಶಿಖರದಷ್ಟು ದೊಡ್ಡದಾಗಿ ಅಮೃತದಂತೆ ಸವಿಯಾಗಿರುವ ಹಣ್ಣುಗಳು ಉದುರುತ್ತವೆ. ಹಾಗೆ ಉದುರಿದಾಗ ಅವು ಒಡೆದು ಅವುಗಳಿಂದ ಅದ್ಭುತವಾದ ಪರಿಮಳದಿಂದ ಘಮ-ಘಮಿಸುತ್ತಾ ಅತ್ಯಂತ ಸಿಹಿಯಾಗಿರುವ ಕೆಂಪುಬಣ್ಣದ ರಸವು ಹರಿಹರಿದು 'ಅರುಣೋದಾ' ಎಂಬ ನದಿಯುಂಟಾಗಿ ಆ ನದಿಯು ಮಂದರಾಚಲದ ಶಿಖರದಿಂದ ಧುಮುಕಿ ತನ್ನ ಜಲದಿಂದ ಇಳಾವೃತವರ್ಷದ ಪೂರ್ವಭಾಗಕ್ಕೆ ನೀರೆರೆಯುತ್ತದೆ. ಶ್ರೀಪಾರ್ವತೀದೇವಿಯ ದಾಸಿಯರಾದ ಯಕ್ಷಪತ್ನಿಯರು ಆ ಜಲವನ್ನು ಸೇವಿಸುವರು. ಅದರಿಂದ ಅವರ ಅಂಗಗಳಲ್ಲಿ ಹೊರಸೂಸುವ ದಿವ್ಯಪರಿಮಳವನ್ನು ಮುಟ್ಟಿ ಬೀಸುವ ಗಾಳಿಯು ನಾಲ್ಕೂ ಕಡೆಗಳಲ್ಲಿಯೂ ಹತ್ತು-ಹತ್ತು ಯೋಜನಗಳಷ್ಟು ಇಡೀ ಜಾಗವನ್ನು ಸುವಾಸಿತವನ್ನಾಗಿ ಮಾಡುತ್ತದೆ. ಇದೇ ರೀತಿಯಲ್ಲಿಯೇ ನೇರಳೆಯ ಮರದಿಂದಲೂ ಆನೆಯಷ್ಟು ದಪ್ಪನಾಗಿ ಅತಿಸೂಕ್ಷ್ಮವಾದ ಬೀಜಗಳುಳ್ಳ ಹಣ್ಣುಗಳು ಉದುರಿ, ಒಡೆದು ಅವುಗಳ ರಸದಿಂದ ಜಂಬೂ (ನೇರಿಳೆ) ನದಿಯು ಪ್ರಕಟಗೊಳ್ಳುತ್ತದೆ. ಆ ನದಿಯು ಮೇರು-ಮಂದರಪರ್ವತಗಳ ಹತ್ತು ಸಾವಿರ ಯೋಜನಗಳಷ್ಟು ಎತ್ತರದ ಶಿಖರದಿಂದ ಧುಮುಕಿ ಇಳಾ ವೃತದ ದಕ್ಷಿಣಭಾಗಕ್ಕೆ ನೀರೆರೆಯುತ್ತದೆ. ಆ ನದಿಯ ಎರಡೂ ದಡ ಗಳಲ್ಲಿರುವ ಮಣ್ಣು ಆ ರಸದಿಂದ ನೆನೆದು ಗಾಳಿ ಮತ್ತು ಸೂರ್ಯನ ಶಾಖ ದಿಂದ ಒಣಗಿದಾಗ ದೇವಲೋಕವನ್ನು ಅಲಂಕರಿಸುತ್ತಿರುವ ಜಾಂಬೂನದ ವೆಂಬ ಚಿನ್ನವು ಉಂಟಾಗುವುದು. ಆ ದಿವ್ಯವಾದ ಸುವರ್ಣದಿಂದ ನಿರ್ಮಿತ ವಾದ ಕಿರೀಟ, ಕಂಕಣ ಮತ್ತು ಉಡಿದಾರಗಳೆಂಬ ದಿವ್ಯಾಭರಣಗಳನ್ನು ಧರಿಸಿ ದೇವತೆಗಳೂ ಮತ್ತು ಗಂಧರ್ವರೂ ತಮ್ಮ ತರುಣಿಯರೊಡನೆ ಮೆರೆಯುವರು. ಸುಪಾರ್ಶ್ವಪರ್ವತದ ಮೇಲೆ ಯಾವ ವಿಶಾಲವಾದ ಈಚಲ ಮರವುಂಟೋ–ಅದರ ಐದು ಪೊಟರೆಗಳಿಂದ ಐದು ಮಾರುಗಳ ಗಾತ್ರ ವಿರುವ ಐದು ಜೇನುತುಪ್ಪದ ಧಾರೆಗಳು ಹರಿದುಬರುತ್ತವೆ. ಅವು ಸುಪಾರ್ಶ್ವ ಪರ್ವತದ ಶಿಖರದಿಂದ ಧುಮುಕಿ ಇಳಾವೃತವರ್ಷದ ಪಶ್ಚಿಮಭಾಗವನ್ನು ತಮ್ಮ ಸುಗಂಧದಿಂದ ಸುವಾಸನೆಗೊಳಿಸುತ್ತವೆ. ಆ ಜೇನುರಸವನ್ನು ಯಾರು ಕುಡಿಯುತ್ತಾರೋ–ಅವರ ಮುಖದಿಂದ ಹೊರಹೊಮ್ಮುವ

ವಾಯುವು ತನ್ನ ನಾಲ್ಕು ಕಡೆಗಳಲ್ಲೂ ನೂರು-ನೂರು ಯೋಜನಗಳವರೆಗೆ ಅದರ ಸುವಾಸನೆಯನ್ನು ಹರಡುತ್ತದೆ. (ಶ್ಲೋಕ 9-23)

ಇದೇ ರೀತಿಯಲ್ಲಿ ಕುಮುದಪರ್ವತದ ಮೇಲೆ ಬೆಳೆದಿರುವ ಶತವಲ್ಶವೆಂಬ ಆಲದಮರದ ದೊಡ್ಡ ಕೊಂಬೆಗಳಿಂದ ಹರಿದುಬರುವ ಅನೇಕ ನದಿಗಳುಂಟು. ಅವೆಲ್ಲವೂ ಮನಸ್ಸಿನ ಎಲ್ಲ ಇಷ್ಟವಾದ ಭೋಗಗಳನ್ನೂ ಈಡೇರಿಸುತ್ತವೆ. ಹಾಲು, ಮೊಸರು, ಜೇನುತುಪ್ಪ, ತುಪ್ಪ, ಬೆಲ್ಲ, ಅನ್ನ, ವಸ್ತ್ರ, ಹಾಸಿಗೆ, ಆಸನ ಮತ್ತು ಭೂಷಣಗಳ ಮುಂತಾದ ಎಲ್ಲ ಇಷ್ಟ ಪದಾರ್ಥಗಳೂ ಅವುಗಳಿಂದ ದೊರೆಯುತ್ತವೆ. ಅವೆಲ್ಲವೂ ಕುಮುದಪರ್ವತದ ಶಿಖರದಿಂದ ಧುಮುಕಿ ಇಲಾವೃತದ ಉತ್ತರಭಾಗಕ್ಕೆ ನೀರೆರೆಯುತ್ತವೆ. ಅವುಗಳು ಕೊಡುವ ಭೋಗ್ಯಪದಾರ್ಥಗಳನ್ನು ಸೇವಿಸುವುದರಿಂದ ಅಲ್ಲಿಯ ಪ್ರಜೆಗಳ ಚರ್ಮದಲ್ಲಿ ಸುಕ್ಕು, ನರೆ, ಆಯಾಸ, ದೇಹದಿಂದ ಬೆವರು ಮತ್ತು ದುರ್ಗಂಧಗಳು ಉಂಟಾಗುವಿಕೆ, ಮುಪ್ಪು, ರೋಗ, ಸಾವು, ಶೀತೋಷ್ಣಗಳ ಪೀಡೆ, ದೇಹವು ಕಾಂತಿಹೀನವಾಗುವಿಕೆ ಮತ್ತು ಅಂಗಗಳು ಮುರಿದು ಹೋಗುವಿಕೆ–ಇವೇ ಮುಂತಾದ ಕಷ್ಟಗಳು ಎಂದಿಗೂ ಬಾಧಿಸುವುದಿಲ್ಲ ಮತ್ತು ಬದುಕಿರುವವರೆಗೂ ನಿರತಿಶಯವಾದ ಸುಖವೇ ದೊರೆಯುವುದು. (ಶ್ಲೋಕ 24-25)

ಎಲೈ ರಾಜನೇ! ಕಮಲಪುಷ್ಪದ ಕರ್ಣಿಕೆಯ ನಾಲ್ಕು ಕಡೆಗಳಲ್ಲಿಯೂ ಕೇಸರಗಳು ಹೊರಹೊಮ್ಮುವಂತೆಯೇ ಮೇರುಪರ್ವತದ ಬುಡದಲ್ಲಿ ಅದರ ನಾಲ್ಕು ಕಡೆಗಳಲ್ಲಿಯೂ ಕುರಂಗ, ಕುರರ, ಕುಸುಂಭ, ವೈಕಂಕ, ತ್ರಿಕೂಟ, ಶಿಶಿರ, ಪತಂಗ, ರುಚಕ, ನಿಷಧ, ಶಿನೀವಾಸ, ಕಪಿಲ, ಶಂಖ, ವೈದೂರ್ಯ, ಜಾರುಧಿ, ಹಂಸ, ಋಷಭ, ನಾಗ, ಕಾಲಂಜರ ಮತ್ತು ನಾರದ–ಇವೇ ಮುಂತಾದ ಇಪ್ಪತ್ತು ಪರ್ವತಗಳಿವೆ. ಇವುಗಳಲ್ಲದೇ ಮೇರುವಿನ ಪೂರ್ವದ ಕಡೆ ಜಠರ ಮತ್ತು ದೇವಕೂಟಗಳೆಂಬ ಎರಡು ಪರ್ವತಗಳುಂಟು. ಇವು ಒಂದೊಂದು ಹದಿನೆಂಟು ಸಾವಿರ ಯೋಜನಗಳಷ್ಟು ಉದ್ದವಾಗಿಯೂ ಮತ್ತು ಎರಡು ಸಾವಿರ ಯೋಜನಗಳಷ್ಟು ಎತ್ತರವಾಗಿಯೂ ಮತ್ತು ದಪ್ಪನಾಗಿಯೂ ಹಬ್ಬಿವೆ. ಇದೇ ರೀತಿಯಲ್ಲಿ ಪಶ್ಚಿಮದ ಕಡೆಯಲ್ಲಿ ಪವನ ಮತ್ತು ಪಾರಿಯಾತ್ರಗಳೆಂಬ ಪರ್ವತಗಳೂ, ದಕ್ಷಿಣದ ಕಡೆ ಕೈಲಾಸ ಮತ್ತು

ಕರವೀರಗಿರಿಗಳೂ ಮತ್ತು ಉತ್ತರದ ಕಡೆ ತ್ರಿಶೃಂಗ ಮತ್ತು ಮಕರ ಗಳೆಂಬ ಪರ್ವತಗಳೂ ಹಬ್ಬಿವೆ. ಈ ಎಂಟು ಪರ್ವತಗಳಿಂದ ನಾಲ್ಕು ಕಡೆ ಗಳಲ್ಲಿಯೂ ಸುತ್ತುವರಿಯಲ್ಪಟ್ಟಿರುವ ಚಿನ್ನದ ಬೆಟ್ಟವಾದ ಮೇರುವು ಅಗ್ನಿಯಂತೆ ತೊಳತೊಳಗಿ ಬೆಳಗುತ್ತಿದೆ. ಮೇರುಪರ್ವತದ ಶಿಖರದ ಮೇಲೆ ನಟ್ಟನಡುವೆ ಶ್ರೀಭಗವಂತರಾದ ಬ್ರಹ್ಮದೇವರ ದಿವ್ಯವಾದ ನಗರಿಯುಂಟೆಂದೂ, ಅದು ಆಕಾರದಲ್ಲಿ ಚಚ್ಚೌಕವಾಗಿಯೂ ಕೋಟಿ ಯೋಜನ ವಿಸ್ತಾರವಾಗಿಯೂ ಇದೆಯೆಂದೂ ಹೇಳುತ್ತಾರೆ. ಅದರ ಕೆಳಗೆ ಪೂರ್ವವೇ ಮುಂತಾದ ನಾಲ್ಕು ದಿಕ್ಕುಗಳಲ್ಲಿಯೂ ಮತ್ತು ಉಪದಿಕ್ಕು ಗಳಲ್ಲಿಯೂ ಆಯಾ ದಿಕ್ಕುಗಳ ಅಧಿಪತಿಗಳಾದ ಇಂದ್ರನೇ ಮುಂತಾದ ಅಷ್ಟದಿಕ್ಪಾಲಕರಿಗೆ ಸೇರಿದ ಎಂಟು ನಗರಿಗಳಿವೆ. ಅವು ತಮ್ಮ-ತಮ್ಮ ಅಧಿಪತಿಗಳಾದ ದೇವತೆಗಳಿಗೆ ಅನುರೂಪವಾಗಿ ಆಯಾ ದಿಕ್ಕುಗಳಲ್ಲಿಯೇ ಇದ್ದು ಅಳತೆಯಲ್ಲಿ ಬ್ರಹ್ಮದೇವರ ನಗರಿಯಲ್ಲಿ ನಾಲ್ಕನೇ ಒಂದು ಭಾಗದಷ್ಟಿವೆ.* (ಶ್ಲೋಕ 26-29)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಪಂಚಮಸ್ಕಂಧದ ೧೬ನೆಯ ಅಧ್ಯಾಯವು ಮುಗಿಯಿತು.

---

* ವಿಷ್ಣುಪುರಾಣಾದಿಗಳಲ್ಲಿ ಈ ಭೂಗೋಳದ ವಿಸ್ತಾರ ಮುಂತಾದುವುಗಳನ್ನು ಬೇರೆ ರೀತಿಯಲ್ಲಿ ವರ್ಣಿಸಿರುವುದುಂಟು. ಈ ಭಿನ್ನವಾದ ವರ್ಣನೆಯು ಬೇರೆ ಕಲ್ಪಗಳಿಗೆ ಸೇರಿದ್ದು–ಎಂದು ಸಾಂಪ್ರದಾಯಕರು ಹೇಳುತ್ತಾರೆ.

ಗಂಗಾದೇವಿಯ ವರ್ಣನೆ: ಭಗವಾನ್ ಶಂಕರನು ಮಾಡಿದ ಸಂಕರ್ಷಣಸ್ತುತಿ

ಶುಕಮಹರ್ಷಿಗಳು ಹೇಳುತ್ತಾರೆ :

ತತ್ರ ಭಗವತಃ ಸಾಕ್ಷಾದ್ಯಜ್ಞಲಿಙ್ಗಸ್ಯ ವಿಷ್ಣೋರ್ವಿಕ್ರಮತೋ ವಾಮಪಾದಾಙ್ಗುಷ್ಠನಖನಿರ್ಭಿನ್ನೋರ್ಧ್ವಾಣ್ಡಕಟಾಹವಿವರೇಣಾ-ನ್ತಃಪ್ರವಿಷ್ಟಾ ಯಾ ಬಾಹ್ಯಜಲಧಾರಾ ತಚ್ಚರಣಪಙ್ಕಜಾವನೇಜ-ನಾರುಣಕಿಞ್ಜಲ್ಕೋಪರಞ್ಜಿತಾಖಿಲಜಗದಘಮಲಾಪಹೋಪ-ಸ್ಪರ್ಶನಾಮಲಾ ಸಾಕ್ಷಾದ್ಭಗವತ್ಪದೀತ್ಯನುಪಲಕ್ಷಿತವಚೋಽಭಿ-ಧೀಯಮಾನಾತಿಮಹತಾ ಕಾಲೇನ ಯುಗಸಹಸ್ರೋಪಲಕ್ಷಣೇನ ದಿವೋ ಮೂರ್ಧನ್ಯವತತಾರ ಯತ್ತದ್ವಿಷ್ಣುಪದಮಾಹುಃ ॥೧॥

ಪರೀಕ್ಷಿದ್ರಾಜನೇ! ಕೇಳು. ಯಜ್ಞಮೂರ್ತಿಯಾದ ಶ್ರೀಭಗವಂತನಾದ ಮಹಾವಿಷ್ಣುವು ಬಲಿಚಕ್ರವರ್ತಿಯ ಯಜ್ಞಶಾಲೆಯಲ್ಲಿ ಮೂರು ಲೋಕಗಳನ್ನೂ ಅಳೆಯಲು ತನ್ನ ಪಾದಗಳನ್ನು ಚಾಚಿದಾಗ ಆತನ ಎಡ ಪಾದದ ಅಂಗುಷ್ಠದ ಉಗುರಿನಿಂದ ಬ್ರಹ್ಮಾಂಡಕಟಾಹದ ಮೇಲಿನ ಭಾಗವು ಒಡೆಯಿತು. ಆ ರಂಧ್ರದ ಮೂಲಕ ಬ್ರಹ್ಮಾಂಡದ ಹೊರಕ್ಕೆ ಹರಿದು ಬಂದ ಜಲಧಾರೆಯು ಭಗವಂತನ ಚರಣಕಮಲವನ್ನು ತೊಳೆದುದರಿಂದ ಅದಕ್ಕೆ ಅಂಟಿಕೊಂಡಿದ್ದ ಕುಂಕುಮ-ಕೇಸರಗಳಿಂದ ಅದು ಕೆಂಪೇರಿತು. ಆ ನಿರ್ಮಲವಾದ ಜಲಧಾರೆಯ ಸ್ಪರ್ಶವಾದೊಡನೆಯೇ ಜಗತ್ತಿನ ಸರ್ವಪಾಪಗಳೂ ತೊಳೆದುಹೋಗುತ್ತವೆ. ಆದರೆ ಅವುಗಳನ್ನು ತೊಳೆದು ಹಾಕಿದ ಅದು ಮಾತ್ರ ಪೂರ್ಣವಾಗಿ ಶುದ್ಧವಾಗಿಯೇ ಇರುತ್ತದೆ. ಆ ಸ್ಥಳದಲ್ಲಿ ಅದನ್ನು (ಗಂಗಾ, ಜಾಹ್ನವೀ–ಇತ್ಯಾದಿ) ಬೇರಾವ ಹೆಸರಿನಿಂದಲೂ ಕರೆಯದೇ 'ಭಗವತ್ಪದೀ' ಎಂದು ಮಾತ್ರವೇ ಹೆಸರಿಸುತ್ತಾರೆ. ಆ ಧಾರೆಯು ಸಾವಿರಾರು ಯುಗಗಳು ಕಳೆದ ಬಳಿಕ ಸ್ವರ್ಗದ ತಲೆಯ ಭಾಗದಲ್ಲಿ 'ವಿಷ್ಣುಪದ'ವೆಂದೂ ಕರೆಯಲ್ಪಡುವ ಧ್ರುವಲೋಕಕ್ಕೆ ಇಳಿಯಿತು.

ಎಲೈ ವೀರವ್ರತನೇ! ಈ ಧ್ರುವಲೋಕದಲ್ಲಿಯೇ ಉತ್ತಾನಪಾದನ

ಪುತ್ರನೂ ಪರಮಭಾಗವತೋತ್ತಮನೂ ಆದ ಧ್ರುವನು ವಾಸಮಾಡುತ್ತಿದ್ದಾನೆ. ಆತನು ಪ್ರತಿದಿನವೂ ವೃದ್ಧಿಹೊಂದುತ್ತಿರುವ ಭಕ್ತಿಯೋಗದಿಂದ ಇಂದೂ ಆ ಜಲವನ್ನು–'ನಮ್ಮ ಕುಲದೇವತೆಯ ಶ್ರೀಪಾದತೀರ್ಥವಿದು' ಎಂದು ಅತ್ಯಂತ ಭಕ್ತಿ-ಆದರಗಳಿಂದ ತನ್ನ ಶಿರಸ್ಸಿನಲ್ಲಿ ಧರಿಸುತ್ತಾನೆ. ದೃಢವಾದ ಭಕ್ತಿಯೋಗದಿಂದ ಹೃದಯವು ಸಂಪೂರ್ಣವಾಗಿ ಕರಗಿ ಕುತೂಹಲಕ್ಕೆ ಪರವಶನಾಗಿ ಮುಚ್ಚಿಕೊಂಡಿರುವ ತನ್ನ ನೇತ್ರಕಮಲಗಳಿಂದ ನಿರ್ಮಲವಾದ ಆನಂದಬಾಷ್ಪಗಳ ಧಾರೆಯು ಹರಿಯುತ್ತಾ ಶರೀರವು ರೋಮಾಂಚಗೊಂಡಿರಲು–ಆ ವೀರವ್ರತನಾದ ಭಕ್ತೋತ್ತಮನು ಈಗಲೂ ಆ ತೀರ್ಥವನ್ನು ತಲೆಯಲ್ಲಿ ಅಲಂಕರಿಸಿಕೊಳ್ಳುತ್ತಿದ್ದಾನೆ. ಅದರ ಕೆಳಗೆ ಆ ತೀರ್ಥದ ಮಹಿಮೆಯನ್ನರಿತ ಆತ್ಮನಿಷ್ಠರಾದ ಸಪ್ತರ್ಷಿಗಳು ಮುಮುಕ್ಷುಗಳು ತಮಗೆ ಸಿದ್ಧಿಸಿದ ಮೋಕ್ಷವನ್ನು ಹೇಗೋ ಹಾಗೆ–'ಇದೇ ನಮ್ಮ ತಪಸ್ಸಿನ ಪರಮಸಿದ್ಧಿಯು' ಎಂದು ಭಾವಿಸಿ, ಪರಮಾದರದಿಂದ ಅದನ್ನು ತಮ್ಮ ಜಟಾಭಾರದಲ್ಲಿ ಇಂದಿಗೂ ಧರಿಸುತ್ತಿರುವರು. ಆ ಸಪ್ತರ್ಷಿಗಳು ಆತ್ಮಜ್ಞಾನವನ್ನು ಕೂಡ ಕಡೆಗಣಿಸಿ ಸರ್ವಾತ್ಮಕನಾದ ವಾಸುದೇವನನ್ನು ಕುರಿತು ನಿಶ್ಚಲವಾದ ಭಕ್ತಿಯೋಗವನ್ನೇ ತಮ್ಮ ಪರಮಾರ್ಥವೆಂದು ಭಾವಿಸಿ ಇತರ ಎಲ್ಲ ಕಾಮನೆಗಳನ್ನೂ ತೊರೆದವರು. ಇಂತಹ ನಿಷ್ಕಾಮರು ಕೂಡ ತಮ್ಮ ಶಿರಸ್ಸಿನಲ್ಲಿ ಪರಮಾದರದಿಂದ ತಳೆಯುತ್ತಿರುವ ತೀರ್ಥವದು. ಈ ದಿವ್ಯಗಂಗೆಯು ಅಲ್ಲಿಂದ ಕೋಟ್ಯಂತರ ವಿಮಾನಗಳಿಂದ ಸುತ್ತುವರಿಯಲ್ಪಟ್ಟಿರುವ ಆಕಾಶಮಾರ್ಗದಲ್ಲಿ ಹರಿದುಬಂದು ಚಂದ್ರಮಂಡಲವನ್ನು ನೆನೆಸುತ್ತಾ ಮೇರುವಿನ ಶಿಖರದಲ್ಲಿರುವ ಬ್ರಹ್ಮದೇವರ ನಗರಿಯಲ್ಲಿ ಬಂದು ಬೀಳುವುದು. ಅಲ್ಲಿ ಅದು ಸೀತಾ, ಅಲಕನಂದಾ, ಚಕ್ಷು ಮತ್ತು ಭದ್ರಾ– ಎಂಬ ಹೆಸರುಗಳಿಂದ ನಾಲ್ಕು ಧಾರೆಗಳಾಗಿ ಕವಲೊಡೆದು ಬೇರೆ ಬೇರೆಯಾಗಿ ನಾಲ್ಕು ದಿಕ್ಕುಗಳಲ್ಲಿಯೂ ಹರಿಯುತ್ತಾ ಕಡೆಗೆ ನದ-ನದಿಗಳಿಗೆ ಅಧಿಪತಿ ಯಾದ ಸಮುದ್ರರಾಜನನ್ನು ಹೋಗಿ ಸೇರುವುದು. ಈ ನಾಲ್ಕು ಧಾರೆಗಳಲ್ಲಿ ಸೀತಾ ಎಂಬುದು ಬ್ರಹ್ಮಪುರಿಯಿಂದ ಧುಮುಕಿ ಕೇಸರಾಚಲವೇ ಮುಂತಾದ ಗಿರಿಗಳ ಸರ್ವೋಚ್ಚಶಿಖರಗಳ ಮಾರ್ಗವಾಗಿ ಕೆಳಗಡೆಗೆ ಹರಿಯುತ್ತಾ ಗಂಧಮಾದನದ ಶಿಖರಗಳ ಮೇಲೆ ಬಂದು ಬೀಳುತ್ತದೆ ಮತ್ತು

ಭದ್ರಾಶ್ವವರ್ಷವನ್ನು ನೆನೆಸುತ್ತಾ ಪೂರ್ವದ ಲವಣಸಮುದ್ರದಲ್ಲಿ ಹೋಗಿ ಸೇರುವುದು. ಇದೇ ರೀತಿಯಲ್ಲಿ ಚಕ್ಷು ಎಂಬ ಧಾರೆಯು ಮಾಲ್ಯವತ್ಪರ್ವ ತದ ಶಿಖರವನ್ನು ತಲುಪಿ ಅಲ್ಲಿಂದ ಅಡೆ-ತಡೆಗಳಿಲ್ಲದೇ ಕೇತುಮಾಲವರ್ಷ ದಲ್ಲಿ ಹರಿಯುತ್ತಾ ಪಶ್ಚಿಮದ ಕಡೆಯ ಲವಣಸಮುದ್ರವನ್ನು ಸೇರಿಕೊಳ್ಳು ವುದು. ಭದ್ರಾ ಎಂಬ ಧಾರೆಯು ಮೇರುಪರ್ವತದ ಶಿಖರದಿಂದ ಉತ್ತರದ ಕಡೆಗೆ ಧುಮುಕಿ ಒಂದು ಪರ್ವತದಿಂದ ಮತ್ತೊಂದು ಪರ್ವತಕ್ಕೆ ಹೋಗುತ್ತಾ ಕಡೆಗೆ ಶೃಂಗವಾನ್ ಎಂಬ ಶಿಖರದಿಂದ ಇಳಿದು ಉತ್ತರಕುರು ದೇಶದ ಮಾರ್ಗವಾಗಿ ಉತ್ತರದ ಕಡೆ ಹರಿಯುತ್ತಾ ಸಮುದ್ರವನ್ನು ಸೇರು ವುದು. ಅಲಕನಂದಾಧಾರೆಯು ಬ್ರಹ್ಮಪುರಿಯಿಂದ ದಕ್ಷಿಣಕ್ಕೆ ಧುಮುಕಿ ಅನೇಕ ಗಿರಿಶಿಖರಗಳನ್ನು ದಾಟಿ ಹೇಮಕೂಟಪರ್ವತವನ್ನು ತಲುಪುತ್ತದೆ ಮತ್ತು ಅಲ್ಲಿಂದ ಮಿತಿಮೀರದ ವೇಗದಿಂದ ಹಿಮಾಲಯದ ಶಿಖರಗಳನ್ನು ಭೇದಿಸುತ್ತಾ ಭಾರತವರ್ಷಕ್ಕೆ ಬಂದು ದಕ್ಷಿಣದಿಕ್ಕಿನಲ್ಲಿ ಸಮುದ್ರದಲ್ಲಿ ಸಂಗಮ ಹೊಂದುವುದು. ಈ ಅಲಕನಂದಾನದಿಯ ಮಹಿಮೆಯು ಅದ್ಭುತ ವಾದುದು. ಇದರಲ್ಲಿ ಸ್ನಾನಮಾಡಲು ಬರುವ ಜನರ ಹೆಜ್ಜೆ-ಹೆಜ್ಜೆಯಲ್ಲೂ ಅಶ್ವಮೇಧ ಮತ್ತು ರಾಜಸೂಯಗಳೇ ಮುಂತಾದ ಯಜ್ಞಗಳನ್ನು ಮಾಡಿದ ಫಲವು ಸುಲಭವಾಗಿ ದೊರೆಯುವುದರಲ್ಲಿ ಸಂಶಯವಿಲ್ಲ. ಇದಲ್ಲದೇ ಪ್ರತಿಯೊಂದು ವರ್ಷದಲ್ಲಿಯೂ ಮೇರುವೇ ಮುಂತಾದ ಪರ್ವತಗಳಿಂದ ಹುಟ್ಟಿಬರುವ ಇನ್ನೂ ನೂರಾರು ನದ-ನದಿಗಳುಂಟು. (ಶ್ಲೋಕ 2-10)

ಈ ಎಲ್ಲ ವರ್ಷಗಳಲ್ಲೂ ಭಾರತವರ್ಷವೇ ಕರ್ಮಭೂಮಿಯು. ಉಳಿದ ಎಂಟು ವರ್ಷಗಳೂ* ಸ್ವರ್ಗವಾಸಿಗಳಾದ ಜೀವರು ಸ್ವರ್ಗದಲ್ಲಿ ತಮ್ಮ ಭೋಗಗಳನ್ನು ಅನುಭವಿಸಿದ ಬಳಿಕ ಉಳಿದಿರುವ ಪುಣ್ಯಫಲಗಳನ್ನು

---

* ಈ ಎಂಟು ವರ್ಷಗಳೂ ಭೋಗಸ್ಥಾನಗಳು. ಕರ್ಮಾನುಷ್ಠಾನಕ್ಕೆ ಯೋಗ್ಯವಾದ ಸ್ಥಾನಗಳಲ್ಲ. ಸ್ವರ್ಗವಾಸಿಗಳು ತಮ್ಮ ಪುಣ್ಯಕ್ಷಯಾನಂತರ ಉಳಿಕೆಯ ಪುಣ್ಯದಿಂದ ಈ ಲೋಕಕ್ಕೆ ಬಂದು ಸುಖವನ್ನನುಭವಿಸುವರು. 'ಯಾವತ್ಸಂಪಾತಮುಷಿತ್ವಾ ಅಥೈತಮೇವಾಧ್ವಾನಂ 'ಪುನರ್ನಿವರ್ತನ್ತೇ' 'ಪ್ರಾಪ್ಯಾನ್ತಂ ಕರ್ಮಣ ಸ್ತಸ್ಯ ಯತ್ಕಿಂಚೇಹ ಕರೋತ್ಯಯಮ್ । ತಸ್ಮಾಲ್ಲೋಕಾತ್ಪುನರೇತ್ಯ ತಸ್ಮೈ ಲೋಕಾಯ ಕರ್ಮಣೇ' 'ರಮಣೀಯ ಚರಣಾ ರಮಣೀಯಂ ಯೋನಿಮಾಪದ್ಯೇರನ್'

ಅನುಭವಿಸುವುದಕ್ಕೋಸ್ಕರ ಇರುವ ಸ್ಥಾನಗಳು. ಆದುದರಿಂದ ಅವುಗಳನ್ನು ಭೂಲೋಕದ ಸ್ವರ್ಗಗಳೆಂದೂ ಕರೆಯಬಹುದು. ಆ ವರ್ಷಗಳಲ್ಲಿ ನೆಲೆಸಿರುವ ದೇವಸದೃಶರಾದ ಮನುಷ್ಯರಿಗೆ ಮನುಷ್ಯರ ಆಯುಸ್ಸಿನ ಲೆಕ್ಕದಂತೆ ಹತ್ತುಸಾವಿರ ವರ್ಷ ಆಯುಸ್ಸು. ಅವರಿಗೆ ಹತ್ತು ಸಾವಿರ ಆನೆಗಳ ಬಲ ಇರುತ್ತದೆ ಮತ್ತು ಅವರು ಮಹಾಭೋಗಿಗಳು. ತಮ್ಮ ವಜ್ರಸದೃಶವಾದ ಗಟ್ಟಿಮುಟ್ಟಾದ ಶರೀರಗಳಲ್ಲಿರುವ ಶಕ್ತಿ, ಯೌವನ ಮತ್ತು ಉಲ್ಲಾಸಗಳಿಂದ ಬಹಳ ಹೆಚ್ಚು ಕಾಲದವರೆಗೂ ಇಂದ್ರಿಯಸುಖಗಳನ್ನು ಅನುಭವಿಸುತ್ತಿರುತ್ತಾರೆ ಮತ್ತು ಕೊನೆಗೆ ಭೋಗವು ಮುಗಿದು ಒಂದು ವರ್ಷ ಮಾತ್ರ ಆಯುಸ್ಸು ಮಿಕ್ಕಿರುವಾಗ ಅವರ ಹೆಂಡಿರು ಗರ್ಭವನ್ನು ಧರಿಸುತ್ತಾರೆ. ಈ ರೀತಿಯಲ್ಲಿ ಅಲ್ಲಿ ಸದಾ ಕಾಲವೂ ತ್ರೇತಾಯುಗದ ಕಾಲದಂತೆ ಇರುತ್ತದೆ. ಅಲ್ಲಿ ಸದಾ ಸುಖಭೋಗಗಳ ಪ್ರಕೃತಿಸನ್ನಿವೇಶಗಳು ಇರುತ್ತವೆ. ಅಲ್ಲಿನ ಆಶ್ರಮಗಳಲ್ಲೂ, ಸೌಧಗಳಲ್ಲೂ ಪರ್ವತದ ತಪ್ಪಲುಗಳಲ್ಲೂ, ಕಂಗೊಳಿಸುವ ಸುಂದರವಾದ ವನಗಳಲ್ಲೂ, ಉಪವನಗಳಲ್ಲೂ–ಎಲ್ಲ ಋತುಗಳಲ್ಲೂ ಹೂಗೊಂಚಲು, ಹಣ್ಣು ಮತ್ತು ಹೊಸ ತಳಿರುಗಳ ಭಾರದಿಂದ ಬಗ್ಗಿರುವ ಕೊಂಬೆಗಳಿಂದಲೂ, ಬಳ್ಳಿಗಳಿಂದಲೂ ಮೆರೆಯುವ ವೃಕ್ಷಗಳು ಕಳಕಳಿಸುತ್ತಿವೆ. ಶುದ್ಧವಾದ ತಿಳಿನೀರಿನಿಂದ ತುಂಬಿರುವ ಜಲಾಶಯಗಳಲ್ಲಿ ಬಗೆ-ಬಗೆಯ ಹೊಸ ತಾವರೆಗಳು ಅರಳಿದ್ದು ಅವುಗಳ ಪರಿಮಳದಿಂದ ಆನಂದಗೊಂಡ ರಾಜಹಂಸ, ನೀರುಕೋಳಿ, ಕಾರಂಡವ, ಸಾರಸ, ಚಕ್ರವಾಕಗಳೇ ಮುಂತಾದ ನೀರು ಹಕ್ಕಿಗಳು ಬಗೆ-ಬಗೆಯಾಗಿ ಚಿಲಿಪಿಲಿಗುಟ್ಟುತ್ತಾ ಕ್ರೀಡಿಸುತ್ತಿವೆ ಮತ್ತು ನಾನಾಜಾತಿಯ ದುಂಬಿಗಳು ಮತ್ತೇರಿ ಮಧುರವಾಗಿ ಝೇಂಕರಿಸುತ್ತಿವೆ. ಅಲ್ಲಿರುವ ದೇವೇಶ್ವರರು ಪರಿಚಾರಕರಿಂದ ಸೇವಿಸಲ್ಪಡುತ್ತಾ ತಮ್ಮ ರಮಣಿಯರ ಬೆಡಗು, ಬಿನ್ನಾಣ, ಕಿರುನಗೆ, ಸವಿನೋಟಗಳಿಗೆ ಕಣ್ಮನಗಳನ್ನು ಸೋತವರಾಗಿ ಜಲಕ್ರೀಡೆಯೇ ಮುಂತಾದ ಆಟಗಳನ್ನು

'ವರ್ಣಾಶ್ಚ ಬ್ರಾಹ್ಮಣಾಶ್ಚ ಸ್ವಕರ್ಮನಿಷ್ಠಾಃ ಪ್ರೇತ್ಯ ಕರ್ಮಫಲಮನುಭೂಯ ತತಶ್ಶೇಷೇಣ ವಿಶಿಷ್ಟತರಜಾತಿಕುಲರೂಪಾಯುಶ್ಶ್ರುತವಿತ್ತ ಸುಖಮೇಧಸೋ ಜನ್ಮ ಪ್ರಾಪದ್ಯನ್ತೇ'
(ವೀರರಾಘವೀಯ) (ಶ್ಲೋಕ ೧೧)

ಯಥೇಚ್ಛವಾಗಿ ಆಡುತ್ತಿರುವರು. ಈ ಭಾರತವೇ ಮುಂತಾದ ಒಂಬತ್ತು ವರ್ಷಗಳಲ್ಲಿಯೂ ಭಗವಂತನಾದ ಪರಮಪುರುಷ ಶ್ರೀಮನ್ನಾರಾಯಣನು ಅಲ್ಲಿಯ ಜನರನ್ನು ಅನುಗ್ರಹಿಸುವುದಕ್ಕಾಗಿ ತನ್ನ ವಾಸುದೇವನೇ ಮುಂತಾದ ವ್ಯೂಹರೂಪಗಳಿಂದ ಸಾನ್ನಿಧ್ಯವನ್ನು ದಯಪಾಲಿಸಿದ್ದಾನೆ.

ಇಳಾವೃತವರ್ಷದಲ್ಲಾದರೋ ಭಗವಂತನಾದ ಶ್ರೀಶಂಕರನೊಬ್ಬನೇ ಪುರುಷನು. ಆ ವರ್ಷಕ್ಕೆ ಸಂಬಂಧಿಸಿದಂತೆ ಪಾರ್ವತೀದೇವಿಯು ಕೊಟ್ಟಿರುವ ಶಾಪವನ್ನು ತಿಳಿದ ಬೇರಾವ ಪುರುಷನೂ ಅಲ್ಲಿಗೆ ಪ್ರವೇಶಿಸುವುದಿಲ್ಲ. ಹಾಗೇನಾದರೂ ಪ್ರವೇಶಿಸಿದರೆ ಆತನು ಸ್ತ್ರೀರೂಪನಾಗಿಬಿಡುತ್ತಾನೆ. ಈ ಶಾಪವನ್ನು ಪಾರ್ವತಿದೇವಿಯು ಏಕೆ ಕೊಟ್ಟಳೆಂಬ ವಿಷಯವನ್ನು ಮುಂದೆ (ನವಮಸ್ಕಂಧದಲ್ಲಿ) ವರ್ಣಿಸುವೆನು. ಅಲ್ಲಿ ಭಗವಂತನಾದ ರುದ್ರನು ಪಾರ್ವತೀದೇವಿಯಿಂದಲೂ ಆಕೆಯ ಕೋಟ್ಯಂತರ ದಾಸಿಯರಿಂದಲೂ ಸೇವಿಸಲ್ಪಡುತ್ತಾ ಭಗವಂತನ–ವಾಸುದೇವ, ಸಂಕರ್ಷಣ, ಅನಿರುದ್ಧ ಮತ್ತು ಪ್ರದ್ಯುಮ್ನರೆಂಬ ನಾಲ್ಕು ವ್ಯೂಹಮೂರ್ತಿಗಳಲ್ಲಿ ತನಗೆ ಕಾರಣವಾಗಿ ತಮೋ ಗುಣಪ್ರಧಾನವಾಗಿರುವ 'ಸಂಕರ್ಷಣ' ಮೂರ್ತಿಯನ್ನು, ಧ್ಯೇಯಮೂರ್ತಿ ಯನ್ನಾಗಿ ಮನಸ್ಸಿನಲ್ಲಿ ನೆಲೆಗೊಳಿಸಿಕೊಂಡು ಈ ಮಂತ್ರವನ್ನು ಜಪಿಸುತ್ತಾ ಉಪಾಸನೆಮಾಡುತ್ತಿರುವನು.* (ಶ್ಲೋಕ 11-16)

ಭಗವಂತನಾದ ಶ್ರೀರುದ್ರನು ಇಳಾವೃತವರ್ಷದಲ್ಲಿ ಮಾಡುವ ಸಂಕರ್ಷಣಸ್ತುತಿ :

ಓಂ ನಮೋ ಭಗವತೇ ಮಹಾಪುರುಷಾಯ ಸರ್ವಗುಣ–ಸಂಖ್ಯಾನಾಯಾನನ್ತಾಯಾವ್ಯಕ್ತಾಯ ನಮ ಇತಿ ॥೧೭॥

ಓಂ ಸರ್ವಗುಣಗಳ ಅಭಿವ್ಯಕ್ತಿಗೂ ಕಾರಣನಾಗಿರುವ, ಅನಂತನೂ ಅವ್ಯಕ್ತಮೂರ್ತಿಯೂ ಆಗಿರುವ, ಓಂಕಾರಸ್ವರೂಪಿಯಾದ ಪರಮಪುರುಷ ಶ್ರೀಭಗವಂತನಿಗೆ ನಮೋ ನಮಃ.

---

* ಶ್ರೀಭಗವಂತನು ಸದಾ ಶುದ್ಧಸತ್ತ್ವಮಯನೇ ಆಗಿದ್ದರೂ ಸಂಹಾರವೇ ಮುಂತಾದ ಕಾರ್ಯಗಳಿಗಾಗಿ ತಮೋಗುಣಪ್ರದಾನವಾದ ಸಂಕರ್ಷಣದೇಹವನ್ನು ಕೈಗೊಳ್ಳುತ್ತಾನೆ. ಆ ದೇಹದಲ್ಲಿ ಇರುವ ತಮೋಗುಣವು ಆತನಲ್ಲಿ ಯಾವ ವಿಕಾರವನ್ನೂ ಉಂಟು ಮಾಡುವುದಿಲ್ಲ. (ಶ್ಲೋಕ ೧೬)

ಭಜೇ ಭಜನ್ಯಾರಣಪಾದಪಙ್ಕಜಂ
ಭಗಸ್ಯ ಕೃತ್ಸ್ನಸ್ಯ ಪರಂ ಪರಾಯಣಮ್ ।
ಭಕ್ತೇಷ್ವಲಂ ಭಾವಿತಭೂತಭಾವನಂ
ಭವಾಪಹಂ ತ್ವಾ ಭವಭಾವಮೀಶ್ವರಮ್ ॥೧೮॥

ಓ ಭಜನೆಗೆ ಯೋಗ್ಯನಾಗಿರುವ ಭಗವಂತನೇ! ನಿನ್ನ ಅಡಿದಾವರೆ ಗಳು ಭಕ್ತರಿಗೆ ಪರಮಾಶ್ರಯವಾಗಿವೆ. ಭಕ್ತರ ಮುಂದೆ ಭೂತಭಾವನವಾದ ನಿನ್ನ ಸ್ವರೂಪವನ್ನು ಪ್ರಕಟಗೊಳಿಸಿ ಅವರನ್ನು ಭವಬಂಧನದಿಂದ ಬಿಡುಗಡೆ ಮಾಡುವವನು ನೀನು. ಭಕ್ತರಲ್ಲದವರನ್ನು ಸಂಸಾರದ ಕಟ್ಟಿಗೆ ಬೀಳಿಸು ವವನೂ ನೀನೇ. ಇಂತಹ ಸರ್ವೇಶ್ವರನಾದ ನಿನ್ನನ್ನು ಭಜಿಸುತ್ತೇನೆ.

ನ ಯಸ್ಯ ಮಾಯಾಗುಣಚಿತ್ತವೃತ್ತಿಭಿ -
ರ್ನಿರೀಕ್ಷತೋ ಹ್ಯಣ್ವಪಿ ದೃಷ್ಟಿರಜ್ಯತೇ ।
ಈಶೇ ಯಥಾ ನೋऽಜಿತಮನ್ಯುರಂಹಸಾಂ
ಕಸ್ತಂ ನ ಮನ್ಯೇತ ಜಿಗೀಷುರಾತ್ಮನಃ ॥೧೯॥

ಪ್ರಭೋ! ನಾವು ಕ್ರೋಧದ ವೇಗವನ್ನು ಜಯಿಸಲು ಅಸಮರ್ಥರು ಮತ್ತು ತತ್ಕಾಲದಲ್ಲೇ ಪಾಪದ ಲೇಪವನ್ನು ಹೊಂದುವ ದೃಷ್ಟಿಯುಳ್ಳವರು. ಆದರೆ ನಿನ್ನಲ್ಲಿ ಕಿಂಚಿತ್ತೂ ಈ ವಿಕಾರಗಳಿಲ್ಲ. ಜಗತ್ತನ್ನು ನಿಯಮಿಸುವುದ ಕ್ಕೋಸ್ಕರ ನಿರಂತರವಾಗಿ ಸಾಕ್ಷಿಯ ರೂಪದಲ್ಲಿ ಎಲ್ಲ ವ್ಯಾಪಾರಗಳನ್ನೂ ನೋಡುತ್ತಿದ್ದರೂ–ಈ ಮಾಯಾಮಯವಾದ ಗುಣ ಮತ್ತು ಚಿತ್ತವೃತ್ತಿಗಳು ನಿನ್ನ ಮೇಲೆ ಎಳ್ಳಷ್ಟೂ ಪ್ರಭಾವವನ್ನು ಬೀರುವುದಿಲ್ಲ. ಹೀಗಿರುವಾಗ ಮನಸ್ಸನ್ನು ವಶಪಡಿಸಿಕೊಳ್ಳುವ ಇಚ್ಛೆಯುಳ್ಳ ಯಾವನು ತಾನೇ ನಿನ್ನನ್ನು ಸಂಭಾವಿಸುವುದಿಲ್ಲ!

ಅಸದ್ದೃಶೋ ಯಃ ಪ್ರತಿಭಾತಿ ಮಾಯಯಾ
ಕ್ಷೀಬೇವ ಮಧ್ವಾಸವತಾಮ್ರಲೋಚನಃ ।
ನ ನಾಗವಧ್ವೋऽರ್ಹಣ ಈಶಿರೇ ಹ್ರಿಯಾ
ಯತ್ಪಾದಯೋಃ ಸ್ಪರ್ಶನಧರ್ಷಿತೇನ್ದ್ರಿಯಾಃ ॥೨೦॥

ನಿನ್ನ ಮಾಯೆಗೆ ವಶರಾಗಿ, ಅಸತ್ತಾಗಿರುವ ಶರೀರಾದಿಗಳಲ್ಲಿ ಆತ್ಮ ಬುದ್ಧಿಯನ್ನಿಟ್ಟಿರುವ ಪಾಮರರ ದೃಷ್ಟಿಗೆ ನೀನು ಮದ್ಯ, ಆಸವ ಮುಂತಾ ದುವುಗಳ ಸೇವನೆಯಿಂದ ಮತ್ತೇರಿ ಕಣ್ಣು ಕೆಂಪೇರಿದವನಂತೆ ಕಾಣಿಸು

ತ್ತೀಯೆ. ನೀನು ಪರಮರಮಣೀಯಮೂರ್ತಿಯು. ನಿನ್ನ ಸೇವೆ ಮಾಡಲು ಬಂದ ನಾಗಸ್ತ್ರೀಯರು ನಿನ್ನ ಚರಣಸ್ಪರ್ಶದಿಂದಲೇ ಮನಸ್ಸು ಚಂಚಲ ಗೊಂಡವರಾಗಿ ಲಜ್ಜೆಯಿಂದ ನಿನ್ನ ಪೂಜೆಮಾಡಲು ಅಸಮರ್ಥರಾಗುವರು.

ಯಮಾಹುರಸ್ಯ ಸ್ಥಿತಿಜನ್ಮಸಂಯಮಂ
ತ್ರಿಭಿರ್ವಿಹೀನಂ ಯಮನನ್ತಮೃಷಯಃ ।
ನ ವೇದ ಸಿದ್ಧಾರ್ಥಮಿವ ಕ್ವಚಿತ್ಸ್ಥಿತಂ
ಭೂಮಣ್ಡಲಂ ಮೂರ್ಧಸಹಸ್ರಧಾಮಸು ॥೨೧॥

ಈ ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳೆಲ್ಲಕ್ಕೂ ಕಾರಣನಾಗಿದ್ದರೂ ಅವುಗಳ ಪ್ರಭಾವಕ್ಕೆ ಒಳಗಾಗದಿರುವ ಗುಣಾತೀತನಾದ ಅನಂತನು ನೀನು–ಎಂದು ವೇದಮಂತ್ರಗಳೂ ಮತ್ತು ಋಷಿಗಳೂ ನಿನ್ನನ್ನು ವರ್ಣಿಸುತ್ತಾರೆ. ನಿನ್ನ ಧಾರಣಸಾಮರ್ಥ್ಯವೂ ಅದ್ಭುತವಾದುದು. ಈ ದೊಡ್ಡ ಭೂಗೋಳವು ನಿನ್ನ ಸಾವಿರ ತಲೆಗಳಲ್ಲಿ ಎಲ್ಲೋ ಒಂದು ಕಡೆಯಲ್ಲಿ ಒಂದು ಸಾಸಿವೆಯ ಕಾಳಿನಂತೆ ಇರಿಸಲ್ಪಟ್ಟಿದೆ. ಅದರ ಅರಿವೇ ನಿನಗೆ ಆಗದಷ್ಟು ಹಗುರವಾಗಿ ಅದನ್ನು ನೀನು ಧರಿಸಿದ್ದೀಯೆ.

ಯಸ್ಯಾದ್ಯ ಆಸೀದ್ಗುಣವಿಗ್ರಹೋ ಮಹಾ-
ನ್ವಿಜ್ಞಾನಧಿಷ್ಣ್ಯೋ ಭಗವಾನಜಃ ಕಿಲ ।
ಯತ್ಸಮ್ಭವೋಽಹಂ ತ್ರಿವೃತಾ ಸ್ವತೇಜಸಾ
ವೈಕಾರಿಕಂ ತಾಮಸಮೈನ್ದ್ರಿಯಂ ಸೃಜೇ ॥೨೨॥

ಯಾರಿಂದ ಹುಟ್ಟನ್ನು ಪಡೆದ ನಾನು ಅಹಂಕಾರರೂಪವಾದ ನನ್ನ ತ್ರಿಗುಣಮಯವಾದ ತೇಜಸ್ಸಿನಿಂದ ದೇವತೆಗಳ, ಇಂದ್ರಿಯಗಳ ಮತ್ತು ಭೂತಗಳ ನಿರ್ಮಾಣವನ್ನು ಮಾಡುತ್ತೇನೆಯೋ–ಆ ವಿಜ್ಞಾನಕ್ಕೆ ಆಶ್ರಯರಾದ ಬ್ರಹ್ಮದೇವರೂ ಕೂಡ ನಿನ್ನ ಮಹತ್ತತ್ತ್ವವೆಂಬ ಮೊದಲನೆಯ ಗುಣ ಮಯವಾದ ಸ್ವರೂಪವೇ ಆಗಿದ್ದಾರೆ.

ಏತೇ ವಯಂ ಯಸ್ಯ ವಶೇ ಮಹಾತ್ಮನಃ
ಸ್ಥಿತಾಃ ಶಕುನ್ತಾ ಇವ ಸೂತ್ರಯನ್ತ್ರಿತಾಃ ।
ಮಹಾನಹಂ ವೈಕೃತತಾಮಸೇನ್ದ್ರಿಯಾಃ
ಸೃಜಾಮ ಸರ್ವೇ ಯದನುಗ್ರಹಾದಿದಮ್ ॥೨೩॥

ಎಲೈ ಮಹಾತ್ಮನೇ! ಮಹತ್ತತ್ತ್ವ, ಅಹಂಕಾರ, ಇಂದ್ರಿಯಾಭಿಮಾನಿ ದೇವತೆಗಳು, ಇಂದ್ರಿಯಗಳು ಮತ್ತು ಪಂಚಭೂತಗಳೇ ಮುಂತಾದ ನಾವೆಲ್ಲರೂ ದಾರದಿಂದ ಕಟ್ಟಲ್ಪಟ್ಟಿರುವ ಪಕ್ಷಿಯಂತೆ ನಿನ್ನ ಕ್ರಿಯಾಶಕ್ತಿಗೆ ವಶರಾಗಿ ನಿನ್ನ ಕೃಪೆಯಿಂದಲೇ ಈ ಜಗತ್ತನ್ನು ನಿರ್ಮಿಸುತ್ತೇವೆ.

ಯನ್ನಿರ್ಮಿತಾಂ ಕರ್ಹ್ಯಪಿ ಕರ್ಮಪರ್ವಣೀಂ
ಮಾಯಾಂ ಜನೋಽಯಂ ಗುಣಸರ್ಗಮೋಹಿತಃ ।
ನ ವೇದ ನಿಸ್ತಾರಣಯೋಗಮಞ್ಜಸಾ
ತಸ್ಮೈ ನಮಸ್ತೇ ವಿಲಯೋದಯಾತ್ಮನೇ ॥೨೮॥

ಸತ್ತ್ವವೇ ಮುಂತಾದ ಗುಣಗಳ ಸೃಷ್ಟಿಯಿಂದ ಮೋಹಗೊಂಡ ಈ ಜೀವನು ನೀನೇ ರಚನೆಮಾಡಿರುವ ಮತ್ತು ಕರ್ಮಬಂಧನದಲ್ಲಿ ಕಟ್ಟಿಹಾಕುವ ಮಾಯೆಯನ್ನು ಯಾವಾಗಲಾದರೂ ತಿಳಿದರೂ ತಿಳಿಯಬಹುದು. ಆದರೆ ಅದರಿಂದ ಬಿಡುಗಡೆಹೊಂದುವ ಉಪಾಯವು ಆತನಿಗೆ ಸುಲಭವಾಗಿ ತಿಳಿಯುವುದಿಲ್ಲ. ಈ ಜಗತ್ತಿನ ಉತ್ಪತ್ತಿ ಮತ್ತು ಪ್ರಳಯಗಳೂ ನಿನ್ನ ರೂಪಗಳೇ ಆಗಿವೆ. ಇಂತಹ ನಿನಗೆ ನಾವು ಬಾರಿ-ಬಾರಿಗೂ ನಮಸ್ಕರಿಸುತ್ತೇವೆ."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಪಂಚಮಸ್ಕಂಧದ ೧೭ನೆಯ ಅಧ್ಯಾಯವು ಮುಗಿಯಿತು.

ಪಂಚಮಸ್ಕಂಧ ೧೮ನೆಯ ಅಧ್ಯಾಯ

ಬೇರೆ-ಬೇರೆ ವರ್ಷಗಳ ವರ್ಣನೆ

ಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಹೇಳುತ್ತಾರೆ :

ತಥಾ ಚ ಭದ್ರಶ್ರವಾ ನಾಮ ಧರ್ಮಸುತಸ್ತತ್ಕುಲಪತಯಃ ಪುರುಷಾ ಭದ್ರಾಶ್ವವರ್ಷೇ ಸಾಕ್ಷಾದ್ಭಗವತೋ ವಾಸುದೇವಸ್ಯ ಪ್ರಿಯಾಂ ತನುಂ ಧರ್ಮಮಯೀಂ ಹಯಶೀರ್ಷಾಭಿಧಾನಾಂ ಪರಮೇಣ ಸಮಾಧಿನಾ ಸಂನಿಧಾಪ್ಯೇದಮಭಿಗೃಣನ್ತ ಉಪಧಾವನ್ತಿ॥

"ಎಲೈ ರಾಜನೇ! ಭದ್ರಾಶ್ವವೆಂಬ ವರ್ಷದಲ್ಲಿ ಧರ್ಮಪುತ್ರನಾದ ಭದ್ರಶ್ರವನೂ ಮತ್ತು ಆತನ ಮುಖ್ಯರಾದ ಸ್ನೇಹಿತರೂ ವಾಸುದೇವನ

'ಹಯಗ್ರೀವ'–ಎಂಬ ಧರ್ಮಮಯವೂ ಪ್ರಿಯವೂ ಆಗಿರುವ ಮೂರ್ತಿಯನ್ನು ಅತ್ಯಂತವಾದ ಸಮಾಧಿನಿಷ್ಠೆಯಿಂದ ಹೃದಯದಲ್ಲಿ ನೆಲೆಗೊಳಿಸಿಕೊಂಡು ಈ ಮಂತ್ರವನ್ನು ಜಪಮಾಡುತ್ತಾ ಈ ರೀತಿಯಲ್ಲಿ ಸ್ತುತಿಸುತ್ತಾರೆ:

ಓಂ ನಮೋ ಭಗವತೇ ಧರ್ಮಾಯಾತ್ಮವಿಶೋಧನಾಯ ನಮ ಇತಿ ॥೨॥

"ಓಂ ಭಗವಂತನಾದ ಧರ್ಮಮೂರ್ತಿಗೆ ನಮಸ್ಕಾರವು. ಆತ್ಮವನ್ನು ವಿಶುದ್ಧಿಗೊಳಿಸುವವನಿಗೆ ನಮೋ ನಮಃ.

ಅಹೋ ವಿಚಿತ್ರಂ ಭಗವದ್ವಿಚೇಷ್ಟಿತಂ
ಘ್ನನ್ತಂ ಜನೋಽಯಂ ಹಿ ಮಿಷನ್ನ ಪಶ್ಯತಿ ।
ಧ್ಯಾಯನ್ನಸದ್ಯರ್ಹಿ ವಿಕರ್ಮ ಸೇವಿತುಂ
ನಿರ್ಹೃತ್ಯ ಪುತ್ರಂ ಪಿತರಂ ಜಿಜೀವಿಷತಿ

ಅಹಾ! ಎಷ್ಟು ವಿಚಿತ್ರವಾಗಿದೆ ಭಗವಂತನ ಲೀಲೆ! ಇಡೀ ಜಗತ್ತನ್ನು ಸಂಹರಿಸುತ್ತಿರುವ ಮೃತ್ಯುವನ್ನು ಕಣ್ಣಾರೆ ಕಾಣುತ್ತಿದ್ದರೂ ಕಾಣದಂತೆಯೇ ಇದ್ದಾರಲ್ಲಾ ಈ ಜೀವರು! ಇಲ್ಲಿ ತುಚ್ಛವಾದ ವಿಷಯಸುಖಗಳನ್ನು ಸೇವಿಸುವುದಕ್ಕಾಗಿ ಪಾಪವನ್ನೇ ಚಿಂತಿಸುತ್ತಿದ್ದಾರೆ. ಮೃತನಾದ ತಮ್ಮಪುತ್ರನನ್ನೂ ಮತ್ತು ತಂದೆಯ ಶವವನ್ನೂ ತಮ್ಮಕೈಯಿಂದಲೇ ದಹನ ಮಾಡಿ ಬಂದಿದ್ದರೂ ತಾವು ಬದುಕಲು ಬಯಸುತ್ತಿದ್ದಾರಲ್ಲಾ! ಇದಕ್ಕೆಲ್ಲಾ ಭಗವಂತನ ವಿಲಾಸವೇ ತಾನೇ ಕಾರಣ?

ವದನ್ತಿ ವಿಶ್ವಂ ಕವಯಃ ಸ್ಮ ನಶ್ವರಂ
ಪಶ್ಯನ್ತಿ ಚಾಧ್ಯಾತ್ಮವಿದೋ ವಿಪಶ್ಚಿತಃ ।
ತಥಾಪಿ ಮುಹ್ಯನ್ತಿ ತವಾಜ ಮಾಯಯಾ
ಸುವಿಸ್ಮಿತಂ ಕೃತ್ಯಮಜಂ ನತೋಽಸ್ಮಿತಮ್ ॥೪॥

ಎಲೈ ಜನ್ಮರಹಿತನಾದ ಪ್ರಭುವೇ! ಪಂಡಿತರು ಈ ಜಗತ್ತು ನಶ್ವರವೆಂದು (ಶಾಸ್ತ್ರಬಲದಿಂದ) ಹೇಳುತ್ತಾರೆ. ಆತ್ಮಸ್ವರೂಪವನ್ನು ಅರಿತ ಜ್ಞಾನಿಗಳು ಈ ವಿಷಯವನ್ನು ಸಮಾಧಿಯ ಬಲದಿಂದ ಕಂಡೂ ಇದ್ದಾರೆ. ಆದರೆ ಇವರೂ ನಿನ್ನ ಮಾಯೆಗೆ ಮರುಳಾಗಿಯೇ ಇದ್ದರು. ಇದಕ್ಕೆ ನಿನ್ನ

ಅತ್ಯಂತ ಆಶ್ಚರ್ಯಕರವಾದ ಮಾಯೆಯೇ ಕಾರಣ. ಆದುದರಿಂದ ಈ ಶಾಸ್ತ್ರಾದಿಗಳನ್ನು ಕಲಿಯಲು ಪ್ರಯತ್ನಮಾಡದೇ ಪುರುಷೋತ್ತಮನಾದ ನಿನ್ನನ್ನೇ ಶರಣುಹೊಂದುತ್ತೇವೆ.

ವಿಶ್ವೋದ್ಭವಸ್ಥಾನನಿರೋಧಕರ್ಮ ತೇ
ಹ್ಯಕರ್ತುರಙ್ಗೀಕೃತಮಪ್ಯಪಾವೃತಃ ।
ಯುಕ್ತಂ ನ ಚಿತ್ರಂ ತ್ವಯಿ ಕಾರ್ಯಕಾರಣೇ
ಸರ್ವಾತ್ಮನಿ ವ್ಯತಿರಿಕ್ತೇ ಚ ವಸ್ತುತಃ ॥೫॥

ಎಲೈ ಭಗವಂತನೇ! ನೀನು ಜಗತ್ತಿನ ಸೃಷ್ಟಿ ಮತ್ತು ಲಯಗಳನ್ನು ಮಾಡುತ್ತಿದ್ದರೂ—ಅವುಗಳಿಂದ ನಿರ್ಲಿಪ್ತನಾಗಿ ಕರ್ತೃತ್ವದ ಸೋಂಕಿಲ್ಲದವ ನಾಗಿದ್ದೀಯೆ. ಸರ್ವಾತ್ಮಕನಾಗಿ ಕಾರ್ಯರೂಪವಾದ ಈ ವಿಶ್ವಕ್ಕೆ ಕಾರಣ ನಾಗಿರುವುದರಿಂದ ವಿಶ್ವದ ಕರ್ತೃವಾಗಿದ್ದರೂ ಮಾಯಾತೀತನಾಗಿ ಜಗತ್ತಿನಿಂದ ವ್ಯತಿರಿಕ್ತನಾಗಿರುವುದರಿಂದ ನೀನು ಅಕರ್ತೃವೂ ಆಗಿದ್ದೀಯೆ. ಇದರಲ್ಲಿ ಅಚ್ಚರಿಯೇನು ಇಲ್ಲ.

ವೇದಾನ್ಯುಗಾನ್ತೇ ತಮಸಾ ತಿರಸ್ಕೃತಾ -
ನ್ರಸಾತಲಾದ್ಯೋ ನೃತುರಙ್ಗವಿಗ್ರಹಃ ।
ಪ್ರತ್ಯಾದದೇ ವೈ ಕವಯೇಽಭಿಯಾಚತೇ
ತಸ್ಮೈ ನಮಸ್ತೇಽವಿತಥೇಹಿತಾಯ ಇತಿ ॥೬॥

ಹಿಂದೆ ಪ್ರಳಯಕಾಲದಲ್ಲಿ ತಮೋಗುಣಪ್ರಧಾನವಾದ ಮಧು-ಕೈಟಭರೆಂಬ ದೈತ್ಯರು ವೇದಗಳನ್ನು ಅಪಹರಿಸಿಕೊಂಡು ಹೋದಾಗ—ಬ್ರಹ್ಮದೇವರ ಪ್ರಾರ್ಥನೆಯಂತೆ ಆ ವೇದಗಳನ್ನು ರಸಾತಲದಿಂದ ಅವರಿಗೆ ತಂದುಕೊಟ್ಟ, ಮನುಷ್ಯ ಮತ್ತು ಕುದುರೆಗಳು ಸೇರಿದ ದಿವ್ಯಮಂಗಳವಿಗ್ರಹವುಳ್ಳ, ಹಯಗ್ರೀವರೂಪಿಯಾದ, ಅಮೋಘವ್ಯಾಪಾರವುಳ್ಳ, ಸತ್ಯಸಂಕಲ್ಪನಾದ ಸ್ವಾಮಿಯು ನೀನು. ನಿನಗೆ ನಮೋ ನಮಃ."

ಹೀಗೆ ಶ್ರೀಭಗವಂತನು ಭದ್ರಾಶ್ವವರ್ಷದಲ್ಲಿ ಹಯಗ್ರೀವಮೂರ್ತಿಯ ರೂಪದಲ್ಲಿ ಬಿಜಯಮಾಡಿಸಿರುವಂತೆಯೇ ಹರಿವರ್ಷದಲ್ಲಿ ನರಹರಿ (ನರಸಿಂಹ) ರೂಪದಲ್ಲಿ ಬೆಳಗುತ್ತಿದ್ದಾನೆ. ಆತನು ಈ ರೂಪವನ್ನು ಏಕೆ

ಕೈಗೊಂಡನೆಂಬುದನ್ನು ಮುಂದೆ (ಏಳನೆಯ ಸ್ಕಂಧದಲ್ಲಿ) ಹೇಳುವೆನು. ಶ್ರೀಭಗವಂತನ ಆ ಪ್ರಿಯವಾದ ರೂಪವನ್ನು ಭಾಗವತಶಿರೋಮಣಿಯಾದ ಪ್ರಹ್ಲಾದನು ಅನನ್ಯಭಕ್ತಿಭಾವದಿಂದ ಉಪಾಸನೆಮಾಡುತ್ತಿದ್ದಾನೆ. ಮಹಾಪುರುಷರ ಗುಣಗಳಿಂದ ಸಂಪನ್ನನಾಗಿ ದೈತ್ಯ-ದಾನವಕುಲಗಳನ್ನು ತನ್ನ ಶೀಲ ಮತ್ತು ಆಚರಣೆಗಳಿಂದ ಪವಿತ್ರಗೊಳಿಸುತ್ತಿರುವ ಆ ಮಹಾತ್ಮನು ಶ್ರೀಭಗವಂತನ ವಿಷಯವಾಗಿ ಈ ಮಂತ್ರದ ಸ್ತೋತ್ರ-ಜಪ-ಪಾರಾಯಣಗಳಲ್ಲಿ ಆಸಕ್ತನಾಗಿರುತ್ತಾನೆ.

ಓಂ ನಮೋ ಭಗವತೇ ನರಸಿಂಹಾಯ ನಮಸ್ತೇಜಸ್ತೇಜಸೇ ಆವಿರಾವಿರ್ಭವ ವಜ್ರನಖ ವಜ್ರದಂಷ್ಟ್ರ ಕರ್ಮಾಶಯಾನ್ರನ್ಧಯ ರನ್ಧಯ ತಮೋ ಗ್ರಸ ಗ್ರಸ ಓಂ ಸ್ವಾಹಾ । ಅಭಯಮಭಯಮಾತ್ಮನಿ ಭೂಯಿಷ್ಠಾ ಓಂ ಕ್ಷ್ರೌಮ್ ॥೮॥

“ಓಂ ನಮಸ್ಕಾರವು ಭಗವಂತ ಶ್ರೀನರಸಿಂಹನಿಗೆ. ತೇಜಸ್ಸುಗಳಿಗೆಲ್ಲಾ ತೇಜಸ್ಸನ್ನು ಅನುಗ್ರಹಿಸುವ ಪರಮತೇಜೋನಿಧಿಮೂರ್ತಿಗೆ ನಮಸ್ಕಾರವು. ಅವಿರ್ಭವಿಸು! ಆವಿರ್ಭವಿಸು! ವಜ್ರದಂತಹ ಉಗುರುಗಳು ಮತ್ತು ವಜ್ರದಂತಹ ಕೋರೆದಾಡೆಗಳಿಂದ ಬೆಳಗುತ್ತಿರುವ ಭಗವಂತನೇ! ನನ್ನ ಕರ್ಮವಾಸನೆಗಳನ್ನು ಸುಟ್ಟುಹಾಕು ; ಸುಟ್ಟುಹಾಕು. ನಮ್ಮ ಅಜ್ಞಾನದ ಕತ್ತಲೆಯನ್ನು ನುಂಗಿಹಾಕು ; ನುಂಗಿಹಾಕು. ಓಂ ಸ್ವಾಹಾ ನನ್ನ ಅಂತಃಕರಣದಲ್ಲಿ ಅಭಯಪ್ರದಾನಮಾಡುತ್ತಾ ಪ್ರಕಟವಾಗು, ಪ್ರಭುವೇ!

ಸ್ವಸ್ತ್ಯಸ್ತು ವಿಶ್ವಸ್ಯ ಖಲಃ ಪ್ರಸೀದತಾಂ
ಧ್ಯಾಯನ್ತು ಭೂತಾನಿ ಶಿವಂ ಮಿಥೋ ಧಿಯಾ ।
ಮನಶ್ಚ ಭದ್ರಂ ಭಜತಾದಧೋಕ್ಷಜೇ
ಆವೇಶ್ಯತಾಂ ನೋ ಮತಿರಪ್ಯಹೈತುಕೀ ॥೯॥

ವಿಶ್ವಕ್ಕೆ ಕಲ್ಯಾಣವುಂಟಾಗಲಿ. ದುಷ್ಟರ ಮನಸ್ಸು ತಿಳಿಯಾಗಲಿ. ಎಲ್ಲ ಪ್ರಾಣಿಗಳೂ ಪರಸ್ಪರವಾಗಿ ಹಿತವನ್ನು ಚಿಂತಿಸಲಿ. ಎಲ್ಲರಲ್ಲಿಯೂ ಸದ್ಭಾವನೆಯುಂಟಾಗಲಿ. ನಮ್ಮ ಮನಸ್ಸು ಶುಭವಾದ ಮಾರ್ಗದಲ್ಲಿ ಪ್ರವೃತ್ತವಾಗಲಿ. ನಮ್ಮೆಲ್ಲರ ಬುದ್ಧಿಯೂ ನಿಷ್ಕಾಮವಾದ ಭಕ್ತಿಯಿಂದ ಶ್ರೀಭಗವಂತನಾದ ಅಧೋಕ್ಷಜನಾದ ಶ್ರೀಹರಿಯನ್ನು ಪ್ರವೇಶಿಸಲಿ.

ಮಾಗಾರದಾರಾತ್ಮಜವಿತ್ತಬನ್ಧುಷು
ಸಙ್ಗೋ ಯದಿ ಸ್ಯಾದ್ಭಗವತ್ಪ್ರಿಯೇಷು ನಃ ।
ಯಃ ಪ್ರಾಣವೃತ್ತ್ಯಾ ಪರಿತುಷ್ಟ ಆತ್ಮವಾ-
ನ್ಸಿದ್ಧ್ಯತ್ಯದೂರಾನ್ನ ತಥೇನ್ದ್ರಿಯಪ್ರಿಯಃ ॥೧೦॥

ಪ್ರಭೋ! ನಮಗೆ ಮನೆ, ಮಡದಿ ಮಕ್ಕಳು, ಹಣ ಮತ್ತು ಬಂಧು-ಬಳಗ–ಇತ್ಯಾದಿಗಳಲ್ಲಿ ವ್ಯಾಮೋಹದ ಆಸಕ್ತಿಯು ಉಂಟಾಗದೇ ಇರಲಿ. ಆಸಕ್ತಿಯು ಇರಲೇಬೇಕಾದ ಪಕ್ಷದಲ್ಲಿ ಅದು ಶ್ರೀಭಗವಂತನನ್ನು ಪ್ರೀತಿಸುತ್ತಾ ಶ್ರೀಭಗವಂತನಿಗೆ ಪ್ರಿಯರಾಗಿರುವ ಭಕ್ತರ ವಿಷಯದಲ್ಲಿ ಮಾತ್ರವೇ ಉಂಟಾಗಲಿ. ಶರೀರನಿರ್ವಹಣೆಗೆ ಅನಿವಾರ್ಯವಾಗಿ ಬೇಕಾಗಿರುವ ದ್ರವ್ಯಗಳಷ್ಟರಿಂದಲೇ ಸಂತೋಷಪಟ್ಟುಕೊಳ್ಳುವ ಆ ಸಂಯಮಿಗಳಿಗೆ ಶೀಘ್ರದಲ್ಲಿಯೇ ಸಿದ್ಧಿಯುಂಟಾಗುವುದು. ಇಂದ್ರಿಯಗಳಲ್ಲಿ ಲೋಲುಪರಾದ ಜನರಿಗೆ ಅಷ್ಟು ಬೇಗನೆ ಸಿದ್ಧಿಯುಂಟಾಗಲಾರದು.

ಯತ್ಸಙ್ಗಲಬ್ಧಂ ನಿಜವೀರ್ಯವೈಭವಂ
ತೀರ್ಥಂ ಮುಹುಃ ಸಂಸ್ಪೃಶತಾಂ ಹಿ ಮಾನಸಮ್ ।
ಹರತ್ಯಜೋಽನ್ತಃ ಶ್ರುತಿಭಿರ್ಗತೋಽಙ್ಗಜಂ
ಕೋ ವೈ ನ ಸೇವೇತ ಮುಕುನ್ದವಿಕ್ರಮಮ್ ॥೧೧॥

ಆ ಭಕ್ತರ ಸತ್ಸಂಗದಲ್ಲಿದ್ದರೆ ಶ್ರೀಭಗವಂತನ ಅಸಾಧಾರಣವಾದ ಶಕ್ತಿಯನ್ನೂ ಮತ್ತು ಪ್ರಭಾವವನ್ನೂ ಪ್ರಕಟಪಡಿಸುವ ತೀರ್ಥಸಮಾನವಾದ ಪವಿತ್ರವಾದ ಕಥೆಗಳ ಶ್ರವಣದ ಭಾಗ್ಯವುಂಟಾಗುವುದು. ಆ ಕಥೆಗಳನ್ನು ಮತ್ತೆ-ಮತ್ತೆ ಯಾರು ಕೇಳುತ್ತಿರುವರೋ–ಅವರ ಹೃದಯಕ್ಕೆ ಶ್ರೀಭಗವಂತನು ಅವರ ಕಿವಿದೆರೆಗಳ ಮೂಲಕ ಪ್ರವೇಶಮಾಡಿ ಅವರ ಎಲ್ಲ ಬಗೆಯ ದೈಹಿಕ ಮತ್ತು ಮಾನಸಿಕ ದೋಷಗಳನ್ನೂ ಕಳೆದುಹಾಕುವನು. ಹೀಗಿರುವಾಗ ಭಗವದ್ಭಕ್ತರ ಸಂಗವನ್ನು ಯಾವನು ತಾನೇ ಮಾಡುವುದಿಲ್ಲ?*

---

* 'ಕೋಹ್ಯೇವಾನ್ಯಾತ್ಕಃ ಪ್ರಾಣ್ಯಾತ್' ನ ಚ ಸೀತಾ ತ್ವಯಾ ಹೀನಾ ನ ಚಾಹಮಪಿ ರಾಘವ। ಮುಹೂರ್ತಮಪಿ ಜೀವಾವೋ ಜಲಾನ್ಮತ್ಸ್ಯಾವಿವೋದ್ಧೃತೌ ॥ ಎಂಬಂತೆ ಸರ್ವಾತ್ಮಕನಾದ ಪರಮಾತ್ಮನು ನಿರತಿಶಯಾನಂದಸ್ವರೂಪನಾಗಿರದಿದ್ದಲ್ಲಿ ಯಾವನು ಎಂಬಂತೆ ತಾನೇ ಬದುಕಬಲ್ಲನು? (ವಿಜಯಧ್ವಜೀಯ) (ಶ್ಲೋಕ ೧೧)

ಯಸ್ಯಾಸ್ತಿ ಭಕ್ತಿರ್ಭಗವತ್ಯಕಿಞ್ಚನಾ
ಸರ್ವೈರ್ಗುಣೈಸ್ತತ್ರ ಸಮಾಸತೇ ಸುರಾಃ ।
ಹರಾವಭಕ್ತಸ್ಯ ಕುತೋ ಮಹದ್ಗುಣಾ
ಮನೋರಥೇನಾಸತಿ ಧಾವತೋ ಬಹಿಃ ॥೧೨॥

ಶ್ರೀಹರಿಯಲ್ಲಿ ಏಕಾಂತಭಕ್ತಿಯನ್ನು ಹೊಂದಿರುವ ಸುಕೃತಿಯ ಹೃದಯದಲ್ಲಿ ಸಮಸ್ತದೇವತೆಗಳೂ ಧರ್ಮ-ಜ್ಞಾನಗಳೇ ಮುಂತಾದ ಸರ್ವ ಸದ್ಗುಣಗಳೊಡನೆ ಸದಾ ವಾಸಮಾಡುತ್ತಿರುವರು. ಭಗವದ್ಭಕ್ತಿಯಿಲ್ಲದವನಲ್ಲಿ ಆ ಮಹಾಪುರುಷರ ಗುಣಗಳು ಹೇಗೆ ತಾನೇ ಬಂದಾವು? ಆತನು ಬಗೆ-ಬಗೆಯ ಸಂಕಲ್ಪಗಳಿಂದ ಕೂಡಿ ಚಿಂತೆಗಳಲ್ಲಿ ಮುಳುಗಿ ತುಚ್ಛವಾದ ಹೊರಗಿನ ವಿಷಯಗಳ ಕಡೆಗೇ ಎಡೆಬಿಡದೇ ಓಡುತ್ತಿರುವನು.

ಹರಿರ್ಹಿ ಸಾಕ್ಷಾದ್ಭಗವಾನ್ ಶರೀರಿಣಾ-
ಮಾತ್ಮಾ ಝಷಾಣಾಮಿವ ತೋಯಮೀಪ್ಸಿತಮ್ ।
ಹಿತ್ವಾ ಮಹಾಂಸ್ತಂ ಯದಿ ಸಜ್ಜತೇ ಗೃಹೇ
ತದಾ ಮಹತ್ತ್ವಂ ವಯಸಾ ದಮ್ಪತೀನಾಮ್ ॥೧೩॥

ಮೀನುಗಳಿಗೆ ನೀರು ಅತ್ಯಂತ ಪ್ರಿಯವೂ, ಜೀವನಾಧಾರವೂ ಆಗಿರುವಂತೆ–ಶ್ರೀಭಗವಂತನಾದ ಸಾಕ್ಷಾತ್ ಶ್ರೀಹರಿಯೇ ಎಲ್ಲ ದೇಹಿಗಳಿಗೂ ಪ್ರಿಯತಮನಾದ ಆತ್ಮನಾಗಿದ್ದಾನೆ. ಆತನನ್ನು ಬಿಟ್ಟು ಮಹತ್ತ್ವದ ಅಭಿಮಾನದಿಂದ ಮನೆಯಲ್ಲೇ ಆಸಕ್ತರಾಗಿದ್ದರೆ–ಅಂತಹ ದಂಪತಿಗಳಿಗೆ ಗುಣದಿಂದ ಮಹತ್ತ್ವವನ್ನು ಹೇಳಬೇಕಾಗುವುದು.

ತಸ್ಮಾದ್ರಜೋರಾಗವಿಷಾದಮನ್ಯು-
ಮಾನಸ್ಪೃಹಾಭಯದೈನ್ಯಾಧಿಮೂಲಮ್ ।
ಹಿತ್ವಾ ಗೃಹಂ ಸಂಸೃತಿಚಕ್ರವಾಲಂ
ನೃಸಿಂಹಪಾದಂ ಭಜತಾಕುತೋಭಯಮಿತಿ ॥೧೪॥

ಆದುದರಿಂದ ಆಸೆ, ಅನುರಾಗ, ವಿಷಾದ, ಕ್ರೋಧ, ಅಭಿಮಾನ, ಇಚ್ಛೆ, ಭಯ, ದೈನ್ಯ–ಮುಂತಾದ ಮನೋರೋಗ-ಮನಸ್ಸಂತಾಪಗಳಿಗೆ ಮೂಲವಾಗಿ, ಹುಟ್ಟು-ಸಾವುಗಳ ಸುಳಿಗೆ ಕಾರಣವಾಗಿರುವ ಮನೆ, ಮನೆ

ವಾರ್ತೆ ಮುಂತಾದುವುಗಳನ್ನು ತೊರೆದು ಶ್ರೀನೃಸಿಂಹಭಗವಂತನ ನಿರ್ಭಯ ವಾದ ಪಾದಗಳನ್ನು ಸೇವಿಸಿರಿ."

ಇನ್ನು ಕೇತುಮಾಲವರ್ಷದ ವಿಷಯ. ಅದರಲ್ಲಿ ಶ್ರೀಭಗವಂತನು ಶ್ರೀಲಕ್ಷ್ಮೀದೇವಿಗೂ ಮತ್ತು ಸಂವತ್ಸರನೆಂಬ ಪ್ರಜಾಪತಿಯ ಪುತ್ರ-ಪುತ್ರಿಯರಿಗೂ ಪ್ರಿಯವನ್ನುಂಟುಮಾಡುವುದಕ್ಕಾಗಿ ಭಗವಂತನಾದ ಕಾಮ ದೇವನ (ಪ್ರದ್ಯುಮ್ನಮೂರ್ತಿಯ) ರೂಪದಲ್ಲಿ ನೆಲೆಸಿರುವನು. ಆ ಸಂವತ್ಸರ ಪ್ರಜಾಪತಿಯ ಕನ್ಯೆಯರು ರಾತ್ರಿಗೂ ಪುತ್ರರು ಹಗಲಿಗೂ ಅಭಿಮಾನಿ ದೇವತೆಗಳು. ಕೇತುಮಾಲವರ್ಷಕ್ಕೆ ಇವರೇ ಅಧಿಪತಿಗಳು. ಇವರ ಸಂಖ್ಯೆಯು ಮನುಷ್ಯನ ನೂರು ವರ್ಷಗಳ ಆಯುಸ್ಸಿನ ಹಗಲು-ರಾತ್ರಿಗಳಷ್ಟು. ಅಂದರೆ : ಪುತ್ರರ ಸಂಖ್ಯೆಯು ಮೂವತ್ತಾರು ಸಾವಿರ ಮತ್ತು ಪುತ್ರಿಯರ ಸಂಖ್ಯೆಯೂ ಅಷ್ಟೇ ಆಗಿರುತ್ತದೆ. ಈ ಪುತ್ರಿಯರು ಭಗವಂತನ ಕಾಲಚಕ್ರಕ್ಕೆ ಭಯಪಟ್ಟು ನಡುಗುವುದರಿಂದ ಪ್ರತಿವರ್ಷದ ಕೊನೆ ಯಲ್ಲಿಯೂ ಇವರ ಗರ್ಭಗಳು ಅಂದರೆ ಕಲಾ, ಕಾಷ್ಠಾ–ಮುಂತಾದ ಕಾಲ ವಿಭಾಗಗಳು ನಶಿಸಿ ಬಿದ್ದುಹೋಗುವುವು. ಅಲ್ಲಿ ಆ ಪ್ರದ್ಯುಮ್ನರೂಪಿಯಾದ ಶ್ರೀಭಗವಂತನು ತನ್ನ ಮನೋಹರವಾದ ಮಂದಗಮನದಿಂದಲೂ, ಕಮನೀಯವಾದ ಕಿರುನಗೆಯಿಂದಲೂ, ಬೆಡಗಿನಿಂದ ಕೂಡಿದ ಕಡೆಗಣ್ಣುಗಳ ವಿಲಾಸದಿಂದಲೂ, ಕೊಂಚ ಮೇಲೆದ್ದ ಸುಂದರವಾದ ಹುಬ್ಬುಗಳಿಂದಲೂ ಮೆರೆಯುತ್ತಿರುವ ವಂದನಾರವಿಂದರಿಂದ ರೂಪ-ಲಾವಣ್ಯಗಳ ಕಾಂತಿಯ ಮಳೆಗರೆಯುತ್ತಾ, ರಮಾದೇವಿಯನ್ನು ಆನಂದಗೊಳಿಸುತ್ತಾ ತಾನೂ ಆನಂದಪಡುತ್ತಿರುವನು. ಶ್ರೀಲಕ್ಷ್ಮೀದೇವಿಯು ಶ್ರೀಭಗವಂತನ ಆ ಅದ್ಭುತವಾದ ಸ್ವರೂಪವನ್ನು ಪರಮಸಮಾಧಿಯೋಗದಿಂದ ರಾತ್ರಿಯಲ್ಲಿ ಸಂವತ್ಸರಪ್ರಜಾಪತಿಯ ಪುತ್ರಿಯರೊಡನೆಯೂ–ಹಗಲಿನಲ್ಲಿ ಆತನ ಪುತ್ರ ರೊಡನೆಯೂ ಕೂಡಿ ಆರಾಧನೆಮಾಡುತ್ತಾ ಈ ಮಂತ್ರದ ಜಪದಿಂದ ಸ್ವಾಮಿಯನ್ನು ಸ್ತುತಿಸುವಳು. (ಶ್ಲೋಕ 15-17)

ಓಂ ಹ್ರಾಂ ಹ್ರೀಂ ಹ್ರೂಂ ಓಂ ನಮೋ ಭಗವತೇ ಹೃಷೀ-ಕೇಶಾಯ ಸರ್ವಗುಣವಿಶೇಷೈರ್ವಿಲಕ್ಷಿತಾತ್ಮನೇ ಆಕೂತೀನಾಂ ಚಿತ್ತೀನಾಂ ಚೇತಸಾಂ ವಿಶೇಷಾಣಾಂ ಚಾಧಿಪತಯೇ ಷೋಡಶ

ಕಲಾಯಚ್ಛನ್ದೋಮಯಾಯಾನ್ನಮಯಾಯಾಮೃತಮಯಾಯ ಸರ್ವಮಯಾಯ ಸಹಸೇ ಓಜಸೇ ಬಲಾಯ ಕಾನ್ತಾಯ ಕಾಮಾಯ ನಮಸ್ತೇ ಉಭಯತ್ರ ಭೂಯಾತ್ ॥೧೮॥

"ಓಂ ಹ್ರಾಂ ಹ್ರೀಂ ಹ್ರೂಂ ಬೀಜಮಂತ್ರಗಳಿಂದ ನಿನಗೆ ನಮೋ ನಮಃ. ಇಂದ್ರಿಯಗಳಿಗೆ ನಿಯಾಮಕನೂ ಸಮಸ್ತಕಲ್ಯಾಣಗುಣಾತಿಶಯಗಳ ಮೂರ್ತಿಯೂ, ಕ್ರಿಯಾಶಕ್ತಿಗೂ, ಜ್ಞಾನಶಕ್ತಿಗೂ, ಸಂಕಲ್ಪ-ನಿಶ್ಚಯಗಳೇ ಮುಂತಾದ ಚಿತ್ತದ ಧರ್ಮಗಳಿಗೂ, ಅವುಗಳ ವಿಷಯಗಳಿಗೂ ಅಧಿಪತಿಯೂ, ಹನ್ನೊಂದು ಇಂದ್ರಿಯಗಳು ಮತ್ತು ಐದು ವಿಷಯಗಳೆಂಬ ಹದಿನಾರು ಕಲೆಗಳಿಂದ ತುಂಬಿರುವವನೂ, ವೇದಮಯನೂ, ಅನ್ನಮಯನೂ, ಅಮೃತಮಯನೂ ಮತ್ತು ಸರ್ವಮಯನೂ, ಸಹಸ್ಸು (ಮನಶ್ಶಕ್ತಿ) ಓಜಸ್ಸು (ಇಂದ್ರಿಯಶಕ್ತಿ) ಮತ್ತು ಬಲ (ದೇಹಶಕ್ತಿ) ಸ್ವರೂಪನೂ, ಪರಮಸುಂದರನೂ ಆಗಿರುವ ಭಗವಂತನಾದ ಕಾಮದೇವನಿಗೆ (ಒಳಗೆ ಮತ್ತು ಹೊರಗೆ) ಎರಡು ಕಡೆಗಳಲ್ಲಿಯೂ ನಮಸ್ಕಾರವು.

ಸ್ತ್ರಿಯೋ ವ್ರತೈಸ್ತ್ವಾ ಹೃಷಿಕೇಶ್ವರಂ ಸ್ವತೋ
ಹ್ಯಾರಾಧ್ಯ ಲೋಕೇ ಪತಿಮಾಶಾಸತೇಽನ್ಯಮ್ ।
ತಾಸಾಂ ನ ತೇ ವೈ ಪರಿಪಾನ್ತ್ಯಪತ್ಯಂ
ಪ್ರಿಯಂ ಧನಾಯೂಂಷಿ ಯತೋಽಸ್ವತನ್ತ್ರಾಃ ॥೧೯॥

ಸ್ತ್ರೀಯರು ವ್ರತಗಳ ಮೂಲಕ ಹೃಷೀಕೇಶ್ವರನಾದ (ಇಂದ್ರಿಯಗಳಿಗೆ ಅಧಿಪತಿಯಾದ) ವಿಶ್ವಪತಿಯಾದ ಸ್ವತಃ ನಿನ್ನನ್ನೇ ಆರಾಧನೆಮಾಡಿ ಲೋಕದಲ್ಲಿ ಬೇರೆ ಪತಿಯನ್ನು ಪಡೆಯಬೇಕೆಂದು ಆಸೆಪಡುವರಲ್ಲಾ! ಪತಿ ಎಂದರೆ ಪಾಲಿಸುವವನು ಎಂದು ಅರ್ಥ. ಆದರೆ ಆ ಲೌಕಿಕಪತಿಗಳು ಅವರಿಗೆ ಪ್ರೀತಿಪಾತ್ರರಾದ ಪುತ್ರರನ್ನಾಗಲೀ, ಪ್ರಿಯವಾದ ಧನವನ್ನಾಗಲೀ, ಆಯುಸ್ಸನ್ನಾಗಲೀ–ದಯಪಾಲಿಸಲಾರರು. ಏಕೆಂದರೆ : ಅವರು ತಾವೇ ಅಸ್ವತಂತ್ರರು.

ಸ ವೈ ಪತಿಃ ಸ್ಯಾದಕುತೋಭಯಃ ಸ್ವಯಂ
ಸಮನ್ತತಃ ಪಾತಿ ಭಯಾತುರಂ ಜನಮ್ ।

ಸ ಏಕ ಏವೇತರಥಾ ಮಿಥೋ ಭಯಂ
ನೈವಾತ್ಮಲಾಭಾದಧಿ ಮನ್ಯತೇ ಪರಮ್ ॥೨೦॥

ನಿಜವಾದ ಪತಿಯು (ಪಾಲಕನು) ಯಾರು? ಎಂದರೆ : ಯಾವನು ತಾನು ಪೂರ್ಣವಾಗಿ ಭಯರಹಿತನಾಗಿ ಭಯಭೀತರಾದ ಇತರ ಜನರನ್ನು ಎಲ್ಲ ರೀತಿಗಳಲ್ಲಿಯೂ ರಕ್ಷಿಸಬಲ್ಲನೋ–ಆತನೇ. ಇಂತಹ ಪತಿಯು ನೀನೊಬ್ಬನೇ. ಪತಿಗಳು (ಪಾಲಕರು, ಈಶ್ವರರು) ಅನೇಕ ಮಂದಿ ಇದ್ದಾರೆ–ಎನ್ನುವುದಾದರೆ ಅವರಲ್ಲಿ ಒಬ್ಬರಿಗೊಬ್ಬರಿಂದ ಭಯವುಂಟಾಗುವ ಸಂಭವವು ಇದ್ದೇ ಇರುವುದು. ಆದುದರಿಂದ ವಿಶ್ವಕ್ಕೆಲ್ಲಾ ಒಬ್ಬನೇ ಪತಿಯಾಗಿರುವ ನಿನ್ನ ಲಾಭಕ್ಕಿಂತಲೂ ಅಧಿಕವಾದ ಬೇರಾವುದನ್ನೂ ನಾನು ಎಣಿಸುವುದಿಲ್ಲ.

ಯಾ ತಸ್ಯ ತೇ ಪಾದಸರೋರುಹಾರ್ಹಣಂ
ನಿಕಾಮಯೇತ್ಸಾಖಿಲಕಾಮಲಮ್ಪಟಾ ।
ತದೇವ ರಾಸೀಪ್ಸಿತಮೀಪ್ಸಿತೋಽರ್ಚಿತೋ
ಯದ್ಭಗ್ನಯಾಚ್ಞಾ ಭಗವನ್ಪ್ರತಪ್ಯತೇ ॥೨೧॥

ಓ ಭಗವಂತನೇ! ನಿನ್ನ ಚರಣಕಮಲಗಳ ಪೂಜೆಯನ್ನೇ ಬಯಸುತ್ತಾ ಬೇರಾವ ವಸ್ತುವನ್ನೂ ಬಯಸದೇ ಇರುವ ಧನ್ಯಳಾದ ಸ್ತ್ರೀಯು ಯಾವಳುಂಟೋ ಆಕೆಯ ಎಲ್ಲ ಕಾಮನೆಗಳೂ ಈಡೇರಿಬಿಡುತ್ತವೆ. ನಿನ್ನ ಚರಣಾರವಿಂದಗಳ ಕಾಮನೆಯಲ್ಲಿ ಸರ್ವಕಾಮನೆಗಳೂ ಅಂತರ್ಗತವಾಗಿವೆ. ಆದರೆ ಯಾವುದಾದರೂ ಒಂದು ಕಾಮನೆಯಿಂದ ನಿನ್ನನ್ನು ಉಪಾಸನೆಮಾಡುವ ಹೆಂಗಸಿಗೆ ನೀನು ಆಕೆಯ ಒಂದು ವಸ್ತುವನ್ನು ಮಾತ್ರ ದಯಪಾಲಿಸುವೆ. ಭೋಗವು ಮುಗಿದ ಬಳಿಕ ಆ ವಸ್ತುವು ನಷ್ಟವಾಗುವುದು. ಆಗ ಆಕೆಯು ಕಳವಳಪಡಬೇಕಾಗುವುದು.

ಮತ್ಪ್ರಾಪ್ತಯೇಽಜೇಶಸುರಾಽಸುರಾದಯಃ
ಸ್ತಪ್ಯನ್ತ ಉಗ್ರಂ ತಪ ಐನ್ದ್ರಿಯೇಧಿಯಃ ।
ಋತೇ ಭವತ್ಪಾದಪರಾಯಣಾನ್ನ ಮಾಂ
ವಿನ್ದನ್ತ್ಯಹಂ ತ್ವದ್ಧೃದಯಾ ಯತೋಽಜಿತ ॥೨೨॥

ಎಲೈ ಅಜಿತನೇ! ನನ್ನನ್ನು (ಐಶ್ವರ್ಯವನ್ನು) ಪಡೆಯುವುದಕ್ಕಾಗಿ

ಬ್ರಹ್ಮ-ರುದ್ರರೇ ಮುಂತಾದ ಸಮಸ್ತದೇವಾಸುರಗಣಗಳೂ ಉಗ್ರವಾದ ತಪಸ್ಸನ್ನು ಆಚರಿಸುತ್ತಾರೆ. ಆದರೆ ನಿನ್ನ ಪಾದಾರವಿಂದಗಳಲ್ಲಿ ಆಶ್ರಯ ಪಡೆಯುವ ಭಕ್ತನನ್ನು ಬಿಟ್ಟು ಬೇರಾವನೂ ನನ್ನನ್ನು ಪಡೆಯಲಾರನು. ಏಕೆಂದರೆ : ನನ್ನ ಮನಸ್ಸಾದರೋ ಸದಾ ನಿನ್ನಲ್ಲೇ ಲಗ್ನವಾಗಿರುವುದು. ಆದುದರಿಂದ ನನ್ನನ್ನು ಪಡೆಯಬೇಕಾದರೂ ನಿನ್ನ ಅಡಿದಾವರೆಗಳನ್ನೇ ಆಶ್ರಯಿಸಬೇಕು ; ಭಜಿಸಬೇಕು.

ಸ ತ್ವಂ ಮಮಾಪ್ಯಚ್ಯುತ ಶೀರ್ಷ್ಣಿ ವನ್ದಿತಂ
ಕರಾಮ್ಬುಜಂ ಯತ್ತ್ವದಧಾಯಿ ಸಾತ್ವತಾಮ್ ।
ಬಿಭರ್ಷಿ ಮಾಂ ಲಕ್ಷ್ಮ ವರೇಣ್ಯ ಮಾಯಯಾ
ಕ ಈಶ್ವರಸ್ಯೇಹಿತಮೂಹಿತುಂ ವಿಭುರಿತಿ ॥೬೨॥

ಓ ಅಚ್ಯುತನೇ! ನೀನು ನಿನ್ನ ಭಕ್ತರ ಶಿರಸ್ಸಿನ ಮೇಲೆ ಇರಿಸುವ ವಂದನೀಯವಾದ ಕರಕಮಲವನ್ನು ನನ್ನ ಶಿರಸ್ಸಿನ ಮೇಲೂ ಇರಿಸುವವನಾಗು. ಎಲೈ ವರೇಣ್ಯನೇ! ನನ್ನನ್ನು ಕೇವಲ ಶ್ರೀಲಾಂಛನ (ಗುರುತಿನ) ರೂಪದಲ್ಲಿ ವಕ್ಷಃಸ್ಥಳದಲ್ಲಿ ಧರಿಸಿದ್ದೀಯೆ. ಸರ್ವಸಮರ್ಥನು ನೀನು. ನೀನು ನಿನ್ನ ಮಾಯೆಯಿಂದ ಮಾಡುವ ಲೀಲೆಗಳ ರಹಸ್ಯವನ್ನು ಯಾವನು ತಾನೇ ತಿಳಿಯಬಲ್ಲನು?"

ರಮ್ಯಕವರ್ಷದಲ್ಲಿ ಶ್ರೀಭಗವಂತನು ಆ ವರ್ಷಕ್ಕೆ ಅಧಿಪತಿಯಾಗಿರುವ ಮನುವಿನ ಹಿಂದೆ ತನ್ನ ಪರಮಪ್ರಿಯವಾದ ಮತ್ಸ್ಯರೂಪವನ್ನು ತೋರಿಸಿ ದ್ದನು. ಮನುವು ಈಗಲೂ ಕೂಡ ಭಗವಂತನ ಆ ರೂಪವನ್ನೇ ಅತ್ಯಂತ ಭಕ್ತಿಭಾವದಿಂದ ಉಪಾಸನೆಮಾಡುತ್ತಿದ್ದಾನೆ. ಆತನು ಈ ಮಂತ್ರವನ್ನು ಜಪಿಸುತ್ತಾ ಭಗವಂತನನ್ನು ಸ್ತುತಿಸುತ್ತಿದ್ದಾನೆ.

ಓಂ ನಮೋ ಭಗವತೇ ಮುಖ್ಯತಮಾಯ ನಮಃ ಸತ್ತ್ವಾಯ ಪ್ರಾಣಾಯೌಜಸೇ ಸಹಸೇ ಬಲಾಯ ಮಹಾಮತ್ಸ್ಯಾಯ ನಮ ಇತಿ ॥೨೫॥

"ಬಲರೂಪವಾದ ಮುಖ್ಯಪ್ರಾಣರೂಪಿಯೂ, ಮನೋಬಲ-ಬುದ್ಧಿ ಬಲ-ದೇಹಬಲರೂಪಿಯೂ, ಓಂಕಾರದ ಪರಮಾರ್ಥವೂ ಆಗಿರುವ ಸರ್ವ

ಶ್ರೇಷ್ಠನಾದ ಭಗವಂತನಾದ ಮಹಾಮತ್ಸ್ಯನೇ! ನಿನಗೆ ಮತ್ತೆ ಮತ್ತೆ ನಮಸ್ಕಾರಗಳು.

ಅನ್ತರ್ಬಹಿಶ್ಚಾಖಿಲಲೋಕಪಾಲಕೈ-
ರದೃಷ್ಟರೂಪೋ ವಿಚರಸ್ಯುರುಸ್ವನಃ ।
ಸ ಈಶ್ವರಸ್ತ್ವಂ ಇದಂ ವಶೇಽನಯ-
ನ್ನಾಮ್ನಾ ಯಥಾ ದಾರುಮಯೀಂ ನರಃ ಸ್ತ್ರಿಯಮ್ ॥

ಪ್ರಭೋ! ನಟನು ಮರದ ಹೆಣ್ಣುಬೊಂಬೆಗಳನ್ನು ಕುಣಿಸುವಂತೆ– ನೀನು ಬ್ರಾಹ್ಮಣರೇ ಮುಂತಾದ ಹೆಸರುಗಳೆಂಬ ಹಗ್ಗಗಳಿಂದ ಇಡೀ ವಿಶ್ವ ವನ್ನು ವಶದಲ್ಲಿಟ್ಟುಕೊಂಡು ಕುಣಿದಾಡಿಸುತ್ತಿದ್ದೀಯೆ. ಎಲ್ಲಕ್ಕೂ ನೀನೇ ಪ್ರೇರಕನು. ಬ್ರಹ್ಮದೇವರೇ ಮುಂತಾದ ಲೋಕಪಾಲಕರೂ ನಿನ್ನನ್ನು ನೋಡಲಾರರು. ಆದರೆ ನೀನು ಎಲ್ಲ ಪ್ರಾಣಿಗಳ ಒಳಗೂ ಮತ್ತು ಹೊರಗೂ ಪ್ರಾಣ ಮತ್ತು ವಾಯುರೂಪಗಳಲ್ಲಿ ಶಬ್ದಮಾಡುತ್ತಾ ಸಂಚರಿಸುತ್ತಿದ್ದೀಯೆ. ನಿನ್ನನ್ನು ಯಾರೂ ನೋಡಲಾರರು. ಆದರೆ ನೀನು ಎಲ್ಲರ ಒಳಗೂ- ಹೊರಗೂ ಇದ್ದು ಎಲ್ಲರನ್ನೂ ನೋಡುತ್ತಿದ್ದೀಯೆ. ವೇದವೂ ನಿನ್ನ ಮಹಾಶಬ್ದವಾಗಿದೆ.

ಯಂ ಲೋಕಪಾಲಾಃ ಕಿಲ ಮತ್ಸರಜ್ವರಾ
ಹಿತ್ವಾಯತನ್ತೋಽಪಿ ಪೃಥಕ್ಸಮೇತ್ಯ ಚ ।
ಪಾತುಂ ನ ಶೇಕುರ್ದ್ವಿಪದಶ್ಚತುಷ್ಪದಃ
ಸರೀಸೃಪಂ ಸ್ಥಾಣು ಯದತ್ರ ದೃಶ್ಯತೇ ॥೨೭॥

ಪ್ರಭುವೇ! ನೀನು ಪ್ರಾಣಸ್ವರೂಪನು. ಒಮ್ಮೆ ಇಂದ್ರಾದಿ ದೇವತೆಗಳಿಗೆ ಪ್ರಾಣರೂಪಿಯಾದ ನಿನ್ನ ಮೇಲೆ ಹೊಟ್ಟೆಯುರಿ ಉಂಟಾಯಿತು. ಅವರು ನಿನ್ನೊಡನೆ ಸ್ಪರ್ಧಿಸಿದರು. ಆಗ ನೀನು ಅವರನ್ನು ಬಿಟ್ಟು ದೇಹದಿಂದ ಅಗಲಿದಾಗ ಅವರು ಎಷ್ಟೇ ಪ್ರಯತ್ನಿಸಿದರೂ ಒಬ್ಬೊಬ್ಬರಾಗಿಯಾಗಲೀ ಅಥವಾ ಒಟ್ಟಿಗೇ ಸೇರಿಕೊಂಡಾಗಲೀ, ಮನುಷ್ಯದೇಹ, ಪಶುದೇಹ, ಸ್ಥಾವರ ಜಂಗಮದೇಹಗಳು–ಯಾವುದನ್ನೂ ರಕ್ಷಿಸಲಾರದೇ ಹೋದರು.

ಭವಾನ್ಯುಗಾನ್ತಾರ್ಣವ ಊರ್ಮಿಮಾಲಿನಿ
ಕ್ಷೋಣೀಮಿಮಾಮೋಷಧಿವೀರುಧಾಂ ನಿಧಿಮ್ ।

ಮಯಾ ಸಹೋರು ಕ್ರಮತೇಽಜ ಓಜಸಾ
ತಸ್ಮೈ ಜಗತ್ಪ್ರಾಣಗಣಾತ್ಮನೇ ನಮ ಇತಿ ॥೨೯॥

ಎಲೈ ಜನ್ಮರಹಿತನಾದ ಸ್ವಾಮಿಯೇ! ನೀನು ನನ್ನೊಡನೆ ಸಮಸ್ತ ಔಷಧಿಗಳಿಗೂ ಮತ್ತು ಲತೆಗಳಿಗೂ ಆಶ್ರಯವಾಗಿರುವ ಈ ಪೃಥಿವಿಯನ್ನು ತೆಗೆದುಕೊಂಡು ಮೇಲೆ ಮೇಲೆ ಏರುತ್ತಿದ್ದ ತರಂಗಗಳಿಂದ ಕೂಡಿದ ಪ್ರಳಯ ಕಾಲದ ಕಡಲಿನಲ್ಲಿ ಬಹಳ ಉತ್ಸಾಹದಿಂದ ವಿಹರಿಸಿದೆ. ಜಗತ್ತಿನ ಎಲ್ಲ ಪ್ರಾಣಿ ಸಮುದಾಯಕ್ಕೂ ನಿಯಾಮಕನು ನೀನು ಇಂತಹ ನಿನಗೆ ನಮೋ ನಮಃ."

ಹಿರಣ್ಮಯವರ್ಷದಲ್ಲಿ ಶ್ರೀಭಗವಂತನು ಆಮೆಯ ರೂಪವನ್ನು ಧರಿಸಿ ವಾಸಿಸುವನು. ಅಲ್ಲಿ ಪಿತೃಗಳ ರಾಜನಾದ ಅರ್ಯಮನು ಭಗವಂತನ ಪ್ರಿಯತಮವಾದ ಕೂರ್ಮಮೂರ್ತಿಯನ್ನು ಉಪಾಸನೆಮಾಡುತ್ತಾನೆ ಮತ್ತು ಈ ಮಂತ್ರವನ್ನು ನಿರಂತರವಾಗಿ ಜಪಿಸುತ್ತಾ ಭಗವಂತನನ್ನು ಹೀಗೆ ಸ್ತುತಿಸುತ್ತಾನೆ.

ಓಂ ನಮೋ ಭಗವತೇ ಅಕೂಪಾರಾಯ ಸರ್ವಸತ್ತ್ವಗುಣ-ವಿಶೇಷಣಾಯಾನುಪಲಕ್ಷಿತಸ್ಥಾನಾಯ ನಮೋ ವರ್ಷ್ಮಣೇ ನಮೋ ಭೂಮ್ನೇ ನಮೋ ನಮೋಽವಸ್ಥಾನಾಯ ನಮಸ್ತೇ* ॥೩೦॥

"ಸಮಸ್ತಸತ್ತ್ವಗುಣಸಂಪನ್ನನೂ, ತಿಳಿಯಲಾಗದ ನೆಲೆಯುಳ್ಳವನೂ, ಮಹಾದೇಹನೂ, ಮಹಾಪುರುಷನೂ, ವಿನಾಶರಹಿತನೂ, ಸರ್ವಾಧಾರನೂ ಆದ ಕೂರ್ಮರೂಪಿಯಾದ ಓ ಭಗವಂತನೇ! ನಿನಗೆ ನಮೋ ನಮಃ. ಮತ್ತೆ ಮತ್ತೆ ನಮೋ ನಮಃ.

---

* **ಅಕೂಪಾರಾಯ** - ಮಹಾಕೂರ್ಮನಿಗೆ. ಕೂಪ—ಎಂದರೆ ಸ್ವಲ್ಪ ನೀರುಳ್ಳದ್ದು. ಅಂದರೆ ಬಾವಿ (**ಕುತ್ಸಿತಾ ಆಪಃ ಯಸ್ಮಿನ್ ತತ್-ಕೂಪಂ**) ಆ ಕೂಪದಲ್ಲಿ ನೆಲೆಸಿರುವುದು ಸಾಧಾರಣವಾದ ಆಮೆ. (**ಕೂಪಂ ರಾತೀತಿ ಕೂಪಾರಃ**) ಹಾಗೆ ಸಾಧಾರಣವಾದ ಆಮೆಗಳಂತೆ ಬಾವಿಯಲ್ಲಿ ನೆಲೆಸದೆ ಮಹಾಸಮುದ್ರದಲ್ಲಿ ಸಂಚರಿಸುತ್ತಿರುವ ಮಹಾಕೂರ್ಮನೇ ಅಕೂಪಾರ. (**ಕೂಪಾರ್ಹಃ ನ ಭವತಿ ಇತಿ ಅಕೂಪಾರಃ**)
(ವೀರರಾಘವೀಯ)

ಅಕೂಪಾರ ಎಂಬ ಶಬ್ದಕ್ಕೆ ಮಹಾಸಮುದ್ರರೂಪಿಯು—ಎಂದೂ ಅರ್ಥಮಾಡ ಬಹುದು.
(ಶ್ಲೋಕ ೩೦)

ಯದ್ರೂಪಮೇತನ್ನಿಜಮಾಯಯಾರ್ಪಿತ-
ಮರ್ಥಸ್ವರೂಪಂ ಬಹುರೂಪರೂಪಿತಮ್ ।
ಸಂಖ್ಯಾ ನ ಯಸ್ಯಾಸ್ತ್ಯಯಥೋಪಲಮ್ಭನಾ-
ತ್ತಸ್ಮೈ ನಮಸ್ತೇಽವ್ಯಪದೇಶರೂಪಿಣೇ* ॥೩೧॥

ನಿನ್ನ ಮಾಯೆಯಿಂದ ರಚಿತವಾಗಿ ಬಹುರೂಪಗಳಲ್ಲಿ ಕಾಣುತ್ತಿರುವ ಈ ದೃಶ್ಯವಾದ ಜಗತ್ತು ನಿನ್ನ ರೂಪವೇ ಆಗಿದೆ. ಅದು ವಾಸ್ತವವಾಗಿ ಹೇಗಿದೆಯೋ ಹಾಗೆ ಕಾಣದೇ ಬೇರೆ ರೀತಿಯಲ್ಲಿ ತೋರಿಬರುತ್ತದೆ. ಆದುದರಿಂದ ವಿವೇಕಿಗಳು ಇದನ್ನು ಪರಿಗಣಿಸುವುದಿಲ್ಲವಾದರೂ ಇದು ಅನುಭವದಲ್ಲಿ ಇದ್ದೇ ಇದೆ. ಹೀಗೆ-ಹೀಗೆಯೇ ಇದೆ–ಎಂದು ನಿಶ್ಚಯಿಸಲ್ಪಡಲಾರದೇ ಅನಿರ್ವಚನೀಯವಾಗಿರುವ ನಿನ್ನ ಜಗತ್ತೆಂಬ ರೂಪಕ್ಕೆ ನಮೋ ನಮಃ.

ಜರಾಯುಜಂ ಸ್ವೇದಮಣ್ಡಜೋದ್ಭಿದಂ
ಚರಾಚರಂ ದೇವರ್ಷಿಪಿತೃಭೂತಮೈನ್ದ್ರಿಯಮ್ ।
ದ್ಯೌಃ ಖಂ ಕ್ಷಿತಿಃ ಶೈಲಸರಿತ್ಸಮುದ್ರ-
ದ್ವೀಪಗ್ರಹರ್ಕ್ಷೇತ್ಯಭಿಧೇಯ ಏಕಃ ॥೩೨॥

ಜರಾಯುಜಗಳಾದ ಮನುಷ್ಯರೇ ಮುಂತಾದವರು, ಬೆವರಿನಿಂದ

---

* ಒಳ್ಳೆಯ ಜ್ಞಾನವನ್ನು ಕೊಡತಕ್ಕವನೂ, ದೇವ-ಮನುಷ್ಯಾದಿ ನಾಮ-ರೂಪಾತ್ಮಕ ವಾದ ಪ್ರಪಂಚವನ್ನೇ ಶರೀರವನ್ನಾಗಿ ಉಳ್ಳವನೂ, ಪ್ರಕೃತಿನಿರ್ಮಿತವಾಗಿ ಭೋಗ್ಯವಾಗಿ ತೋರಿಬರುತ್ತಿರುವ ಈ ಜಗತ್ತಿನ ಆಕಾರವುಳ್ಳವನೂ ಆಗಿರುವ ನಿನಗೆ ನಮಸ್ಕಾರವು. (ವೀರರಾಘವೀಯ)

ಯಾವನು ತನ್ನ ರೂಪವಾಗಿರುವ ಈ ಜಗತ್ತನ್ನು 'ಇದು ನನ್ನ ಆಶ್ರಯದಿಂದಿರಲಿ'– ಎಂದು ತನ್ನ ಸಂಕಲ್ಪದಿಂದ ಸೃಷ್ಟಿಮಾಡಿದನೋ ಅಂತಹ ನಿನಗೆ ನಮಸ್ಕಾರವು. ' ವಿಶ್ವಂ ಸತ್ಯಂ' ಮುಂತಾದ ಶ್ರುತಿಗಳಂತೆ ಪ್ರಪಂಚವು ಪ್ರವಾಹರೂಪದಿಂದ ನಿತ್ಯವಾಗಿದೆಯೇ ಹೊರತು ಮಿಥ್ಯೆಯಲ್ಲ. (ವಿಜಯಧ್ವಜೀಯ)

ಈ ಪ್ರಪಂಚವು ನಿನ್ನ ರೂಪವೇ ಆಗಿದೆ. ಆದರೆ ಇದು ಮಾಯೆಯಿಂದ ಕಲ್ಪಿತವಾದುದೇ ಹೊರತು ನಿನ್ನ ಸ್ವರೂಪಭೂತವಲ್ಲ. ನಾನಾರೂಪಗಳಿಂದ ತೋರುತ್ತಿರುವ ಇದು ವಸ್ತು ಸ್ವರೂಪವೇ ಆಗಿದೆ. ಆದರೆ ಸರಿಯಾಗಿ ತಿಳಿಯುವುದಕ್ಕೆ ಆಗುವುದಿಲ್ಲವಾದುದರಿಂದ ಇದಕ್ಕೆ ಎಣಿಕೆಯಿಲ್ಲ. (ಸಾರಾರ್ಥದರ್ಶಿನೀ) (ಶ್ಲೋಕ ೩೧)

ಹುಟ್ಟುವ ಕ್ರಿಮಿ-ಕೀಟಾದಿಗಳು, ಮೊಟ್ಟೆಯಿಂದ ಹುಟ್ಟುವ ಪಕ್ಷಿ ಮುಂತಾದುವುಗಳು, ಭೂಮಿಯನ್ನು ಭೇದಿಸಿಕೊಂಡು ಬರುವ ಗಿಡ-ಮರ-ಬಳ್ಳಿ ಮುಂತಾದುವುಗಳು, ದೇವತೆಗಳು, ಋಷಿಗಳು, ಪಿತೃಗಳು, ಇತರ ಭೂತಗಳು, ಇಂದ್ರಿಯಗಳು, ಸ್ವರ್ಗ, ಭೂಮಿ, ಪರ್ವತ, ನದಿ, ಸಮುದ್ರ, ದ್ವೀಪಗಳು, ಗ್ರಹಗಳು, ನಕ್ಷತ್ರಗಳು—ಮುಂತಾದ ಎಲ್ಲ ಹೆಸರುಗಳಿಂದ ಕರೆಯಲ್ಪಡುವವನು ನೀನೊಬ್ಬನೇ.

ಯಸ್ಮಿನ್ನಸಂಖ್ಯೇಯವಿಶೇಷನಾಮ-
ರೂಪಾಕೃತೌ ಕವಿಭಿಃ ಕಲ್ಪಿತೇಯಮ್ ।
ಸಂಖ್ಯಾ ಯಯಾ ತತ್ತ್ವದೃಶಾಪನೀಯತೇ
ತಸ್ಮೈ ನಮಃ ಸಾಂಖ್ಯನಿದರ್ಶನಾಯ ತೇ ಇತಿ ॥೩೩॥

ಲೆಕ್ಕವಿಲ್ಲದಷ್ಟು ವ್ಯತ್ಯಾಸಗಳನ್ನೂ, ನಾಮ-ರೂಪಗಳನ್ನೂ ಮತ್ತು ಆಕಾರಗಳನ್ನೂ ಹೊಂದಿರುವ ನಿನ್ನಲ್ಲಿ ಕಪಿಲರೇ ಮುಂತಾದ ಮಹರ್ಷಿ ಗಳಿಂದ ಕಲ್ಪಿತವಾದ ಇಪತ್ನಾಲ್ಕು ತತ್ತ್ವಗಳು (ಪ್ರಕೃತಿ, ಮಹತ್ತು, ಅಹಂಕಾರ, ಪಂಚತನ್ಮಾತ್ರೆಗಳು, ಇಂದ್ರಿಯಗಳು, ಪ್ರಾಣಗಳು ಮತ್ತು ಮನಸ್ಸು– ಎಂಬಿವೇ ತತ್ತ್ವಗಳು) ಯಾವ ತತ್ತ್ವಜ್ಞಾನದಿಂದ ನೀಗಿಸಲ್ಪಡುತ್ತದೆಯೋ– ಅಂತಹ ಸಾಂಖ್ಯಸಿದ್ಧಾಂತರೂಪಿಯಾದ ನಿನಗೆ ನಮಸ್ಕಾರವು."

ಉತ್ತರೇಷು ಚ ಕುರುಷು ಭಗವಾನ್ಯಜ್ಞಪುರುಷಃ ಕೃತವರಾಹರೂಪ ಆಸ್ತೇ ತಂ ತು ದೇವೀ ಹ್ಯೈಷಾ ಭೂಃ ಸಹ ಕುರುಭಿ-ರಸ್ಖಲಿತಭಕ್ತಿಯೋಗೇನೋಪಧಾವತಿ ಇಮಾಂ ಚ ಪರಮಾಮುಪ-ನಿಷದಮಾವರ್ತಯತಿ ॥೩೪॥

ಶ್ರೀಭಗವಂತನಾದ ಆ ಯಜ್ಞಪುರುಷನು ಉತ್ತರಕುರುದೇಶಗಳಲ್ಲಿ ವರಾಹರೂಪದಿಂದ ಬಿಜಯಮಾಡಿಸಿದ್ದಾನೆ. ಭೂದೇವಿಯು ನಿಶ್ಚಲವಾದ ಭಕ್ತಿಯೋಗದಿಂದ ಆ ಯಜ್ಞವರಾಹಸ್ವಾಮಿಯನ್ನು ಉಪಾಸನೆಮಾಡುತ್ತಾ ಈ ಮಂತ್ರವನ್ನು ಜಪಿಸುವಳು :

ಓಂ ನಮೋ ಭಗವತೇ ಮನ್ತ್ರತತ್ತ್ವಲಿಙ್ಗಾಯ ಯಜ್ಞಕ್ರತವೇ ಮಹಾಧ್ವರಾವಯವಾಯ ಮಹಾಪುರುಷಾಯ ನಮಃ ಕರ್ಮ- ಶುಕ್ಲಾಯ ತ್ರಿಯುಗಾಯ ನಮಸ್ತೇ ॥೩೫॥

"ಓ ಭಗವಂತನೇ! ನೀನು ಮಂತ್ರಗಳಿಂದ ತತ್ತ್ವಸ್ವರೂಪವಾಗಿ ಹುಡುಕಲ್ಪಡುತ್ತಿರುವ ಯಜ್ಞಕ್ರತುಸ್ವರೂಪನು. ಯಜ್ಞಕರ್ಮಗಳನ್ನೇ ಅವಯವಗಳನ್ನಾಗಿ ಹೊಂದಿರುವವನು. ಯಜ್ಞವನ್ನು ಅನುಷ್ಠಾನಮಾಡುವವನು. ಯುಗತ್ರಯಸ್ವರೂಪನು. ಇಂತಹ ಮಹಾಪುರುಷನಾದ ಶ್ರೀಯಜ್ಞವರಾಹಭಗವಂತನಿಗೆ ನಮಸ್ಕಾರವು.

ಯಸ್ಯ ಸ್ವರೂಪಂ ಕವಯೋ ವಿಪಶ್ಚಿತೋ
ಗುಣೇಷು ದಾರುಷ್ವಿವ ಜಾತವೇದಸಮ್ ।
ಮಥ್ನನ್ತಿ ಮಥ್ನಾ ಮನಸಾ ದಿದೃಕ್ಷವೋ
ಗೂಢಂ ಕ್ರಿಯಾರ್ಥೈರ್ನಮ ಈರಿತಾತ್ಮನೇ ॥೩೬॥

ಎಲೈ ವರಾಹನಾದ ಪರಮಾತ್ಮನೇ! ವಿದ್ವಾಂಸರಾಗಿ ತತ್ತ್ವಾನ್ವೇಷಣೆಯಲ್ಲಿ ನಿಷ್ಣಾತರಾಗಿರುವ ಜ್ಞಾನಿಗಳು–ಕರ್ಮಗಳಿಂದಲೂ ಮತ್ತು ಆ ಕರ್ಮಗಳ ಫಲಗಳಿಂದಲೂ ಯಾರಿಗೂ ತಿಳಿಯದಂತೆ ಮರೆಯಾಗಿರುವ ನಿನ್ನ ಸ್ವರೂಪವನ್ನು ಕಾಣಲು ಪ್ರಯತ್ನಿಸುತ್ತಾರೆ. ಕಾಷ್ಠಗಳನ್ನು ಕಡೆದು ಅಗ್ನಿಯನ್ನು ಪಡೆಯುವಂತೆ–ವಿವೇಕದಿಂದ ಕೂಡಿದ ಮನಸ್ಸಿನಿಂದ ದೇಹ, ಇಂದ್ರಿಯ–ಮುಂತಾದುವುಗಳನ್ನು ಧ್ಯಾನದಿಂದ ಕಡೆದು ನಿನ್ನ ರೂಪವನ್ನು ಕಾಣುವರು. ಹೀಗೆ ಭಕ್ತರಿಗೆ ಮಾತ್ರವೇ ನಿಜಸ್ವರೂಪವನ್ನು ತೋರಿಸುವ ನಿನಗೆ ನಮಸ್ಕಾರವು.

ದ್ರವ್ಯಕ್ರಿಯಾಹೇತ್ವಯನೇಶಕರ್ತೃಭಿ-
ರ್ಮಾಯಾಗುಣೈರ್ವಸ್ತುನಿರೀಕ್ಷಿತಾತ್ಮನೇ।
ಅನ್ವೀಕ್ಷಯಾಙ್ಗಾತಿಶಯಾತ್ಮಬುದ್ಧಿಭಿ-
ರ್ನಿರಸ್ತಮಾಯಾಕೃತಯೇ ನಮೋ ನಮಃ ॥೩೭॥

ಶಬ್ದವೇ ಮುಂತಾದ ವಿಷಯಗಳು, ಕಣ್ಣೇ ಮುಂತಾದ ಇಂದ್ರಿಯ ಗಳ ವ್ಯಾಪಾರಗಳು, ಆ ಇಂದ್ರಿಯಗಳ ದೇವತೆಗಳು, ಶರೀರ, ಕಾಲ, ಅಹಂಕಾರ– ಇವುಗಳೇ ಮುಂತಾದ ಕಾರ್ಯಗಳುಳ್ಳ ಮಾಯಾಗುಣಗಳಿಂದ ನಿನ್ನ ಸ್ವರೂಪವು ತೋರುವುದು. ಆದರೆ ತತ್ತ್ವವಿಚಾರದಿಂದಲೂ, ಯೋಗಾನುಷ್ಠಾನದಿಂದಲೂ ನಿಶ್ಚಿತವಾದ ಬುದ್ಧಿಯುಳ್ಳ ಜ್ಞಾನಿಗಳು ಈ

ಆಕಾರಗಳನ್ನು ಬಿಟ್ಟು ನಿನ್ನ ನಿಜಸ್ವರೂಪವನ್ನು ತಿಳಿಯುವರು. ಇಂತಹ ನಿನಗೆ ನಮಸ್ಕಾರವು.

ಕರೋತಿ ವಿಶ್ವಸ್ಥಿತಿಸಂಯಮೋದಯಂ
ಯಸ್ಯೇಪ್ಸಿತಂ ನೇಪ್ಸಿತಮೀಕ್ಷಿತುರ್ಗುಣೈಃ ।
ಮಾಯಾ ಯಥಾಯೋ ಭ್ರಮತೇ ತದಾಶ್ರಯಂ
ಗ್ರಾವ್ಣೋ ನಮಸ್ತೇ ಗುಣಕರ್ಮಸಾಕ್ಷಿಣೇ ॥೩೮॥

ಸರ್ವಕ್ಕೂ ಸಾಕ್ಷಿಯಾಗಿರುವ ನಿನ್ನ ಸೃಷ್ಟಿಯೇ ಮುಂತಾದ ಸಂಕಲ್ಪವು–ಜೀವರುಗಳು ಕರ್ಮಫಲಗಳನ್ನು ಭೋಗಿಸುವುದಕ್ಕೋಸ್ಕರವೇ ಹೊರತು ಸ್ವಾರ್ಥಕ್ಕೋಸ್ಕರ ಇಲ್ಲ. ಮಾಯೆ ಎಂಬುದು ಜಡವಾದರೂ ನಿನ್ನ ಸಾನ್ನಿಧ್ಯವನ್ನು ಪಡೆದು–ಸೂಜಿಗಲ್ಲು ತನ್ನ ಶಕ್ತಿಯಿಂದ ಕಬ್ಬಿಣವನ್ನು ಆಡಿಸುವಂತೆ–ತನ್ನ ಗುಣಗಳಿಂದ ಜಗತ್ತಿನ ಸೃಷ್ಟಿಯೇ ಮುಂತಾದ ಕಾರ್ಯಗಳನ್ನು ನಡೆಸುತ್ತಿದೆ. ಹೀಗೆ ಎಲ್ಲರ ಮನಸ್ಸುಗಳಿಗೂ, ಗುಣಗಳಿಗೂ, ಕರ್ಮಗಳಿಗೂ ಸಾಕ್ಷಿಯಾಗಿರುವ ನಿನಗೆ ಅನಂತ ನಮಸ್ಕಾರಗಳು.

ಪ್ರಮಥ್ಯ ದೈತ್ಯಂ ಪ್ರತಿವಾರಣಂ ಮೃಧೇ
ಯೋ ಮಾಂ ರಸಾಯಾ ಜಗದಾದಿಸೂಕರಃ ।
ಕೃತ್ವಾಗ್ರದಂಷ್ಟ್ರೇ ನಿರಗಾದುದನ್ವತಃ
ಕ್ರೀಡನ್ನಿವೇಭಃ ಪ್ರಣತಾಸ್ಮಿ ತಂ ವಿಭುಮಿತಿ ॥೩೯॥

ಜಗತ್ತಿಗೆ ಕಾರಣನಾದ ನೀನು ನಿನ್ನ ಕೋರೆದಾಡೆಯ ತುದಿಯಲ್ಲಿ ನನ್ನನ್ನೆತ್ತಿಕೊಂಡು ಪಾತಾಳದಿಂದ ಹೊರಬಂದು–ಪ್ರಳಯಮಹಾಸಮುದ್ರ ದಿಂದ ಮತ್ತೇರಿದ ಸಲಗದಂತೆ ಯುದ್ಧಕ್ಕೆ ಬಂದ ಹಿರಣ್ಯಾಕ್ಷನೆಂಬ ದೈತ್ಯನನ್ನು ಸಂಹರಿಸಿ ನನ್ನನ್ನು ಉದ್ಧರಿಸಿದೆ. ಇಂತಹ ವರಾಹಮೂರ್ತಿಯಾದ ನಿನಗೆ ನಮಸ್ಕಾರವು."

ಹೀಗೆ ಭೂದೇವಿಯು ಉತ್ತರಕುರುವರ್ಷದಲ್ಲಿ ವರಾಹಸ್ವಾಮಿಯನ್ನು ಸ್ತುತಿಸುತ್ತಿರುವಳು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಪಂಚಮಸ್ಕಂಧದ ೧೮ನೆಯ ಅಧ್ಯಾಯವು ಮುಗಿಯಿತು.

ಪಂಚಮಸ್ಕಂಧ ೧೯ನೆಯ ಅಧ್ಯಾಯ

ಕಿಂಪುರುಷವರ್ಷ ಮತ್ತು ಭಾರತವರ್ಷಗಳ ವರ್ಣನೆ

ಶ್ರೀಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಹೇಳುತ್ತಾರೆ :

ಕಿಮ್ಪುರುಷೇ ವರ್ಷೇ ಭಗವನ್ತಮಾದಿಪುರುಷಂ ಲಕ್ಷ್ಮಣಾಗ್ರಜಂ ಸೀತಾಭಿರಾಮಂ ರಾಮಂ ತಚ್ಚರಣಸಂನಿಕರ್ಷಾಭಿರತಃ ಪರಮ-ಭಾಗವತೋ ಹನುಮಾನ್ಸಹ ಕಿಮ್ಪುರುಷೈರವಿರತಭಕ್ತಿರುಪಾಸ್ತೇ ॥೧॥

"ಮಹಾರಾಜನೇ! ಕೇಳು. ಕಿಂಪುರುಷವರ್ಷದಲ್ಲಿ ಶ್ರೀಲಕ್ಷ್ಮಣನ ಅಣ್ಣನೂ, ಆದಿಪುರುಷನೂ, ಸೀತಾದೇವಿಯ ಹೃದಯಕ್ಕೆ ಅಭಿರಾಮನೂ ಆಗಿರುವ ಭಗವಂತನಾದ ಶ್ರೀರಾಮಚಂದ್ರನ ಅಡಿದಾವರೆಗಳ ಸಾನ್ನಿಧ್ಯದಲ್ಲಿ ಸದಾ ಆಸಕ್ತನಾಗಿರುವ ಪರಮಭಾಗವತೋತ್ತಮನಾದ ಆಂಜನೇಯನು ಇತರ ಕಿನ್ನರರಿಂದೊಡಗೂಡಿ ನಿಶ್ಚಲವಾದ ಭಕ್ತಿಭಾವದಿಂದ ಆ ಶ್ರೀರಾಮ ದೇವರನ್ನು ಉಪಾಸನೆಮಾಡುತ್ತಿರುವನು.

ಅಲ್ಲಿ ಇತರ ಗಂಧರ್ವಗಣಗಳೊಡನೆ ಆರ್ಷ್ಟಿಷೇಣನು ಪ್ರಭುವಾದ ಶ್ರೀರಾಮದೇವರ ಪರಮಕಲ್ಯಾಣಮಯವಾದ ಕಥೆಯನ್ನು ಗಾನಮಾಡು ತ್ತಿರುವನು. ಹನುಮಂತನು ಅದನ್ನು ಕೇಳಿ ಸವಿಯುತ್ತಾ ತಾನೂ ಆ ಮಂತ್ರ ವನ್ನು ಜಪಿಸುತ್ತಾ ಶ್ರೀರಾಮದೇವರನ್ನು ಹೀಗೆ ಸ್ತುತಿಸುತ್ತಿರುವನು :

ಓಂ ನಮೋ ಭಗವತೇ ಉತ್ತಮಶ್ಲೋಕಾಯ ನಮ ಆರ್ಯಲಕ್ಷಣಶೀಲವ್ರತಾಯ ನಮ ಉಪಶಿಕ್ಷಿತಾತ್ಮನ ಉಪಾಸಿತ-ಲೋಕಾಯ ನಮಃ ಸಾಧುವಾದನಿಕರ್ಷಣಾಯ ನಮೋ ಬ್ರಹ್ಮಣ್ಯ-ದೇವಾಯ ಮಹಾಪುರುಷಾಯ ಮಹಾರಾಜಾಯ ನಮ ಇತಿ ॥೩॥

"ಓಂಕಾರಸ್ವರೂಪನೂ–ಉತ್ತಮಕೀರ್ತಿಯೂ ಆಗಿರುವ ಭಗವಂತ ನಾದ ಶ್ರೀರಾಮಚಂದ್ರಮಹಾಪ್ರಭುವಿಗೆ ನಮಸ್ಕಾರವು. ಆರ್ಯರ ಲಕ್ಷಣ, ಶೀಲ ಮತ್ತು ವ್ರತಗಳಿಂದ ಸಂಪನ್ನನಾಗಿರುವ ಪ್ರಭುವಿಗೆ ನಮಸ್ಕಾರವು. ಪರಮಸಂಯಮದಿಂದ ಕೂಡಿದ ಚಿತ್ತವುಳ್ಳವನಾಗಿ ಲೋಕಾರಾಧನೆಯಲ್ಲಿ ತತ್ಪರನಾಗಿ, ಸಾಧುತ್ವಕ್ಕೆ ಒರೆಗಲ್ಲಾಗಿರುವ ಪ್ರಭುವಿಗೆ ನಮಸ್ಕಾರವು. ವೇದ, ತತ್ತ್ವ, ತಪಸ್ಸು ಎಂಬ ಬ್ರಹ್ಮಕ್ಕೂ ಮತ್ತು ಬ್ರಾಹ್ಮಣರಿಗೂ ಹಿತಕರನಾಗಿರುವ

ದೇವನಿಗೆ ನಮಸ್ಕಾರವು. ಮಹಾಪುರುಷನೂ, ಮಹಾರಾಜನೂ ಆದ ಶ್ರೀರಾಮಚಂದ್ರಮಹಾಪ್ರಭುವಿಗೆ ಮತ್ತೆ ಮತ್ತೆ ನಮಸ್ಕಾರಗಳು.

ಯತ್ತದ್ವಿಶುದ್ಧಾನುಭವಮಾತ್ರಮೇಕಂ
ಸ್ವತೇಜಸಾ ಧ್ವಸ್ತಗುಣವ್ಯವಸ್ಥಮ್ ।
ಪ್ರತ್ಯಕ್ಪ್ರಶಾನ್ತಂ ಸುಧಿಯೋಪಲಮ್ಭನಂ
ಹ್ಯನಾಮರೂಪಂ ನಿರಹಂ ಪ್ರಪದ್ಯೇ ॥೪॥

ಪರಿಶುದ್ಧಜ್ಞಾನಸ್ವರೂಪನೂ, ಅದ್ವಿತೀಯನೂ, ತ್ರಿಗುಣಾತೀತವಾದ ತನ್ನ ತೇಜಃಸ್ವರೂಪದಿಂದ ತ್ರಿಗುಣಕಾರ್ಯಗಳ ರಚನೆಯನ್ನು ತೊಡೆದು ಹಾಕಿದ ತುರೀಯನೂ, ಅಂತರಾತ್ಮನೂ, ಪ್ರಶಾಂತನೂ, ಶುದ್ಧವಾದ ಬುದ್ಧಿಯಿಂದಲೇ ಗ್ರಹಿಸಲ್ಪಡುವವನೂ, ನಾಮ-ರೂಪರಹಿತನೂ, ಅಹಂಭಾವ ರಹಿತನೂ ಆದ ನಿನ್ನನ್ನು ಶರಣುಹೊಂದುತ್ತೇನೆ.*

ಮರ್ತ್ಯಾವತಾರಸ್ತ್ವಿಹ ಮರ್ತ್ಯಶಿಕ್ಷಣಂ
ರಕ್ಷೋವಧಾಯೈವ ನ ಕೇವಲಂ ವಿಭೋಃ ।
ಕುತೋಽನ್ಯಥಾ ಸ್ಯಾದ್ರಮತಃ ಸ್ವ ಆತ್ಮನಃ
ಸೀತಾಕೃತಾನಿ ವ್ಯಸನಾನೀಶ್ವರಸ್ಯ ॥೫॥

ಪ್ರಭೋ! ನೀನು ಮನುಷ್ಯರೂಪದಲ್ಲಿ ಅವತಾರಮಾಡಿದುದು ಕೇವಲ ರಾಕ್ಷಸಸಂಹಾರಕ್ಕಷ್ಟೇ ಅಲ್ಲ. ಮನುಷ್ಯರಿಗೆ ಶಿಕ್ಷಣನೀಡುವುದೇ ನಿನ್ನ ಆ ಮನುಷ್ಯಾವತಾರದ ಮುಖ್ಯವಾದ ಉದ್ದೇಶ. ಇಲ್ಲದಿದ್ದರೆ ಸ್ವರೂಪದ ಆನಂದದಲ್ಲಿಯೇ ಸದಾ ರಮಿಸುತ್ತಿರುವ ಆನಂದಮಯನೂ, ಸರ್ವೇಶ್ವರನೂ ಆದ ನಿನಗೆ ಸೀತಾದೇವಿಯ ಅಗಲಿಕೆಯ ದುಃಖ ಏತಕ್ಕಾಗಿ ಬರುತ್ತಿತ್ತು?

ನ ವೈ ಸ ಆತ್ಮಾತ್ಮವತಾಂ ಸುಹೃತ್ತಮಃ
ಸಕ್ತಸ್ತ್ರಿಲೋಕ್ಯಾಂ ಭಗವಾನ್ವಾಸುದೇವಃ ।
ನ ಸ್ತ್ರೀಕೃತಂ ಕಶ್ಮಲಮಶ್ನುವೀತ
ನ ಲಕ್ಷ್ಮಣಂ ಚಾಪಿ ವಿಹಾತುಮರ್ಹತಿ ॥೬॥

---

* ಧ್ವಸ್ತಗುಣವ್ಯವಸ್ಥಂ –ಎಂಬ ಪದಕ್ಕೆ ತ್ರಿಗುಣಗಳ ಕಾರ್ಯಗಳಾದ ಜಾಗ್ರತ್, ಸ್ವಪ್ನ, ಸುಷುಪ್ತಿಗಳೆಂಬ ಮೂರು ಅವಸ್ಥೆಗಳನ್ನು ಅಳಿಸಿಹಾಕಿದ ತುರೀಯನು–ಎಂದೂ ಅರ್ಥೈಸಬಹುದು. (ಶ್ಲೋಕ ೪)

ನೀನು ಆತ್ಮವಂತರಾದ ಧೀರಪುರುಷರಿಗೆಲ್ಲಾ ಆತ್ಮನಾದವನು. ಸರ್ವಭೂತಗಳಿಗೂ ಮಿತ್ರತಮ-ಪ್ರಿಯತಮನಾದ ಭಗವಂತನಾದ ವಾಸು ದೇವನು. ಮೂರು ಲೋಕಗಳಲ್ಲಿ ಯಾವುದರಲ್ಲೂ ಆಸಕ್ತಿಯಿಲ್ಲದವನು. ಇಂತಹ ನಿನಗೆ ಸ್ತ್ರೀಸಂಬಂಧವಾದ ದುಃಖವಾಗಲೀ, ಪ್ರಾಣಪ್ರಿಯನಾದ, ಧರ್ಮಿಷ್ಠನಾದ ತಮ್ಮ ಲಕ್ಷ್ಮಣನನ್ನು ತೊರೆಯುವ ಪ್ರಸಂಗವಾಗಲೀ ಹೇಗೆ ಒದಗುತ್ತಿದ್ದುವು? ಮನುಷ್ಯಶಿಕ್ಷಣದ ಉದ್ದೇಶವೇ ಇದಕ್ಕೆಲ್ಲಾ ಮುಖ್ಯ ಕಾರಣವು.*

ನ ಜನ್ಮ ನೂನಂ ಮಹತೋ ನ ಸೌಭಗಂ
ನ ವಾಙ್ನ ಬುದ್ಧಿರ್ನಾಕೃತಿಸ್ತೋಷಹೇತುಃ ।
ತೈರ್ಯದ್ವಿಸೃಷ್ಟಾನಪಿ ನೋ ವನೌಕಸ-
ಶ್ಚಕಾರ ಸಖ್ಯೇ ಬತ ಲಕ್ಷ್ಮಣಾಗ್ರಜಃ ॥೭॥

ಓ ಭಕ್ತವತ್ಸಲನಾದ ಲಕ್ಷ್ಮಣಾಗ್ರಜನೇ! ನೀನು ಭಕ್ತಿಗೆ ಮಾತ್ರವೇ ವಶನಾಗುವವನು. ಉತ್ತಮವಂಶದಲ್ಲಿ ಜನಿಸಿದವನೆಂಬ ಕಾರಣದಿಂದಾ ಗಲೀ, ಅಂದ-ಚೆಂದ-ಸೌಂದರ್ಯಗಳುಳ್ಳವನೆಂಬ ನಿಮಿತ್ತದಿಂದಾಗಲೀ,

---

* ಶ್ರೀಭಗವಂತನು ಎಲ್ಲೆಲ್ಲಿಯೂ ಇದ್ದು ಎಲ್ಲವೂ ಸರ್ವಭೂತನಿವಾಸಿಯಾಗಿರು ವುದರಿಂದ ವಾಸುದೇವನೆನಿಸುತ್ತಾನೆ.

* **'ಸರ್ವತ್ರಾಸೌ ಸಮಸ್ತಶ್ಚ ವಸತ್ಯತ್ರೇತಿ ವೈ ಯತಃ । ತತಸ್ಸ ವಾಸುದೇವೇತಿ ವಿದ್ವದ್ಭಿಃಪರಿಕೀರ್ತಿತಃ ॥** 'ಸರ್ವರ ಹೃದಯಗಳಲ್ಲಿ ನೆಲೆಗೊಂಡು ಪ್ರೇರಣೆಮಾಡು ವುದರಿಂದ ಶ್ರೀಭಗವಂತನನ್ನು ಜಗತ್ಸ್ವರೂಪನೆಂದು ಕರೆದಿದೆ. (ವೀರರಾಘವೀಯ)

ಶ್ರೀಭಗವಂತನು ಎಲ್ಲರಿಗೂ ಆತ್ಮನಾಗಿದ್ದರೂ ಆತನನ್ನು ಧೀರರಾದ ಆತ್ಮವಂತರಿಗೆ ಮಾತ್ರ ಆತ್ಮವನ್ನಾಗಿ ಇಲ್ಲಿ ಏಕೆ ಹೇಳಿದೆ? ಎಂದರೆ : ಆತನು ಸರ್ವರಿಗೂ ಆತ್ಮ ನೆಂಬುದನ್ನು ಧೀರರಾದ ಆತ್ಮವಂತರಾದ ಯೋಗಿಗಳು ಮಾತ್ರವೇ ಅನುಭವಿಸಿ ತಿಳಿದಿರುವವುದರಿಂದ, **'ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷತ್' 'ಇತಿ ಶುಶ್ರುಮ ಧೀರಾಣಾಂ ಯೇನ ಸ್ತದ್ವಿಚಚಕ್ಷಿರೇ'**

ಶ್ರೀರಾಮನು ಪ್ರಾಣಪ್ರಿಯನಾದ, ಧರ್ಮಿಷ್ಠತಮನಾದ, ತಮ್ಮನಾದ ಲಕ್ಷ್ಮಣನನ್ನು ತೊರೆದದ್ದು ಮನುಷ್ಯಶಿಕ್ಷಣಕ್ಕಾಗಿಯೇ. ಉತ್ತರರಾಮಾಯಣದಲ್ಲಿ ಹೇಳುವ ಕಥಾಪ್ರಸಂಗವನ್ನು ಇಲ್ಲಿ ಸ್ಮರಿಸಬೇಕು. ತಾನು ಈ ದೇವದೂತನೊಡನೆ ಏಕಾಂತ ದಲ್ಲಿರುವಾಗ ಯಾರು ಒಳಗೆ ಬಂದರೂ ಅವರಿಗೆ ಮರಣದಂಡನೆ–ಎಂಬುದು ರಾಮ

ಮಾತಿನ ಜಾಣ್ಮೆ ಅಥವಾ ಅದ್ಭುತವಾದ ಬುದ್ಧಿಶಕ್ತಿ ಅಥವಾ ಆಕಾರವಿದೆ ಯೆಂಬ ಕಾರಣದಿಂದಾಗಲೀ–ಒಲಿಯುವವನಲ್ಲ. ಇದನ್ನು ತೋರಿಸುವುದ ಕ್ಕಾಗಿಯೇ ನೀನು ಮೇಲೆ ಹೇಳಿದ ಯಾವ ಗುಣಗಳೂ ಇಲ್ಲದೇ ಇರುವ ವನವಾಸಿಗಳಾದ ನಮ್ಮಲ್ಲಿ ಸ್ನೇಹವನ್ನು ಬೆಳೆಸಿದೆ.

ಸುರೋಽಸುರೋ ವಾಪ್ಯಥ ವಾನರೋ ನರಃ
ಸರ್ವಾತ್ಮನಾ ಯಃ ಸುಕೃತಜ್ಞಮುತ್ತಮಮ್ ।
ಭಜೇತ ರಾಮಂ ಮನುಜಾಕೃತಿಂ ಹರಿಂ
ಯ ಉತ್ತರಾನನಯತ್ಕೋಸಲಾನ್ದಿವಮಿತಿ ॥೮॥

ದೇವನಾಗಲೀ, ಅಸುರನಾಗಲೀ ಅಥವಾ ನರನಾಗಲೀ–ಯಾವನೇ ಆದರೂ ಆಶ್ರಿತವತ್ಸಲನೂ, ಕೃತಜ್ಞನೂ, ಉತ್ತಮನೂ ಆದ ನಿನ್ನನ್ನೇ ಭಜಿಸಬೇಕು, ರಾಮಚಂದ್ರ! ಏಕೆಂದರೆ : ನೀನು ಅತ್ಯಲ್ಪಸೇವೆ ಹಾಗೂ ಉಪಕಾರಗಳನ್ನೇ ಬಹಳ ಹೆಚ್ಚೆಂದು ಭಾವಿಸುವವನು. ನರರೂಪದಲ್ಲಿರುವ ಸಾಕ್ಷಾನ್ನಾರಾಯಣನಾದ ನೀನು ಪರಂಧಾಮಕ್ಕೆ ತೆರಳುವಾಗ ಉತ್ತರ ಕೋಸಲದೇಶದಲ್ಲಿದ್ದ ಸಮಸ್ತರನ್ನೂ ಸಾಂತಾನಿಕವೆಂಬ ದಿವ್ಯಧಾಮಕ್ಕೆ ಕೊಂಡೊಯ್ದವನಲ್ಲವೇ ನೀನು?"

ಭಾರತೇಽಪಿ ವರ್ಷೇ ಭಗವಾನ್ನರನಾರಾಯಣಾಖ್ಯ ಆಕಲ್ಪಾನ್ತ-ಮುಪಚಿತಧರ್ಮಜ್ಞಾನವೈರಗ್ಯೈಶ್ವರ್ಯೋಪಶಮೋಪರಮಾತ್ಮೋ-ಪಲಮ್ಭನಮನುಗ್ರಹಾಯಾತ್ಮವತಾಮನುಕಮ್ಪಯಾ ತಪೋಽ-ವ್ಯಕ್ತಗತಿಶ್ಚರತಿ ॥೯॥

ಭಾರತವರ್ಷದಲ್ಲಿಯೂ ಶ್ರೀಭಗವಂತನು ಕರುಣೆಯಿಂದ ತನ್ನ

ದೇವರ ಆಜ್ಞೆಯಾಗಿತ್ತು. ಆದರೆ ಆಗ ರಭಸದಿಂದ ರಾಜದ್ವಾರಕ್ಕೆ ಆಗಮಿಸಿದ ದುರ್ವಾಸರ ಸೂಚನೆಯನ್ನು ಕೊಡುವುದಕ್ಕಾಗಿ ಲಕ್ಷ್ಮಣನು ಒಳಗೆ ಹೋಗಲೇ ಬೇಕಾಯಿತು. ಆಗ ಚಿಂತೆಗೊಳಗಾದ ಶ್ರೀರಾಮನು ಸತ್ಯವನ್ನು ಉಳಿಸಿಕೊಳ್ಳುವುದ ಕ್ಕಾಗಿ ವಸಿಷ್ಠರ ಸಲಹೆಯಂತೆ ಲಕ್ಷ್ಮಣನನ್ನು ತೊರೆಯಬೇಕಾಯಿತು. ಶ್ರೀರಾಮ ದೇವರ ಕೃತಜ್ಞತೆ-ಉಪಕಾರಸೇವಾಸ್ಮರಣೆಗಳಿಗೆ ಆತನು ಆಂಜನೇಯನಿಗೆ ಹೇಳಿದ ಈ ಶ್ಲೋಕವನ್ನು ಗಮನಿಸಬಹುದು. 'ಮಯ್ಯೇವ ಜೀರ್ಣತಾಂ ಯಾತು ಯತ್ತ್ವಯೋಪಕೃತಂ ಕಪೇ। ನರಃ ಪ್ರತ್ಯುಪಕಾರಾರ್ಥೀ ವಿಪತ್ತಿಮಭಿಕಾಂಕ್ಷತಿ ॥'

ಸಾನ್ನಿಧ್ಯವನ್ನು ದಯಪಾಲಿಸಿದ್ದಾನೆ. ಇಲ್ಲಿ ಆತನು ನರ-ನಾರಾಯಣರೂಪ ದಲ್ಲಿ ಅವತರಿಸಿ ಸಂಯಮಶೀಲರಾದ ಮನುಷ್ಯರ ಮೇಲೆ ಅನುಗ್ರಹವನ್ನು ತೋರುವುದಕ್ಕಾಗಿ ಕಲ್ಪದ ಕೊನೆಯವರೆಗೂ ಅವ್ಯಕ್ತರೂಪದಿಂದ ತಪಸ್ಸ ನ್ನಾಚರಿಸುತ್ತಿದ್ದಾನೆ. ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ, ಇಂದ್ರಿಯ ಜಯ, ಶಾಂತಿಗಳು ಉತ್ತರೋತ್ತರವಾಗಿ ಅಭಿವೃದ್ಧಿಹೊಂದಿ ಆತ್ಮಸಾಕ್ಷಾ ತ್ಕಾರವನ್ನು ದೊರಕಿಸುವ ತಪಸ್ಸಿನ ಆದರ್ಶವನ್ನು ತೋರುತ್ತಿದ್ದಾನೆ.

ತಂ ಭಗವಾನ್ನಾರದೋ ವರ್ಣಾಶ್ರಮವತೀಭಿರ್ಭಾರತೀಭಿಃ ಪ್ರಜಾಭಿರ್ಭಗವತ್ಪ್ರೋಕ್ತಾಭ್ಯಾಂ ಸಾಂಖ್ಯಯೋಗಾಭ್ಯಾಂ ಭಗವ-ದನುಭಾವೋಪವರ್ಣನಂ ಸಾವರ್ಣೇರುಪದೇಕ್ಷ್ಯಮಾಣಃ ಪರಮ-ಭಕ್ತಿಭಾವೇನೋಪಸರತಿ ಇದಂ ಚಾಭಿಗೃಣಾತಿ ॥೧೦॥

ಅಲ್ಲಿ ಭಗವಂತರಾದ ನಾರದಮಹಾಮುನಿಗಳು ಶ್ರೀಭಗವಂತನು ತಾನೇ ಉಪದೇಶಮಾಡಿದ ಸಾಂಖ್ಯ ಮತ್ತು ಯೋಗಶಾಸ್ತ್ರಗಳೊಡನೆ ಶ್ರೀಭಗವಂತನ ಮಹಿಮೆಯನ್ನು ಪ್ರಕಟಪಡಿಸುವ ಶ್ರೀಪಾಂಚರಾತ್ರಾಗಮ ವನ್ನು ಸಾವರ್ಣಿಮನುವಿಗೆ ಉಪದೇಶಮಾಡುತ್ತಾ–ಅತ್ಯಂತಭಕ್ತಿಯಿಂದ ವರ್ಣಾಶ್ರಮಧರ್ಮಗಳನ್ನು ಪಾಲಿಸುತ್ತಿರುವ ಭಾರತವರ್ಷದ ಪ್ರಜೆ ಗಳಿಂದೊಡಗೂಡಿ ಶ್ರೀಭಗವಂತನಾದ ನರ-ನಾರಾಯಣಸ್ವಾಮಿಯನ್ನು ಉಪಾಸನೆಮಾಡುತ್ತಿರುತ್ತಾರೆ. ಈ ಮಂತ್ರವನ್ನು ಜಪಿಸುತ್ತಾ ಶ್ರೀಭಗವಂತನ ಸ್ತೋತ್ರವನ್ನು ಹಾಡುತ್ತಿರುತ್ತಾರೆ :

ಓಂ ನಮೋ ಭಗವತೇ ಉಪಶಮಶೀಲಾಯೋಪರತಾನಾ-ತ್ಮ್ಯಾಯಾ ನಮೋಽಕಿಂಚನವಿತ್ತಾಯ ಋಷಿಋಷಭಾಯ ನರ-ನಾರಾಯಣಾಯ ಪರಮಹಂಸಪರಮಗುರವೇ ಆತ್ಮಾರಾಮಾಧಿಪತಯೇ ನಮೋ ನಮ ಇತಿ ॥೧೧॥

"ಎಲೈ ಹನುಮನೇ! ನೀನು ನನಗೆ ಮಾಡಿರುವ ಉಪಕಾರಗಳೆಲ್ಲವೂ ನನ್ನಲ್ಲಿಯೇ ಜೀರ್ಣವಾಗಲಿ. ಏಕೆಂದರೆ : ಪುರುಷನು ಪ್ರತ್ಯುಪಕಾರಮಾಡಲು ಬಯಸಬಾರದು." ಹೇಗೂ ಒಂದು ಸಣ್ಣ ಉಪಕಾರಮಾಡಿದರೂ ಅದರಿಂದ ಸಂತೋಷಪಡುವುದು ಶ್ರೀರಾಮನ ಸ್ವಭಾವ. '**ಕಥಂಚಿದುಪಕಾರೇಣ ಕೃತೇನೈಕೇನ ತುಷ್ಯತಿ**'

(ಉತ್ತರಕಾಂಡ) (ಶ್ಲೋಕ ೬)

“ಪ್ರಶಾಂತಮೂರ್ತಿಯೂ, ಅಹಂಕಾರರಹಿತನೂ, ವೈರಾಗ್ಯವಂತರಾದ ದರಿದ್ರರಿಗೆ ನಿಧಿಯೂ, ಋಷಿಪುಂಗವನೂ, ಪರಮಹಂಸರ ಪರಮಗುರುವೂ, ಆತ್ಮಾರಾಮರಿಗೆ ಅಧೀಶ್ವರನೂ ಆಗಿರುವ ಭಗವಂತನಾದ ನರ-ನಾರಾಯಣಸ್ವಾಮಿಗೆ ನಮೋ ನಮಃ.

ಕರ್ತಾಸ್ಯ ಸರ್ಗಾದಿಷು ಯೋ ನ ಬಧ್ಯತೇ
ನ ಹನ್ಯತೇ ದೇಹಗತೋಽಪಿ ದೈಹಿಕೈಃ ।
ದ್ರಷ್ಟುರ್ನ ದೃಗ್ಯಸ್ಯ ಗುಣೈರ್ವಿದೂಷ್ಯತೇ
ತಸ್ಮೈ ನಮೋಽಸಕ್ತವಿವಿಕ್ತಸಾಕ್ಷಿಣೇ ॥೧೨॥

ಯಾವನು ಜಗತ್ತಿನ ಸೃಷ್ಟಿಯೇ ಮುಂತಾದುವುಗಳನ್ನು ಮಾಡುತ್ತಿದ್ದರೂ ‘ತಾನು ಅವುಗಳ ಕರ್ತೃವು’ ಎಂಬ ಅಭಿಮಾನಕ್ಕೆ ಕಟ್ಟುಬೀಳುವುದಿಲ್ಲವೋ, ದೇಹದಲ್ಲಿಯೇ ಇದ್ದರೂ (ಹಸಿವು-ಬಾಯಾರಿಕೆಗಳೇ ಮುಂತಾದ) ದೇಹದ ಧರ್ಮಗಳಿಗೆ ವಶನಾಗುವುದಿಲ್ಲವೋ, ಎಲ್ಲವನ್ನೂ ನೋಡುತ್ತಿರುವವನು (ದ್ರಷ್ಟಾ) ಆಗಿದ್ದರೂ ದೃಶ್ಯಪದಾರ್ಥಗಳ ಗುಣ-ದೋಷಗಳಿಂದ ಲಿಪ್ತನಾಗುವುದಿಲ್ಲವೋ–ಅಂತಹ ನಿಸ್ಸಂಗನೂ, ಸಾಕ್ಷಿ ಸ್ವರೂ ಪನೂ ಆಗಿರುವ ನರ-ನಾರಾಯಣನಿಗೆ ಮತ್ತೆ ಮತ್ತೆ ನಮಸ್ಕಾರಗಳು.

ಇದಂ ಹಿ ಯೋಗೇಶ್ವರ ಯೋಗನೈಪುಣಂ
ಹಿರಣ್ಯಗರ್ಭೋ ಭಗವಾಞ್ಜಗಾದ ಯತ್ ।
ಯದನ್ತಕಾಲೇ ತ್ವಯಿ ನಿರ್ಗುಣೇ ಮನೋ
ಭಕ್ತ್ಯಾದಧೀತೋಜ್ಝಿತದುಷ್ಕಲೇವರಃ ॥೧೩॥

ಎಲೈ ಯೋಗೇಶ್ವರನೇ! ಭಗವಂತರಾದ ಹಿರಣ್ಯಗರ್ಭ (ಬ್ರಹ್ಮ) ದೇವರು ಈ ಒಂದು ವಿಷಯವನ್ನು ಯೋಗದ ಮಹಾಕುಶಲತೆಯೆಂದು ಸಾರಿದ್ದಾರೆ. ಅದೇನೆಂದರೆ : ಮನುಷ್ಯನು ತನ್ನ ಕೊನೆಗಾಲದಲ್ಲಿ ದೇಹಾಭಿಮಾನವನ್ನು ಬಿಟ್ಟು ಭಕ್ತಿಪೂರ್ವಕವಾಗಿ ಪ್ರಾಕೃತಗುಣರಹಿತವಾದ ನಿನ್ನ ಸ್ವರೂಪದಲ್ಲಿ ಮನಸ್ಸನ್ನು ಧರಿಸಬೇಕು–ಎಂಬುದೇ ಆಗಿದೆ.

ಯಥೈಹಿಕಾಮುಷ್ಮಿಕಕಾಮಲಮ್ಪಟಃ
ಸುತೇಷು ದಾರೇಷು ಧನೇಷು ಚಿನ್ತಯನ್ ।

ಶಙ್ಕೇತ ವಿದ್ವಾನ್ಕುಕಲೇವರಾತ್ಯಯಾ
ದ್ಯಸ್ತಸ್ಯ ಯತ್ನಃ ಶ್ರಮ ಏವ ಕೇವಲಮ್ ॥೧೪॥

ಇಹಲೋಕ-ಪರಲೋಕಗಳ ಭೋಗಗಳಲ್ಲಿ ಲಂಪಟನಾಗಿರುವ ಮೂಢಮನುಷ್ಯನು–ಮಕ್ಕಳು, ಮಡದಿ, ಹಣ–ಮುಂತಾದುವುಗಳನ್ನೇ ಚಿಂತಿಸುತ್ತಾ ಮೃತ್ಯುವಿಗೆ ಹೆದರುವಂತೆ–ವಿದ್ವಾಂಸನೂ ಕೂಡ 'ಈ ನಿಂದ್ಯವಾದ ದೇಹವನ್ನು ಬಿಟ್ಟು ಹೋಗಬೇಕಲ್ಲಾ'–ಎಂದು ಹೆದರಿದರೆ, ಆತನು ಜ್ಞಾನವನ್ನು ಪಡೆಯಲು ಮಾಡಿದ ಪ್ರಯತ್ನಗಳೆಲ್ಲವೂ ವ್ಯರ್ಥಶ್ರಮವೇ ಆಗುವುದು.

ತನ್ನಃ ಪ್ರಭೋ ತ್ವಂ ಕುಕಲೇವರಾರ್ಪಿತಾಂ
ತ್ವನ್ಮಾಯಯಾಹಂಮಮತಾಮಧೋಕ್ಷಜ ।
ಭಿನ್ದ್ಯಾಮ ಯೇನಾಶು ವಯಂ ಸುದುರ್ಭಿದಾಂ
ವಿಧೇಹಿ ಯೋಗಂ ತ್ವಯಿ ನಃ ಸ್ವಭಾವಮಿತಿ ॥೧೫॥

ಎಲೈ ಪ್ರಭುವೇ! ಅಧೋಕ್ಷಜನೇ! ಆದುದರಿಂದ ಯಾವುದರಿಂದ ಈ ಕೆಟ್ಟ ದೇಹದಲ್ಲಿ ನಿನ್ನ ಮಾಯೆಯಿಂದ ಬೇರುಬಿಟ್ಟುಕೊಂಡಿರುವ ಮತ್ತು ಭೇದಿಸಲು ಅತಿಕಷ್ಟವಾಗಿರುವ ಅಹಂಕಾರ-ಮಮಕಾರಗಳನ್ನು ಒಡನೆಯೇ ಕತ್ತರಿಸಿಹಾಕಲು ನಮಗೆ ಸಾಧ್ಯವಾಗುವುದೋ–ಅಂತಹ ನಿನ್ನಲ್ಲಿ ಸಹಜ ಪ್ರೇಮರೂಪವಾದ ಭಕ್ತಿಯೋಗವನ್ನು ನಮಗೆ ದಯಪಾಲಿಸಯ್ಯಾ!"

ಎಲೈ ರಾಜೇಂದ್ರನೇ! ಈ ಭಾರತವರ್ಷದಲ್ಲಿಯೂ ಕೂಡ ಬಹುಸಂಖ್ಯೆಯ ಪರ್ವತಗಳೂ, ನದಿಗಳೂ ಬೆಳಗುತ್ತಿವೆ. ಉದಾಹರಣೆಗೆ : ಮಲಯ, ಮಂಗಲಪ್ರಸ್ಥ, ಮೈನಾಕ, ತ್ರಿಕೂಟ, ಋಷಭ, ಕೂಟಕ, ಕೊಲ್ಲಕ, ಸಹ್ಯ, ದೇವಗಿರಿ, ಋಷ್ಯಮೂಕ, ಶ್ರೀಶೈಲ, ವೇಂಕಟ, ಮಹೇಂದ್ರ, ವಾರಿಧಾರ, ವಿಂಧ್ಯ, ಶುಕ್ತಿಮಾನ್, ಋಕ್ಷಗಿರಿ, ಪಾರಿಯಾತ್ರ, ದ್ರೋಣ, ಚಿತ್ರಕೂಟ, ಗೋವರ್ಧನ, ರೈವತಕ, ಕಕುಭ, ನೀಲ, ಗೋಕಾಮುಖ, ಇಂದ್ರಕೀಲ ಮತ್ತು ಕಾಮಗಿರಿಪರ್ವತಗಳೂ–ಇನ್ನೂ ನೂರಾರು ಸಾವಿರಾರು ಗಿರಿಗಳೂ ಮತ್ತು ಅವುಗಳ ತಪ್ಪಲುಗಳಿಂದ ಹುಟ್ಟುವ ನದ-ನದಿಗಳೂ ಲೆಕ್ಕವಿಲ್ಲದಷ್ಟು ಸಂಖ್ಯೆಯಲ್ಲಿ ಇಲ್ಲಿ ಕಂಡುಬರುತ್ತವೆ.* ಈ ನದಿಗಳ ನಾಮಸ್ಮರಣೆಯೂ ಕೂಡ ಜೀವರನ್ನು ಪವಿತ್ರಗೊಳಿಸುತ್ತದೆ.

---

* ನದ–ಗಂಡುದೇವತೆಗಳಿಂದ ಅಧಿಷ್ಠಿತವಾದ ನದಿಗಳು. ಉದಾಹರಣೆಗೆ : ಸಿಂಧು

ಇಂತಹ ನದಿಗಳ ತೀರ್ಥಗಳಲ್ಲಿ ಭಾರತೀಯಪ್ರಜೆಗಳು ಸ್ನಾನಾದಿಗಳನ್ನು ಮಾಡುತ್ತಾರೆ.* ಈ ನದಿಗಳಲ್ಲಿ ಚಂದ್ರವಶಾ, ತಾಮ್ರಪರ್ಣೀ, ಅವಟೋದಾ, ಕೃತಮಾಲಾ, ವೈಹಾಯಸೀ, ಕಾವೇರೀ, ವೇಣೀ, ಪಯಸ್ವಿನೀ, ಶರ್ಕರಾವರ್ತಾ, ತುಂಗಭದ್ರಾ, ಕೃಷ್ಣಾ, ವೇಣ್ಯಾ, ಭೀಮರಥೀ, ಗೋದಾವರೀ, ನಿರ್ವಿಂಧ್ಯಾ, ಪಯೋಷ್ಣೀ, ತಾಪೀ, ರೇವಾ, ಸುರಸಾ, ನರ್ಮದಾ, ಚರ್ಮಣ್ವತೀ, ಸಿಂಧುರಂಧ, ಶೋಣ (ನದಗಳು) ಮಹಾನದೀ, ವೇದಸ್ಮೃತಿ, ಋಷಿಕುಲ್ಯಾ, ತ್ರಿಸಾಮಾ, ಕೌಶಿಕೀ, ಮಂದಾಕಿನೀ, ಯಮುನಾ, ಸರಸ್ವತೀ, ದೃಷದ್ವತೀ, ಗೋಮತೀ, ಸರಯೂ, ರೋಧಸ್ವತೀ, ಸಪ್ತವತೀ, ಸುಷೋಮಾ, ಶತದ್ರೂ, ಚಂದ್ರಭಾಗಾ, ಮರುದ್ವೃಧಾ, ವಿತಸ್ತಾ, ಅಸಿಕ್ನೀ, ವಿಶ್ವಾ–ಎಂಬಿವು ಮಹಾನದಿಗಳೆನಿಸುವುವು. ಈ ಭಾರತವರ್ಷದಲ್ಲೇ ಜನ್ಮವನ್ನು ಪಡೆದ ಮನುಷ್ಯರು ತಾವು ಮಾಡಿದ ಶುಕ್ಲ (ಸಾತ್ತ್ವಿಕ), ರಕ್ತ (ರಾಜಸ) ಮತ್ತು ಕೃಷ್ಣ (ತಾಮಸ) ಕರ್ಮಗಳಿಗೆ ತಕ್ಕಂತೆ ಬಗೆ-ಬಗೆಯಾದ ದೇವ-ಮನುಷ್ಯ-ಪಶುಗಳೇ ಮುಂತಾದ ಹುಟ್ಟುಗಳನ್ನು ಪಡೆಯುವರು. ಇದಲ್ಲದೇ ಆಯಾ ವರ್ಣಾಶ್ರಮಗಳಿಗೆ ಉಚಿತವಾದ ಮೋಕ್ಷಸಾಧನಮಾರ್ಗಗಳೂ ವಿಹಿತವಾಗಿವೆ.[1]

ಯೋಽಸೌ ಭಗವತಿ ಸರ್ವಭೂತಾತ್ಮನ್ಯನಾತ್ಮ್ಯೇಽನಿರುಕ್ತೇಽನಿಲಯನೇ ಪರಮಾತ್ಮನಿ ವಾಸುದೇವೇಽನನ್ಯನಿಮಿತ್ತಭಕ್ತಿಯೋಗ-ಲಕ್ಷಣೋ ನಾನಾಗತಿನಿಮಿತ್ತಾವಿದ್ಯಾಗ್ರನ್ಥಿರನ್ಧನದ್ವಾರೇಣ ಯದಾ ಹಿ ಮಹಾಪುರುಷಪುರುಷಪ್ರಸಙ್ಗಃ ॥೨೦॥

ಶೋಣ, ಬ್ರಹ್ಮಪುತ್ರ. ನದೀ–ಹೆಣ್ಣುದೇವತೆಗಳಿಂದ ಅಧಿಷ್ಠಿತವಾದ ನದಿಗಳು. ಉದಾಹರಣೆಗೆ : ಗಂಗಾ, ಯಮುನಾ, ಕಾವೇರೀ. (ಶ್ಲೋಕ ೧೬)

* **ಗಂಗಾ ಗಂಗೇತಿ ಯೋ ಬ್ರೂಯಾದ್ಯೋಜನಾನಾಂ ಶತೈರಪಿ । ಮುಚ್ಯತೇ ಸರ್ವಪಾಪೇಭ್ಯೋ ವಿಷ್ಣುಲೋಕಂ ಸ ಗಚ್ಛತಿ ॥** ನೂರಾರು ಯೋಜನಗಳ ದೂರದಿಂದಲಾದರೂ ಯಾವನು 'ಗಂಗಾ-ಗಂಗಾ' ಎಂದು ಈ ದಿವ್ಯನದಿಯ ನಾಮೋಚ್ಚಾರಣೆ ಮಾಡುತ್ತಾನೆಯೋ–ಆತನು ಎಲ್ಲ ಪಾಪಗಳಿಂದಲೂ ಬಿಡುಗಡೆಹೊಂದಿ ವಿಷ್ಣುಲೋಕ ವನ್ನು ಹೊಂದುವನು. (ಶ್ಲೋಕ ೧೭)

[1] '**ಊರ್ಧ್ವಂ ಗಚ್ಛನ್ತಿ ಸತ್ತ್ವಸ್ಥಾ ಮಧ್ಯೇ ತಿಷ್ಠನ್ತಿ ರಾಜಸಾಃ । ಜಘನ್ಯ ಗುಣವೃತ್ತಿಸ್ಥಾ ಅಧೋ ಗಚ್ಛನ್ತಿ ತಾಮಸಾಃ ॥**' ಎಂದು ಶ್ರೀಗೀತೆಯು ಸಾರಿರುವಂತೆ

ರಾಜಶ್ರೇಷ್ಠನೇ! ಸಮಸ್ತಭೂತಗಳಿಗೂ ಆತ್ಮನಾಗಿ, ರಾಗಾದಿ ದೋಷಗಳಿಂದ ರಹಿತನಾಗಿ, ಅನಿರ್ವಚನೀಯನಾಗಿ, ನಿರಾಧಾರನಾಗಿರುವ ಪರಮಾತ್ಮ ಶ್ರೀವಾಸುದೇವಭಗವಂತನಲ್ಲಿ ಅನನ್ಯವಾದ ಭಕ್ತಿಭಾವವೇ ಈ ದೋಷವನ್ನು ಕಳೆಯುವುದು. ಬಗೆ-ಬಗೆಯ ಗತಿಗಳನ್ನು ಪ್ರಕಟಪಡಿಸುವ ಅವಿದ್ಯೆಯೆಂಬ ಹೃದಯದ ಗಂಟು ಕತ್ತರಿಸಿಹೋಗಿ ಶ್ರೀಭಗವಂತನಲ್ಲಿ ಪ್ರೇಮಾತಿಶಯವುಳ್ಳ ಭಕ್ತಶ್ರೇಷ್ಠರ ಸಹವಾಸವು ದೊರೆತಾಗ ತಾನೇ ಇಂತಹ ಭಕ್ತಿಭಾವವು ಉಂಟಾಗುವುದು!"

ಭಾರತವರ್ಷದಲ್ಲಿ ಹುಟ್ಟಿದ ಮನುಷ್ಯರ ಧನ್ಯತೆಯ ಮಹಿಮೆಯನ್ನು ದೇವತೆಗಳು ಕೂಡ ಹೀಗೆ ಹಾಡಿಹೊಗಳುತ್ತಾರೆ :

ಅಹೋ ಅಮೀಷಾಂ ಕಿಮಕಾರಿ ಶೋಭನಂ
ಪ್ರಸನ್ನ ಏಷಾಂ ಸ್ವಿದುತ ಸ್ವಯಂ ಹರಿಃ ।
ಯೈರ್ಜನ್ಮ ಲಬ್ಧಂ ನೃಷು ಭಾರತಾಜಿರೇ
ಮುಕುನ್ದಸೇವೌಪಯಿಕಂ ಸ್ಪೃಹಾ ಹಿ ನಃ ॥೨೧॥

"ಆಹಾ! ವೈಕುಂಠಕ್ಕೆ ಹೋಗಲು ಅಂಗಳದಂತಿರುವ ಈ ಭಾರತ ವರ್ಷದಲ್ಲಿ ಶ್ರೀಭಗವಂತನ ಸೇವೆಮಾಡುವುದಕ್ಕೆ ಯೋಗ್ಯವಾದ ಮನುಷ್ಯ ಜನ್ಮವನ್ನು ಪಡೆಯಲು ಈ ಜೀವಗಳು ಏನು ಪುಣ್ಯಮಾಡಿದ್ದರೋ! ಅಥವಾ ಶ್ರೀಹರಿಯು ತಾನಾಗಿಯೇ ಇವರಿಗೆ ಒಲಿದು ಇಲ್ಲಿ ಇವರಿಗೆ ಜನ್ಮವನ್ನು ಕರುಣಿಸಿದನೋ! ಈ ಪರಮಸೌಭಾಗ್ಯವು ಒದಗಲೆಂದು ನಾವೂ ಸದಾ ಆಶೆಪಡುತ್ತಿರುತ್ತೇವೆ.

ಕಿಂ ದುಷ್ಕರೈರ್ನಃ ಕ್ರತುಭಿಸ್ತಪೋವ್ರತೈ-
ರ್ದಾನಾದಿಭಿರ್ವಾ ದ್ಯುಜಯೇನ ಫಲ್ಗುನಾ ।
ನ ಯತ್ರ ನಾರಾಯಣಪಾದಪಙ್ಕಜ-
ಸ್ಮೃತಿಃ ಪ್ರಮುಷ್ಟಾತಿಶಯೇನ್ದ್ರಿಯೋತ್ಸವಾತ್ ॥೨೨॥

ನಾವು ಕಷ್ಟಕರವಾದ ಯಜ್ಞಗಳನ್ನೂ, ತಪಸ್ಸು-ವ್ರತಗಳನ್ನೂ ಮತ್ತು ದಾನಾದಿಗಳನ್ನೂ ಮಾಡಿ ಈ ತುಚ್ಛವಾದ ಸ್ವರ್ಗವನ್ನು ಪಡೆದೆವಲ್ಲಾ!

ಕೇವಲ ಪುಣ್ಯಕರ್ಮಗಳಿಂದ ದೇವತಾಜನ್ಮವನ್ನೂ, ಪುಣ್ಯ-ಪಾಪಮಿಶ್ರಣಕರ್ಮಗಳಿಂದ ಮನುಷ್ಯಜನ್ಮವನ್ನೂ ಮತ್ತು ಕೇವಲ ತಾಮಸಕರ್ಮಗಳಿಂದ ಪಶು-ವೃಕ್ಷಾದಿ ಯೋನಿಗಳನ್ನೂ ಜೀವರು ಪಡೆಯುವರು. (ಶ್ಲೋಕ ೧೯)

ಇದರಿಂದ ಏನು ತಾನೇ ಲಾಭ? ಇಲ್ಲಿ ಇಂದ್ರಿಯಭೋಗಗಳು ತುಂಬಿರುವುದರಿಂದ ನಮ್ಮ ಸ್ಮರಣಶಕ್ತಿಯು ಕಸಿಯಲ್ಪಟ್ಟು ಶ್ರೀಮನ್ನಾರಾಯಣನ ಅಡಿದಾವರೆಗಳ ಸ್ಮರಣೆಯೇ ಎಂದಿಗೂ ಬರುವುದಿಲ್ಲ.

ಕಲ್ಪಾಯುಷಾಂ ಸ್ಥಾನಜಯಾತ್ಪುನರ್ಭವಾತ್
ಕ್ಷಣಾಯುಷಾಂ ಭಾರತಭೋಜಯೋ ವರಮ್ ।
ಕ್ಷಣೇನ ಮರ್ತ್ಯೇನ ಕೃತಂ ಮನಸ್ವಿನಃ
ಸಂನ್ಯಸ್ಯ ಸಂಯಾನ್ತ್ಯಭಯಂ ಪದಂ ಹರೇಃ ॥೨೩॥

ಈ ಸ್ವರ್ಗದ ವಿಷಯವು ಹಾಗಿರಲಿ ; ಒಂದು ಕಲ್ಪದ ಕಾಲ ಆಯುಸ್ಸಿರುವ ಬ್ರಹ್ಮಾದಿ ಲೋಕಗಳೂ ಕೂಡ ಭಾರತಭೂಮಿಯಲ್ಲಿ ಮನುಷ್ಯಜನ್ಮ ಪಡೆಯುವುದಕ್ಕೆ ಸಮನಲ್ಲ. ಏಕೆಂದರೆ : ಆ ಲೋಕಗಳಲ್ಲಿ ವಾಸಮಾಡುವವರೂ ಮತ್ತೆ ಸಂಸಾರಚಕ್ರಕ್ಕೆ ಮರಳುವ ಸಂಭವವಿದೆ. ಅವುಗಳಲ್ಲಿ ವಾಸಿಸುವುದಕ್ಕಿಂತಲೂ ಭಾರತಭೂಮಿಯಲ್ಲಿ ಸ್ವಲ್ಪಕಾಲದ ಆಯುಸ್ಸುಳ್ಳವನಾಗಿ ಹುಟ್ಟುವುದೇ ಲೇಸು. ಏಕೆಂದರೆ : ಇಲ್ಲಿ ಹುಟ್ಟನ್ನು ಪಡೆದ ಧೀರರು ಒಂದು ಕ್ಷಣಕಾಲದಲ್ಲಿಯೇ ಈ ಮನುಷ್ಯಶರೀರದಿಂದ ತಾವು ಆಚರಿಸಿದ ಎಲ್ಲ ಕರ್ಮಗಳನ್ನೂ ಶ್ರೀಭಗವಂತನಿಗೆ ಸಮರ್ಪಣೆಮಾಡಿ ಆತನ ನಿರ್ಭಯವಾದ ಪದವನ್ನು ಸಂಪಾದಿಸಬಹುದು.

ನ ಯತ್ರವೈಕುಣ್ಠ ಕಥಾಸುಧಾಪಗಾ
ನ ಸಾಧವೋ ಭಾಗವತಾಸ್ತದಾಶ್ರಯಾಃ ।
ನ ಯತ್ರ ಯಜ್ಞೇಶಮಖಾ ಮಹೋತ್ಸವಾಃ
ಸುರೇಶಲೋಕೋಽಪಿ ನ ವೈ ಸ ಸೇವ್ಯತಾಮ್ ॥೨೪॥

ಎಲ್ಲಿ ಶ್ರೀಹರಿಯ ಕಥಾಮೃತದ ನದಿಗಳು ಹರಿಯುವುದಿಲ್ಲವೋ–ಆ ನದಿಗಳು ಹುಟ್ಟುವ ಸ್ಥಾನವಾದ ಭಗವದ್ಭಕ್ತರಾದ ಸಾಧುಗಳು ಎಲ್ಲಿ ವಾಸ ಮಾಡುವುದಿಲ್ಲವೋ ಮತ್ತು ಎಲ್ಲಿ ಭಗವಂತನಾದ ಯಜ್ಞಪುರುಷನಾದ ಶ್ರೀಹರಿಯ ಪೂಜಾಮಹೋತ್ಸವಗಳು ನಡೆಯುವುದಿಲ್ಲವೋ–ಆ ಜಾಗವು ಬ್ರಹ್ಮಲೋಕವೇ ಆಗಿದ್ದರೂ ಅದು ಸೇವನೆಗೆ ಯೋಗ್ಯವಲ್ಲ.

ಪ್ರಾಪ್ತಾ ನೃಜಾತಿಂ ತ್ವಿಹ ಯೇ ಚ ಜನ್ತವೋ
ಜ್ಞಾನಕ್ರಿಯಾದ್ರವ್ಯಕಲಾಪಸಮ್ಭೃತಾಮ್ ।

ನ ವೈ ಯತೇರನ್ನಪುನರ್ಭವಾಯ ತೇ
ಭೂಯೋ ವನೌಕಾ ಇವ ಯಾನ್ತಿ ಬನ್ಧನಮ್ ॥೨೫॥

ಭಾರತವರ್ಷದಲ್ಲಿ ವಿವೇಕಬುದ್ಧಿ, ಅದಕ್ಕೆ ಅನುಗುಣವಾದ ಕರ್ಮಗಳು ಮತ್ತು ಆ ಕರ್ಮಗಳನ್ನು ಆಚರಿಸುವುದಕ್ಕೆ ಉಪಯೋಗಪಡುವ ದ್ರವ್ಯವೇ ಮುಂತಾದ ಸಾಮಗ್ರಿಗಳಿಂದ ಸಂಪನ್ನವಾದ ಮನುಷ್ಯಜನ್ಮವನ್ನು ಪಡೆದಿದ್ದರೂ–ಯಾರು ಹುಟ್ಟು-ಸಾವುಗಳ ಸುಳಿಗಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಮಾಡುವುದಿಲ್ಲವೋ–ಅವರು ಬೇಡನು ಒಡ್ಡಿದ ಬೋನು–ಬಲೆ ಗಳಿಂದ ತಪ್ಪಿಸಿಕೊಂಡರೂ ಆಮಿಷಗಳ ಆಸೆಯಿಂದ ಮತ್ತೆ ಅಲ್ಲಿ ಸಿಕ್ಕಿಹಾಕಿ ಕೊಳ್ಳುವ ಅರಣ್ಯವಾಸಿಗಳಾದ ಪಶು-ಪಕ್ಷಿಗಳಿಗೆ ಸಮಾನರು.

ಯೈಃ ಶ್ರದ್ಧಯಾ ಬರ್ಹಿಷಿ ಭಾಗಶೋ ಹವಿ-
ರ್ನಿರುಪ್ತಮಿಷ್ಟಂ ವಿಧಮನ್ತ್ರವಸ್ತುತಃ ।
ಏಕಃ ಪೃಥಙ್ನಾಮಭಿರಾಹುತೋ ಮುದಾ
ಗೃಹ್ಣಾತಿ ಪೂರ್ಣಃ ಸ್ವಯಮಾಶಿಷಾಂ ಪ್ರಭುಃ ॥೨೬॥

ಆಹಾ! ಎಂತಹ ಭಾಗ್ಯಶಾಲಿಗಳು ಈ ಭಾರತದೇಶದ ನಿವಾಸಿಗಳು! ಇವರು ಯಜ್ಞಗಳಲ್ಲಿ ದರ್ಭೆಗಳ ಮೇಲೆ ಬೇರೆ-ಬೇರೆ ದೇವತೆಗಳನ್ನು ಉದ್ದೇಶಿಸಿ ಭಾಗಗಳನ್ನು ಇರಿಸಿ ವಿಧಿ, ಮಂತ್ರ ಮತ್ತು ದ್ರವ್ಯಾದಿಗಳೊಡನೆ ಶ್ರದ್ಧೆಯಿಂದ ಹವಿಸ್ಸುಗಳನ್ನು ಸಮರ್ಪಿಸಿ ಬೇರೆ-ಬೇರೆ ದೇವತಾನಾಮ ಧೇಯಗಳನ್ನು ಕರೆದರೂ ಆಗ ಎಲ್ಲ ಕಾಮನೆಗಳನ್ನೂ ಪೂರ್ಣಗೊಳಿಸುವ ಪೂರ್ಣಕಾಮನಾದ ಶ್ರೀಹರಿಯು ಅವೆಲ್ಲವನ್ನೂ ತಾನೇ ಪ್ರಸನ್ನತೆಯಿಂದ ಸ್ವೀಕಾರಮಾಡುವನು.

ಸತ್ಯಂ ದಿಶತ್ಯರ್ಥಿತೋ ನೃಣಾಂ
ನೈವಾರ್ಥದೋ ಯತ್ಪುನರರ್ಥಿತಾ ಯತಃ ।
ಸ್ವಯಂ ವಿಧತ್ತೇ ಭಜತಾಮನಿಚ್ಛತಾ-
ಮಿಚ್ಛಾಪಿಧಾನಂ ನಿಜಪಾದಪಲ್ಲವಮ್ ॥೨೭॥

ಭಕ್ತರು ಯಾವುದಾದರೂ ಕಾಮನೆಯಿಂದ ಪ್ರಾರ್ಥನೆಮಾಡಿದರೆ ಶ್ರೀಭಗವಂತನು ಅವರಿಗೆ ಅವರು ಬೇಡಿದ ಪದಾರ್ಥಗಳನ್ನು ಕರುಣಿಸುತ್ತಾ ನೆಂಬುದೇನೋ ಸರಿಯೇ. ಆದರೆ ಇದು ಭಗವಂತನ ನಿಜವಾದ ವರದಾನ

ವಾಗಲಾರದು. ಏಕೆಂದರೆ : ಆ ಪದಾರ್ಥಗಳನ್ನು ಪಡೆದ ಬಳಿಕ ಅವರಿಗೆ ಮನಸ್ಸಿನಲ್ಲಿ ಮತ್ತೆ ಕಾಮನೆಗಳುಂಟಾಗುತ್ತಲೇ ಇರುತ್ತವೆ. ಇದರ ಬದಲಿಗೆ ಶ್ರೀಭಗವಂತನನ್ನು ಯಾರು ನಿಷ್ಕಾಮರಾಗಿ ಭಜಿಸುತ್ತಾರೆಯೋ ಅವರಿಗೆ ಅವನು ತನ್ನ ಸಾಕ್ಷಾತ್ ಚರಣಕಮಲಗಳನ್ನೇ ಕರುಣಿಸುವನು. ಆ ಚರಣ ಕಮಲಗಳ ಲಾಭವು ಉಳಿದ ಎಲ್ಲ ಕಾಮನೆಗಳನ್ನೂ ಮುಗಿಸಿಬಿಡುವುದು.

ಯದ್ಯತ್ರ ನಃ ಸ್ವರ್ಗಸುಖಾವಶೇಷಿತಂ
ಸ್ವಿಷ್ಟಸ್ಯ ಸೂಕ್ತಸ್ಯ ಕೃತಸ್ಯ ಶೋಭನಮ್ ।
ತೇನಾಜನಾಭೇ ಸ್ಮೃತಿಮಜ್ಜನ್ಮ ನಃ ಸ್ಯಾ-
ದ್ವರ್ಷೇ ಹರಿರ್ಯದ್ಭಜತಾಂ ಶಂ ತನೋತಿ ॥೨೮॥

ಆದುದರಿಂದ ನಾವು ಇಲ್ಲಿಯವರೆಗೂ ಸ್ವರ್ಗಸುಖವನ್ನು ಭೋಗಿಸಿದ ನಂತರ ಹಿಂದೆ ಮಾಡಿದ ಯಜ್ಞ, ಸ್ತೋತ್ರ, ಪ್ರವಚನ ಮತ್ತು ಶುಭಕರ್ಮಗಳ ಪುಣ್ಯದಿಂದ ನಮಗೆ ಈ ಭಾರತವರ್ಷದಲ್ಲಿ ಶ್ರೀಭಗವಂತನ ಸ್ಮರಣೆಯಿಂದ ಕೂಡಿದ ಮನುಷ್ಯಜನ್ಮವು ದೊರೆಯಲಿ. ಏಕೆಂದರೆ : ಶ್ರೀಹರಿಯು ಇಲ್ಲಿ ತನ್ನನ್ನು ಭಜಿಸುವವರಿಗೆ ಎಲ್ಲ ಪ್ರಕಾರಗಳಿಂದಲೂ ಕಲ್ಯಾಣವನ್ನುಂಟು ಮಾಡುವನು."

ಶ್ರೀಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಹೇಳುತ್ತಾರೆ :

"ಎಲೈ ನೃಪತಿಯೇ! ಹಿಂದೆ ಸಗರನ ಪುತ್ರರು ತಮ್ಮ ಯಜ್ಞಾಶ್ವವನ್ನು ಹುಡುಕುತ್ತಾ ಈ ಭೂಮಿಯನ್ನು ನಾಲ್ಕೂ ಕಡೆಗಳಿಂದಲೂ ಅಗೆದು ಹಾಕಿದ್ದರು. ಅದರಿಂದ ಈ ಜಂಬೂದ್ವೀಪದೊಳಗಿರುವ ಎಂಟು ಉಪದ್ವೀಪಗಳುಂಟಾದುವು–ಎಂದು ಕೆಲವರು ಹೇಳುತ್ತಾರೆ. ಸ್ವರ್ಣಪ್ರಸ್ಥ, ಚಂದ್ರಶುಕ್ಲ, ಆವರ್ತನ, ರಮಣಕ, ಮಂದರಹರಿಣ, ಪಾಂಚಜನ್ಯ, ಸಿಂಹಳ ಮತ್ತು ಲಂಕಾ–ಎಂಬುವೇ ಆ ಎಂಟು ಉಪದ್ವೀಪಗಳು. ಎಲೈ ಭಾರತಶ್ರೇಷ್ಠನೇ! ನಾನು ಗುರುಮುಖದಿಂದ ಹಿಂದೆ ಹೇಗೆ ಕೇಳಿದ್ದೆನೋ–ಹಾಗೆಯೇ ಜಂಬೂ ದ್ವೀಪದ ವರ್ಷಗಳ ವಿಭಾಗಗಳನ್ನು ನಿನಗೆ ತಿಳಿಸಿದ್ದೇನೆ." (ಶ್ಲೋಕ 24-31)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಪಂಚಮಸ್ಕಂಧದ ೧೯ನೆಯ ಅಧ್ಯಾಯವು ಮುಗಿಯಿತು.

ಮೂರನೆಯ ಸಂಪುಟವು ಮುಗಿಯಿತು.

ಶ್ರೀಕೃಷ್ಣಾರ್ಪಣಮಸ್ತು ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು ಓಂ ತತ್ಸತ್

License No. WPP-13 Licensed to Post without pre-payment of postage
Posted at Thayagaraja Nagar Post Office
Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.